ವ್ಯಾಸಕೂಟ ಮತ್ತು ದಾಸಕೂಟ : ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯದ ಪಿಹೆಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧಕಿ :

ಎಚ್. ಅನಸೂಯಾದೇವಿ ಸೂರ್ಯನಾರಾಯಣ್
ಮುಖ್ಯಸ್ಥೆ, ಕನ್ನಡವಿಭಾಗ
ಬಿಎಚ್‌ಎಸ್ ಪ್ರಥಮದರ್ಜೆ ಕಾಲೇಜು
ಜಯನಗರ ನಾಲ್ಕನೇ ಬಡಾವಣೆ
ಬೆಂಗಳೂರು-೫೬೦೦೧೧

ಮಾರ್ಗದರ್ಶಕರು :

ಪ್ರೊ|| ಮಲ್ಲೇಪುರಂ ಜಿ. ವೆಂಕಟೇಶ
ಪ್ರಾಧ್ಯಾಪಕರು, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

೨೦೦೭

ವ್ಯಾಸಕೂಟ ಮತ್ತು ದಾಸಕೂಟ : ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯದ ಪಿಹೆಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧಕಿ :

ಎಚ್. ಅನಸೂಯಾದೇವಿ ಸೂರ್ಯನಾರಾಯಣ್
ಮುಖ್ಯಸ್ಥೆ, ಕನ್ನಡವಿಭಾಗ
ಬಿಎಚ್‌ಎಸ್ ಪ್ರಥಮದರ್ಜೆ ಕಾಲೇಜು
ಜಯನಗರ ನಾಲ್ಕನೇ ಬಡಾವಣೆ
ಬೆಂಗಳೂರು-೫೬೦೦೧೧

ಮಾರ್ಗದರ್ಶಕರು :

ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ
ಪ್ರಾಧ್ಯಾಪಕರು, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬
೨೦೦೭

ದೃಢೀಕರಣ ಪತ್ರ

'ವ್ಯಾಸಕೂಟ ಮತ್ತು ದಾಸಕೂಟ : ಒಂದು ಅಧ್ಯಯನ' ಎಂಬ ವಿಷಯದ ಮಹಾಪ್ರಬಂಧವನ್ನು ಕನ್ನಡದಲ್ಲಿ ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಮಹಾಪ್ರಬಂಧದ ವಿಷಯವನ್ನು ಇದುವರೆವಿಗೂ ಯಾವುದೇ ಪದವಿಗಾಗಿ, ಬೇರೆ ಉದ್ದೇಶಗಳಿಗಾಗಿ ಸಲ್ಲಿಸಲಾಗಿಲ್ಲ.

ಎಚ್. ಅನಸೂಯಾದೇವಿ ಸೂರ್ಯನಾರಾಯಣ್

ದಿನಾಂಕ: ೧೯.೧೧.೨೦೦೭

ಸಂಶೋಧಕಿ :

ಎಚ್. ಅನಸೂಯಾದೇವಿ ಸೂರ್ಯನಾರಾಯಣ್
ಮುಖ್ಯಸ್ಥೆ, ಕನ್ನಡವಿಭಾಗ
ಬಿ.ಎಚ್.ಎಸ್. ಪ್ರಥಮದರ್ಜೆ ಕಾಲೇಜು
ಜಯನಗರ ನಾಲ್ಕನೇ ಬಡಾವಣೆ
ಬೆಂಗಳೂರು–೫೬೦೦೧೧

<u>ಪ್ರಮಾಣ ಪತ್ರ</u>

'ವ್ಯಾಸಕೂಟ ಮತ್ತು ದಾಸಕೂಟ : ಒಂದು ಅಧ್ಯಯನ' ಎಂಬ ವಿಷಯದ ಮಹಾಪ್ರಬಂಧವನ್ನು ಎಚ್. ಅನಸೂಯಾದೇವಿ ಸೂರ್ಯನಾರಾಯಣ್ ಅವರು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಮಹಾಪ್ರಬಂಧದ ವಿಷಯವನ್ನು ಅಥವಾ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಿ, ಬೇರೆ ಉದ್ದೇಶಗಳಿಗಾಗಿ ಸಲ್ಲಿಸಲಾಗಿಲ್ಲ.

ದಿನಾಂಕ: ೧೯.೧೧.೨೦೦೭

ಮಾರ್ಗದರ್ಶಕರು :
ಪ್ರೊ॥ ಮಲ್ಲೇಪುರಂ ಜಿ . ವೆಂಕಟೇಶ
ಪ್ರಾಧ್ಯಾಪಕರು,
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಕೃತಜ್ಞತೆಗಳು

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ನಾನು ಸಲ್ಲಿಸುತ್ತಿರುವ **'ವ್ಯಾಸಕೂಟ ಮತ್ತು ದಾಸಕೂಟ : ಒಂದು ಅಧ್ಯಯನ'** ಎಂಬ ವಿಷಯದ ಸಂಶೋಧನಾ ಮಹಾಪ್ರಬಂಧವನ್ನು ವಿಶ್ವವಿದ್ಯಾಲಯದ ಪಿಹೆಚ್.ಡಿ ಪದವಿಗಾಗಿ ಸಿದ್ಧಪಡಿಸಲು ಮಾರ್ಗದರ್ಶಕರಾಗಲು ಒಪ್ಪಿ, ಎಲ್ಲಾ ರೀತಿಯ ಸಹಕಾರ, ಸಲಹೆಗಳನ್ನು ನೀಡಿ, ಚರ್ಚಿಸಿ, ತಿದ್ದಿ ಇದನ್ನು ರಚಿಸಲು ಅನುವುಮಾಡಿಕೊಟ್ಟ ನನ್ನ ಗುರುಗಳೂ, ಮಾರ್ಗದರ್ಶಕರೂ ಆದ ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ಮನಃಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಸಂಶೋಧನೆಯ ವಿಷಯದಲ್ಲಿ ಆತ್ಮೀಯವಾಗಿ ವಿಚಾರಿಸುತ್ತಾ, ಕೆಲವು ಸೂಕ್ತ ಸಲಹೆಗಳನ್ನು ನೀಡಿ, ನನ್ನ ತಿಳುವಳಿಕೆಯನ್ನು ಹೆಚ್ಚಿಸಿದ ನನ್ನ ಗುರುದೈವ ಶ್ರೀಭದ್ರಗಿರಿ ಅಚ್ಯುತದಾಸರ ಪಾದಗಳಿಗೆ ನನ್ನ ಹೃದಯಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ. ನನ್ನ ಮಕ್ಕಳಾದ ಶೈಲಜಾ ಸಂತೋಷ್, ಶಶಿಕಾಂತ ಆಚಾರ್ಯ ಮತ್ತು ಡಾ.ಶ್ಯಾಮಸುಂದರ ಆಚಾರ್ಯ ಇವರು ಕಾಲಕಾಲಕ್ಕೆ ಅನೇಕ ರೀತಿಯ ನೆರವನ್ನು ನೀಡಿದ್ದಾರೆ. ಅವರನ್ನು ನೆನೆಯುತ್ತೇನೆ.

ಹಾಗೆಯೇ ನನ್ನ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಉಪಯುಕ್ತ ಸಲಹೆ, ಮಾಹಿತಿ ಹಾಗೂ ಅಗತ್ಯ ಪುಸ್ತಕಗಳ ನೆರವನ್ನು ನೀಡಿ ಸಹಕರಿಸಿದ ಹಿರಿಕಿರಿಯ ಆತ್ಮೀಯರಾದ ಶ್ರೀ ವಿಶ್ವನಾಥ್, ಶ್ರೀಹುಸೇನ್‌ಸಾಬ್, ಶ್ರೀ ಆನಂದ ಕಾಖಂಡಕಿ, ಮತ್ತು ಶ್ರೀ ಎಸ್.ವಿ. ಪ್ರಸನ್ನಕುಮಾರ್ ಇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಅಂತೆಯೇ ನಮ್ಮ ಕಾಲೇಜಿನ ಗ್ರಂಥಾಲಯದ ನೆರವನ್ನೂ ಪಡೆದಿರುತ್ತೇನೆ. ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಪ್ರೊ॥ ಡಿ.ಎನ್. ವೆಂಕಟರಾವ್ ಇವರ ಪ್ರೋತ್ಸಾಹಕ್ಕೆ ಆಭಾರಿಯಾಗಿದ್ದೇನೆ.

ಈ ಆಧ್ಯಯನದ ಸಂದರ್ಭದಲ್ಲಿ ಸಂಪೂರ್ಣ ಸಹಕಾರ ಮತ್ತು ಉತ್ತೇಜನವನ್ನು ನೀಡಿ, ಈ ಮಹಾಪ್ರಬಂಧವನ್ನು ಅತ್ಯಂತ ಅಚ್ಚುಕಟ್ಟಾಗಿ ಗಣಕಯಂತ್ರದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ನನ್ನ ಗೆಳತಿ ಶ್ರೀಮತಿ ಶೈಲಜಾ ಹೆಗಡೆ, ಹಾಗೂ ಅಂದವಾದ ಬೈಂಡ್ ಮಾಡಿಕೊಟ್ಟ ಮುದ್ರಣಾಲಯದ ಬಂಧುಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಪ್ರಸ್ತುತ ಈ ಪ್ರೌಢಪ್ರಬಂಧವನ್ನು ಕನ್ನಡದ ಅಭ್ಯಾಸಿಗರಿಗೆ ಒಪ್ಪಿಸುತ್ತೇನೆ.

ನಾನು ಸಲ್ಲಿಸುತ್ತಿರುವ ಈ ಮಹಾಪ್ರಬಂಧದಲ್ಲಿ ಕಾಣಿಸಿಕೊಳ್ಳಬಹುದಾದ ಸಣ್ಣಪುಟ್ಟ ತಪ್ಪುಗಳಿಗೆ ಹಾಗೂ ಓರೆ-ಕೋರೆಗಳಿಗೆ ನಾನೇ ವೈಯಕ್ತಿಕವಾಗಿ ಜವಾಬ್ದಾರಳಾಗಿರುತ್ತೇನೆ.

ಎಚ್. ಅನಸೂಯಾದೇವಿ ಸೂರ್ಯನಾರಾಯಣ್

ಅಧ್ಯಾಯ-೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

೧. ಪರಿಗ್ರಹಿಕೆ

ಕನ್ನಡ ನಾಡಿನಲ್ಲಿ ಹದಿನಾರನೆಯ ಶತಮಾನದ ಹೊತ್ತಿಗೆ ಹರಿದಾಸಪಂಥದ ಆವಿಷ್ಕಾರವಾಗಿ ಈ ನಾಡಿಗೆ, ನುಡಿಗೆ, ಸಂಸ್ಕೃತಿಗೆ ಹರಿದಾಸರು ತಮ್ಮದೇ ಆದ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಆಡಂಬರವಿಲ್ಲದ ಸರಳ ಭಾಷೆಯಲ್ಲೇ ಸಾಮಾನ್ಯರ ಮನೆಬಾಗಿಲಿಗೆ ಅವರು ಕಾವ್ಯ ತಂದರು. ಶಾಸ್ತ್ರೀಯತೆಯ ಕಷ್ಟಸಾಧ್ಯಮಾರ್ಗವನ್ನು ಬಿಟ್ಟು, ಹಿತಮಿತವಾಗಿ ಹೃದಯಂಗಮವಾಗಿ ಜನಮನದಲ್ಲಿ ಉಳಿದು ಅನುರಣನವಾಗುವಂಥ ಸಂಗೀತ ಸಾಂಗತ್ಯವನ್ನು ತಮ್ಮ ಸಾಹಿತ್ಯ ರಚನೆಗೆ ನೀಡಿ ಹಾಡಿದರು, ಜನಮಾನಸದಲ್ಲಿ ನೆಲೆ ನಿಲ್ಲುವಂಥ ಅಪೂರ್ವ ರೀತಿಯಲ್ಲಿ ನೈತಿಕ ಮೌಲ್ಯಗಳನ್ನು ಸಾರಿದರು. ಸಮಾಜದಲ್ಲಿನ ಜನರ ನಡಾವಳಿಗಳಲ್ಲಿನ ತಪ್ಪುಗಳನ್ನು ತಿದ್ದಿದರು. ಬಾಳಬೇಕಾದ ರೀತಿ ನೀತಿಗಳನ್ನು ತಿಳಿಯಹೇಳಿದರು. ಇವೆಲ್ಲವೂ ಹರಿದಾಸರುಗಳ ಸಾಹಿತ್ಯ-ಸಂಗೀತ ಸೇವೆಯ ರೂಪದಲ್ಲೇ ಕನ್ನಡನಾಡಿಗೆ ಸಂದಂತಹ ಸುಸಂಸ್ಕೃತಿಯಾಗಿದೆ. ಇವೆಲ್ಲವನ್ನೂ ದೈವಭಕ್ತಿಯನ್ನು ಸ್ಥಾಯಿಯಾಗಿಟ್ಟುಕೊಂಡು ಸಾಧಿಸಿದವರು ಅವರು.

ಇಂಥ ಹರಿದಾಸ ಪರಂಪರೆಯನ್ನು ಮೊದಲಿಗೆ ಪ್ರಾರಂಭ ಮಾಡಿದವರು ಮುಳುಬಾಗಿಲಿನ ಶ್ರೀಪಾದರಾಜರೆಂದು ಪರಿಗಣಿಸಲಾಗಿದೆ. ದಾಸಸಾಹಿತ್ಯವನ್ನು ಇದಕ್ಕೂ ಮುಂಚೆ ರಚಿಸಿದ್ದಿರಲೇ ಇಲ್ಲ ಎನ್ನುವಂತಿಲ್ಲ. ಮಧ್ವಾಚಾರ್ಯರ ಶಿಷ್ಯರಾದ ನರಹರಿತೀರ್ಥರ ಮೂರು ಕೀರ್ತನೆಗಳು ಲಭ್ಯವಿವೆ. ಒಂಬತ್ತನೇ ಶತಮಾನದಲ್ಲಿ ಇದ್ದವರೆನ್ನಲಾದ ಅಚಲಾನಂದದಾಸರ ರಚನೆಗಳು ಎಂದು ಗುರುತಿಸಿಕೊಂಡಿರುವ ಕೆಲವು ಉಗಾಭೋಗ, ಕೀರ್ತನೆ, ಸುಳಾದಿಗಳು ದೊರೆತಿವೆಯಾದರೂ ಅಧಿಕೃತವಾಗಿ ಶ್ರೀಪಾದರಾಜರೇ ದಾಸಪರಂಪರೆಯ ಆದಿ ಪುರುಷರು, ಆದ್ಯಪ್ರವರ್ತಕರು. ಸ್ವತಃ ಮಠಾಧೀಶರಾಗಿದ್ದೂ, ಸಾಂಪ್ರದಾಯಿಕ ಆಚರಣೆ, ವಿಧಿ, ವಿಧಾನಗಳಲ್ಲಿದ್ದೂ ಕನ್ನಡವನ್ನು ತಮ್ಮ ಭಕ್ತಿ, ಅಂತರಂಗ ನಿವೇದನೆಗಳಿಗೆ ಆಯ್ದುಕೊಂಡವರು.

ಶ್ರೀಪಾದರಾಜರ ಶಿಷ್ಯರಾದ ವ್ಯಾಸತೀರ್ಥರ ಕಾಲದಲ್ಲಿ ದಾಸಸಾಹಿತ್ಯವು ಹೆಚ್ಚು ಊರ್ಜಿತಕ್ಕೆ ಬಂದಿತು. ಶ್ರೀಪಾದರಾಜರ ಭಕ್ತಿ ಭಾವಪೂರ್ಣವಾದ ಬದುಕು, ಹರಿದಾಸ್ಯತನ ತುಂಬಿಕೊಂಡು ಮಿಡಿವ ಅವರ

ಕನ್ನಡರಚನೆಗಳು, ಇವೆಲ್ಲದರ ಪ್ರಭಾವ ವ್ಯಾಸತೀರ್ಥರ ವ್ಯಕ್ತಿತ್ವವನ್ನು ರೂಪಿಸಿತು. ಗುರುವಿನಂತೆಯೇ ಇವರೂ ಮಠಾಧಿಪತಿಯಾಗಿದ್ದುಕೊಂಡು ಜನಸಾಮಾನ್ಯರಲ್ಲಿ ಭಕ್ತಿ ಭಾವ ಪ್ರೇರೇಪಿಸಲು "ದಾಸಕೂಟ"ವನ್ನು ಕಟ್ಟಿದರು.

ಮಠಾಧಿಪತಿಯಾಗಿದ್ದು ದ್ವೈತ ಸಂಪ್ರದಾಯದ ಮಡಿವಂತಿಕೆಯ ನೆಲೆಯಲ್ಲಿ ನಿಂತೂ ಕೂಡ, ಸಂಸ್ಕೃತದಲ್ಲಿ ತತ್ತ್ವವನ್ನು, ಶ್ಲೋಕವನ್ನು ಹೇಳಿದರೆ ಮಾತ್ರ ನಿಜವಾದ ಪೂಜೆ, ಆಚರಣೆ ಎಂಬ ಧೋರಣೆಯೇ ಎಲ್ಲೆಡೆಯೂ ತುಂಬಿದ್ದ ಕಾಲದಲ್ಲಿ ಕನ್ನಡದಲ್ಲೇ ದೇವರನಾಮಗಳನ್ನು ರಚಿಸಿ ತಮ್ಮ ಪೂಜಾ ಕೈಂಕರ್ಯದಲ್ಲಿ ಭಾಗವತರಿಂದ ಆ ಗೀತೆಗಳನ್ನು ಹಾಡಿಸಲು ಪ್ರಾರಂಭಿಸಿದ್ದು ಶ್ರೀಪಾದರಾಜರ ಒಂದು ಅನನ್ಯ ಮೇಲ್ಪಂಕ್ತಿ. ವ್ಯಾಸತೀರ್ಥರೂ ಇದನ್ನೇ ಅನುಸರಿಸಿದರು. ಶಾಸ್ತ್ರನಿಷ್ಠರಾಗಿ ನಡೆದುಕೊಂಡು, ಕ್ಲಿಷ್ಟ ಶಾಸ್ತ್ರಗ್ರಂಥಗಳ ರಚನೆಮಾಡಿ ಪರಮತವಾದಿಗಳನ್ನು ಸೋಲಿಸಿ ಅಂದಿನ ವಿಜಯನಗರ ಸಾಮ್ರಾಜ್ಯದಲ್ಲಿ ಮಹಾ ಪಂಡಿತೋತ್ತಮ ಯತಿಗಳೆಂದು ಗೌರವ, ಸನ್ಮಾನಗಳನ್ನು ಪಡೆಯುತ್ತಿದ್ದ ಶ್ರೀಪಾದರಾಜರು ಹಾಗೂ ವ್ಯಾಸತೀರ್ಥರು ಮಾತೃಭಾಷೆಯಾದ ಕನ್ನಡದಲ್ಲಿ ಹಾಡುಗಳನ್ನು ಬರೆದು ಸ್ವತಃ ಹಾಡಿ, ಹಾಡಿಸಿ ಪ್ರಚುರ ಪಡಿಸಿದ್ದು ಅವರ ಕಾಲದಲ್ಲಿನ ಅದ್ಭುತ ಕ್ರಾಂತಿಯಾಯಿತು. ಇದುವೇ ದಾಸಸಾಹಿತ್ಯ ರಚನೆಗೆ ತೋರಿಸಿಕೊಟ್ಟ ಕನ್ನಡದ ಸೋಪಾನಗಳಾಯಿತು.

'ದಾಸಕೂಟ'ದ ಹುಟ್ಟು ಮತ್ತು ಬೆಳವಣಿಗೆಯ ಇತಿಹಾಸದಲ್ಲಿ ವ್ಯಾಸತೀರ್ಥಯತಿಗಳ ಕ್ರಮ, ಶ್ರಮಗಳು ವಿಶೇಷ ಕೊಡುಗೆಯಾಗಿ ಪರಿಣಮಿಸಿವೆ. ತಮ್ಮ ತೊಂಬತ್ತೆರಡು ವರ್ಷಗಳ ದೀರ್ಘವಾದ ಜೀವಿತಾವಧಿಯಲ್ಲಿ ಮಠದ ಸಂಸ್ಥಾನಾಧಿಪತ್ಯವನ್ನು ನೋಡಿಕೊಳ್ಳುತ್ತ, ಧರ್ಮಶಾಸ್ತ್ರ ಗ್ರಂಥಗಳನ್ನು ರಚಿಸಿದ್ದಷ್ಟೇ ಅಲ್ಲ, ದ್ವೈತಮತದ ವಿಜಯವಾದಿಯಾಗಿಯೂ ಇದ್ದು, ಅಂದಿನ ವಿಜಯನಗರ ಸಾಮ್ರಾಜ್ಯದ ಧರ್ಮ ಸಂರಕ್ಷಣೆಯ ಜವಾಬ್ದಾರಿಯನ್ನೂ ಹೊತ್ತು ನಿರ್ವಹಿಸಿ, ಲೋಕಕಲ್ಯಾಣಕ್ಕಾಗಿ ಶ್ರಮಿಸುತ್ತ, ಪುರಂದರದಾಸ ಮತ್ತು ಕನಕದಾಸರಂಥ ಶ್ರೇಷ್ಠ ಹರಿದಾಸರುಗಳ ಮೇಲ್ಮೆಯನ್ನು ಗುರುತಿಸಿ ಗೌರವಿಸಿದವರು ವ್ಯಾಸತೀರ್ಥರು.

ಕನ್ನಡನಾಡು ಎಂದಿಗೂ ಋಣಿಯಾಗಿರಬೇಕಾದಂಥ ಯತಿಗಳೆಂದರೆ ಶ್ರೀಪಾದರಾಜರು ಮತ್ತು ವ್ಯಾಸತೀರ್ಥರು ಹಾಗೂ ಇದೇ ಪರಂಪರೆಯಲ್ಲಿ ಬಂದ ವಾದಿರಾಜರು. ವ್ಯಾಸತೀರ್ಥರ ಶಿಷ್ಯವರ್ಗದಲ್ಲಿ ಕನ್ನಡದವರಾಗಿ ಹರಿದಾಸಸಾಹಿತ್ಯ ರಚಿಸಿ ಜನರಲ್ಲಿ ಭಕ್ತಿ ನೀತಿತತ್ತ್ವಗಳನ್ನು ಬಿತ್ತಿದವರಲ್ಲಿ ಪ್ರಮುಖರೆಂದರೆ ವಾದಿರಾಜಯತಿಗಳು, ಪುರಂದರದಾಸರು ಮತ್ತು ಕನಕದಾಸರು. ಪುರಂದರದಾಸರ ನೇತೃತ್ವದಲ್ಲಿ "ದಾಸಕೂಟ"ವು ವ್ಯಾಸತೀರ್ಥರ ಪ್ರೋತ್ಸಾಹ, ಆಶ್ರಯದಲ್ಲಿ ಸಾಹಿತ್ಯ, ಸಂಗೀತ ಸೇವೆಯ ಮೂಲಕವೇ ಜನಸಾಮಾನ್ಯರ ನಡುವೆಯೇ ನೆಲೆ ನಿಂತು ನಾಡಿನ ಜನತೆಯ ಧಾರ್ಮಿಕ, ಸಾಂಸ್ಕೃತಿಕ ಏಳಿಗೆಗಾಗಿ ಶ್ರಮಿಸಿತು. ಕನ್ನಡ ಜನರಿಗೆ ಬದುಕಿನಲ್ಲಿ ದೊರೆಯಬೇಕಾದ ಅವಲಂಬನೆ, ಆಸರೆಗಾಗಿ ದೈವಪ್ರೀತಿಯನ್ನು ಬೋಧಿಸುತ್ತ, ಮಾನವ ಬದುಕಿನ ಮೌಲ್ಯಗಳನ್ನು ತಿಳಿಹೇಳುತ್ತ ಮನೆಮನೆಗೆ ಸಂಚರಿಸಿ ಸದಾ ನೆನಪಿಡಬೇಕಾದಂಥ ಸಾಲುಗಳನ್ನು, ಬೆಳಕು

ನೀಡಬಲ್ಲ ತತ್ತ್ವಗಳನ್ನು ತಮ್ಮ ಹಾಡುಗಳ ಮೂಲಕವೇ ನೀಡುತ್ತಿದ್ದ 'ದಾಸಕೂಟ'ದ ಪ್ರಮುಖರೆಂದರೆ ಪುರಂದರದಾಸರು ಮತ್ತು ಕನಕದಾಸರು. ಹೀಗೊಂದು ಹರಿದಾಸಕೂಟವನ್ನೇ ಕಟ್ಟಿದವರು ವ್ಯಾಸತೀರ್ಥರು.

ವ್ಯಾಸತೀರ್ಥರ ಯತಿ ಶಿಷ್ಯವರ್ಗದವರಲ್ಲಿ ಪ್ರಮುಖರೆಂದರೆ ವಾದಿರಾಜಯತಿಗಳು, ವಿಜಯೀಂದ್ರತೀರ್ಥರು ಮುಂತಾದವರು. ಇವರಲ್ಲಿ ವಾದಿರಾಜರು ಸೋದೆಮಠದ ಪೀಠಾಧಿಪತಿಯಾದರು. ವ್ಯಾಸತೀರ್ಥರನ್ನು ಅನುಸರಿಸಿ ಇವರು ಕೂಡ ದಾಸಕೂಟವನ್ನು ಪ್ರೋತ್ಸಾಹಿಸಿ ಬೆಳೆಯಿಸಿದರು. ವ್ಯಾಸತೀರ್ಥರ ಪ್ರಮುಖ ಕಾರ್ಯಕ್ಷೇತ್ರ ಹಂಪೆಯಾದರೆ ವಾದಿರಾಜರ ಮುಖ್ಯ ಕಾರ್ಯಕ್ಷೇತ್ರವು ಉಡುಪಿಯಾಯಿತು. ಇಷ್ಟಲ್ಲದೆ ಇವರು ಉತ್ತರಕನ್ನಡದ ಶಿರಸಿಯ ಬಳಿ ಇರುವ ಸೋದೆಯಲ್ಲೂ ತಮ್ಮ ಕಾರ್ಯಕ್ಷೇತ್ರ ವಿಸ್ತರಿಸಿದರು. ಉತ್ತರಕನ್ನಡ, ದಕ್ಷಿಣಕನ್ನಡ ಎಂಬ ಕನ್ನಡನಾಡಿನ ಕರಾವಳಿ ಪ್ರದೇಶದಲ್ಲೆಲ್ಲ ವಾದಿರಾಜಯತಿಗಳ ಪ್ರೋತ್ಸಾಹ, ಆಸರೆಯಲ್ಲಿ "ದಾಸಕೂಟ" ಬೆಳೆಯಿತು. ಅನೇಕಾನೇಕ ಹರಿದಾಸರುಗಳು ಈ ಕ್ಷೇತ್ರಗಳಿಂದ ಮೂಡಿಬಂದರು. ಕನ್ನಡ ಹರಿದಾಸ ಸಾಹಿತ್ಯಕ್ಕೆ ವಾದಿರಾಜರ ಕೊಡುಗೆಯೂ ಅಪಾರವಾಗಿ ಸಂದಿದೆ. ಸಂಸ್ಕೃತದಲ್ಲಿ ಉದ್ದಾಮ ಗ್ರಂಥ ರಚನಾಕಾರರಾಗಿದ್ದೂ ತಿಳಿಗನ್ನಡದಲ್ಲಿ ಭಕ್ತಿಸಾಹಿತ್ಯ ರಚಿಸಿ, ಯತಿಗಳಾಗಿದ್ದೂ ದಾಸಕೂಟಕ್ಕೆ ಸಮೀಪರಾಗಿದ್ದು ಬಾಳಿದ ಮಠಾಧಿಪತಿಗಳಿವರು.

ಮಧ್ವಮತದ ಮುನಿತ್ರಯರಲ್ಲಿ ಒಬ್ಬರೆಂದರೆ ಶ್ರೀಮಧ್ವಾಚಾರ್ಯರು, ಶ್ರೀಜಯತೀರ್ಥರೊಂದಿಗೆ ಖ್ಯಾತರಾಗಿರುವ ಶ್ರೀವ್ಯಾಸತೀರ್ಥರು. ಸಂಸ್ಕೃತ ಭಾಷೆಯಲ್ಲೂ ದಿಗ್ಗಜವೆನಿಸಿದ ವಿದ್ವಾಂಸರು, ಜ್ಞಾನಿಗಳು. ಕನ್ನಡ ಭಾಷೆಯಲ್ಲೂ ಅವರು ಪರಿಣಿತರು, ನುರಿತವರು ಅಷ್ಟೇ ಅಲ್ಲ ಕವಿಹೃದಯದ ಭಾವುಕಭಕ್ತರು. ಹೀಗಾಗಿ ವ್ಯಾಸತೀರ್ಥರು ಹಂಪೆಯಲ್ಲಿ ಸ್ಥಾಪಿಸಿದ್ದ ವಿಶ್ವವಿದ್ಯಾನಿಲಯದಲ್ಲಿ, ಮಠಸಂಸ್ಥಾನದಲ್ಲಿ ಅವರಿಗೆ ಅಸಂಖ್ಯ ಸಂಸ್ಕೃತ ಶಿಷ್ಯೋತ್ತಮರಿದ್ದರು. ಸಂಸ್ಕೃತವೊಂದನ್ನೆ ನೆಮ್ಮಿ ಗ್ರಂಥಪಠಣ, ಶಾಸ್ತ್ರ ಸಿದ್ಧಾಂತಗಳ ಅಧ್ಯಯನ, ವ್ಯಾಕರಣ ತರ್ಕಮೀಮಾಂಸೆಗಳ ಅಭ್ಯಾಸ ಮಾಡುವ ಅನೇಕ ಪಂಡಿತ ಶಿಷ್ಯವರ್ಗದವರಿದ್ದರು. ವೇದವ್ಯಾಸರು ರಚಿಸಿದ ಬ್ರಹ್ಮಸೂತ್ರಗಳಿಂದ ಹಿಡಿದು, ಅವುಗಳಿಗೆ ಮಧ್ವಾಚಾರ್ಯ, ಜಯತೀರ್ಥರೇ ಮುಂತಾದವರು ನೀಡಿದ ಭಾಷ್ಯ-ಅನುವ್ಯಾಖ್ಯಾನ, ಟೀಕೆ ಟಿಪ್ಪಣಿಗಳನ್ನು ಅಭ್ಯಾಸ ಮಾಡುತ್ತ, ಈ ಸಿದ್ಧಾಂತಗಳನ್ನು ಸಮರ್ಥಿಸುತ್ತ ಇದ್ದ ಪಂಡಿತರುಗಳ ಸಮೂಹವನ್ನು "ವ್ಯಾಸಕೂಟ"ವೆಂದು ಗುರುತಿಸುವ ವಾಡಿಕೆ ಉಂಟು. ಈ "ವ್ಯಾಸಕೂಟ" ಹಾಗೂ ಹರಿದಾಸರುಗಳ "ದಾಸಕೂಟ" ಎರಡೂ ವ್ಯಾಸತೀರ್ಥರ ಆಶ್ರಯದಲ್ಲಿ, ಪ್ರೋತ್ಸಾಹದಲ್ಲಿ, ನೆರವಿನಲ್ಲಿ ಆವಿಷ್ಕಾರಗೊಂಡಂಥವು.

ವ್ಯಾಸತೀರ್ಥರು ಅಪಾರ ಜ್ಞಾನಿಗಳು ಹಾಗೂ ದೈವಭಕ್ತರು. ತಮ್ಮ ಶಿಷ್ಯರುಗಳಿಗೆ ಅವರು ಜ್ಞಾನವನ್ನೂ, ಭಕ್ತಿಯನ್ನೂ ಧಾರೆ ಎರೆದರು. ಆದರೆ ಜ್ಞಾನವೆಂದರೆ ಅದು ಸಂಸ್ಕೃತವೇ ಎಂದು ಭಾವಿಸಿದ್ದ ಪಾಂಡಿತ್ಯಪ್ರಿಯರು

ಹೆಚ್ಚಾಗಿ ಎಲ್ಲ ಸಂಸ್ಕೃತ ಗ್ರಂಥಗಳ ಅಧ್ಯಯನವಷ್ಟೇ ತಮ್ಮ ಪಾಲು ಎಂದು ವಿದ್ಯೆ ಪಡೆದರು. ವಿದ್ವಾಂಸರೆನಿಸಿಕೊಳ್ಳುವಲ್ಲಿ ಸಾರ್ಥಕತೆ ಕಂಡರು. ವ್ಯಾಸತೀರ್ಥರ ಕನ್ನಡ ಶಿಷ್ಯರುಗಳೆನಿಸಿದ ಪುರಂದರದಾಸರೇ ಮುಂತಾದ 'ದಾಸಕೂಟ'ದವರು ಜ್ಞಾನವನ್ನೇನೂ ನಿರಾಕರಿಸಲಿಲ್ಲ. ಆದರೆ ತತ್ತ್ವಜ್ಞಾನವನ್ನು ಹೊರೆಯೆನಿಸಿಕೊಳ್ಳುವಷ್ಟು ಹೆಗಲಿಗೇರಿಸಿಕೊಳ್ಳದೆ ಭಕ್ತಿಮಾರ್ಗವನ್ನೇ ನೆಮ್ಮಿ ನಿಂತರು. ಹೃದಯದಿಂದ ಹರಿಯನ್ನು ಕರೆಯುವ ಭಕ್ತಿ ತಮ್ಮದು ಎಂದು ಹರಿದಾಸರಾದರು. ಅಗತ್ಯವಿರುವಷ್ಟು ತತ್ತ್ವಜ್ಞಾನವನ್ನು ಅವರು ವ್ಯಾಸತೀರ್ಥರಿಂದ ಪಡೆದರು. ವ್ಯಾಸತೀರ್ಥರು ತೋರಿದ ಭಾವುಕ ಭಕ್ತಿಯ ಪಾಲು ದಾಸಕೂಟದವರದಾಯಿತು. ಹೀಗಾಗಿ ತಾವು "ಜ್ಞಾನಿ"ಗಳು ಎನ್ನುವ ಒಂದು ಮೇಲರಿಮೆ ವ್ಯಾಸಕೂಟದವರಲ್ಲಿ ನೆಲೆಯೂರಿತು. ತಾವು ಜಗತ್ತಿನ ಒಡೆಯನಾದ "ಹರಿ"ಯ ದಾಸರು ಎನ್ನುವ ವಿನಮ್ರ ಭಾವನೆ ದಾಸಕೂಟದವರಲ್ಲಿ ಹೃದಯಸ್ಥಾಯಿಯಾಯಿತು.

ಶಾಸ್ತ್ರಾಮವರ್ಶನವೇ ಪ್ರಧಾನವಾಗಿ, ಕರ್ಮಠತನವೇ ಆಚರಣೆಯ ವಿಧಾನವಾಗಿ ವ್ಯಾಸಕೂಟವು ಜನಸಾಮಾನ್ಯರಿಂದ ಮೇಲಿನ ನೆಲೆಯಲ್ಲೇ ನಿಂತು ತತ್ತ್ವವೇತ್ತರೆನಿಸಿಕೊಂಡಿತು. ಮಠದ ಆಶ್ರಯ, ಕೆಲವೊಮ್ಮೆ ಮಠದ ಆಡಳಿತದ ಯಜಮಾನಿಕೆ, ಜೊತೆಗೆ ಪಾಂಡಿತ್ಯದ ಹಿರಿತನದ ಬೀಗುವಿಕೆ ಇವೆಲ್ಲ ವ್ಯಾಸಕೂಟದವರ ಹಕ್ಕು ಎಂಬಂತಾಯಿತು. ಆದರೆ ಮಠದ ಆಶ್ರಯವಿದ್ದೂ ಅಲ್ಲಿಯೇ ನೆಲೆನಿಲ್ಲದೆ ಊರಿನ ಕೇರಿಕೇರಿಗಳಲ್ಲಿ ತಿರುಗಾಡುತ್ತ ನಾಡಿನ ಎಲ್ಲೆಡೆ ಸಂಚರಿಸುತ್ತ ಜನಸಾಮಾನ್ಯರ ನಡುವೆಯೇ ಇದ್ದು ಬೆರೆಯುತ್ತ, ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತ, ಸಾಂತ್ವನವೆರೆಯುತ್ತ, ಭಕ್ತಿಭಾವದ ಆಸರೆಯನ್ನು ತಾಳಿಕೊಳ್ಳಲು ತಿಳಿಹೇಳುತ್ತ, ತಪ್ಪು ನಡವಳಿಕೆಗಳನ್ನು ತಿದ್ದಿ ತೀಡುತ್ತ, ನೈತಿಕ ಪಥದಲ್ಲಿ ಸಾಗಲು ದಾರಿ ತೋರುತ್ತ ಜನಮನ ಸಮೀಪರಾದವರು ದಾಸಕೂಟದವರು.

ಅಂದು ತಮ್ಮ ಅಸಂಖ್ಯ ಹಾಡುಗಳಿಂದಲೇ ಹೀಗೆ ಜನರ ಉದ್ಧಾರಕ್ಕೆ ಶ್ರಮಿಸಿದ ಪುರಂದರದಾಸರೇ ಆದಿಯಾಗಿ ಅನೇಕ ದಾಸರುಗಳ ರಚನೆಗಳಲ್ಲಿರುವ ಅಪಾರವಾದ ಜೀವನದರ್ಶನ, ನೀತಿಬೋಧೆಗಳು ಇಂದಿನ ದಿನಗಳ ನಮ್ಮ ಬದುಕಿಗೂ ಅನ್ವಯಿಸುತ್ತವೆ, ಹೆಚ್ಚು ಪ್ರಸಕ್ತವಾಗಿವೆ. ಮಾನವ ಬದುಕಿನ ರೀತಿನೀತಿಗಳು, ಮಾನವ ಮನಸ್ಸಿನ ನಡಾವಳಿಗಳನ್ನು ಕುರಿತು ಅಂದು ಹರಿದಾಸರುಗಳು ತಮ್ಮ ಹಾಡುಗಳ ಮೂಲಕ ತೋರಿರುವ ವಿಡಂಬನೆ, ವಿಮರ್ಶೆಗಳು ಸಾರ್ವಕಾಲಿಕತೆಯನ್ನು ಹೊಂದಿವೆ. ಅಂದಿನ ಅವರ ರಚನೆಗಳಲ್ಲಿ ಅವರು ಸಾರಿರುವ ಸಾಂತ್ವನದ ಮಾತುಗಳು ಇಂದಿನ ದಿನಗಳ ಗೊಂದಲ, ಜಂಜಡ, ಬವಣೆಗಳ ಬದುಕಿನಲ್ಲೂ ನಮಗೆ ನೆಮ್ಮದಿಯನ್ನು ಊಡಬಲ್ಲವಾಗಿವೆ. ಜೀವನದಲ್ಲಿ ಇಂದಿಗೂ ಎದುರಾಗುವ ಸಂಕೀರ್ಣಸಮಸ್ಯೆಗಳಿಗೆ,

ಹತಾಶೆ, ಜುಗುಪ್ಸೆಗಳಿಗೆ ಹರಿದಾಸರ ಸಂದೇಶದ ಸೊಲ್ಲುಗಳು ಧೈರ್ಯ, ಧೃತಿ, ಪರಿಹಾರಗಳನ್ನು ಸೂಚಿಸುತ್ತವೆ. ಎಂತಲೇ ಹರಿದಾಸರ ಸಾಲುಗಳು ಸಾರ್ವಕಾಲಿಕ ಸತ್ಯಮೌಲ್ಯಗಳಾಗಿ ಉಳಿದು ಬಂದಿವೆ. ದಾರಿದೀಪಗಳಾಗಿ ಬೆಳಗುತ್ತಿವೆ.

ದಾಸಕೂಟದ ಹರಿದಾಸರುಗಳು ಎಲ್ಲೆಲ್ಲಿ ಇದ್ದರೋ ಅಲ್ಲೆಲ್ಲಾ ಈ ದಾಸರುಗಳ ಪಂಥಗಳು ಬೆಳೆದವು. ಈ ಪಂಥಗಳಿಗೆ "ಕೃಷ್ಣ" ಕೇಂದ್ರ ಭೂಮಿಕೆಯಾದದ್ದು ಆಯಾ ದಾಸರುಗಳ ರಚನೆಯಿಂದಲೇ ತಿಳಿದು ಬರುತ್ತದೆ. ಜಗತ್ತಿಗೆ ಒಡೆಯ ಎಂಬ ಅರ್ಥದಲ್ಲಿ 'ಹರಿ'ಯನ್ನು ಆರಾಧ್ಯದೈವವಾಗಿಸಿಕೊಂಡು ತಮ್ಮನ್ನು ಹರಿದಾಸರೆಂದು ಇವರು ಗುರುತಿಸಿಕೊಂಡರು. ವೈಷ್ಣವ ವಾಙ್ಮಯದ ಸಾರ ರೂಪವೆನಿಸಿಕೊಂಡಿರುವ ಭಾಗವತ ಪುರಾಣವು ಹರಿದಾಸರ ಯೋಚನೆ, ಭಾವನೆಗಳ ಮೇಲೆ ಪ್ರಭಾವ ಬೀರಿ ಅವರ ಮನಃಪರಿಪಾಕಕ್ಕೆ ಪ್ರೇರಣೆಯಾಯಿತು. ತಾಳ ತಂಬೂರಿಗಳಿಂದೊಡಗೂಡಿದ ಗೀತ ನರ್ತನದೊಂದಿಗೆ ಹರಿಯ ನಾಮಸ್ಮರಣೆ, ಹರಿಯ ಅವತಾರಗಳ ಕಥಾ ನಿರೂಪಣೆ, ಭಕ್ತಿ ವೈರಾಗ್ಯಗಳನ್ನು ಕುರಿತು ಬೋಧನೆಯನ್ನು, ತಮ್ಮಲ್ಲಿ ಉಂಟಾದ ಈ ಮನಃಪರಿಪಾಕವನ್ನು, ಮನೆಮನೆಗೂ ಹೋಗಿ ಹಾಡಿ ಹಾಡಿ ತಿಳಿಸಿ ಹೇಳಿದವರು ಹರಿದಾಸರು. ವಿಷ್ಣುವಿನ ರೂಪಗಳಾದ ವಿಠ್ಠಲ, ಶ್ರೀನಿವಾಸ ಎಲ್ಲವೂ ಹರಿದಾಸರಿಗೆ ಪ್ರಿಯವಾಯಿತು.

ಆದರೆ ಉಡುಪಿಯಲ್ಲಿ ವ್ಯಾಸಕೂಟಕ್ಕೆ "ಕೃಷ್ಣ" ಕೇಂದ್ರಭೂಮಿಕೆಯಾದ. ಮಠಗಳಲ್ಲಿ ವ್ಯಾಸಕೂಟದ ಪೂಜೆ, ಆರಾಧನೆಗಳಿಗೆ "ಕೃಷ್ಣ"ನೇ ಇಲ್ಲಿ ಮುಖ್ಯನಾದ. ಭಿನ್ನ ಭಿನ್ನ ಜಾಗಗಳಲ್ಲಿ ಓಡಾಡಿಕೊಂಡಿದ್ದ ಹರಿದಾಸರುಗಳ ಸಂಚಾರಿ ವಾಣಿಯೂ ಕೂಡ ಕೃಷ್ಣಭಕ್ತಿಯನ್ನೇ ಕುರಿತು ಜನರಿಗೆ ಭೋದಿಸಿದ್ದು. ವ್ಯಾಸಕೂಟ, ದಾಸಕೂಟಗಳೆರಡೂ ಹರಿಯನ್ನೇ ಸರ್ವೋತ್ತಮನೆಂದು ಆರಾಧಿಸಿದರೂ ಜನಮುಖಿಯಾಗಿ ಹರಿಯನ್ನು ಸಾಮೀಪ್ಯಕ್ಕೆ ತಂದವರು ದಾಸಕೂಟದವರು. ದಾಸಕೂಟದವರ ಹರಿಯ ಆರಾಧನೆಯಲ್ಲಿ ಮಡಿವಂತಿಕೆಯ ಪಾಲೂ, ಮೇಲರಿಮೆಯ ಧೋರಣೆಯೂ ಹೆಚ್ಚು. ಕನ್ನಡ ಹಾಡುಗಳ ಹಾದಿಯ ಮೂಲಕ ಅವರುಗಳ ಹರಿ ಪೂಜೆ ನಡೆಯದು. ಅಲ್ಲಿ ಸಂಸ್ಕೃತ ಶ್ಲೋಕ ಮಂತ್ರಗಳ, ಆಚರಣೆಯ ವಿಧಿವಿಧಾನಗಳದೇ ಮೇಲುಗೈಯ ಮಾರ್ಗ. ವ್ಯಾಸತೀರ್ಥರು, ವಾದಿರಾಜ ಯತಿಗಳು ಮಾತ್ರ ಇದಕ್ಕೆ ಅಪವಾದವಾಗಿದ್ದರು.

ಇಷ್ಟಾದರೂ ವ್ಯಾಸತೀರ್ಥರ ಕಾಲದಲ್ಲೇ ವ್ಯಾಸಕೂಟ ದಾಸಕೂಟದವರ ನಡುವೆ ಅಡ್ಡ ಗೋಡೆಯೊಂದರ ನಿರ್ಮಾಣವೂ ಕಂಡೂ ಕಾಣದಂತೆ ನಡೆಯಿತು. ಕನ್ನಡದಲ್ಲಿ ಮಧ್ವತತ್ತ್ವದ ಸಾರವನ್ನು ಸಾಮಾನ್ಯರಿಗೆಲ್ಲ ಸಾರಿಬಿಡುತ್ತಿದ್ದಾರೆಂದು ವ್ಯಾಸಕೂಟದ ಪಂಡಿತರಿಗೆ ಸಿಟ್ಟು, ದಾಸಕೂಟದವರ ಮೇಲೆ ದ್ವೇಷ. ತತ್ತ್ವಜ್ಞಾನವೆಲ್ಲ ತಮ್ಮಂಥ ವೈದಿಕ ಪಂಡಿತರ ಗುತ್ತಿಗೆಯಾಗಿರಬೇಕು ಎನ್ನುವ ಹಠ, ಪಾಂಡಿತ್ಯದಲ್ಲಿ ತಾವು ಮಿಗಿಲು ಎನ್ನುವ

ಮೇಲರಿಮೆಯಲ್ಲಿ ಜಾತಿ ಭೇಧ ಭಾವಗಳೂ ಸೇರಿಕೊಂಡು ದಾಸಕೂಟದವರ ಮೇಲೆ ತಾತ್ಸಾರ ಭಾವನೆ ಬೆಳೆಯಿಸಿಕೊಂಡರು. ವ್ಯಾಸಕೂಟದವರ ಮಡಿವಂತಿಕೆ, ಡಂಭಾಚಾರಗಳನ್ನು ದಾಸಕೂಟದವರು ಬಯಲಿಗೆಳೆದು ವಿಡಂಬಿಸಿದರು. ಹೀಗೆ ಪರಸ್ಪರ ವಿರುದ್ಧ ಮುಖಿಯಾಗಿ ವ್ಯಾಸಕೂಟ ದಾಸಕೂಟಗಳು ಪರಿವರ್ತಿಸುತ್ತಿದ್ದುದನ್ನು ಇತಿಹಾಸದ ಒಂದು ಭಾಗವೆಂದು ಒಪ್ಪಿಕೊಳ್ಳಬೇಕಾಗಿ ಬಂದಿದೆ.

ವ್ಯಾಸಕೂಟದಲ್ಲಿ ಮಡಿವಂತಿಕೆಯಿದ್ದು, ಜಾತಿ ಭೇದ ಭಾವ ವರ್ಣ ತಾರತಮ್ಯ ಎಲ್ಲವೂ ಇತ್ತು ಎಂದಾಗುತ್ತದೆ. ದಾಸಕೂಟದಲ್ಲಿ ಈ ಯಾವ ಭೇದ ಭಾವ ಇಲ್ಲದ ಹಿರಿಮೆಯಿದೆ. ದಕ್ಷಿಣ ಭಾರತದ ತಮಿಳುನಾಡಿನಲ್ಲಿ. ಶಾಸ್ತ್ರ, ಸಂಸ್ಕೃತ ಪಠ್ಯಗಳ ಮೂಲಕ ಮಡಿವಂತಿಕೆಯ ಆಚರಣೆಯೇ ಪ್ರಧಾನವೆಂದು ನಡೆದುಕೊಳ್ಳುವವರೊಂದುಕಡೆ, ಭಕ್ತಿ ಪ್ರಪತ್ತಿಯ ಆಳ್ವಾರರೂ ಇದ್ದ ಹಾಗೆ ಒಂದು ಕಡೆ, ಕನ್ನಡ ನಾಡಿನಲ್ಲೂ ವ್ಯಾಸಕೂಟ ದಾಸಕೂಟಗಳ ಭಿನ್ನತೆಯನ್ನು ಕಾಣಬಹುದಾಗಿದೆ.

ವ್ಯಾಸತೀರ್ಥರು, ಪುರಂದರದಾಸರ ಕಾಲದ ನಂತರ ಮತ್ತೆ ನೂರಾರು ವರ್ಷಗಳ ಕಾಲ ದಾಸಕೂಟದವರು ಅವರ ಪರಂಪರೆಯನ್ನು ಬಲವಾಗಿ ಮುಂದುವರಿಸಿದಂತಿಲ್ಲ. ವಿಜಯನಗರ ಸಾಮ್ರಾಜ್ಯದ ಪತನದ ಕಾಲವಾದ್ದರಿಂದ ದಾಸಕೂಟದವರ ಈ ಮೌನ ಅನಿವಾರ್ಯ ಆಯಿತು. ಮತ್ತೆ ಕ್ರಿ.ಶ. ೧೫೯೫ರಲ್ಲಿ ಜನಿಸಿದ ಶ್ರೀರಾಘವೇಂದ್ರ ಸ್ವಾಮಿಗಳು ದಾಸಸಾಹಿತ್ಯದ ದ್ವಿತೀಯ ಘಟ್ಟಕ್ಕೆ ಚಾಲಕ ಶಕ್ತಿಯಾಗಿ ಬಂದವರಾಗಿದ್ದಾರೆ. ದಾಸಸಾಹಿತ್ಯಕ್ಕೆ ಪ್ರಥಮ ಘಟ್ಟದಲ್ಲಿ ಶ್ರೀ ವ್ಯಾಸತೀರ್ಥರು ಮುಖ್ಯ ಸ್ಫೂರ್ತಿಯಾಗಿದ್ದರೆ ದ್ವಿತೀಯ ಘಟ್ಟದಲ್ಲಿ ದಾಸಸಾಹಿತ್ಯಕ್ಕೆ ಮರುಜೀವನವನ್ನು ಕಲ್ಪಿಸಿಕೊಟ್ಟವರು ಮಂತ್ರಾಲಯದ ಶ್ರೀರಾಘವೇಂದ್ರ ಯತಿಗಳು. ಸನಾತನ ಧರ್ಮ ಹಾಗೂ ಸತ್ಯ ಸಿದ್ಧಾಂತಗಳ ಶ್ರೇಷ್ಠ ದಾರ್ಶನಿಕರಾಗಿ ಸುಮಾರು ೪೮ ಕ್ಕೂ ಮಿಗಿಲಾಗಿ ಸಂಸ್ಕೃತ ಗ್ರಂಥಗಳನ್ನು ರಚಿಸಿರುವ ರಾಘವೇಂದ್ರ ಯತಿಗಳು ಸ್ವತಃ ತಾವೇ ಹರಿದಾಸರು. ವ್ಯಾಸತೀರ್ಥರಂತೆ ತಾವೇ ಮಠಾಧಿಪತಿಗಳಾಗಿದ್ದು, ದಾಸಕೂಟವನ್ನು ಮತ್ತೆ ಬೆಳೆಯಿಸಿ ದಾಸಸಾಹಿತ್ಯದ ವಿಮಲ ರಚನೆಗೆ ಕಾರಣರಾದವರು. ಉತ್ತರ ಕಾಲೀನ ವ್ಯಾಸಕೂಟ, ದಾಸಕೂಟದ ಪ್ರಮುಖ ವ್ಯಾಖ್ಯಾನಕಾರರೆನಿಸಿಕೊಂಡವರು.

ದಾಸಕೂಟದ ಮೊದಲನೆಯ ಘಟ್ಟದಲ್ಲಿ ಪುರಂದರದಾಸರು ಕೇಂದ್ರಬಿಂದುವಾಗಿದ್ದಂತೆ ದ್ವಿತೀಯ ಘಟ್ಟದಲ್ಲಿ ವಿಜಯದಾಸರು ಕೇಂದ್ರವಾಗಿದ್ದಾರೆ. ಇವರ ನೇತೃತ್ವದಲ್ಲಿ ದಾಸಕೂಟ ಮತ್ತೆ ತಲೆಯೆತ್ತಿತು. ಹರಿದಾಸ ಸಂಪ್ರದಾಯವನ್ನು ಪುನಶ್ಚೇತನಗೊಳಿಸಿದವರು ವಿಜಯದಾಸರು. ಇವರ ಶಿಷ್ಯ ಸಮೂಹವೇ ಮುಂದೆ ನಾಡಿನ ಅನೇಕ ಪ್ರಮುಖ ದಾಸರುಗಳೆನಿಸಿಕೊಂಡರು. ಇವರ ಶಿಷ್ಯ ಪರಂಪರೆಯೇ ಬೆಳೆದು ನಾಡಿನ ಉದ್ದಗಲಕ್ಕೂ ದಾಸಸಾಹಿತ್ಯದ ವ್ಯಾಪ್ತಿ ಹರಡಿತು.

ಉತ್ತರ ಕಾಲೀನ ಹರಿದಾಸ ಸಾಂಸ್ಕೃತಿಕ ಕೇಂದ್ರಗಳಾಗಿ ಉಡುಪಿ, ರಾಯಚೂರು, ಲಿಂಗಸುಗೂರು, ಬಳ್ಳಾರಿ, ಹರಪ್ಪನಹಳ್ಳಿ ಮುಂತಾದ ಪ್ರದೇಶಗಳು ತಲೆಯೆತ್ತಿದವು. ಕಾಖಂಡಕಿ ಮಹಿಪತಿ ದಾಸರು, ಪ್ರಸನ್ನ ವೆಂಕಟದಾಸರು, ಗೋಪಾಲದಾಸರು ಮುಂತಾದವರುಗಳಿಂದ ಮತ್ತೊಮ್ಮೆ ದಾಸಸಾಹಿತ್ಯ ವಾಹಿನಿ ಸಮೃದ್ಧವಾಗಿ ಹರಿದು ಮುಂದುವರಿಯಿತು. ಹೆಳವನಕಟ್ಟೆ ಗಿರಿಯಮ್ಮ, ಹರಪ್ಪನಹಳ್ಳಿ ಭೀಮವ್ವ ಮುಂತಾದ ಹರಿದಾಸಿಯರೂ ಈ ಪರಂಪರೆಯಲ್ಲಿ ಬಂದರು.

ಕಾಲಕ್ರಮೇಣ ಈ ಮೊದಲಿನ ದಾಸಕೂಟದವರ ಜನಮುಖೀ ನಿಲುವುಗಳನ್ನು ಈ ಕಾಲದ ವೈದಿಕ ಮುಖೀ ನಿಲುವುಗಳು ತಮ್ಮೊಳಗೇ ಸೇರಿಸಿಕೊಂಡು ಮಡಿವಂತಿಕೆ ಮಾಡಿದ್ದರಿಂದ ನಡೆದ ಬದಲಾವಣೆಗಳನ್ನು ಉತ್ತರಕಾಲೀನ ಸಂದರ್ಭದಲ್ಲಿ ಗುರುತಿಸಬಹುದು.

ವ್ಯಾಸಕೂಟ, ದಾಸಕೂಟದವರಿಗೆ ಪರಸ್ಪರ ಭಿನ್ನತೆಯಿಲ್ಲ ಎನ್ನುವ ಅಂಶಗಳನ್ನು ಮುಂದೆ ಬಂದಂಥ ಜಗನ್ನಾಥ ದಾಸರು ಮೊದಲು ಪ್ರಾರಂಭ ಮಾಡಿಕೊಂಡರು. ಮುಖ್ಯವಾಗಿ ಶಾಸ್ತ್ರಗಳಿಗೂ, ದಾಸರ ಹಾಡುಗಳಿಗೂ, ದಾಸರ ನಡೆನುಡಿಗಳಿಗೂ ವ್ಯತ್ಯಾಸವಿಲ್ಲ ಎನ್ನವುದನ್ನು ಜನರಿಗೆ ಸಾರುವುದು ಅವರಿಗೆ ಅನಿವಾರ್ಯವೆನಿಸಿತ್ತು. ಹೀಗಾಗಿ ಇಲ್ಲಿ ಅವರ "ಹರಿಕಥಾಮೃತಸಾರ" ವ್ಯಾಖ್ಯಾನ ಮುಖ್ಯವಾಗುತ್ತದೆ. ಹತ್ತೊಂಬತ್ತನೆಯ ಶತಮಾನದ ಅಂತ್ಯದವರೆಗೂ ಈ ಹರಿದಾಸ ಪರಂಪರೆಯು ತಡೆಯಿಲ್ಲದೆ ಮುಂದುವರೆದುಕೊಂಡು ಬಂದಿದೆ ಎನ್ನುವುದನ್ನು ಹಿರಿಯ ವಿದ್ವಾಂಸರುಗಳು ಗುರುತಿಸಿದ್ದಾರೆ, ನಿರೂಪಿಸಿದ್ದಾರೆ.

ಅಧ್ಯಯನದ ಉದ್ದೇಶ

ವ್ಯಾಸಕೂಟ ಮತ್ತು ದಾಸಕೂಟದ ಕುರಿತು ಕನ್ನಡದಲ್ಲಿ ಒಂದು ಸಮಗ್ರ ಅಧ್ಯಯನವು ನಡೆದಿಲ್ಲ. ವ್ಯಾಸಕೂಟ ಮತ್ತು ದಾಸಕೂಟದ ಕುರಿತಾದ ವ್ಯಾಖ್ಯಾನಗಳೇ ಇನ್ನೂ ಸಮರ್ಪಕವಾಗಿ ಬಂದಿಲ್ಲ. ಅಂಥ ಒಂದು ಸಮರ್ಪಕ ವ್ಯಾಖ್ಯಾನವನ್ನು ಪ್ರಾರಂಭ ಮಾಡುವುದು ಈ ಅಧ್ಯಯನದ ಮೂಲ ಉದ್ದೇಶಗಳಲ್ಲಿ ಒಂದು.

ವ್ಯಾಸಕೂಟ ಮತ್ತು ದಾಸಕೂಟ ಈ ಎರಡಕ್ಕೂ ನಡುವೆ ಬಂದ ವಿರೋಧಗಳು ಯಾವುವು? ಎರಡರ ನಡುವಿನ ಅವಿನಾ ಸಂಬಂಧಗಳು ಯಾವುವು? ಈ ಎರಡೂ ಕೂಟಗಳ ತಾತ್ತ್ವಿಕ ಪ್ರಶ್ನೆಗಳು ಯಾವುವು? ವ್ಯಾಸಕೂಟ ಮತ್ತು ದಾಸಕೂಟದವರಲ್ಲಿ ಬಂದಂಥ ಪರಸ್ಪರ ಭಿನ್ನಾಭಿಪ್ರಾಯಗಳು, ಹುಟ್ಟಿಕೊಂಡ ಮೂದಲಿಕೆಗಳು, ಸ್ವಮತ ಮಂಡನೆಗಳು, ಪರಮತ ಖಂಡನೆಗಳಲ್ಲಿ ಅವರುಗಳು ಸಾಗಿದ ರೀತಿ ಇವುಗಳನ್ನು

ಇದುವರೆಗೆ ಸಮಗ್ರವಾಗಿ ಯಾರೂ ಅಧ್ಯಯನ ನಡೆಸಿಲ್ಲ. ಹೀಗಾಗಿ ವ್ಯಾಸಕೂಟದವರ ಹಿರಿಮೆಯನ್ನಾಗಲೀ, ದಾಸಕೂಟದವರ ಹಿರಿಮೆಯನ್ನೇ ಆಗಲೀ ಅಥವಾ ದಾಸಕೂಟ ಮತ್ತು ವ್ಯಾಸಕೂಟದವರ ಕೆಲವು ಇತಿಮಿತಿಗಳನ್ನಾಗಲೀ ತಿಳಿಯುವುದಕ್ಕೆ ಸಾಧ್ಯವಾಗದೇ ಹೋಗಿದೆ. ಈ ಹಿನ್ನಲೆಯಲ್ಲಿ ವ್ಯಾಸಕೂಟ ಮತ್ತು ದಾಸಕೂಟವನ್ನು ಪರಸ್ಪರ ಪಕ್ಕದಲ್ಲಿಟ್ಟು ನೋಡುವಂಥ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಹೊಂದಿದೆ.

ಇದುವರೆಗೂ ದಾಸಕೂಟದ ಕುರಿತಾಗಿ ಹೆಚ್ಚಿನ ಅಧ್ಯಯನಗಳು ನಡೆದಿವೆ. ಆದರೆ ವ್ಯಾಸಕೂಟದ ಕುರಿತಾಗಿ ಹೆಚ್ಚಿನ ಅಧ್ಯಯನಗಳು ನಡೆದಿಲ್ಲ. ಇಷ್ಟು ಮಾತ್ರವಲ್ಲ, ಒಂದರೊಡನೆ ಮತ್ತೊಂದನ್ನು ಇರಿಸಿ ನಡೆದ ಅಧ್ಯಯನವು ಕನ್ನಡದಲ್ಲಿ ಆಗಿಲ್ಲವಾದುದರಿಂದ ಪ್ರಸ್ತುತ ಅಧ್ಯಯನವು ಅಂಥದ್ದೊಂದು ಆಮೂಲಾಗ್ರ ಪರಿಶೋಧನೆಯ ಪ್ರಯತ್ನ ನಡೆಸಿದೆ.

ಕನ್ನಡನಾಡಿನಲ್ಲಿ ವ್ಯಾಸಕೂಟ ಎಂದರೇನು? ವ್ಯಾಸಕೂಟ ದಾಸಕೂಟದ ಜೊತೆ ಯಾಕೆ ಹೇಗೆ ಸೇರಿಕೊಳ್ಳುತ್ತದೆ? ಅಥವಾ ದಾಸಕೂಟಕ್ಕಿಂತ ಹೇಗೆ ವಿಭಿನ್ನ ಮಾರ್ಗದಲ್ಲಿ ನಿಲ್ಲುತ್ತದೆ? ಪರಸ್ಪರ ಈ ಎರಡೂ ಕೂಟಗಳಲ್ಲಿ ಭಿನ್ನತೆ, ಕಲಹ ಯಾಕಾಗಿ? ಆ ಕಲಹವಾದರೂ ಯಾವುದು? ದಾಸಕೂಟವು ವ್ಯಾಸಕೂಟದಿಂದ ಬಿಡಿಸಿಕೊಂಡು ಭಿನ್ನವಾಗಿ ನಡೆದ ದಾರಿಗಳು ಯಾವುವು? ಇವೆಲ್ಲ ಅಸ್ಪಷ್ಟವಾಗಿವೆ. ಆ ದಾರಿಗಳನ್ನೆಲ್ಲಾ ಒಟ್ಟಾಗಿ ಹಿಡಿಯಬೇಕಾದ ಪ್ರಯತ್ನದ ಅಗತ್ಯವಿದೆ. ಇವೆಲ್ಲವನ್ನು ಒಳಗೊಂಡ ಸಮಗ್ರ ವಿವರಣೆಯನ್ನು ಕಂಡುಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ.

ಭೌಗೋಳಿಕ, ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಹಿನ್ನಲೆಯಲ್ಲಿ ವ್ಯಾಸಕೂಟ, ದಾಸಕೂಟದವರ ಸಾಧನೆಗಳನ್ನು, ಕೆಲಸಗಳನ್ನು ನೋಡುವುದು ಕೂಡ ಈ ಅಧ್ಯಯನದ ಉದ್ದೇಶವಾಗಿದೆ.

ಹಿಂದಣ ಹೆಜ್ಜೆ ಗುರುತುಗಳು

ಇದುವರೆಗೂ ಕನ್ನಡದಲ್ಲಿ ಹರಿದಾಸ ಸಾಹಿತ್ಯವನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಲಾಗಿದೆ. ಬಗೆಬಗೆಯ ದೃಷ್ಟಿಕೋನಗಳಲ್ಲಿ ದಾಸಸಾಹಿತ್ಯದ ಅಧ್ಯಯನ, ಅಭ್ಯಾಸಗಳು ನಡೆದಿವೆ. ದಾಸಕೂಟದ ಬಗ್ಗೆ ಬಿಡಿ ಬಿಡಿ ಅಧ್ಯಯನಗಳು ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಸಾಕಷ್ಟು ನಡೆದಿವೆ. ಸಾಹಿತ್ಯಿಕವಾಗಿಯೋ ಧಾರ್ಮಿಕವಾಗಿಯೋ, ಮತೀಯವಾಗಿಯೋ, ಅಥವಾ ಮುಖ್ಯ ದಾಸರುಗಳ ಬಗ್ಗೆಯೇ ಅಧ್ಯಯನ ನಡೆಸಿಯೋ, ಗ್ರಂಥಗಳು ಬಂದಿವೆ. ಬೇರೆಬೇರೆ ನೆಲೆಗಳಿಂದ ದಾಸಸಾಹಿತ್ಯವನ್ನು ಕಂಡು ಅಭ್ಯಾಸ ಮಾಡಿದ ಬಿಡಿ ಬಿಡಿ ಅಧ್ಯಯನ ಗ್ರಂಥಗಳು ಸಂದಿವೆ. ದಾಸ ಸಾಹಿತ್ಯದ ಒಂದೊಂದು ಸಾಲನ್ನೂ ಸೂಕ್ಷ್ಮಾತಿಸೂಕ್ಷ್ಮವಾಗಿ ವಿಮರ್ಶಿಸಿರುವ ಗ್ರಂಥಗಳಿವೆ.

"ಹರಿದಾಸರ ಭಕ್ತಿ ಸ್ವರೂಪ" (ಡಾ.ಟಿ.ಎನ್.ನಾಗರತ್ನ-೧೯೭೫) "ದಾಸ ಸಾಹಿತ್ಯದಲ್ಲಿ ದ್ವೈತ ಪ್ರಮೇಯಗಳು" (ಕೃಷ್ಣರಾವ್.ಕೆ.ಎಮ್-೧೯೮೬) "ದಾಸ ಸಾಹಿತ್ಯ ಹಾಗೂ ಸಾಮಾಜಿಕ ಮೌಲ್ಯಗಳು" (ಜಯರಾಮಪ್ಪ, ಇಲ್ಲೂರು-೧೯೮೧) "ದಾಸ ಸಾಹಿತ್ಯ ದರ್ಶನ" (ಎಚ್ಚೆಸ್ಕೆ-೧೯೮೪) "ದಾಸ ಸಾಹಿತ್ಯದ ಕೆಲವು ನೋಟಗಳು" (ಲೀಲಾವತಿ.ಎಸ್.ರಾವ್-೧೯೮೩) "ಹರಿದಾಸ ಸಾಹಿತ್ಯ ಸಮೀಕ್ಷೆ"-೧೯೮೦ "ದಾಸ ಸಾಹಿತ್ಯದ ಹಾದಿಯಲ್ಲಿ" (ಪ್ರೊ॥ ವಸಂತ ಕುಷ್ಟಗಿ-೧೯೮೬) "ಕರ್ನಾಟಕ ಹರಿದಾಸರು" (ಎಚ್.ಕೆ.ವೇದವ್ಯಾಸಚಾರ್-೧೯೬೫) ಇವೆಲ್ಲಾ ಅಪಾರ ಪರಿಶ್ರಮ ಮತ್ತು ಅಧ್ಯಯನದಲ್ಲಿ ವಿರಚಿತವಾದ ಗ್ರಂಥಗಳಿಗೆ ಕೆಲವು ಉದಾಹರಣೆಗಳು. ಪ್ರಸ್ತುತ ಅಧ್ಯಯನಕ್ಕೆ ಹಿಂದಿನ ತಲಸ್ಪರ್ಶಿ ಅಧ್ಯಯನದ ಹೆಜ್ಜೆ ಗುರುತುಗಳಲ್ಲಿ ಕೆಲವು.

ಇದುವರೆಗೂ ಕನ್ನಡ ಹರಿದಾಸ ಸಾಹಿತ್ಯಕ್ಕೆ ಸಂಬಂಧಿಸಿದ ಅಧ್ಯಯನಗಳಲ್ಲಿ ತೌಲನಿಕ ಅಭ್ಯಾಸ ನಡೆಸಿದ ಅನೇಕ ಗ್ರಂಥಗಳು ಬಂದಿವೆ. ಬೇರೆ ಭಾಷೆಗಳಲ್ಲಿನ ಸಂತರಿಗೂ ಕನ್ನಡದ ಹರಿದಾಸರುಗಳಿಗೂ ತುಲನಾತ್ಮಕವಾಗಿ ಅಧ್ಯಯನ ಮಾಡಿರುವ ಗ್ರಂಥಗಳಿವೆ. ನಮ್ಮಲ್ಲಿಯೇ ದಾಸಕೂಟದವರ ಪ್ರಮುಖ ಕೃತಿಗಳ ತುಲನಾತ್ಮಕ ವಿಮರ್ಶೆಗಳು ಬಂದಿವೆ. ತೌಲನಿಕವಾಗಿ, ಕಾವ್ಯಾತ್ಮಕವಾಗಿ, ತಾತ್ವಿಕವಾಗಿ, ಚಾರಿತ್ರಿಕವಾಗಿ ಮತ್ತು ಆನ್ವಯಿಕವಾಗಿ ಹರಿದಾಸ ಸಾಹಿತ್ಯವನ್ನು ಅಭ್ಯಸಿಸಿ ಗ್ರಂಥರಚಿಸಿದ್ದಾರೆ. 'ಶ್ರೀ ಪುರಂದರದಾಸರು' 'ಶ್ರೀ ವಿಜಯದಾಸರು', 'ಶ್ರೀ ಜಗನ್ನಾಥದಾಸರು' ಹೀಗೆ ಬಿಡಿಬಿಡಿಯಾಗಿ ಪ್ರತ್ಯೇಕವಾಗಿ ಆಯಾ ದಾಸರುಗಳ ಜೀವನಚರಿತ್ರೆ, ಕೃತಿ ಪರಿಚಯಗಳನ್ನು ನೀಡಿದವರಿದ್ದಾರೆ. ಶ್ರೀಪಾದರಾಜರ, ವ್ಯಾಸತೀರ್ಥರ, ವಾದಿರಾಜರ ಕುರಿತು ಬಿಡಿಬಿಡಿಯಾದ ಗ್ರಂಥಗಳೂ ಬಂದಿವೆ. ಹೀಗೆ ಹರಿದಾಸ ಸಾಹಿತ್ಯವನ್ನು ಕುರಿತು ಸಾಕಷ್ಟು ಚಿಂತನ ಮಂಥನ ನಡೆಸಿದ ಅನೇಕ ಕೃತಿಗಳಿವೆ. ವ್ಯಾಸಕೂಟದ ಪ್ರಮುಖ ಯತಿಗಳ ಸಾಧನೆ ಬದುಕುಗಳ ಬಿಡಿ ಬಿಡಿ ಗ್ರಂಥಗಳೂ ಇವೆ. ಅನೇಕ ಸಂಶೋಧನಾತ್ಮಕ ಗ್ರಂಥಗಳು ಹೊಸ ಬೆಳಕನ್ನು ದಾಸ ಸಾಹಿತ್ಯದ ಬಗ್ಗೆ ಬೀರಿವೆ.

ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ

ವ್ಯಾಸಕೂಟದ ಪ್ರಮುಖ ಯತಿವರೇಣ್ಯರುಗಳಾಗಲೀ, ದಾಸಕೂಟದ ಪ್ರಮುಖ ಹರಿದಾಸರುಗಳಾಗಲೀ ನಮ್ಮ ನಾಡಿಗೆ ನೀಡಿರುವ ವಿಶಿಷ್ಠ ಸುಸಂಸ್ಕೃತಿಯು ರೂಪುಗೊಳ್ಳಲು ಮುಖ್ಯ ಕಾರಣವೇ "ಭಕ್ತಿ" ಎನ್ನುವುದನ್ನು ಮರೆಯುವಂತಿಲ್ಲ. ಸಂಗೀತ-ಸಾಹಿತ್ಯ ಬೆರೆತ ಈ ಮಾತೃಭಾಷೆಯಲ್ಲಿನ ಅವರ ಸಾಧನೆಗೆ ಮೂಲ ನೆಲೆಗಟ್ಟೇ ಅವರ ಹೃದಯದಲ್ಲಿನ 'ಹರಿಭಕ್ತಿ'ಯಾಗಿದೆ. ದೈವಪ್ರೀತಿಯೇ ಅವರುಗಳ ಪ್ರಧಾನ ಸ್ಥಾಯಿಭಾವವಾಗಿದೆ.

ಹೀಗಾಗಿ ಭಕ್ತಿ ತತ್ತ್ವದ ಹಿನ್ನೆಲೆಯನ್ನು ಕುರಿತಾದ ವಿವೇಚನೆಯಿಂದಲೇ ಈ ಅಧ್ಯಯನ ಪ್ರಾರಂಭಗೊಂಡಿದೆ. "ಭಕ್ತಿ" ಎನ್ನುವುದಾದರೂ ಏನು? ಯಾಕಾಗಿ ಈ ಭಕ್ತಿ ಭಾವವನ್ನು ಮಾನವ ತಾಳಿಕೊಳ್ಳಬೇಕು ಅಥವಾ

ಬೆಳೆಯಿಸಿಕೊಳ್ಳಬೇಕು? "ಭಕ್ತಿ" ತತ್ತ್ವದ ವಿಕಾಸಪಥವೇನು? ಭಕ್ತಿಪಥದಲ್ಲಿ ಕರ್ನಾಟಕದ ಸಾಧನೆ, ಆಗುಹೋಗುಗಳೇನು? ಎನ್ನುವುದನ್ನೆಲ್ಲ ಸ್ಥೂಲವಾಗಿ ವಿವೇಚಿಸಲಾಗಿದೆ. ಈ ಅಧ್ಯಯನವು ೧೬ನೆಯ ಶತಮಾನದಲ್ಲಿ ಆರಂಭಗೊಂಡ "ವ್ಯಾಸಕೂಟ ಮತ್ತು ದಾಸಕೂಟ"ಗಳ ಕುರಿತಾಗಿ ಇರುವುದರಿಂದ ಈ ವ್ಯಾಸಕೂಟ ದಾಸಕೂಟಗಳಿಗೆ ಮೂಲತಃ ಭಕ್ತಿಪಥವನ್ನು ತೋರಿಸಿಕೊಟ್ಟ ೧೩ನೆಯ ಶತಮಾನದಲ್ಲಿ ಬಂದ ಮಧ್ವಾಚಾರ್ಯರನ್ನು ಕುರಿತಾದ ವಿಚಾರಗಳನ್ನು ಕೂಲಂಕಷವಾಗಿ ಇಲ್ಲಿ ವಿವೇಚಿಸಲಾಗಿದೆ. ವ್ಯಾಸಕೂಟದ ಪ್ರಮುಖರಾದ ವ್ಯಾಸತೀರ್ಥರು, ಅವರ ಗುರುಗಳಾದ ಶ್ರೀಪಾದರಾಜರು, ಮುಂದೆ ಬಂದ ವಾದಿರಾಜರು ಇವರೆಲ್ಲರೂ ಮಾಧ್ವಪೀಠದ ಯತಿಗಳೇ ಆಗಿರುವುದರಿಂದಲೂ, ಇವರುಗಳಿಂದ ಪ್ರೇರೇಪಿತರಾಗಿ ಸಾಗಿದ ದಾಸಕೂಟದವರಿಗೂ ಮಧ್ವಮತದ ತಿರುಳುಗಳೇ ಬೆಳಕಾಗಿದ್ದರಿಂದಲೂ ಮಧ್ವಾಚಾರ್ಯರ ಬದುಕು, ಬರಹ, ಬೋಧನೆಗಳನ್ನು ಅಧ್ಯಯನವು ಒಳಗೊಂಡಿದೆ. ಮಧ್ವರು ಜನಿಸುವ ಕಾಲದಲ್ಲಿನ ದೇಶದ ಸ್ಥಿತಿಗತಿಗಳು ಏನಿದ್ದವು ಎನ್ನುವುದರ ಸ್ಥೂಲ ನೋಟವೂ ಇಲ್ಲಿದೆ.

ಮುಂದೆ ದಾಸಸಾಹಿತ್ಯದ ಉಗಮವೆಲ್ಲಿ? ಎಂದು? ಎನ್ನುವುದನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದ್ದು ಶ್ರೀಪಾದರಾಜರೇ ದಾಸಸಾಹಿತ್ಯ ಪ್ರವರ್ತಕರೆಂಬ ನಿಲುಗಡೆಗೆ ಬರಲಾಗಿದೆ. ವ್ಯಾಸಕೂಟ ದಾಸಕೂಟಗಳ ಆವಿಷ್ಕಾರದ ಮುಂಚಿನ ಚಾರಿತ್ರಿಕ ಹಿನ್ನೆಲೆಯ ಸ್ವರೂಪದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ, ಆ ಸಮಯದ ಧಾರ್ಮಿಕ ಪರಿಸ್ಥಿತಿ, ಮುಸ್ಲಿಂ ಧಾಳಿಯಲ್ಲಿ ತತ್ತರಿಸಿದ್ದ ನಾಡಿನ ಪರಿಸ್ಥಿತಿ ಈ ಎಲ್ಲವನ್ನೂ ವಿವೇಚಿಸಲಾಗಿದೆ.

ಮುಂದಿನ ವಿಷಯವಾಗಿ ಹರಿದಾಸ ಪಂಥದ ಪ್ರವರ್ತಕರಾದ ಶ್ರೀಪಾದರಾಜರ ಬದುಕು-ಬರಹಗಳನ್ನು ಸವಿವರವಾಗಿಯೇ ಅಧ್ಯಯನ ಮಾಡಲಾಗಿದೆ. ಮಠಾಧಿಪತಿಯಾಗಿ ಸಂಸ್ಕೃತ ಉದ್ಗ್ರಂಥಗಳನ್ನು ರಚಿಸಿದ ಮಹಾನ್ ವಿದ್ವಾಂಸರಾಗಿದ್ದೂ ಕನ್ನಡಭಾಷೆಯಲ್ಲಿ ದಾಸಸಾಹಿತ್ಯ ರಚಿಸಿ, ಹಾಡಿ, ಹಾಡಿಸಲು ಅವರು ಜೀವನದಲ್ಲಿ ಪಡೆದ ಪ್ರಭಾವ, ಪ್ರೇರಣೆಗಳು ಏನಿದ್ದರಬಹುದು? ಅವರ ಜೀವಿತಾವಧಿಯ ಕಾಲದ ಚಾರಿತ್ರಿಕ ಹಿನ್ನೆಲೆಗಳೇನಿದ್ದಿರಬಹುದು? ಇವೆಲ್ಲವನ್ನೂ ಒಳಗೊಂಡಂತೆ ಶ್ರೀಪಾದರಾಜರ ಕೃತಿಗಳೆಡೆ ಕಿರುನೋಟವನ್ನೂ ಹರಿಯಿಸಿ ಕೃತಿಗಳಲ್ಲಿನ ಸಾರವನ್ನು ಬೇರೆ ಬೇರೆ ಶೀರ್ಷಿಕೆಗಳ ಕೆಳಗಿರಿಸಿಕೊಂಡು ಅಭ್ಯಸಿಸಲಾಗಿದೆ. ಭಾವುಕ ಭಕ್ತರಾದ, ಮಹಾನ್ ಜ್ಞಾನಿಗಳೂ ಆದ ಶ್ರೀಪಾದರಾಜರ ಬದುಕು-ಬರಹ ಬೇರೆ ಬೇರೆ ಆಗಿರಲು ಸಾಧ್ಯವಿಲ್ಲ. ಕೃತಿಗಳ ಮೂಲಕ ಕೃತಿಕಾರರನ್ನು ಅರಿಯಬಹುದು ಎನ್ನುವುದಕ್ಕಾಗಿ, ಮುಂದಿನ ದಾಸ ಸಾಹಿತ್ಯ ರಚನೆಗೆ ಸಿದ್ಧ ಹಾದಿಯನ್ನು ಹೇಗೆ ನಿರ್ಮಾಣ ಮಾಡಿಕೊಟ್ಟರು ಎನ್ನುವುದನ್ನು ಅರಿಯುವುದಕ್ಕಾಗಿ ಶ್ರೀಪಾದರಾಜರ ಕೃತಿಗಳೆಡೆ ಸವಿವರ ಗಮನ ಹರಿಸಲಾಗಿದೆ. ಇವಿಷ್ಟನ್ನೂ ಒಂದು ಅಧ್ಯಾಯವು ಗರ್ಭೀಕರಿಸಿಕೊಂಡಿದೆ. "ಭಕ್ತಿ ತತ್ತ್ವದ ಹಿನ್ನೆಲೆ-ಮಧ್ವಾಚಾರ್ಯರು-ಶ್ರೀಪಾದರಾಜರು" ಇದು ಈ ಆಧ್ಯಾಯದ ಒಟ್ಟು ಸ್ವರೂಪ ಮತ್ತು ವ್ಯಾಪ್ತಿ.

ಮುಂದಿನ ಅಧ್ಯಯನವು "ಚಾರಿತ್ರಿಕ ವ್ಯಾಖ್ಯಾನಗಳು" ಎಂಬ ಶೀರ್ಷಿಕೆಯಲ್ಲಿನ ಅಧ್ಯಾಯವಾಗಿ ಮುಂದುವರೆದಿದೆ. ವ್ಯಾಸಕೂಟ ಮತ್ತು ದಾಸಕೂಟಗಳ ಹುಟ್ಟು ಮತ್ತು ಬೆಳವಣಿಗೆಯನ್ನು ಕೂಲಂಕಷವಾಗಿ ಇಲ್ಲಿ ವಿವೇಚಿಸಲಾಗಿದೆ. ವ್ಯಾಸಕೂಟ ದಾಸಕೂಟಗಳು ಆವಿಷ್ಕಾರಗೊಂಡಿದ್ದು ಶ್ರೀಪಾದರಾಜರ ಶಿಷ್ಯರಾದ ಶ್ರೀವ್ಯಾಸತೀರ್ಥರ ಕಾಲದಲ್ಲಿ ಹಾಗೂ ಅವರ ಪ್ರೋತ್ಸಾಹ, ಪ್ರೇರಣೆಗಳಲ್ಲಿ. ಹೀಗಾಗಿ ವ್ಯಾಸತೀರ್ಥರ ಬದುಕನ್ನು, ಸಾಧನೆಯನ್ನು ಆಮೂಲಾಗ್ರವಾಗಿ ಇಲ್ಲಿ ಅಭ್ಯಸಿಸಲಾಗಿದೆ. ಶ್ರೀಪಾದರಾಜರ ಮೇಲ್ಪಂಕ್ತಿಯನ್ನು ಅನುಸರಿಸಿ ವ್ಯಾಸತೀರ್ಥರು ರಚಿಸಿದ ಕನ್ನಡ ಕೃತಿಗಳನ್ನು ಸಂಕ್ಷಿಪ್ತ ರೀತಿಯಲ್ಲೇ ಆದರೂ ಹೃದ್ಗತವಾಗಿ ಇಲ್ಲಿ ಅಧ್ಯಯನ ಮಾಡಲಾಗಿದೆ. ವ್ಯಾಸತೀರ್ಥರ ಬದುಕಿನ ಕಾಲದ ರಾಜಕೀಯ, ಚಾರಿತ್ರಿಕ ಮುಖ್ಯಾಂಶಗಳನ್ನೂ ಕ್ರೋಢೀಕರಿಸಿಕೊಳ್ಳಲಾಗಿದೆ. ವ್ಯಾಸತೀರ್ಥರು ಅಂದಿನ ರಾಜಕೀಯ ಕ್ಷೇತ್ರದಲ್ಲೂ ತಮ್ಮ ನೈತಿಕ ವರ್ಚಸ್ಸನ್ನು ಬೀರಿದವರು. ತಮ್ಮ ಮಠವನ್ನು ಅಂದಿನ ಅತಿ ದೊಡ್ಡ ವಿದ್ಯಾಕೇಂದ್ರವನ್ನಾಗಿ ಪರಿವರ್ತಿಸಿದವರು. ವ್ಯಾಸಕೂಟ ದಾಸಕೂಟವನ್ನು ಕಟ್ಟಿ ಬೆಳೆಯಿಸಿದವರು. ಕನ್ನಡ ನಾಡಿಗೆ ಅವರ ಬಹುಮುಖಿ ಸೇವೆ ಸಂದಿದೆ. ವ್ಯಾಸತೀರ್ಥರೆಂಬ ಮಹಾನ್ ವ್ಯಕ್ತಿತ್ವವಿಲ್ಲದಿದ್ದಲ್ಲಿ ಬಹುಶಃ ಪುರಂದರದಾಸರು, ಕನಕದಾಸರು ಇಂಥ ಭಕ್ತ ಸಂತ ವ್ಯಕ್ತಿತ್ವಗಳೂ ಈ ನಾಡಿಗೆ ಲಭ್ಯವಿರುತ್ತಿರಲಿಲ್ಲ. ಈ ಕಾರಣಗಳಿಗಾಗಿ ವ್ಯಾಸತೀರ್ಥರ ಬಗ್ಗೆ ಆಮೂಲಾಗ್ರ ವಿವರಗಳನ್ನು ಈ ಅಧ್ಯಯನವು ಒಳಗೊಳ್ಳುತ್ತದೆ.

ಮುಂದೆ ವ್ಯಾಸಕೂಟದ ತಾತ್ತ್ವಿಕ ಪರಿಕಲ್ಪನೆಗಳನ್ನು ವಿವೇಚಿಸಲಾಗಿದೆ. ಅಂತಯೇ ವ್ಯಾಸಕೂಟದ ಮುಖ್ಯ ವ್ಯಾಖ್ಯಾನಕಾರರ ಬದುಕು, ಬರಹ, ಸಾಧನೆಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ವ್ಯಾಸತೀರ್ಥರ ಶಿಷ್ಯರಾದ ಕೆಲವು ಪ್ರಮುಖ ವ್ಯಾಖ್ಯಾನಕಾರರಾಗಿ ವಿಜಯೀಂದ್ರತೀರ್ಥರು, ಶ್ರೀನಿವಾಸತೀರ್ಥರು, ನಾರಾಯಣತೀರ್ಥರು ಮತ್ತು ಗೋವಿಂದ ಒಡೆಯರ ಕುರಿತಾದ ಅಧ್ಯಯನಾಂಶಗಳಿಲ್ಲಿವೆ. ವ್ಯಾಸಕೂಟ ದಾಸಕೂಟಗಳೆರಡಕ್ಕೂ ಪ್ರಮುಖ ವ್ಯಾಖ್ಯಾನಕಾರರಾಗಿ ದೊರೆಯುವ ವಾದಿರಾಜರ ಬದುಕು, ಬರಹಗಳನ್ನು ಸವಿವರವಾಗಿ ಅಧ್ಯಯನ ಮಾಡಲಾಗಿದೆ. ವಿಜಯೀಂದ್ರತೀರ್ಥರು ಮತ್ತು ವಾದಿರಾಜರು ಈ ಯತಿಗಳಿಬ್ಬರೂ ಮಠಾಧಿಪತ್ಯದಲ್ಲೇ ಮೈಮರೆಯದೆ ತಮ್ಮ ಸುತ್ತಣ ಸಾಮಾನ್ಯ ಜನತೆಗಾಗಿ ಹೇಗೆ ಮಿಡಿದರು, ಹೇಗೆ ಸೇವೆ ಸಲ್ಲಿಸಿದರು ಎನ್ನವುದನ್ನು ಕೂಲಂಕಷವಾಗಿ ತಿಳಿಯಲಾಗಿದೆ. ದೀರ್ಘಕಾಲ ಪೀಠಾಧಿಪತ್ಯ ಮಾಡಿದ ವಾದಿರಾಜರು ವ್ಯಾಸಕೂಟಕ್ಕೂ ಹಿರಿಯ ವ್ಯಾಖ್ಯಾನಕಾರರಾದರು. ದಾಸಕೂಟಕ್ಕೂ ಅವರು ಪ್ರಮುಖ ವ್ಯಾಖ್ಯಾನಕಾರರು. ಹೀಗಾಗಿ ವಾದಿರಾಜರ ಕೊಡುಗೆಯನ್ನು ಮುಖ್ಯವಾಗಿ ಅಧ್ಯಯನದಲ್ಲಿ ಸೇರಿಸಿಕೊಳ್ಳಲಾಗಿದೆ.

ಮುಂದೆ ದಾಸಕೂಟದ ಮುಖ್ಯ ತಾತ್ತ್ವಿಕ ಪರಿಕಲ್ಪನೆಗಳನ್ನು ಅಧ್ಯಯನ ಮಾಡಲಾಗಿದೆ. ಮುಂದುವರೆದು ದಾಸಕೂಟದ ವ್ಯಾಖ್ಯಾನಕಾರರಾಗಿ ಪುರಂದರದಾಸರ ಸೇವೆ-ಸಾಧನೆಗಳನ್ನು ಕೂಲಂಕಷವಾಗಿ ಅರಿಯುವಂಥ ಅಭ್ಯಾಸ ನಡೆಸಿದ್ದು ಸವಿವರಗಳನ್ನು ನೀಡಲಾಗಿದೆ. ಸಾಹಿತ್ಯ ಸಂಗೀತಗಳೆರಡರ ಸೇವೆಯನ್ನೂ ನಾಡಿಗಾಗಿ

ನೀಡಿದವರು ಪುರಂದರದಾಸರು. ತಮ್ಮ ಬಗ್ಗೆ ಎಲ್ಲಿಯೂ ಹೇಳಿಕೊಳ್ಳದ ಈ ವೈರಾಗ್ಯಶಾಲಿ ವ್ಯಕ್ತಿತ್ವವನ್ನು ಅರಿಯುವ ಪ್ರಯತ್ನವಿಲ್ಲಿದೆ. ಪುರಂದರದಾಸರ ಹೊರತಾಗಿ ದಾಸಕೂಟವು ಇಲ್ಲ, ಕನ್ನಡನಾಡಿಗೆ ಸಂಗೀತ-ಸಾಹಿತ್ಯ ಸುಸಂಸ್ಕೃತಿಯೂ ಇಲ್ಲ. ಹೀಗಾಗಿ ಪುರಂದರದಾಸರ ಕೃತಿಗಳನ್ನು ಸವಿವರವಾಗಿ ಅಭ್ಯಾಸ ಮಾಡಲಾಗಿದೆ. ಆದರೂ ಅವರ ಎಲ್ಲ ಕೃತಿಗಳನ್ನೂ ಇಲ್ಲಿ ಅನುಸಂಧಾನ ಮಾಡಲಾಗಿಲ್ಲ. ಅವರು "ಕರ್ನಾಟಕ ಸಂಗೀತ ಪಿತಾಮಹ"ರೆನಿಸಿದ ಕಾರಣವಾಗಲೀ, ಅವರ ಸಂಗೀತ ಸೇವೆ, ಜ್ಞಾನವನ್ನಾಗಲೀ ಕುರಿತ ವಿವೇಚನೆಯನ್ನು ಈ ಅಧ್ಯಯನದ ವ್ಯಾಪ್ತಿಯು ಒಳಗೊಂಡಿಲ್ಲ. ಕಾರಣ ವಿಸ್ತಾರತೆಯ ಪರಿಧಿಯನ್ನು ಊಹಿಸಿದ ಭಯ. ಪುರಂದರದಾಸರ ಬಗೆಗಿನ ಅಧ್ಯಯನದಲ್ಲೇ ಅಂದಿನ ಸಾಮಾಜಿಕ ಚಿತ್ರಣ, ವ್ಯಾಸಕೂಟದ ಮಡಿವಂತಿಕೆಯ ಚಿತ್ರಣ ಇತ್ಯಾದಿ ಅನೇಕ ವಿವರಗಳು ಬಂದಿವೆಯಾದರೂ, ಪುರಂದರದಾಸರ ಕೃತಿಗಳ ಕುರಿತಾಗಿ ಇನ್ನೂ, ಮತ್ತೂ ಹೇಳಬೇಕಾದುದು ಉಳಿದುಬಿಟ್ಟಿತೆನ್ನುವುದೇ ಇಲ್ಲಿನ ಸತ್ಯವಾಗಿದ್ದು ವಿಸ್ತರತೆಯ ಭಯದಿಂದಾಗಿ ಅವುಗಳನ್ನು ಕೈಬಿಡಲೇ ಬೇಕಾಗಿ ಬಂದಿದೆ. ಮಾನವ ಬದುಕನ್ನು ಊರ್ಧ್ವಮುಖಿಯಾಗಿಸಲು ಪುರಂದರದಾಸರ ಕೃತಿಗಳು ಹೇಗೆ ದಾರಿ ದೀಪವಾಗುತ್ತದೆ ಎನ್ನುವುದನ್ನು ಮತ್ತೂ ಅನೇಕ ರೀತಿಯಲ್ಲಿ ಹೇಳಬಹುದಾಗಿದ್ದು ಅದೇ ಮತ್ತೂ ಒಂದು ಮಹಾನ್ ಪ್ರಬಂಧವಾಗಿ ಬೆಳೆಯಬಹುದಾದ ಕಾರಣದಿಂದಾಗಿ ಈ ಅಧ್ಯಯನದ ವ್ಯಾಪ್ತಿಯೊಳಗೆ ಸಾಧ್ಯವಿದ್ದಷ್ಟೇ ಅವರ ಕೃತಿಗಳನ್ನು ಕೈಗೆತ್ತಿಕೊಂಡು ವಿವೇಚಿಸಲಾಗಿದೆ.

ದಾಸಕೂಟದ ಮತ್ತೊಬ್ಬ ಪ್ರಮುಖ ವ್ಯಾಖ್ಯಾನಕಾರರಾದ ಕನಕದಾಸರ ಬಗ್ಗೆಯೂ ಈ ಅಧ್ಯಯನವು ಇತಿಮಿತಿಗಳ ವ್ಯಾಪ್ತಿಯಲ್ಲೇ ವಿವೇಚಿಸಬೇಕಾಗಿ ಬಂದಿದೆ. ಕನಕದಾಸರ ಮುಂಡಿಗೆಗಳನ್ನಾಗಲೀ, ಪುರಂದರದಾಸರ ಮುಂಡಿಗೆಗಳನ್ನಾಗಲೀ ಒಂದೆರಡನ್ನು ದೃಷ್ಟಾಂತಕ್ಕಾಗಿ ವಿವೇಚಿಸಲಾಗಿದೆಯಲ್ಲದೆ ದಾಸಕೂಟದ ಈ ಇಬ್ಬರು ಪ್ರಮುಖರ ಮುಂಡಿಗೆಗಳ ಅಗಾಧ ಭಂಡಾರವನ್ನು ಒಡೆದು ವಿಶದೀಕರಿಸಿಕೊಳ್ಳುವುದು ಈ ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿಲ್ಲ. ಕನಕದಾಸರ ಕಾವ್ಯಗಳನ್ನೂ ಇಲ್ಲಿನ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಲ್ಲ. ಇಷ್ಟಿದ್ದೂ ವ್ಯಾಸಕೂಟ-ದಾಸಕೂಟಗಳನ್ನು ಆಮೂಲಾಗ್ರವಾಗಿ ಅರಿಯಲು ಅಗತ್ಯವಿರುವಷ್ಟು ಈ ಇಬ್ಬರು ಪ್ರಮುಖ ವ್ಯಾಖ್ಯಾನಕಾರರನ್ನು ಅಭ್ಯಾಸ ಮಾಡಲಾಗಿದೆ. ಪುರಂದರ, ಕನಕರ ಸಮಕಾಲೀನರನ್ನು ಕುರಿತ ಸಂಕ್ಷಿಪ್ತ ನಿರೂಪಣೆಯು ಇಲ್ಲಿದೆ.

"ತೌಲನಿಕ ವ್ಯಾಖ್ಯಾನಗಳು" ಎಂಬ ಶೀರ್ಷಿಕೆಯ ಅಡಿಯಲ್ಲಿನ ಮುಂದಿನ ಅಧ್ಯಾಯದಲ್ಲಿ ವ್ಯಾಸಕೂಟ ಮತ್ತು ದಾಸಕೂಟದ ತಾತ್ತ್ವಿಕ ಭಿನ್ನತೆಗಳೇನು? ಅವುಗಳ ಸ್ವರೂಪವೇನು? ಎನ್ನುವುದರ ವಿವೇಚನೆಯನ್ನು ಮಾಡಲಾಗಿದೆ. ಹಾಗೆಯೇ ವ್ಯಾಸಕೂಟ ಮತ್ತು ದಾಸಕೂಟದ ಸಾಂಸ್ಕೃತಿಕ ಪರಿಕಲ್ಪನೆಗಳೇನೇನು? ಅವುಗಳ ಸ್ವರೂಪವೇನು? ವ್ಯಾಸಕೂಟ ಮತ್ತು ದಾಸಕೂಟದ ಸಾಮಾಜಿಕ ವಿನ್ಯಾಸಗಳೇನು? ಅವುಗಳ ಇತಿಮಿತಿಗಳ ಸ್ವರೂಪವೇನು? ಎಂಬುದರ ವ್ಯಾಖ್ಯಾನಗಳನ್ನು ಮಾಡಲಾಗಿದೆ. ದಾಸಕೂಟದ ಅವನತಿಯ ಕಾಲದ ಚಿತ್ರಣವನ್ನೂ ನೀಡಲಾಗಿದೆ.

ಈ ಅಧ್ಯಯನದ ಕಡೆಯ ಅಧ್ಯಾಯವಾಗಿ "ಸಾಂಸ್ಕೃತಿಕ ವ್ಯಾಖ್ಯಾನಗಳು" ಎಂಬ ಶೀರ್ಷಿಕೆಯಲ್ಲಿ ಭೌಗೋಳಿಕ ಹಿನ್ನೆಲೆಯಲ್ಲಿನ ವ್ಯಾಸಕೂಟದ ಸಾಂಸ್ಕೃತಿಕ ಕೇಂದ್ರಗಳು ಎಲ್ಲೆಲ್ಲಿ ಹೇಗೆ ಹೇಗೆ ಕಾರ್ಯ ನಿರ್ವಹಿಸಿದವು ಎಂಬುದನ್ನು ವಿವೇಚಿಸುವುದರ ಜೊತೆಗೆ ದಾಸಕೂಟದ ಸಾಂಸ್ಕೃತಿಕ ಕೇಂದ್ರಗಳಾವುವು? ಎಲ್ಲೆಲ್ಲಿ ಕಾರ್ಯ ನಿರ್ವಹಿಸಿದವು ಎನ್ನುವುದನ್ನು ಭೌಗೋಳಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಇಷ್ಟಲ್ಲದೆ ಉತ್ತರಕಾಲೀನ ದಾಸಕೂಟದ ಮೇಲೆ ವ್ಯಾಸಕೂಟದ ಪ್ರಭಾವಗಳು ಮತ್ತು ಪ್ರೇರಣೆಗಳೇನೇನು? ಪ್ರೋತ್ಸಾಹ ನೀಡಿದವರಾರು? ಮತ್ತೆ ದಾಸಕೂಟದವರನ್ನು ಪುನಃಶ್ಚೇತನಗೊಳಿಸಿದವರಾರು? ಎನ್ನುವ ಅಂಶಗಳನ್ನೆಲ್ಲ ಕೂಲಂಕಷ ಅಧ್ಯಯನ ಮಾಡಲಾಗಿದೆ. ಉತ್ತರಕಾಲೀನ ವ್ಯಾಸಕೂಟದ ಪ್ರಮುಖ ವ್ಯಾಖ್ಯಾನಕಾರರಾದ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳು, ಉತ್ತರಕಾಲೀನ ದಾಸಕೂಟದ ಪ್ರಮುಖ ವ್ಯಾಖ್ಯಾನಕಾರರಾದ ವಿಜಯದಾಸರು ಇವರಿಬ್ಬರ ಬದುಕು-ಬರಹ ಸಾಧನೆಗಳನ್ನು ವಿವೇಚಿಸಲಾಗಿದೆ.

ಉತ್ತರಕಾಲೀನ ಸಂದರ್ಭದಲ್ಲಿ ವ್ಯಾಸಕೂಟವು ಮತ್ತೆ ದಾಸಕೂಟವನ್ನು ಪೋಷಿಸಿಕೊಂಡು ಬಂದ ಪರಿಯೇನು? ಮತ್ತೆ ಬದಲಾಗುತ್ತಾ ಬಂದ ಈ ಪ್ರೋತ್ಸಾಹದ ಪರಿಣಾಮಗಳೇನು? ಎನ್ನುವುದರ ವಿವೇಚನೆ ಮಾಡಲಾಗಿದೆ. ಉತ್ತರಕಾಲೀನ ವ್ಯಾಸಕೂಟದವರಲ್ಲಿನ ಕೆಲವೇ ಪ್ರಮುಖ ಟಿಪ್ಪಣಿಕಾರರ ಸಂಕ್ಷಿಪ್ತ ಪರಿಚಯ, ದಾಸಕೂಟದ ಪ್ರಮುಖರಾದ ಕಾಖಂಡಕಿ ಮಹೀಪತಿದಾಸರು, ಪ್ರಸನ್ನ ವೆಂಕಟದಾಸರು, ಗಲಗಲಿ ಅವ್ವನವರು, ಗೋಪಾಲದಾಸರು ಮುಂತಾದವರ ಬದುಕು ಬರಹಗಳ ಕುರಿತಾದ ಸಂಕ್ಷಿಪ್ತ ನೋಟವನ್ನು ಈ ಅಧ್ಯಯನ ಒಳಗೊಂಡಿದೆ. ವಿಸ್ತಾರತೆಯ ಭಯದಿಂದಾಗಿ ವಿವರವಾದ ಚಿತ್ರಣಗಳು ಈ ಅಧ್ಯಯನದ ವ್ಯಾಪ್ತಿಯಲ್ಲಿ ಒಳಗೊಂಡಿರುವುದಿಲ್ಲವಾದರೂ ತಿಳಿಯಲೇಬೇಕಾದ ಅಂಶಗಳನ್ನು ಇಲ್ಲಿ ನಿಖರವಾಗಿ ನಿರೂಪಿಸಲಾಗಿದೆ.

ಮುಂದಿನ ಹದಿನೆಂಟನೇ ಶತಮಾನದಲ್ಲಿ ಮೊದಲಿನ ದಾಸಕೂಟದವರ ಜನಮುಖೀ ನಿಲುವುಗಳು ವ್ಯಾಸಕೂಟದವರ ವೈದಿಕಮುಖೀ ನಿಲುವುಗಳ ಒಳಗೆ ಬೆರೆತುಹೋದುದನ್ನು, ದಾಸಕೂಟದವರೂ ವ್ಯಾಸಕೂಟದವರ ನಿಲುವುಗಳನ್ನೇ ಅನುಸರಿಸತೊಡಗಿದುದನ್ನು ವಿವೇಚಿಸುತ್ತಾ, ಜಗನ್ನಾಥದಾಸರ ಕುರಿತು ಈ ಅಧ್ಯಯನವು ಮಾಹಿತಿಯನ್ನು ಒದಗಿಸುತ್ತದೆ. ವ್ಯಾಸಕೂಟ ದಾಸಕೂಟದವರಲ್ಲಿ ಭಿನ್ನತೆಯು ಇಲ್ಲ ಎಂದು ಸಾರುವ ಅನಿವಾರ್ಯತೆಯು ಜಗನ್ನಾಥದಾಸರಿದ್ದ ಕಾಲದ ಸಾಮಾಜಿಕ ಸ್ಥಿತಿಗತಿಗಳಿಂದಾಗಿ ಅವರಿಗೆ ಉಂಟಾಗಿದ್ದು, ವೈದಿಕಮುಖೀ ಶಾಸ್ತ್ರಗಳಿಗೂ, ದಾಸರಹಾಡುಗಳಿಗೂ ದಾಸರುಗಳ ನಡೆನುಡಿಗಳಿಗೂ ವ್ಯತ್ಯಾಸವಿಲ್ಲವೆಂದು ಅವರು ಸಾರಬೇಕಾಗಿ ಬಂದಿದ್ದು ಈ ಎಲ್ಲದರ ವಿವೇಚನೆಯ ಜೊತೆಯಾಗಿ ಜಗನ್ನಾಥದಾಸರ "ಹರಿಕಥಾಮೃತ ಸಾರ"ವು ಹೇಗೆ ಮುಖ್ಯ ವ್ಯಾಖ್ಯಾನವಾಗಿ ಮಧ್ವಪಂಥದವರಿಗೆ, ವ್ಯಾಸಕೂಟ ದಾಸಕೂಟದವರಿಗೆ ಪ್ರಿಯವಾಯಿತು ಎನ್ನುವ ಒಳನೋಟವನ್ನು ಈ ಅಧ್ಯಯನವು ನೀಡುತ್ತದೆ.

ಹದಿನೆಂಟನೇ ಶತಮಾನದಲ್ಲಿ ವ್ಯಾಸತತ್ತ್ವಜ್ಞ ತೀರ್ಥರು ವ್ಯಾಸಕೂಟ ದಾಸಕೂಟಗಳೆರಡರ ಪ್ರಾತಿನಿಧ್ಯವನ್ನೂ, ಪ್ರೋತ್ಸಾಹ ಪ್ರೇರಣೆಗಳನ್ನೂ ವಹಿಸಿಕೊಂಡು ಬಂದವರು. ಇವರ ಕುರಿತಾಗಿ ಅಲ್ಲದೆ ಉತ್ತರ ಕರ್ನಾಟಕದಲ್ಲಿ ಮನೆಮಾತಾಗಿರುವ ಹರಿಭಕ್ತೆ ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿಯ ಭೀಮವ್ವ ಮುಂತಾದವರ ಕುರಿತಾದ ಸಂಕ್ಷಿಪ್ತ ಅಧ್ಯಯನವು ಇಲ್ಲಿದೆ. ೧೯ನೆಯ ಶತಮಾನದ ದಾಸಕೂಟದವರ ಕುರಿತಾಗಿ ವಿಸ್ತರವಾಗಿ ಅಲ್ಲದಿದ್ದರೂ ಸಂಕ್ಷಿಪ್ತ ಒಳನೋಟಗಳನ್ನು ಈ ಅಧ್ಯಯನ ನೀಡುತ್ತದೆ.

ಹೀಗೆ ಉತ್ತರಕಾಲೀನ ದಾಸಕೂಟದ ಸಾಂಸ್ಕೃತಿಕ ಆಯಾಮಗಳ ವೈಶಿಷ್ಟ್ಯದ ಕುರಿತಾಗಿ ಹೇಳುತ್ತ ಈ ಅಧ್ಯಯನದ ವ್ಯಾಪ್ತಿಯು ಮುಕ್ತಾಯಕ್ಕೆ ಬರುತ್ತದೆ. ಹೀಗೆ ಈ ಮಹಾಪ್ರಬಂಧವು ಆರು ಅಧ್ಯಾಯಗಳನ್ನು ಒಳಗೊಂಡಿರುತ್ತದೆ. ಎಲ್ಲ ದಾಸರ ಹಾಡುಗಳನ್ನು ಮತ್ತು ಶಾಸ್ತ್ರಕಾರರ ಮೂಲಗ್ರಂಥಗಳನ್ನು ಅಧ್ಯಯನದ ಮೂಲ ಪರಿಕರವಾಗಿ ಬಳಸಿಕೊಳ್ಳಲಾಗಿದೆ. ಒಟ್ಟಿನಲ್ಲಿ ಕನ್ನಡನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ವ್ಯಾಸಕೂಟ ದಾಸಕೂಟಗಳು ಒಂದಕ್ಕೊಂದು ಬೆರೆತುಕೊಂಡೇ ಜನಿಸಿದವು, ಬಾಳಿದವು; ವ್ಯಾಸಕೂಟದ ನೆರಳಾಗಿಯೇ ದಾಸಕೂಟವು ಹೆಜ್ಜೆ ಹಾಕಿದರೂ ಭಿನ್ನವೆನಿಸಿಕೊಂಡು ಬೆಳೆಯಿತು; ಮತ್ತೆ ವ್ಯಾಸಕೂಟದೊಂದಿಗೆ ದಾಸಕೂಟದ ವಿಲೀನತೆ; ಮಧ್ವಾಚಾರ್ಯರ ಸಿದ್ಧಾಂತಗಳೇ ವಿಭಿನ್ನ ರೀತಿಯಲ್ಲಿ ವ್ಯಾಸಕೂಟ ದಾಸಕೂಟದವರಿಗೆ ಮುನ್ನಡೆಯುವ ಹಾದಿಗಳಾದವು; ವ್ಯಾಸಕೂಟದವರು ಜ್ಞಾನಮಾರ್ಗವನ್ನು ಹಿಡಿದುದರ ಮತ್ತು ದಾಸಕೂಟದವರು ಭಕ್ತಿ ಮಾರ್ಗ ಹಿಡಿದುದರ ಸಾಧಕ ಬಾಧಕಗಳು ಸಾರ್ಥಕತೆಗಳು ಇತಿಮಿತಿಗಳು, ಸಾಧನೆಯ ಕಾರ್ಯವೈಖರಿಗಳು ಎಲ್ಲವನ್ನೂ ಈ ಅಧ್ಯಯನ ವ್ಯಾಪ್ತಿಯೊಳಗೆ ತರಲಾಗಿದೆ.

* * * *

ಎರಡನೆಯ ಅಧ್ಯಾಯ

ಅ. ಭಕ್ತಿ ತತ್ತ್ವದ ಹಿನ್ನೆಲೆ

ಪ್ರೀತಿಸುವುದೆ ಭಕ್ತಿ

ಭಕ್ತಿಯ ಇತಿಹಾಸ ಪಥ

ಭಕ್ತಿ ಪಥದಲ್ಲಿ ಕರ್ನಾಟಕ

13ನೇ ಶತಮಾನದಲ್ಲಿನ ದೇಶದ ಸ್ಥಿತಿಗತಿಗಳು

ಆ. ಮಧ್ವಾಚಾರ್ಯರು

ಮಧ್ವರ ಬೋಧೆ, ಬರಹ

ಮಧ್ವರ ಗ್ರಂಥಗಳು

ಮನುಕುಲಕ್ಕೆ ಮಧ್ವರ ಒಟ್ಟು ಸಂದೇಶ

ಮಧ್ವಾಚಾರ್ಯರ ಶಿಷ್ಯ ಪರಂಪರೆ – ಮಠಗಳ ಸ್ಥಾಪನೆ

ಯಾಕಾಗಿ ಭಕ್ತಿ?

ಇ. ಚಾರಿತ್ರಿಕ ಹಿನ್ನೆಲೆ

ದಾಸ ಸಾಹಿತ್ಯದ ಉಗಮ – ಚರ್ಚೆ, ನಿಲುಗಡೆ

ಮುಸ್ಲಿಂ ದಾಳಿಗೆ ನಡುಗಿದ ನಾಡು

ವಿಜಯನಗರ ಸಾಮ್ರಾಜ್ಯ ಸ್ಥಾಪನೆ

ಹರಿದಾಸ ಪಂಥದ ಪ್ರವರ್ತಕರಾಗಿ ಶ್ರೀಪಾದರಾಜರು.

ಅಧ್ಯಾಯ –೨

ಅ. "ಭಕ್ತಿ" ತತ್ವದ ಹಿನ್ನೆಲೆ

ಪ್ರೀತಿಸುವುದೆ ಭಕ್ತಿ

"ಪ್ರೀತಿ" ಎಂಬ ಭಾವದ ಮೂಲ ಒರತೆಯಿರುವುದು ಮಾನವ ಮನಸ್ಸಿನ ಒಳಗೆಯೇ. ಹಿರಿಯರಿಂದ ಕಿರಿಯರಿಗೆ ಹರಿದು ಬರುವ ಪ್ರೀತಿಯು ಅಕ್ಕರೆ, ಮಮತೆ, ವಾತ್ಸಲ್ಯ ಎನಿಸಿಕೊಂಡರೆ ಸಮಾನರಲ್ಲಿ ಸ್ಪಂದಿಸುವ ಪ್ರೀತಿಯು ಸ್ನೇಹವೆನಿಸಿಕೊಂಡಿತು. ವಿಭಿನ್ನ ಲಿಂಗಿಗಳಲ್ಲಿ ಕೆಲವೊಮ್ಮೆ ಅದು ಪ್ರೇಮವಾಗಿ ಪರಿವರ್ತನೆಯೂ ಆಗಬಹುದು.ಕಿರಿಯರಿಂದ ಹಿರಿಯರಿಗೆ ಸಲ್ಲುವ ಪ್ರೀತಿಯು ಗೌರವ, ಆದರ, ಭಕ್ತಿ ಎನಿಸಿಕೊಂಡಿತು. ತನಗಿಂತ ಹಿರಿದೆನ್ನಿಸಿಕೊಂಡಿದ್ದಕ್ಕೆ ಪ್ರೀತಿ, ಗೌರವಗಳಿಂದ ನಮನ ಸಲ್ಲಿಸುವುದೆ ಭಕ್ತಿಯ ಲಕ್ಷಣವಾಯಿತು.

ಅತ್ಯಂತ ಪ್ರಾಚೀನವಾದ ವೇದಗಳ ಕಾಲದಲ್ಲೆ ಮಾನವ ಮನಸ್ಸು ತನ್ನ ಸುತ್ತಣ ಪ್ರಾಕೃತಿಕ ವ್ಯಾಪಾರ, ವೈಚಿತ್ರಗಳನ್ನು ಅರ್ಥಮಾಡಿಕೊಳ್ಳುತ್ತ ಹೋಗುವಲ್ಲಿ ಕಾಣದೊಂದು ಹಿರಿದಾದ ಶಕ್ತಿಯ ಇರುವಿಕೆಯನ್ನು ಪರಿಭಾವಿಸಿಕೊಳ್ಳುತ್ತ, ಆ ಶಕ್ತಿಯನ್ನು ಗೌರವಿಸತೊಡಗಿದಾಗಲೆ "ಭಕ್ತಿ"ಯ ಆವಿಷ್ಕಾರವಾಯಿತು.

ಈ ಜಗತ್ತು ಇದೆ ಎಂದಾದರೆ, ಪ್ರಕೃತಿ ನಿಯಮಗಳೊಡನೆ ಅದು ಸಂಚಲನೆಯಲ್ಲಿದೆ ಎಂದಾದರೆ ಅದಕ್ಕೆ ಕಾರಣ ಕರ್ತೃವಾದ ಮಹಾನ್ ಶಕ್ತಿ ಒಂದಿರಲೇಬೇಕು, ಅಥವಾ ಮೂಲ ಕರ್ತೃ ಒಬ್ಬನಿರಲೇಬೇಕು ಎಂಬ ವಿಶ್ವಾಸ ಮೂಡಿ ನಂಬಿಕೆಯೂ ಆಗಿ ಬೆಳೆದಂತೆಲ್ಲ ಅರಿವಿಗೆ, ಅಳತೆಗೆ ಸಿಗದ ಆ ಅನಂತ ಶಕ್ತಿಯನ್ನು ದೇವರೆಂದು ಕರೆದು ನಮಿಸುವ, ಜೀವಗಳ ಹುಟ್ಟು ಸಾವುಗಳೆಲ್ಲದರ ಹಿನ್ನೆಲೆಯಲ್ಲಿರುವ ಆ ನಿಯಾಮಕ ತತ್ವವನ್ನು ದೈವವೆಂದು ಭಾವಿಸಿ ಬಾಗಿ ಶರಣಾಗುವ, ಬದುಕಿನಲ್ಲಿ ಬರುವ ನಾನಾ ಬಗೆಯ ಕಷ್ಟ, ನೋವುಗಳನ್ನು ನಿವಾರಿಸುವ ಬಂಧುವೆಂದು, ಭಗವಂತನೆಂದು ನಂಬಿ ಪ್ರೀತಿಸುವ ಈ ಮನೋಭಾವನೆಗಳೆಲ್ಲ ಸೇರಿ "ಭಕ್ತಿ"ಯೆಂಬ ಆರ್ದ್ರತೆಯನ್ನು ಮನುಕುಲದ ಹೃದಯದಲ್ಲಿ ಹುಟ್ಟು ಹಾಕಿದವು.

ಕವಿ ಹೃದಯದವರೂ ಆಗಿದ್ದ ವೈದಿಕ ಋಷಿಗಳು ಈ ಜಗತ್ತಿನ ಅದ್ಭುತವಾದ ರಚನಾಕೌಶಲ್ಯಕ್ಕೆ, ಅಗಾಧ ಸೌಂದರ್ಯಕ್ಕೆ ಬೆರಗಾಗಿದ್ದಲ್ಲದೆ, ಆ ಬೆರಗನ್ನು, ಈ ಜಗತ್ತಿನಲ್ಲಿರುವುದೆಲ್ಲವೂ ಯಾವುದೋ ಒಂದು ದೈವೀಶಕ್ತಿಯಿಂದ ಅನುಗ್ರಹೀತವಾಗಿದೆ ಎಂಬ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವ ಸಾಧನಾಪಥದತ್ತ ತಿರುಗಿಸಿದರು. ಚೈತನ್ಯದ ಸ್ಪರ್ಶವಿಲ್ಲದೆ ಜಡಕ್ಕೆ ಚಲನೆ ಇಲ್ಲ; ಪಂಚಭೂತಗಳಿಂದಾದ ಈ ಜಡ ಜಗತ್ತಿನ ಎಲ್ಲ ನಿಯಮಬದ್ಧ ಪ್ರಾಕೃತಿಕ ಚಟುವಟಿಕೆಗಳನ್ನು ನಡೆಸುವ ಮಹಾಚೈತನ್ಯವೊಂದು ಇದ್ದೇ ಇದೆ ಎಂಬ ಸತ್ಯವನ್ನು ಮನಗಂಡರು. ಪ್ರಕೃತಿಯಿಂದ ತಮಗೊದಗುತ್ತಿದ್ದ ಅನೇಕ ವಿಶಿಷ್ಟ ಅನುಭವಗಳಲ್ಲಿ ಅವರಿಗೆ ವಿಸ್ಮಯವಿತ್ತು, ಮೆಚ್ಚುಗೆಯಿತ್ತು, ಕುತೂಹಲ ಬೆರೆತ ಭಯವಿತ್ತು, ರಕ್ಷಣೆಗಾಗಿ ಮೊರೆಯಿಡುವ ಮನಸ್ಥಿತಿಯೂ ಇದ್ದಿತ್ತು. ಈ ಎಲ್ಲ ಬಗೆಯ ಭಾವಮಿಶ್ರಿತ ವೈದಿಕ ಮನಸ್ಸು ಈ ಜಗತ್ತಿನ ಎಲ್ಲ ಕ್ರಿಯೆಗಳ ಹಿಂದೆ ಇದೆ ಎಂದು ಭಾವಿಸಲಾದ ಆ ಮಹಾಶಕ್ತಿಯನ್ನು ಆಶ್ರಯಿಸತೊಡಗಿತು, ಪ್ರೀತಿಸತೊಡಗಿತು. ಹಾಗೆ 'ಭಕ್ತಿ' ಎಂಬ ಭಾವಸಂಪತ್ತೊಂದು ಮನುಕುಲದ ಗಳಿಕೆಯಾಗಿ ಉದಯಿಸಿಕೊಂಡಿತು.

'ಭಕ್ತಿ' ಎಂದರೆ ಮತ್ತೇನೂ, ಮತ್ತೇನೋ ಅಲ್ಲ, ಹಿರಿದಾದುದನ್ನು ಪೂರ್ಣಪ್ರಮಾಣದಲ್ಲಿ ಪ್ರೀತಿಸುವುದೇ ಭಕ್ತಿ. ಎಲ್ಲವನ್ನೂ ನಡೆಯಿಸುತ್ತಿರುವ ಶಕ್ತಿ ಬೇರೊಂದಿದೆ, ತಾನು ಆ ಶಕ್ತಿಗಿಂತ ಭಿನ್ನ ಮತ್ತು ಸಣ್ಣವ; ಅನಂತವಾದ ಅದರ ಮುಂದೆ ತಾನು ಸಾಂತ ಎಂದು ಮಾನವ ಕಂಡುಕೊಂಡಾಗ ತನಗಿಂತ ಎಷ್ಟೆಷ್ಟೋ ಪಾಲು ಮಹತ್ತಾದ, ಹಿರಿದಾದ ಆ ಅದ್ಭುತ, ಅಗಮ್ಯ ಚೈತನ್ಯಕ್ಕೆ ತನ್ನನ್ನು ತಾನು ಗೌರವ, ಭಯ, ವಿನಯಪೂರ್ವಕ ಅರ್ಪಿಸಿಕೊಳ್ಳುವಂಥ, ಪ್ರೀತಿಯಿಂದ ಪೂಜೆ, ಆರಾಧನೆ ಸಲ್ಲಿಸುವಂಥ, ಉಪಾಸನೆ ಮಾಡುವಂಥ ಸಮರ್ಪಣೆಯ ನೆಲೆಗೆ "ಭಕ್ತಿ" ಎಂಬುದು ಅಡರಿ ನಿಂತಿತು. ತನ್ನ ಉದ್ಧಾರಕ್ಕಾಗಿ ಪ್ರಾರ್ಥಿಸುತ್ತ, ತನ್ನನ್ನೇ ತಾನು ಸಂಪೂರ್ಣವಾಗಿ ಆ ಮಹತ್ತಿಗೆ ಶರಣಾಗಿಸಿಕೊಳ್ಳುತ್ತ ಆ ಮಹತ್ತನ್ನು ಉತ್ಕಟವಾಗಿ ಪ್ರೀತಿಸುವುದೇ ಭಕ್ತಿ. "ಭಕ್ತಿ ಎಂದರೆ ಅರಿವಿನಿಂದ ಬರುವ ಪ್ರೀತಿಯ ಪೂರ"*[7] ತಿಳಿಯುತ್ತ, ತಿಳಿಯುತ್ತ ಹೋದಂತೆ ಹೆಚ್ಚು ಹೆಚ್ಚು ಪ್ರೀತಿಸುವುದು, ಪ್ರೀತಿ ಹೆಚ್ಚಾಗುತ್ತ ಹೋದಂತೆಲ್ಲಾ ಹೆಚ್ಚು ಹೆಚ್ಚಾಗಿ ತಿಳಿಯುತ್ತ ಹೋಗುವುದು. ಅನಂತವಾದುದನ್ನು ತಿಳಿಯುವ ಯತ್ನದಲ್ಲಿ ಅನಂತವಾದ ಪ್ರೀತಿಯ ಎಳೆ ಬಿಡಿಸಿಕೊಳ್ಳಲಾಗದಂತೆ ಹೆಣೆದುಕೊಳ್ಳುತ್ತ ಸಾಗುವುದು. ಇದೇ ಭಕ್ತಿಯ ಕ್ರಮ, ಭಕ್ತಿಯ ಶ್ರಮ ತರುವ ಪ್ರೇಮ. ಮಹತ್ತಾದುದನ್ನು ಮನಸಾರೆ ಮೆಚ್ಚಿ ಆರಾಧಿಸುವ, ಹಿರಿದಾದುದನ್ನು ಗೌರವಪೂರ್ವಕ ಉಪಾಸಿಸುವ ಭಕ್ತಿ. ವೈದಿಕ ಋಷಿಗಳಿಂದ ಮೊದಲ್ಗೊಂಡು, ವೇದವ್ಯಾಸರಿಂದ ಮುಂದುವರೆದು, ಮತತ್ರಯ ಸಂಸ್ಥಾಪಕರಿಂದಲೂ ಹಬ್ಬಿ ಹರಡಿ, ಸಾಧುಸಂತರಿಂದ ಪೋಷಿಸಲ್ಪಟ್ಟು ಕನ್ನಡದಲ್ಲಿ ಮುಂದೆ ವ್ಯಾಸಕೂಟ ದಾಸಕೂಟದವರ ಮೂಲಕವೂ ವ್ಯಾಪಕವಾಗಿ ಬೆಳೆದು ನಿಂತು ಕನ್ನಡ ಮನಸ್ಸನ್ನು ಸಂಸ್ಕರಿಸಿದ್ದು ಇದೇ ಭಕ್ತಿಭಾವ.

ಸಂಸ್ಕೃತ ಭಾಷೆಯ 'ಭಜ್' ಎಂಬ ಮೂಲ ಧಾತುವಿನಿಂದ ಉತ್ಪನ್ನವಾದ ಶಬ್ದ "ಭಕ್ತಿ" "ಭಜನಂ ಭಕ್ತಿಃ" "ಭಜ್ಯತೆ ಅನಯಾ ಇತಿ ಭಕ್ತಿಃ" ಎಂದೆಲ್ಲ ಭಕ್ತಿಯ ಬಗ್ಗೆ ಬಗೆ ಬಗೆಯ ವ್ಯುತ್ಪತ್ತಿಗಳಿವೆ. "ಅಮೃತಮಯವಾದ ಉತ್ಕಟ

ಪ್ರೇಮವೇ ಭಕ್ತಿ" ಎಂದು ನಾರದ ಭಕ್ತಿ ಸೂತ್ರದ ಹೇಳಿಕೆಯಿದೆ. "ಈಶ್ವರನಲ್ಲಿ ನಾವು ತೋರುವ ಪರಮಾನುರಕ್ತಿಯೆ ಭಕ್ತಿ" ಎನ್ನುವುದು ಶಾಂಡಿಲ್ಯ ಸೂತ್ರದ ಹೇಳಿಕೆ. ಮುಖ್ಯವಾಗಿ ಮಹತ್ತಾದುದನ್ನು ಮನಸಾರೆ ಪ್ರೀತಿಸುವುದೆ ಭಕ್ತಿ. ದೈವೀಶಕ್ತಿಯಲ್ಲಿ ಪ್ರೀತಿ, ವಿಶ್ವಾಸವಿರಿಸಿಕೊಳ್ಳುವುದೆ ಭಕ್ತಿ.

'ಭಕ್ತಿ'ಯ ಇತಿಹಾಸ ಪಥ

ವೇದಗಳ ಕಾಲದಲ್ಲಿ ಮೈದೋರಿಕೊಂಡ ಭಕ್ತಿ ತತ್ವ ನಂತರದ ಶತಶತಮಾನಗಳ ಬೆಳವಣಿಗೆಯಲ್ಲಿ ಪ್ರತಿಮೆಗಳ ಪೂಜೆಗೂ ಪಥವಾಯಿತು. ಬೇರೆ ಬೇರೆ ದೇವತೆಗಳ ಕಲ್ಪನೆಯೂ ಬೆಳೆದು ಮಿಳಿತಗೊಂಡಿತು. ಪ್ರತಿಮೆಗಳು ದೈವೀಶಕ್ತಿಯ ಪ್ರತೀಕವಾಗಿ ಪೂಜೆ, ಆರಾಧನೆ ಪಡೆದುಕೊಳ್ಳಲಾರಂಭಿಸಿದವು. ಭಕ್ತಿ ತತ್ವಕ್ಕೆ ಸುಮಾರು ಐದುಸಾವಿರ ವರ್ಷಗಳ ಇತಿಹಾಸವಿದೆಯೆಂದು ಹರಪ್ಪ, ಮೊಹೆಂಜೊದಾರೋ ಸಂಶೋಧನೆಗಳು ತಿಳಿಸುತ್ತವೆ. ಆದರೆ ಅದಕ್ಕೂ ಮುನ್ನವೇ ನಮ್ಮ ಪ್ರಾಚೀನ ಋಷಿಗಳು ವೇದಗಳಲ್ಲಿ ದೈವೀಶಕ್ತಿಯ ಬಗ್ಗೆ ಸಾಕಷ್ಟು ಪ್ರಮಾಣದಲ್ಲಿ ತಾತ್ವಿಕ ಜಿಜ್ಞಾಸೆಯನ್ನೇ ನಡೆಸಿದ್ದು, ದೇವತೆಗಳಿಗೆ ಪ್ರೀತಿ, ಭಕ್ತಿ ಬೆರೆತ ಪೂಜೆ, ಉಪಾಸನೆ ಸಲ್ಲಿಸುವುದರ ಮೂಲಕ, ಪ್ರಾರ್ಥಿಸುವುದರ ಮೂಲಕ ಮಾನವ ಬದುಕನ್ನು ಉತ್ತಮ ಪಡಿಸಿಕೊಳ್ಳಬಹುದೆಂದು ಸಾರಿದ್ದರು.

ಮುಂದೆ ಉಪನಿಷತ್ತುಗಳ ಕಾಲದಲ್ಲಿಯೂ "ಕತ್ತಲೆಯಿಂದ ಬೆಳಕಿನೆಡೆಗೆ" ಸಾಗಬೇಕೆನ್ನುವ ಮಾನವ ಮನಸ್ಸಿನ ಮೊರೆಯು ಭಕ್ತಿತತ್ವದ ಮೂಲಕವೇ ಆ ಪಾರಮಾರ್ಥಿಕ ಸತ್ಯವನ್ನು ತಲುಪುವ ಯತ್ನ ನಡೆಸಿರುವುದನ್ನು ಕಾಣಬಹುದು. ಈ ಉಪನಿಷತ್ತುಗಳು ಸಾರುವ ಸಿದ್ಧಾಂತ ಸಾಧನಗಳ ಮೂರ್ತ ಸ್ವರೂಪಗಳೆಂಬಂತೆ ಬಂದ ಇತಿಹಾಸ ಪುರಾಣಗಳಲ್ಲಿ, ಅನೇಕಾನೇಕ ಕಥೆಗಳ ರೂಪದಲ್ಲಿ ಭಕ್ತಿ ತತ್ವವು ಮೈದಾಳಿಕೊಂಡಿತು. ದೈವೀಶಕ್ತಿಯ ಅವತಾರದ ಕಲ್ಪನೆಯಿಂದ ಭಕ್ತಿತತ್ವಕ್ಕೆ ಹೆಚ್ಚಿನ ಪುಷ್ಟಿ ದೊರೆಕಿತು. ವೇದಗಳು ನೀಡಿದ್ದ ಮೂಲ ಆಧ್ಯಾತ್ಮಿಕ ತತ್ವಜ್ಞಾನದ ಮೂರ್ತ ಸಂಕೇತ ಸ್ವರೂಪಗಳಾಗಿ ರಾಮಾಯಣ, ಮಹಾಭಾರತ, ಭಾಗವತ ಪುರಾಣಾದಿಗಳು ರಚಿತಗೊಂಡವು. ಭಗವದ್ಗೀತೆಯಂತೂ ಜ್ಞಾನ ಅಥವಾ ಕರ್ಮ ಮಾರ್ಗಗಳಿಗಿಂತ ಭಕ್ತಿ ಮಾರ್ಗವೇ ದೈವವನ್ನು ಸಾಕ್ಷಾತ್ಕರಿಸಿಕೊಳ್ಳಲು ಸುಲಭ ಮಾರ್ಗವೆಂದು ಸಾರಿತು. "ಭಗವದ್ಗೀತೆಯ ಭಕ್ತಿವಾಹಿನಿಯ ಗಂಗೋತ್ರಿ.[*9]

ಸಂಸ್ಕೃತ ಭಾಷೆಯಲ್ಲಿ ವಿಶೇಷವಾದ ಪ್ರೌಢಿಮೆ, ವ್ಯುತ್ಪತ್ತಿ ಇದ್ದವರು, ಬದುಕಿಗೆ ಬೇರಾವ ವೃತ್ತಿ, ದುಡಿಮೆಗಳ ಅವಲಂಬನೆಯ ಅಗತ್ಯವಿಲ್ಲದೆ ಸದಾ ಅಧ್ಯಯನ, ಮನನ, ಜಿಜ್ಞಾಸೆ, ನಿಧಿ–ಧ್ಯಾಸಗಳನ್ನು ಮಾಡುವವರು, ಇಂಥವರಿಗೆ ವೇದೋಪನಿಷತ್ತುಗಳು ಸಾರಿದ ಸಿದ್ಧಾಂತಗಳ ಅನುಷ್ಠಾನ ಸಾಧ್ಯವಿತ್ತೇ ವಿನಹ ಪ್ರತಿಯೊಬ್ಬ ಸಾಮಾನ್ಯನೂ ಆ ತಾತ್ವಿಕ ಸಿದ್ಧಾಂತಗಳನ್ನು ಅರ್ಥೈಸಿಕೊಂಡು ತಮ್ಮ ದಿನಚರಿಯಲ್ಲಿ ಅಳವಡಿಸಿಕೊಳ್ಳುವುದಕ್ಕೆ ಅಸಾಧ್ಯವೇ ಆಗುತ್ತಿತ್ತು. ಹೀಗಾಗಿ ಸಾಮಾನ್ಯರ ಬದುಕಿನಲ್ಲೂ ಭಗವದ್ಭಕ್ತಿ ಬೆಳೆಯಬೇಕಾದರೆ ಪುರಾಣಕಥೆಗಳ ಸುಲಭ ದಾರಿಯೊಂದರ ಅಗತ್ಯವನ್ನು ಮನಗಂಡು ಅವುಗಳ ರಚನೆಯ ಕಾರ್ಯ ನಡೆಯಿತು. ಸಾಮಾನ್ಯ ಬದುಕಿನ ಜನರಿಗೆ ದೈವವನ್ನು ಪ್ರೀತಿಸಲು, ಪುರಾಣ ಕಥೆಗಳು ಹೀಗೆ ಪ್ರೇರಣವಾದವು.

ಇಷ್ಟು ದೀರ್ಘ ಪರಂಪರೆಯ ವೈದಿಕ ಧರ್ಮ ಶತಮಾನಗಳ ಅಂತರದಲ್ಲಿ ಸಾಗಿಬರುತ್ತಿದ್ದಂತೆ ಕಾಲಕಾಲದಲ್ಲಿ ಕೆಲಕೆಲವರ ಮೂರ್ಖತನದ, ಅಜ್ಞಾನದ ಪರಿಣಾಮವೋ ಎಂಬಂತೆ ಶುದ್ಧ ತಾರ್ಕಿಕತೆಗೆ ಹೆಚ್ಚು ಒತ್ತು ಕೊಟ್ಟು ಡಾಂಭಿಕತೆಗೆ ಅವಕಾಶ ನೀಡಿ ಖಿಲವಾಗತೊಡಗಿತು.

ಸುಮಾರು ಕ್ರಿ.ಪೂ ಆರನೆಯ ಶತಮಾನಕ್ಕೆ ಬರುವ ವೇಳೆಗೆ ವೈದಿಕ ದರ್ಶನಕ್ಕೆ ಪೂರ್ಣ ತುಕ್ಕು ಹಿಡಿಯುವಂಥ ಪರಿಸ್ಥಿತಿ ಉಂಟಾಯಿತು. ತತ್ವ-ಆಚರಣೆಗಳ ನಡುವಿನ ಸಾಮರಸ್ಯ ತಪ್ಪಿಹೋಗಿ ವರ್ಣಾಶ್ರಮ ಪದ್ಧತಿಯು ಜಾತಿ ಪದ್ಧತಿಯಾಗಿ ಮಾರ್ಪಟ್ಟು ವರ್ಗ-ವರ್ಣಗಳ ಭೇದ ಭಾವ ಬಲಿತು ಸಮಾಜದಲ್ಲಿ ಜನಸಾಮಾನ್ಯರ ಶೋಷಣೆ, ಸುಲಿಗೆಗೆ ಎಡೆಯಾಯಿತು. ಇಂಥ ಒಂದು ಸಾಮಾಜಿಕ ಸಂಕಟಕರ ಕಾಲದಲ್ಲೇ ಜೈನಧರ್ಮ, ಬೌದ್ಧಧರ್ಮಗಳು ಭಾರತದಲ್ಲಿ ಕಾಣಿಸಿಕೊಂಡು ಸಮಾನತೆ, ಅಹಿಂಸೆಯ ಮೌಲ್ಯಗಳನ್ನು ಎತ್ತಿ ಹಿಡಿದವು. ಜನರ ಆಡುಮಾತಾದ ಪ್ರಾಕೃತ, ಪಾಳಿ ಭಾಷೆಯಲ್ಲೇ ನೀತಿತತ್ವಗಳನ್ನು ಬೋಧಿಸುತ್ತ ಮಹಾವೀರ ಮತ್ತು ಗೌತಮಬುದ್ಧರು ಜನರಿಗೆ ಹೃದಯಸಮೀಪರಾದರು. ವೇದ ಪ್ರಾಮಾಣ್ಯವನ್ನು ಧಿಕ್ಕರಿಸಿ ನಂತು ಪರಿಶುದ್ಧ ಜೀವನವನ್ನು ಬಾಳಲು ಪ್ರಚೋದಿಸಿದ ಈ ಎರಡು ಧರ್ಮಗಳಿಗೂ ಭಾರತದಲ್ಲಿ ರಾಜಾಶ್ರಯ ದೊರೆಯಿತು. ಸಮಾಜವು ಈ ಎರಡೂ ಧರ್ಮಗಳ ಅನುಯಾಯಿಯಾಗಿ ಮುನ್ನಡೆಯಿತು.

ಎರಡು ಅನ್ಯಧರ್ಮಗಳ ಈ ವಿಜೃಂಭಣೆಯ ಇಂಥ ಒಂದು ಪರಿಸ್ಥಿತಿಯಲ್ಲಿ ಮೂಲೆಗುಂಪಾಗಿದ್ದ ವೈದಿಕ ಧರ್ಮಕ್ಕೆ ಅಸ್ತಿತ್ವದ ಉಳಿವು ಅಳಿವಿನ ಪ್ರಶ್ನೆ ಎದುರಾದುದು ಸಹಜವೇ ಆಗಿದೆ. ಜೈನ, ಬೌದ್ಧ ಧರ್ಮಗಳ ಮಾನವೀಯತೆಯ ನೆಲೆಗಟ್ಟಿನ ಮೇಲೆ ನಿರ್ಮಿಸಲಾದ ವೈಚಾರಿಕತೆಯ ಪ್ರಖರತೆಯನ್ನು ಅರಿತು ಅರ್ಥೈಸಿಕೊಂಡು ಈ ಹಿನ್ನಲೆಯಲ್ಲೇ ವೈದಿಕ ಧರ್ಮವನ್ನೂ ಪುನರ್ ಪ್ರತಿಪಾದನೆ ಮಾಡುವುದಕ್ಕಾಗಿಯೇ ವೇದವ್ಯಾಸರಂಥ ತತ್ವಜ್ಞಾನಿಗಳು ಬ್ರಹ್ಮಸೂತ್ರಗಳಂಥ ಷಡ್ದರ್ಶನ ಗ್ರಂಥಗಳನ್ನು ಬರೆದರು. ಸನಾತನ ಸಂಸ್ಕೃತಿಯ ತಾತ್ವಿಕತೆ ಮತ್ತು ಸಿದ್ಧಾಂತಗಳನ್ನು ನಿರ್ಣಯಿಸುವ ಯುಕ್ತಿಗಳಾಗಿ ಬ್ರಹಸೂತ್ರ ರಚನೆಯಾಯಿತು. ಇಡಿಯ ವೈದಿಕ ದರ್ಶನವು ಒಂದೇ ಮಹಾತತ್ವದ ಕಡೆಗೆ ಏಕಸೂತ್ರವಾಗಿ ನಿಬದ್ಧವಾಗಿದೆ ಎನ್ನುವುದನ್ನು ವೇದವ್ಯಾಸರು ಬ್ರಹ್ಮಸೂತ್ರಗಳ ಮೂಲಕ ಸಮನ್ವಯ ಮಾಡಿ ತೋರಿಸಿದರು. ವೇದೋಪನಿಷತ್ತುಗಳನ್ನು ಪರಿಷ್ಕರಿಸಿ ಈ ಪ್ರಾಚೀನ ವಾಙ್ಮಯವನ್ನು ಯುಕ್ತಿಬದ್ಧವಾಗಿ, ಸರ್ವಸಮ್ಮತವಾಗಿ ನಿರ್ಣಯಿಸುವಂಥ ಸೂತ್ರಗಳನ್ನು ನೀಡಿದರು. ಜೊತೆಗೆ ಇತಿಹಾಸ, ಪುರಾಣಾದಿಗಳನ್ನೂ ರಚಿಸಿ, ಭಗವದ್ಗೀತೆಯ ಮೂಲಕವೂ ಭಕ್ತಿಯ ಬೆಳೆಯನ್ನು ಹುಲುಸಾಗಿ ಬೆಳೆದು ಆರ್ಷಜ್ಞಾನವನ್ನು ವಿಸ್ತರಿಸಿ ಪರಂಪರೆಯ ಪ್ರವರ್ತಕರೆನಿಸಿಕೊಂಡರು.

ಹೀಗೆ ಅನುಭಾವ ಸಾಹಿತ್ಯವಾದ ವೇದಗಳು ತಮ್ಮ ಭಾಷೆಯಿಂದಲೂ ಕ್ಲಿಷ್ಟ ಎನಿಸಿಕೊಂಡು ಜನಸಾಮಾನ್ಯರನ್ನು ತಲುಪದೇ ಹೋಗಿದ್ದರಿಂದಲೇ ವೇದದ ರಹಸ್ಯಾರ್ಥಗಳನ್ನು ಇತಿಹಾಸ, ನೀತಿಕಥೆ ಪುರಾಣಗಳ

ಮೂಲಕ ಸುಲಭವಾಗಿ ಜನರನ್ನು ತಲುಪುವಂತೆ ಮಾಡಲಾಯಿತು. ಭಕ್ತಿತತ್ವವೂ ಹೀಗೆ ಪ್ರಚಾರಗೊಂಡು ಬೆಳೆಯುತ್ತ ಗಟ್ಟಿಗೊಳ್ಳುತ್ತ ಬಂದಂತೆ ಕ್ರಮೇಣ ಶೈವಧರ್ಮ, ವೈಷ್ಣವಧರ್ಮಗಳೆಂಬ ಎರಡು ಕವಲುಗಳಾಗಿ ಮೂಡಿಕೊಂಡಿತು. ಕ್ರಿ.ಶ.ಐದನೇ ಶತಮಾನದಿಂದ ಈಚೆಗೆ ಶಿವಾಗಮಗಳು, ವೈಷ್ಣವಾಗಮಗಳು ರಚಿತಗೊಂಡವು. ಆಗಮಗಳು ದೈವೋಪಾಸನೆಯ ವಿಧಿ ವಿಧಾನಗಳನ್ನು ರೂಪಿಸಿಕೊಟ್ಟು ಭಕ್ತಿಯ ಮೂಲಕವೇ ಧರ್ಮದ ಆಚರಣೆಯನ್ನು ರೂಢಿಸಿಕೊಳ್ಳಲು ನೆರವಾದವು. ಶೈವ ವೈಷ್ಣವ ಧರ್ಮಗಳ ಅನುಯಾಯಿಗಳಾಗಿ ಅನೇಕ ಸಾಧುಸಂತರು ಭಕ್ತಿಪಂಥಕ್ಕೆ ವಿಶೇಷ ಚಾಲನೆ ನೀಡಿದರು. ಕ್ರಿ.ಶ.ಏಳನೇ ಶತಮಾನದಷ್ಟು ಹಿಂದೇಯೇ ದಕ್ಷಿಣಭಾರತದಲ್ಲಿ ದ್ರಾವಿಡ ಪರಂಪರೆಯಲ್ಲಿ ವೈಷ್ಣವ ಭಕ್ತಿಯೊಂದಿಗೆ ಶೈವಭಕ್ತಿಯೂ ಬೆಳೆದುಕೊಂಡು ಬಂದಿತು.

ತಮಿಳು ಭಾಷೆಯಲ್ಲಿರುವ ನಾಯನ್ಮಾರರ ಶೈವ ಸಾಹಿತ್ಯ, ಹಾಗೂ ಆಳ್ವಾರರ ವೈಷ್ಣವ ಸಾಹಿತ್ಯವು ನಮಗೆ ದೊರೆತಿರುವ ಪ್ರಾಚೀನ ದಾಖಲೆಗಳೆನಿಸಿಕೊಂಡಿವೆ. ಆಳ್ವಾರರಿಂದ ವೈಷ್ಣವ ಶಾಖೆಯೂ ಪುರಾತನ ಶಿವಶರಣರಿಂದ ಶೈವ ಶಾಖೆಯೂ ಅಭಿವೃದ್ಧಿಗೆ ಬಂದವು. ಆಳ್ವಾರರಿಂದ ಭಕ್ತಿಯು ದಕ್ಷಿಣದಲ್ಲಿ ಹೆಚ್ಚು ಪ್ರಚಲಿತವಾಯಿತು. ಆಳ್ವಾರರ ಕಥಾವಳಿ ಎಂದರೆ "ವೈಷ್ಣವ ಮತದ ಉಚ್ಛ್ರಾಯ ಕಥೆ" ಎನಿಸಿಕೊಂಡಿದ್ದು, "ನಾಲಾಯಿರ ಪ್ರಬಂಧಂ" ಎಂಬ ಗ್ರಂಥದಲ್ಲಿ ಈ ಆಳ್ವಾರರ ಚರಿತ್ರೆಯು ದೊರಕುತ್ತದೆ. ಕ್ರಿ.ಶ. ಒಂಬತ್ತನೇ ಶತಮಾನದಲ್ಲಿ ಬಂದ ವೈಷ್ಣವ ಆಚಾರ್ಯರಾದ ನಾಥಮುನಿಗಳೆಂಬುವವರು ಈ 'ನಾಲ್ಕು ಸಾವಿರ ಪ್ರಬಂಧ'ಗಳನ್ನು ಸಂಗ್ರಹಿಸಿ ಕೊಟ್ಟವರು. ತಮ್ಮ ಕಾಲಕ್ಕೂ ಮುನ್ನಿನ ಶತಮಾನಗಳಲ್ಲಿ ಬದುಕಿ ಬಾಳಿದ ಹತ್ತು ಮಂದಿ ಆಳ್ವಾರರು ಹಾಡಿದ ಕವಿತೆಗಳನ್ನೆಲ್ಲ ಸೇರಿಸಿ ಸಂಕಲನ ಮಾಡಿದವರು.

ಹೀಗೆ ಭಕ್ತಿತತ್ವವು ಕಾಲದ ಚಲನೆಯಲ್ಲಿ ಹೊಸ ಹೊಸ ರೀತಿಯ ವೈಚಾರಿಕತೆಯ ನಿಕಷದಲ್ಲಿ ಹಾದು ಹದವಾಗುತ್ತ, ಗಟ್ಟಿಯಾಗುತ್ತ ಬಂದಿತು. ಸು.ಎಂಟನೆಯ ಶತಮಾನದಲ್ಲಿ ಕೇರಳದಲ್ಲಿ ಜನಿಸಿದ ಶಂಕರಾಚಾರ್ಯರಿಂದ ವೈದಿಕ ಅದ್ವೈತ ಮತ ಸ್ಥಾಪನೆಯಾಯಿತು. ಬೌದ್ಧ ಹಾಗೂ ಜೈನಮತಗಳು ಪ್ರತಿಪಾದಿಸಿದ ಶೂನ್ಯವಾದವನ್ನು ನಿರಾಕರಿಸಿದ ಶಂಕರಾಚಾರ್ಯರು ಸ್ಥಾಪಿಸಿದ ಈ ಮತಕ್ಕೆ ಪ್ರಚ್ಛನ್ನ ಬೌದ್ಧಮತವೆಂದೂ ಕರೆಯುತ್ತಾರೆ.

ಮುಂದಿನ ನಡುಗಾಲದಲ್ಲಿ ಕೆಲಕಾಲ ಕೊಳೆ ತುಂಬಿ ಭಕ್ತಿಯ ಕಳೆ ಮಾಸುವಂತಾಯಿತಾದರೂ ಮತ್ತೆ ಭಕ್ತಿಯು ಭಾರತೀಯ ತತ್ವ ಜ್ಞಾನದ ಅವಿಭಾಜ್ಯ ಅಂಗವಾಗಿ ಮುಂದುವರೆಯುವಂತಾದದ್ದು ಕ್ರಿ.ಶ ಹನ್ನೊಂದು ಮತ್ತು ಹನ್ನೆರಡನೆಯ ಶತಮಾನದಿಂದಲೇ ಎನ್ನಬಹುದು. ಹನ್ನೊಂದನೇ ಶತಮಾನದ ಹೊತ್ತಿಗೆ ಬಂದ ರಾಮಾನುಜಾಚಾರ್ಯರಿಂದ ವಿಶಿಷ್ಟಾದ್ವೈತ ಮತ ಸ್ಥಾಪನೆಯಾಯಿತು. ಹಿಂದಿನ ಆಳ್ವಾರರ ಭಕ್ತಿಸಾಹಿತ್ಯವೇ ಇವರ ಈ ಶ್ರೀವೈಷ್ಣವ ಪಂಥಕ್ಕೆ ಮೂಲ ಪ್ರೇರಣೆಯಾಯಿತು. ಆಳ್ವಾರರ ದಿವ್ಯ ಪ್ರಬಂಧಗಳಿಗೆ ಮರುಜೀವವಿತ್ತು,

ಅವುಗಳನ್ನು 'ದ್ರಾವಿಡವೇದ'ವೆಂದು ಕರೆದವರು ರಾಮಾನುಜಾಚಾರ್ಯರು. ದೇಗುಲಗಳಲ್ಲಿ ಪೂಜೆ, ಅರ್ಚನೆ ನಡೆಯುವಾಗ ವೇದಮಂತ್ರಗಳ ಘೋಷಗಳ ಜೊತೆಗೆಯೇ ಈ ತಮಿಳು ಮಂತ್ರಗಳನ್ನೂ ಅವರು ಪೂಜಾವಿಧಿಗಳಲ್ಲಿ ಒಂದಾಗಿ ಅಳವಡಿಸಿದರು.

ಭಕ್ತಿ ಪಥದಲ್ಲಿ ಕರ್ನಾಟಕ

ವೈಷ್ಣವ ಪಂಥದ ಭಕ್ತಿಯ ಬೀಜವನ್ನು ರಾಮಾನುಜಾಚಾರ್ಯರು ತಮಿಳುನಾಡಿನ ಮಣ್ಣಿನಲ್ಲಿ ನೆಟ್ಟು ಬೆಳೆಯಿಸಿದರಾದರೂ ಈ ಪಂಥದ ವೃಕ್ಷವು ತನ್ನ ರೆಂಬೆಕೊಂಬೆಗಳನ್ನು ಚಾಚಿದ್ದು ಕನ್ನಡನಾಡಿನಲ್ಲಿ! ಕರ್ನಾಟಕದ 'ಮೇಲುಕೋಟೆ' ಮತ್ತು 'ಬೇಲೂರು' ರಾಮಾನುಜಾಚಾರ್ಯರ ಮುಖ್ಯ ಕಾರ್ಯಕ್ಷೇತ್ರವಾಯಿತು. ಹೊಯ್ಸಳ ವಿಷ್ಣುವರ್ಧನ ಮಹಾರಾಜನು ಜೈನಧರ್ಮವನ್ನು ತ್ಯಜಿಸಿ ವೈಷ್ಣವ ಮತಾನುಯಾಯಿಯಾಗಿದ್ದು ಇತಿಹಾಸದ ದಾಖಲೆಯಾಗಿದೆ. ಭಕ್ತಿ ಮತ್ತು ಪ್ರಪತ್ತಿಯೇ(ಶರಣಾಗತಿ) ಈ ಶ್ರೀವೈಷ್ಣವ ಮತದ ಮುಖ್ಯ ಲಕ್ಷಣಗಳು.

ಇದೇ ವೇಳೆಗೆ ಆಂಧ್ರದಲ್ಲಿ ಅನ್ನಮಾಚಾರ್ಯರು, ರಾಮದಾಸರು ತೆಲಗು ಭಾಷೆಯಲ್ಲಿ ಭಕ್ತಿಸಾಹಿತ್ಯವನ್ನು ಪ್ರಚಾರಕ್ಕೆ ತಂದರು. ಮಹಾರಾಷ್ಟ್ರದ ಕಡೆ ರಾಮಾನಂದರಿಂದ ಭಕ್ತಿಪಂಥ ಬೆಳೆದು ಭಕ್ತಿಪೂರ್ಣ ಅಭಂಗಗಳ ಭಜನೆಪದ್ಧತಿ ಬಳಕೆಗೆ ಬಂದು ಭಕ್ತಿಮಾರ್ಗವು ಹಿರಿದಾಗುತಿತ್ತು. ವಾರಕಾರಿ ಸಂತರಿಂದ ಆ ಮಾರ್ಗವು ತುಂಬಿ ಕಳೆಕಟ್ಟಿತು. ಭಕ್ತಿಯೇ ಭಗವದ್ ಕೃಪೆ ಗಳಿಸುವ ಸುಲಭಮಾರ್ಗವೆಂದು ರಾಮಾನುಜರು ಕೂಡ ಸಾರಿದರು.

ನೆರೆ ರಾಜ್ಯಗಳಲ್ಲಿ ಭಕ್ತಿಯ ಗಾಳಿ ಹೀಗೆ ಬೀಸುತ್ತಿರುವಾಗ ಕನ್ನಡನಾಡಿನಲ್ಲಿ ಶೈವಭಕ್ತಿಯು ಟಿಸಿಲೊಡೆದು ಶೈವಪುರಾತನರಿಂದ ಪ್ರೇರಣೆಗೊಂಡ ಶರಣಪಂಥವು ವಚನಸಾಹಿತ್ಯದ ಮೂಲಕ ನಾಡಿನ ಮನೆಮನೆಯ ಸಾಮಾನ್ಯಜನರಿಗೆ ಭಕ್ತಿ ಪಥವನ್ನು ಪರಿಚಯಿಸಿತು. ಬಸವಣ್ಣನವರ ನೇತೃತ್ವದಲ್ಲಿ ಭಕ್ತಿ ಸಾಧನೆಯನ್ನು ಸಂಸ್ಕೃತದ ಶೃಂಖಲೆಯಿಂದ ಬಿಡಿಸಿ ತಿಳಿಗನ್ನಡದಲ್ಲೇ ಪ್ರತಿಯೊಬ್ಬನೂ ಆಧ್ಯಾತ್ಮಿಕ ಅನುಭವ ಪಡೆಯಲು, ಅಭಿವ್ಯಕ್ತಿಸಲು ಶಿವಶರಣರು ದಾರಿ ತೋರಿದರು. ಜಾತಿ ಭೇದ ರಹಿತವಾಗಿ, ವರ್ಗ ವರ್ಣ ವ್ಯತ್ಯಾಸಗಳಿಲ್ಲದೆ, ಸ್ತ್ರೀ ಪುರುಷ ಭೇದವಿಲ್ಲದೆ 'ಭಕ್ತಿ' ಎನ್ನುವುದು ಮಾನವ ಜೀವಿಯು ನೈತಿಕ ಮೌಲ್ಯಗಳೊಡನೆ ಸಾಧಿಸಿಕೊಳ್ಳಬೇಕಾದ ಆತ್ಮ ಸಂಸ್ಕರಣ ಎನ್ನುವುದನ್ನು ಈ ಶರಣಪಂಥ ತೋರಿಸಿಕೊಟ್ಟಿತು. ಅಂದಿನ ಸಮಾಜದಲ್ಲಿ ಹರಡಿಕೊಂಡಿದ್ದ ವೈದಿಕ ಧರ್ಮದ ಅನೇಕ ಆಚರಣೆಗಳ ಅರ್ಥಶೂನ್ಯತೆ ಮತ್ತು ವೈಪರೀತ್ಯದ ವಿರುದ್ಧ ಶರಣರು ತಮ್ಮ ವಚನಗಳ ಮೂಲಕ ಎತ್ತಿದ ಧ್ವನಿಯಾದರೂ ಅದರಲ್ಲಿ ತುಂಬಿಕೊಂಡಿದ್ದ ಅಪಾರವಾದ ಸಾಮಾಜಿಕ ಕಳಕಳಿ, ಕ್ರಾಂತಿಕಾರೀ ಮನೋಭಾವನೆ, ಹಿಡಿದೆತ್ತಿ ಸಾರಿದ ಮಾನವೀಯ ಮೌಲ್ಯಗಳು ಎಲ್ಲವೂ ಕನ್ನಡದ ಭಕ್ತಿಶೀಲ ಮನಸ್ಸಿಗೆ ಉನ್ನತ ರೀತಿಯಲ್ಲಿ ಮಾರ್ಗದರ್ಶಿಯಾಯಿತು.

ಇಲ್ಲಿಂದ ಮುಂದೆ ಭಕ್ತಿ ತತ್ವವು ಸಾಗಿದ ಪಥದಲ್ಲಿ ಗುರುತಿಸಬಹುದಾದ ಪ್ರಮುಖ ಹೆಜ್ಜೆಗಳೆಂದರೆ ಅದು ಆಚಾರ್ಯ ಮಧ್ವರದು. ಕನ್ನಡನಾಡು ಈ ಜಗತ್ತಿಗೆ ನೀಡಿದ ಹೆಮ್ಮೆಯ ಕೊಡುಗೆಯಾಗಿ, ಅಪ್ರತಿಮ ದಾರ್ಶನಿಕರಾಗಿ ತತ್ವಜ್ಞಾನ ಪ್ರಪಂಚದಲ್ಲಿ ಅಪೂರ್ವವಾದ ಆಧ್ಯಾತ್ಮಿಕ ಕ್ರಾಂತಿ ಮಾಡಿದವರು. ಭಕ್ತಿ ತತ್ವಕ್ಕೆ ಮತ್ತಷ್ಟು ಒತ್ತು ಕೊಟ್ಟು ಭಕ್ತಿಯ ಮೂಲಕವೇ ಮಾನವಜೀವವು ಜಗನ್ನಿಯಾಮಕನನ್ನು ತಲುಪಬಹುದೆಂದು ಸಾರಿದವರು.

ಹೀಗೆ ಎಲ್ಲ ಬಗೆಯ ಧಾರ್ಮಿಕ ಪಂಥಗಳಿಗೂ ಆಶ್ರಯವಿತ್ತು ಆ ಮೂಲಕ ಭಕ್ತಿಯ ಔನ್ನತ್ಯವನ್ನು ಸಾರಿದ ನಾಡು ಕರ್ನಾಟಕ. ಶಂಕರಾಚಾರ್ಯರು, ರಾಮಾನುಜಾಚಾರ್ಯರು ಹಾಗೂ ಮಧ್ವಾಚಾರ್ಯರೇ ಭಾರತದಲ್ಲಿ ಭಕ್ತಿ ಮತ್ತು ಧರ್ಮವನ್ನು ಪ್ರತಿಪಾದಿಸಿದ ಮುಖ್ಯ ಮತತ್ರಯಗಳ ಸ್ಥಾಪಕರು. ಈ ಮೂವರು ಆಚಾರ್ಯರಿಗೂ ಕನ್ನಡನಾಡೇ ಕಾರ್ಯಕ್ಷೇತ್ರವಾಗಿತ್ತು ಎನ್ನುವುದು ಕನ್ನಡ ಜನರಿಗೆ ಹೆಮ್ಮೆಯ ಸಂಗತಿ. ೮ನೇ ಶತಮಾನದ ಶಂಕರಾಚಾರ್ಯರು ಮೂಲತಃ ಕೇರಳದವರು. ಆದರೂ ಅವರ ಪ್ರಧಾನ ಶೈವ ಪೀಠಗಳಲ್ಲಿ ಒಂದು ಕರ್ನಾಟಕದ ಶೃಂಗೇರಿಯಲ್ಲಿದೆ. ರಾಮಾನುಜರ ಪ್ರೀತಿಯ ದೈವ ಮೇಲುಕೋಟೆಯ ಚೆಲುವನಾರಾಯಣ. ಮಧ್ವಾಚಾರ್ಯರಂತೂ ಕನ್ನಡನಾಡಿನಲ್ಲೆ ಜನಿಸಿದವರು. ವಿಶ್ವದ ತತ್ವಜ್ಞಾನ ಪ್ರಪಂಚಕ್ಕೆ ಅವರು ಕನ್ನಡನಾಡು ನೀಡಿದ ವಿಶಿಷ್ಟವಾದ ಕೊಡುಗೆಯೇ ಸರಿ. ಮುಂದೆ ಹದಿನಾರನೇ ಶತಮಾನದ ಹೊತ್ತಿಗೆ ಬಂದ ದಾಸಪಂಥಕ್ಕೆ ಮೂಲ ಬೆಳಕು ಮಧ್ವರ 'ತತ್ವವಾದ'ವೇ.

"ವೃದ್ಧಿಂ ಕರ್ನಾಟಕೇ ಗತಾ" ಎಂಬ ಮಾತಿನಂತೆ ಭಕ್ತಿ ಪಂಥದ ಕವಲುಗಳು ವ್ಯಾಪಕವಾಗಿ ಬೆಳೆದು ವಿಸ್ತರಿಸಿದ್ದು ಕನ್ನಡನಾಡಿನಲ್ಲಿ, ಆಚಾರ್ಯತ್ರಯರ 'ಭಕ್ತಿ' ಪ್ರಚಾರ ಕಾರ್ಯಕ್ಕೆ ಅಪಾರ ಪ್ರೋತ್ಸಾಹ ನೀಡಿದ್ದೇ ಕರ್ನಾಟಕ. ರಾಮಾನುಜಾಚಾರ್ಯರ ಪ್ರಪತ್ತಿ ಮಾರ್ಗವನ್ನೇ ಮಧ್ವಾಚಾರ್ಯರು ಕೂಡ ಎತ್ತಿ ಹಿಡಿದರು. ಹರಿ ಸರ್ವೋತ್ತಮತ್ವ ಮತ್ತು ಜೀವದ ಪಾರತಂತ್ರ್ಯವನ್ನು ಪ್ರತಿಪಾದಿಸಿ ಭಕ್ತಿಯ ಅಗತ್ಯತೆಯನ್ನು ಪ್ರಚಾರ ಮಾಡಿದರು. ಬಂಗಾಲದಲ್ಲಿ ಚೈತನ್ಯ ಮಹಾಪ್ರಭುಗಳು ಮಧ್ವರ ತತ್ವವಾದದಿಂದ ಪ್ರಭಾವಿತರಾಗಿ ಶ್ರೀಕೃಷ್ಣ ಭಕ್ತಿಯನ್ನು ವ್ಯಾಪಕವಾಗಿ ಬೆಳೆಯಿಸಿದರು. ಒಡಿಸ್ಸಾದ ಕವಿ ಜಯದೇವ ಕೂಡ ರಾಧಾಕೃಷ್ಣ ಭಕ್ತಿಗೆ ತಮ್ಮ 'ಗೀತಗೋವಿಂದ' ದ ಮೂಲಕ ದೇಣಿಗೆ ನೀಡಿದ್ದರು. ಇಂದು ಬಾಂಗ್ಲಾದೇಶದ ಭಾಗವಾಗಿರುವ ವಂಗ ಮಾಧ್ವಮಠದ ಯತಿಗಳಾಗಿದ್ದ ಅಚ್ಚುತ ಚರಣ ಭಕ್ತಿವೇದಾಂತ ಪ್ರಭುಪಾದರಿಂದ 'ಇಸ್ಕಾನ್' (Iscon) ಅಸ್ತಿತ್ವ ಪಡೆದು ಇಂದಿಗೂ ಅದು ವಿಶ್ವವ್ಯಾಪಿಯಾಗಿ ಬೆಳೆಯುತ್ತ ಕೃಷ್ಣಭಕ್ತಿಯ ಪ್ರಚಾರಕಾರ್ಯದಲ್ಲಿದೆ. ಈ ಎಲ್ಲ ಭಕ್ತಿಪಂಥಗಳ ಬೆಳವಣಿಗೆಯ ಮೂಲಸ್ಫೂರ್ತಿ ಮಧ್ವಾಚಾರ್ಯರೇ ಆಗಿದ್ದಾರೆ. ಹೀಗೆ ಕರ್ನಾಟಕದಿಂದಲೇ ಹೊರಹೊಮ್ಮಿದ ಭಕ್ತಿಯ ಬೆಳಕು ಇಡೀ ದೇಶದಾದ್ಯಂತ ಹಬ್ಬಿ ಹರಡಿ ಪ್ರಚುರತೆ ಪಡೆಯಲು ಬಹುಶಃ ಆಗಿನ ಚಾರಿತ್ರಿಕ, ರಾಜಕೀಯ, ಧಾರ್ಮಿಕ ಸ್ಥಿತಿಗತಿಗಳ ಕಾರಣವೂ ಇದ್ದಿರಬಹುದಾಗಿದೆ.

೧೩ನೇ ಶತಮಾನದಲ್ಲಿನ ದೇಶದ ಸ್ಥಿತಿಗತಿಗಳು

ಬೌದ್ಧ, ಜೈನ ಧರ್ಮಗಳು ಉಚ್ಛ್ರಾಯ ಸ್ಥಿತಿಗೆ ಬಂದಮೇಲೆ ವೈದಿಕಧರ್ಮವು ದೇಶದಲ್ಲಿ ಮೂಲೆಗುಂಪಾಗುತ್ತಿದ್ದ ಸಮಯ. ಶಂಕರಾಚಾರ್ಯರು ಬೌದ್ಧಮತವನ್ನು ನಿಗ್ರಹಿಸಿ ವೈದಿಕಧರ್ಮದ ಪುನರುಜ್ಜೀವನ ಮಾಡಿದ್ದರೂ ಅವರು ಸ್ಥಾಪಿಸಲೆತ್ನಿಸಿದ ನಿರ್ಗುಣ ಬ್ರಹ್ಮವಾದವು ಜನಸಾಮಾನ್ಯರ ಅರಿವಿನ ಮಟ್ಟ ತಲುಪುವಷ್ಟು ಯಶಸ್ವಿಯಾಗಿರಲಿಲ್ಲ. ಕನ್ನಡ ನಾಡಿನಲ್ಲೇ ಹುಟ್ಟಿಕೊಂಡ ವೀರಶೈವ ಧರ್ಮವು ತನ್ನ ಜಾತ್ಯಾತೀತವಾದ, ವರ್ಗಾತೀತವಾದ ವಿಶಾಲ ಮನೋಭೂಮಿಕೆಯಿಂದ ಜನಸಾಮಾನ್ಯರನ್ನು ಆಕರ್ಷಿಸುವುದರ ಜೊತೆಗೆ ವೇದ ಪ್ರಾಮಾಣ್ಯವನ್ನು ತಿರಸ್ಕರಿಸಿದ್ದರಿಂದ ವೈದಿಕ ಧರ್ಮಕ್ಕೆ ಮತ್ತಷ್ಟು ತೀವ್ರ ಹೊಡೆತ ಬಿದ್ದಿತ್ತು.

ಕಿಂಚಿತ್ತಾಗಿ ಕ್ರೈಸ್ತ ಧರ್ಮವೂ ಪಸರಿಸುತ್ತ ಬಂದಿದ್ದು ಒಂದೆಡೆಯಾದರೆ ಪರಕೀಯವಾದ ಇಸ್ಲಾಂ ಧರ್ಮವೂ ಉತ್ತರಭಾರತದಲ್ಲಿ ಪ್ರಾಬಲ್ಯ ಗಳಿಸುತ್ತ ಬಂದಿದ್ದಂಥ ಪರಿಸ್ಥಿತಿ ಮತ್ತೊಂದೆಡೆ. ಉತ್ತರದೆಡೆಯಿಂದ ದಕ್ಷಿಣಾಪಥಕ್ಕೂ ಮುಸ್ಲಿಂ ಆಡಳಿತವು ಚಾಚಿ ದುರಾಕ್ರಮಣ ನಡೆಸಲು ಸನ್ನಾಹ ನಡೆದಿತ್ತು. ಹಿಂದೂಗಳನ್ನು ಹಿಡಿದು ಬಲವಂತವಾಗಿ ಮತಾಂತರ ಮಾಡುತ್ತಿದ್ದ ಪರಿಸ್ಥಿತಿಯನ್ನು ಎದುರಿಸಲು ಒದ್ದಾಡುತ್ತಿದ್ದ ಕಾಲ. ದಕ್ಷಿಣ ಭಾರತದ ದಂಡಯಾತ್ರೆಗೆ ಮಲ್ಲಿಕ್‌ಕಾಫರ್ ಸಿದ್ಧನಾಗುತ್ತಿದ್ದುದರಿಂದ ಸನಾತನ ಹಿಂದೂಧರ್ಮ,ಸಂಸ್ಕೃತಿಗಳಿಗೆ ಯವನ ದಾಳಿಯು ಮಾರಕವಾಗಿ ಎರಗುತ್ತಿದ್ದಂಥ ದುಃಸ್ಥಿತಿಯ ಕಾಲ. ಮುಸಲ್ಮಾನರು ನಡೆಸಿದ್ದ ಹಿಂದೂ ದೇವಾಲಯಗಳ ಮೇಲಿನ ಆಕ್ರಮಣ, ದಂಗೆ, ಅತ್ಯಾಚಾರಗಳಿಂದ ಹಿಂದೂಗಳು ಮಾನಸಿಕ ಅತಂತ್ರತೆಗೆ ಒಳಗಾಗಿದ್ದರು. ದೇಶಾದ್ಯಂತವೂ, ಅದರಲ್ಲಿಯೂ ದಕ್ಷಿಣಭಾರತದಲ್ಲಿ ಜಾತಿ ಮತ ವೈಷಮ್ಯದ ಧಗೆ ಹೊಗೆಗಳು ಉಸಿರು ಕಟ್ಟಿದ್ದಂಥ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ, ನೀತಿನಿಯಮಗಳನ್ನು ಗಾಳಿಗೆ ತೂರಿದ್ದ ಜನತೆಯ ನೈತಿಕ ಬಂಧ ಸಡಿಲುಗೊಂಡಿದ್ದಂಥ ಕಾಲದಲ್ಲಿ, ದೇಶವಿಡೀ ಇಂಥ ಅತಂತ್ರ, ಅಸಹಾಯಕ ಪರಿಸ್ಥಿತಿಗೆ ಒಳಗಾಗಿರುವಂಥ ಸಮಯದಲ್ಲಿ ಜನರಿಗೆ ಅವಲಂಬನೆಯಾಗಿ, ಆಸರೆಯಾಗಿ ಭಾವಸಂಪತ್ತೊಂದರ ಸಾಂತ್ವನದ ಅಗತ್ಯತೆ ಖಂಡಿತವಾಗಿಯೂ ಒದಗಬೇಕಾಗಿದ್ದಂಥ ವಾತಾವರಣ ನಿರ್ಮಾಣಗೊಂಡುಬಿಟ್ಟಿತ್ತು.

ಇಂಥ ಸಂದಿಗ್ಧ ಕಾಲದಲ್ಲಿ ದೇಶದ ಜನರನ್ನು ಭಾವತತ್ವದ ಮೂಲಕವೇ ಒಂದುಮಾಡಿ ಮೇಲೆತ್ತಲು, ಭಕ್ತಿತತ್ವದ ಪ್ರಕಾಶಿಕೆಯನ್ನು ಎಲ್ಲೆಡೆ ಹರಡಿ, ನೀತಿನಿಯಮಗಳನ್ನು ಆ ಮೂಲಕ ಜನಸಾಮಾನ್ಯರಲ್ಲಿ ನೆಲೆಗೊಳಿಸಲು, ಮೂಲೆಗುಂಪಾಗಿದ್ದ ವೈದಿಕಧರ್ಮವನ್ನು ಪುನರುಜ್ಜೀವನಗೊಳಿಸಿ ಅದರ ಮೌಲ್ಯಗಳ ಮರುಸ್ಥಾಪನೆ ಮಾಡಲು ಮಧ್ವಾಚಾರ್ಯರು ಮುಂದಾದರು.

ಮಧ್ವರ ಭಕ್ತಿ ಸಾಹಿತ್ಯ-ಪಂಥದ ಮಾರ್ಗದರ್ಶನದಲ್ಲಿ ಮುಂದೆ ದೇಶದ ಉದ್ದಗಲಕ್ಕೂ ಅನೇಕಾನೇಕ ಪ್ರಾಂತ್ಯಗಳಲ್ಲಿ ಅಸಂಖ್ಯ ಭಾವುಕ ಭಕ್ತ-ಸಂತರ ತಂಡವೇ ಹುಟ್ಟಿಕೊಂಡಿತು ಎಂಬುದು ಗಮನಾರ್ಹ.

ಸಾಮಾನ್ಯವಾದ ಜೀವನಾನುಭವಗಳಿಂದಲೇ ತುಂಬಿದ ನೀತಿಬೋಧಕ ಭಕ್ತಿ ಸಾಹಿತ್ಯದ ಮುಂದಿನ ವಿಪುಲ ಸೃಷ್ಟಿಗೆ ಮುಂಚೂಣಿಯ ನೇತೃತ್ವವು ಮಧ್ವಾಚಾರ್ಯರಿಂದಲೇ ಆಯಿತು ಎನ್ನುವುದು ನೆನಪಿಡಬೇಕಾದಂಥ ಸಂಗತಿ. ಜನಸಾಮಾನ್ಯರನ್ನು ತಲುಪಲೆಂದೇ ತಿಳಿಯಾದ ಸಂಸ್ಕೃತದಲ್ಲಿ ಅವರು ಹಾಡುಗಬ್ಬಗಳನ್ನು ರಚಿಸಿ, ಹಾಡಿಸಿದ್ದು ಬಹಳ ಮುಂದಿನ ವ್ಯಾಸಪಂಥ, ದಾಸಪಂಥಗಳ ಮೂಲಕ ಹರಿದು ಬಂದ ಭಕ್ತಿ ನೀತಿ ತತ್ವಗಳ ಗಂಗೆಯಾಯಿತು ಎನ್ನುವುದನ್ನು ಮರೆಯಲಾಗದು.

ತತ್ವಜ್ಞಾನವನ್ನು ಪಡೆಯುವಲ್ಲಿ ಮೂಢನಂಬಿಕೆಗಳನ್ನು ತೊಡೆದುಹಾಕಿಸುವಂಥ ಕಾರ್ಯ ಮಾಡಿದವರು, ಭಾರತೀಯ ಜ್ಞಾನಪರಂಪರೆಯ ಎಲ್ಲ ಮುಖಗಳನ್ನೂ ವೇದಾಂತಕ್ಕೆ ಸಮನ್ವಯಿಸಿ ತೋರಿದವರು, ಸಂಶೋಧನಾತ್ಮಕ ಮೇರು ಕೃತಿಗಳನ್ನು ನೀಡಿದವರು ಮಧ್ವಾಚಾರ್ಯರು ಎನ್ನುವುದು ಐತಿಹಾಸಿಕ ಮಹತ್ವದ ಸಂಗತಿಯಾಗಿದೆ.

* * * * *

<u>ಅಡಿಟಿಪ್ಪಣಿಗಳು</u> :

೧. ಬನ್ನಂಜೆ ಗೋವಿಂದಾಚಾರ್ಯ–ಸಮ್ಮೇಳನಾಧ್ಯಕ್ಷ ಭಾಷಣ–ದಾಸ,ಸಂತ ಸಾಹಿತ್ಯ ರಾಷ್ಟ್ರೀಯ ಸಮ್ಮೇಳನ–ಪಂಢರಪುರ, ಮಹಾರಾಷ್ಟ್ರ.

೨. "ದಾಸಸಾಹಿತ್ಯ ಮತ್ತು ಸಂಸ್ಕೃತಿ" – ಸಾ.ಕೃ. ರಾಮಚಂದ್ರರಾವ್.

ಆ. ಮಧ್ವಾಚಾರ್ಯರು

ಮಧ್ವರ ಬೋಧೆ-ಬರಹ

ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಯ ಬಳಿಯ ಪುಟ್ಟ ಹಳ್ಳಿ 'ಪಾಜೆ' (ಇಂದಿಗೆ ಪಾಜಕ ಕ್ಷೇತ್ರವೆನಿಸಿ ಪ್ರಸಿದ್ಧವಾಗಿದೆ)ಯಲ್ಲಿ ನಡಿಲ್ಲಾಯ ಮನೆತನದಲ್ಲಿ ಹುಟ್ಟಿದ ಆಚಾರ್ಯ ಮಧ್ವರ ಹುಟ್ಟು ಹೆಸರು 'ವಾಸುದೇವ'. ಬಾಲ್ಯದಿಂದಲೇ ಆಧ್ಯಾತ್ಮದತ್ತ ತೀವ್ರ ಒಲವು, ವಿರಕ್ತಿ ಮಾರ್ಗದತ್ತ ತೀವ್ರ ಸೆಳೆತವಿದ್ದ ಬಾಲಕ ತನ್ನ ಹನ್ನೊಂದನೆಯ ವಯಸ್ಸಿನಲ್ಲೇ ಮನೆಯಿಂದ ದೂರ ನಡೆದು ಉಡುಪಿಯ ಪರಿಸರದಲ್ಲಿ ಆಗ ಪ್ರಖ್ಯಾತರೆನಿಸಿದ್ದ 'ಅಚ್ಚುತ ಪ್ರಜ್ಞ'[೧]ರೆಂಬ ಯತಿಗಳಿಂದ ಸನ್ಯಾಸ ದೀಕ್ಷೆ ಪಡೆದ. 'ಪೂರ್ಣಪ್ರಜ್ಞ'ನೆಂದು ಸನ್ಯಾಸದ ನಾಮ ಪಡೆದು ಮುಂದೆ ವೇದಾಂತ ಸಾಮ್ರಾಜ್ಯದ ಪಟ್ಟಾಭಿಷೇಕದಲ್ಲಿ 'ಆನಂದತೀರ್ಥ' ಎಂಬ ಹೆಸರನ್ನು ಪಡೆದುಕೊಂಡ. ತಾನೇ ಮೆಚ್ಚಿಕೊಂಡು ಆವಿಷ್ಕರಿಸಿದ ಕಾವ್ಯನಾಮ 'ಮಧ್ವ' ಎಂದು. ಈ ಹೆಸರಿನಂದಲೇ ಮುಂದೆ ವಿಖ್ಯಾತರಾಗುವಂತಾಯಿತು, ಮಧ್ವಾಚಾರ್ಯರೆಂದು.

ಮಧ್ವಾಚಾರ್ಯರ ಕಾಲನಿರ್ಣಯದಲ್ಲಿ ವಿಭಿನ್ನ ವಿದ್ವಾಂಸರು ಬೇರೆ ಬೇರೆ ಅಭಿಪ್ರಾಯ ಸೂಚಿಸಿದ್ದಾರೆ. ದೊರೆತಿರುವ ಮಠೀಯ ದಾಖಲೆಗಳು, ಶಿಲಾಶಾಸನಗಳು ಮತ್ತು ಕೃತಿಗಳಿಂದ ಅವರ ಜನನ ಕಾಲವನ್ನು ಮಥಿಸಿ, ಊಹಿಸಿ ವಿವಿಧ ಅಭಿಪ್ರಾಯಗಳು ಹುಟ್ಟಿಕೊಂಡಿವೆ. ಕ್ರಿ.ಶ.೧೨೩೮ ರಿಂದ ೧೩೧೭ರವರೆಗೂ ಅವರು ಇದ್ದರು ಎಂಬ ವಾದವು ಇತ್ತೀಚಿನವರೆಗೂ ಹೆಚ್ಚು ಪ್ರಚಲಿತವಿದ್ದು ಈ ಬಗ್ಗೆ ನಡೆದ ಮತ್ತಿನ ಸಂಶೋಧನೆಗಳಿಂದ ಅವರ ಕಾಲವನ್ನು ಕ್ರಿ.ಶ.೧೨೦೦ ರಿಂದ ೧೨೮೦ ಎಂದೇ ನಿರ್ಣಯಕ್ಕೆ ಬರಲಾಗಿದೆ. (ಶ್ರೀ ಮಧ್ವಾಚಾರ್ಯರ ಕಾಲ ನಿರ್ಣಯ- ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ) ಈಗಿನ ಪೇಜಾವರ ಮಠಾಧೀಶರಾದ ವಿಶ್ವೇಶತೀರ್ಥ ಸ್ವಾಮೀಜಿಯವರು ಈ ನಿರ್ಣಯವನ್ನು ಒಪ್ಪಿಕೊಂಡಿದ್ದಾರೆ.

ಮಧ್ವಾಚಾರ್ಯರು ಮಂಡಿಸಿದ ಸಿದ್ಧಾಂತದಲ್ಲಿ ಮೂಲತಃ ಎರಡು ತತ್ವಗಳಿವೆ.

೧. ಸ್ವತಂತ್ರ ತತ್ವ (Independent reality) – ವಿಶ್ವದ ಸೃಷ್ಟಾರನಾದ ಭಗವಂತ

೨. ಅಸ್ವತಂತ್ರ ತತ್ವ (Dependent reality) – ಅವನಿಂದ ಸೃಷ್ಟವಾದ ಸಮಸ್ತ ವಿಶ್ವ

ಈ ಮುಂಚೆ ಯಾರೂ ಹೇಳಿರದ ಹೊಚ್ಚ ಹೊಸ ವಿಚಾರಗಳನ್ನು ಮಧ್ವಾಚಾರ್ಯರು ತಮ್ಮ ತತ್ವಜ್ಞಾನದಲ್ಲಿ ಕೊಟ್ಟಿದ್ದಾರೆ. ಪ್ರಪಂಚದಲ್ಲಿನ ಯಾವ ಶಬ್ದವೂ, ಯಾವ ನಾದವೂ, ಯಾವ ಭಾಷೆಯ ಯಾವ ಪದವೂ, ಯಾವ ಹೆಸರೂ, ದೇವರ ಹೆಸರೇ. ಅದು ಎಲ್ಲವೂ ನುಡಿಯುವುದು ಒಬ್ಬ ಸರ್ವೋತ್ತಮ ದೇವರನ್ನೇ ಕುರಿತು

ಹೇಳುತ್ತದೆ. ಮೂಲತಃ ಭಗವಂತನ ಹೆಸರಲ್ಲದ ಯಾವ ನಾದವೂ, ಯಾವ ಪದವೂ, ಜಗತ್ತಿನ ಯಾವ ಭಾಷೆಯಲ್ಲೂ ಇಲ್ಲ. ಪಕ್ಷಿಗಳ ಚಿಲಿಪಿಲಿ ಇರಲಿ, ವೇದಮಂತ್ರಗಳಿಂದ ಹಿಡಿದು ಪ್ರತಿ ಪ್ರಾಣಿಯ ಕೂಗು, ಗರ್ಜನೆ ಏನೇ ಇರಲಿ ಎಲ್ಲ ಶಬ್ದಗಳೂ ಅವನ ಗುಣಗಾನವನ್ನೇ ಮಾಡುತ್ತವೆ ಎಂದು ಸಾರಿದರು.

ನಾರಾಯಣನೊಬ್ಬನೇ ಸರ್ವೋತ್ತಮನಾದ ಸ್ವತಂತ್ರನಾದ ಪರದೈವ. ಸಮಸ್ತ ವೇದಗಳು ಅವನೊಬ್ಬನನ್ನೇ ಅಗ್ನಿ, ಇಂದ್ರ, ವರುಣ ಮುಂತಾದ ನಾನಾ ಬಗೆಯ ಗುಣನಾಮ (Epithet) ಗಳಿಂದ ಸ್ತುತಿಸುತ್ತವೆ. 'ಏಕೋ ದೇವಃ' ಎನ್ನುವುದೇ ಸಮಸ್ತ ವೈದಿಕ ವಾಙ್ಮಯದ ತಿರುಳು. ಯಾರು ಎಲ್ಲದರ ಒಳಗೂ ಹೊರಗೂ ತುಂಬಿರುವವನೋ ಅವನೇ ಆ ವಿಷ್ಣುವಾಚಕ ಭಗವಂತ. ಅವನ ಒಂದೊಂದು ಹೆಸರು ಅವನ ಒಂದೊಂದು ಗುಣಸಂಧಾನದಿಂದಾಗಿ ಬಂದಿದೆ. ಎಲ್ಲ ದೇವತೆಗಳ ನಾಮವನ್ನು ಹೊತ್ತವನು ಒಬ್ಬನೇ ದೇವ; ಎಲ್ಲ ದೇವತೆಗಳಿಗೆ ನಾಮವನ್ನು ಕೊಟ್ಟವನೂ ಅವನೇ.

ಭಗವಂತ ಬಿಂಬವಾದರೆ ಜೀವರು ಅವನ ಪ್ರತಿಬಿಂಬ. ಪ್ರತಿಬಿಂಬವು ಯಾವಾಗಲೂ ಬಿಂಬನ ಅಧೀನವೇ ಹೊರತು ಅದು ಬಿಂಬವೇ ಆಗಲಾರದು. ಒಂದು ಬಿಂಬಕ್ಕೆ ಅನಂತ ಪ್ರತಿಬಿಂಬಗಳಿರುವಂತೆ ಈ ಸೃಷ್ಟಿಯಲ್ಲಿ ಅವನ ಅಧೀನದಲ್ಲಿ ಅನೇಕ ಜೀವರುಗಳು. ಪ್ರತಿಯೊಂದು ಜೀವಕ್ಕೂ ಅದರದ್ದೇ ಆದ ಸ್ವಂತ ಸ್ವಭಾವವಿದೆ. ಎಲ್ಲ ಜೀವರುಗಳಲ್ಲೂ ಒಂದೇ ರೀತಿಯಲ್ಲಿ ಅಂತರ್ಯಾಮಿಯಾಗಿ ಭಗವಂತ ಸಮಾತ್ಮನು, ಬಿಂಬವು ಒಂದೇ. ಆದರೆ ಪ್ರತಿಬಿಂಬಗಳಲ್ಲಿ ಅಭಿವ್ಯಕ್ತಿ ಬೇರೆ ಬೇರೆಯಾಗಿ. ಪ್ರತಿ ವ್ಯಕ್ತಿಗೂ ಅವನದ್ದೇ ಆದ ಸ್ವಂತ ವ್ಯಕ್ತಿತ್ವವಿದೆ. ಪ್ರತಿ ವ್ಯಕ್ತಿತ್ವದಲ್ಲಿರುವ ಸ್ವಭಾವ, ಜ್ಞಾನಾನಂದಗಳ ಪೂರ್ಣ ಅಭಿವ್ಯಕ್ತಿಯೇ ಆಯಾ ಜೀವಕ್ಕೆ ಮೋಕ್ಷ. ಇದರ ಹೊರತಾಗಿ ಎಲ್ಲ ಜೀವರುಗಳೂ ಒಂದು ಇನ್ನೊಂದರ ಹಾಗೆ ಆಗಿ ಎಲ್ಲರೂ ಒಂದೇ ಆಗುವುದು ಮೋಕ್ಷವಲ್ಲ.

'ಜೀವ' ಎಂದರೆ ಬೀಜದ ಹಾಗೆ. ದೊಡ್ಡ ಮರವಾಗಿ ಬೆಳೆಯುವ ಶಕ್ತಿ ಆ ಬೀಜದಲ್ಲೇ ಇದೆ. ಆದರೆ ಅದು ತನ್ನಲ್ಲಿರುವ ಶಕ್ತಿಯನ್ನು ತಾನೇ ಬೆಳೆಸಿಕೊಳ್ಳಲಾರದು. ಅದನ್ನು ಒಬ್ಬ ಕೃಷಿಕ ಬೇಕಾದ ವಾತಾವರಣ ಕಲ್ಪಿಸಿ ಬೆಳೆಸಬೇಕಾಗಿದೆ. ಅಪ್ರಜ್ಞಾವಸ್ಥೆಯಲ್ಲಿರುವ ಜೀವವನ್ನು ಈ ಪ್ರಪಂಚವೆನ್ನುವ ತೋಟದಲ್ಲಿ ಬಿತ್ತಿದ ಕೃಷಿಕನೇ ಭಗವಂತ. ಜೀವದ ವಿಕಾಸಕ್ಕಾಗಿ, ಅದರ ಸ್ವಭಾವದ ಪೂರ್ಣ ಅಭಿವ್ಯಕ್ತಿಗಾಗಿ ಈ ಭೂಮಿಯ ಸಂದರ್ಭ, ವಾತಾವರಣಗಳನ್ನು ಹೊಂದಿಸಿದ. ಜೀವಕ್ಕೆ ತನ್ನ ಪೂರ್ಣ ಸ್ವಭಾವದ ಅಭಿವ್ಯಕ್ತಿಯೇ ಮುಕ್ತಿ, ಮೋಕ್ಷ.

ತನ್ನತನದ ಪ್ರಜ್ಞೆಯೇ ಇಲ್ಲದ, ತಾನಿದ್ದೇನೆ ಎನ್ನುವ ಅರಿವೇ ಇಲ್ಲದೆ ಜೀವ ವ್ಯರ್ಥವಾಗುತಿತ್ತು, ಭಗವಂತ ಬಿತ್ತದಿದ್ದರೆ. ಬೆಳವಣಿಗೆಯೇ ಇಲ್ಲದೆ ಜೀವದ ಇರುವಿಕೆಯೇ ವ್ಯರ್ಥವಾಗುತಿತ್ತು. ಜೀವವು ಲೋಕದಲ್ಲಿ ಅನುಭವಗಳನ್ನು ಪಡೆದು ಬೆಳೆಯಲಿ, ವಿಕಸಿಸಿ ಮೋಕ್ಷ ಪಡೆಯಲಿ ಎಂದು ಕಳುಹಿಸಿದ.

ಹೀಗೆ ಅನಂತ ಜೀವರು ಭಗವಂತನೆಂಬ ಬಿಂಬದ ಅನಂತ ಪ್ರತಿಬಿಂಬಗಳು. ಎಷ್ಟು ಜೀವರುಗಳೋ ಅಷ್ಟು ತರಗಳು. ಈ ಎಲ್ಲ ತರತಮಗಳ ಜೊತೆಗೆಯೇ ಈ ಜೀವರುಗಳು ಚಿದ್‌ರೂಪದಿಂದ ಭಗವಂತನ ಸಾದೃಶ್ಯದ ಸೂತ್ರದಲ್ಲಿ ಹೆಣೆದುಕೊಂಡವರು. ಜೀವರಂತೆಯೇ ಸೃಷ್ಟಿಗೆ ಮೂಲವಾದ ಜಡದ್ರವ್ಯಗಳೂ ಅನಂತ.

ಪಂಚಭೂತಗಳು, ಪಂಚ ತನ್ಮಾತ್ರಗಳು, ಪಂಚಕೋಶಗಳು, ಪಂಚೇಂದ್ರಿಯಗಳು....ಹೀಗೆ ಈ ಜಡ ಪ್ರಪಂಚವು ಪಂಚಮುಖಿಯೇ ಸೈ. ಎಂತಲೇ ಇದನ್ನು ಪ್ರಪಂಚವೆನ್ನುವುದು. ಈ ಪಂಚೀಕೃತ ಪ್ರಪಂಚದೊಳಗೆ ಪ್ರಾಣತತ್ವವೂ ಪಂಚರೂಪದಿಂದ ತುಂಬಿದೆ. ಭಗವಂತನೂ ಪಂಚರೂಪನಾಗಿ ನಿಂತು ಪ್ರಪಂಚವನ್ನು ನಿಯಂತ್ರಿಸುತ್ತಿದ್ದಾನೆ.

ಈ ಪ್ರಪಂಚದಲ್ಲಿ ಭೇದಗಳೂ ಪಂಚವಿಧ. ಜಡ–ಜಡಗಳ ಭೇದ; ಜಡ–ಜೀವರ ಭೇದ; ಜೀವ ಜೀವರ ಭೇದ; ಜಡ–ಪರಮಾತ್ಮರ ಭೇದ; ಜೀವ–ಪರಮಾತ್ಮರ ಭೇದ. ಈ ಭೇದವು ತಾತ್ಕಾಲಿಕವೂ ಅಲ್ಲ, ಕಣ್ಣಿಗೆ ತೋರುವ ಮಾಯೆಯೂ ಅಲ್ಲ. ಇದು ಬದಲಿಸಲಾಗದ ವಸ್ತುವಿನ ಸಹಜ ಧರ್ಮ. ಇದು ಪ್ರಕೃತಿ ನಿಯಮ, ಸಹಜಗುಣ. ಈ ಅಂಶಗಳನ್ನು ವಿಶದವಾಗಿ, ವೈಜ್ಞಾನಿಕವಾಗಿ ಬೋಧಿಸಿದವರು ಮಧ್ವಾಚಾರ್ಯರು.

ಅದುವರೆಗೆ ಹರಡಿ ಪ್ರಚಲಿತವಿದ್ದ ಸಿದ್ಧಾಂತಗಳಲ್ಲಿ ಕೆಲವು ತಾತ್ವಿಕವಾದ ವಿರೋಧಾಭಾಸದ ಕಲ್ಪನೆಗಳು, ಗೊಂದಲಗಳು ಹುಟ್ಟಿಕೊಂಡುಬಿಟ್ಟಿದ್ದವು. ಮಧ್ವಾಚಾರ್ಯರು ಅವುಗಳನ್ನು ತಮ್ಮ ಸಮನ್ವಯದಿಂದ ಸಮಿಕರಿಸಿ ಗೊಂದಲಗಳನ್ನು ನಿವಾರಿಸಿಕೊಟ್ಟರು.

೧) ಭಗವಂತನು ಸಾಕಾರನೂ ಹೌದು, ನಿರಾಕಾರನೂ ಹೌದು, ನಮ್ಮ ಕಲ್ಪನೆಗೆ ಎಟುಕುವಂಥ ಭೌತಿಕ ಶರೀರ ಅವನದ್ದಲ್ಲವಾದ್ದರಿಂದ ಅವನು ನಿರಾಕಾರ. ಜ್ಞಾನಾನಂದಮಯ ಶರೀರನಾಗಿ ಅವನು ಸಾಕಾರ. ಅವನು ಸಗುಣನೂ ಹೌದು, ನಿರ್ಗುಣನೂ ಹೌದು, ಸಕಲ ಕಲ್ಯಾಣಗುಣ ಪೂರ್ಣನಾದ್ದರಿಂದ ಅವನು ಸಗುಣನು. ಭೌತಿಕಗುಣಗಳಿಂದ ದೂರನಾದ್ದರಿಂದ ಅವನು ನಿರ್ಗುಣನು.

೨) ಈ ಜಗತ್ತು ಮಾಯಾಸೃಷ್ಟಿಯಲ್ಲ. ಇದು ಪರಮಾರ್ಥವಾದ ಸತ್ಯ. ಇದು ಅಧೀನವಾದ ಸತ್ಯ. (Dependent Reality) ಭಗವಂತನಿಂದ ಸೃಷ್ಟಿಗೊಂಡು ಅವನಿಂದ ನಿಯತವಾದ, ಅವನಿಗೆ ಅಧೀನವಾಗಿರುವ ಸತ್ಯ.

೩) 'ಅಜ್ಞಾನಿಗಳಿಗೆ ಕರ್ಮಯೋಗ, ಜ್ಞಾನಿಗಳಿಗೆ ಜ್ಞಾನಯೋಗ' ಎಂಬ ವಿಭಾಗವೇ ಅಸಂಗತವಾದುದು, ಜ್ಞಾನಯೋಗದ ಹಾದಿಯು ಕರ್ಮವಿರೋಧಿಯಲ್ಲ. ಕರ್ಮವಿಲ್ಲದ ಜ್ಞಾನ ಪ್ರಯೋಗಕ್ಕೆ ಇಳಿಸದ ಬೌದ್ಧಿಕ ಕಸರತ್ತು. ಜ್ಞಾನವಿಲ್ಲದ ಕರ್ಮಕುರುಡು. ಅರಿಯಬೇಕು, ಅರಿತು ಆಚರಿಸಬೇಕು.

೪) ಆತ್ಮದ ಅರಿವೇ ಕೊನೆಯ ಸಾಕ್ಷಾತ್ಕಾರವಲ್ಲ. ಆತ್ಮ ಸಾಕ್ಷಾತ್ಕಾರವಾದಾಗ (Self realisation) ತನ್ನ ಅರಿವು ತನಗಾಗುತ್ತದೆ. ಹೀಗೆ ತನ್ನನ್ನು ತಾನು ಕಂಡುಕೊಂಡವನಿಗೆ ಅದರಾಚೆಗಿರುವ ಪರಮಾತ್ಮನ

ಸಾಕ್ಷಾತ್ಕಾರದ ದಾರಿ ಸುಗಮವಾಗುತ್ತದೆ. (God realisation) ಮೊದಲು ಅಹಂತತ್ವದ ಸಾಕ್ಷಾತ್ಕಾರ. ಅನಂತರ ಸಃ ಎಂಬ ಪರತತ್ವದ ಸಾಕ್ಷಾತ್ಕಾರ. ಇದೇ'ಸೋಹಂ' ತತ್ವದ ತಿರುಳು.

ಮಧ್ವಾಚಾರ್ಯರು ಹೀಗೆ ತಮ್ಮ 'ತತ್ವವಾದ'ದಲ್ಲಿ ಬಹು ಮುಖ್ಯದ ಕೊಡುಗೆಯಾಗಿ ನೀಡಿದ್ದೆಂದರೆ ವ್ಯಕ್ತಿ ವೈಶಿಷ್ಟ್ಯವಾದ ಮತ್ತು ಸ್ವಭಾವವಾದ. ಒಂದು ವಸ್ತುವಿನಂತೆ ಇನ್ನೊಂದು ವಸ್ತುವಿಲ್ಲ. ಒಂದು ಜೀವದಂತೆ ಮತ್ತೊಬ್ಬ ಜೀವನಿಲ್ಲ. ಒಬ್ಬನ ಸ್ವಭಾವದಂತೆ ಮತ್ತೊಬ್ಬನ ಸ್ವಭಾವವಿಲ್ಲ. ಪ್ರತಿಯೊಂದಕ್ಕೂ ಪ್ರತಿಯೊಬ್ಬ ಜೀವಕ್ಕೂ ತನ್ನದೇ ಆದ ವೈಶಿಷ್ಟ್ಯ, ಸ್ವಭಾವ, ವ್ಯಕ್ತಿತ್ವವಿದೆ. ಈ ವ್ಯಕ್ತಿತ್ವದ ಪೂರ್ಣವಿಕಾಸವೇ ಜೀವನದ ಗುರಿ. ಜೀವವು ಭಗವಂತನ ಅಧೀನನಾಗಿ ತನ್ನ ವ್ಯಕ್ತಿತ್ವವನ್ನು ಪೂರ್ಣ ಪ್ರಮಾಣದಲ್ಲಿ ವಿಕಸನಗೊಳಿಸಿಕೊಳ್ಳುವ ಕಮ್ಮಟಶಾಲೆಯೇ ಈ ಲೋಕದ ಬದುಕು. ವಿಕಸಿತ ವ್ಯಕ್ತಿತ್ವದ ಸವಿಯನ್ನು ಸವಿಯುವ ಪೂರ್ಣಾವಸ್ಥೆಯೇ ಮುಕ್ತಿ. ಅವರವರ ಸ್ವಭಾವದ ಪೂರ್ಣಾಭಿವ್ಯಕ್ತಿಯೇ ಅವರವರ ಸಿದ್ಧಿ. ಮುಕ್ತಿಯೆಂದರೆ ದೈವವೇ ಆಗಿಬಿಡುವುದಲ್ಲ. ಮುಕ್ತಿಯಲ್ಲೂ ಜೀವ ತನ್ನ ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಂಡು ಭಗವಂತನ ಅಧೀನದಲ್ಲಿ ಸನ್ನಿಧಿಯಲ್ಲಿ ಇರುತ್ತಾನೆ.

ಸಾಮಾಜಿಕವಾಗಿ ಬಹು ಮಹತ್ವದ ಸಂಗತಿಯನ್ನು ಮಧ್ವಾಚಾರ್ಯರು ಹೇಳಿದರು. ಅದೆಂದರೆ ಜಾತಿ ಬೇರೆ, ವರ್ಣ ಬೇರೆ ಎಂದು ಸಾರಿದುದು. ವರ್ಣವೆಂದರೆ ಬಣ್ಣ, ಆತ್ಮದ ಬಣ್ಣ ಎಂದರೆ ಜೀವದ ಸ್ವಭಾವ, ಜಾತಿ ಎಂದರೆ ದೇಹದ ವ್ಯವಸ್ಥೆಗೆ ಸಂಬಂಧಿಸಿದ್ದು. ಜೀವಕ್ಕೆ ಜಾತಿ ಭೇದವಿಲ್ಲ. ಆಯಾ ಜೀವದ ಸ್ವಭಾವ, ವ್ಯಕ್ತಿತ್ವದಿಂದ ವ್ಯಕ್ತವಾಗುವಂಥದ್ದು ವರ್ಣ ಎಂದು ಅವರ ದೀರ್ಘ ವಿಶ್ಲೇಷಣೆ ಇದೆ.

ಮಧ್ವಾಚಾರ್ಯರದ್ದೇ ಆದ ವಿಶೇಷ, ವಿಶಿಷ್ಟ ಚಿಂತನೆಯ ಒಂದು ತುಣುಕೆಂದರೆ ಜೀವದ ಲಿಂಗಬೇಧವನ್ನು ಕುರಿತು ಹೇಳಿದುದು! ಜೀವಕ್ಕೆ ಲಿಂಗಭೇದವಿಲ್ಲ ಎಂದೇ ಎಲ್ಲರೂ ಅದುವರೆಗೆ ತಿಳಿದಿದ್ದಾಗ "ಅದು ತಪ್ಪು, ಗಂಡು ಜೀವ ಗಂಡು ಜೀವವೇ, ಹೆಣ್ಣು ಜೀವ ಹೆಣ್ಣು ಜೀವವೇ, ಜೀವದಲ್ಲಿ ಇಲ್ಲದೆ ಜಡದೇಹಕ್ಕೆ ಲಿಂಗ ಬರುವುದಿಲ್ಲ. ಚೇತನದ ಸ್ಪರ್ಶದಿಂದ ಜಡಕ್ಕೆ ಲಿಂಗ ಬರುವುದು. ಹೆಣ್ಣುಜೀವ, ಗಂಡು ಜೀವ ಎನ್ನುವುದು ಆಯಾ ಜೀವದ ಸಹಜಧರ್ಮ, ಎರಡೂ ಮೋಕ್ಷ ಯೋಗ್ಯ ಜೀವರುಗಳೇ" ಎಂದು ಸಾರಿದರು.

ಮಧ್ವಾಚಾರ್ಯರ ಚಾತುರ್ವರ್ಣ್ಯದ ಕುರಿತಾದ ಚಿಂತನೆ ಈಗಿನ ಸಾಮಾಜಿಕ ಜಾತಿ ಪದ್ಧತಿಯ ಕಲ್ಪನೆಗಿಂತ ಭಿನ್ನವಾದುದು. ಗೀತೆಯಲ್ಲಿ ಕೃಷ್ಣನ ಮೂಲಕ ವ್ಯಕ್ತವಾಗಿರುವ ಚಾತುರ್ವರ್ಣ್ಯದ ಅರ್ಥವೂ ಇದೇ. ವರ್ಣವೆಂದರೆ ಜೀವಾತ್ಮದ ಸ್ವಭಾವವೆನ್ನುವ ಅರ್ಥದ ವಿಂಗಡನೆ.

ಮಧ್ವರ ಗ್ರಂಥಗಳು

ತತ್ವಜ್ಞಾನ ಪರಂಪರೆಯಲ್ಲಿ 'ಕಿರಿದರಲ್ಲಿ ಪಿರಿದರ್ಥವಂ' ಹೇಳಿರುವ ಮಧ್ವಾಚಾರ್ಯರ ಗ್ರಂಥಗಳ ವ್ಯಾಪ್ತಿ, ವಿಷಯದ ಹರವು ಅನನ್ಯವಾಗಿದೆ . ಭಾರತೀಯ ಜ್ಞಾನ ಪರಂಪರೆಯ ಎಲ್ಲ ಮುಖಗಳನ್ನೂ ಅವರು ವೇದಾಂತಕ್ಕೆ ಸಮನ್ವಯಿಸಿ ತೋರಿಸಿಕೊಟ್ಟರು. ಪ್ರಸಿದ್ಧ ಇತಿಹಾಸ ಗ್ರಂಥಗಳಾದ ರಾಮಾಯಣ, ಮಹಾಭಾರತಗಳ ಅರ್ಥನಿರ್ಣಯ ಮತ್ತು ವಿಮರ್ಶಾತ್ಮಕ ಅಧ್ಯಯನಕ್ಕಾಗಿ "ಮಹಾಭಾರತ ತಾತ್ಪರ್ಯ ನಿರ್ಣಯ" ಎಂಬ ಬೃಹದ್ ಗ್ರಂಥ ರಚಿಸಿದರು. ಜೊತೆಗೆ ಮಹಾಭಾರತ ತಾತ್ಪರ್ಯ ಎಂಬ ಪುಟ್ಟ ಯಮಕ ಗ್ರಂಥ ರಚನೆಯ ಮೂಲಕ ಮಹಾಭಾರತದ ನಾಯಕ ಕೃಷ್ಣ ಎನ್ನುವುದನ್ನು ಸಮರ್ಥಿಸಿದ್ದಾರೆ. 'ಮಹಾಭಾರತ ತಾತ್ಪರ್ಯ ನರ್ಣಯ'ವೆನ್ನುವುದು ಅನೇಕ ಒಳನೋಟಗಳನ್ನು ತೆರೆದುಕೊಡುವ ಒಂದು ಸಂಶೋಧನಾತ್ಮಕ ಗ್ರಂಥವಾಗಿದೆ. ಅನೇಕ ಗ್ರಂಥಗಳ ತೌಲನಿಕ ಅಧ್ಯಯನ, ನೂರಾರು ಮೂಲಪ್ರತಿಗಳ ತುಲನೆಯಿಂದ ಮೂಲಪಾಠದ, ಆ ಮೂಲಕ ಮೌಲಿಕ ಅರ್ಥದ ನಿರ್ಧಾರ ಇವನ್ನೆಲ್ಲ ಒಳಗೊಂಡಿರುವ ಸಂಶೋಧನಾತ್ಮಕ ಕೃತಿ ಇದು.

ಪ್ರಸ್ಥಾನತ್ರಯಗಳಲ್ಲಿ ಒಂದಾದ ಭಗವದ್ಗೀತೆಯ ಮೇಲೆ ಎರಡು ಗ್ರಂಥಗಳ ರಚನೆ. ಒಂದು ಗೀತಾಭಾಷ್ಯ ಮತ್ತೊಂದು ಗೀತಾ ತಾತ್ಪರ್ಯ. ಭಾಗವತದ ನೆಪದಲ್ಲಿ ಸಮಸ್ತ ಸಾತ್ವಿಕ ಪುರಾಣಗಳ ಅರ್ಥನಿರ್ಣಯಕ್ಕಾಗಿ "ಭಾಗವತ ತಾತ್ಪರ್ಯ ನಿರ್ಣಯ"ದ ರಚನೆ. ಮೊತ್ತ ಮೊದಲ ಬಾರಿಗೆ ಪುರಾಣಗಳನ್ನು ವೈದಿಕ ಸಾಹಿತ್ಯದೊಡನೆ ಸಮನ್ವಯಿಸಿ ಭಾಗವತ ಮಹಾಪುರಾಣದ ಟೀಕೆಯ ರಚನೆ ಮಾಡಿದವರು ಹಾಗೂ ಪುರಾಣಗಳಿಗೆ ಟೀಕೆ ರಚಿಸಿದ ಏಕಮೇವ ಆಚಾರ್ಯಪುರುಷರೆನ್ನಿಸಿಕೊಂಡರು.

ವೇದಕ್ಕೆ ಭಾಷ್ಯ ರಚಿಸಿದವರಲ್ಲಿ ಮಧ್ವಾಚಾರ್ಯರೇ ಮೊದಲಿಗರು. ಋಗ್ವೇದದ ಮೊದಲ ೪೦ ಸೂಕ್ತಗಳಿಗೆ ಆಧ್ಯಾತ್ಮಪರ ಅರ್ಥ ವಿವರಿಸಿ ಇಡೀ ವೈದಿಕ ಸಾಹಿತ್ಯದ ಒಂದು ಹೊಸ ಮುಖವನ್ನೇ ತೆರೆದು ತೋರಿದರು. ಅದುವರೆಗಿನ ಭಾಷ್ಯಗಳು ವೇದದ ಯಾಜ್ಞಿಕ ಮುಖವನ್ನಷ್ಟೆ ವಿವರಿಸಿದ್ದರೆ, ಅದರ ಆಧ್ಯಾತ್ಮಿಕ ಅಂತರ್ಮುಖತೆಯನ್ನು ಬೆಳಕಿಗೆ ಮೊದಲು ತಂದವರು ಮಧ್ವಾಚಾರ್ಯರು.[*೩]

ಅರಣ್ಯಕಗಳಲ್ಲಿ ಹೆಚ್ಚು ಮುಖ್ಯವೂ, ಪ್ರಸಿದ್ಧವೂ ಆದ ಐತರೇಯ ಅರಣ್ಯಕದ ಒಂದು ವಿಶಿಷ್ಟ ಖಂಡದ ಅರ್ಥ ನಿರ್ಣಯಕ್ಕಾಗಿ "ಖಂಡಾರ್ಥ ನಿರ್ಣಯ" (ಈಗ 'ಕರ್ಮನಿರ್ಣಯ'ವೆಂದೇ ಪ್ರಸಿದ್ಧಿ ಪಡೆದಿದೆ)ವೆಂಬ ಗ್ರಂಥರಚನೆಯ ಮೂಲಕ ಕರ್ಮಪರವೆಂದು ನಂಬಲಾಗಿದ್ದ ಸಮಗ್ರ ಬ್ರಾಹ್ಮಣ, ಅರಣ್ಯಕಗಳ ಆಧ್ಯಾತ್ಮಿಕ ಮುಖವನ್ನು ಪ್ರಕಾಶಗೊಳಿಸಿದರು. ಕರ್ಮಕಾಂಡವನ್ನು ಜ್ಞಾನಕಾಂಡದೊಡನೆ ಸಮನ್ವಯಿಸಿ ಪೂರ್ವಮೀಮಾಂಸೆ, ಉತ್ತರ ಮೀಮಾಂಸೆಗಳಿಗೆ ಇದರಲ್ಲಿ ಏಕಮುಖತೆಯನ್ನು ಸಾಧಿಸಿ ತೋರಲಾಗಿದೆ. ಈ ಗ್ರಂಥದಲ್ಲಿ ವೇದಾರ್ಥನಿರ್ಣಯದಲ್ಲಿ ಮಧ್ವರು ಒಂದು ಮಹತ್ವದ ಸಿದ್ಧಾಂತವನ್ನೇ ಮಂಡಿಸಿದ್ದಾರೆ. "ವೇದದಲ್ಲಿ ಬಳಕೆಯ ರೂಢಾರ್ಥದ ಜತೆಗೆ ಯೌಗಿಕ ಅರ್ಥವನ್ನು ಬಳಸಬೇಕು. ಅದರಲ್ಲಿ ಯೌಗಿಕವಾದ

ಅರ್ಥಕ್ಕೆಯೆ (Etymological meaning) ವೇದದಲ್ಲಿ ಮಹತ್ವ" [ಉದಾಹರಣೆಗೆ: "ಅಗ್ನಿ ಎಂದರೆ ಬರಿಯ ಬೆಂಕಿ ಎಂದು ಅರ್ಥವಲ್ಲ. ಅಗ+ನಿ, ಎಂದರೆ ಸ್ವತಃ ಚಲಿಸಲಾರದ ಪರತಂತ್ರವಾದ ವಿಶ್ವಕ್ಕೆ ಚಲನೆಯನ್ನು ಕೊಡುವ ಶಕ್ತಿ ಎನ್ನುವುದೇ ನಿಜವಾದ ಮೌಲಿಕ ಅರ್ಥ"- ಬನ್ನಂಜೆ ಗೋವಿಂದಾಚಾರ್ಯ - ಆಚಾರ್ಯ ಮಧ್ವರ ಬದುಕು-ಬರೆಹ]

ಇಡೀ ಒಟ್ಟು ವೇದರಾಶಿಯ, ಅರಣ್ಯಕದ ಸಾರಭಾಗವೆನಿಸಿದ, ಪ್ರಸ್ಥಾನತ್ರಯಗಳಲ್ಲಿ ಎರಡನೆಯ ಗ್ರಂಥರಾಶಿ ಎನಿಸಿದ ದಶೋಪನಿಷತ್ತುಗಳಿಗೆ ಸಾಕಷ್ಟು ವಿಸ್ತೃತ ಭಾಷ್ಯವನ್ನು ನೀಡಿದರು. ಸಮಗ್ರ ಐತರೇಯೋಪನಿಷತ್ ಕಾಂಡಕ್ಕೆ ವ್ಯಾಖ್ಯಾನ ರಚಿಸಿದರು. ಸಮಗ್ರ ವೇದಾರ್ಥ ನಿರ್ಣಯಕ್ಕಾಗಿ ಬಾದರಾಯಣರು ರಚಿಸಿದ ವೇದಾಂತ ಸೂತ್ರಗಳಾದ 'ಬ್ರಹ್ಮಸೂತ್ರ'ಗಳು ಗ್ರಂಥಕ್ಕೆ ಮಧ್ವಾಚಾರ್ಯರು ನಾಲ್ಕು ಟೀಕೆಗಳನ್ನು ರಚಿಸಿದರು. ಬ್ರಹ್ಮಸೂತ್ರ ಭಾಷ್ಯ, ಅನುವ್ಯಾಖ್ಯಾನ, ನ್ಯಾಯವಿವರಣ, ಸರ್ವಶಾಸ್ತ್ರಾರ್ಥ ಸಂಗ್ರಹ ಇವೇ ಆ ನಾಲ್ಕು ಪ್ರಸಿದ್ಧ ಟೀಕೆಗಳು. ಕೊನೆಯದು 'ಅಣುಭಾಷ್ಯ'ವೆಂದೂ ಪ್ರಸಿದ್ಧಿಯಾಗಿದೆ. ಹೀಗೆ ಇತಿಹಾಸ, ಪುರಾಣ, ವೇದ ಮತ್ತು ಪ್ರಸ್ಥಾನತ್ರಯಗಳ ಮೇಲೆ ಒಟ್ಟು ಇಪ್ಪತ್ತೊಂದು ಗ್ರಂಥಗಳ ರಚನೆಯಾಗಿದೆ.

ತತ್ವಶಾಸ್ತ್ರದ ವಿವಿಧ ಪ್ರಕ್ರಿಯೆಗಳನ್ನು, ಪ್ರಮೇಯಗಳನ್ನು ತಿಳಿಸುವುದಕ್ಕಾಗಿ ೯ ಪ್ರಕರಣ ಗ್ರಂಥಗಳನ್ನು ರಚಿಸಿದ್ದಾರೆ. ಆಗಮಶಾಸ್ತ್ರಕ್ಕೆ ಸಂಬಂಧಿಸಿದಂತೆ "ತಂತ್ರಸಾರ ಸಂಗ್ರಹ"ವೆಂಬ ಮಹತ್ವದ ಗ್ರಂಥ ರಚಿಸಿದರು. ಇದು ಆಚಾರದ ಸಮಗ್ರ ಮುಖವನ್ನು ತೋರಿಸಿಕೊಡುತ್ತದೆ. 'ಸದಾಚಾರ ಸ್ಮೃತಿ' ಎಂಬ ನಿತ್ಯವಿಧಿಗಳನ್ನು ತಿಳಿಸುವ ಗ್ರಂಥ, ಯತಿಧರ್ಮವನ್ನು ನಿರೂಪಿಸುವ ಮತ್ತೆರಡು ಗ್ರಂಥಗಳು, ಹಾಗೂ ಏಕಾದಶೀ ನಿರ್ಣಯಕ್ಕಾಗಿ "ತಿಥಿನಿರ್ಣಯ" ರಚಿಸಿದರು. ಕೃಷ್ಣ ಜಯಂತಿಯ ವಿಧಿಗಳ ವಿವರಣೆಯ "ಜಯಂತೀನಿರ್ಣಯ", "ಕೃಷ್ಣಾಮೃತ ಮಹಾರ್ಣವ" ಎಂಬ ಮತ್ತೊಂದು ಕೃತಿ. ಇವಲ್ಲದೆ ನಖಸ್ತುತಿ, "ದ್ವಾದಶ ಸ್ತೋತ್ರಗಳು" 'ಕಂದುಕಸ್ತುತಿ' ಅಥವಾ 'ಶ್ರೀಕೃಷ್ಣಪದ್ಯ'.

ಹೀಗೆ ಮಧ್ವಾಚಾರ್ಯರು ರಚಿಸಿದ ೪೦ ಗ್ರಂಥಗಳು ನಮಗೆ ಉಪಲಬ್ಧವಿವೆ.

ನಾರಾಯಣನೊಬ್ಬನೆ ಎಲ್ಲ ಸದಾಗಮಗಳಿಂದ ಮುಖ್ಯ ಪ್ರತಿಪಾದ್ಯನಾಗಿ, ಚರಾಚರಾತ್ಮಕವಾದ ಈ ಕ್ಷರ ಪ್ರಪಂಚವನ್ನೂ, ಅಕ್ಷರವಾದ ಶ್ರೀತತ್ವವನ್ನೂ ಮೀರಿನಿಂತ ಸರ್ವೋತ್ತಮನು; ದೋಷಲೇಶದ ಸ್ಪರ್ಶವೂ ಇಲ್ಲದ ಗುಣಪೂರ್ಣ ತತ್ವನು" ಎಂದು ಸಾರುತ್ತ ಹರಿಸರ್ವೋತ್ತಮ ತತ್ವವನ್ನು ಸಾರಿ ಪ್ರಚುರ ಪಡಿಸಿದವರು ಮಧ್ವಾಚಾರ್ಯರು.

ಮನುಕುಲಕ್ಕೆ ಮಧ್ವರ ಒಟ್ಟು ಸಂದೇಶ

ಮಧ್ವಾಚಾರ್ಯರು ನೀಡಿದ ಪ್ರಮುಖ ಸಂದೇಶಗಳೆಲ್ಲ ಮುಂದೆ ೧೬ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಬಂದಂಥ ಹರಿದಾಸ ಪಂಥದಿಂದ ಜನಸಾಮಾನ್ಯರಿಗೆ, ಕನ್ನಡ ಭಾಷೆಯ ಮೂಲಕವೇ ತಲುಪುವ ಹಾಗಾದುದನ್ನು ಕಾಣುತ್ತೇವೆ. ಮಧ್ವಾಚಾರ್ಯರ ತತ್ವವಾದವನ್ನು, ಭಕ್ತಿಪಂಥವನ್ನು ಕನ್ನಡದ ಮನಮನೆಗಳಿಗೆ ತಲುಪಿಸಿದ ಹರಿಕಾರರೆನಿಸಿ ಹರಿದಾಸರು ಮಾನವೀಯತೆಯ, ನೈತಿಕತೆಯ ಮೌಲ್ಯಗಳನ್ನು ತಿಳಿಹೇಳಿದವರಾದರು. ಮಧ್ವರ ಬೋಧನೆಗಳು ಮುಂದೆ ಕಾಲಾನುಗತಿಯಲ್ಲಿ ಕಾಣಿಸಿಕೊಂಡ ವ್ಯಾಸಕೂಟದ ಪ್ರಮುಖ ನೇತಾರರಲ್ಲಿ ಹಾಗೂ ದಾಸಕೂಟದ ಹರಿದಾಸರಲ್ಲಿ ಟಿಸಿಲೊಡೆದು ಫಲರೂಪಿಗಳಾದವು.

ತಮ್ಮ ಸಾಧನೆ, ಬೋಧನೆಗಳ ಮೂಲಕ ಮಧ್ವಾಚಾರ್ಯರು ನೀಡಿದ ಆಧ್ಯಾತ್ಮದರ್ಶನದ ಸಾರ ಮತ್ತು ಸಂದೇಶಗಳನ್ನು ಹೀಗೆ ಸಂಗ್ರಹಿಸಿಕೊಳ್ಳಬಹುದಾಗಿದೆ:

೧) ಭಗವಂತನ ಹಿರಿಮೆ, ಮಹಿಮೆಗಳನ್ನರಿತು ಅವನನ್ನು ಅನನ್ಯವಾಗಿ ಪ್ರೀತಿಸಬೇಕು. ಈ ವಿಚಿತ್ರವಾದ ವಿಶ್ವ ಅವನ ಸೃಷ್ಟಿ ಎಂದು ಜಗತ್ತನ್ನೂ ಪ್ರೀತಿಸಬೇಕು. ವಿಶ್ವವನ್ನು, ಇಲ್ಲಿಯ ಬದುಕನ್ನು ನಿರಾಕರಿಸುವುದೆಂದರೆ ಅವನನ್ನೇ ನಿರಾಕರಿಸಿದಂತೆ.

ಭಗವಂತನ ರಾಜ್ಯದ ಪ್ರಜೆಗಳಾದ ನಾವು ದುಃಖಿತರಿಗೆ ನೆರವಾಗುವುದು ಭಗವಂತನಿಗೆ ಸಲ್ಲಿಸುವ ಕಂದಾಯ ಎನ್ನುವ ಭಾವದಿಂದ ಕರ್ತವ್ಯಪಾರಾಯಣರಾಗಬೇಕು. ಹೀಗೆ ಜ್ಞಾನ, ಕರ್ಮ, ಭಕ್ತಿಯೋಗಗಳ ಸಮನ್ವಯದಲ್ಲಿ ಬದುಕುವುದೇ ಸಮಗ್ರವಾದ ಜೀವನಯೋಗ.

೨) "ಅನುಭವಕ್ಕೆ ಒದಗದ ಶಾಸ್ತ್ರ ಬರಿಯ ಶುಷ್ಕ ಪಾಂಡಿತ್ಯವಾಗಿಬಿಡುತ್ತದೆ. ಶಾಸ್ತ್ರಜ್ಞಾನವಿಲ್ಲದ ಅನುಭವ ಬರಿಯ ಐಹಿಕದ ಕುರುಡು ಪ್ರಜ್ಞೆ. ಆದ್ದರಿಂದ ಎರಡನ್ನೂ ಮೇಳವಿಸಿಕೊಂಡು ಒಂದಕ್ಕೊಂದು ವಿರೋಧವಾಗದಂತೆ ಪ್ರಜ್ಞೆಯನ್ನು ಬೆಳೆಸಿಕೋ."[*೬] ಯಾವುದೇ ಶಾಸ್ತ್ರದ ಮಾತನ್ನು ನಾವು ಅನುಭವದಿಂದ ಆತ್ಮಸಾತ್ ಮಾಡಿಕೊಂಡಾಗ ಮಾತ್ರವೇ ಅದು ನಮಗೆ ಶ್ರೇಷ್ಠ ಪ್ರಮಾಣವಾಗುತ್ತದೆ.[*೭]

೩) ಭಗವಂತನನ್ನು ನೆನಪಿಡಬೇಕು ಎನ್ನುವುದೇ ಮಾನವನಿಗೆ ಮೂಲಧರ್ಮ. ಇದಕ್ಕೆ ಪೋಷಕವಾದದ್ದೆಲ್ಲ ಧರ್ಮ. ಭಗವಂತನನ್ನು ಮರೆಯುವುದೇ ಮೂಲ ಅಧರ್ಮ. ಇದಕ್ಕೆ ಪೋಷಕವಾದದ್ದೆಲ್ಲ ಅಧರ್ಮ. (ಸ್ಮರ್ತವ್ಯಃ ಸತತಂ ವಿಷ್ಣುಃ ವಿಸ್ಮರ್ತವ್ಯೋನಜಾತುಚಿತ್। ಸರ್ವೇವಿಧಿ ನಿಷೇಧಾಃ ಸ್ಯುಃ ಏತಯೋರೇವ ಕಿಂಕರಾಃ॥– 'ಸದಾಚಾರಸ್ಮತಿ')

೪) ನಮ್ಮಿಂದ ಸಾಧ್ಯವಾಗದ ಯಾವ ಕರ್ಮಕಾಂಡವನ್ನು ಕೈ ಬಿಟ್ಟರೂ ಚಿಂತೆಯಿಲ್ಲ. ನಿರ್ವ್ಯಾಜವಾದ ಭಕ್ತಿಯಿಂದ ಭಗವಂತನನ್ನು ಭಜಿಸಿದರೆ ಸಾಕು. ಫಲಾಪೇಕ್ಷೆಯಿಂದ ನೂರಾರು ಕರ್ಮಕಾಂಡದ ಪ್ರಕ್ರಿಯೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಕರ್ಮಠರಿಗಿಂತ ನಿಜ ಭಕ್ತರೇ ಅವನ ಅನುಗ್ರಹಕ್ಕೆ ಪಾತ್ರರಾಗುವವರು. ಕರ್ಮಕ್ಕಿಂತ ಭಾವ ಮುಖ್ಯ; ಭಾವವಿಲ್ಲದ ಕರ್ಮಕ್ಕಿಂತ ಕರ್ಮವಿಲ್ಲದ ಭಾವವಾದರೂ ಮೇಲು. ಇದರಲ್ಲಿ ಯಾವ ಸಂಶಯವೂ ಬೇಡ.

೫) ಭಗವಂತನಲ್ಲಿ ಸದಾ ಅನನ್ಯ ಶರಣಾಗತಿ ಹೊಂದಿ ನಿನ್ನ ಪಾಲಿಗೆ ಒದಗಿ ಬಂದ ಕರ್ಮಗಳನ್ನು ಮಾಡುತ್ತಿರು, ದೊರೆತ ಫಲವನ್ನು ಗೊಣಗಿಡದೆ ಉಣ್ಣುತ್ತಿರು, ಈ ಜಗತ್ತಿಗೆ ಹರಿಯೇ ಪರದೈವ, ಹರಿಯೇ ನಿನ್ನ ಗುರು ಮತ್ತು ಆಸರೆ. ಈ ಜಗತ್ತಿನ ನೂರೆಂಟು ರೇಜಿಗೆ, ರಗಳೆಗಳ ಸಂಸರ್ಗವನ್ನು ಸಾಕುಮಾಡಿ ನಿನ್ನ ಮನಸ್ಸನ್ನು ಜಗತ್ತಿನ ತಾಯಿಯೂ, ತಂದೆಯೂ ಆಗಿರುವ ಹರಿಯ ಚರಣಗಳಲ್ಲಿ ನೆಲೆಗೊಳಿಸು.[೮]

೬) ಶರಣಾಗಿ ಭಗವಂತನನ್ನು ಅರಿಯಲೆತ್ನಿಸು. ಅರಿತು, ಅರಿಯುತ್ತ ಮತ್ತೆ ಶರಣಾಗುತ್ತಿರು. ಅವನನ್ನು ಪ್ರೀತಿಸು. ಈ ಅರಿವೇ ಆನಂದದ ಕೀಲಿಕೈ, ಇದನ್ನು ಪಡೆದುಕೋ.

ಇದಿಷ್ಟೂ ಸ್ಥೂಲವಾಗಿ ಮಧ್ವಾಚಾರ್ಯರ ಆಧ್ಯಾತ್ಮದರ್ಶನದ ಸಾರ. ಈ ಸಾರ ಸಂದೇಶವೇ ಹದಿನಾರನೇ ಶತಮಾನದ ವ್ಯಾಸಕೂಟ ಪ್ರಮುಖರ ಮತ್ತು ದಾಸಕೂಟದವರ ಕೀರ್ತನೆಗಳಲ್ಲಿ ತಿಳಿಗನ್ನಡ ತೊರೆಯಾಗಿ ಹರಿದು ಬಂದುದನ್ನು ಮುಂದೆ ಕಾಣಲಿದ್ದೇವೆ. ಹರಿಪಾರಮ್ಯವನ್ನು, ಕೃಷ್ಣ ಭಕ್ತಿಯ ಆಳವನ್ನು, ಶಾಸ್ತ್ರಾರ್ಥಗಳಿಗಿಂತ ಮಿಗಿಲಾಗಿ ಹೃದಯದ ಭಾವ ಭಕ್ತಿಗೆ ಪ್ರಾಶಸ್ತ್ಯ ಸಂದುದನ್ನು, ಭಗವಂತನನ್ನು ಪ್ರೀತಿಯಿಂದ ಸ್ತುತಿಸುವ, ಗುಣಗಾನ ಮಾಡುವ ಭಕ್ತಿವಶ್ಯತೆಯನ್ನು ದಾಸಕೂಟದವರಲ್ಲಿ ಅನನ್ಯವಾಗಿ ಕಾಣುತ್ತೇವೆ. ಈ ಎಲ್ಲಾ ಹರಿಪ್ರೀತಿಗೆ ಹರಿಕಾರರಂತೆ ಭಕ್ತಿಯ ದಾರಿ ನಿರ್ಮಾಣಮಾಡಿಕೊಟ್ಟವರು ಮಧ್ವಾಚಾರ್ಯರು. ಹರಿಭಕ್ತಿಯ ಬೀಜಾಂಕುರವಾದುದು ಮಧ್ವಾಚಾರ್ಯರಿಂದ. ಅದು ಮಹಾನ್ ವೃಕ್ಷವಾಗಿ ಹೂಹಣ್ಣು ಅರಳಿಸಿ ನಿಂತಿದ್ದು ವ್ಯಾಸಕೂಟ ಹಾಗೂ ದಾಸಕೂಟದವರ ಶ್ರಮ, ಕ್ರಮ, ಕರ್ಮಗಳಿಂದ.

ಬೇರೆ ಬೇರೆ ಪ್ರದೇಶಗಳಿಂದ ಮಧ್ವಾಚಾರ್ಯರ ಶಿಷ್ಯತ್ವ ವಹಿಸಲು ಬಂದು ಅನೇಕಮಂದಿ ಅವರಿಂದ ಸನ್ಯಾಸದೀಕ್ಷೆ ಪಡೆದವರಿದ್ದಾರೆ. ಅನೇಕಮಂದಿ ಗೃಹಸ್ಥ ಶಿಷ್ಯರು ಕೂಡ. ಈ ಪೈಕಿ ತನ್ನ ಸನ್ಯಾಸೀ ಶಿಷ್ಯ ನರಹರಿತೀರ್ಥರ ಮೂಲಕ ಭಾಗವತರಾಟ, ದಶಾವತಾರದ ಆಟ ಎಂದೆಲ್ಲ (ಈಗ ಹೆಸರಾದ ಯಕ್ಷಗಾನ ಬಯಲಾಟದ) ಕಲಾಮಾಧ್ಯಮವನ್ನು ಬಳಕೆಗೆ ತಂದು ಅನಕ್ಷರಸ್ಥ ಹಳ್ಳಿಯ ಜನರನ್ನೂ ಭಗವಂತನ ಮಹಿಮೆ, ಪಾರಮ್ಯ ತಲುಪುವಂತೆ ಮಾಡಿದವರು ಮಧ್ವಾಚಾರ್ಯರೇ ಎನ್ನುವ ಒಂದು ಅಭಿಪ್ರಾಯವಿದೆ. ಇದೇ ಕಲೆ ಬೆಳೆದು ಕನ್ನಡದ ಜನಪ್ರಿಯ ಯಕ್ಷಗಾನ, ಆಂಧ್ರದ ಕೂಚುಪುಡಿ ನೃತ್ಯದ ಬೆಳವಣಿಗೆಗೆ ಕಾರಣವಾಯಿತು ಎಂದು ಈ ಅಭಿಪ್ರಾಯ ಸೂಚಿಸುತ್ತದೆ.[೬]

ಸ್ವತಃ ತಾವೇ ಹಿರಿಯ ಸಂಗೀತಕಾರರೂ, ವಾಗ್ಗೇಯಕಾರರೂ ಆಗಿದ್ದು ಮಧ್ವಾಚಾರ್ಯರು ತಿಳಿಯಾದ ಸುಲಭ ಸಂಸ್ಕೃತದಲ್ಲಿ ಹಾಡುಗಬ್ಬಗಳನ್ನು ರಚಿಸಿ ಪ್ರಚುರ ಪಡಿಸಿದ್ದಲ್ಲದೆ ತನ್ನ ಶಿಷ್ಯರಿಂದ ಕನ್ನಡದಲ್ಲಿ ಕೀರ್ತನೆಗಳನ್ನು ಬರೆಯಿಸಿ ಭಾಗವತರಿಂದ ಅವುಗಳನ್ನು ಹಾಡಿಸುವ ಮೂಲಕ ಬಳಕೆಗೆ ತಂದರು. ಅವರ ಶಿಷ್ಯ ನರಹರಿತೀರ್ಥರು ಪ್ರಾರಂಬಿಸಿದ ಈ ಕೀರ್ತನ ಸಾಹಿತ್ಯ ಪರಂಪರೆಯೇ ಮುಂದೆ ಶ್ರೀಪಾದರಾಜರು. ಶ್ರೀವ್ಯಾಸತೀರ್ಥರು ಮತ್ತು ಶ್ರೀವಾದಿರಾಜರು ಈ ಯತಿಗಳಿಂದ ಪರಿಪುಷ್ಟವಾಗಿ ಬೆಳೆದುಬಂದಿತು. ಶ್ರೀರಾಘವೇಂದ್ರಸ್ವಾಮಿಗಳ ತನಕವೂ ಕನ್ನಡ ಕೀರ್ತನ ಸಾಹಿತ್ಯ ರಚನೆಯ ಪರಂಪರೆ ಮುಂದುವರೆದು ಬಂದಿತು. ಈ ಎಲ್ಲ ಯತಿಗಳು ಹಾಕಿಕೊಟ್ಟ ಮೇಲ್ಪಂಕ್ತಿಯಲ್ಲೆ ದಾಸಕೂಟದ ಶ್ರೀಪುರಂದರದಾಸರು, ಕನಕದಾಸರು, ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರೇ ಮುಂತಾದ ಅನುಭಾವೀ ಸಂತರು ಮುಂದುವರೆದರು, ಭಕ್ತಿಭಾವದ ಪ್ರಚಾರ, ನೀತಿತತ್ವ ಬೋಧನೆಗಳನ್ನು ಹೃದಯಂಗಮವಾಗಿ ಕನ್ನಡನಾಡಿಗೆ ನೀಡಿದರು. ಭಗವಂತನನ್ನು ಪ್ರೀತಿಸುವ ಈ ಪರಂಪರೆಯ ಮೂಲ ಸಂಘಟಕರು ಮಧ್ವಾಚಾರ್ಯರು. ವೇದದ ಸಂದೇಶಗಳೆಲ್ಲ ಕನ್ನಡದ ಹಾಡುಹಾಡುಗಳಲ್ಲಿ ಮುಂದೆ ಮೂಡಿ ಬರಲು ಮೂಲ ಕಾರಣರಾದವರು, ಮೂಲ ಒರತೆಯಾಗಿ ಒದಗಿದವರು, ಮೂಲ ಸ್ಫೂರ್ತಿ ಸ್ಥಾನದಲ್ಲಿ ನಿಂತವರು ಮಧ್ವಾಚಾರ್ಯರು.

ಸನ್ಯಾಸದ ಕಾಠಿಣ್ಯವಿಲ್ಲದೆ, ಸಂಸಾರ ತೊರೆಯಬೇಕೆಂಬ ಹಿಂಸೆಯಿಲ್ಲದೆ, ವೈರಾಗ್ಯ, ಅನಾಸಕ್ತಿಯ ಕಠಿಣ ಸಂಸ್ಕಾರಗಳನ್ನು ಬಲವಂತವಾಗಿ ಹೇರದೆ, ಸಾಮಾನ್ಯರೂ ಅನುಸರಿಸಬಹುದಾದ ಸುಲಭಮಾರ್ಗವಾಗಿ ಭಕ್ತಿಪಂಥವು ಕರ್ನಾಟಕದಲ್ಲಿ ಹೀಗೆ ಜನಪ್ರಿಯವಾಯಿತು. ಭಕ್ತಿಮಾರ್ಗದ ಪ್ರಭಾವದಿಂದಾಗಿ ಜೈನಧರ್ಮವು ಕೂಡ ತನ್ನ ಕಡುಕಾಠಿಣ್ಯತರವಾದ ಸನ್ಯಾಸಮಾರ್ಗವನ್ನು ಬದಲಿಸಿ ಕ್ರಮೇಣ ಭಕ್ತಿ, ಶರಣಾಗತಿ ಭಾವಗಳನ್ನು ಅಳವಡಿಸಿಕೊಂಡಿತು.

ಎಲ್ಲಕ್ಕಿಂತ ಮೇಲಿನವನನ್ನು ಒಲಿಸಿಕೊಳ್ಳಲು ಬೇರೆಲ್ಲ ಮಾರ್ಗಗಳಿಗಿಂತ ಸುಲಭವಾದುದು ಅವನನ್ನು ಪ್ರೀತಿಸುವ ಭಕ್ತಿ ಮಾರ್ಗವೊಂದೇ ಎಂದು ಮಧ್ವರು ಸಾರಿದರು. ಗೌರವ, ಭಯಭಕ್ತಿಗಳಿಂದ ಆ ಪರಮಾತ್ಮನನ್ನು ಪ್ರೀತಿಸುವುದೇ ಅತ್ಯಂತ ಸುಲಭಕಾರ್ಯವೆಂದು ದಾಸಪಂಥದವರೂ ಸಾರಿಸಾರಿ ಹೇಳಿದರು.

ಭಗವಂತನನ್ನು ಪ್ರೀತಿಸುವುದೇ ಭಕ್ತಿ; ಈ ಪ್ರೀತಿಯೇ ಬದುಕಿಗೆ ಶಕ್ತಿ; ಭಕ್ತಿಯಿಂದಲೇ ಮುಕ್ತಿ.

ಆಚಾರ್ಯ ಮಧ್ವರು ಜಗತ್ತಿಗೆ ನೀಡಿದ ವಿಚಾರಧಾರೆ, ತತ್ವಜ್ಞಾನವು ಈವರೆಗೂ 'ದ್ವೈತಮತ' ವೆಂದೇ ಕರೆಯಲ್ಪಡುತ್ತಿದೆ, ಅಥವಾ 'ದ್ವೈತ ಪಂಥ'ವೆಂದೇ ಗುರುತಿಸಲ್ಪಡುತ್ತಿದೆಯಾದರೂ ಮಧ್ವರ ಸಿದ್ಧಾಂತ, ಅವರು ಪ್ರಪಂಚಕ್ಕೆ ನೀಡಿರುವ ಪ್ರಮೇಯಗಳ ಬಗ್ಗೆ ತುಂಬಾ ತಪ್ಪು ಕಲ್ಪನೆಗಳಾಗಿವೆ. ಅವರ ಫಿಲಾಸಫಿಯ ಹೆಸರನ್ನು 'ದ್ವೈತ ಸಿದ್ಧಾಂತ'ವೆಂದು ಕರೆಯುವುದು ಸಲ್ಲದು, ಅವರ ಸಿದ್ಧಾಂತವನ್ನು 'ತತ್ವವಾದ'ವೆಂದೇ ಕರೆಯಬೇಕು.[೧೧]

ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಮಧ್ವರ ಪಂಥದ ಹೆಸರಿನಿಂದ ಹಿಡಿದು ಪ್ರಮೇಯದವರೆಗೂ ಎಲ್ಲವನ್ನೂ ತಪ್ಪಾಗಿ ಅರ್ಥೈಸಿಕೊಂಡಿರುವುದೇ ಹೆಚ್ಚು, ಅವರ ಅನುಯಾಯಿಗಳಿಂದಲೇ ಈ ಅಪಚಾರವಾಗಿದೆ ಎಂದೂ, ಮಧ್ವಸಿದ್ಧಾಂತದ ತಿಳುವಳಿಕೆಯನ್ನೇ ಸರಿಯಾಗಿ ತಿಳಿದು ಪ್ರಚುರಪಡಿಸುವಂಥ ಕೆಲಸವು ನಡೆದಿಲ್ಲವೆಂದೂ ವಿಷಾದದ ಸೊಲ್ಲು ಧ್ವನಿ ಎತ್ತಿದೆ. ಪ್ರಾಚೀನ ಗ್ರಂಥಗಳಲ್ಲಿ ಕೂಡ ಮಧ್ವರು ನೀಡಿದ ಜ್ಞಾನಧಾರೆಯನ್ನು 'ತತ್ವವಾದ' ಎಂದೇ ಕರೆಯಲಾಗಿದೆ, [* ೧೧] ಎಂಬ ಸಮರ್ಥನೆ ಇದೆ.

ಹೀಗೆ ವಿಷ್ಣು ಪಾರಮ್ಯವನ್ನು, ಹರಿಭಕ್ತಿಯನ್ನು ಸಾರಿ ಹೇಳಿದ ಮಧ್ವಾಚಾರ್ಯರ ಶಿಷ್ಯಪರಂಪರೆಯೇ ಮುಂದಿನ ಕಾಲಗತಿಯಲ್ಲಿ ಮುಂದುವರೆದು ಯತಿಗಳಾಗಿ ನಾಡಿನ ಎಲ್ಲೆಡೆ ಮಾಧ್ವಮಠಗಳನ್ನು ಸ್ಥಾಪಿಸಿ ಮಧ್ವರ ಸಿದ್ಧಾಂತ, ಬೋಧನೆಗಳನ್ನು ಪ್ರಚಾರ ಮಾಡಿದ್ದನ್ನು ಭಕ್ತಿ ತತ್ವದ ಮುಂದಿನ ಹಾದಿಯನ್ನಾಗಿಯೂ, ಈ ಯತಿ ಪರಂಪರೆಯೇ ಮುಂದುವರೆದು ಹದಿನಾರನೇ ಶತಮಾನದ "ವ್ಯಾಸಕೂಟ"ದ ನೇತಾರರಾಗಿ ರೂಪುಗೊಳ್ಳುವಂತಾದುದನ್ನು ಗುರುತಿಸಿಕೊಳ್ಳಬಹುದು. 'ವ್ಯಾಸಕೂಟ'ವೇ 'ದಾಸಕೂಟ'ವನ್ನೂ ಹುಟ್ಟುಹಾಕಿ ಪೋಷಿಸಿ, ಪ್ರೇರಕರಾಗಿ ನಿಂತು ಭಕ್ತಿಪಂಥವನ್ನು ವ್ಯಾಪಕವಾಗಿ ವಿಸ್ತರಿಸಿತೆಂಬುದನ್ನೂ ಗುರುತಿಸಿಕೊಳ್ಳಬಹುದು

ಮಧ್ವರು ಭಕ್ತಿ ಪಂಥದ, ಭಕ್ತಿ ಸಾಹಿತ್ಯದ ಮೂಲ ಸ್ರೋತವಾದರೆ ವ್ಯಾಸಕೂಟ ಮತ್ತು ದಾಸಕೂಟವು ಭಕ್ತಿಯ ಧಾರೆಯಾಗಿ ಹರಿದು ಹರಡಿಕೊಂಡ ಕನ್ನಡ ನದಿಯಾಯಿತು.

ಮಧ್ವಾಚಾರ್ಯರ ಶಿಷ್ಯ ಪರಂಪರೆ– ಮಠಗಳ ಸ್ಥಾಪನೆ

ಬೇರೆ ಬೇರೆ ಪ್ರದೇಶಗಳಿಂದ ಮಧ್ವಾಚಾರ್ಯರಿಗೆ ಅನೇಕ ಮಂದಿ ಶಿಷ್ಯರುಗಳಾದರು. ಅವರಲ್ಲಿ ಅನೇಕರು ಮಧ್ವಾಚಾರ್ಯರಿಂದ ಸನ್ಯಾಸದೀಕ್ಷೆಯನ್ನು ಪಡೆದರು. ಒಮ್ಮೆ ಬದರೀಯಾತ್ರೆಯಿಂದ ಮರಳುವಾಗ ಗೋದಾವರೀ ನದೀತೀರ ಪ್ರದೇಶದಲ್ಲಿ ಪ್ರಕಾಂಡ ಪಂಡಿತರಾಗಿ ನೆಲೆಸಿದ್ದ ಶೋಭನಭಟ್ಟರೆನ್ನುವವರು ಮಧ್ವರ ಶಿಷ್ಯತ್ವ ವಹಿಸಿ ಅವರೊಂದಿಗೆ ಇದ್ದು ಮುಂದೆ ಅವರಿಂದಲೇ ಸನ್ಯಾಸದೀಕ್ಷೆ ಪಡೆದು "ಪದ್ಮನಾಭತೀರ್ಥ"ರೆನಿಸಿಕೊಂಡರು. ತಮ್ಮ ಪೂರ್ವಾಶ್ರಮದ ಸೋದರನಿಗೆ ಸನ್ಯಾಸ ದೀಕ್ಷೆಯಿತ್ತು "ಶ್ರೀವಿಷ್ಣುತೀರ್ಥ"ರೆಂದು ಹೆಸರಿಸಿದರು. ಇವರೇ ಈಗಿನ ಸೋದೆಮಠ ಮತ್ತು ಸುಬ್ರಮಣ್ಯ ಮಠದ ಮೂಲ ಯತಿಗಳು.

ತಮ್ಮ ಎಂಟುಮಂದಿ ಪ್ರಮುಖ ಶಿಷ್ಯರಿಗೆ ಸನ್ಯಾಸದೀಕ್ಷೆಯಿತ್ತು ಉಡುಪಿಯಲ್ಲಿ ತಾವು ಸ್ಥಾಪಿಸಿದ್ದ ಶ್ರೀಕೃಷ್ಣನ ಪೂಜೆಗಾಗಿ ಆ ಯತಿಗಳನ್ನು ನೆಲೆಯಾಗಿಸಿದರು. ಆ ಎಂಟುಮಂದಿ ಯತಿಗಳು ಹಾಗೂ ಅವರ ಮಠಗಳ ಹೆಸರುಗಳು ಹೀಗಿವೆ;

೧) ಹೃಷೀಕೇಶ ತೀರ್ಥ (ಪಲಿಮಾರು ಮಠ)

೨) ನರಹರಿ(ಸಿಂಹ)ತೀರ್ಥ (ಅದಮಾರು ಮಠ)

೩) ಜನಾರ್ದನ ತೀರ್ಥ (ಕೃಷ್ಣಾಪುರ ಮಠ)

೪) ಉಪೇಂದ್ರ ತೀರ್ಥ (ಪುತ್ತಿಗೆ ಮಠ)

೫) ವಾಮನ ತೀರ್ಥ (ಶೀರೂರು ಮಠ)

೬) ವಿಷ್ಣು ತೀರ್ಥ (ಸೋದೆ ಮಠ)

೭) ರಾಮ ತೀರ್ಥ (ಕಾಣಿಯೂರು ಮಠ)

೮) ಅಧೋಕ್ಷಜ ತೀರ್ಥ (ಪೇಜಾವರ ಮಠ)

ಯಾವ ಹಳ್ಳಿಯಲ್ಲಿ ಪ್ರಧಾನವಾದ ಶಾಖಾಮಠ ಇರುವುದೋ ಅದೇ ಹಳ್ಳಿಯ ಹೆಸರಿನಿಂದ ಮಠವನ್ನೂ ಆ ಮಠದ ಯತಿಗಳನ್ನೂ ಗುರುತಿಸುವುದು ಸಂಪ್ರದಾಯವಾಗಿ ಬಂದಿತು.*[೧೨] ಮಧ್ವಾಚಾರ್ಯರ ಕಾಲದಲ್ಲಿ ಈ ಯತಿಗಳಿಗೆ ಉಡುಪಿಯಲ್ಲಿ ಪ್ರತ್ಯೇಕ ಮಠಗಳ ವ್ಯವಸ್ಥೆಯೇನೂ ಇರಲಿಲ್ಲ. ಅವರೊಳಗೆಯೇ ಹೊಂದಿಸಿಕೊಂಡು ಶ್ರೀಕೃಷ್ಣ ಪೂಜೆಯ ಹೊಣೆಗಾರಿಕೆಯನ್ನು ವಹಿಸಿಕೊಂಡಿದ್ದರು. ಮುಂದೆ ೧೪೮೦-೧೬೦೦ನೇ ಅವಧಿಯಲ್ಲಿ ಬಂದ ಶ್ರೀ ವಾದಿರಾಜ ಯತಿಗಳ ಕಾಲದಲ್ಲಿ ಈ ಎಂಟು ಮಠಾಧೀಶರಿಗೆ ಉಡುಪಿಯ ಕೃಷ್ಣ ದೇಗುಲದ ಹೊರಸುತ್ತಿನ ನಾಲ್ಕು ಬೀದಿಗಳಲ್ಲಿ ಪ್ರತ್ಯೇಕ ಮಠಗಳ ವ್ಯವಸ್ಥೆಯನ್ನು ಅವರೇ ಮಾಡಿದರೆನ್ನುವುದು ವಾದಿರಾಜರ ಚರಿತ್ರೆಯಿಂದ ತಿಳಿದು ಬರುತ್ತದೆ.

ಮಧ್ವಾಚಾರ್ಯರು ಸ್ವತಃ ತಾವೇನೂ ಮಠ ಸಂಸ್ಥಾನವನ್ನು ಹುಟ್ಟು ಹಾಕಿದವರಲ್ಲ, ಕಟ್ಟಿದವರಲ್ಲ. ವೈರಾಗ್ಯ ಮತ್ತು ಭಕ್ತಿಯ ದ್ಯೋತಕವಾಗಿ ಅವರು ತಮ್ಮ ಸನ್ಯಾಸೀ ಶಿಷ್ಯರಿಗೆ ನೀಡಿದ ಆಸ್ತಿಯೆಂದರೆ ದೇವರ ಪೆಟ್ಟಿಗೆ, ದಂಡ ಮತ್ತು ಜೋಳಿಗೆ ಮಾತ್ರ! ಮುಂದೆ ಆಯಾ ಯತಿಗಳ ಶಿಷ್ಯ ಸಂಪತ್ತು ಕಾಲದಿಂದ ಕಾಲಕ್ಕೆ ಬೆಳೆಯುತ್ತ ಹೋದಂತೆ ಅನಿವಾರ್ಯವಾಗಿಯೂ, ಅವಶ್ಯಕತೆಗಾಗಿಯೂ ಮಠಗಳು ರೂಪುಗೊಂಡವು.

ಮಧ್ವಾಚಾರ್ಯರಿಂದ ಮೊದಲು ಸನ್ಯಾಸದೀಕ್ಷೆ ಪಡೆದು 'ಪದ್ಮನಾಭ ತೀರ್ಥ' ರೆನಿಸಿಕೊಂಡಿದ್ದ ಯತಿಗಳೇ ಮುಂದೆ ದೇಶಸ್ಥ ಮಠಗಳ ಮೂಲ ಯತಿ ಎನ್ನಿಸಿಕೊಂಡರು. ಕ್ರಿ.ಶ. ೧೩೧೭ ರಿಂದ ೧೩೨೪ರವರೆಗೂ ಸರ್ವಜ್ಞ ಪೀಠದಲ್ಲಿದ್ದ ಪದ್ಮನಾಭ ತೀರ್ಥರು ನಂತರ ನರಹರಿತೀರ್ಥರಿಗೆ*[೧೩] ಪೀಠ ವಹಿಸಿದರು. ೯ ವರ್ಷಗಳ ಕಾಲ ಪೀಠದಲ್ಲಿದ್ದ, [ಮಾಧವ ತೀರ್ಥರು ಅಕ್ಷೋಭ್ಯ ತೀರ್ಥರಿಗೆ; ೧೫ ವರ್ಷಗಳು ಪೀಠದಲ್ಲಿದ್ದ ಇವರು ತಮ್ಮ ಶಿಷ್ಯರಾದ ಜಯತೀರ್ಥರಿಗೆ ವಹಿಸಿದರು. ಇವರ ಪರಂಪರೆಯಲ್ಲಿ ಬಂದವರು ಶ್ರೀವ್ಯಾಸತೀರ್ಥರು, ದಾಸಕೂಟದ ಪೋಷಕರು. ಮಾಧವ ತೀರ್ಥರು ಅಕ್ಷೋಭ್ಯ ತೀರ್ಥರಿಗೆ; ೧೫ ವರ್ಷಗಳು ಪೀಠದಲ್ಲಿದ್ದ

ಇವರು ತಮ್ಮ ಶಿಷ್ಯರಾದ ಜಯತೀರ್ಥರಿಗೆ ವಹಿಸಿದರು. ಇವರ ಪರಂಪರೆಯಲ್ಲಿ ಬಂದವರು ಶ್ರೀವ್ಯಾಸತೀರ್ಥರು, ದಾಸಕೂಟದ ಪೋಷಕರು, ಪ್ರೇರಕರು, ವ್ಯಾಸಕೂಟದ ಪ್ರವರ್ತಕರು.]

ಅನುಕ್ರಮವಾಗಿ ಶ್ರೀಪದ್ಮನಾಭತೀರ್ಥ, ನರಹರಿತೀರ್ಥ, ಮಾಧವ ತೀರ್ಥ ಮತ್ತು ಅಕ್ಷೋಭ್ಯ ತೀರ್ಥರಿಂದ ಬೆಳದು ಬಂದ ಕರ್ನಾಟಕದ ಮಠಗಳ ಸಂಖ್ಯೆಯೂ ಎಂಟು.

೧) ಉತ್ತರಾದಿ ಮಠ

೨) ಸೋಸಲೆ ವ್ಯಾಸರಾಯ ಮಠ

೩) ಕುಂದಾಪುರ ವ್ಯಾಸರಾಯ ಮಠ

೪) ರಾಘವೇಂದ್ರ ಮಠ

೫) ಮುಳಬಾಗಿಲು ಮಠ

೬) ಮಜ್ಜಿಗೆ ಹಳ್ಳಿ ಮಠ

೭) ಕೂಡ್ಲಿ ಮಠ

೮) ಬಾಳೆಗಾರು (ಬಾಣಾಗಾರ) ಮಠ

ಪದ್ಮನಾಭ ತೀರ್ಥರಿಂದ ಇನ್ನೊಂದು ಶಾಖೆಯ ಮಠವೂ ಅಸ್ತಿತ್ವಕ್ಕೆ ಬಂದು ಮುಳುಬಾಗಿಲು ಮಠವೆನಿಸಿಕೊಂಡಿತು. ಈ ಮಠದ ಪರಂಪರೆಯಲ್ಲಿ ಎಂಟನೆಯವರಾಗಿ ಬಂದವರೇ ಶ್ರೀಲಕ್ಷ್ಮೀನಾರಾಯಣ ತೀರ್ಥರು.[೧೪]

ಇವಲ್ಲದೆ ತುಳುನಾಡಿನಲ್ಲಿ ಇನ್ನೂ ನಾಲ್ಕು ಮಠಗಳಿವೆ. ಸುಬ್ರಹ್ಮಣ್ಯ ಮಠ, ಭಂಡಾರಕೇರಿ ಮಠ, ಭೀಮನ ಕಟ್ಟೆ ಮಠ ಮತ್ತು ಚಿತ್ರಾಪುರ ಮಠವೆಂದು ಪ್ರಸಿದ್ಧವಾಗಿವೆ. ಮಧ್ವಾಚಾರ್ಯರಿಗೆ ಶಿಷ್ಯರಾದ ಗೌಡಸಾರಸ್ವತ ಬ್ರಾಹ್ಮಣರ ಎರಡು ಮಠಗಳು-ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠ ಹಾಗೂ ಕಾಶೀಮಠ ಇವೂ ಪ್ರಖ್ಯಾತವಾಗಿವೆ. ಇಷ್ಟಲ್ಲದೆ ಉತ್ತರ ಭಾರತದಲ್ಲಿ ಸ್ಥಾಪಿತಗೊಂಡ ಎರಡು ಮಾಧ್ವ ಮಠಗಳಿವೆ

೧. ಬಂಗಾಲದ ಮಾಧ್ವ ಗೌಡೀಯ ಮಠ

೨. ಅಂತಾರಾಷ್ಟ್ರೀಯ ಹರೇಕೃಷ್ಣ ಪಂಥ

ಈ ಎರಡೂ ಪಂಥದವರು ಮಧ್ವಾಚಾರ್ಯರನ್ನೇ ತಮ್ಮ ಮೂಲಗುರುಗಳನ್ನಾಗಿ ಪರಿಗಣಿಸುತ್ತಾರೆ.

ಕರ್ನಾಟಕದಲ್ಲಿ ಹೀಗೆ ಭಕ್ತಿತತ್ವ ಹರಡಲು ಮತತ್ರಯಗಳ ಆಚಾರ್ಯರು ಕಾರಣರಾದರು. ವ್ಯಾಸಕೂಟ-ದಾಸಕೂಟದ ಎರಡು ಕವಲುಗಳಲ್ಲೂ ಕನ್ನಡ ಶರೀರಿಯಾಗಿ ಭಕ್ತಿ ತತ್ವ ಮಿಂಚಲು ಮಧ್ವಾಚಾರ್ಯರು, ಅವರ ಶಿಷ್ಯ ಪರಂಪರೆಯಲ್ಲಿ ಬಂದ ಶ್ರೀಪಾದರಾಜರು, ವ್ಯಾಸರಾಜರು, ವಾದಿರಾಜರೇ ಮುಂತಾದ ಯತಿಗಳು ಕಾರಣಪ್ರೇರಕರಾದರು. ಮಧ್ವಾಚಾರ್ಯರ ಸಿದ್ಧಾಂತಗಳು, ಉಡುಪಿಯಲ್ಲಿ ಸ್ಥಾಪಿಸಿದ ಮಠಗಳು, ಆ ಮಠದ ಯತಿಗಳು ಅನುಸರಿಸಿದ ವಿಷ್ಣುಪೂಜೆಯ ವಿಧಿ ವಿಧಾನಗಳು ಇವೆಲ್ಲವೂ ಭಾಗವತ ಧರ್ಮಕ್ಕೆ, ಮನೋಧರ್ಮಕ್ಕೆ ಜನರನ್ನು ಮತ್ತಷ್ಟು ಸಮೀಪವಾಗಿಸಿತು. ಮಧ್ವರು ಸಾರಿದ ವಿಷ್ಣು ಪ್ರೀತಿಯು 'ಭಾಗವತ' ಮತ್ತು 'ಹರಿವಂಶದ' ಕೃಷ್ಣಮಹಿಮೆಗೆ ಸಮೀಪವಾಗಿದ್ದು ಭಕ್ತಿಪಂಥವು ಕೃಷ್ಣನನ್ನು ಪ್ರೀತಿಸುವ, ಆರಾಧಿಸುವ ದಾರಿ ಹಿಡಿಯಿತು ವಿಷ್ಣು, ವಾಸುದೇವ, ಕೃಷ್ಣ ಎಂಬ ಪ್ರೀತಿಯು ಬೆಳೆದು ಮುಂದೆ ವಿಠ್ಠಲ ಪ್ರೀತಿ, ವಿಠ್ಠಲ ಭಕ್ತಿಯೂ ಸ್ಥಾಪಿತವಾಯಿತು.

ಮಧ್ವಾಚಾರ್ಯರ ಪ್ರಯತ್ನದಿಂದಾಗಿ ಭಾಗವತಧರ್ಮ ಒಂದು ಹೊಸ ಸ್ವರೂಪ ಪಡೆದು ಕೃಷ್ಣಪ್ರೀತಿಯಾಗಿ ಜನರಲ್ಲಿ ನೆಲೆಸಿತು ಎನ್ನುವುದನ್ನು ಮರೆಯುವಂತಿಲ್ಲ ಅದುವರೆಗಿನ ವಿಭಿನ್ನ ಪುರಾಣಗಳ ಗೊಂದಲದಿಂದ ಭಾಗವತ ಧರ್ಮಕ್ಕೆ ಉಂಟಾಗಿದ್ದ ಕುಂದುಕೊರತೆಗಳನ್ನು ಕಳೆದು ವೇದಗಳ ಆಧಾರದಿಂದ ಅದಕ್ಕೊಂದು ಸಮನ್ವಯ ರೂಪ ತಂದವರೇ ಮಧ್ವಾಚಾರ್ಯರು.

ಭಾಗವತವು ನಿರೂಪಿಸಿರುವ ನವವಿಧ ಭಕ್ತಿಯು ಹೆಚ್ಚು ಆಪ್ತವಾಗಿ ಮೇಲ್ಮೆಯನ್ನು ಪಡೆಯಿತು. ಭಗವಂತನ ಅವತಾರದ ಕಲ್ಪನೆ ದೊರೆತು ಭಕ್ತಿಸಾಹಿತ್ಯವು ಹೆಚ್ಚಿನ ಪುಷ್ಟಿ ಪಡೆಯಲು ಕಾರಣವಾಯಿತು.

ಯಾಕಾಗಿ 'ಭಕ್ತಿ'?

"ಭಕ್ತಿ ಮಾಡಿ ಏನು ಉಪಯೋಗ?" "ಭಕ್ತಿಯ ಅವಶ್ಯಕತೆ ಏನು?" "ಭಕ್ತಿಯಿಂದ ದೊರೆಯುವ ಪ್ರತಿಫಲವಾದರೂ ಏನು?" ಎಂಬಿತ್ಯಾದಿ ಪ್ರಶ್ನೆಗಳಿಗೆ ನಿಜವಾದ ಭಕ್ತನಲ್ಲಿ ಸ್ಥಳವಿಲ್ಲ. ನಿಜವಾದ ಪ್ರೀತಿ ಏನನ್ನೂ ಬಯಸುವುದಿಲ್ಲ, ನಿಜವಾದ ಭಕ್ತಿ ನಿಷ್ಕಾಮವಾದುದು. ನಿಜವಾದ ಭಕ್ತಿಗೆ ಭಗವಂತನನ್ನು ಪ್ರೀತಿಸುತ್ತಿರುವುದೊಂದೆ ಗೊತ್ತು! ಮಹತ್ತನ್ನು ತಿಳಿಯುತ್ತ ಪ್ರೀತಿಸುವುದೇ ಒಂದು ಮಹತ್ತಾದ ಅನುಭವ, ಮಹತ್ತನ್ನು ಪ್ರೀತಿಸುತ್ತ ತಿಳಿಯುವುದೇ ಅತ್ಯಂತ ವಿಶಿಷ್ಟವಾದ ಅನುಭವ. ಹಿರಿದಾದುದನ್ನು ಗೌರವದಿಂದ ಕಾಣುತ್ತ ಭಕ್ತಿಯ ಅರ್ಪಣೆ ಸಲ್ಲಿಸುವುದೇ ಒಂದು ಹಿರಿದಾದ ಅನುಭವ. ಹಿರಿಯದರ ಮುಂದೆ ನಿಂತು ನಮ್ಮ ಕಿರಿತನದ ಅರಿವು ಪಡೆಯುವುದೇ, ಹಿರಿಯಾದುದರ ರಕ್ಷೆಯ ವಾತ್ಸಲ್ಯದ ರೆಕ್ಕೆಯಲ್ಲಿ ಬೆಚ್ಚಗೆ ಕೂರುವುದೇ ಅಪ್ಯಾಯಮಾನ ಅನುಭವ. ಭಕ್ತಿ ಇಂಥ ಕ್ಷೇಮಭಾವನೆಯನ್ನು ಭಕ್ತನಲ್ಲಿ ಹುಟ್ಟುಹಾಕುತ್ತದೆ.

ಎಂತಲೇ ಭಗವದ್ ಶಕ್ತಿಯನ್ನು ತಂದೆ ಎಂದು, ತಾಯಿ ಎಂದು, ಗುರು ಎಂದು ಭಾವಿಸಿ ಭಕ್ತರು ಪ್ರೀತಿಸಿದರು. ಭಗವಂತನಿಗಾಗಿ ಕರೆ ಇದ್ದಲ್ಲಿ ಗುರುವಿನಂತೆ ಅಲ್ಲಿಂದ ಮಾರ್ಗದರ್ಶನ ಖಂಡಿತವಾಗಿಯೂ ಒದಗಿ ಬರುತ್ತದೆನ್ನುವುದೂ ಭಕ್ತರ ಅನುಭವವೇ.

ಒಟ್ಟಿನಲ್ಲಿ ಭಗವದ್ ಶಕ್ತಿಯನ್ನು ಅರಿಯಲು, ನಮಿಸಲು, ಪ್ರೀತಿಸಲು ಪ್ರಯತ್ನ ಪಡುತ್ತಿರುವುದೇ ಭಕ್ತನ ಮನದ ಉದ್ಯೋಗ. ಯಾವ ಯಾವ ರೀತಿಯಲ್ಲಿ ದೈವವನ್ನು ಕಲ್ಪಿಸಿಕೊಂಡು ಆರಾಧಿಸುತ್ತಾನೋ ಆಯಾಯ ರೂಪದಲ್ಲಿಯೇ ಭಕ್ತನಾದವನು ತನ್ನ ಅಂತರಂಗದಲ್ಲಿ ದೈವದರ್ಶನ ಪಡೆದಿದ್ದಾನೆ ಎನ್ನುವುದಂತೂ ಸತ್ಯ. ಈ ಸತ್ಯವು ಅತ್ಯಂತ ಕುತೂಹಲಕಾರಿಯಾದ ಸಂಗತಿಯೂ ಆಗಿದೆ! ಭಾರತವಿರಲಿ, ವಿದೇಶಗಳಲ್ಲಿರಲಿ, ಬೇರೆ ಬೇರೆ ದೇಶಗಳಲ್ಲಿಯ ಅನೇಕಾನೇಕ ತತ್ವಜ್ಞಾನಿಗಳು, ಸಂತರು ತಮ್ಮ ತಮ್ಮ ಅಂತರಂಗದಲ್ಲಿ ದೊರೆತ ಈ ದರ್ಶನವನ್ನು, ಈ ಒಂದು ಆಧ್ಯಾತ್ಮಿಕ ಅನುಭವವನ್ನು ಬೇರೆ ಬೇರೆ ಭಾಷೆಗಳಲ್ಲಿ ದಾಖಲಿಸಿ ಹೋಗಿದ್ದಾರೆ! ಭಿನ್ನ ಭಿನ್ನ ಕಾಲಗಳಲ್ಲಿ, ಬೇರೆ ಬೇರೆ ದೇಶಗಳಲ್ಲಿ, ಬೇರೆ ಬೇರೆ ಭಕ್ತರು ಪಡೆದಿರುವ ಈ ಅಂತರಂಗ ದರ್ಶನದ ಆಧ್ಯಾತ್ಮಿಕ ನೆಲೆಯು ಒಂದೇ ಆಗಿರುವುದು ಅತ್ಯಂತ ವಿಸ್ಮಯ ತರುವಂಥದ್ದಾಗಿದೆ. ಪ್ರೀತಿ ಮತ್ತು ಭಕ್ತಿ ಎನ್ನುವ ಭಾವನೆಗೆ ಯಾವ ದೇಶ, ಕಾಲ, ಜನಾಂಗವಾದರೇನು? ಅದು ಎಲ್ಲಿಯೂ ಒಂದೇ!

ನಮ್ಮ ದೇಶದಲ್ಲಂತೂ ಅಸಂಖ್ಯ ಸಂತರು, ಅನುಭಾವಿಗಳು ತಮ್ಮ ತಮ್ಮ ಅನುಭವಗಳನ್ನು ತಮ್ಮ ತಮ್ಮ ಭಾಷೆಯ ಭಕ್ತಿಸಾಹಿತ್ಯ ರಚನೆಯ ಮೂಲಕ ದಾಖಲಿಸಿ ಹೋಗಿದ್ದಾರೆ. ನಿರ್ಗುಣ ನಿರಾಕಾರನೆಂದು ಆ ದೈವಶಕ್ತಿಯನ್ನು ಪರಿಭಾವಿಸುತ್ತ ತಿಳಿಯಲೆತ್ನಿಸಿದ ಜ್ಞಾನಿಗಳು, ಋಷಿಗಳು, ತತ್ವ ಶಾಸ್ತ್ರಜ್ಞರು ನಮ್ಮಲ್ಲಿ ಆಗಿಹೋಗಿದ್ದಾರೆ. ಸಗುಣ ಸಾಕಾರನೆಂದು ಅವನನ್ನು ಜ್ಞಾನ, ಆನಂದ, ಬಲ, ಐಶ್ವರ್ಯ, ತೇಜಸ್ಸುಗಳಾದಿಯಾಗಿ ಗುಣಗಳ ಕಡಲೆಂದು, ವಿಶ್ವಾಕಾರಿಯೆಂದು ಅನುಸಂಧಾನ ಮಾಡಿ ಪ್ರೀತಿಸುತ್ತ ಬಾಳಿ ಬದುಕಿದ ಭಕ್ತ ಭಾವುಕ ಸಂತರು ಆಗಿಹೋಗಿದ್ದಾರೆ. ಕರ್ನಾಟಕದ ಹರಿದಾಸ ಭಕ್ತಿಪಂಥವೂ ಇಂಥ ಅನುಭಾವತೆಯ, ಆಧ್ಯಾತ್ಮಿಕತೆಯ, ನೀತಿ ಮೌಲ್ಯಗಳ ನೆಲೆಗಟ್ಟಿನ ಭಕ್ತಿಯ ಮಹಾನ್ ಕಟ್ಟಡವನ್ನು ನಮಗಾಗಿ ನಿರ್ಮಿಸಿಕೊಟ್ಟು ತೆರಳಿದ್ದಾರೆ. 'ಯಾಕಾಗಿ ಭಕ್ತಿ ಭಾವ ತಾಳಿಕೊಂಡಿರಬೇಕು?' 'ಭಕ್ತಿಯಿಂದ ಏನು ಉಪಯೋಗ? ಎಂದು ಕೇಳಿದರೆ ಉತ್ತರ ಖಂಡಿತ ಇದ್ದೇ ಇದೆ! ವ್ಯಕ್ತಿಗತವಾಗಿಯಾಗಲೀ, ಸಾಮಾಜಿಕವಾಗಿಯಾಗಲೀ ಭಕ್ತಿ, ನಿಜವಾದ ಭಕ್ತಿ ಭಾವವೆನ್ನುವುದು ನೈತಿಕ ಮೌಲ್ಯಗಳಿಂದ ಕೂಡಿಕೊಂಡು ಧನಾತ್ಮಕವಾದ ಸದ್ಗುಣಗಳ ಮೊತ್ತವಾಗಿರಬಲ್ಲುದೇ ಹೊರತು ದ್ವೇಷ, ಹಿಂಸೆಯನ್ನು ಪ್ರಚೋದಿಸುವ, ಜಾತಿಮತ, ಭೇದಭಾವ ಬಿತ್ತುವ, ಅಮಾನವೀಯ ದುರ್ಗುಣಗಳ ದುರಾಕಾರಿಯಾಗಿರುವುದು ಖಂಡಿತಕ್ಕೂ ಸಾಧ್ಯವಿಲ್ಲ. ದಾಸರುಗಳು, ಶರಣರು, ಸಂತರು ಸಮಾಜದ ನ್ಯೂನತೆಗಳನ್ನು, ಓರೆ ಕೋರೆಗಳನ್ನು ತಿದ್ದಲು ವ್ಯಕ್ತಿಯ ದುರ್ಗುಣಗಳನ್ನು ಬಿಡಿಸಲು ಪ್ರಯತ್ನಪಟ್ಟರೇ ಹೊರತು ಯಾವ ಋಣಾತ್ಮಕ ಯೋಚನೆ ವಿಚಾರಗಳನ್ನೂ ಹರಡಿ ಸಾಮಾಜಿಕ ಮೌಲ್ಯಗಳನ್ನು ಮಲಿನಗೊಳಿಸಲಿಲ್ಲ! ಮಾನವನ ಅಂತರಂಗದ

ಶುದ್ಧಿಗಾಗಿ ಹಂಬಲಿಸಿದರೇ ಹೊರತು ಕೆಟ್ಟ ಗುಣನಡತೆಗಳನ್ನು ಎಂದೂ ಪ್ರಚೋದಿಸಲಿಲ್ಲ! ಇಡೀ 'ಭಕ್ತಿ ಸಾಹಿತ್ಯ'ವೆನ್ನುವುದು ಕೇವಲ ಭಗವಂತನ ಗುಣಗಾನವಷ್ಟೆ ಅಲ್ಲ, ಅವರು ಭಗವಂತನಿಗೆ ಇಷ್ಟವಾಗುವ ಸದ್ಗುಣಗಳನ್ನು ನೀತಿನಿಯಮಗಳನ್ನಾಗಿಸಿ ಹಾಡುಗಳನ್ನಾಗಿಸಿ ಮನುಕುಲಕ್ಕೆ ನೀಡಿದರು. ಪ್ರತಿಯೊಬ್ಬ ವ್ಯಕ್ತಿಯೂ ಆಂತರಂಗಿಕವಾಗಿ ಶುಚಿ, ಶುದ್ಧಿಗಳಲ್ಲಿ ಬಾಳುವುದನ್ನು ಕಲಿತರೆ ಸಮಾಜದ ಬದುಕೂ ಸ್ವಚ್ಛ, ಸುಂದರ; ಭಗವಂತನಿಗೂ ಅದು ಪ್ರೀತಿ ಎನ್ನುವುದನ್ನೇ ದಾಸರುಗಳು ತಮ್ಮ 'ಹರಿದಾಸ್ಯ' ದ ಮೂಲಕ ಹೇಳಿದ್ದೇ ವಿನಹ ಜೀವಪ್ರೀತಿಯ ವಿರುದ್ಧವಾಗಿ, ಜೀವನಶ್ರದ್ಧೆಗೆ ವಿಮುಖವಾಗಿ ಅವರೆಂದೂ ಬೋಧಿಸಲಿಲ್ಲ.

ಹೀಗಾಗಿ ಭಕ್ತಿಮಾರ್ಗವು ಸರ್ವೇಸಾಮಾನ್ಯರಿಂದಲೂ ಸರ್ವಗ್ರಾಹ್ಯವಾಗಿ ಸರ್ವೋತ್ತಮವಾದ ಭಗವದ್ ಶಕ್ತಿಯ ಪ್ರೀತಿ, ಆರಾಧನೆ, ಶರಣಾಗತಿಯನ್ನು ಕಲಿತು ಬಾಳಲು ತಿಳಿಹೇಳಿದಂಥ ಉನ್ನತವಾಧ ಮತ್ತು ಅನುಸರಿಸಲು ಸುಲಭವೂ ಆದ ಪಂಥವಾಗಿ ಸು.ಎಂಟು ಒಂಬತ್ತನೆಯ ಶತಮಾನದಿಂದ ಆರಂಭದಿಂದ ಹದಿನೆಂಟನೆಯ ಶತಮಾನದವರೆಗೂ ಸಾಗಿ ಬಂದಿತು.

ಯಾವ ಮತದವರೇ ಆಗಿರಲಿ, ಉಚ್ಚ, ನೀಚ, ಭೇದವಿಲ್ಲದೆ ಮಾನವನ ಅಂತರಂಗವನ್ನು ಬೆಳಗಿಸುವ ಭಾವವಾಗಿ 'ಭಕ್ತಿ'ಯು ಆಚರಣೆಗೆ, ಅನುಷ್ಠಾನಕ್ಕೆ ಯೋಗ್ಯವಾಗಿರುವುದನ್ನು ಮನಗಂಡು ಮುಂದುವರೆಯಬಹುದಾದ, ದಿವ್ಯತೆಯ ಗುರಿ ತಲುಪಬಹುದಾದ ಸರಳ ಮಾರ್ಗ ಎನ್ನುವುದನ್ನು ಒಪ್ಪಿಯೇ ಒಪ್ಪಬೇಕು. ಕರ್ಮಗಳ ಕಾಠಿನ್ಯವಾಗಲಿ, ತಪಶ್ಚರ್ಯೆಯ ನಿಷ್ಠುರತೆಯಾಗಲಿ, ಜಾತಿ, ಧರ್ಮ, ವಯಸ್ಸು , ಲಿಂಗ ಮೊದಲಾದ ಭೇದಗಳ ಬಿರುಕಾಗಲೀ ನಿಜವಾದ ಭಕ್ತಿಮಾರ್ಗದಲ್ಲಿ ಖಂಡಿತಾ ಬರುವುದಿಲ್ಲ. ಅಜ್ಞಾನದಿಂದಾಗಿ ಮೂಢನಂಬಿಕೆಗಳ ಸೋಂಕು ತಗುಲಿದರೆ ಮಾತ್ರ ಭಕ್ತಿ ಭಾವದ ಸ್ವಚ್ಛತೆಗೆ ಕಳಂಕ ಮತ್ತು ಕಂಟಕ, ಅಷ್ಟೆ. ಪರಮಾತ್ಮನ ಮೇಲಿನ ಪ್ರೇಮವೊಂದೇ ಭಕ್ತಿಯ ಮೂಲದ್ರವ್ಯ. ಅಂಥ ಪ್ರೇಮ ಎಂದೂ ಕೂಡ ಅಮಾನವೀಯತೆಯ ತಪ್ಪುಗಳನ್ನು ಎಂದೂ ಮಾಡುವುದಿಲ್ಲ ಎನ್ನುವುದನ್ನೆ ನಮ್ಮ ಮತತ್ರಯ ಸ್ಥಾಪಕರು, ಸಂತರು, ದಾಸರು, ಶರಣರು ತಮ್ಮ ತಮ್ಮ ಬದುಕು ಮತ್ತು ಬೋಧನಾ ಸಾಹಿತ್ಯದ ಮೂಲಕ ಸಾರಿ ಹೋಗಿದ್ದಾರೆ, ತೋರಿಹೋಗಿದ್ದಾರೆ.

ಭಗವಂತನ ಅವತಾರದ ಕಲ್ಪನೆಯಿಂದಲೇ ಭಕ್ತಿಸಾಹಿತ್ಯಕ್ಕೆ ಹೆಚ್ಚಿನ ಶಕ್ತಿ, ಪುಷ್ಟಿ ದೊರೆತಿದೆ, ಭಗವದ್‌ಶಕ್ತಿಯನ್ನು ಹೆಚ್ಚು ಹೆಚ್ಚು ಪ್ರೀತಿಸುವುದಕ್ಕೆ ಸಾಧ್ಯವಾಗಿದೆ. ತನ್ನ ಲೌಕಿಕ ಬಂಧುಬಾಂಧವರ ಮೇಲೆ ತೋರುವ ಪ್ರೇಮಕ್ಕಿಂತ ಹೆಚ್ಚಿನ ಪ್ರೇಮವನ್ನು ಭಕ್ತನು ಭಗವಂತನ ಅವತಾರಗಳ ಮೇಲೆ ತೋರಿದ್ದಾನೆ. ಏಕೆಂದರೆ ಅವನ ಭಾವುಕವಾದ ಪ್ರೀತಿಯ ಭಂಡಾರಕ್ಕೆ ಭಗವಂತನ 'ಅವತಾರ'ವಾಗಿರುವುದೇ ಕಾರಣ. ಅವತಾರ, ಅವತರಣವೆಂದರೆ "ಇಳಿದು ಬರುವುದು" ಎಂಬ ಅರ್ಥವಿದೆಯಷ್ಟೆ ! ಮೇಲಿನ ದಿವ್ಯ ನೆಲೆಗೆ ಮಾನವಜನ್ಮ ಅಡರುವುದು ಕಷ್ಟವಿರುವಾಗ ಮಗುವಿನ ಬಳಿ ಬರುವ ತಾಯಿಯಂತೆ ಮೇಲಿನಿಂದ ಅವನೇ ಇಳಿದು ಬಂದಿದ್ದಾನೆ. ಅದುವೇ ಅವತರಣ.

ಹೀಗಾಗಿ 'ಅವತಾರ' ಕಲ್ಪನೆಗಳಲ್ಲಿ ಭಕ್ತರಿಗೆ ಹೆಚ್ಚು ಹೆಚ್ಚು ಪ್ರೀತಿ. ಯಾವುದೇ ಒಂದು ಅವತಾರವನ್ನು ಕುರಿತ ಏಕಾಂತ ಭಕ್ತಿಯು ಭಕ್ತಿಸಾಹಿತ್ಯದ ಸೃಷ್ಟಿಗೆ ವಿಶೇಷವಾದ ನೆಲೆಗಟ್ಟನ್ನು ಒದಗಿಸಿದೆ, ಕಳೆತುಂಬಿದೆ.

ಭಗವಂತನ ಅವತರಣವನ್ನು ಹೃದಯದಲ್ಲಿ ತಾಳಿಕೊಳ್ಳುವ 'ಭಕ್ತಿ'ಯು ವ್ಯಕ್ತಿಯನ್ನು ಎಂದಿಗೂ ತಮಸ್ಸಿಗೆ ಜಾರದಂತೆ ನೋಡಿಕೊಳ್ಳುತ್ತದೆ. "ಭಗವದ್ ಪ್ರಜ್ಞೆ" ಎಂದರೆ ಎಲ್ಲ ಸಾತ್ವಿಕ ಗುಣಗಳ ಮೊತ್ತ, ಅಷ್ಟೆ. ಇಂಥ ಪ್ರಜ್ಞೆ ನಡೆನುಡಿಗಳನ್ನು ತಿದ್ದಿ ಬೆಳಕಿನ ಕಡೆಗೆ ಕರೆದೊಯ್ಯುವ ದೀವಿಗೆ. ಹೀಗಾಗಿ 'ಭಕ್ತಿ' ಬೇಕು, ಭಕ್ತನಾಗಿರಬೇಕು ಎಂದವರು ದಾಸರು, ದಾಸರಿಗೂ ಗುರುಗಳಾದವರು.[*೧೫]

ದ್ವೇಷ ಹಿಂಸೆಗಳನ್ನು ಪ್ರಚೋದಿಸಿಕೊಳ್ಳದಂತೆ, ತಪ್ಪುಗಳ ಹಾದಿಯಲ್ಲಿ ಹೆಜ್ಜೆ ಹಾಕದಂತೆ, ಅನೈತಿಕತೆಯ ಅವಲಂಬನಕ್ಕೊಳಗಾಗದಂತೆ ನಿಜವಾದ 'ಭಕ್ತಿ' ಮನುಷ್ಯನನ್ನು ತಡೆಯುತ್ತದೆ.[*೧೬] ಪ್ರತಿ ಮಾನವನ ಜೀವಿತೋದ್ದೇಶವೇ 'ಅಂತರಂಗ ವಿಕಸನ' ವನ್ನು ಹೊಂದುವುದಾಗಿದೆ. ಅವರವರ ಲೌಕಿಕ ಸಾಧನೆಗಳ ಮಾರ್ಗದಲ್ಲಿಯೆ ಸಾಗುತ್ತ ಆಂತರಿಕ ದಿವ್ಯತೆಯನ್ನು ಹೊಂದಲು ಭಕ್ತಿಮಾರ್ಗವು ಸಹಕಾರಿಯಾಗಿದೆ. ಮೇಲರಿಮೆ, ಅಹಂಕಾರಗಳಿಂದ ಬೀಗುತ್ತ ಅನ್ಯರನ್ನು ಕೀಳಾಗಿ ತಿರಸ್ಕಾರದಿಂದ ಕಂಡು ನೋಯಿಸುವ ಕೆಟ್ಟ ಕುತ್ಸಿತ ಬುದ್ಧಿಗಳಿಂದ ಮನುಷ್ಯನನ್ನು ಬಿಡಿಸಿ ಸಜ್ಜನಿಕೆಯನ್ನು ತುಂಬಿ ಸಾತ್ವಿಕತೆಯ ಮೂಲಕ ಬೆಳಕಿನ ಕಡೆಗೆ ಕರೆದೊಯ್ಯಲು ಭಕ್ತಿಮಾರ್ಗವು ಖಂಡಿತವಾಗಿಯೂ ಸಹಾಯಕಾರಿಯಾಗಿದೆ.[*೧೭] ಹೀಗಾಗಿ ಸಾಮಾಜಿಕ ಬದುಕಿಗೂ, ವ್ಯಕ್ತಿಶಃವಾದ ಸಾಧನೆ, ಔನ್ನತ್ಯಗಳಿಗೂ, ಸ್ವಯಂ ಉದ್ಧಾರಕ್ಕೂ ['ಉದ್ಧರೇದಾತ್ಮನಾತ್ಮಾನಾಂ...'] ಭಕ್ತಿಯ ಅವಶ್ಯಕತೆ ಇದ್ದೇ ಇದೆ.

ಇಂಥದ್ದೊಂದು ಭಕ್ತಿ ಪಥದಲ್ಲಿ ಭಾರತ ದೇಶದ ಸ್ಥಿತಿಗತಿಗಳು ಮಧ್ವಾಚಾರ್ಯರ ಕಾಲದ ನಂತರದ ಶತಕಗಳಲ್ಲಿ ಏನಾಗಿದ್ದವು, ಮುಂದಿನ ಬೆಳವಣಿಗೆಯಾಗಿ ಕನ್ನಡನಾಡಿನ ವಿಜಯನಗರ ಸಾಮ್ರಾಜ್ಯದ ಉದಯವಾಗಿ ಇತಿಹಾಸ ಪಥದಲ್ಲಿ ವ್ಯಾಸಕೂಟ–ದಾಸಕೂಟಗಳು ಆವಿಷ್ಕಾರಗೊಂಡು ಭಕ್ತಿಪಥವನ್ನು ಹೇಗೆ ಬೆಳೆಯಿಸಿದವು, ನಾಡಿನ ಜನರನ್ನು ನೀತಿತತ್ವಗಳ ಬಿತ್ತನೆಮಾಡಿ ಸಂಸ್ಕರಿಸಲು ಹೇಗೆ ಶ್ರಮಿಸಿದವು, ಈ ಎರಡೂ ಕೂಟಗಳ ಉನ್ನತಿಯ ಕಾಲಾವಧಿಯಲ್ಲಿ ನಡೆದುದೇನು, ಮತ್ತಿನ ಕಾಲಗತಿಯಲ್ಲಿ ಇವು ಅವನತಿಯೆಡೆಗೆ ಸಾಗಿದುದಾದರೂ ಏಕೆ ಮತ್ತು ಹೇಗೆ? ಅವನತಿಯಲ್ಲೂ ಮತ್ತೆ ಮುಂದೆ ಕೆಲಕಾಲ ದಾಸಕೂಟವು ಭಕ್ತಿಪಥದ ಪುನರುಜ್ಜೀವನ ಪಡೆದುಕೊಂಡುದೆಂತು? ಮತ್ತೂ ಮುಂದಿನ ಶತಮಾನಗಳಲ್ಲಿ ದಾಸಕೂಟದ ಪಯಣ ಹೇಗೆ ಸಾಗಿತು? ಈ ಎಲ್ಲಾ ವಿಚಾರಗಳು ಕುತೂಹಲಕಾರಿಯೂ ಹೌದು; ನಾಡಿನ ಜನರ ಬದುಕಿನ ಏಳುಬೀಳುಗಳ ಜೊತೆಗೆ ಹಾಸುಹೊಕ್ಕಾಗಿರುವಂಥ ಇತಿಹಾಸವೂ ಹೌದು. ಇದು ಭಕ್ತಿ ಪಂಥದ ಉನ್ನತಿಯ ವಿಸ್ತಾರ ಚಿತ್ರಣವೂ ಹೌದು; ಆಯಾಕಾಲಕ್ಕೆ ಉಂಟಾಗುವ ರಾಜಕೀಯ, ಸಾಮಾಜಿಕ ಸಂಘರ್ಷಗಳ ಪ್ರಭಾವ ಪರಿಣಾಮಗಳಿಗೆ ಸಿಕ್ಕಿ ನಲುಗಿದ, ಮಸುಕಾದ ಭಕ್ತಿಪಂಥದ ಸ್ಥಿತಿಗತಿಗಳ ವಿಷಯ ವಿಸ್ತರತೆಯೂ ಹೌದು ಎನ್ನುವುದನ್ನು ಮುಂದೆ ಮನಗಾಣಬಹುದಾಗಿದೆ.

<u>ಅಡಿಟಿಪ್ಪಣಿಗಳು</u> :

೧. ಇವರ ಹೆಸರು 'ಅಚ್ಯುತ ಪ್ರೇಕ್ಷ' ಎಂದು ಅನೇಕ ಗ್ರಂಥಗಳಲ್ಲಿ ಉಲ್ಲೇಖವಿದೆ. ಆದರೆ 'ಅಚ್ಯುತ ಪ್ರಜ್ಞ' ಎನ್ನುವ ಹೆಸರೇ ಸರಿಯಾದುದೆಂದು ಬನ್ನಂಜೆ ಗೋವಿಂದಾಚಾರ್ಯರು ತಮ್ಮ 'ಆಚಾರ್ಯ ಮಧ್ವ-ಬದುಕು-ಬರೆಹ', 'ಪ್ರ:ರಾಷ್ಟ್ರಕವಿ ಗೋವಿಂದಪೈ ಸಂಶೋಧನ ಕೇಂದ್ರ' ಗ್ರಂಥದಲ್ಲಿ ಸಾಧಾರವಾಗಿ ನಿರೂಪಿಸಿದ್ದಾರೆ.

೨. ಶಂಕರಾಚಾರ್ಯರು "ಎಲ್ಲ ಜೀವರುಗಳೆಲ್ಲ ಒಂದೇ. ಬೇರೆಬೇರೆ ವಿಭಾಗ, ಸ್ವಂತಿಕೆ ಇಲ್ಲ. ಎಲ್ಲ ಜೀವವೂ ಒಂದೇ ಅಖಂಡ ಆತ್ಮ. 'ನಾನು' ಎಂಬ ಪ್ರತ್ಯೇಕತೆ, ಗುರುತಿಸಿಕೊಳ್ಳುವಿಕೆ ಇಲ್ಲ ಎಂದರು.

ರಾಮಾನುಜಾಚಾರ್ಯರು ಜೀವಗಳು ಪ್ರತ್ಯೇಕವೇ. ಆದರೆ ಮುಕ್ತಿಯಲ್ಲಿ ಎಲ್ಲವೂ ಒಂದಾಗಿಬಿಡುತ್ತವೆ ಎಂದರು.

ಈ ಎರಡೂ ಸಿದ್ಧಾಂತಕ್ಕಿಂತ ಭಿನ್ನವಾಗಿ ಮಧ್ವಾಚಾರ್ಯರು ತಮ್ಮ 'ಕಾಣ್ಕೆ'ಯನ್ನು ನೀಡಿದರು.

೩. ಮಹರ್ಷಿ ಅರವಿಂದರು ಮತ್ತು ದಯಾನಂದ ಸರಸ್ವತಿ ಮಧ್ವಾಚಾರ್ಯರ ಈ ಭಾಷ್ಯದಿಂದ ಪ್ರಭಾವಿತರಾಗಿದ್ದರು ಎನ್ನುವುದಕ್ಕೆ ದಾಖಲೆಯಿದೆ. ಕಪಾಲಿಶಾಸ್ತ್ರಿಗಳು "ಆಚಾರ್ಯ ಮಧ್ವರ ಭಾಷ್ಯ ಜಾಗೃತವಾಗಿರುವಾಗ ವೇದಗಳಿಗೆ ಆಧ್ಯಾತ್ಮಿಕ ಅರ್ಥವಿಲ್ಲ ಎನ್ನುವ ಧೈರ್ಯ ಯಾರಿಗುಂಟು" ಎಂದು ಪ್ರಶ್ನಿಸಿದ್ದಾರೆ.

೪. ರೂಢಿಯೋಗೌ ವಿನಾ ಕಶ್ಚಿನ್ನೈವಾರ್ಥೋ ವೇದಗೋ ಭವೇತ್
ತತ್ರಾಪಿ ಯೌಗಿಕೋ ಮುಖ್ಯಃ ಸರ್ವತ್ರಾಸ್ತಿ ನ ವೈದಿಕೇ ॥

– ಖಂಡಾರ್ಥ ನಿರ್ಣಯ

೫. ಸದಾಗಮೈಕ ವಿಜ್ಞೇಯಂ ಸಮತೀತಕ್ಷರಾಕ್ಷರಮ್
ನಾರಾಯಣಂ ಸದಾ ವಂದೇ ನಿರ್ದೋಷಾಶೇಷಸದ್ಗುಣಮ್ ॥

– ವಿಷ್ಣುತತ್ವ ನಿರ್ಣಯ-ಆದಿಶ್ಲೋಕ

೬. ಶಾಸ್ತ್ರಾರ್ಥಯುಕ್ತಾನುಭವಃ ಪ್ರಮಾಣಂ ತೂತ್ತಮಂ ಮತಮ್॥ – ಅನುವ್ಯಾಖ್ಯಾನ.

೭. ಮುಂದೆ ೧೬ನೆಯ ಶತಕದಲ್ಲಿ ಬಂದ ವ್ಯಾಸಕೂಟ-ದಾಸಕೂಟಗಳ ಕಾಲದಲ್ಲಿ ಮಧ್ವರ ಈ ಎಚ್ಚರಿಕೆಯ ನುಡಿ ದಿಟವಾದುದನ್ನು ಕಾಣಬಹುದು.

೮. "ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ
ಹರಿಪಾದ ವಿನಮ್ರ ಧಿಯಾ ಸತತಮ್ ।
ಹರಿರೇವ ಪರೋ ಹರಿರೇವ ಗುರುಃ
ಹರಿರೇವ ಜಗತ್ ಪಿತೃ ಮಾತೃ ಗತಿಃ ॥
ತದಲಂ ಬಹುಲೋಕವಿಚಿಂತನಯಾ
ಪ್ರವಣಂ ಕುರು ಮಾನಸಮೀಶಪದೇ ॥
(ಮಧ್ವಾಚಾರ್ಯವಿರಚಿತ ದ್ವಾದಶಸ್ತೋತ್ರಗಳು)

೯. ಬನ್ನಂಜೆ ಗೋವಿಂದಾಚಾರ್ಯ. "ಆಚಾರ್ಯ ಮಧ್ವ-ಬದುಕು ಬರಹ" ೧೯೯೫

೧೦. ಬನ್ನಂಜೆ ಗೋವಿಂದಾಚಾರ್ಯ,"ಆಚಾರ್ಯ ಮಧ್ವ"

೧೧. ಶ್ರೀ ವಾದಿರಾಜರು ತನ್ನ 'ಯುಕ್ತಿ ಮಲ್ಲಿಕಾ' ಗ್ರಂಥದಲ್ಲಿ ಮಧ್ವಾಚಾರ್ಯರ ಸಿದ್ಧಾಂತವನ್ನು'ತತ್ವವಾದ'ವೆಂದೇ ಕರೆದಿದ್ದಾರೆ. "ಪರೇ ಚ ತತ್ವವಾದೇಸ್ಮಿನ್ ಗರೀಯಸಿ ಭರೋ ಮಮ."

ಚೈತನ್ಯ ಮತಾನುಯಾಯಿಗಳಾಗಿ ಬಂದ ಬಂಗಾಲದ ಅನೇಕ ಭಾಗವತರೂ ಕೂಡ ಮಧ್ವಾಚಾರ್ಯರನ್ನು "ತತ್ವವಾದಗುರು" ಎಂದೇ ಕರೆದಿರುವುದು ಗಮನಿಸಬೇಕಾದ ಸಂಗತಿ.

೧೨. ಮಠಕ್ಕೆ ಮೂಲತಃ ದತ್ತಿಯಾಗಿ ಬಂದ ಆಸ್ತಿಯಿರುವ ಹಳ್ಳಿಯ ಹೆಸರಿನಲ್ಲೆ ಮಠವನ್ನು ಕರೆಯುವ ರೂಢಿ.

೧೩. ಇವರಿಂದ ರಚಿತವಾದ ಕನ್ನಡಕೀರ್ತನೆಗಳು ಮೂರು ಮಾತ್ರವೇ ದೊರೆತಿದ್ದು, ಮುಂದಿನ ದಾಸಸಾಹಿತ್ಯವಾಹಿನಿಗೆ ಇವರೇ ಉಗಮಸ್ಥಾನವೆನಿಸಿದ್ದಾರೆ ಎನ್ನುವ ಅಭಿಪ್ರಾಯವಿದೆ. ಕನ್ನಡದಲ್ಲಿ ಇವರು ಕೀರ್ತನ ಪದ್ಧತಿ ಪ್ರಾರಂಭಿಸಿದವರೆಂಬ ವಿಚಾರವನ್ನು ಕೆಲವು ವಿದ್ವಾಂಸರು ಒಪ್ಪಿದ್ದಾರೆ.

೧೪. ಇವರೇ ಮುಂದೆ ದಾಸಸಾಹಿತ್ಯದ ಮೂಲ ಪ್ರವರ್ತಕರೆಂದೂ, ವ್ಯಾಸಕೂಟದ, ದಾಸಕೂಟದ ಪ್ರವರ್ತಕರಾದ ವ್ಯಾಸತೀರ್ಥರ ವಿದ್ಯಾಗುರುಗಳಾಗಿಯೂ ಪ್ರಸಿದ್ಧರಾದ ಶ್ರೀಪಾದರಾಜರು.

೧೫. "ಭಕ್ತಿ ಬೇಕು ವಿರಕ್ತಿ ಬೇಕು। ಸರ್ವ
ಶಕ್ತಿ ಬೇಕು ಮುಂದೆ ಮುಕ್ತಿಯ ಬಯಸುವಗೆ....." – ಶ್ರೀಪಾದರಾಜರ ಕೀರ್ತನೆ.

೧೬. "ಹರಿ ಭಕುತನಾದವ ಅರಿದು ಪಾಪವ ಮಾಡುವುದಿಲ್ಲ
ಅರಿಯದೆ ಮಾಡಿದರೆ ಹರಿಯು ಎಣಿಸುವುದಿಲ್ಲ...." – ಶ್ರೀಪಾದರಾಜರ ಉಗಾಭೋಗ

೧೭. "ಕಡು ದರ್ಪವೇರಿದ ಒಡಲೆಂಬ ಬಂಡಿಗೆ ಮೃಡ ಭಕ್ತರ ನುಡಿಗಡಣ ಇವೇ ಕಡೆಕೀಲು ಕಾಣಾರಾಮನಾಥ
– ಜೇಡರದಾಸಿಮಯ್ಯನ ವಚನ

ಇ. ಚಾರಿತ್ರಿಕ ಹಿನ್ನೆಲೆ

ಕನ್ನಡದಲ್ಲಿ ದ್ವೈತಮತ ಸಿದ್ಧಾಂತದ ಪ್ರಚಾರವನ್ನೂ, ಹರಿಭಕ್ತಿಯನ್ನೂ ತಮ್ಮ ಕೀರ್ತನೆಗಳ ರಚನೆಯ ಮೂಲಕ ಮೊದಲಿಟ್ಟುಕೊಂಡವರು ಶ್ರೀಪಾದರಾಜರೇ ಎನ್ನುವುದರಲ್ಲಿ ಸರ್ವ ವಿದ್ವಾಂಸರ ಸಹಮತವಿದ್ದರೂ ಶ್ರೀಪಾದರಾಜರ ಕಾಲದ ಮುಂಚೆಯೇ ಇದ್ದ ಇಬ್ಬರು ಮಹನೀಯರುಗಳ ಹೆಸರುಗಳು ದಾಸಸಾಹಿತ್ಯ ರಚನೆಗೆ ಪ್ರೇರಕರೆಂದು ಕೆಲವು ವಿದ್ವಾಂಸರ ವಲಯದಲ್ಲಿ ಕೇಳಬಂದಿರುವುದು ಸುಳ್ಳಲ್ಲ. ಹಾಗೆ ಕೇಳಬಂದಿರುವ ಹೆಸರುಗಳೇ ಅಚಲಾನಂದ ದಾಸರದು ಮತ್ತು ನರಹರಿತೀರ್ಥರದು.

ಅಚಲಾನಂದ ದಾಸರು

ಸು. ೯ನೆಯ ಶತಮಾನದಲ್ಲಿ ಇದ್ದವರು. ಮೊದಲು ಸಂಸಾರಿಗಳೇ ಆಗಿದ್ದು ಆಮೇಲೆ ಒಂದು ಮಠದ ಪೀಠಾಚಾರ್ಯರಾಗಿ ವಿಠಲನ ಉಪಾಸನೆ ಮಾಡುತ್ತ ಅಚಲಾನಂದದಾಸರೆಂದು ಕರೆಯಿಸಿಕೊಂಡವರು. 'ಅಚಲಾನಂದ ವಿಠಲ' ಎಂಬ ಅಂಕಿತವಿರುವ ರಚನೆಗಳು ದೊರಕಿದ್ದು, ಅದು ಇವರದ್ದೇ ರಚನೆಗಳು ಎನ್ನುವ ವಿಚಾರದಲ್ಲಿ ವಿದ್ವಾಂಸರ ಸಹಮತವಿಲ್ಲ. ಈ ಅಂಕಿತದಲ್ಲಿ ಕೆಲವು ಉಗಾಭೋಗಗಳು, ಕೀರ್ತನೆಗಳು, ಸುಳಾದಿಗಳು ದೊರೆತಿವೆ. ಇವರು ಹರಿದಾಸರಲ್ಲಿ ಆದ್ಯರೋ ಅಥವಾ ಇತ್ತೀಚಿನವರೋ ಎಂಬ ಅನುಮಾನಕ್ಕೆ ಈ ರಚನೆಗಳು ಎಡೆಮಾಡಿಕೊಟ್ಟಿವೆ. ಆದರೆ ಬೇಲೂರು ಕೇಶವದಾಸರು ತಮ್ಮ 'ಶ್ರೀ ಕರ್ಣಾಟಕ ಭಕ್ತವಿಜಯ' ಕೃತಿಯಲ್ಲಿ ಅಚಲಾನಂದದಾಸರೇ ಈ ಅಂಕಿತದ ಕೃತಿಗಳ ರಚನೆಕಾರರು ಎಂದು ಸಮರ್ಥಿಸಿಕೊಂಡಿದ್ದಾರೆ. ಹೈಗಣಪುರದಲ್ಲಿ ವಾಸವಾಗಿದ್ದ ಅಚಲಾನಂದರು ದೇಶಾದ್ಯಂತ ಪಾದಚಾರಿಯಾಗಿ ಸಂಚರಿಸುತ್ತ ಎಲ್ಲೆಡೆಯೂ ಭಾಗವತಧರ್ಮವನ್ನು ಉಪದೇಶಿಸಿದರೆಂದು ತಿಳಿದುಬರುತ್ತದೆ. ಹಾಗೆ ಸಂಚಾರದಲ್ಲಿ ಪಂಢರಪುರಕ್ಕೆ ಬಂದಾಗ ಅಲ್ಲಿ ವಿಠ್ಠಲ ಪ್ರಸನ್ನನಾಗಿ ಅವರಿಗೆ ದರ್ಶನವಿತ್ತನಂತೆ. ಅಂದಿನಿಂದ ಅವರು ತಮ್ಮ ಕೃತಿಗಳನ್ನು ಅಚಲಾನಂದ ವಿಠಲ ಮುದ್ರಿಕೆಯಿಂದ ಸ್ವಾಮಿಗೆ ಅರ್ಪಿಸುತ್ತ ಬಂದರೆಂದು ಅವರ ಕುರಿತಾಗಿ ಬೇಲೂರು ಕೇಶವದಾಸರು ತಿಳಿಸುತ್ತಾರೆ.

ಆ ಕಾಲದಲ್ಲಿ ರಾಜ್ಯವಾಳುತ್ತಿದ್ದ ರಟ್ಟರು (ರಾಷ್ಟಕೂಟರು) ಅಚಲಾನಂದರ ಶಿಷ್ಯರಾದರು. ದಾಸರ ಶಿಷ್ಯರಾಗಿದ್ದ ಇತರ ೯೬ ಕೌಟುಂಬಿಕರಿಗೆ ಹನ್ನೆರಡು ಗ್ರಾಮಗಳನ್ನು ರಟ್ಟರು ದತ್ತಿಯಾಗಿ ಕೊಟ್ಟರಂತೆ. ಆ ಪ್ರದೇಶವೇ ಈಗ ತುರುವೇಕೆರೆ ಎನಿಸಿ ತುಮಕೂರು ಜಿಲ್ಲೆಯ ಭಾಗವಾಗಿದೆ ಎಂದು ತಿಳಿಯಲಾಗಿದೆ. ಅಚಲಾನಂದರ ಸಂತತಿಯಲ್ಲಿ ಕ್ರಮವಾಗಿ ಮುದ್ದುವಿಠಲ, ಗೋಪಿನಾಥ, ಹರಿದಾಸ, ತಿಮ್ಮಣ್ಣದಾಸ, ಪಾಂಡುರಂಗದಾಸರೆಂಬ ಹರಿದಾಸರು ಆಗಿಹೋಗಿದ್ದಾರೆ ಎಂಬ ಮಾತಿದೆ.

ದಾಸಸಂಪ್ರದಾಯದ ಮೂಲ ಪುರುಷರೇ ಎಂದು ಅಚಲಾನಂದದಾಸರನ್ನು ಅನೇಕರು ಪರಿಗಣಿಸಿದ್ದಾರೆ. ಮೂಲತಃ ಅದ್ವೈತಮತಾನುಯಾಯಿಗಳಾಗಿದ್ದು ಅಚಲಾನಂದರು ಭಾಗವತ ಧರ್ಮಾವಲಂಬಿಗಳಾಗಿದ್ದರು. ಮೊದಲಿನಿಂದಲೂ ನರಸಿಂಹದೇವರ ಉಪಾಸಕರಾಗಿದ್ದವರು. ಪುರಂದರದಾಸರಿಗೆ ಪೂರ್ವದಲ್ಲಿ ಅರವತ್ತು ಮಂದಿ 'ಆದ್ಯ' ರೆಂಬ ಹರಿದಾಸರಿದ್ದರೆಂದೂ, ಅವರಲ್ಲಿ ಒಂಬತ್ತು ಮಂದಿ ಆರಾಧ್ಯರೆಂದೂ ದಾಸಕೂಟದವರ ನಂಬಿಕೆಯೇ ಆಗಿದೆ.[೧] ಈ ಆದ್ಯರಲ್ಲಿ ಆದ್ಯರೆನಿಸಿಕೊಂಡವರು ಹೈಗಣಪುರದ ಅಚಲಾನಂದದಾಸರು.

"ಆದ್ಯ ದಾಸರುಗಳೆಂದರೆ ಪೂರ್ವದಲ್ಲಿ ಶೈವಮತಾನುಯಾಯಿಗಳಾಗಿದ್ದು 'ಆರಾಧ್ಯ ಬ್ರಾಹ್ಮಣ' ರೆಂದು ಕರೆಯಿಸಿಕೊಂಡವರು. ಲಿಂಗವನ್ನೂ, ಯಜ್ಞೋಪವೀತವನ್ನೂ ಧರಿಸುತ್ತಿದ್ದವರು. ಆ ಆರಾಧ್ಯರು ಕಾಲಕ್ರಮೇಣ ಭಾಗವತಧರ್ಮವನ್ನು ಅವಲಂಬಿಸಿ ಅನೇಕರು ಹರಿದಾಸರುಗಳಾದರು. ಇವರ ವಂಶೀಕರಲ್ಲಿ ಕೆಲವರು ಮಧ್ವಾಚಾರ್ಯರ ಕಾಲದಲ್ಲಿ ಚಕ್ರಾಂಕನ ಮಾಡಿದಿಕೊಂಡು ವೈಷ್ಣವರಾಗಿ ಮಹಾಶಾಸ್ತ್ರ ಪಂಡಿತರಾದರು. ಆರಾಧ್ಯ ಎಂಬ ಮಾತು ಕ್ರಮೇಣ ಆದ್ಯ ಎಂಬ ಉಚ್ಚಾರ ಭೇದವನ್ನು ಪಡೆಯಿತು."[೨]

ಮಧ್ವಾಚಾರ್ಯರಿಗೆ ಪೂರ್ವದಲ್ಲೇ ಈ ಅರವತ್ತುಮೂರು ಮಂದಿ ಆದ್ಯರು, ಅರಾಧ್ಯರು ಹರಿದಾಸ ಪರಂಪರೆಯನ್ನು ಬೆಳೆಸಿದರು ಎಂಬ ನಂಬಿಕೆ ಕೆಲವರದು. ಅಚಲಾನಂದದಾಸರ ಪರಂಪರೆಯಲ್ಲಿ ಬಂದಿರುವುವು ಎಂದು ಹೇಳಲಾದ 'ಮುದ್ದು ವಿಟ್ಠಲ' 'ಯೋಗೀಂದ್ರ ವಿಠ್ಠಲ' 'ನರಕಂಠೀರವ ವಿಠ್ಠಲ' 'ಸೊಬಗು ವಿಠ್ಠಲ' ಮುಂತಾದ ಅಂಕಿತಗಳಿರುವ ಪುರಾತನರ ಕೃತಿಗಳನ್ನು ಲಿಂಗಸೂಗೂರಿನ ವರದೇಂದ್ರ ದಾಸಸಾಹಿತ್ಯ ಮಂಡಳಿಯ ಗೊರಬಾಳ ಹನುಮಂತರಾಯರು ಸಂಗ್ರಹಿಸಿ ಕೊಟ್ಟಿದ್ದಾರೆ.

ನರಹರಿ ತೀರ್ಥರು

ಮಧ್ವಾಚಾರ್ಯರ ನೇರ ಶಿಷ್ಯರು "ನರಹರಿ ತೀರ್ಥರು". ಶಿಷ್ಯತ್ವ ಸ್ವೀಕರಿಸುವ ಮುಂಚಿನ ಇವರ ಹೆಸರು ಸ್ವಾಮಿಶಾಸ್ತ್ರಿಗಳೆಂದು. ೧೨೬೪ರಿಂದ ೧೨೭೯ರವರೆಗೂ ಕಳಿಂಗದೇಶವನ್ನು (ಈಗಿನ ಒರಿಸ್ಸಾ) ಆಳುತ್ತಿದ್ದ ಗಾಂಗವಂಶದ ಅರಸ ಮೊದಲನೆಯ ಭಾನುದೇವನ ಕಾಲದಲ್ಲಿ ಅಲ್ಲೇ ಇದ್ದವರು. "ಭಾನುದೇವಾಶ್ರಿತಃ" "ಮುದುಸಲಿ ಸಚಿವುಡು ನರಹರಿ ಮುನೀಶ್ವರುಡು" ಎಂಬೆರಡು ಶಾಸನಗಳು ದೊರಕಿದ್ದು ಕಳಿಂಗ ದೇಶದಲ್ಲಿ ಇವರು ಆಡಳಿತವನ್ನೂ ನಡೆಸುತ್ತಿದ್ದುದರ ಬಗ್ಗೆ ಬೆಳಕು ಚೆಲ್ಲುತ್ತವೆ. ೧೨೮೧ರಲ್ಲಿ ಶ್ರೀಕೂರ್ಮ, ಸಿಂಹಾಚಲಗಳಲ್ಲಿ ತಾವು ದಾನಧರ್ಮಗಳನ್ನು ನಡೆಸಿದ ಬಗ್ಗೆ ತಾವೇ ಶಾಸನಗಳನ್ನು ಹೊರಡಿಸಿದ್ದು ಅವುಗಳು ಲಭ್ಯವಿವೆ. ಕಳಿಂಗದೇಶದ ಗಂಜಾಂ ಜಿಲ್ಲೆಯ ಶ್ರೀಕೂರ್ಮ ದೇವಸ್ಥಾನದ ಒಂದು ಶಾಸನದಲ್ಲಿ ತಾವು ಆನಂದ ತೀರ್ಥರ (ಮಧ್ವಾಚಾರ್ಯರ) ಶಿಷ್ಯರೆಂದೂ, ಗುರುಗಳ ಆಜ್ಞಾನುಸಾರ ಕಳಿಂಗದೇಶದ ಜನರನ್ನು ಪಾಲಿಸುತ್ತೇವೆ ಎಂದೂ

ತಿಳಿಸಿದ್ದಾರೆ. ಹತ್ತು ವರ್ಷಗಳ ನಂತರ ಸಿಂಹಾಚಲದ ನರಸಿಂಹನಿಗೆ ಅಖಂಡದೀಪದಾನವನ್ನು ಮಾಡಿರುವ ಶಾಸನವೂ ದೊರೆತಿದ್ದು ತೆಲುಗು ಭಾಷೆಯಲ್ಲಿ "ಶ್ರೀಮದಾನಂದತೀರ್ಥಪೂಜ್ಯಪಾದಾಚಾರ್ಯ ಶಿಷ್ಯುಲೈನ ಶ್ರೀನರಹರಿತೀರ್ಥ ಶ್ರೀಪಾದುಲು" ಎಂಬ ಒಕ್ಕಣೆಯನ್ನು ಅಲ್ಲಿ ಕಾಣಬಹುದು.

ತಮ್ಮ ಬದರೀಯಾತ್ರೆಯ ನಡುವೆ ಮಧ್ವಾಚಾರ್ಯರು ಒರಿಸ್ಸಾ ರಾಜಧಾನಿಗೆ ಬಂದಿದ್ದಾಗ ಅಲ್ಲಿದ್ದ ಸ್ವಾಮಿಶಾಸ್ತ್ರಿಗಳೇ ಮಧ್ವಾಚಾರ್ಯರೊಡನೆ ವಾದಕ್ಕೆ ಇಳಿದು ಸೋತು ಅವರ ಶಿಷ್ಯರಾದರು. ಮುಂದೆ ಆಚಾರ್ಯರ ಅಪೇಕ್ಷೆಯ ಮೇರೆಗೆ ಒರಿಸ್ಸಾದ ಗಜಪತಿ ಅರಸರ ಭಂಡಾರದಲ್ಲಿದ್ದ ಮೂಲ ಸೀತಾರಾಮರ ವಿಗ್ರಹಗಳನ್ನು ಆಚಾರ್ಯರಿಗೆ ತಂದು ಒಪ್ಪಿಸಿ ತಾವೂ ಉಡುಪಿಯಲ್ಲೆ ನೆಲೆಸಿದರು. ಮಧ್ವಾಚಾರ್ಯರು ೮೦ ದಿನಗಳ ಕಾಲ ಆ ಸೀತಾರಾಮ ವಿಗ್ರಹಗಳನ್ನು ಆರಾಧನೆ ಮಾಡಿ ತಮ್ಮ ಸಂಸ್ಥಾನವನ್ನು ಪದ್ಮನಾಭ ತೀರ್ಥರಿಗೆ ಒಪ್ಪಿಸಿ ಮತ್ತೆ ಬದರಿಗೆ ಪ್ರಯಾಣ ಹೊರಟರು. ಪದ್ಮನಾಭತೀರ್ಥರು ೧೩೨೪ನೇ ನವೆಂಬರ್ ೧೨ರವರೆಗೆ (೧೩೧೭ ರಿಂದ – ೧೩೨೪ರವರೆಗೆ – ಒಟ್ಟು ೭ ವರ್ಷಗಳು) ತಾವು ಈ ಸರ್ವಜ್ಞ ಪೀಠದಲ್ಲಿದ್ದು ನಂತರ ನರಹರಿತೀರ್ಥರಿಗೆ ಅದನ್ನು ಒಪ್ಪಿಸಿದರು.

೧೩೨೪ ರಿಂದ ೧೩೩೩ ರವರೆಗೆ ಒಂಬತ್ತು ವರ್ಷಗಳಲ್ಲಿ ಪೀಠಾಧಿಪತಿಯಾಗಿ ಕನ್ನಡನಾಡಿನಲ್ಲಿ ನೆಲೆಸಿದ್ದ ನರಹರಿತೀರ್ಥರು ಕೆಲವು ಕನ್ನಡ ಕೀರ್ತನೆಗಳನ್ನು ರಚನೆಮಾಡಿದ್ದು, ಅವುಗಳಲ್ಲಿ ದೊರೆತಿರುವುವು ಮೂರು ಮಾತ್ರ ಆದರೆ ಇವುಗಳಲ್ಲಿಯೂ ಅಂಕಿತ ವ್ಯತ್ಯಾಸವಿರುವುದರಿಂದ ಇವು ಅವರೊಬ್ಬರದೇ ಕೃತಿಗಳೆನ್ನುವುದು ಚರ್ಚಾಸ್ಪದವಾಗಿಯೇ ಇದೆ. ಈ ಕುರಿತು ಇನ್ನೂ ಸಂಶೋಧನೆ ನಡೆಯಬೇಕಿದೆ. ಮತ್ತಷ್ಟು ಮಾಹಿತಿಗಳು ಖಚಿತವಾಗಿ ದೊರೆಯಬೇಕಾಗಿದೆ.

ನರಹರಿತೀರ್ಥರು ತಮ್ಮ ಆಡಳಿತಾವಧಿಯಲ್ಲಿ ವಿಶೇಷವಾಗಿ ನೃತ್ಯಕಲೆಗೆ ಪ್ರೋತ್ಸಾಹವಿತ್ತವರೆಂದು ತಿಳಿದುಬಂದಿದೆ. ಭಕ್ತಿಸಾಹಿತ್ಯಕ್ಕೂ ಅಪಾರ ಪ್ರೋತ್ಸಾಹ ನೀಡಿದವರು. ಆಂಧ್ರಪ್ರದೇಶದ ಕಾಕುಳಂ ಎಂಬಲ್ಲಿಯ ಜಯಪನೆಂಬ ಅರಸನಿಗೆ ನೃತ್ಯಪದ್ಧತಿಯಲ್ಲಿ ವಿಶೇಷ ಆಸಕ್ತಿಯಿದ್ದು ಚೆಬ್ರೋಲಿ ಎಂಬಲ್ಲಿ ದೇವಾಲಯವನ್ನು ಕಟ್ಟಿಸಿ ಅಲ್ಲಿ ಮುನ್ನೂರು ಜನ ದೇವದಾಸಿಯರನ್ನಿರಿಸಿ ಅವರಿಗೆಲ್ಲ ನೃತ್ಯ ಶಿಕ್ಷಣ ಏರ್ಪಡಿಸಿ ನಾಟ್ಯಪರಿಣಿತರನ್ನಾಗಿ ಮಾಡಿದನು. ಆದರೆ ಮಹಮ್ಮದ್ ಬಿನ್ ತುಘಲಕನ ಧಾಳಿಯ ನಂತರ ಈ ಪ್ರದೇಶದಲ್ಲಿ ನೃತ್ಯ ಕಲೆಯ ಬಲ ಕಡಿಮೆಯಾಯಿತು. ಈ ಕಾಕುಳಂಗೆ ನೆರೆಯಲ್ಲೇ ಇದ್ದ ಕಳಿಂಗ (ಈಗಿನ ಒರಿಸ್ಸಾ)ವನ್ನಾಳುತ್ತಿದ್ದ ನರಹರಿತೀರ್ಥರು ಆಗಾಗ ಇಲ್ಲಿಗೆ ಬರುತ್ತಿದ್ದು ಕೃಷ್ಣಭಕ್ತಿಯ ಪ್ರಚಾರಕ್ಕೆ ವಿಶೇಷ ಪ್ರೋತ್ಸಾಹವುಂಟಾಯಿತು. (ಈ ಶ್ರೀಕಾಕುಳಂ ಕ್ರಿ.ಪೂ ೨ನೇ ಶತಮಾನದಿಂದಲೂ ಪ್ರಖ್ಯಾತ ಪಟ್ಟಣವಾಗಿದ್ದು ಶಾತವಾಹನರ ರಾಜಧಾನಿಯಾಗಿತ್ತು. ಆಂಧ್ರವಿಷ್ಣು ಎಂಬಾತ ಕಟ್ಟಿಸಿದ ಈ ಪಟ್ಟಣದ ದೇಗುಲದಲ್ಲಿಯೇ ಮುಂದೆ ಕೃಷ್ಣದೇವರಾಯ ಅರಸನು ತನ್ನ ಪ್ರಸಿದ್ಧ 'ಅಮುಕ್ತ ಮೌಲ್ಯ'ವೆಂಬ ಕೃತಿಯನ್ನು ರಚಿಸಿದ್ದು).

ಶ್ರೀಕಾಕುಳಂಗೆ ಕೇವಲ ಆರು ಮೈಲಿ ದೂರದಲ್ಲೇ ಕೂಚಿಪುಡಿ ಎಂಬ ಹಳ್ಳಿಯಿದೆ. ನರಹರಿ ತೀರ್ಥ ಪ್ರೋತ್ಸಾಹದಲ್ಲಿ ಆಗಲೇ ಪ್ರಚಲಿತವಿದ್ದ ಜಯದೇವ ಕವಿಯ 'ಗೀತಗೋವಿಂದ'ವನ್ನು ನೃತ್ಯಕ್ಕೆ ಹೊಂದಿಸಿಕೊಂಡು ನಾಟ್ಯಕಲೆ ಮತ್ತೆ ತಲೆಎತ್ತತೊಡಗಿತು. ನರಹರಿ ತೀರ್ಥರ ಒಬ್ಬ ಶಿಷ್ಯ 'ಗೋಪಾಲಕೃಷ್ಣ ಸರಸ್ವತಿ' ಎಂಬಾತ ೧೨೮ ಗೀತೆಗಳಿರುವ 'ಮಹಾಭಾಗವತ' ಹಾಗೂ ನೃತ್ಯರೂಪಕವಾದ 'ಶ್ರೀಕೃಷ್ಣ ಜಲಕ್ರೀಡಾ' ಮುಂತಾದ ಕೃತಿಗಳನ್ನು ರಚಿಸಿ ನಾಟ್ಯಕ್ಕೆ ಹೊಂದಿಸಿಕೊಟ್ಟನು. ಮುಂದೆ ಈ ಹಾಡುಗಳು 'ಗೋಪಾಲಕೃಷ್ಣವೃತ್ತಿ' ಎಂದೇ ಪ್ರಸಿದ್ಧವಾಗಿ ಕೃಷ್ಣಪಂಥವಾಗಿ ಬೆಳೆಯ ತೊಡಗಿತು. ಹೀಗೆ ನೃತ್ಯಕಲೆ, ಹರಿಭಕ್ತಿಗೆ ಅಪಾರವಾಗಿ ಹಿನ್ನೆಲೆಯ ಪ್ರೋತ್ಸಾಹ ನರಹರಿ ತೀರ್ಥರದು.

ಕೂಚುಪುಡಿಯ ಬಳಿಯಲ್ಲೇ ಇರುವ ಪುಟ್ಟಹಳ್ಳಿಯ ಸಿದ್ಧಪ್ಪ ಎಂಬಾತ ಅನಾಥ ಬ್ರಾಹ್ಮಣ ಹುಡುಗನಾಗಿದ್ದು ನರಹರಿತೀರ್ಥರ ವಿಶ್ವಾಸ, ಅನುಗ್ರಹಗಳಿಗೆ ಪಾತ್ರನಾಗಿ ವೇದಶಾಸ್ತ್ರ ಪಾರಂಗತನಾದ. ದೇವಾಲಯದಲ್ಲಿ ನಡೆಯುತ್ತಿದ್ದ ನೃತ್ಯಪದ್ಧತಿಯಿಂದ ಈತ ಆಕರ್ಷಿತನಾಗಿ ತಾನೂ ಕೂಡ ನೃತ್ಯ ಕಲಿತು ಗಂಧರ್ವಗಾನ ಮಾಡಿ, ಅಭಿನಯಕ್ಕೆ ಅನುಗುಣವಾಗುವಂಥ ಸಂಸ್ಕೃತ ಶ್ಲೋಕಗಳನ್ನು ರಚಿಸುತ್ತಿದ್ದನು. ಮುಂದೆ ಸನ್ಯಾಸ ದೀಕ್ಷೆಯನ್ನೂ ಪಡೆದು 'ಸಿದ್ಧೇಂದ್ರ' ಯತಿಯಾದನು. ರಾಧಾಕೃಷ್ಣ ಸಂಪ್ರದಾಯದ ಪ್ರವರ್ತಕನಾದನು. ಈತನ ರಚನೆ, ನಿರ್ದೇಶನದ 'ಭಾಮಾಕಲಾಪ' ಅಂದಿನ ದಿನಗಳಲ್ಲಿ ಅತ್ಯಂತ ಜನಪ್ರಿಯ ನರ್ತನವೆನಿಸಿಕೊಂಡಿತು.

ಆದರೆ ನರಹರಿತೀರ್ಥರು ತಮ್ಮ ಈ ಶಿಷ್ಯನಿಗೆ ದೇವದಾಸೀ ಪದ್ಧತಿಯ ನಿರ್ಮೂಲನವಾಗಬೇಕೆಂದು, ಕೃಷ್ಣ ಭಕ್ತಿಯ ವ್ಯಾಪಕತೆ ಹೆಚ್ಚಬೇಕೆಂದು ಆದೇಶ ನೀಡಿದ್ದರಿಂದ ಸಿದ್ಧೇಂದ್ರನು ಲಕ್ಷಣವಂತರಾಗಿದ್ದ ಬ್ರಾಹ್ಮಣ ತರುಣರನ್ನು ಆಯ್ದು ಅವರಿಂದಲೇ ನಾಟ್ಯಕಲೆಯನ್ನು ಪ್ರದರ್ಶಿಸ ತೊಡಗಿದನು. ಬ್ರಾಹ್ಮಣರು ಗೆಜ್ಜೆ ಕಟ್ಟಿ ಕುಣಿಯುವುದಕ್ಕೆ ಸಮಾಜದಿಂದ ಬಹಿಷ್ಕಾರ ಬಿತ್ತು. ಆದರೆ ರಾಧಾಕೃಷ್ಣರ ಪ್ರೀತಿಸಂದೇಶವನ್ನು ಹಾಡುತ್ತ ಕುಣಿಯುತ್ತ ಪ್ರಚಾರ ಮಾಡಲು 'ಕುಶೀಲವ'ರಂತೆ ಊರೂರು ಅಲೆಯುತ್ತಿದ್ದ ಇವರು 'ಕುಶೀಲವುಲು' ಎಂದೇ ಪ್ರಖ್ಯಾತರಾದರು. ಮುಂದೆ 'ಕುಶೀಲವುಲು' ಉಚ್ಚಾರವೇ 'ಕುಚೇಲು' ಆಯಿತು.

ಸಭ್ಯ ಸಮಾಜದವರೆನಿಸಿಕೊಂಡವರಿಂದ ಬಹಿಷ್ಕಾರ ಪ್ರಾಪ್ತಿಯಾದಾಗ ನರಹರಿತೀರ್ಥರ ಸಹಕಾರದಿಂದ ಇವರೆಲ್ಲರಿಗೂ ಸಿದ್ಧೇಂದ್ರ ಒಂದು ನೆಲೆಯನ್ನು ದೊರಕಿಸಿಕೊಟ್ಟ. ಇವರಿಗೆಲ್ಲ ಸೇರಿ ನರಹರಿತೀರ್ಥರು ದೊರಕಿಸಿಕೊಟ್ಟ ಗ್ರಾಮವೇ 'ಕುಚೇಲುಪುರಿ'ಯಾಗಿ ಕ್ರಮೇಣ 'ಕೂಚೀಪುಡಿ' ಆಯಿತು. ಇದೇ ಕೂಚಿಪುಡಿ ನೃತ್ಯಪ್ರಕಾರದ ಹಿನ್ನೆಲೆ. ಹೀಗೆ ನರಹರಿತೀರ್ಥರು ತಮ್ಮ ಆಡಳಿತ ಅವಧಿಯಲ್ಲಿ ನೃತ್ಯ ಮತ್ತು ಕೃಷ್ಣಭಕ್ತಿಗೆ ವಿಶೇಷವಾದ ಪ್ರೇರಣೆ, ಪ್ರೋತ್ಸಾಹ, ಆಶ್ರಯ ಕೊಟ್ಟು ಬೆಳೆಸಿದವರಾಗಿದ್ದಾರೆ. ಕೂಚುಪುಡಿ ನೃತ್ಯ ಪ್ರಕಾರದ ಮೂಲ ಪೋಷಕರೆನ್ನಿಸಿದ್ದಾರೆ.

ಈಗಿನ ಇನ್ನೂರು ವರ್ಷಗಳ ಕೆಳಗೆ 'ಚಿಪ್ಪಗಿರಿ' ಎಂಬಲ್ಲಿ ವಿಜಯದಾಸರು ವಹಿಯ ಮೇಲೆ ನರಹರಿ ತೀರ್ಥರು ರಚಿಸಿದ ಪದಗಳೆಂದು ಸೂಚಿಸಿ ಶ್ರೀಹರಿ ಸ್ತೋತ್ರಪದಗಳನ್ನು ಬರೆದಿಟ್ಟಿದ್ದಾರೆ.[*೪]

ಹೀಗೆ ಕೃಷ್ಣಭಕ್ತಿಯ ಪ್ರಕಾರಕ್ಕೂ, ನೃತ್ಯಕಲೆಗೂ ನರಹರಿತೀರ್ಥರಿಂದ ವಿಶೇಷ ಕೊಡುಗೆ ದಕ್ಕಿದೆ. ಸಾಂಸ್ಕೃತಿಕವಾಗಿಯೂ, ಧಾರ್ಮಿಕವಾಗಿಯೂ, ರಾಜಕಾರ್ಯ ಆಡಳಿತಾತ್ಮಕವಾಗಿಯೂ ಉನ್ನತ ಸಾಧನಾಶೀಲರಾಗಿದ್ದವರು ನರಹರಿತೀರ್ಥರು. ಕೃಷ್ಣಭಕ್ತಿಯ ಪ್ರಚಾರಕ್ಕೆಂದು ಅವರು ಆರಿಸಿಕೊಂಡ ಕೇಂದ್ರಸ್ಥಾನ ''ಶ್ರೀಕಾಕುಳಂ', ಇಲ್ಲಿಯೇ ಇವರ ಶಾಸನಗಳೂ ದೊರಕಿರುವುದು.

ಅಭಿಪ್ರಾಯ ಭೇದಗಳು

ಮಧ್ವಾಚಾರ್ಯರಿಂದ ಮೂರನೆಯ ಪಟ್ಟದ ಸ್ವಾಮಿಗಳಾಗಿ ಬಂದ ನರಹರಿತೀರ್ಥರು ಕೆಲವು ಕನ್ನಡ ಕೀರ್ತನೆಗಳನ್ನು ಬರೆದಿದ್ದು ಇವರೇ ಮುಂದೆ ಬಂದ ಹರಿದಾಸ ಸಾಹಿತ್ಯಕ್ಕೆ ಪ್ರೇರಣಾಪುರುಷರು ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. "ಧರ್ಮಪ್ರಚಾರಕ್ಕೆ ಭಾಗವತ ಧರ್ಮದ ಪದ್ಧತಿಗೆ ಇವರು ಪುರಸ್ಕಾರವಿತ್ತು ಅನೇಕ ಕನ್ನಡ ದೇವರನಾಮಗಳನ್ನು ರಚಿಸಿದರು ಎಂಬ ಪ್ರತೀತಿಯಿದ್ದರೂ ದೊರಕಿರುವುವು ಇವರ ಮೂರೇ ರಚನೆಗಳು. ಈ ರಚನೆಗಳ ಭಾಷೆ ಹದಿಮೂರನೆಯ ಶತಮಾನದ ಕನ್ನಡಕ್ಕೆ ಹೊಂದದೆ ಹದಿನಾರನೆಯ ಶತಮಾನದ ಭಾಷೆಗೆ ಹೆಚ್ಚು ಹೋಲುತ್ತದೆ. ಹೀಗಾಗಿ ಹರಿದಾಸ ಸಾಹಿತ್ಯಕ್ಕೆ ಇವರೇ ಆದ್ಯ ಪ್ರವರ್ತಕರೆನ್ನುವುದು ಎಷ್ಟು ಸಮಂಜಸವೆನ್ನುವ ಪ್ರಶ್ನೆಯನ್ನು ಬೇಲೂರು ಕೇಶವದಾಸರು ಎತ್ತಿದ್ದಾರೆ.[*೫]

"ಸಂಸ್ಥಾನಾಧಿಪತಿಗಳೇ ಕನ್ನಡದಲ್ಲಿ ಪದ್ಯ ಕಟ್ಟಿ ಹಾಡತೊಡಗಿದ್ದರಿಂದ ಸಂಸ್ಕೃತ ಪಂಡಿತರ ಭಾಷೆಯ ಮಡಿವಂತಿಕೆಯ ಭಾವವು ಬದಲಾವಣೆಗೊಂಡಿತು. ಪಂಡಿತ ಪಾಮರರೆಲ್ಲರೂ ಮೈಛಳಿಬಿಟ್ಟು ಕನ್ನಡ ಪದ್ಯಗಳನ್ನು ಹಾಡುವಂತಾಯಿತು. ಇದರಿಂದ ಮುಂದೆ ದಾಸಸಾಹಿತ್ಯದ ಪ್ರಸಾರಕ್ಕೆ ಹಾದಿಯಾಯಿತು. ಇದೇ ಮುಂದೆ ವಿಶ್ವವಿಶಾಲ ದಾಸಕೂಟದ ವಿರಾಡ್ ವಾಙ್ಮಯದ ವೈಭವಕ್ಕೆ ಆದಿಯಾಯಿತು." ಎಂದು ಪಂಢರೀನಾಥಾಚಾರ್ಯ ಗಲಗಲಿಯವರು ಅಭಿಪ್ರಾಯ ಪಟ್ಟಿದ್ದಾರೆ.[*೬]

"ಮಧ್ವಾಚಾರ್ಯರ ಕಾಲದಲ್ಲಿ ಅವರ ಶಿಷ್ಯ ಸಮುದಾಯವೂ, ಮುಂದೆ ನರಹರಿತೀರ್ಥರೂ ರಚಿಸಿದ ಹರಿದಾಸ ವಾಙ್ಮಯವೇ ದಾಸಸಾಹಿತ್ಯದ ಪ್ರಥಮ ಘಟ್ಟ.[*೭] "ಮಧ್ವಾಚಾರ್ಯರ ಪರಂಪರೆಯಲ್ಲಿ ಮೂರನೆಯ ಪಟ್ಟದ ಸ್ವಾಮಿಗಳಾದ ನರಹರಿತೀರ್ಥರು ಈ ಪರಂಪರೆಯಲ್ಲಿ ಅತ್ಯಂತ ಪ್ರಾಚೀನರು. ಅವರು ಕೆಲವು ಕನ್ನಡ ಹಾಡುಗಳನ್ನು ಬರೆದಿರುವಂತೆ ತಿಳಿದು ಬರುತ್ತದೆ."[*೮]

ಹರಿದಾಸ ಪಂಥಕ್ಕೆ ಮಧ್ವಾಚಾರ್ಯರೇ ಪ್ರವರ್ತಕರು ಎನ್ನುವುದು ಕೆಲ ವಿದ್ವಾಂಸರ ಅಭಿಪ್ರಾಯ. "ಭಕ್ತಿಮಾರ್ಗವು ಎಷ್ಟೋ ಹಿಂದಿನಿಂದ ಇದ್ದಿತಾದರೂ ಅದು ಕರ್ನಾಟಕದಲ್ಲಿ ಧೃಡವಾಗಿ ಬೇರನ್ನು ಊರಿ ಸಾಹಿತ್ಯರೂಪದಿಂದ ಸರ್ವತ್ರ ಹಬ್ಬಿಕೊಂಡಿದ್ದು ದ್ವೈತ ಸಿದ್ಧಾಂತವನ್ನು ಮಧ್ವಾಚಾರ್ಯರು (ಕ್ರಿ.ಶ.೧೨೩೮-೧೩೧೮) ಪ್ರತಿಪಾದಿಸಿದಂದಿನಿಂದ. ಆ ಕನ್ನಡ ಸ್ಫೂರ್ತಿಯಿಂದಲೇ ಕನ್ನಡ ನಾಡಿನಲ್ಲಿ ಹರಿದಾಸರ ಕೂಟ ಹುಟ್ಟಿತು."[*೯] "ದಾಸ ಸಾಹಿತ್ಯ ಪ್ರವಾಹಕ್ಕೆ ಮಧ್ವಸಿದ್ಧಾಂತ ತಲಕಾವೇರಿಯಿದ್ದಂತೆ.[*೧೦] "ಹರಿದಾಸ ಸಾಹಿತ್ಯ ನಿರ್ಮಾಣಕ್ಕೆ ಶ್ರೀಮಧ್ವಾಚಾರ್ಯರು ರಚಿಸಿದ ಹರಿಗೀತೆ ಅಥವಾ ದ್ವಾದಶಸ್ತೋತ್ರವೇ ಮೂಲ ಪ್ರೇರಣೆ."[*೧೧] ಹೀಗೆ ಕೆಲವು ವಿದ್ವಾಂಸರ ಹೇಳಿಕೆ ಇದ್ದರೆ ಇನ್ನು ಕೆಲವರು ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾದ ನರಹರಿತೀರ್ಥರು ದಾಸಸಾಹಿತ್ಯದ ಪ್ರವರ್ತಕರೆಂದು ಅಭಿಪ್ರಾಯ ಪಡುತ್ತಾರೆ. "೧೩೩೧ರಲ್ಲಿ ಹಂಪಿಯ ಬಳಿ ತೀರಿಕೊಂಡ ಇವರು 'ರಘುಪತಿ' 'ರಘುಕುಲತಿಲಕ' ಎಂಬ ಅಂಕಿತಗಳಲ್ಲಿ ಕೆಲವು ದೇವರನಾಮಗಳನ್ನು ರಚಿಸಿದ್ದಾರೆ."[*೧೨]

ಡಾ|| ಕೆ.ಎಂ.ಕೃಷ್ಣರಾಯರೆಂಬ ವಿದ್ವಾಂಸರು ನರಹರಿತೀರ್ಥರು ಹರಿದಾಸಪದಗಳ ರಚನೆ ಮಾಡಿರಲಾರರು ಎಂದು ಅನುಮಾನ ವ್ಯಕ್ತ ಪಡಿಸಿದ್ದಾರೆ. ಕೇವಲ ಮೂರೇ ಅವರದ್ದೆನ್ನುವ ರಚನೆಗಳು ದೊರಕಿದ್ದು, ಅವುಗಳಲ್ಲಿಯ ಅಂಕಿತವೂ ಒಂದೇ ಸಮನಾಗಿಲ್ಲ. ಇದಲ್ಲದೆ ಅವರೇ ದಾಸಪಂಥ ಕಟ್ಟಿ ದಾಸಸಾಹಿತ್ಯ ರಚಿಸಿದ್ದಲ್ಲಿ ಅವರ ಕಾಲದ ತರುವಾಯ ಒಂದು ಶತಮಾನದಷ್ಟು ದೀರ್ಘಕಾಲ ಅವರ ಶಿಷ್ಯ ಪರಂಪರೆಯವರಾಗಲಿ, ಯಾವ ಹರಿದಾಸರಾಗಲಿ ಕಾಣಿಸಿಕೊಳ್ಳದಿರಲು, ಯಾವ ಯಾರ ಕೃತಿಗಳೂ ದೊರೆತಿಲ್ಲದಿರಲು ಕಾರಣವೇನು? ಎಂಬ ಅನುಮಾನವನ್ನು ಮುಂದಿಟ್ಟಿದ್ದಾರೆ. ಇದಲ್ಲದೆ ಹರಿದಾಸರ ಪರಂಪರೆಯನ್ನು ಕುರಿತಾಗಿರುವ ವಂದನಾ ಶ್ಲೋಕದಲ್ಲಿ[*೧೩] ಅವರ ಹೆಸರಿಲ್ಲ, ಅವರ ಹೆಸರಿರುತ್ತಿದ್ದಲ್ಲಿ ಖಚಿತವಾಗೆ ಅವರಿಂದ ದಾಸಸಾಹಿತ್ಯದ ಉಗಮವೆಂದು ತಿಳಿಯ ಬಹುದಿತ್ತು ಎಂದು ಕೆ.ಎಂ.ಕೃಷ್ಣರಾಯರ ಅಭಿಪ್ರಾಯ ಮಂಡನೆಯಿದೆ.

"ಹರಿದಾಸ ಪಂಥದ ಪ್ರಮುಖ ಉಪಾಸ್ಯ ದೇವತಾಮೂರ್ತಿ ಪಂಢರಪುರದ ವಿಠಲನಾಗಿದ್ದು 'ವಿಠಲ'ನೆಂಬ ಶಬ್ದ ಹರಿದಾಸರ ಅಂಕಿತದಲ್ಲಿ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಮೊದಲಿಗರಾದ ಶ್ರೀಪಾದರಾಜರ ಅಂಕಿತದಲ್ಲೂ "ರಂಗವಿಠಲ" ಎಂದು ಇದೆ. ನರಹರಿತೀರ್ಥರದೆಂದು ಹೇಳಲಾಗುವ ಅಂಕಿತದಲ್ಲಿ ಈ 'ವಿಠಲ' ಶಬ್ಧವೂ ಇಲ್ಲ.[*೧೪]

ಇನ್ನೂ ಕೆಲವು ವಿದ್ವಾಂಸರು ೯ನೇ ಶತಮಾನದಲ್ಲಿದ್ದ ಅಚಲಾನಂದದಾಸರೇ ದಾಸಸಾಹಿತ್ಯ ರಚನೆಗೆ ಮೊದಲಿಗರು ಎಂಬ ಅಭಿಪ್ರಾಯ ಸೂಚಿಸಿರುತ್ತಾರೆ. ಅಚಲಾನಂದರು ಶಾಲಿವಾಹನ ಶಕ ೮೦೧ರಲ್ಲಿ ಇದ್ದವರು, ಎಂದರೆ ಕ್ರಿ.ಶ.೮೭೯ರಲ್ಲಿದ್ದವರು, ಇವರೇ ದಾಸ ಸಾಹಿತ್ಯ ಪ್ರವರ್ತಕರು ಎನ್ನುವುದನ್ನು ಬೇಲೂರು ಕೇಶವದಾಸರು ಸಮರ್ಥಿಸಿಕೊಂಡಿದ್ದಾರೆ.[*೧೫] ವಿಠಲನ ಸಾಕ್ಷಾತ್ಕಾರವನ್ನು ಪಡೆದವರೆನ್ನಲಾಗಿರುವ ಅಚಲಾನಂದರು ತಮ್ಮ

ಶ್ಲೋಕರಚನೆ [೧೬] ಯೊಂದರ ಮೂಲಕ ಹೇಳಿಕೊಂಡಿರುವ ಪ್ರಕಾರ ಅವರ ಕಾಲವು ಶಾಲಿವಾಹನ ಶಕ ೧೨೮೧ ಎಂದರೆ ಕ್ರಿ.ಶ. ೧೩೫೯ ಆಗುತ್ತದೆ ಎಂದು ಹುಲಗೂರು ಕೃಷ್ಣಾಚಾರ್ಯರು ಸ್ಪಷ್ಟಪಡಿಸಿತ್ತಾರೆ. [೧೭] ಅಚಲಾನಂದರದು ಎನ್ನಲಾಗಿರುವ "ಕೇಳೋ ಜೀವನವೇ ನೀ ಮಧ್ವಮತವನನುಸರಿಸಿ। ಶ್ರೀಲೋಲನಂಘ್ರಿಗಳ ನನೆದು ಸುಖಿಸೋ" ಎಂಬ ಕೃತಿಯನ್ನು ಉದಾಹರಿಸಿ ಅಚಲಾನಂದರು ಮಧ್ವಾಚಾರ್ಯರ ತರುವಾಯದ ಕಾಲದಲ್ಲಿ ಬಂದವರು ಎನ್ನುವುದನ್ನು ಸಮರ್ಥಿಸುತ್ತಾರೆ.

ಡಾ॥ ಜಿ.ವರದರಾಜರಾವ್ ಎನ್ನುವ ವಿದ್ವಾಂಸರು ತಾವು ಅಚಲಾನಂದ ವಿಠಲರ ಸ್ಥಳಕ್ಕೆ ಭೇಟಿಯಿತ್ತು ದೊರೆತ ತಾಳಗರಿಯ ಕೃತಿಗಳನ್ನು ಪರಿಶೀಲಿಸಿದ ಪ್ರಯುಕ್ತವಾಗಿ 'ಅಚಲಾನಂದ ವಿಠಲ' ಎಂಬ ಅಂಕಿತದ ರಚನೆಗಳು ಭಾಷಾದೃಷ್ಟಿಯಿಂದಲೂ, ಆಂತರಿಕ ಪ್ರಮಾಣದಿಂದಲೂ ೯ನೇ ಶ.ದಲ್ಲಿದ್ದ ಅಚಲಾನಂದರಿಂದ ರಚಿತವಾಯಿತೆಂದು ಹೇಳುವಂತಿಲ್ಲ. ಇವುಗಳನ್ನು ಬರೆದವರು ಮಾಧ್ವ ಸಂಪ್ರದಾಯಕ್ಕೆ ಸೇರಿದ್ದ ಬೇರೊಬ್ಬ ಅಚಲಾನಂದರೇ ಇರಬೇಕು." [೧೮] ಎನ್ನುವ ಅಭಿಪ್ರಾಯಕ್ಕೆ ಬಂದಿದ್ದಾರೆ.

ನಿಲುಗಡೆ

ಹರಿದಾಸ ಸಾಹಿತ್ಯದ ಮೊದಲಿಗರಾರು ಎಂಬ ಪ್ರಶ್ನೆಯಲ್ಲಿ ಹೀಗೆ ಬೇರೆ ಬೇರೆ ವಿದ್ವಾಂಸರುಗಳು ಮಧ್ವಾಚಾರ್ಯರು, ಅಚಲಾನಂದರು, ನರಹರಿತೀರ್ಥರು ಎಂದು ಬೇರೆ ಬೇರೆ ರೀತಿಯಲ್ಲಿ ಸಮರ್ಥಿಸಿಕೊಂಡಿದ್ದರೂ ದೊರೆತಿರುವ ಆಧಾರಗಳನ್ನೆಲ್ಲ ಪರಿಶೀಲಿಸಿ ನೋಡಿದಾಗ ಖಚಿತವಾಗಿ ಹೇಳಬಹುದಾದ ಅಂಶಗಳಿಷ್ಟು, ಮಧ್ವಾಚಾರ್ಯರ ತತ್ವ, ಹರಿಭಕ್ತಿಗಳಿಂದ ಪ್ರಭಾವಿತರಾದ ಅವರ ಶಿಷ್ಯ ನರಹರಿತೀರ್ಥರು ಕನ್ನಡದಲ್ಲಿ ಕೆಲವೊಂದು ಕೀರ್ತನೆಗಳನ್ನು ರಚಿಸಿದ್ದುದಿರಬಹುದು, ಅಚಲಾನಂದರದ್ದು ಎನ್ನಲಾದ ರಚನೆಗಳೂ ಲಭ್ಯವಿರಬಹುದು. ಹರಿದಾಸ್ಯತನವನ್ನು ತಮಗೆ ತಾವೇ ಆರೋಪಿಸಿಕೊಂಡು ಕನ್ನಡದಲ್ಲಿ ತಮ್ಮ ಭಾವ,ಭಕ್ತಿ ನಿವೇದನೆಗಳನ್ನುಅಭಿವ್ಯಕ್ತಿ ಗೊಳಿಸಿದಂಥ ರಚನೆಗಳು ಇವು. ಭಕ್ತಿ ಭಾವ ಒಳಗಿನಿಂದ ಹುಟ್ಟಲು ಇಂಥದ್ದೇ ದೀಕ್ಷೆಯ ಶಕ್ತಿಯಾಗಿರಬೇಕೆಂದೇನೂ ಇಲ್ಲ. ಸ್ವಾಮಿಶಾಸ್ತ್ರಿಗಳೆಂಬ ಪೂರ್ವಾಶ್ರಮದ ಹೆಸರಿನ ನರಹರಿತೀರ್ಥರು ಹನ್ನೆರೆಡು ವರ್ಷಗಳ ಕಾಲ ಕಳಿಂಗರಾಜ್ಯದಲ್ಲಿ ಆಡಳಿತ ಕಾರ್ಯ ನಡೆಸಿಕೊಂಡಿದ್ದು ಮುಂದೆ ೧೩೨೪ ರಿಂದ ೧೩೩೩ ರವರೆಗೆ ಪದ್ಮನಾಭರ ತೀರ್ಥರ ನಂತರದ ಪಟ್ಟವನ್ನು ವಹಿಸಿಕೊಂಡು ಯತಿಗಳಾಗಿ ಸಂಸ್ಥಾನವನ್ನು ಆಳಿದವರು. ಕನ್ನಡದಲ್ಲಿಯೂ ದೇವರನಾಮಗಳನ್ನು ರಚಿಸಿದ್ದಿರಬಹುದು. ಅವರಿದ್ದ ಶತಮಾನದಲ್ಲಿ ಕಾಣಿಸಿಕೊಂಡ ಹರಿಭಕ್ತಿಯ ಒಂದು ಸೆಳೆಮಿಂಚಾಗಿ ಆ ಕೃತಿಗಳ ರಚನೆಯಾಗಿದ್ದಿರಬಹುದು ಆದರೆ ಇಷ್ಟು ಮಾತ್ರದಿಂದಲೇ ಅವರಿಂದಲೇ ದಾಸಸಾಹಿತ್ಯದ ಪ್ರವರ್ತನೆಯಾಯಿತು ಎನ್ನಲಾಗದು. ಮತ್ತಿನ ಎರಡು ಶತಮಾನಗಳ ಕಾಲ ದಾಸ ಸಾಹಿತ್ಯ ಬೆಳೆದು ಬಂದ ಕುರುಹು ಎಲ್ಲಿಯೂ ಕಾಣಸಿಗುವುದಿಲ್ಲ. ಅವರ ಕಾಲದ

ನಂತರ ನೂರಿನ್ನೂರು ವರುಷಗಳ ಈ ಮೌನಕ್ಕೆ ಕಾರಣವೇನು? ನರಹರಿ ತೀರ್ಥರಲ್ಲಿ ಕಾಣಿಸಿಕೊಂಡು ಕನ್ನಡ ಹರಿದಾಸ್ಯ ಕೀರ್ತನೆಗಳ ಹೊಳಹು ಮುಂದಿನ ಹದಿನೈದನೇ ಶತಮಾನದ ಶ್ರೀಪಾದರಾಜರಿಂದಲೇ ಮತ್ತೆ ಕಾಣಿಸಿಕೊಂಡು ಮುಂದುವರೆಯಿತು ಎನ್ನುವುದಷ್ಟೇ ಉಳಿದಿದೆ. 'ಹರಿದಾಸ್ಯ'ವೆನ್ನುವ ಮಹಾನ್ ಪರಂಪರೆಯ ಸೆಳೆಮಿಂಚು ನರಹರಿತೀರ್ಥರಲ್ಲಿ ಕಾಣಿಸಿಕೊಂಡಿದ್ದಿರಬಹುದು. ಅದು ಮತ್ತೆ ಮುಂದಿನ ನೂರು ವರ್ಷಗಳಲ್ಲಿ ಮಡುಕಟ್ಟಿದ್ದ ಮೋಡವಾಗಿ ಗರ್ಭದ ಮೌನದೊಳಗಿದ್ದು ಮತ್ತೆ ಮಳೆಯಾಗಿ ಸುರಿದು ಕನ್ನಡ ದಾಸಸಾಹಿತ್ಯ ನದಿಯಾಗಿ ಹರಿದದ್ದು ನರಹರಿತೀರ್ಥರ ಪರಮಪರೆಯಲ್ಲಿಯೇ ಮುಂದೆ ೧೪೫೭೧ರ ಕಾಲಾವಧಿಯಲ್ಲಿ ಬಂದ ಯತಿ ಶ್ರೀಪಾದರಾಜರಿಂದಲೇ ಎನ್ನುವುದು ಖಚಿತವಾದುದು.

ಇನ್ನು ಎಂಟು ಅಥವಾ ಒಂಭತ್ತನೆಯ ಶತಮಾನದಲ್ಲಿ ಇದ್ದಿರಬಹುಚಾದ ಅಚಲಾನಂದ ದಾಸರ ಕೃತಿಗಳ ಬಗ್ಗೆಯೂ ಹೇಳಬಹುದಾದ ಅಂಶಗಳು ಇಷ್ಟು. 'ಅಚಲಾನಂದ ವಿಟ್ಠಲ' ಎಂಬ ಅಂಕಿತದ ಇವರ ನಾಲ್ಕೈದು ಕೀರ್ತನೆಗಳು ಲಭ್ಯವಿವೆಯಾದರೂ ಅವರ ಕಾಲ, ಮನೆತನ, ಜೀವಿತದ ಉಳಿದ ವಿವರಗಳು ಯಾವುದೂ ಲಭ್ಯವಿಲ್ಲವಾಗಿದೆ. ಜಿ. ವರದರಾಜರಾವ್ ಅವರಿಗೆ ದೊರೆತ ತಾಳೆಗರಿಯ ಓಲೆಗಳಿಂದಾಗಿ ದೊರೆತ ವಿವರಗಳ ಪ್ರಕಾರ ಅಚಲಾನಂದರು ೯ನೆಯ ಶತಮಾನದಲ್ಲಿಯೆ ಇದ್ದವರು ಎಂದು ಖಚಿತವಾಗಿ ಭಾವಿಸಬಹುದಾಗಿದೆ. ಆಗಲೇ ಅವರು ಮಠಗಳನ್ನು ಸ್ಥಾಪನೆ ಮಾಡಿದ್ದರೆಂತಲೂ, ವಿಠಲನ ಉಪಾಸಕರಾಗಿದ್ದರೆಂತಲೂ ತಿಳಿದುಬರುತ್ತದೆ. ಶ್ರೀಮಧ್ವಾಚಾರ್ಯರ ಕಾಲಕ್ಕೆ ಮುಂಚಿನಿಂದಲೂ ರೂಢಿಯಲ್ಲಿದ್ದ ಭಾಗವತ ಸಂಪ್ರದಾಯದವರಾಗಿದ್ದರೆಂದು ಊಹಿಸಲು ಅವಕಾಶವಿದೆ. ಅಂದಿನ ಕನ್ನಡಿಗರಿಗೆ ವಿಠಲನಲ್ಲಿ ತೀವ್ರ ಭಕ್ತಿ ಇತ್ತು ಎನ್ನುವುದರ ಅರಿವಾಗುತ್ತದೆ. ಆದರೆ ಈ ಅಚಲಾನಂದ ದಾಸರೇ ಹರಿದಾಸಪಂಥಕ್ಕೆ ಮೊದಲಿಗರಾದವರು ಎಂದು ಹೇಳಲಾಗದು. ಅಚಲಾನಂದ ಯತಿಗಳ ಬಗ್ಗೆ ಇನ್ನಷ್ಟು ಸಮಗ್ರ ಸಂಶೋಧನೆ ನಡೆಯಬೇಕಾಗಿದೆ. ಲಭ್ಯವಿರುವ ಕೀರ್ತನೆಗಳ ಭಾಷಾ ದೃಷ್ಟಿಯಿಂದ ಹದಿನೈದನೆಯ ಶತಮಾನಕ್ಕೆ ಸೇರಿದ ಮತ್ತೂಬ್ಬ ಅಚಲಾನಂದ ದಾಸರು ಇದ್ದಿರಬೇಕೆಂಬ ಸಂಶಯವೂ ವ್ಯಕ್ತವಾಗಿದೆ.

ಭಾಗವತ ಸಂಪ್ರದಾಯ ಹಾಗೂ ಮನೋಧರ್ಮ, ಅಂದಿಗೇ ಪ್ರಭಾವಶಾಲಿಯಾಗಿ ಪ್ರಚಲಿತವಾಗಿದ್ದ ವಿಠ್ಠಲ ಭಕ್ತಿ ಇವುಗಳಿಂದಾಗಿ ಕನ್ನಡ ದೇವರನಾಮಗಳನ್ನು ಅಚಲಾನಂದರು ರಚಿಸಿದ್ದಿರಬಹುದು. ಆದರೆ ಅವರ ಪರಂಪರೆಯು ಮುಂದುವರೆದು ಈ ಕೀರ್ತನೆಗಳ ರಚನೆಯನ್ನು ಹೆಚ್ಚಿಸಲಿಲ್ಲ. ಮತ್ತೆ ಕಾಲಗರ್ಭದ ಮೌನದ ಚಿಪ್ಪಿನಲ್ಲಿ ಈ ಬಗೆಯ ಕನ್ನಡ ಹಾಡುಗಳ ರಚನೆ ಹುದುಗಿಹೋಯಿತೇಕೆ? ಇನ್ನಷ್ಟು ಈ ಬಗ್ಗೆ ಸಂಶೋಧನೆಗಳು ನಡೆದು ಕಾಲಗರ್ಭದಿಂದ ಖಚಿತ ಸತ್ಯದಾಖಲೆಗಳನ್ನು ಹೊರಗೆ ತರಬೇಕಾಗಿದೆ.

ತಿಳಿದಿರುವ, ದೊರೆತಿರುವ ದಾಖಲೆಗಳಿಂದ ಖಚಿತವಾಗಿಯೂ ಹೇಳಬಹುದಾದ ಸತ್ಯವೆಂದರೆ ಕನ್ನಡದಲ್ಲಿ ಹರಿಪ್ರೀತಿಯ ಹಾಡುಗಳ ರಚನೆಗೆ, ಹಾಡುಗಳ ಹಾಡಿಸುವಿಕೆಗೆ ಮೊದಲಿಗರೆಂದರೆ ಅದು ೧೪೫೧ ರಲ್ಲಿ ಬಂದ ಶ್ರೀಪಾದರಾಜ ಯತಿಗಳು. ಇವರೇ ದಾಸಸಾಹಿತ್ಯ ರಚನೆಗೆ ಮೊದಲ ಪ್ರೇರಕರು, ಮಾರ್ಗದರ್ಶಿಗಳು ಎನ್ನುವುದು ನಿರ್ವಿವಾದ.

ದಾಸಸಾಹಿತ್ಯ ರಚನೆಗೆ ಪ್ರೇರಕರು ಶ್ರೀಪಾದರಾಜರು ಎಂದು ಅಧಿಕೃತವಾಗಿ ಹೇಳುವುದಿದ್ದರೂ ದಾಸಸಾಹಿತ್ಯ ಪ್ರವರ್ತಕರೆಂದು ನೆನೆಯುವಾಗ ಅಚಲಾನಂದದಾಸರನ್ನಾಗಲೀ, ನರಹರಿತೀರ್ಥರನ್ನಾಗಲೀ ನೆನೆದುಕೊಳ್ಳದೆ ಮುನ್ನಡೆಯುವುದು ಸರಿಯಲ್ಲ. ಎಲ್ಲಿಯೋ ಹುಟ್ಟುವ ನದಿ ಮತ್ತೆಲ್ಲಿಯೋ ಹರಿದು ಇನ್ನೆಲ್ಲಿಯೋ ಕಾಣದೆ ಮರೆಯಾಗಿ ಮತ್ತೆಲ್ಲೋ ಚಿಮ್ಮಿ ನೆಗೆದು ಮುಂದೆಲ್ಲೋ ದೊಡ್ಡ ತೊರೆಯಾಗಿ ಪ್ರವಹಿಸುವಂತೆ ಹರಿಭಕ್ತಿಯ ಮನಸ್ಸುಗಳು ಆ ಈ ಶತಮಾನದಲ್ಲಿ ಕಾಣಿಸಿಕೊಂಡು ಮರೆಯಾಗಿ ಮತ್ತೆ ಹದಿನೈದನೇ ಶತಮಾನದಲ್ಲಿ ಸ್ಪಷ್ಟವಾಗಿ ಗೋಚರಗೊಂಡಿರಬಹುದು. ಆ ಮನಸ್ಸುಗಳು ರಚಿಸಿದ ಕೃತಿಗಳೆಲ್ಲವೂ ನಮಗೆ ಲಭ್ಯವಿರದೆ ಅಗೋಚರವೂ ಇರಬಹುದು. ಹೀಗಾಗಿ ದಾಸಸಾಹಿತ್ಯ ವಾಹಿನಿಯನ್ನು ಪರಿಚಯಿಸಿಕೊಳ್ಳುವಾಗ ಮೂಲ ಒರತೆಗಳೆಂದು ೯ನೆಯ ಶತಮಾನದ ಅಚಲಾನಂದ ದಾಸರನ್ನೂ, ೧೪ನೆಯ ಶತಮಾನದ ನರಹರಿತೀರ್ಥರನ್ನೂ ಸ್ಮರಿಸಿಕೊಂಡು ಮುಂದೆ ಸಾಗುವುದು ಖಂಡಿತಾ ತಪ್ಪೆನಿಸದು.

"ದಾಸಸಾಹಿತ್ಯ ವಾಹಿನಿಗೆ ನರಹರಿತೀರ್ಥರು ಉಗಮಸ್ಥಾನ ಮಾತ್ರ. ಆ ವಾಹಿನಿಯ ನಿಜಸ್ವರೂಪ, ಅದರ ಆಳ ವೈಶಾಲ್ಯಗಳು ಕಂಗೊಳಿಸುವುದು ಶ್ರೀಪಾದರಾಜರಲ್ಲಿ." [*೧೯]

ನರಹರಿತೀರ್ಥರ ನಂತರ ಶ್ರೀಪಾದರಾಜರ ವರೆಗೂ ಎರಡು ಶತಮಾನಗಳ ಕಾಲ ಹರಿದಾಸ ಸಾಹಿತ್ಯವು ಗುಪ್ತವಾಗಿ ಮರೆಯಾಗಿದ್ದ, ಮೌನವಾಗಿದ್ದ ಕಾಲ. ಆದರೂ ಇದೇ ಕಾಲದಲ್ಲಿ ಚೌಂಡರಸನು (೧೨೨೫) ದಶಕುಮಾರ ಚರಿತೆಯನ್ನು ರಚಿಸಿದ್ದನು. ಅದರ ೧೪ನೆಯ ಆಶ್ವಾಸದಲ್ಲಿ ವಿಠ್ಠಲ ಸ್ತೋತ್ರವನ್ನು ಮನದುಂಬಿ ಮಾಡಿದ್ದಾನೆ. ಈ ಕಾವ್ಯದಲ್ಲಿ ವೈಷ್ಣವ ಭಕ್ತಿಯೇ ಉತ್ಕಟವಾಗಿ ಹೊಮ್ಮಿಕೊಂಡಿದೆ. ನಂತರ ಬಂದ ಕುಮಾರವ್ಯಾಸನೂ ಕೃಷ್ಣಭಕ್ತಿಯನ್ನು ಹತ್ತುಪರ್ವಗಳಲ್ಲಿ ಕೂಡ ಕೋದಿದ್ದಾನೆ. ಹೀಗೆ ವೈಷ್ಣವ ಪಂಥ, ಭಕ್ತಿ ಎನ್ನುವುದು ಕಾವ್ಯಗಳ, ಮಹಾಕಾವ್ಯಗಳ ರಚನೆಯಲ್ಲಿ ಹಾಸುಹೊಕ್ಕಾಗಿ ಬಂದಿತ್ತು. ದಾಸಸಾಹಿತ್ಯವಾಗಿ ಅದು ಮುಂದೆ ಕಾಣಿಸಿಕೊಳ್ಳಲು ೧೪೦೪ರಲ್ಲಿ ಜನಿಸಿ, ಶ್ರೀರಂಗಕ್ಷೇತ್ರದಲ್ಲಿ ಸನ್ಯಾಸ ಸ್ವೀಕರಿಸಿ, ಕಡೆಗೆ ಮುಳಬಾಗಿಲಿನಲ್ಲಿ ನೆಲೆನಿಂತ ಶ್ರೀಪಾದರಾಜರು ಪ್ರೇರಕರೂ, ಮಾರ್ಗದರ್ಶಕರೂ ಆಗಿ ಒದಗಿದ್ದೇ ಕಾರಣವಾಯಿತು.

* * * * *

<u>ಅಡಿಟಿಪ್ಪಣಿಗಳು</u> :

೧. ದಾಸಸಾಹಿತ್ಯ ಮತ್ತು ಸಂಸ್ಕೃತಿ- ಸಾ.ಕೃ. ರಾಮಚಂದ್ರರಾವ್ ಪುಟ-೧೧೮

೨. ಶ್ರೀ ಕರ್ಣಾಟಕ ಭಕ್ತ ವಿಜಯ-ಬೇಲೂರು ಕೇಶವದಾಸರು ಪುಟ-೬

೩. ಕಲಾಚೇತನ-'ನೃತ್ಯನಾಟಕ' ಪದ್ಧತಿಗಳು ಲೇಖನ-ಡಾ॥ ಎಸ್.ಕೆ. ರಾಮಚಂದ್ರರಾವ್.ಪುಟ-೧೫೧

೪. ಕರ್ನಾಟಕ ಹರಿದಾಸರ ಉಗಮ ಮತ್ತು ಪುರಂದರದಾಸರ ಸುಳಾದಿಗಳು. - ಸಂ. ಹನುಮಂತರಾವ್ ಗೋರೆಬಾಳ. ಪುಟ-೯

೫. 'ಶ್ರೀ ಕರ್ಣಾಟಕ ಭಕ್ತ ವಿಜಯ'-ಬೇಲೂರು ಕೇಶವದಾಸರು.

೬. 'ಮಾಧ್ವ ವಾಙ್ಮಯ ತಪಸ್ವಿಗಳು'-ಪಂಡರಿನಾಥಾಚಾರ್ಯ ಗಲಗಲಿ-ಪುಟ-೯೫೮

೭. 'ಅವಲೋಕನ'-ಸಿದ್ಧಯ್ಯ ಪುರಾಣಿಕ-ಪುಟ-೨೩೧

೮. 'ಕರ್ನಾಟಕ ಕವಿ ಚರಿತ್ರೆ' - ಡಾ॥ ನರಸಿಂಹಾಚಾರ್-ಪುಟ-೪೭

೯. "ಶ್ರೀ ಪುರಂದರದಾಸರೂ ಭಕ್ತಿ ಮಾರ್ಗವೂ" - ಪುರಂದರದಾಸರ ನಾಲ್ಕನೆಯ ಶತಮಾನೋತ್ಸವ ಸಂಚಿಕೆ(೧೯೬೪) ಎಂ.ಗೋವಿಂದ ಪೈ-ಪುಟ-೧೫

೧೦. "ಕರ್ನಾಟಕ ಸಂಸ್ಕೃತಿ ಸಮೀಕ್ಷೆ" -ಡಾ॥ ಎಚ್. ತಿಪ್ಪೇರುದ್ರಸ್ವಾಮಿ - ಪುಟ-೩೫೮

೧೧. "ಹರಿದಾಸಸಾಹಿತ್ಯ ಮತ್ತು ಗಮಕ ಕಲೆ" - ಪ್ರೊ॥ ವಸಂತ ಕುಷ್ಟಗಿ-ಪುಟ೧೦- ತತ್ವವಾದ- ನವೆಂಬರ್ ೧೯೮೩

೧೨. "ಪುರಂದರದಾಸರು" - ಡಾ॥ ಎಸ್.ಕೆ. ರಾಮಚಂದ್ರರಾವ್- ಪುಟ-೧೨

೧೩. "ನಮಸ್ತೇ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ
ನಮಃ ಪುರಂದರಾರ್ಯಾಯ ವಿಜಯಾರ್ಯಾಯತೇ ನಮಃ"

೧೪. ಶ್ರೀ ಹರಿದಾಸಭಾರತೀ, ಸಂ. vi, ಸಂ. ೩, ಪುಟ-೧೧-೧೫.

೧೫. "ಹರಿದಾಸ ಸಾಹಿತ್ಯ-ಒಂದು ಅಧ್ಯಯನ" - ಬೇಲೂರು ಕೇಶವದಾಸರು -ಪುಟ-೩೫

೧೬. "ಕಾಶೀತಿ ಸಂಖ್ಯಾ ಶತಕಾಲ ಕಾಬ್ದೇ ವಿಳಂಬೀ ವರ್ಷೇ ಕಲಿ ಚೈತ್ರ ಶುಕ್ಲೇ
ಪಕ್ಷೇದಶಮ್ಯಾಂ ದಿನ ಮಧ್ಯಕಾಲೇ ಪ್ರತ್ಯಕ್ಷಕೋಭೂದ್ಗುರು ವಿಠಲಾಖ್ಯ"

೧೭. 'ಕರ್ನಾಟಕ ಸಂಗೀತವೂ ದಾಸಕೂಟವೂ'-ಹುಲಗೂರು ಕೃಷ್ಣಾಚಾರ್ಯರು-ಪುಟ-೫೯

೧೮. "ಶ್ರೀಪಾದರಾಜರ ಕೃತಿಗಳು" - ಡಾ॥ ಜಿ.ವರದರಾಜಾರಾವ್ -ಪುಟ vii

೧೯. ದಾಸಸಾಹಿತ್ಯ- ಎನ್.ಕೆ ಕುಲಕರ್ಣಿ -ಪುಟ ೨೪ [ಪುರಂದರದಾಸರವರೆಗಿನ ಹರಿದಾಸ ಸಾಹಿತ್ಯ ಅಧ್ಯಾಯ]

ಈ) ವ್ಯಾಸಕೂಟ, ದಾಸಕೂಟಗಳ ಆವಿಷ್ಕಾರದ ಮುಂಚೆ........

- ಚಾರಿತ್ರಿಕ ಹಿನ್ನಲೆ -

ಮುಸ್ಲಿಂ ಧಾಳಿಗೆ ನಡುಗಿದ ನಾಡು :

ಸುಮಾರು ಹದಿಮೂರು, ಹದಿನಾಲ್ಕನೆಯ ಶತಮಾನಗಳ ಕಾಲಕ್ಕೆ ಭಾರತದಲ್ಲಿ ಮುಸ್ಲಿಮರ ಧಾಳಿ, ಚಟುವಟಿಕೆಗಳು ತೀವ್ರವಾಗಿ ತಲೆದೋರಿದವು. ಕ್ರಿ.ಶ.೧೧೯೨ರ ಕಾಲದಲ್ಲೆ ಮಹಮದ್ ಘೋರಿಯು ಸ್ಥಾನೇಶ್ವರ ಕದನದಲ್ಲಿ ಪೃಥ್ವೀರಾಜನನ್ನು ಸೋಲಿಸಿದ ನಂತರ ಯವನರು ದೇಶದಲ್ಲಿ ವ್ಯವಸ್ಥಿತವಾಗಿ ನೆಲೆಯೂರುತ್ತ ಬಂದಿದ್ದರು. ಇದೇ ಸಮಯದಲ್ಲಿ ದಕ್ಷಿಣ ಭಾರತವನ್ನು ಆಳುತ್ತಿದ್ದ ಸೇವುಣರು, ಕಾಕತೀಯರು, ಹೊಯ್ಸಳರು, ಪಾಂಡ್ಯರು ಮುಂತಾದ ದೊರೆಗಳೆಲ್ಲ ಈ ಮುಸ್ಲಿಂ ಧಾಳಿಯಿಂದ ತತ್ತರಿಸುತ್ತಿದ್ದರೂ ತಮ್ಮತಮ್ಮಲ್ಲೇ ಒಗ್ಗಟ್ಟು ಇಲ್ಲದೆ ಪರಸ್ಪರ ಒಳಜಗಳಗಳಲ್ಲಿ ತೊಡಗಿಕೊಂಡಿದ್ದರು. ಈ ರಾಜರುಗಳು ತಾವಾಗಿ ತಂದುಕೊಂಡಿದ್ದ ಅಸಹಾಯಕತೆಯ ಪರಿಸ್ಥಿತಿಯನ್ನು ಮಲ್ಲಿಕ್‌ಕಾಫಿರ್ ಸದುಪಯೋಗ ಪಡಿಸಿಕೊಂಡ ಕ್ರಿ.ಶ.೧೨೯೬ರಲ್ಲಿ ಆತ ಕಾಕತೀಯರ ಪ್ರತಾಪರುದ್ರನು ಆಳುತ್ತಿದ್ದ 'ದೇವಗಿರಿ'ಯ ಮೇಲೆ ದಂಡೆತ್ತಿ ಬಂದು ಪ್ರತಾಪರುದ್ರನನ್ನು ಸೋಲಿಸಿ ದೇವಗಿರಿಯನ್ನು ವಶಪಡಿಸಿಕೊಂಡ. 'ದ್ವಾರಸಮುದ್ರ'ವನ್ನು ಮುತ್ತಿ ಹೊಯ್ಸಳರನ್ನು ಬಗ್ಗು ಬಡಿದ. ಶ್ರೀರಂಗ, ಮಧುರೆಗಳನ್ನು ಮುತ್ತಿ ಅಲ್ಲಿಯ ದೇವಾಲಯಗಳನ್ನೆಲ್ಲ ನಾಶಪಡಿಸಿ ಸಂಪತ್ತನ್ನೆಲ್ಲ ಕೊಳ್ಳೆ ಹೊಡೆದು ದೆಹಲಿಗೆ ರವಾನಿಸಿದ. ಹೀಗೆ ದಕ್ಷಿಣಾಪಥದಲ್ಲೂ ಆತನ ದುರಾಕ್ರಮಣ ನಡೆದು ಪಂಜಾಬಿನಿಂದ ಮಧುರೆಯವರೆಗೂ, ಗುಜರಾತಿನಿಂದ ಬಂಗಾಳದವರೆಗೂ ತನ್ನ ಸಾಮ್ರಾಜ್ಯ ಸ್ಥಾಪನೆ ಮಾಡಿಕೊಂಡು ಹಿಂದೂಗಳ ಮೇಲೆ ದಬ್ಬಾಳಿಕೆ ನಡೆಸಿದ. ಹಿಂದೂ ಜನರ, ದೊರೆಗಳ ಅನೈಕ್ಯಮತ, ದ್ವೇಷಾಸೂಯೆ, ಒಳಸಂಚು, ವಿಶ್ವಾಸದ್ರೋಹಗಳ ಫಲವಾಗಿಯೇ ಇಸ್ಲಾಂ ಸಾಮ್ರಾಜ್ಯಕ್ಕೆ ತಲೆಎತ್ತಲು ಅವಕಾಶ ದೊರೆತದ್ದು ಐತಿಹಾಸಿಕ ದುರಂತ ಸತ್ಯ.

ಕ್ರಿ.ಶ.೧೩೪೨ರಲ್ಲಿ ತಿರುಚನಾಪಳ್ಳಿಯ ಬಳಿಯ ಕಣ್ಣನೂರಕುಪ್ಪದ ಹತ್ತಿರ ತನ್ನ ಜನರ ವಿಶ್ವಾಸದ್ರೋಹದ ಫಲವಾಗಿಯೇ ಮುಮ್ಮಡಿ ಬಲ್ಲಾಳನು ದಕ್ಷಿಣದಿಂದ ಮುಸಲ್ಮಾನರನ್ನು ಹೊರಗಟ್ಟುವ ಪ್ರಯತ್ನದಲ್ಲಿ ಜೀವ ತೆತ್ತ ನಂತರ ಹೊಯ್ಸಳ ಸಾಮ್ರಾಜ್ಯ ಅಸ್ತಂಗತವಾಯಿತು. ಮುಸಲ್ಮಾನರ ವಿರುದ್ಧ ಬೆರಳು ತೋರುವವರೇ ಇಲ್ಲವಾಯಿತು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆ :

ದಕ್ಷಿಣ ಭಾರತದ ರಾಜಕೀಯ ಪರಿಸ್ಥಿತಿಯ ಪ್ರಕ್ಷುಬ್ಧತೆಯಿಂದಾಗಿ ಹೀಗೆ ಒಂದೆಡೆ ಮುಸ್ಲಿಂ ಪ್ರಾಬಲ್ಯತೆ, ಮತ್ತೊಂದೆಡೆ ಬೇರೆ ಬೇರೆ ಸ್ವತಂತ್ರ ತುಂಡರಸುಗಳ ತಲೆಎತ್ತುವಿಕೆ ಹಾಗೂ ಪರಸ್ಪರ ಕಾದಾಟ. ಅಂಥದವಲ್ಲಿ

ಹಲವಾರು ಶಕ್ತಿಯುತ ನಾಯಕರುಗಳು ಮುಖಂಡರುಗಳು ಸ್ವತಂತ್ರರಾಗಿ ಆಳಿಕೆ ನಡೆಸಿ ಕಚ್ಚಾಟದಲ್ಲಿ ತೊಡಗಿಕೊಂಡರು. ತಮಿಳುನಾಡು ಮತ್ತು ಕೇರಳದಲ್ಲಿ ಅನೇಕ ಸ್ವತಂತ್ರ ಸಂಸ್ಥಾನಗಳು ತಲೆಎತ್ತಿಕೊಂಡವು.

ಹೀಗಿರುವ ಸಮಕಾಲೀನ ರಾಜಕೀಯ ಪರಿಸ್ಥಿತಿಗಳು, ಮತ್ತು ಅನೈಕ್ಯತೆಯ ನಡುವೆ ಪ್ರಬಲವಾದ ರಾಜಕೀಯ ಏಕೀಕರಣವನ್ನು ಸ್ಥಾಪಿಸುವಂಥ ಮಹಾನ್ ಉದ್ದೇಶ ಇರಿಸಿಕೊಂಡು ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾಯಿತು. ಎದುರಾಳಿಗಳೇ ಇಲ್ಲದಿದ್ದ ಮುಸ್ಲಿಮರನ್ನು ತೀವ್ರವಾಗಿ ವಿರೋಧಿಸಿ, ಎದುರಿಸಿ, ಹಿಮ್ಮೆಟ್ಟಿಸಿ ಹಿಂದೂಗಳನ್ನು ರಕ್ಷಿಸುವತ್ತ, ಸಂಘಟಿಸುವತ್ತ ಪರಿಣಾಮಕಾರೀ ಕ್ರಿಯಾಶಕ್ತಿಯಾಗಿ ವಿದ್ಯಾರಣ್ಯರು ನೇತೃತ್ವ ವಹಿಸಿ ಹಿಂದೂದೊರೆಗಳಾದ ಸಂಗಮವಂಶದ ಹಕ್ಕ ಬುಕ್ಕರಿಂದ ವಿಜಯನಗರ ಸಾಮ್ರಾಜ್ಯ ಅಸ್ತಿತ್ವಕ್ಕೆ ಬರಲು ಕಾರಣಪುರುಷರಾದರು. ಕನ್ನಡ ನಾಡಿನ ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿ ರೂಪುರೇಷೆಗೊಂಡ ಈ ಸಾಮ್ರಾಜ್ಯ ಅತ್ಯಲ್ಪ ಕಾಲಮಾನದಲ್ಲೇ ಮುಸಲ್ಮಾನರ ದುರಾಕ್ರಮಣದಿಂದ ಆಗಿದ್ದ ದುರಂತ ಫಲಗಳನ್ನು ಅಳಿಸಿ ಹಾಕಲು ಬೇಕಾದಂಥ ಕಸುವನ್ನು ಪಡೆಯುವಂತಾಯಿತು. ಕನ್ನಡನಾಡಿನಲ್ಲಿ ಮಾತ್ರವಲ್ಲ, ಭರತಖಂಡದಲ್ಲೇ ಆ ಕಾಲಕ್ಕೆ ಇದೊಂದು ಅಸಾಮಾನ್ಯ, ಮಹತ್ವಪೂರ್ಣ ಘಟನೆಯಾಗಿ ಪರಿಣಮಿಸಿತು.

ದೆಹಲಿಯನ್ನು ಆಳುತ್ತಿದ್ದ ಮಹಮದ್ ಬಿನ್ ತುಘಲಕ್, ಬಹಮನಿ ರಾಜ್ಯದ ಸುಲ್ತಾನರುಗಳು ಇವರೆಲ್ಲ ನಿರ್ದಾಕ್ಷಿಣ್ಯವಾಗಿ ಹಿಂದೂಗಳನ್ನು ದೋಚಿ ಹುರಿದು ಮುಕ್ಕುತ್ತಿರುವಾಗ, ಮತಾಂತರಗಳು, ತೆರಿಗೆಯ ಹೊರೆ, ಕಠಣಶಿಕ್ಷೆಗಳನ್ನು ಈ ಯವನರಿಂದ ಪಡೆಯುತ್ತ ನಾಡಿನ ಜನರು ಜರ್ಝರಿತರಾಗಿ ಹೋಗುತ್ತಿದ್ದಾಗ, ಇವೆಲ್ಲದರ ವಿರುದ್ಧವಾಗಿ ಪ್ರತಿಭಟನಾ ಶಕ್ತಿಯಾಗಿ, ಹಿಂದೂಗಳ ಆತ್ಮಶಕ್ತಿಯ ಪ್ರತೀಕವೆಂಬಂತೆ ವಿಜಯನಗರ ಸಾಮ್ರಾಜ್ಯವು ಹೀಗೆ ೧೩೩೬ರಲ್ಲಿ ಅಸ್ತಿತ್ವಕ್ಕೆ ಬಂದಿತು.

ವಿಜಯನಗರವನ್ನು ಮೊತ್ತ ಮೊದಲು ಆಳಿದ ಸಂಗಮ ವಂಶದ ದೊರೆಗಳಾದ ಹರಿಹರ ಮತ್ತು ಬುಕ್ಕರಾಯರು ತಮ್ಮ ಗುರುತರವಾದ ಹೊಣೆಯನ್ನು ನಿರ್ವಹಿಸುತ್ತ, ಕೇವಲ ಮುಂದಿನ ಹತ್ತು ವರ್ಷಗಳ ಅವಧಿಯಲ್ಲೇ ಸಾಮ್ರಾಜ್ಯವನ್ನು ವಿಸ್ತರಿಸಿದರು. ನೆಲ್ಲೂರು, ಕಡಪಾ ಜಿಲ್ಲೆ , ಉದಯಗಿರಿ, ಬನವಾಸಿ, ದಕ್ಷಿಣ ಕನ್ನಡ ಜಿಲ್ಲೆ, ಚಂದ್ರಗುತ್ತಿ ನಾಡುಗಳು ಸಾಮ್ರಾಜ್ಯದ ಅಧೀನಕ್ಕೆ ಬಂದವು. ಮಧುರೆ ಶ್ರೀರಂಗಗಳಿಂದ ಮುಸಲ್ಮಾನರನ್ನು ಯಶಸ್ವಿಯಾಗಿ ಹೊರಗಟ್ಟಲಾಯಿತು. ಮುಂದೆ ಪಟ್ಟಕ್ಕೆ ಬಂದ ಇಮ್ಮಡಿ ಹರಿಹರನು ಪೋರ್ಚುಗೀಸರ ಹಾಗೂ ಬಹಮನಿ ಅರಸರಿಂದ ಗೋವೆಯನ್ನು ಬಿಡಿಸಿ ವಶಪಡಿಸಿಕೊಂಡನು. ತಮಿಳುನಾಡಿನ ಚೋಳ, ಪಾಂಡ್ಯರಾಜ್ಯಗಳನ್ನು ಗೆದ್ದು ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ಕನ್ನಡ ಸಾಹಿತ್ಯಕ್ಕೆ ತೀರಾ ಪ್ರೋತ್ಸಾಹ ಕೊಟ್ಟು ಕರ್ಣಾಟಕ ವಿದ್ಯಾ ವಿಲಾಸನೆನಿಸಿದನು. ತುಂಗಭದ್ರಾ ನದಿಯ ದಕ್ಷಿಣದ ಭೂಭಾಗ ಪ್ರದೇಶದ ಮೇಲೆ ಪೂರ್ತಿಯಾಗಿ ಸ್ವಾಮ್ಯ ಸ್ಥಾಪಿಸಿ ಕೊಂಡು ತಮ್ಮ ರಾಜಕೀಯ ಸಾರ್ವಭೌಮತ್ವವನ್ನು ಹೆಚ್ಚಿಸಿಕೊಳ್ಳಲಾಯಿತು.

ವಿದೇಶಿ ಪ್ರವಾಸಿಗ ಫೆರಿಶ್ತಾ ತಿಳಿಸಿರುವಂತೆ "ಗೋವೆಯ ಬಂದರು, ಮಲಗಾಂವ್ ಕೋಟೆ, ತುಳುನಾಡಿನ ಜಿಲ್ಲೆಗಳು ವಿಜಯನಗರದ ಅರಸರ ಅಧೀನದಲ್ಲಿದ್ದವು. ಮಲಬಾರ್, ಸಿಂಹಳ ಮುಂತಾದ ದ್ವೀಪಗಳು ಮತ್ತು ಇತರ ಕೆಲವು ದೇಶಗಳ ರಾಯಭಾರಿಗಳು ವಿಜಯನಗರದ ಆಸ್ಥಾನದಲ್ಲಿದ್ದರು. ಇವರ ದೇಶಗಳ ಮತ್ತು ವಿಜಯನಗರದ ಅರಸರುಗಳ ನಡುವೆ ಉಡುಗೊರೆಗಳ ವಿನಿಮಯ ನಡೆಯುತ್ತಿತ್ತು...."

ಮತ್ತೆ ಬಂದ ದೊರೆಗಳಲ್ಲಿ ಇಮ್ಮಡಿ ದೇವರಾಯ (ಕ್ರಿಶ ೧೪೨೬-೪೬) ಅತ್ಯಂತ ಪ್ರಸಿದ್ಧ ದೊರೆ. ಇವನ ಕಾಲದಲ್ಲೆ 'ಚಾಮರಸ ' ಕವಿಯ "ಪ್ರಭುಲಿಂಗ ಲೀಲೆ" ರಚಿತವಾಗಿ ಅಪಾರ ಮನ್ನಣೆ ಗಳಿಸಿತು.'ಶ್ರೀನಾಥ'ನೆಂಬ ತೆಲುಗಿನ ಕವಿ ಅರಸನಿಂದ ಕನಕಾಭಿಷೇಕದ ಮರ್ಯಾದೆ ಪಡೆದನು.ಇವನ ಕಾಲದಲ್ಲಿಯೆ ಮಹಾಕವಿ 'ಕುಮಾರವ್ಯಾಸ'ನಿಂದ 'ಕರ್ಣಾಟಕಭಾರತ ಕಥಾಮಂಜರಿ' ದೊರೆತು ಭಾಗವತ ಧರ್ಮವು ಶ್ರೇಷ್ಠ ಸ್ಥಾನ ಗಳಿಸುವಂತಾಯಿತು.ಜನಸಾಮಾನ್ಯರಲ್ಲಿ ಕೃಷ್ಣ ಭಕ್ತಿಯು ಹೆಚ್ಚಿತು, ವಚನಸಾಹಿತ್ಯದಲ್ಲಿ ಪರಿಷ್ಕರಣ ಕಾರ್ಯ ನಡೆದುದೂ, ವಚನಗಳನ್ನು ಸಂಗ್ರಹಿಸಿ ದಾಖಲೆ ಮಾಡುವ ಕಾರ್ಯ ನಡೆದುದೂ ಇವನ ಕಾಲದಲ್ಲಿಯೆ.

ಹೀಗೆ ವಿಜಯನಗರವು ವಿಸ್ತಾರವಾದ ಹಿಂದೂ ಸಾಮ್ರಾಜ್ಯದ ರಾಜಧಾನಿಯಾಯಿತು.ಸಾಮ್ರಾಜ್ಯದ ವಿಸ್ತರಣೆಯಲ್ಲಿ ರಾಜಕೀಯ ಏಕೀಕರಣವನ್ನು ಸ್ಥಾಪಿಸಿಕೊಳ್ಳುವ ಉದ್ದೇಶವಿದ್ದು ಅದು ಸಫಲವೂ ಆಗಿತ್ತು. ಕನ್ನಡನಾಡು ಹಿಂದೆಂದೂ ಕಾಣದ ವೈಭವವನ್ನು,ವಿಸ್ತಾರತೆಯನ್ನು ಸುಖ ಸಮೃದ್ಧಿಯ ಜನಜೀವನವನ್ನು ಪಡೆದುಕೊಂಡಿದ್ದಷ್ಟೇ ಅಲ್ಲ ,ಸರ್ವಧರ್ಮಗಳ ಸಮನ್ವಯ ರೂಪದ ಧಾರ್ಮಿಕತೆಯ ವಾತಾವರಣವನ್ನು ಪಡೆದು ನೆಮ್ಮದಿಯ ನೆಲೆವೀಡೂ ಆಯಿತು. ಕನ್ನಡ ಸಾಹಿತ್ಯಕ್ಕೆ ಹಿಂದೆಂದೂ ದೊರಕದ ಮನ್ನಣೆ,ಪ್ರೋತ್ಸಾಹ,ರಾಜಾಶ್ರಯದಿಂದ ಲಭ್ಯವಾದವು ಕ್ರಿ.ಶ ೧೪೪೩ರಲ್ಲಿ ವಿಜಯನಗರಕ್ಕೆ ಇರಾಣದಿಂದ ರಾಯಭಾರಿಯಾಗಿ ಬಂದಿದ್ದ 'ಅಬ್ದುಲ್ ರಜಾಕ್' ಎಂಬಾತನೂ,ಇಟಲಿ ದೇಶದಿಂದ ಆಗಮಿಸಿದ 'ನಿಕೊಲೊಕೊಂಟಿ'ಎಂಬ ಪ್ರವಾಸಿಗನೂ ವಿಜಯನಗರದ ವೈಭವಪೂರ್ಣ ಬದುಕನ್ನು,ರಾಜಕೀಯ,ಸಾಹಿತ್ಯಿಕ, ಧಾರ್ಮಿಕ ವಲಯಗಳಲ್ಲಿ ವಿಜಯನಗರದ ಕ್ರಿಯಾಪೂರ್ಣ ಚಟುವಟಿಕೆಗಳನ್ನೂ, ವಿಜಯನಗರ ಸಾಮ್ರಾಜ್ಯದ ಎಲ್ಲೆ,ವಿಸ್ತರಣೆಗಳನ್ನೂ ಬರೆದಿಟ್ಟು ಹೋಗಿದ್ದಾರೆ.ಹೀಗೆ ಸಂಕಟಕರ ಕಾಲ ಕಳೆದು ಕನ್ನಡನಾಡು ಮತ್ತೆ ತಲೆಎತ್ತಿ ನಿಂತಿದ್ದು ಈ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೊಂಡ ಮೇಲೆಯೇ.

ವಿಜಯನಗರ ಸಾಮ್ರಾಜ್ಯ-ಧಾರ್ಮಿಕ ಪರಿಸ್ಥಿತಿ

ಸರ್ವ ಮತಧರ್ಮಗಳಿಗೂ ಪೋಷಣೆ,ರಕ್ಷಣೆ ದೊರೆತಂಥ ಕಾಲವಾಗಿ ವಿಜಯನಗರದ ದೊರೆಗಳ ಆಡಳಿತದಲ್ಲಿ ಧಾರ್ಮಿಕ ಸಂಪನ್ನತೆಯು ತಾನೇ ತಾನಾಗಿ ನೆಲೆಸಿತ್ತು. ಜೈನ ಧರ್ಮದ ಪ್ರಭಾವವು ಇಳಿಮುಖವಾಗಿ

ಶೈವಧರ್ಮವು ರಾಜಾಶ್ರಯ ಪಡೆದಿತ್ತು. ವಿದ್ಯಾರಣ್ಯರ ಪ್ರಭಾವದಿಂದ ಶೃಂಗೇರಿಯ ಗುರುಪೀಠವು ಸಂಗಮ ದೊರೆಗಳಿಗೆ ಮಾರ್ಗದರ್ಶನ ನೀಡುವ ಪ್ರಬಲ ಸಂಸ್ಥಾನವಾಗಿ ಬೆಳೆದಿತ್ತು. ಆದರೂ ನಾಡಿನ ಬೇರೆ ಬೇರೆ ಕಡೆಗಳಲ್ಲಿ ವಿಶಿಷ್ಟಾದ್ವೈತ ಮತವು ಕೂಡ ನೆಲೆಸಿದ್ದು ಜನರಿಗೆ ವೈಷ್ಣವ ಧರ್ಮದ ಬೋಧನೆ,ದೀಕ್ಷೆ ಲಭ್ಯವೇ ಇತ್ತು. ಮುಖ್ಯವಾಗಿ ತಮಿಳುನಾಡಿನ ಶ್ರೀರಂಗದಲ್ಲಿ ವೈಷ್ಣವ ಧರ್ಮಾನುಯಾಯಿಗಳು ಇದ್ದರು.ಆಂಧ್ರದ ಅಹೋಬಲ ಮಠದವರು ಕೂಡ ವೈಷ್ಣವ ಮತದ ಅನುಯಾಯಿಗಳೇ ಆಗಿದ್ದರು.

ಪ್ರೌಢದೇವರಾಯನ ಬಳಿ ಅಮಾತ್ಯನಾಗಿದ್ದ ಲಕ್ಕಣ್ಣ ದಂಡೇಶ ಹಾಗೂ ಆಸ್ಥಾನದಲ್ಲಿದ್ದ ನೂರೊಂದು ವಿರಕ್ತದ ಶಿವಶರಣರಿಂದಾಗಿ ವೀರಶೈವಧರ್ಮವು ರಾಜಾಶ್ರಯ ಪಡೆದುದಲ್ಲದೆ ಜನಸಾಮಾನ್ಯರ ಧರ್ಮವಾಗಿಯೂ ಬೆಳೆದಿತ್ತು.

ಗದುಗಿನ ವೀರನಾರಾಯಣನನ್ನು ಕೃತಿಯ ಕೇಂದ್ರಬಿಂದುವಾಗಿಸಿಕೊಂಡು ಕುಮಾರವ್ಯಾಸ ತನ್ನ ಮಹಾಕಾವ್ಯದ ರಚನೆಯಿಂದಾಗಿ ವಿಷ್ಣು ಪಾರಮ್ಯವನ್ನು ಪ್ರಚಾರಕ್ಕೆ ತಂದಿದ್ದನು.ಇದೇ ಅವಧಿಯಲ್ಲಿ ಮಧ್ವಾಚಾರ್ಯರ ಶಿಷ್ಯ ಪರಂಪರೆಯಲ್ಲಿ ಬಂದ ಜಯತೀರ್ಥರು ಮಧ್ವಾಚಾರ್ಯರ ಸರ್ವಮೂಲ ಗ್ರಂಥಗಳಿಗೆ ಶ್ರೇಷ್ಠವಾದ ವ್ಯಾಖ್ಯಾನಗಳನ್ನು ರಚಿಸಿದ್ದರು.

ಹೀಗೆ ಯವನರ ಧಾಳಿಯಿಂದ ಉಂಟಾಗಿದ್ದ ಕಷ್ಟ ನಷ್ಟ ಗಳಿಂದ ಚೇತರಿಸಿಕೊಂಡು ಮತ್ತೆ ಹಿಂದು ಸಂಸ್ಕೃತಿ,ಧರ್ಮ,ಕಲೆಗಳಿಗೆ ಅಪಾರ ಪ್ರೋತ್ಸಾಹ ನೀಡುತ್ತ ವಿದ್ಯೆಯಲ್ಲೂ ಕಾವ್ಯ ಸಂಸ್ಕಾರದಲ್ಲೂ ತಲೆ ಎತ್ತಿ ನಿಂತು ಆರ್ಥಿಕ ಸಂಪತ್ತಲ್ಲೂ ಅತ್ಯುನ್ನತಿ ಗಳಿಸಿಕೊಂಡು ವಿಜಯನಗರ ಸಾಮ್ರಾಜ್ಯ ಪ್ರಖ್ಯಾತಿ ಪಡೆಯಿತು. ಅಸಂಖ್ಯ ಗುಡಿ ಗೋಪುರಗಳು,ಭವ್ಯ ಕಟ್ಟಡಗಳು,ಪ್ರತಿಮಾದಿಗಳ ಶಿಲ್ಪ ಕಲೆಯೂ,ಕರ್ನಾಟಕ ಸಂಗೀತ ಪರಂಪರೆಯೂ, ಹೃದಯಂಗಮವಾದ ಲಲಿತ ಕಲೆ,ಚಿತ್ರಕಲೆಗಳೂ ಪುನರುಜ್ಜೀವಿತಗೊಂಡವು. ಸರ್ವಮತ ಧರ್ಮಗಳಿಗೂ ಸಮಾನ ಗೌರವ,ರಕ್ಷಣೆ ದೊರೆತು ಹಿಂದೂ ಧರ್ಮ ,ಹಿಂದೂ ಸಂಸ್ಕೃತಿ ಮಹಾನ್ ರೀತಿಯಲ್ಲಿ ತಲೆ ಎತ್ತಿತು. ಇಡೀ ದಕ್ಷಿಣ ಭಾರತವೆಲ್ಲ ಸಾಂಸ್ಕೃತಿಕವಾಗಿ ಒಂದಾಗಿದೆ ಎನ್ನಿಸುವ ನೆಲೆಯಲ್ಲಿ, ಜನಜೀವನ ನೆಮ್ಮದಿ ಕಂಡಂತಹ ದಿನಗಳಲ್ಲಿ ಕನ್ನಡನಾಡು ವಿಜೃಂಭಿಸಿತು ಎನ್ನುವುದಾದಲ್ಲಿ ಈ ಸಾಮ್ರಾಜ್ಯದ ಅರಸರ ಗುಣವಿಶೇಷಗಳ ವಿಶಾಲವಾದ ಸನ್ನಡತೆಯಿಂದಲೇ ಇದೆಲ್ಲ ಸಾಧ್ಯವಾದುದು, ಈ ಉಚ್ಚ್ರಾಯ ಸ್ಥಿತಿಗೆ ನಾಡು ಬಂದು ತಲುಪಿದ್ದು ಈ ಅರಸರುಗಳ ಧರ್ಮಪೂರ್ಣವಾದ ಆಳ್ವಿಕೆಯಿಂದಲೇ ಎನ್ನುವುದನ್ನು ಒಪ್ಪಬೇಕಾಗುತ್ತದೆ.

ಕನ್ನಡಿಗರ ಇಂಥ ಸುವರ್ಣ ದಿನಗಳ ಬದುಕು ಪ್ರಾರಂಭಗೊಂಡಿದ್ದಂತೆಯೇ ವಿಜಯನಗರದ ದೊರೆ ಸಾಳುವ ನರಸಿಂಹ ಆಳ್ವಿಕೆಯಲ್ಲಿ ರಾಜಗುರುಗಳೆಂದು ಅಭಿಷಕ್ತರಾದ ಶ್ರೀಪಾದರಾಜರು ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿ, ದೇವಸ್ಥಾನದ ಪೂಜಾವಿಧಿಗಳಲ್ಲಿ ಹಾಡಿಸುವ ಮೂಲಕ ಕನ್ನಡ ಹರಿದಾಸ ಪಂಥದ

ಪ್ರವರ್ತಕರೆನ್ನಿಸಿಕೊಂಡರು. ಮಧ್ವಾಚಾರ್ಯರ ತತ್ವವಾದವನ್ನು ಕನ್ನಡಿಗರಿಗೆ ಪರಿಣಾಮಕಾರಿಯಾಗಿ ಪ್ರಚಾರ ಮಾಡಿದವರಲ್ಲಿ ಶ್ರೀಪಾದರಾಜರೇ ಮೊದಲ ಯತಿಗಳೆನ್ನಿಸಿಕೊಂಡರು. ಮುಂದಿನ ವ್ಯಾಸಕೂಟದ ಪ್ರವರ್ತಕರಾದ ವ್ಯಾಸರಾಯ ಯತಿಗಳಿಗೆ ವಿದ್ಯಾಗುರುಗಳಾಗಿ,ಕನ್ನಡದಲ್ಲಿ ಭಕ್ತಿ ತತ್ವ ಹರಡಲು, ದ್ವೈತ ಮತದ ಪ್ರಸಾರವಾಗಲು ಮೂಲ ಕಾರಣಪುರುಷರೆನ್ನಿಸಿಕೊಂಡರು.

* * * * *

ಹರಿದಾಸ ಪಂಥದ ಪ್ರವರ್ತಕರಾಗಿ ಶ್ರೀಪಾದರಾಜರು

೧. ಅ. ಪೀಠಿಕೆಯಾಗಿ ಕೆಲವು ನುಡಿಗಳು

ಆ. ಶ್ರೀಪಾದರಾಜ ಯತಿಗಳ ಜೀವನ

ಇ. ಶ್ರೀಪಾದರಾಜರು ಪಡೆದ ಪ್ರಭಾವ-ಪ್ರೇರಣೆಗಳು

ಈ. ಶ್ರೀಪಾದರಾಜರ ಕಾಲದ ಚಾರಿತ್ರಿಕ ಅಂಶಗಳು

೨. ಶ್ರೀಪಾದರಾಜರ ಕೃತಿಗಳೆಡೆ ಕಿರುನೋಟ

ಅ. ಆತ್ಮನಿವೇದನೆ

ಆ. ಶರಣಾಗತಿ

ಇ. ಸಂಸಾರದ ನಿಸ್ಸಾರತೆ, ಬದುಕಿನ ನಶ್ವರತೆ

ಈ. ತಾತ್ವಿಕತೆ/ ನೀತಿಬೋಧೆ

ಉ. ಭಗವಂತನ ಗುಣಗಾನ

ಊ. ವಾತ್ಸಲ್ಯ ಭಾವ/ ಸಖ್ಯಭಾವ/ಮಧುರಭಾವ

ಋ. ಇನ್ನಿತರ ರಚನೆಗಳು.

ಪೀಠಿಕೆ

ಹರಿದಾಸ ಸಾಹಿತ್ಯ ರಚನೆಯು ಮೂಲ ಪ್ರವೃತ್ತಿಯು ನರಹರಿ-ತೀರ್ಥರಲ್ಲಿ ಕಾಣಿಸಿಕೊಂಡಿದ್ದು ಹೌದೆನ್ನವುದಾದರೂ ಹರಿದಾಸ ಪರಂಪರೆಯು ಅವರಿಂದಲೇ ಮೊದಲುಗೊಂಡು ಮುಂದುವರೆಯಲಿಲ್ಲವೆನ್ನುವುದೂ ದಿಟವೇ. ಅವರ ನಂತರ ಧರ್ಮಸಂಸ್ಥಾನದ ಪಟ್ಟಕ್ಕೆ ಬಂದ ಮಾಧವತೀರ್ಥರಾಗಲೀ, ಅಕ್ಷೋಭ್ಯತೀರ್ಥ, ಜಯತೀರ್ಥ, ವಿದ್ಯಾದಿರಾಜ ತೀರ್ಥರಾಗಲೀ ಯಾರೂ ಈ ಕುರಿತು ಆಸಕ್ತಿ ವಹಿಸಿದಂತಿಲ್ಲ. ಆದರೆ ಇದೇ ಪೀಳಿಗೆಯಲ್ಲಿ ಎಂಬತ್ತೇಳು ವರ್ಷಗಳ ನಂತರ ಪಟ್ಟಕ್ಕೆ ಬಂದ ಶ್ರೀಪಾದರಾಜರಲ್ಲಿ ಮತ್ತೆ ನರಹರಿತೀರ್ಥರು ತೋರಿದ್ದ ಹರಿದಾಸ್ಯ ಪ್ರವೃತ್ತಿಯು ಮರುಕಳಿಸಿತು. ದಾಸಸಾಹಿತ್ಯವನ್ನು ಶ್ರೀಪಾದರಾಜರು ವಿಪುಲವಾಗಿ ಸೃಷ್ಟಿಸಿದ್ದೂ ಅಲ್ಲದೆ ಪೂಜೆಯಲ್ಲಿ ಈ ಸಾಹಿತ್ಯವನ್ನು ಸಂಗೀತರೂಪಿಯಾಗಿ ಭಗವಂತನಿಗೆ ಸೇವೆಯೆಂದು ಸಲ್ಲಿಸುವ ಪರಿಪಾಠವನ್ನೂ ಹುಟ್ಟು ಹಾಕಿದರು. ಹೀಗೊಂದು ಹರಿದಾಸರಿಗೆ ಪ್ರೋತ್ಸಾಹದ ವೇದಿಕೆಯ ನೆಲೆಗಟ್ಟು ಹಾಕಿದವರು, ಮುಂದೆ ತಮ್ಮ ಶಿಷ್ಯರಾದ ವ್ಯಾಸತೀರ್ಥರಿಗೂ ಈ ಗೀಳನ್ನು ಹಿಡಿಸಿದವರು, ಹಾಗೆ ಮುಂದಿನ

ದಾಸಕೂಟವನ್ನು ವ್ಯಾಸತೀರ್ಥರು ಕಟ್ಟಲು ಪ್ರೇರಕ ಶಕ್ತಿಯಾದವರು ಶ್ರೀಪಾದರಾಜ ಯತಿಗಳೇ, "ಹರಿದಾಸ ಪರಂಪರೆಯ ಪ್ರವರ್ತಕ"ರೆಂದು ಕರೆಯಿಸಿಕೊಂಡವರು. ಹರಿದಾಸ ಪರಂಪರೆಯ ಸಾಂಪ್ರದಾಯಿಕ ಪೂರ್ವ ಸೂರಿ ಸ್ಮರಣೆಯಲ್ಲಿ ಇವರ ಹೆಸರೇ ಮೊತ್ತ ಮೊದಲು ಬರುತ್ತದೆ.

"ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ
ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇ ನಮಃ"

ವಿಜಯದಾಸರಿಗೆ ಪೂರ್ವಿಕರಾಗಿದ್ದ "ಗುರು ಮಹೀಪತಿ" ಎಂಬ ಅಂಕಿತದ ದಾಸರ ರಚನೆಯೊಂದು ಹೀಗೆ ತಿಳಿಸುತ್ತದೆ:

"ಶರಣೆಂದು ಆದ್ಯರ, ಸಕಲ ಪ್ರಸಿದ್ಧರ
ಶ್ರೀಪಾದ ಪ್ರೀಯ ಶುಭ ವ್ಯಾಸರಾಯರ....... ನೆನೆದು ನೆನೆಯುವೆ....॥

ಇಲ್ಲಿಯೂ ಹರಿದಾಸ ಪರಂಪರೆಗೆ ಆದ್ಯರನ್ನು ಬಿಟ್ಟರೆ ಶ್ರೀಪಾದರಾಜರೇ ಮೊದಲಿಗರು ಎಂಬ ಸೂಚನೆ ಇದೆ. ಮಠಾಧಿಪತಿಗಳೂ, ಯತಿಗಳೂ ಆಗಿದ್ದು ಹರಿದಾಸ್ಯ ಭಕುತಿಗೆ ಒಲಿದಂಥವರು ಶ್ರೀಪಾದರಾಜರು.

"ಮಧ್ವಾಚಾರ್ಯರ ದ್ವೈತ ಸಿದ್ಧಾಂತವನ್ನು ಕನ್ನಡದಲ್ಲಿ ಪರಿಣಾಮಕಾರಿಯಾಗಿ ಪ್ರಸಾರ ಮಾಡಿದ ಯತಿತ್ರಯರಲ್ಲಿ ಶ್ರೀಪಾದರಾಜರೇ ಮೊದಲಿಗರು; ಎರಡನೆಯವರು ಕೃಷ್ಣ ದೇವರಾಯರ ಆಸ್ಥಾನದಲ್ಲಿ ರಾಜಗುರುಗಳಾಗಿದ್ದ ವ್ಯಾಸರಾಯರು; ಅನಂತರದವರು ವ್ಯಾಸರಾಯರ ಶಿಷ್ಯರಾದ ವಾದಿರಾಜರು."[೧]

ಶ್ರೀಪಾದರಾಜರ ಜೀವಿತಾವಧಿ ಕ್ರಿ.ಶ.೧೪೦೪ ರಿಂದ ೧೫೦೨. ೯೮ ವರ್ಷಗಳ ಕಾಲ ಬಾಳಿ ಬದುಕಿದ್ದ ಇವರ ಜೀವನವನ್ನು ಕುರಿತು ನೇರವಾಗಿ ದಾಖಲಿಸುವಂಥ ಗ್ರಂಥಗಳಾವುವೂ ಉಪಲಬ್ಧವಿಲ್ಲ. ಇವರ ಆಪ್ತ ಶಿಷ್ಯರಾದ ವ್ಯಾಸರಾಯರು ರಚಿಸಿರುವ ಕನ್ನಡ ಕೀರ್ತನೆಗಳು ಹಾಗೂ 'ಪಂಚರತ್ನಮಾಲಾಸ್ತುತಿ;' ಮತ್ತಿನ ಕೆಲವು ಹರಿದಾಸರ ಕೀರ್ತನೆಗಳು; ಶ್ರೀನಿಧಿತೀರ್ಥರಿಂದ ರಚಿತವಾಗಿರುವ ಶ್ರೀಪಾದರಾಜಾಷ್ಟಕಂ; ಭೀಮಾಚಾರ್ಯರ ರಚನೆಯಾದ "ಶ್ರೀಪೂರ್ಣಭೋಧ ಗುರುವಂಶ ಕಲ್ಪತರು" ಈ ಕೆಲವೇ ಲಭ್ಯ ಕೃತಿಗಳಿಂದ ಅವರ ಬದುಕನ್ನು ಕುರಿತು ತಿಳಿಯಬೇಕಾಗಿದೆ.

ಶ್ರೀಪಾದರಾಜರ ಜೀವನ

ಶ್ರೀಮಧ್ವಾಚಾರ್ಯರ ನೇರ ಶಿಷ್ಯರಾದ ಪದ್ಮನಾಭ ತೀರ್ಥರ ಪೀಳಿಗೆಂಯುಲ್ಲಿ ಏಳನೆಂಯು ಪೀಠಾಧಿಪತಿಯಾಗಿ ಬಂದ ಸ್ವರ್ಣವರ್ಣತೀರ್ಥರು ತಮಿಳುನಾಡಿನ ಶ್ರೀರಂಗದಲ್ಲಿ ತಮ್ಮ ಮಠ ಸ್ಥಾಪಿಸಿಕೊಂಡು ಇದ್ದವರು. ಕಾವೇರಿ ನದಿಯಲ್ಲಿ ತೀರ್ಥಸ್ನಾನದ ಉದ್ದೇಶದಿಂದ ಒಮ್ಮೆ ಇವರು ಶ್ರೀರಂಗದಿಂದ ಶ್ರೀರಂಗಪಟ್ಟಣಕ್ಕೆ

ಪಯಣಿಸಿ ಬರುವಾಗ ಚನ್ನಪಟ್ಟಣ ತಾಲ್ಲೂಕಿನ ಅಬ್ಬೂರಿನ ಬಳಿ ಸಂಜೆಯ ಹೊತ್ತಿನಲ್ಲಿ ಬಾಲಕನೊಬ್ಬನನ್ನು ಕಂಡರು . ಚೂಟಿಯಾಗಿ ಓಡಾಡಿಕೊಂಡು ಇದ್ದ ಆ ದನಗಾಹಿ ಬಾಲಕನಿಂದ ಆಕರ್ಷಿತರಾಗಿ ಅವನನ್ನೇ ತಮ್ಮ ಶಿಷ್ಯನನ್ನಾಗಿ ಪಡೆಯುವ ಆಸೆಯನ್ನೂ ಹೊತ್ತರು. ಹೇಗೂ ಅವರು ಅಬ್ಬೂರಿನಲ್ಲಿ ನೆಲೆಸಿ ಹೆಸರುವಾಸಿಯಾಗಿದ್ದ ಶ್ರೀಪುರುಷೋತ್ತಮ ತೀರ್ಥರನ್ನು ಕಾಣಲೆಂದೇ ಅತ್ತ ಬಂದವರು. ತಮ್ಮನ್ನು ಭೇಟಿಯಾದ ಸ್ವರ್ಣವರ್ಣತೀರ್ಥರ ಅಭಿಲಾಷೆಯನ್ನು ಆಲಿಸಿದ ಪುರುಷೋತ್ತಮತೀರ್ಥರು ಆ ಬಾಲಕ ಗಿರಿಯಮ್ಮ ಮತ್ತು ಶೇಷಗಿರಿ ಆಚಾರ್ಯ ದಂಪತಿಗಳ ಮಗ ಲಕ್ಷೀನಾರಾಯಣನೇ ಇರಬೇಕೆಂದು ಅರಿತು ಬಾಲಕನನ್ನು ಅವನ ತಾಯಿ ತಂದೆಯರ ಸಮೇತ ಬಳಿಗೆ ಕರೆಯಿಸಿಕೊಂಡರು. ದಂಪತಿಗಳ ಬಳಿ ಮಾತಾಡಿ ಮನವೊಲಿಸಿ ಆ ಬಾಲಕನನ್ನು ಸ್ವರ್ಣವರ್ಣತೀರ್ಥರಿಗೇ ಒಪ್ಪಿಸಿಯೂ ಬಿಟ್ಟರು. ಹೀಗೆ ಲಕ್ಷೀನಾರಾಯಣ ಸ್ವರ್ಣವರ್ಣತೀರ್ಥರಿಂದ ಪರಿಗೃಹೀತನಾಗಿ ಶ್ರೀರಂಗಕ್ಕೆ ಪಯಣ ಬೆಳೆಯಿಸಬೇಕಾಗಿ ಬಂದಿತು.

ಶ್ರೀ ಪುರುಷೋತ್ತಮ ತೀರ್ಥರ ಶಿಷ್ಯ ಶ್ರೀ ಬ್ರಹ್ಮಣ್ಯತೀರ್ಥರು. ಬ್ರಹ್ಮಣ್ಯತೀರ್ಥರ ಪೂರ್ವಾಶ್ರಮದ ಚಿಕ್ಕಮ್ಮನ ಮಗನೇ ಲಕ್ಷೀನಾರಾಯಣ. ಅಕ್ಕ ತಂಗಿಯರಿಬ್ಬರ ಮಕ್ಕಳೂ ಹೀಗೆ ಬಾಲಯತಿಗಳಾಗಿ ಮುಂದೆ ಪೀಠಾಧಿಪತಿಗಳಾಗಿ ಬಾಳಿದರು.[*1] ಅಬ್ಬೂರಿನ ಕಣ್ವನದಿಯ ದಡದಲ್ಲಿ, ಪ್ರಶಾಂತ ಪ್ರಾಕೃತಿಕ ವಾತಾವರಣದಲ್ಲಿ ಈಗಲೂ ಶ್ರೀ ಬ್ರಹ್ಮಣ್ಯತೀರ್ಥರ ವೃಂದಾವನವನ್ನು ಕಾಣಬಹುದಾಗಿದೆ. ಪಕ್ಕದ ಗುಡ್ಡದಲ್ಲಿಯೇ ಶ್ರೀ ಪುರುಷೋತ್ತಮ ತೀರ್ಥರ ಗುಹೆಯಿದೆ.

ಶ್ರೀರಂಗ ಕ್ಷೇತ್ರದಲ್ಲಿ ಗುರುಗಳಾದ ಸ್ವರ್ಣವರ್ಣ ತೀರ್ಥರಿಂದ ಬಾಲಕ ಲಕ್ಷೀನಾರಾಯಣನಿಗೆ ವಿದ್ಯಾಭ್ಯಾಸ, ಬ್ರಹ್ಮೋಪದೇಶ, ಸನ್ಯಾಸದೀಕ್ಷೆ ದೊರೆಯಿತು. ಬಾಲಕ "ಲಕ್ಷ್ಮೀನಾರಾಯಣ ತೀರ್ಥ"ರೆಂಬ ಅಭಿದಾನ ಪಡೆದರು, ಸ್ವರ್ಣವರ್ಣ ತೀರ್ಥರ ಪೀಠದ ಉತ್ತರಾಧಿಕಾರಿಯಾಗಿ ಅಭಿಷಕ್ತರಾದರು. ಬಳಿಕ ಮತ್ತೂ ಹೆಚ್ಚಿನ ಉನ್ನತ ವ್ಯಾಸಂಗಕ್ಕಾಗಿ ಬಾಲಯತಿಯನ್ನು ಅಂದಿನ ಕಾಲದಲ್ಲಿ ಹೆಸರಾಂತ ವೇದಾಂತಿಯಾಗಿದ್ದ ಶ್ರೀವಿಭುದೇಂದ್ರತೀರ್ಥರಲ್ಲಿಗೆ ಕಳುಹಿಸಲಾಯಿತು.[*2] ಇವರಲ್ಲಿ ಲಕ್ಷೀನಾರಾಯಣ ತೀರ್ಥರು ದ್ವೈತ ಸಿದ್ಧಾಂತ ಸಮಸ್ತವನ್ನೂ ಕಲಿತರು. ಬಾಲಯತಿಯ ಅಪಾರ ವಿದ್ವತ್ತು, ಪ್ರತಿಭೆಗಳನ್ನು ಕಂಡ ಉತ್ತರಾದಿ ಮಠದ ಶ್ರೀರಘುನಾಥತೀರ್ಥ ಯತಿಗಳು ಲಕ್ಷ್ಮೀನಾರಾಯಣತೀರ್ಥರನ್ನು ಪ್ರಶಂಸಿಸಿ "ಶ್ರೀಪಾದರಾಜ" ಎಂದು ಅಭಿದಾನ ನೀಡಿ ಹರಸಿದರು. ಇಲ್ಲಿಂದ ಮುಂದೆ ಲಕ್ಷ್ಮೀನಾರಾಯಣ ತೀರ್ಥರು "ಶ್ರೀಪಾದರಾಜ"ರೆಂದೇ ಪ್ರಖ್ಯಾತರಾದರು.

ತಮ್ಮ ವಿದ್ಯಾಗುರುಗಳೊಂದಿಗೆ ಸಂಚಾರ ಮುಗಿಸಿ ಶ್ರೀರಂಗಕ್ಕೆ ಶ್ರೀಪಾದರಾಜರು ಹಿಂದಿರುಗಿದ ಕೆಲಕಾಲದಲ್ಲೇ ಅವರನ್ನು ವಿದ್ಯುಕ್ತವಾಗಿ ಪೀಠಾಧಿಪತಿಯನ್ನಾಗಿ ಮಾಡಿ ಸ್ವರ್ಣವರ್ಣತೀರ್ಥರು ವೃಂದಾವನಸ್ಥರಾದರು. ಆ ಸಂಸ್ಥಾನದ ಎಂಟನೆಯ ಪೀಠಾಧಿಪಪತಿಯಾಗಿ ಶ್ರೀಪಾದರಾಜರು ಸ್ಥಾಪಿತರಾಗಿ ದ್ವೈತ ದರ್ಶನದ ಪ್ರಚಾರಕಾರ್ಯದಲ್ಲಿ ತೊಡಗಿಕೊಂಡರು.

ಮುಂದಿನ ಕೆಲವು ವರ್ಷಗಳಲ್ಲಿ ಶ್ರೀಪಾದರಾಜರು ಶ್ರೀರಂಗದಲ್ಲಿಯೇ ಸಂಸ್ಥಾನಾಧಿಪತಿಯಾಗಿ ಇದ್ದರು. ಶ್ರೀರಂಗದ ರಂಗನಾಥಸ್ವಾಮಿ ಶ್ರೀಪಾದರಾಜರಿಗೆ ಆಪ್ತದೈವವೇ ಆಗಿದ್ದನೆಂತಲೇ ಅವರು "ಕಂಗಳಿದ್ಯಾತಕೋ ಕಾವೇರಿ ರಂಗನ ನೋಡದ " ಕೃತಿ ರಚಿಸಿದರು, "ರಂಗವಿಠಲ"ನೆಂಬ ಅಂಕಿತವಿರಿಸಿಕೊಂಡೇ ಕನ್ನಡದಲ್ಲಿ ಅನೇಕ ಕೃತಿಗಳನ್ನು ರಚಿಸಿ ಹಾಡಿದರು.

ಕೆಲವು ವರ್ಷಗಳು ಕಳೆದ ಮೇಲೆ ಮತ್ತೆ ಸಂಚಾರಕ್ಕೆಂದು ಹೊರಟ ಶ್ರೀಪಾದರಾಜರು ಕೋಲಾರದ ಮುಳುಬಾಗಿಲಿನೆಡೆ ಬಂದಾಗ ಅಲ್ಲಿನ ಶಾಂತ ಸ್ನಿಗ್ಧ ಪ್ರಾಕೃತಿಕ ರಮಣೀಯತೆಗೆ ಮನಸೋತು ಅಲ್ಲಿಯ "ನೃಸಿಂಹತೀರ್ಥ"ದ ಸನ್ನಿಧಿಯಲ್ಲೇ ತಮ್ಮ ಮಠವನ್ನು ಸ್ಥಿರವಾಗಿ ಸ್ಥಾಪನೆಗೊಳಿಸಿಕೊಂಡರು. ಈ ಕಾಲಕ್ಕೇ 'ಮುಳುಬಾಗಿಲು' ವಿಜಯನಗರ ಅರಸರ ಅಧಿಪತ್ಯಕ್ಕೆ ಒಳಪಟ್ಟು ಸಾಕಷ್ಟು ಮಹತ್ವ ಪಡೆದಿತ್ತು. ಶ್ರೀಮಧ್ವಾಚಾರ್ಯರ ನೇರಶಿಷ್ಯರಲ್ಲಿ ಮತ್ತೊಬ್ಬರಾದ ಶ್ರೀ ಅಕ್ಷೋಭ್ಯತೀರ್ಥರು ಶ್ರೀವಿದ್ಯಾರಣ್ಯರೊಂದಿಗೆ ವಾದ ಮಾಡಿ ದ್ವೈತವಿಜಯ ಸಂಪಾದನೆ ಮಾಡಿಕೊಂಡು ಪ್ರಸಿದ್ಧರಾಗಿದ್ದೂ ಈ ಸ್ಥಳದಲ್ಲಿಯೇ ಆಗಿತ್ತು. ಅಂಗಾರದಿಂದಲೇ ಅಕ್ಷೋಭ್ಯ ತೀರ್ಥರು ಯೋಗಾನರಸಿಂಹನನ್ನು ಬರೆದ ಪವಿತ್ರ ಕ್ಷೇತ್ರವೆಂದೂ ಈ ಜಾಗ ಪ್ರಸಿದ್ದಿ ಹೊಂದಿತ್ತು.

ಇಷ್ಟಲ್ಲದೆ, ಕೌಂಡಿನ್ಯ ಮುನಿಗಳು ತಪಸ್ಸು ಮಾಡಿದ್ದ ಪುಣ್ಯಸ್ಥಳ, ಪುತ್ರನನ್ನು ಬಯಸಿದ ಅಂಜನಾದೇವಿ ತಪಸ್ಸು ಮಾಡಿದ ಅಂಜನಾದ್ರಿ ಬೆಟ್ಟವಿರುವುದೂ ಇಲ್ಲಿಯೇ, ಕಪಿಧ್ವಜನಾದ ಅರ್ಜುನ ಮಹಾಭಾರತ ಯುದ್ಧಾನಂತರ ತನ್ನ ರಥದ ಮೇಲಿದ್ದ ಹನುಮಂತನನ್ನು ಮರಳಿ ಪ್ರತಿಷ್ಠಾಪಿಸಿದ್ದೂ ಇಲ್ಲಿಯೇ, ಅಗಸ್ತ್ಯ ಮುನಿಗಳು ಪ್ರತಿಷ್ಠಾಪಿಸಿದ್ದರೆನ್ನಲಾದ ಅಗಸ್ತ್ಯೇಶ್ವರನಿರುವುದೂ ಇಲ್ಲಿಯೇ. ಹೀಗೆಲ್ಲ ಪೌರಾಣಿಕ ಪುಣ್ಯ ಮೊತ್ತವಿರುವ ಈ ಕ್ಷೇತ್ರವನ್ನು ಶ್ರೀಪಾದರಾಜರು ತಮ್ಮ ಮುಂದಿನ ಬದುಕನ್ನು, ಸಾಧನೆಯನ್ನು ಮುಂದುವರೆಸುವ ಸಲುವಾಗಿ ಆಯ್ದುಕೊಂಡರು, ಇಲ್ಲಿಯೇ ನೆಲೆನಿಂತರು.

ಇಂಥ ಪುಣ್ಯಭೂಮಿಯಲ್ಲಿ ಶ್ರೀಪಾದರಾಜರು ನೆಲೆಯಾಗಿ ದ್ವೈತ ದರ್ಶನದ ಮಹಾ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರು. ದೇಶದ ನಾನಾ ಭಾಗಗಳಿಂದ ವಿದ್ಯಾಕಾಂಕ್ಷಿಗಳು ಬಂದಿಲ್ಲಿ ವೇದಾಂತ ವಿದ್ಯೆ ಕಲಿಯಲಾರಂಭಿಸಿದರು. ಮುಳುಬಾಗಿಲಿನ ಖ್ಯಾತಿ ದಿನೇ ದಿನೇ ವಿಸ್ತರಿಸಿತು.

ಆಕಾಂಕ್ಷಿಗಳಿಗೆ ಪಾಂಡಿತ್ಯ, ವಿದ್ವತ್ತುಗಳನ್ನು ಗಳಿಸಿಕೊಳ್ಳಲು ಅವಕಾಶ, ದಾರಿಯಾದರಷ್ಟೇ ಸಾಲದು, ಸಮಾಜದಲ್ಲಿನ ಶ್ರೀಸಾಮಾನ್ಯರೂ ಉದ್ಧಾರವಾಗಬೇಕು, ಜ್ಞಾನಭಕ್ತಿಗಳನ್ನು ಅರಿತು ನಡೆದುಕೊಳ್ಳಬೇಕು ಎಂದು ಹಂಬಲಿಸಿದ ಪುಣ್ಯಾತ್ಮರು ಶ್ರೀಪಾದರಾಜರು. ತಮ್ಮಷ್ಟಕ್ಕೆ ಸಂಸ್ಕೃತ ಪಾಂಡಿತ್ಯ ತರ್ಕಗಳಲ್ಲಿ ಮುಳುಗಿ ಹೋಗದೆ, ವಿದ್ವತ್ತಿನ ಬೆನ್ನು ಹಿಡಿದು ಕಳೆದು ಹೋಗದೆ ಕನ್ನಡದಲ್ಲಿನ ಭಾವುಕ, ಅನುಭಾವ ಕವಿಯಾಗಿಯೂ ಉಳಿದು ಸಮಾಜಕ್ಕೆ ಹತ್ತಿರಾದವರು ಶ್ರೀಪಾದರಾಜರು. ಹೊಸಗನ್ನಡ ಶೈಲಿಯಲ್ಲಿ ಸೊಗಸಾದ ದೇವರನಾಮಗಳನ್ನು ರಚಿಸಿ

ಪೂಜೆಯ ವೇಳೆಯಲ್ಲಿ ತಾವೇ ಹಾಡುತ್ತಿದ್ದರೆನ್ನಲಾಗಿದೆ. ಮಠಾಧಿಪತಿಗಳಲ್ಲಿ ಬಹಳೇ ಸಾಮಾನ್ಯವಾಗಿರುತ್ತಿದ್ದ ಸಂಸ್ಕೃತಾಭಿಮಾನ, ಪಂಡಿತರಿಗೆ ಮಾತ್ರ ಮನ್ನಣೆ, ವೈದಿಕ ಜನ ಪಕ್ಷಪಾತಿಯಾಗಿರುವಿಕೆ ಈ ಗುಣಗಳನ್ನು ಮೀರಿದವರಲ್ಲಿ ಶ್ರೀಪಾದರಾಜರೇ ಮೊದಲಿಗರು. ಮುಂದೆ ಬಂದ ದಾಸಕೂಟಕ್ಕೆ ಇವರ ಪ್ರಭಾವ ಖಂಡಿತವಾಗಿಯೂ ಆಗಿದ್ದಿರುವುದು ಸಹಜವೇ. ಹರಿಭಕ್ತಿಯ, ಹರಿದಾಸ್ಯದ ಗೀಳನ್ನು ಇವರಿಂದಲೇ ಪಡೆದು ಅಥವಾ ಪ್ರಭಾವಿತರಾಗಿ ಮುಂದೆ 'ದಾಸಕೂಟ'ವನ್ನು ಕಟ್ಟಿದವರು ಇವರ ಶಿಷ್ಯರಾದ ಶ್ರೀವ್ಯಾಸತೀರ್ಥರೇ.

'ಷಟ್ಶಾಸ್ತ್ರ ಸಂಪನ್ನರು' 'ಸಕಲ ಶಾಸ್ತ್ರ ಕಲಾಪರು' 'ಭಕ್ತ ಮಂದಾರರು' 'ವಾದಿ ಭಯಂಕರರು' ಎಂಬೆಲ್ಲ ಬಿರುದಾಂಕಿತರಾಗಿದ್ದ ಶ್ರೀಪಾದರಾಜರು ಸ್ವತಃ ಮಠಾಧಿಪತಿಗಳಾಗಿದ್ದು ಸಂಸ್ಕೃತಭಾಷೆಯ, ದ್ವೈತ ಸಿದ್ಧಾಂತದ ಹರಿಕಾರರಾಗಿದ್ದು, ತಾವು ನಂಬಿದ್ದ ದ್ವೈತ ಸಿದ್ಧಾಂತವನ್ನು ಕನ್ನಡಭಾಷೆಯಲ್ಲಿ ಸಾರಸಂಗ್ರಹವಾಗಿ ತಿಳಿಹೇಳಿ, ಕನ್ನಡ ಜನತೆಗೆ ತಲುಪಿಸಿದ ಮಹಾನುಭಾವರು. ಅವರ ಆ ಕಾಲದಲ್ಲಿ ಮಠದ ಪರಿಸರದಲ್ಲಿ ಕನ್ನಡ ನಿಷಿದ್ಧವಾಗಿತ್ತು! ಕನ್ನಡದಲ್ಲಿ ಮಾತಾಡಿದರೆ ಮೈಲಿಗೆ ಎಂದುಕೊಳ್ಳಲಾಗುತಿತ್ತು! ಅಂಥದ್ದರಲ್ಲಿ ಶ್ರೀಪಾದರಾಜರು ಕನ್ನಡದಲ್ಲಿಯೇ ಹರಿಭಕ್ತಿ, ಸ್ತುತಿಗೀತೆಗಳನ್ನು ರಚಿಸಿ ತಮ್ಮ ಪೂಜಾಕಾಲದಲ್ಲಿ ಹಾಡಿ ಹರಿಗೆ ನಿವೇದಿಸಿದ ರೀತಿ ಅದ್ಭುತವಾಗಿ ಕ್ರಾಂತಿಯೇ ಸರಿ! ಮಠದಲ್ಲಿನ, ಮಹಾವಿಶ್ವವಿದ್ಯಾನಿಲಯದಲ್ಲಿನ ಪಂಡಿತರನ್ನೂ, ವಿದ್ವಾಂಸರನ್ನೂ ಪೋಷಿಸಿದರು. ಶ್ರೀಸಾಮಾನ್ಯನ ಹೃದಯದ ಭಾವಭಾವನೆಗಳನ್ನೂ ತಮ್ಮ ಕೃತಿಯಲ್ಲಿ ತಂದು ಅವರುಗಳಿಗೆ ಹತ್ತಿರಾದ ಆಪ್ತರಾದ ಗುರುಗಳೆನ್ನಿಸಿಕೊಂಡರು. ಸಂಸ್ಕೃತಕ್ಕೆ ಪುರಸ್ಕಾರವಿತ್ತರು. ಆದರೆ ಕನ್ನಡವನ್ನೆಂದೂ ತಿರಸ್ಕರಿಸಲಿಲ್ಲ!

ಶ್ರೀಪಾದರಾಜರು ದ್ವೈತ ವೇದಾಂತ ವಾಙ್ಮಯದಲ್ಲಿನ 'ಮೈಲಿಗಲ್ಲು' ಎನ್ನಿಸಿಕೊಂಡಿರುವ 'ವಾಗ್ವಜ್ರ'ವೆಂಬ ಮಹಾಗ್ರಂಥವನ್ನು ಸಂಸ್ಕೃತದಲ್ಲಿ ಬರೆದರು. ಇದು ಮಧ್ವಾಚಾರ್ಯರ 'ನ್ಯಾಯ ಸುಧಾ' ಗ್ರಂಥದ ಅರ್ಥಸಂಗ್ರಹ. ತಮ್ಮ ಜೀವಿತಾವಧಿಯಲ್ಲಿ ಸರ್ವಮೂಲ ಗ್ರಂಥಗಳನ್ನು ಟೀಕಾಸಹಿತವಾಗಿ ನಲವತ್ತು ಪರ್ಯಾಯ ಪಾಠ ಹೇಳಿ ಮಂಗಳ ಮಾಡಿದ್ದಾರೆ.[°] ಶಿಷ್ಯರಿಗೆ ತರಪೇತು ನೀಡಿ ಮಾಧ್ವಸಿದ್ಧಾಂತದ ಪ್ರಚಾರಕ್ಕಾಗಿ ಅವರನ್ನು ಬೇರೆ ಬೇರೆ ಕಡೆಗೆ ಕಳುಹಿಸಿ ಕೊಡುತ್ತಿದ್ದರು. ಅನೇಕ ದಶಕಗಳ ಕಾಲ ಸಹಸ್ರ ಸಹಸ್ರ ವಿದ್ಯಾರ್ಥಿಗಳಿಗೆ ವಿದ್ಯೆಯ, ಜ್ಞಾನದ ಧಾರೆಯೆರೆದು ವಿದ್ವಾಂಸರನ್ನಾಗಿ ಮಾಡಿದರು. ವ್ಯಾಸರಾಜರಂತಹ ವಿದ್ವದ್‌ವಿಭೂತಿಗಳನ್ನು ಕಡೆದವರೇ ಶ್ರೀಪಾದರಾಜರು. ತಮ್ಮ ಕೃತಿಗಳ ಮೂಲಕ ಮಧ್ವಮತ ತತ್ವ ಪ್ರಚಾರ ಮಾಡಿದ್ದಲ್ಲದೆ ಸಮಾಜದ ಉನ್ನತಿಗಾಗಿಯೂ ಶ್ರಮಿಸಿದ ಧೀರಯತಿಗಳು. ವಿದ್ವತ್ ಪ್ರಪಂಚದಲ್ಲಿ ಅತಿ ಶ್ರೇಷ್ಠ ಜ್ಞಾನಿ ಎನಿಸಿಕೊಂಡು, ರಾಜಪೂಜಿತರೂ (ಪೆನುಗೊಂಡೆಯ ಸಾಳುವ ನರಸಿಂಹರಾಜನಿಗೆ ಗುರುಗಳಾಗಿದ್ದವರು) ಆಗಿ ತಪಸ್ವಿಗಳೇ ಆಗಿದ್ದ ಶ್ರೀಪಾದರಾಜರು ಕನ್ನಡ ಹರಿದಾಸ ಸಾಹಿತ್ಯಕ್ಕೆ ಪ್ರವರ್ತಕರೆನ್ನಿಸುವಂತೆ ತಿಳಿಗನ್ನಡದಲ್ಲಿ ಕೀರ್ತನೆಗಳು, ಉಗಾಭೋಗಗಳು, ಸುಳಾದಿ, ವೃತ್ತನಾಮ, ದಂಡಕ, ಗೀತೆ ಈ ಪ್ರಕಾರಗಳಲ್ಲಿ ಸ್ತುತಿಗೀತೆಗಳನ್ನು ರಚಿಸಿದ್ದಾರೆ.

ಈ ಪ್ರಕಾರಗಳನ್ನು ಕನ್ನಡದಲ್ಲಿ ಶ್ರೀಪಾದರಾಜರೇ ಮೊದಲು ಮಾಡಿದವರು." ಸುಳಾದಿ, ವೃತ್ತನಾಮಗಳು ನಿರ್ವಿವಾದವಾಗಿ ಅವರೇ ಮೊತ್ತ ಮೊದಲು ತೋರಿಸಿಕೊಟ್ಟ ಗೇಯಕಾವ್ಯ ಪ್ರಕಾರಗಳೇ. ಪದ ಮತ್ತು ಉಗಾಭೋಗಗಳು ಹಿಂದಿನಿಂದ ಬಂದ ಪ್ರಕಾರಗಳಿರಬಹುದು, ಅವನ್ನು ಪ್ರಚಾರಕ್ಕೆ ತಂದವರೇ ಶ್ರೀಪಾದರಾಜರು. ಶಾಸ್ತ್ರೀಯ ಸಂಗೀತವನ್ನು ಹರಿದಾಸ ಸಾಹಿತ್ಯಕ್ಕೆ ಅಳವಡಿಸಿದವರು ಅವರೇ."[*೫]

ಶ್ರೀಪಾದರಾಜರ ಕನ್ನಡ ರಚನೆಗಳನ್ನು ಅವಲೋಕಿಸುವಾಗ ಅವರಿಗಿದ್ದ ಅಗಾಧವಾದ ಸಂಗೀತ ಜ್ಞಾನದ ಅರಿವಾಗುತ್ತದೆ. ಪೂಜಾಕಾಲದಲ್ಲಿ ಅವರು ತಾವೂ ಕನ್ನಡ ದೇವರನಾಮಾದಿಗಳನ್ನು ಹಾಡಿದರು, ಹರಿದಾಸರುಗಳಿಂದಲೂ, ಆಗಿನ ದಿನಗಳಲ್ಲಿ ಬಂದು ಕುಳಿತು, ಕಲಿತು ಹಾಡಲು ತಯಾರಿದ್ದ ಭಾವುಕ ಭಕ್ತ ತಂಡದಿಂದಲೂ ಹಾಡಿಸುತ್ತ ಕೀರ್ತನ ಪದ್ಧತಿಯನ್ನು ಬೆಳೆಸಿದರು. ಹೀಗೆ ಆವರೆಗೆ ಯಾವ ಮಾಧ್ವ ಪೀಠದಲ್ಲೂ ಬಳಕೆಯಿದ್ದಿರದ ಹೊಸ ಪದ್ಧತಿಯನ್ನು ಜಾರಿಗೆ ತಂದರು. "ಎಷ್ಟೋ ವೇಳೆ, ತಾವೂ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಈ ಭಾಗವತ ಸಮೂಹದೊಂದಿಗೆ ಕುಣಿಯುತ್ತಾ ಹಾಡುತ್ತಾ ಭಗವಂತನನ್ನು ಕೊಂಡಾಡುತ್ತಿದ್ದರೆಂದು ಪ್ರತೀತಿಯಿದೆ."[*೬] ಈ ಹಾಡುಗಳನ್ನೆಲ್ಲ ಹಾಡಲೆಂದೇ ಮಠದಲ್ಲಿ ಹಲವಾರು ಭಾಗವತ, ಹರಿದಾಸರುಗಳಿಗೆ ಅಶ್ರಯ ನೀಡಿದರು. ಇವರು ಹಾಕಿದ ಈ ಬುನಾದಿಯೇ ಮುಂದೆ ಹರಿದಾಸ ಪರಂಪರೆಗೆ ಪ್ರೇರಣೆಯಾಗಿ ಮುಂದುವರೆಯಿತು ಎಂಬುದನ್ನು ಗಮನಿಸಬೇಕು. ಶ್ರೀಪಾದರಾಜರ ಹರಿದಾಸ ರಚನೆಗಳು, ಭಾವುಕತನ, ಭಕ್ತಿ ಸಂಪನ್ಮೂಲಗಳೇ ಮುಂದಿನ ದಾಸಕೂಟದವರಿಗೂ ದಾರಿದೀಪವಾಯಿತು ಎನ್ನುವುದನ್ನು ಮರೆಯುವಂತಿಲ್ಲ. ಹೀಗಾಗಿ ಶ್ರೀಪಾದರಾಜರನ್ನು ಹರಿದಾಸರಲ್ಲಿ ಆದ್ಯರೆಂದೂ, ಪ್ರವರ್ತಕರೆಂದೂ ನೆನೆಯುವುದು, ನಮಿಸುವುದು ಖಂಡಿತವಾಗಿ ಸರಿಯಾದುದೇ.

ಶ್ರೀಪಾದರಾಜರು ಪಡೆದ ಪ್ರಭಾವ-ಪ್ರೇರಣೆಗಳು :

ಶ್ರೀಪಾದರಾಜರ ಕನ್ನಡ ಕೃತಿಗಳಲ್ಲಿ 'ಭ್ರಮರಗೀತ' 'ವೇಣುಗೀತ' 'ಗೋಪಿಗೀತ' ಗಳು ತುಂಬ ಪ್ರಸಿದ್ಧವಿವೆ. ಭಾಗವತ ಪುರಾಣದ ಸಪ್ತಮಸ್ಕಂಧದಲ್ಲಿ ಬರುವ 'ನೃಸಿಂಹಸ್ತವ' ಎಂಬ ಸ್ತುತಿಯ ಐವತ್ತಾರು ಶ್ಲೋಕಗಳನ್ನು ತುಂಬ ಸೊಗಸಾದ ಕನ್ನಡದ ಅನುವಾದವಾಗಿಸಿ"ಲಕ್ಷ್ಮೀನೃಸಿಂಹ ಪ್ರಾದುರ್ಭಾವ ದಂಡಕ"ವೆಂದು ಕರೆದು ಕನ್ನಡೀಕರಿಸಿಕೊಟ್ಟಿದ್ದಾರೆ. ಅನುವಾದವಾದರೂ ಇದೊಂದು ಸ್ವತಂತ್ರವಾದ, ರಸವತ್ತಾದ ಕಾವ್ಯವೆಂಬಂತೆಯೇ ಇದೆ.

ಪ್ರೊ॥ ಸಾ.ಕೃ.ರಾಮಚಂದ್ರರಾಯರು ಈ ದಂಡಕಕಾವ್ಯವನ್ನು ತಮಿಳಿನ 'ಇಯಲ್' ಪ್ರಕಾರಕ್ಕೂ, ಇವರ ಇನ್ನುಳಿದ ಗೇಯಬದ್ಧ ರಚನೆಗಳನ್ನು ತಮಿಳಿನ 'ಇಶೈ' ಪ್ರಕಾರಕ್ಕೂ ಹೋಲಿಸುತ್ತ ಶ್ರೀಪಾದರಾಜರ ಮೇಲಾಗಿರುವ ತಮಿಳು ಭಕ್ತಿ ಸಾಹಿತ್ಯದ ಪ್ರಭಾವ, ಪ್ರೇರಣೆಗಳನ್ನು ನಿಖರವಾಗಿ ಗುರುತಿಸಿಕೊಟ್ಟಿದ್ದಾರೆ.[*೭]

ಶ್ರೀಪಾದರಾಜರು ಮುಳುಬಾಗಿಲಿಗೆ ಬಂದು ನೆಲೆಸುವ ಮುನ್ನ ತಮಿಳುನಾಡಿನ ಶ್ರೀರಂಗದಲ್ಲಿಯೇ ಇದ್ದವರು. 'ಆಳ್ವಾರರ ದಿವ್ಯ ಪ್ರಬಂಧಗಳು' ಎಂದೇ ಕರೆಯಲ್ಪಡುವ, ಸ್ವತಃ ರಾಮಾನುಜಾಚಾರ್ಯರೇ ಗೌರವಿಸಿದ್ದ ತಮಿಳು ಪಾಶುರಗಳನ್ನು ಶ್ರೀರಂಗ ದೇವಸ್ಥಾನದಲ್ಲಿ ಹಾಡುತ್ತಿದ್ದುದನ್ನು ಅವರು ಕಂಡಿದ್ದರು, ತಮಿಳು ಪ್ರಬಂಧಗಳ ಸ್ವಾರಸ್ಯವನ್ನು ಸವಿದಿದ್ದರು. ವೇದಮಂತ್ರಗಳನ್ನು ಪಠಿಸುವಂತೆಯೇ ತಮಿಳು ಪದಗಳನ್ನು ಉಚ್ಚಾರಣೆಯ ಕಡೆ ಗಮನವಿರಿಸಿ ತಪ್ಪಿಲ್ಲದೆ ಪಠಿಸುವುದು, ಎಂದರೆ ಸಾಹಿತ್ಯ ಪ್ರಧಾನವಾದುದು 'ಇಯಲ್ ಸೇವೆ',ಎನ್ನಿಸಿಕೊಂಡರೆ ತಮಿಳುಪ್ರಬಂಧಗಳನ್ನು ರಾಗ ತಾಳಗಳಲ್ಲಿ ಹಾಡುತ್ತ ಸಂಗೀತ ಪ್ರಧಾನವಾಗಿ ಸಲ್ಲಿಸುವ ಸೇವೆ 'ಇಶೈ ಸೇವೈ' ಎನ್ನಿಸಿಕೊಳ್ಳುತಿತ್ತು. ದೇವರ ಉತ್ಸವ ಗುಡಿಯಿಂದ ಹೊರಡುವಾಗ ನಿರ್ದಿಷ್ಟ ಪಾಠಕ್ರಮವಿದ್ದ 'ಇಯಲ್ ಸೇವೈ' ನಡೆಯುತಿತ್ತು. ಉಳಿದಂತೆ 'ಇಶೈ'ಯಲ್ಲಿ ಭಜಕರು ಹಾಡುತ್ತ, ಕುಣಿಯುತ್ತ, ಕೆಲವೊಮ್ಮೆ ಅಭಿನಯಿಸುತ್ತಲೂ ಸೇವೆ ಸಲ್ಲಿಸುತ್ತಿದ್ದರು. ಹೀಗಾಗಿ ಈ ಎರಡೂ ಭಕ್ತಿ ಸಾಹಿತ್ಯದ ಪ್ರಭಾವ ಶ್ರೀಪಾದರಾಜರ ಮೇಲೆ ಆಗಿದ್ದುದೇನೂ ಆಶ್ಚರ್ಯವಿಲ್ಲ. ಗುಡಿಯ ಶ್ರೀರಂಗನ ಮೇಲಿನ ಪರಮ ಪ್ರೀತಿ, ಭಕ್ತಿಯಿಂದಲೇ ತಮ್ಮ ಕನ್ನಡ ಕೃತಿಗಳಿಗೆ 'ಶ್ರೀರಂಗ ವಿಠಲ'ನೆಂಬ ಅಂಕಿತವನ್ನೇ ಆಯ್ದುಕೊಂಡಿರಬೇಕೆನ್ನಿಸುತ್ತದೆ. ಮುಳುಬಾಗಿಲಿಗೆ ಬಂದು ಮಠ ಸ್ಥಾಪಿಸಿ ನೆಲೆಯಾದ ಮೇಲೆ ಕನ್ನಡದಲ್ಲಿಯೂ ರಚಿಸಿ ಹಾಡಿ ನಲಿದು ಸೇವೆ ಸಲ್ಲಿಸಿದರೆ ಚೆನ್ನವೆಂದು ಅವರ ಭಾವುಕ ಕವಿ ಹೃದಯ ಕಂಡುಕೊಂಡಿರಬೇಕು. ಕೀರ್ತನ ಪದ್ಧತಿಯಲೇ ಬೇರೆ ಬೇರೆ ಪ್ರಕಾರಗಳಲ್ಲಿ ಅವರಿಂದ ವಿಪುಲ ಸಾಹಿತ್ಯ ಸೃಷ್ಟಿಯಾಯಿತು. "ತಮಿಳು ಪಾಶುರಗಳಿಗಿಂತ ಹೆಚ್ಚಿನ ವೈವಿಧ್ಯವನ್ನು ದಾಸ ಸಾಹಿತ್ಯದಲ್ಲಿ ಕಾಣುತ್ತೇವೆ. ಇದು ಶ್ರೀಪಾದರಾಯರ ಪ್ರಯತ್ನದ ಫಲವೇ; ಮುಂದೆ ವ್ಯಾಸರಾಯ ಸ್ವಾಮಿಗಳೂ, ಪುರಂದರದಾಸರೂ ಇದನ್ನೇ ರೂಢಿಸಿಕೊಂಡರು"[೮] ಸ್ವತಃ ಸಂಗೀತ ವಿಶಾರದರೂ ಆಗಿದ್ದ ಶ್ರೀಪಾದರಾಜರಿಗೆ ಗೇಯಗುಣದ ಭಕ್ತಿ ಸಾಹಿತ್ಯವು ಸಹಜವಾಗಿಯೇ ಒಲಿದು ಬಂದಿತ್ತೆನ್ನುವುದೂ ಸರಿಯೇ.

ಮಾತೃಭಾಷೆಯಲ್ಲಿ ಭಗವಂತನೊಂದಿಗಿನ ಅನುಸಂಧಾನವು ಬೇಗ ಹೃದ್ಗತವಾಗುತ್ತದೆನ್ನುವುದನ್ನು ಶ್ರೀರಂಗದಲ್ಲಿದ್ದಾಗಲೇ ಕಂಡುಕೊಂಡಿದ್ದ ಶ್ರೀಪಾದರಾಜರು ತಾವು ಕಂಡುಕೊಂಡಿದ್ದ, ನಂಬಿದ್ದ ಸತ್ಯ, ಸಿದ್ಧಾಂತ, ತತ್ವಗಳನ್ನು ಸಾಮಾನ್ಯರಿಗೂ ತಲುಪಿಸಲು ಕನ್ನಡ ಜನರನ್ನು ಭಕ್ತಿ, ಶರಣಾಗತಿಯ ಪಥಕ್ಕೆ ಸಿದ್ಧಗೊಳಿಸಲು ಮನಸ್ಸು ಮಾಡಿದ್ದು ಅವರ ಉದಾರ ಬಯಕೆಯೂ ಹೌದು, ಮಾನವ ಜನ್ಮೋದ್ಧಾರದ ಉದ್ದೇಶವೂ ಹೌದು. ಈ ಮಹಾನುಭಾವರು ಹಾಕಿಕೊಟ್ಟ ಮೇಲ್ಪಂಕ್ತಿಯು ಮುಂದೆ ಅವರ ಶಿಷ್ಯ ವ್ಯಾಸತೀರ್ಥರ ಮೂಲಕವೂ, ದಾಸರುಗಳ ಮೂಲಕವೂ ಕನ್ನಡ ಜನರ ಆತ್ಮೋನ್ನತಿಗಾಗಿ ಕಂಕಣ ಕಟ್ಟಿ ದುಡಿಯಿತು ಎನ್ನುವುದು ಐತಿಹಾಸಿಕ ಸತ್ಯವೇ ಆಗಿದೆ.

ಕನ್ನಡ ವಚನ ಸಾಹಿತ್ಯವು ಜನರ ಬದುಕಿನಲ್ಲಿ ಮಾಡಿದ್ದ ಸತ್ಪರಿಣಾಮಗಳನ್ನು ಕೂಡ ಅವರು ಅರಿತವರೇ ಆಗಿದ್ದರು. ಆಗಲೇ ಉದಯಿಸಿದ್ದ ಜೈನ, ವೈಷ್ಣವ ಕವಿಗಳಿಂದ ಮಾತೃಭಾಷೆಯ ರಚನೆಗಳು ಜನರನ್ನು ಸುಲಭವಾಗಿ ತಲುಪಿದ್ದುದನ್ನು ಕಂಡವರೇ ಆಗಿದ್ದರು ಆಗಿದ್ದರು. ಜನರನ್ನು ಧರ್ಮಮಾರ್ಗದಲ್ಲಿ ಮುನ್ನಡೆಯಿಸಬೇಕಾದರೆ ಮಾತೃಭಾಷೆಯ ಸಂಪರ್ಕದಿಂದ ಮಾತ್ರ ಸಾಧ್ಯ ಎನ್ನುವುದು ಅವರ ಅನುಭವದ ಅರಿವಿಗೆ ಒದಗಿಬಂದಿತ್ತು. ಇದಲ್ಲದೆ ವೀರಶೈವ ಧರ್ಮವು ವೇದಗಳನ್ನು ತಿರಸ್ಕರಿಸಿದ್ದರಿಂದ ತತ್ತರಿಸಿ ಹೋಗಿದ್ದ ವೈದಿಕ ಧರ್ಮದ ಪುನರುತ್ಥಾನಕ್ಕೆ ಮಾತೃಭಾಷೆಯ ಕೊಂಡಿಯ ಅಗತ್ಯವನ್ನೂ ಮನಗಂಡಿದ್ದರು. ಶಂಕರಾಚಾರ್ಯರ ಶೈವಧರ್ಮ, ಬಸವಣ್ಣನವರ ವೀರಶೈವಧರ್ಮದ ಪ್ರಾಬಲ್ಯದ ಮುಂದೆ ವೈಷ್ಣವ ಧರ್ಮವನ್ನು ಎತ್ತಿ ಹಿಡಿದು ನಿಲ್ಲಿಸಬೇಕಾಗಿದ್ದ ಅನಿವಾರ್ಯತೆಯೂ ಅವರಿಗಿತ್ತು. ಇಡೀ ನಾಡ ಜನತೆಯು ಪರಧರ್ಮೀಯರ ಆಕ್ರಮಣದ ಸಂಕಷ್ಟ ನಷ್ಟಗಳಿಗೆ ತುತ್ತಾಗಿ ಭಯದಿಂದ ತತ್ತರಿಸುತ್ತಿದ್ದುದರಿಂದ ತಾವು ಮಠಾಧಿಪತಿಯಾಗಿ ಅವರಿಗೆ ಧೈರ್ಯ,ಧೃತಿ,ಬೆಂಬಲದ ಶ್ರೀರಕ್ಷೆ ಒದಗಿಸಬೇಕಾಗಿ ಬಂದಂಥ ಪರಿಸ್ಥಿತಿಯೂ ಅವರ ಮುಂದಿತ್ತು.

ಸಂಸ್ಕೃತ ವಿದ್ವಾಂಸರು ದೇಶೀಯ ಭಾಷೆಯಲ್ಲಿ ತತ್ವಪ್ರಚಾರ ಮಾಡದೇ ಮಡಿವಂತಿಕೆಯ ಧೋರಣೆಯಿಂದ ನಡೆದುಕೊಳ್ಳುತ್ತಿದ್ದುದು ಒಂದೆಡೆ, ತತ್ವಗಳನ್ನು ಅರ್ಥೈಸಿಕೊಳ್ಳುವ ದೇಶೀ ಜನರ ಬಯಕೆ ಒಂದೆಡೆ; ಹೀಗಾಗಿ ಶ್ರೀಪಾದರಾಜರು ಕನ್ನಡದಲ್ಲಿ ತತ್ವ ಪ್ರಚಾರಕ್ಕೆ ಮನಸ್ಸು ಮಾಡಿದರು. ಜನತೆಯಲ್ಲಿ ಮನಃಶಾಂತಿ, ಹರಿಭಕ್ತಿ, ಜ್ಞಾನವನ್ನು ಮೂಡಿಸಲು ಶ್ರಮಿಸಿದರು.

ನೆರೆರಾಜ್ಯವಾದ ಮಹಾರಾಷ್ಟ್ರದಲ್ಲಿ ಆಗಲೇ 'ವಾರಕರಿ ಪಂಥ'ದ ಉದಯವಾಗಿದ್ದು, ವಿಠಲ ದೇವನ ಉಪಾಸಕರ, ಭಕ್ತರ ತಂಡ ತಂಡವೇ ತಮ್ಮ ಮಾತೃಭಾಷೆಯಲ್ಲಿ ಭಕ್ತಿಯ ಮಾರ್ಗದಲ್ಲಿ ನಡೆಯತೊಡಗಿದ್ದರು. ಇವೆಲ್ಲ ಸನ್ನಿವೇಶ, ಸಂದರ್ಭಗಳು, ದಿನೇ ದಿನೇ ಪ್ರಬಲಗೊಳ್ಳುತ್ತಿದ್ದ ಇಸ್ಲಾಂ ಧರ್ಮದ ಆಡಳಿತ, ಧಾಳಿಗಳು, ಹರಿಭಕ್ತಿಯ ಆಡಂಬರ ರಹಿತ ಉಪಾಸನೆ, ಪೂಜೆಯ ಮೂಲಕವೇ ಧರ್ಮ. ತತ್ವದ ಪ್ರಸಾರ ಮಾಡಬೇಕಿದ್ದಂಥ ದಿನಗಳು ಈ ಎಲ್ಲ ಹಿನ್ನೆಲೆಯಲ್ಲಿ ಶ್ರೀಪಾದರಾಜರು ಕನ್ನಡದಲ್ಲಿಯೇ ತಾವು ನಂಬಿದ್ದ ಮಾಧ್ವತತ್ವಗಳ ವಿಷ್ಣುಪಾರಮ್ಯದ ಭಕ್ತಿ, ಶರಣಾಗತಿಯ ಪ್ರಸಾರಕ್ಕೆ ಮನಮಾಡಿದರು.

ಚಾರಿತ್ರಿಕ ಅಂಶಗಳು

ಇದೇಕಾಲದಲ್ಲಿಯೇ ಸಾಳುವ ನರಸಿಂಹನೆಂಬುವವನು ವಿಜಯನಗರ ಸಾಮ್ರಾಜ್ಯದ ಮಹಾಮಾಂಡಲೀಕನಾಗಿ ಚಂದ್ರಗಿರಿಯನ್ನು ಆಳುತ್ತಿದ್ದನು. ಶ್ರೀಪಾದರಾಜರನ್ನು ತನ್ನ ರಾಜಗುರುಗಳೆಂದು ಭಾವಿಸಿಕೊಂಡು ಅವರ ಶಿಷ್ಯತ್ವದಲ್ಲಿಯೇ ಮುನ್ನಡೆದನು. ತನಗೆ ಬಂದ ಬ್ರಹ್ಮಹತ್ಯಾ ದೋಷವನ್ನು ಶ್ರೀಪಾದರಾಜರ ಅನುಗ್ರಹದಲ್ಲಿಯೇ

ನಿವಾರಣೆ ಮಾಡಿಕೊಂಡನು. ಇದಕ್ಕಾಗಿ ಆತ ಶ್ರೀಪಾದರಾಜರನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ಕನಕಾಭಿಷೇಕ ಮಾಡಿಸಿದನೆನ್ನಲಾಗಿದೆ.[*೯] ಇದಲ್ಲದೆ ಸಾಳುವ ನರಸಿಂಹನು ಗುರುವಿಗೆ ಕೃತಜ್ಞನಾಗಿ ಅವರಿಗೆ ಕಾಶೀಯಾತ್ರೆಗೆ ಸಕಲ ಅನುಕೂಲವನ್ನು ಮಾಡಿಕೊಟ್ಟನು. ನೂರಾರು ವಿದ್ವಜ್ಜನರ, ಪರಿವಾರದವರ ತಂಡದೊಂದಿಗೆ ಶ್ರೀಪಾದರಾಜರು ಕಾಶಿಗೆ ತೆರಳಿ ಅಲ್ಲಿಯ ವಿದ್ವತ್ಸಭೆಗಳಲ್ಲಿಯೂ ವಾದಮಾಡಿ ಗೆದ್ದುದಲ್ಲದೆ, ಭಕ್ತಿಯನ್ನೇ ಬೋಧಿಸಿದರು. ಈ ವಿಜಯ ಯಾತ್ರೆಯನ್ನು ಮುಗಿಸಿ ಮರಳಿದ ನಂತರವೇ ವ್ಯಾಸರಾಯರು ಹೆಚ್ಚಿನ ವಿದ್ಯಾಪಾರಂಗತಿಯನ್ನು ಅಪೇಕ್ಷಿಸಿ ಶ್ರೀಪಾದರಾಜರಲ್ಲಿಗೆ ಬಂದು ಶಿಷ್ಯತ್ವ ವಹಿಸಿದುದು. ಅಲ್ಲಿಂದ ಮುಂದೆ ಅನ್ಯೋನ್ಯವಾದ ಈ ಗುರು ಶಿಷ್ಯ ಸಂಬಂಧವು ಮುನ್ನಡೆದು ಕನ್ನಡದ ದಾಸಪರಂಪರೆಗೆ ಅಪೂರ್ವವಾದ, ಸಾಂಸ್ಕೃತಿಕವಾದ ಶೋಭೆಯನ್ನು ತಂದಿತ್ತಿತು. ಭಕುತಿ ಮಾರ್ಗದ ಅಧ್ವರ್ಯಗಳಾಗಿ ಇಬ್ಬರೂ ಕನ್ನಡ ಜನತೆಯ ಉದ್ಧಾರ ಕರ್ತೃಗಳಾದರು. ವ್ಯಾಸರಾಯರು ತಮ್ಮ ಗುರುಗಳ ಬಗ್ಗೆ ಅನೇಕ ಅಂಶಗಳನ್ನು ತಮ್ಮ ಕೀರ್ತನೆಗಳಲ್ಲಿ ತಿಳಿಸಿದ್ದಾರೆ. ಅಂತೆಯೇ ಶ್ರೀಪಾದರಾಯರೂ ತಮ್ಮ ನೆಚ್ಚಿನ ಶಿಷ್ಯನ ಬಗ್ಗೆ ಮನತುಂಬಿ ಕೀರ್ತಿಸಿದ್ದಾರೆ.[*೧೦] ಬಹಳ ಆದರ್ಶಪ್ರಾಯವಾದ ಗುರುಶಿಷ್ಯ ಬಾಂಧವ್ಯ ಇವರಿಬ್ಬರಲ್ಲಿ ನೆಲೆಸಿತ್ತು.

ಶ್ರೀವ್ಯಾಸರಾಯರು ತಮ್ಮ ನೆಚ್ಚಿನ ಗುರುಗಳಾದ ಶ್ರೀಪಾದರಾಜರನ್ನು ಕುರಿತು ರಚಿಸಿರುವ ಎರಡು ಕೀತನೆಗಳು, ಸಂಸ್ಕೃತದಲ್ಲಿ ರಚಿಸಿದ 'ಪಂಚರತ್ನ ಮಾಲಿಕೆ' ಎಂಬ ಸ್ತುತಿಯೂ ಲಭ್ಯವಿದ್ದು ಶ್ರೀಪಾದರಾಜರ ಬಗ್ಗೆ ತಿಳಿಯಲು ಇವು ಸಮಕಾಲೀನ ಸಾಕ್ಷಿಗಳೆನಿಸಿಕೊಂಡಿವೆ.

"ವಾದಿಗಜ ಮಸ್ತಕಾಂಕುಶ ಸುಜನ ಬುಧಗೇಯ......
ಮೇದಿನೀ ಸುರವಂದ್ಯ ಶ್ರೀಪಾದರಾಯ ॥ಪ॥"[*೧೧]

ಹೀಗೆ ಪ್ರಾರಂಭವಾಗುವ ಈ ವ್ಯಾಸರಾಯರ ಕೃತಿಯಲ್ಲಿ ಶ್ರೀಪಾದರಾಜರ ವ್ಯಕ್ತಿತ್ವ ಚಿತ್ರಣವು ಕಣ್ಣಿಗೆ ಕಟ್ಟುವಂತಿದೆ. ಸಕಲ ಶಾಸ್ತ್ರ ವಿದ್ಯಾ ಪಾರಂಗತರೂ, ವಾದಿಭಯಂಕರರೂ ಆಗಿದ್ದುದಷ್ಟೇ ಅಲ್ಲ, ವೇದಶಾಸ್ತ್ರ ಪಾರಂಗತರನೇಕರಿಗೆ ಶ್ರೀಪಾದರಾಜರು ಆಶ್ರಯದಾತರಾಗಿದ್ದರು. ಹರಿಭಕ್ತಿ, ಮಾಧ್ವಮತನಿಷ್ಠೆ, ವಿದ್ವತ್ತುಗಳ ಜೊತೆಯಾಗಿ ಸರಳತೆ, ಸಜ್ಜನಿಕೆ, ದಯಾಕಾರುಣ್ಯತೆ ಇವೆಲ್ಲ ಅವರಲ್ಲಿ ಮಡುಗಟ್ಟಿದ್ದವು. ಕಾಣಲು ಹೇಮವರ್ಣದವರಂತೆ, ಸುಕುಮಾರ ಕಾಯರಂತೆ! ಈ ಕೀರ್ತನೆಯಲ್ಲಿ ಬರುವ ವಿಶೇಷಣಗಳನ್ನು ಕಾಣುವಾಗ ಅವು ಕೇವಲ ಪಾರಿಭಾಷಿಕಾರ್ಥದಲ್ಲಿ ಮಾತ್ರವಲ್ಲ, ಆಗ ತಾನೆ ಮೊದಲಾಗಿದ್ದ ಹರಿಶರಣರ ಅಥವಾ ಹರಿದಾಸರ ತಂಡಕ್ಕೆ ಪ್ರಮುಖರಾಗಿಯೂ, ಇಷ್ಟದಾತರೂ ಆಗಿ ಕೀರ್ತನ ಕೈಂಕರ್ಯದ ಮಹತ್ವವನ್ನು ಜನತೆಗೆ ಕಾಣಿಸಿಕೊಟ್ಟವರೆಂಬ ಭಾವದಲ್ಲಿಯೂ ಅಭಿವ್ಯಕ್ತವಾಗಿವೆ ಎಂದು ಹೇಳಬಹುದಾಗಿದೆ. ಇದೇ ಕೃತಿಯಲ್ಲಿ ಶ್ರೀಪಾದರಾಜರ ಗುರುಗಳು ಸ್ವರ್ಣವರ್ಣ ತೀರ್ಥರೆಂಬ ಹೇಳಿಕೆಯೂ ಬಂದಿದ್ದು ಇದೇ ಶ್ರೀಪಾದರಾಜರ ದೀಕ್ಷಾ ಗುರುಗಳ ಬಗೆಗಿನ ಪ್ರಮುಖ ದಾಖಲೆಯೂ ಆಗುತ್ತದೆ.

ವ್ಯಾಸರಾಯರು ಶ್ರೀಪಾದರಾಜರನ್ನು ಸ್ತುತಿಸಿರುವ ಮತ್ತೊಂದು ಕೀರ್ತನೆ ಹೀಗೆ ಪ್ರಾರಂಭವಾಗುತ್ತದೆ,

"ಮಹಿಮೆ ಸಾಲದೆ ಇಷ್ಟೇ ಮಹಿಮೆ ಸಾಲದೆ? ॥ಪ॥
ಅಹಿಶಯನನ ಒಲುಮೆಯಿಂದ
ಮಹಿಯೊಳೆಮ್ಮ ಶ್ರೀಪಾದರಾಯರ.......॥ಅ.ಪ.॥ [೧೨]

ಶ್ರೀಪಾದರಾಜರು ಉನ್ನತ ವ್ಯಕ್ತಿತ್ವದವರೂ, ಸಿದ್ಧಪುರುಷರೂ ಆಗಿದ್ದರೆಂಬುದನ್ನು ಸಾರುವ ಕೃತಿಯಿದು. ಕೆಲವು ಪವಾಡಗಳನ್ನು ಕೂಡ ಮಾಡಿ ತಮ್ಮನ್ನು ಅವಮಾನಗೊಳಿಸಲು ಬಂದವರನ್ನು ಬೆರಗುಗೊಳಿಸಿದುದಾಗಿ ಶ್ರೀಪಾದರಾಜರ ಬಗ್ಗೆ ವ್ಯಾಸರಾಯರು ಈ ಕೃತಿಯಲ್ಲಿ ತಿಳಿಸುತ್ತಾರೆ. ಆ ಮೂಲಕ ತಮ್ಮ ಸಾತ್ವಿಕ ತಪಃಶಕ್ತಿಯನ್ನು ಅವರು ಮೆರೆದರೆಂದು ಹೇಳುತ್ತಾರೆ.

ಸಾಳುವ ನರಸಿಂಹನು ತನಗೆ ರಾಜಗುರುವಾಗಿದ್ದು ತನ್ನ ಬಳಿಯಲ್ಲೇ ಇದ್ದುಬಿಡಲು ಕೋರಿಕೊಂಡರೂ ಮುಳುಬಾಗಿಲಿನ ತಮ್ಮ ವಿದ್ಯಾಕೇಂದ್ರದಲ್ಲಿನ ಕರ್ತವ್ಯ ಕರೆಯನ್ನು ಅಲಕ್ಷಿಸಿ ಬರಲಾರೆನೆಂದು ತಿಳಿಸಿ, ತಮ್ಮ ಶಿಷ್ಯ ವ್ಯಾಸರಾಯರನ್ನೇ ಸಾಳುವ ನರಸಿಂಹನ ಬಳಿ ರಾಜಗುರುವಾಗಿ ಇರಲು ಒಪ್ಪಿಸಿ, ವಿಜಯನಗರ ಸಾಮ್ರಾಜ್ಯವನ್ನು ಭವ್ಯವಾಗಿ ನಿರ್ಮಿಸುವ ಹೊಣೆಯನ್ನೂ ಸಹ ಅವರಿಗೇ ಒಪ್ಪಿಸಿ ಶ್ರೀಪಾದರಾಜರು ಮುಳುಬಾಗಿಲಿನಲ್ಲೇ ಕಡೆಯವರೆಗೂ ಇದ್ದುಬಿಟ್ಟರು.

ಹೀಗೆ ಶ್ರೀಪಾದರಾಜರು ದ್ವೈತ ಸಿದ್ಧಾಂತ ಸಾಮ್ರಾಜ್ಯದ ರಾಜರೂ, ರಾಜಗುರುಗಳೂ ಆಗಿ ತೊಂಬತ್ತೆಂಟು ವರ್ಷಗಳ ತುಂಬು ಜೀವನವನ್ನು ಬದುಕಿ ಬಾಳಿದರು. ಕನ್ನಡದಲ್ಲಿ ಭಕ್ತಿ ತತ್ವವನ್ನು, ಹರಿಪ್ರೀತಿಯನ್ನು ಜನರ ಮನೆಮನಗಳಲ್ಲಿ ಬಿತ್ತಿದರು. ಮುಂದೆ ಗಟ್ಟಿಯಾಗಿ ಹುಟ್ಟಿಕೊಳ್ಳಲಿದ್ದ ದಾಸಕೂಟಕ್ಕೊಂದು ಮುಂಗಾಣ್ಕೆಯ ನೆಲೆಗಟ್ಟು ನಿರ್ಮಿಸಿದರು. ಮುಂದೆ ಕಾಲಾನುಗತಿಯಲ್ಲಿ ಕಾಣಿಸಿಕೊಂಡ ವ್ಯಾಸಕೂಟ, ದಾಸಕೂಟದವರಿಬ್ಬರ ದೃಷ್ಟಿಕೋನದ ಒಟ್ಟು ಸಾರವೆಲ್ಲವೂ ಶ್ರೀಪಾದರಾಜರಲ್ಲಿಯೇ ಕಾಣಿಸಿಕೊಂಡಿದ್ದಿದೆ. ತತ್ವ, ವಾದ, ಪಾಂಡಿತ್ಯ, ವಾಕ್ಯಾರ್ಥ, ಖಂಡನೆ-ಮಂಡನೆ ಇವೆಲ್ಲ ವ್ಯಾಸಕೂಟದವರ ಗುತ್ತಿಗೆಯಾದರೆ, ಆತ್ಮೋದ್ಧಾರ, ಹರಿಭಕ್ತಿ ಭಾವುಕತೆ, ಲೋಕೋದ್ಧಾರ, ಲೋಕನೀತಿ ಇವೆಲ್ಲ ದಾಸಕೂಟದವರ ನೀತಿ. ಆದರೆ ವ್ಯಾಸಕೂಟ-ದಾಸಕೂಟಗಳ ಹುಟ್ಟಿನ ಮುಂಚೆಯೇ ಎರಡೂ ಕೂಟಗಳ ಸೇತುವೆಯಂತೆ, ಅನುಬಂಧದಂತೆ, ಪಂಡಿತ ಪಾಮರರಿಬ್ಬರಿಗೂ ಆಪ್ತ ಬಂಧುವಿನಂತೆ, ಆಶ್ರಯ ಆಸರೆಯ ದಾತರಾಗಿ ಬದುಕಿದ್ದು ಶ್ರೀಪಾದರಾಜರ ವಿಶೇಷ ವ್ಯಕ್ತಿತ್ವವನ್ನು ಸೂಚಿಸುತ್ತದೆ. ಇವರ ಶಿಷ್ಯ, ಪ್ರಶಿಷ್ಯರಾದ ವ್ಯಾಸರಾಯ, ವಾದಿರಾಜರೂ ಇವರಂತೆಯೇ ಯತಿಗಳಾಗಿ ಇವರ ಮಾರ್ಗದಲ್ಲಿಯೇ ಮುನ್ನಡೆದು ವ್ಯಾಸಕೂಟ-ದಾಸಕೂಟಗಳೆರಡನ್ನೂ ಪೋಷಿಸಿದವರಾಗಿದ್ದಾರೆ.

ಕರ್ನಾಟಕದ ಸಣ್ಣ ಊರೊಂದರಲ್ಲಿ ಜನಿಸಿ, ಆರು ವರ್ಷಗಳ ಸಣ್ಣ ಬಾಲಕನಿರುವಾಗಲೇ ಸನ್ಯಾಸವನ್ನು ಸ್ವೀಕರಿಸಿ ತೊಂಬತ್ತೆಂಟು ವರ್ಷಗಳು ಯತಿಧರ್ಮದಲ್ಲೇ ಬದುಕಿದ ಪುನೀತರು ಶ್ರೀಪಾದರಾಜರು. ತಮ್ಮ ಶಿಷ್ಯರಾದ ಹಯಗ್ರೀವ ತೀರ್ಥರಿಗೆ ಸಂಸ್ಥಾನವನ್ನು ಒಪ್ಪಿಸಿ ಕ್ರಿ.ಶ ೧೫೦೪ನೆಯ ಇಸವಿ ಏಪ್ರಿಲ್ ೧೪ನೆಯ (ಜೇಷ್ಠ ಶುದ್ಧ ಚತುರ್ದಶಿ) ದಿನಾಂಕದಂದು ಶ್ರೀಪಾದರಾಜರು ಭೂಮಿಯ ಬದುಕಿಗೆ ವಿದಾಯ ಹೇಳಿ ವೃಂದಾವನಸ್ಥರಾದರು. ಕೋಲಾರ ಜಿಲ್ಲೆಯ ಮುಳುಬಾಗಿಲಿಗೆ ಒಂದೂವರೆ ಮೈಲಿ ದೂರದಲ್ಲಿರುವ ನೃಸಿಂಹತೀರ್ಥದ ಬಳಿಯೇ ಶ್ರೀಪಾದರಾಜರ ಬೃಂದಾವನವಿದೆ. ಐದುನೂರು ವರ್ಷಗಳ ನಂತರವೂ, ಇಂದಿಗೂ ಅನೇಕ ಮಂದಿ ಇಲ್ಲಿ ಬಂದು ವೃಂದಾವನದ ಸೇವೆ ಮಾಡುತ್ತಿದ್ದಾರೆ. ಹೀಗೆ ಸೇವೆಯ ಮೂಲಕ ತಮ್ಮ ಸಕಲ ಅಭೀಷ್ಟಗಳೂ ನೇರವೇರುತ್ತವೆಂದು ಭಕ್ತಜನರು ನಂಬಿಕೊಂಡಿದ್ದಾರೆ.

ಶ್ರೀವ್ಯಾಸರಾಯರೇ ಸ್ವತಃ ತಮ್ಮ ಪಂಚರತ್ನ ಮಾಲಿಕೆಯಲ್ಲಿ ಹೀಗೆ ಭರವಸೆ ಇತ್ತಿದ್ದಾರೆ.

"ಯದ್ವೃಂದಾವನ ಸೇವಯಾ ಸುವಿಮಲಾಂ ವಿದ್ಯಾನ್ ಪಶೂನ್ ಸಂತತಿಂ
ಧ್ಯಾನ ಜ್ಞಾನಮನಲ್ಪ ಕೀರ್ತಿನಿವಹಂ ಪ್ರಾಪ್ನೋತಿ ಸೌಖ್ಯಂ ಜನಃ
ವಂದೇ ನರಸಿಂಹ ತೀರ್ಥ ನಿಲಯಂ ಶ್ರೀವ್ಯಾಸರಾಟ್ ಪೂಜಿತಂ
ಧ್ಯಾಯಂತಂ ಮನಸಾ ನೃಸಿಂಹಚರಣಂ ಶ್ರೀಪಾದರಾಜಂ ಗುರುಂ......"

ಗುರುಗಳ ಬೃಂದಾವನ ಸೇವೆಯಿಂದ ಏನೆಲ್ಲ ಫಲ ಪ್ರಾಪ್ತಿ ಇದೆಯೆಂದು ಸೂಚಿಸಿ ಫಲಸ್ತುತಿ ಮಾಡಲಾಗಿದೆ ಮೇಲಿನ ಶ್ಲೋಕದಲ್ಲಿ. ಇದರಂತೆಯೇ ಶ್ರೀನಿಧಿತೀರ್ಥರ 'ಶ್ರೀಪಾದರಾಜಾಷ್ಟಕ'ದಲ್ಲಿಯೂ ಈ ಕೆಳಗಿನಂತೆ ಹೇಳಲಾಗಿದೆ.

ಯದ್ವೃಂದಾವನಂ ಸೇವಯಾ ಭುವಿಜಃ ಪ್ರಾಪ್ನೋತಿ ಸೌಖ್ಯಂ ಮಹತ್
ಯದ್ವೃಂದಾವನ ಮೃತ್ತಿಕಾಪಿ ನಿಟಿಲೇ ಭಕ್ತ್ಯಾಧೃತಾ ಸೇವಿತಾ॥

ಮುಂದೆ ಹದಿನೇಳನೇ ಶತಮಾನದಲ್ಲಿ ಬಂದಂಥ ಶ್ರೀವಿಜಯದಾಸರು ಕೂಡ ತಮ್ಮ ಒಂದು ಕೃತಿಯಲ್ಲಿ ಶ್ರೀಪಾದರಾಜರ ಅನುಗ್ರಹವಾದರೆ ವ್ಯಾಸತೀರ್ಥರ, ಪುರಂದರದಾಸರ ಕರುಣೆ, ಆಶೀರ್ವಾದಗಳು ಕೂಡ ಸಿದ್ಧಿಸುವುವು ಎಂದು ಸ್ಪಷ್ಟವಾಗಿ ಸಾರಿದ್ದಾರೆ.

ಇವರ ಪ್ರಸಾದವಾದರೆ ವ್ಯಾಸಮುನಿರಾಯ
ಕವಿರಾಯ ಪುರಂದರದಾಸರು ಮಿಗಿಲಾ
ದವರ ಕರುಣವಿನ್ನು ಸಿದ್ಧಿಸುವುದು ಕೇಳಿ

ನವ ಭಕುತಿ ಪುಟ್ಟುವುದು ವ್ಯಕ್ತವಾಗಿ
ತವಕದಿಂದಲಿ ಚರಮದೇಹವೆ ಬರುವುದು
ದಿವಿಜರು ಒಲಿದು ಸತ್ಕರ್ಮ ಮಾಡಿಸುವರು
ಕವಿನುತ ನಮ್ಮ ವಿಜಯವಿಠಲರೇಯ
ದಿವಾ ರಾತ್ರಿಗಳಲಿ ಅವರ ಕೂಡ್ಯಾಡುವ ॥

ಲೌಕಿಕ ತಾಪತ್ರಯಗಳಲ್ಲಿ ಮುಳುಗಿ ಹೊರಳಿ ಒದ್ದಾಡುವ ಮನುಜರಿಗೆ ವಿಜಯದಾಸರು ಹೀಗೆ ಸಂದೇಶವಿತ್ತಿದ್ದಾರೆ:

ನರಕ ನರಕಗಳಲ್ಲಿ ಹೊರಳುವ ಮನುಜನೆ
ಧರೆಯೊಳಿವರ ಚರಿತೆ ಅದುಭುತ ಒಂದೊಂದು
ನಿರುತದಲಿ ನೋಡು ತುಂಬಿ ಸೂಸುತಲಿದೆ
ಅರುಣೋದಯದಲೆದ್ದು ಶ್ರೀಪಾದರಾಯರ
ಸ್ಮರಿಸಿದ ಮಾನವನಿಗೆ ಸರ್ವ ಸಂಪದವು
ಪರಗತಿಯಾಗುವುದು ಪರಿಹಾಸವಲ್ಲ ಕೇಳು
ಸುರಭೂಸುರ ಪ್ರಿಯ ವಿಜಯವಿಠ್ಠಲನು
ಕರುಣದಿಂದಲಿ ಮಹಾ ಉನ್ನತ ಪದವೀವ ॥

ಸಂಗೀತ, ಸಾಹಿತ್ಯಗಳು ಬೆರೆತರೆ ಅದು ಬೇಗನೆ ಹೃದಯಗಮ್ಯ. ಸಂಗೀತ ಸಾಹಿತ್ಯಗಳಿಗೆ ಭಕ್ತಿಭಾವವೂ ಸೇರಿಕೊಂಡರೆ ಅದು ಭಗವಂತಗಮ್ಯ. ಸಂಗೀತ, ಸಾಹಿತ್ಯ, ಭಕ್ತಿಭಾವಗಳಿಗೆ ಜ್ಞಾನವೂ ಸೇರಿಕೊಂಡಮೇಲಿನ್ನೇನು? ಅದು ನಿಜಕ್ಕೂ ಆತ್ಮೋದ್ಧಾರಿಯೂ ಹೌದು, ಲೋಕೋದ್ಧಾರಿಯೂ ಹೌದು. ಇಂಥ ಜ್ಞಾನ, ಭಕ್ತಿ, ಅನುಭಾವ ಕವಿತ್ವ, ಸಂಗೀತಯೋಗಿತ್ವ ಎಲ್ಲವೂ ಬೆರೆತಿದ್ದಂಥ ಉನ್ನತ ಮಹಿಮಾ ವ್ಯಕ್ತಿತ್ವ ಶ್ರೀಪಾದರಾಜರದಾಗಿದ್ದು, ಅವರು ಸಂಸ್ಕೃತವೆಂಬ ಹಿರಿಯರಿಮೆಯಲ್ಲೇ ಕೂರದೆ, ಕನ್ನಡದಲ್ಲಿ ಕೀಳರಿಮೆಯನ್ನೇನೂ ಭಾವಿಸದೆ ಕನ್ನಡ ನಾಡು ನುಡಿಗಳಿಗೆ, ಕನ್ನಡ ಜನ ಮನದ ಸುಸಂಸ್ಕೃತಿಗೆ ಬಂಧುರವಾದದಾ, ಶ್ರೀಮಂತವಾದ ದೇಣಿಗೆ ಸಲ್ಲಿಸಿದರು, ದಿವ್ಯತೆಯ ಸ್ಪರ್ಶವನ್ನಿತ್ತರು. ಅಷ್ಟೇ ಅಲ್ಲ, ಕನ್ನಡನಾಡಿನ ಮುಂದಿನ ಒಂದು ಮಹತ್ತಾದ ಪರಂಪರೆ ಎನಿಸಿಕೊಂಡ ವ್ಯಾಸಕೂಟ–ದಾಸಕೂಟಗಳಿಗೆ ಮುನ್ನುಡಿ ಬರೆದರು.

<u>ಅಡಿಟಿಪ್ಪಣಿಗಳು</u> :

೧. ಶ್ರೀಪಾದರಾಜರು–ಜೀವನ ಮತ್ತು ಕೃತಿಗಳು. ಡಾ॥ ಟಿ.ಎನ್. ನಾಗರತ್ನ. ಪುಟ–೭

೨. "ಶ್ರೀ ವ್ಯಾಸರಾಜಗುರು ಸಾರ್ವಭೌಮರು" – ಟಿ.ಕೆ. ವೇಣುಗೋಪಾಲದಾಸರು

೩. ಇಂದಿನ ದಿನಗಳಲ್ಲಿ 'ರಾಯರಮಠ'ವೆಂದು ಪ್ರಖ್ಯಾತವಾಗಿರುವ ಸಂಸ್ಥಾನದ ಪೂರ್ವ ಪೀಳಿಗೆಯ ಯತಿಗಳು ಶ್ರೀವಿಭುದೇಂದ್ರತೀರ್ಥರು.

೪. ಶ್ರೀಪಾದರಾಜ ಸಂಪುಟ–ಅರಳುಮಲ್ಲಿಗೆ ಪಾರ್ಥಸಾರಥಿ. ಪುಟ–೧೧೨

೫. "ದಾಸಸಾಹಿತ್ಯ ಮತ್ತು ಸಂಸ್ಕೃತಿ" – ಸಾ.ಕೃ. ರಾಮಚಂದ್ರರಾವ್ .ಪುಟ–೨೪೧

೬. ಶ್ರೀಪಾದರಾಜರ ಕೃತಿಗಳು – ಡಾ॥ ಜಿ. ವರದರಾಜರಾವ್ ಪುಟ ೧೧೧೫

೭. 'ದಾಸಸಾಹಿತ್ಯ ಮತ್ತು ಸಂಸ್ಕೃತಿ' – ಸಾ.ಕೃ. ರಾಮಚಂದ್ರರಾವ್. ಪುಟ–೨೬೩

೮. 'ದಾಸಸಾಹಿತ್ಯ ಮತ್ತು ಸಂಸ್ಕೃತಿ' – ಸಾ.ಕೃ. ರಾಮಚಂದ್ರರಾವ್. ಪುಟ–೨೬೪

೯. ಶ್ರೀನಿಧಿತೀರ್ಥರ ಶ್ರೀಪಾದರಾಜಾಷ್ಟಕ.

೧೦. "ಇದಿರದಾವನು ನಿನಗೆ ಈ ಧರೆಯೊಳು ಪದುಮನಾಭನ ದಾಸ ಪರಮೋಲ್ಲಾಸ....."
"ಸಾಸಿರ ಜಿಹ್ವೆಗಳುಳ್ಳ ಶೇಷನೆ ಕೊಂಡಾಡಬೇಕು ವ್ಯಾಸಮುನಿರಾಯರ ಸಂನ್ಯಾಸದಿರವ" – ಶ್ರೀಪಾದರಾಜರ ಕೃತಿಗಳು.

೧೧. ಶ್ರೀಪಾದರಾಜರ ಕೃತಿಗಳು. ಸಂ: ಡಾ॥ ಜಿ. ವರದರಾಜರಾವ್. ಪುಟ– xxviii

೧೨. ಶ್ರೀಪಾದರಾಜರ ಕೃತಿಗಳು. ಸಂ: ಡಾ॥ ಜಿ. ವರದರಾಜರಾವ್. ಪುಟ– xxix

ಶ್ರೀಪಾದರಾಜರ ಕೃತಿಗಳೆಡೆ ಕಿರುನೋಟ

ಶ್ರೀರಂಗದ ರಂಗನಾಥ ಸ್ವಾಮಿಯನ್ನು ಆರಾಧ್ಯ ದೈವವನ್ನಾಗಿ ಆರಾಧಿಸಿಕೊಂಡಿದ್ದ ಶ್ರೀಪಾದರಾಜರು ನೆರೆನಾಡಾದ ಮಹಾರಾಷ್ಟ್ರದಲ್ಲಿ ಅಂದು ಪ್ರಚಲಿತವಿದ್ದು ಪ್ರಸಿದ್ಧವೂ ಆಗಿದ್ದ ಹರಿಯ ಬಾಲಕ ರೂಪವಾದ ‘‘ವಿಠ್ಠಲ’ನ ಮೇಲಿನ ಪ್ರೀತಿಯನ್ನೂ ಮೇಳವಿಸಿಕೊಂಡು ‘ರಂಗವಿಠ್ಠಲ’ ಎಂದೇ ಅಂಕಿತವಿರಿಸಿಕೊಂಡು ತಮ್ಮ ಕೃತಿಗಳನ್ನು ರಚಿಸಿದರು. ಮುಂದೆ ದಾಸಸಾಹಿತ್ಯದಲ್ಲಿ ಕಂಡುಬರುವ ಸುಳಾದಿ, ಉಗಾಭೋಗ, ದಂಡಕ, ವೃತ್ತನಾಮ, ಕೀರ್ತನೆ ಈ ಎಲ್ಲ ಪ್ರಕಾರಗಳಲ್ಲೂ ಮೊತ್ತ ಮೊದಲು ಕೃತಿರಚನೆ ಮಾಡಿದವರು, ಆ ಮೂಲಕ ಮುಂದೆ ಆವಿಷ್ಕಾರಗೊಂಡ . ದಾಸಕೂಟದವರ ರಚನೆಗಳಿಗೆ ತಳಹದಿಯೊಂದನ್ನು ನಿರ್ಮಾಣ ಮಾಡಿಕೊಟ್ಟವರು ಶ್ರೀಪಾದರಾಜರೇ. ಸಂಖ್ಯಾದೃಷ್ಟಿಯಲ್ಲಿ ಕೀರ್ತನೆಗಳನ್ನೇ ಹೆಚ್ಚು ರಚಿಸಿದ್ದು, ಈ ಕೀರ್ತನೆಗಳೇ ಮುಂದೆ ಹರಿದಾಸ ಸಾಹಿತ್ಯದ ಪ್ರಮುಖವಾದ ರಚನಾಮಾರ್ಗವಾಯಿತು. ಶ್ರೀಪಾದರಾಜರ ಒಟ್ಟು ಕೃತಿಗಳನ್ನು ಸುಮಾರು ವಿಭಿನ್ನ ದೃಷ್ಟಿಕೋನದಿಂದ ಅನುಸಂಧಾನ ಮಾಡಬಹುದಾಗಿದೆ.

೧. ಆತ್ಮನಿವೇದನೆ

೨. ಶರಣಾಗತಿ

ಆತ್ಮ ನಿವೇದನೆ

ಯಾವ ಸತ್ಕವಿಯ ಕಾವ್ಯಾಭಿವ್ಯಕ್ತಿಯು ಹತ್ತು ಹಲವರ ಹೃದಯ ತಟ್ಟಿ ಸ್ಪಂದನಗಳೇಳುವಂತೆ ಮಾಡಬಲ್ಲದೋ, ಓದಿದವರಲ್ಲಿ, ಕೇಳಿದವರಲ್ಲಿ ‘ಇದು ನನ್ನದೇ ಅನುಭವ, ಇದು ನನ್ನ ಅಂತರಂಗದ್ದೇ ಅನಿಸಿಕೆ’ ಎಂದೆನಿಸಿಕೊಳ್ಳಬಲ್ಲುದೋ ಅದೇ ನಿಜವಾದ ಕವಿಸೂಕ್ತಿ, ಪ್ರಾಮಾಣಿಕ ಅಭಿವ್ಯಕ್ತಿ. ಕವಿತೆಯಾಗಿ ಹೊಮ್ಮಿದ ಮೇಲೆ ಅದು ಓದುವವರ, ಹಾಡುವವರ, ಕೇಳುವವರ ಅನುಭವವೇ ಆಗಿ ಹಾಗೆ ಜನತೆಯ ಮನಮಿಡಿತದ ಸ್ವತ್ತೂ ಆಗಿಬಿಡುತ್ತದೆ. “ಏನ ಪೇಳಲಿ ದೇವ ನಾ ಮಾಡಿದಾ ಕರ್ಮ ನಾನಾ ವಿಚಿತ್ರವೈ ಶ್ರೀನಿವಾಸ”[*೧] ಎಂಬ ಕವಿಯ ಸೊಲ್ಲು ಕವಿ ಮಾಡಿದ ಕರ್ಮಗಳನ್ನೆ ಕುರಿತು ಹೇಳುತ್ತಿರುವುದಲ್ಲ, ಸಮಸ್ತ ಮಾನವರಿಗೆ ಸಂಬಂಧಿಸಿ ಕೊಂಡು ಅವರವರು ಮಾಡಿದ ಕಾರ್ಯಕರ್ಮಗಳನ್ನು ಕುರಿತು ಅವರವರು ಹೇಳಿಕೊಳ್ಳಬಹುದಾಗಿರುತ್ತದೆ. “ಇಷ್ಟು ಪಾಪವನೆ ಮಾಡಿದ್ದು ಸಾಕೋ”,[*೨] ಎಂಬ ದಾಸರ ವಾಣಿಯು ರಚಿಸಿದ ದಾಸರ ಪಾಪಕಾರ್ಯಗಳನ್ನು ಕುರಿತು ಬೆರಳಿಟ್ಟು ತೋರುತ್ತಿರುವುದಲ್ಲ. ಮನುಕುಲವು ಮಾಡಬಹುದಾದ ಪಾಪದ[*೩] ಕೆಲಸಗಳ ಯಾದಿಯೇ ಆ ಕೀರ್ತನೆಯಲ್ಲಿದೆ! ಮನುಷ್ಯ ಮಾಡಿರಬಹುದಾದ ತಪ್ಪುಗಳನ್ನು ಭಗವಂತನ ಬಳಿ ನಿವೇದಿಸಿಕೊಳ್ಳಬಲ್ಲ ಪರಿಯನ್ನು ಆ ಕೀರ್ತನೆ ತೋರಿಸುತ್ತಿದೆಯೇ ವಿನಹ ಪುರಂದರದಾಸರೇ ಅಷ್ಟೆಲ್ಲ ತಪ್ಪುಗಳನ್ನು ಮಾಡಿದ್ದರೆಂಬುದಲ್ಲ.

ಹೀಗೆ ಮನುಷ್ಯ ದೈವದ ಮುಂದೆ ತೆರೆದುಕೊಳ್ಳಬೇಕಾದ ಆತ್ಮನಿವೇದನೆಯ ಪರಿಯನ್ನು ಶ್ರೀಪಾದರಾಜರು ಹೃದಯಂಗಮ ರಚನೆಗಳ ಮೂಲಕ ತೋರಿದ್ದಾರೆ. ಬದುಕಿನ ಕಷ್ಟ ನಷ್ಟಗಳ, ಅರಿಷಡ್ವರ್ಗಗಳೊಂದಿಗಿನ ಹೋರಾಟಗಳ, ಆಸೆ ನಿರಾಸೆಯ ದ್ವಂದ್ವ, ನೋವು ನಲಿವುಗಳ ಏರಿಳಿತದ ಅನುಭವಗಳು ಮಾನವನೆನ್ನಿಸಿಕೊಂಡ ಮೇಲೆ ಖಂಡಿತವಾಗಿ ಇದ್ದದ್ದೇ. ಏಳುಬೀಳುಗಳ ಸಂಕಷ್ಟಗಳಲ್ಲಿ ಹಾಳು ಧೂಳಾಗಿ ಒದ್ದಾಡಿ ಪರಿತಪಿಸಿ ಪಾರಾಗಲು ಬಯಸುವುದು ಮಾನವ ಜೀವಿಗೆ ಸಹಜ ಪ್ರವೃತ್ತಿಯೇ ಆಗಿದೆ. ಬದುಕೆಂದರೆ ಕೇವಲ ಕಪ್ಪು, ಬಿಳುಪು ವರ್ಣಗಳು ಮಾತ್ರವಲ್ಲ. ನೂರಾರು ಸಾವಿರಾರು ವರ್ಣಸಂಕೀರ್ಣತೆಯ ಹಾಸು ಹೊಕ್ಕಿನ ಜಟಿಲ ಸಮಸ್ಯೆಗಳ ಸುಳಿಯಿಂದ ಪಾರಾಗಿ ಉದ್ಧಾರವಾಗುವುದು ಸುಲಭವೇನಲ್ಲ. ಆದರೂ ಪ್ರತಿ ವ್ಯಕ್ತಿಯೂ ಇಂಥ ಉಳಿಏಟುಗಳನ್ನು ತಿನ್ನಬೇಕು, ತ್ಯಾಜ್ಯಗಳನ್ನು ಕಳಚಿಕೊಳ್ಳುತ್ತ ಹೋಗಬೇಕು, ಹಾಗೆ ಏಗುತ್ತಲೇ ಮಾಗುತ್ತ ಮಾಗುತ್ತ ಮುಂದೆ ಸಾಗಬೇಕು. ಇಂಥ ಬದುಕಿನ ಪ್ರತಿ ಏಟಿನ, ಗಾಯದ ಹಂತದಲ್ಲೂ ಮನುಷ್ಯ ಆತ್ಮಶೋಧನೆ ಎನ್ನುವುದನ್ನು ಮಾಡಿಕೊಳ್ಳಲೇಬೇಕು. ಇಲ್ಲವಾದಲ್ಲಿ ತಾನು ಮಾಡಿದ ತಪ್ಪುಗಳನ್ನೆಂದಿಗೂ ಆತ ತಿಳಿದುಕೊಳ್ಳುವುದೇ ಇಲ್ಲ. ಇನ್ನು ತನ್ನನ್ನು ತಾನು ತಿದ್ದಿಕೊಳ್ಳುವುದೆಲ್ಲಿಂದ ಬಂತು?

ಭಕ್ತಿ ಮಾರ್ಗದಲ್ಲಂತೂ ಈ ಆತ್ಮಶೋಧನೆಯೇ ಭಗವಂತನ ಬಳಿಯಲ್ಲಿ ಆತ್ಮನಿವೇದನೆಯಾಗುತ್ತದೆ. ಮಾನವ ಜೀವಿತದ ನೋವುಕಾವು, ಕಥೆವ್ಯಥೆ, ಕಷ್ಟ, ಅನಿಷ್ಟಗಳೆಲ್ಲ ಕರುಣಾಳು ಎಂದು ಭಾವಿಸಿಕೊಂಡಿರುವ ಆ ಪರಮಶಕ್ತಿಯ ಬಳಿ ಕಣ್ಣೀರಿನೊಂದಿಗೆ ಹೇಳಿಕೊಂಡಾಗ ವೇದನೆಯೆಲ್ಲ ಆತ್ಮನಿವೇದನೆಯಾಗುತ್ತದೆ. ಕಷ್ಟಕಾರ್ಪಣ್ಯಗಳೇನೇ ಇರಲಿ, ಅವಘಡ, ಆತಂಕಗಳೇನೇ ಬಂದೆರಗಲಿ "ನಿನ್ನ ಹೊರತು ಗತಿಯಿಲ್ಲ" ಎಂಬ ಅನನ್ಯ ಶರಣಾಗತಿಗೆ ಈ ಆತ್ಮನಿವೇದನೆಯು ಮೆಟ್ಟಿಲುಗಳನ್ನು ನಿರ್ಮಿಸುತ್ತದೆ.

ಆತ್ಮಶೋಧನೆಯಿಲ್ಲದೆ ಆತ್ಮನಿವೇದನೆ ಬಾರದು. ಆತ್ಮನಿವೇದನೆಯೊಳಗೆ ಆತ್ಮಶೋಧನೆಯ ಪ್ರಕ್ರಿಯೆಯು ಹಂತಹಂತವಾಗಿ ತೆರೆದುಕೊಳ್ಳುತ್ತ ಹೋಗುತ್ತದೆ. ತನ್ನ ತಪ್ಪು ಒಪ್ಪುಗಳ, ಇತಿಮಿತಿಗಳ, ಕಿರಿತನದ ಅರಿವು ಮೂಡುತ್ತಾ ಜೀವವು ತನ್ನದೆಲ್ಲವನ್ನೂ ಆ ಭಗವದ್ ಹಿರಿಶಕ್ತಿಯ ಮುಂದೆ ತೆರೆದಿಡುತ್ತದೆ. ಇದೇ ಮಾನವ ಜೀವದ ವಿಕಾಸದ ಕಡೆಗಿನ ಪಯಣದ ಪ್ರಾರಂಭ. ತಮಸ್ಸಿನಿಂದ, ರಜಸ್ಸಿನಿಂದ ಸಾತ್ವಿಕತೆಯ ಕಡೆಗೆ ಜೀವವನ್ನು ಅಭಿಮುಖವಾಗಿಸಿ ಕರೆದೊಯ್ಯುವ, ಮುಂದೆ ಮುಕ್ತಿಯನ್ನು ಅಡರಿಸುವ ಮೊತ್ತ ಮೊದಲ ಬೆಳಕು ಈ ಆತ್ಮ ಶೋಧನ ಅಥವಾ ಆತ್ಮನಿವೇದನ.

ಇಂಥ ಆತ್ಮನಿವೇದನೆಯು ಶ್ರೀಪಾದರಾಜರ ಕೃತಿಗಳಲ್ಲಿ ಅನನ್ಯವಾಗಿ ಅಭಿವ್ಯಕ್ತಗೊಂಡಿರುವುದನ್ನು ಕಾಣಬಹುದು. ಅವರ ಅನೇಕ ಸುಳಾದಿಗಳಲ್ಲಿ ದಯಾರ್ದ್ರವಾಗಿ ಹೊಮ್ಮಿರುವ ಈ ಭಾವ ಪ್ರತಿ ಮಾನವನ ಅಂತಃಕರಣದಿಂದಲೂ ಹುಟ್ಟಿಕೊಳ್ಳಬಹುದಾದ ಅನನ್ಯವಾದ ಮೊರೆಯೇ ಆಗಿದೆ. ಮನುಷ್ಯ ಜನ್ಮದ ಆಯುಸ್ಸಿನಲ್ಲಿ

ಅದೆಷ್ಟೆಷ್ಟು ದೀರ್ಘಕಾಲ ಹರಿಯ ಕುರಿತಾದ ಪರಿವೆಯೇ ಇಲ್ಲದೆ ಕಳೆದುಹೋಯಿತಷ್ಟೇ ಅಲ್ಲ, ಇಂಥ ಅದೆಷ್ಟು ಜನ್ಮಜನ್ಮಾಂತರಗಳು ಹೀಗೆ ವ್ಯರ್ಥವಾಗಿ ಉರುಳಿಹೋದುವೋ, ಭಗವಂತನ ಬಗೆಗಿನ ರತಿ ಮನಸ್ಸಿನೊಳಗೆ ಬರಲೇಇಲ್ಲ. 'ಎಷ್ಟೆಷ್ಟೋ ಭವಗಳನ್ನು ಕಳೆದು ಕಳೆದು ಕಡೆಗೂ ನಿನ್ನ ಬಗೆಗಿನ ಎಚ್ಚರ, ಅರಿವು ಮೂಡಿ ಮನಸ್ಸು ನಿನ್ನಲೆರಗಿದೆ. ಇನ್ನು ನಾನು ನೋಯದಂತೆ ಪೊರೆದು ಪಾಲಿಸು' ಎಂದು ದೀನವಾಗಿ ಬೇಡಿದ್ದಾರೆ.

ಆಧ್ಯಾತ್ಮಿಕವಾದ ಸಾಧನೆ ಬಹು ಕಷ್ಟಕರ. ಮನಸ್ಸನ್ನು ದೈವದಲ್ಲಿ ನೆಟ್ಟು ಬದುಕುವುದು ಅಷ್ಟು ಸುಲಭವೇನಲ್ಲ. ವ್ರತ ಜಪತಪಗಳನ್ನು ಮಾಡುತ್ತೇನೆಂದು ತೋರಿಸಿಕೊಂಡಿದ್ದೇ ಬಂತು, ಮನಸ್ಸು ಹತೋಟಿಗೆ ಬಂದು ಹರಿಯಲ್ಲಿ ನೆಲೆಸಲಿಲ್ಲ. ತನ್ನ ಬದುಕಿನ ನಿರರ್ಥಕತೆಯು "ಸರಕು ಸಡಿಲದಯ್ಯಾ ಹರಿಯೆ, ಕೊಂಬುವರಿಲ್ಲ ಬೆಲೆಗೆ" ಎಂಬಲ್ಲಿ ಹೊಮ್ಮಿದೆ. ಇಂಥ ನಿರರ್ಥಕ ಸರಕೆನ್ನಿಸಿದ ತನ್ನ ಜೀವ ಅಥವಾ ಜನ್ಮವನ್ನು "ಸಡಿಲುವಂತೆ ಮರೆಗೆ ತೆಗೆದು ನಿನ್ನ ಚರಣದಡಿಯಲಿಟ್ಟು ಕಾಯೋ ರಂಗವಿಠಲ" ಎಂಬುದಾಗಿ ಬೇಡಿದ್ದಾರೆ.

ಇಂದ್ರಿಯಗಳ ಚಾಪಲ್ಯವನ್ನು ನೀಗಲಾರದೆ ಮಾನವನ ವಿಲಿವಿಲಿ ಒದ್ದಾಟ ನಡದೇ ಇರುತ್ತದೆ. "ಕರಣಗಳು ಬಿಡದೆ ತಮ್ಮ ತಮ್ಮ ವಿಷಯಗಳಿಗೆ ಎಳೆವುತಲಿವೆ" ಆದರೇನು? ನನ್ನ ಹರಣವೇ ನಿನ್ನದು. ಕರುಣೆಯಿಟ್ಟು ಹೊರೆಯಬೇಕು, ನಿನ್ನ ಚರಣಕ್ಕೆ ಶರಣಾಗಿದ್ದೇನೆ ಎಂದಿಲ್ಲಿ ಜೀವದ ನಿವೇದನೆ ಸಾಗುತ್ತದೆ. ಕವಿ ಹೃದಯದ ಈ ಮೊರೆ ಹಾಡುವವರ,ಕೇಳುವವರ ಹೃದಯದಲ್ಲೂ ಅನುರಣನವಾಗದಿದ್ದೀತೆ?

ಬದಕು ಹೀಗೆ ಸಾಗಿಬಿಡುತ್ತದೆ. ಬಾಲ್ಯ,ಯೌವನ,ನಡುವಯಸ್ಸು,ಎಲ್ಲವೂ ದಾಟಿ ದಾಟಿ ವೃದ್ಧಾಪ್ಯವೂ ಬಂದೇ ಬಿಡುತ್ತದೆ. ಆಗ ಸಮಸ್ಯೆಗಳ ಆಗರವೇ ಆಗಿಬಿಡುವ ಮಾನವಜೀವಿಯ ಮೊರೆ ಶ್ರೀಪಾದರಾಜರ ಕೆಳಗಿನ ಉಗಾಭೋಗದಲ್ಲಿ ಅಭಿವ್ಯಕ್ತವಾಗಿದೆ.

ಎನ್ನ ಮನ ವಿಷಯಂಗಳಲಿ ಮುಣುಗಿತೊ
ಎನ್ನ ತನುವು ವೃದ್ಧಾಪ್ಯ ಐದಿತೋ
ಅಂತಕರ ಕರೆ ಬಾಹೊ ಹೊತ್ತಾಯಿತೊ
ಕಾಲ ವಿಳಂಬನವಿನಿತಿಲ್ಲವಯ್ಯ
ವ್ಯಾಳೆ ಅರಿತು ಬಿನ್ನಹ ಮಾಡಿದೇ
ಹೀಗೆ ತರಳರ ಬಿಡುವ ತಾಯಿಗಳುಂಟೆ
ಕರುಣಾನಿಧಿಯೆಂಬ ಬಿರುದು ಸಲ್ಲಿಸುವ ದೇವ
ಕರುಣಾಕರ ಸಿರಿರಂಗ ವಿಠಲರೇಯ॥

ಮುದಿತನ ತರುವ ಅಶಕ್ತತೆ, ಅಸಹಾಯಕತೆಯಿಂದ ಹೃದಯ ಕರಗುವ ಮೊರೆ ಇಲ್ಲಿ ವ್ಯಕ್ತವಾಗಿದೆ. ಅರಿತೋ, ಅರಿಯದೆಯೋ ಮಾನವ ಅನೇಕಾನೇಕ ಪಾಪಕಾರ್ಯಗಳನ್ನು ಎಸಗುತ್ತಾನೆ. "ಕ್ಷಣ ಕ್ಷಣಕೆ ನಾ ಮಾಡಿದಂಥ ಪಾಪಂಗಳನು ಎಣಿಸಲಳವಲ್ಲ ಅಷ್ಟಿಷ್ಟು ಎಂದು" ಮನಸ್ಸು ಚಂಚಲತೆಯ ಪ್ರತೀಕ, ಕಂಡಕಂಡ ಕಡೆಗೆ ದೌಡಾಯಿಸುವುದೇ ಅದರ ರೀತಿ. ನಾಲಿಗೆಯಂತೂ ಸದಾ ರುಚಿ ರುಚಿಯನ್ನೆ ಬಯಸುತ್ತದೆ."ಪಿಂಡ ತಿಂಬಲ್ಲಿ ಬಹು ನಿಷ್ಠ ತಾನು" ಆದರೂ ಇವನೊಬ್ಬ ಭಂಡಾಟದವನು, ಬಾಹ್ಯಾಡಂಬರಿ ಎಂದು ತಿರಸ್ಕರಿಸದೆ ನಿನ್ನ ನೆನಪಿನ ಆತುರಭಾವವನ್ನು, ಭಕ್ತಿಯನ್ನು ನೀನೇ ಕೊಡು ಎಂದು ಕೇಳಿಕೊಂಢಿದ್ದಾರೆ.

ನಿನ್ನ ನೆರವಿಲ್ಲದೆಯೆ ನಾನಾಗಿ ನಾನು ನನ್ನ ಉದ್ಧಾರ ಮಾಡಿಕೊಳ್ಳಲಾರೆ ಎಂಬ ಭಾವವನ್ನು ಶ್ರೀಪಾದರಾಜರು "ನಾನೇ ಸಜ್ಜನನಾದಡೆ ಇಂಥ ಹೀನ ವಿಷಯಗಳಿಗೆರಗುವೆನೇನಯ್ಯ" ಎಂಬ ತಮ್ಮ ಕೀರ್ತನೆಯಲ್ಲಿ ಹೃದಯಂಗಮವಾಗಿ ಬಿಂಬಿಸಿದ್ದಾರೆ. ಮನುಷ್ಯ ಮಾಡುವಂಥ ಕೆಟ್ಟ ಕಾರ್ಯಗಳೆಲ್ಲ ಈ ಕೃತಿಯಲ್ಲಿ ಯಾದಿಯಾಗಿದ್ದು ಆತ್ಮಶೋಧನೆಯಲ್ಲಿ ಅರಿವಾದ ಈ ಸತ್ಯದಿಂದಾಗಿ ಜೀವ ಕಂಗೆಟ್ಟು ರಂಗವಿಠ್ಠಲನನ್ನು ಪಾರುಗಾಣಿಸೆಂದು ಬೇಡುತ್ತಿದೆ. ಗುರು ಹಿರಿಯರು,ಸಜ್ಜನರು ಎಂದು ನೋಡದೆ ಯಾವಾಗಲೂ ಪರರನ್ನು ನಿಂದಿಸುವುದು, ಪರರ ಒಡವೆಯ ಬಯಸುವುದು 'ಉತ್ತಮರ ಸಂಗ ಅರಸದೆ ಉನ್ಮತ್ತರ ಒಡನಾಟ'ದಲ್ಲಿ ಕಾಲಕಳೆಯುವುದು....ಹೀಗಿರುವಾಗ ಇನ್ನು ತತ್ವವಿಚಾರದ ಕಡೆ ಗಮನವೆಲ್ಲಿ? ಶರೀರ ಪೋಷಣೆಯಲ್ಲಿ ಮಾತ್ರ ಗಮನ ಎಂದೆಲ್ಲ ಜೀವವಿಲ್ಲಿ ತಾನು ಕಳೆದ ಆಯಸ್ಸಿನ ವ್ಯರ್ಥತೆಯನ್ನು ಮನಗಂಡು ಮಿಡುಕುತ್ತಿದೆ. ಕೃತಿಯ ಆರಂಭದ ಸೊಲ್ಲೇ 'ನಾನು ಒಳ್ಳೆಯವನಾಗಿದ್ದರೆ ಇಂಥ ಹೀನನಾಗಿರುತ್ತಿರಲಿಲ್ಲ' ಎಂಬ ಮಾರ್ಮಿಕತೆಯಿಂದ ಕೂಡಿದ ಪಾಪನಿವೇದನೆಯಾಗಿದೆ.

ಬಾಹ್ಯಾಡಂಬರಗಳಲ್ಲಿ ಬದುಕನ್ನು ಕಳೆದ ಮಾನವ ಜೀವಿಯ ಆತ್ಮಶೋಧನೆ "ಸುಮ್ಮನೆ ವೈಷ್ಣವನೆಂಬಿರಿ ಪರಬೊಮ್ಮ ಸುಜ್ಞಾನವನರಿಯದ ಮನುಜನ" ಎಂಬ ಕೀರ್ತನೆಯಲ್ಲಿನ ಪ್ರಾಮಾಣಿಕ ಅಭಿವ್ಯಕ್ತಿಯಾಗಿದೆ. ಶ್ರೀಪಾದರಾಜರ ಕಾಲದಲ್ಲಿದ್ದ ಅನೇಕರು ವ್ಯರ್ಥ ಬಾಹ್ಯ ಆಚರಣೆಗಳಲ್ಲಿದ್ದು ಒಳಗಿನ ಅವರ ಜ್ಞಾನ ಭಕ್ತಿ ಹೀನತೆಯ ಟೊಳ್ಳುತನವನ್ನು ಈ ಕೃತಿ ಚಿತ್ರಿಸಿಕೊಡುತ್ತದೆ. ಶ್ರೀಪಾದರಾಜರ ಕಾಲದ ನಂತರವೂ ಸಮಾಜದಲ್ಲಿ ಇಂಥ ಡಂಭಕರ ಸಂಖ್ಯೆ ಮುಂದುವರೆದಿತ್ತು ಎನ್ನುವುದಕ್ಕೆ ಮುಂದೆ ಪುರಂದರದಾಸರು ಚಿತ್ರಿಸಿದ "ಉದರ ವೈರಾಗ್ಯವಿದು ನಮ್ಮ ಪದುಮನಾಭನಲಿ ಲೇಶ ಭಕುತಿಯಿಲ್ಲ"ಎಂಬ ಕೃತಿಯನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು.

ಹೀಗೆ ಆತ್ಮಶೋಧನೆ ಆತ್ಮ ನಿವೇದನೆಯಾಗಿ ಹೊಮ್ಮಿ ಅದುವೇ ಅನನ್ಯ ಶರಣಾಗತಿಯಾಗಿ ಹರಿಯಲ್ಲಿ ಮೊರೆ ಇಟ್ಟಿರುವ ಪರಿಯನ್ನು ಶ್ರೀಪಾದರಾಜರ ಮುಂದಿನ ಕೆಲವು ಕೃತಿಗಳಲ್ಲಿ ಕಾಣಬಹುದು.

ಶರಣಾಗತಿ

ಮೇರೆ ಅರಿಯದ ಪಾಪಕಾರ್ಯಗಳನ್ನು ಮಾಡಿರುವ ಅರಿವು ತನ್ನ ಆತ್ಮಶೋಧನೆಯಿಂದಾಗಿ ಬಂದಾಗ, ಅವನತಿಯೊಂದಲ್ಲದೆ ಬೇರೆ ಗತಿ ಕಾಣದಾದಾಗ, ಜೀವ ಆನಾಥ ಪ್ರಜ್ಞೆಯಿಂದ ಹರಿಯ ಪಾದಗಳಲ್ಲಿ ಶರಣಾಗಿ ತನ್ನನ್ನು ಪಾರುಗಾಣಿಸೆಂದು ಪರಿಪರಿಯಾಗಿ ಮೊರೆಹೊಗುತ್ತದೆ. ತಾನು ತಿಳಿಯದೇ ಮಾಡಿರುವ ಕುಟಿಲ ಕೆಲಸಗಳನ್ನು, ಅನ್ಯಾಯದ ವರ್ತನೆಗಳನ್ನು ಕ್ಷಮಿಸಿ ಕಾಪಾಡಬೇಕು ಎಂದು ದೈನ್ಯತೆಯಿಂದ ಬೇಡಿಕೊಳ್ಳುತ್ತದೆ. ತನ್ನ ಉದ್ದಾರಕ್ಕೆ ಅನ್ಯ ಮಾರ್ಗವಿಲ್ಲ ಎನ್ನುವುದು ಖಚಿತವಾದಾಗ ಭಗವಂತನೊಬ್ಬನೇ ತನ್ನ ಬಂಧು ಎಂಬ ಪ್ರಜ್ಞೆ ಮೂಡುತ್ತದೆ.. ಹಾಗೆ ಪೂರ್ತಿಯಾಗಿ ತನ್ನನ್ನು ತಾನು ತನ್ನ ತಪ್ಪು ಒಪ್ಪುಗಳ ಸಮೇತವಾಗಿ ದೈವಕ್ಕೆ ಒಪ್ಪಿಸಿಕೊಳ್ಳುವುದೇ, ತಪ್ಪೊಪ್ಪಿಗೆ ಸಲ್ಲಿಸಿಕೊಳ್ಳುವುದೇ 'ಶರಣಾಗತಿ' ಎನಿಸಿಕೊಳ್ಳುತ್ತದೆ.

ಇಂಥ ಶರಣಾಗತಿಯನ್ನು ಜನಸಾಮಾನ್ಯರಿಗೆ ಅವರ ಮಾತೃಭಾಷೆಯಾದ ಕನ್ನಡದಲ್ಲೇ ಸರಳವಾಗಿ ರಚಿಸಿ ಹೇಳಿಕೊಟ್ಟವರು ಶ್ರೀಪಾದರಾಜರು. ಕನ್ನಡದ ಚೆನ್ನುಡಿಯಲ್ಲಿನ ಅವರ ರಚನೆಗಳು ಶರಣಾಗತಿಯ ಭಕ್ತಿಭಾವವನ್ನು ಪರಿಪರಿಯಾಗಿ ಚಿತ್ರಿಸಿ ಭಗವದ್ ಶಕ್ತಿಗೆ ಮೊರೆ ಹೋಗಲು ಮಾರ್ಗದರ್ಶಿಯಾಗಿವೆ. ಈ ಎಲ್ಲ ಸಾಹಿತ್ಯವು ಶ್ರೀಪಾದರಾಜರು ಹರಿಗೆ ಹೊಕ್ಕಿರುವ ಶರಣಾಗತಿಯೂ ಹೌದು,ಅಂತೆಯೇ ಮಾನವಜೀವಿ ಭಗವಂತನ ಅನುಸಂಧಾನ ಮಾಡಲು ಹಿಡಿಯಬೇಕಾದ ಭಕ್ತಿಯ, ಶರಣಾಗತಿಯ ರೂಪುರೇಷೆಗಳೂ ಹೌದು.

'ನಾನು ನಿನ್ನವನು''ನಾನು ನಿನ್ನವನು' ಎಂಬ ನಂಟನ್ನು ಪದೇ ಪದೇ ಜೀವವು ದೈವಕ್ಕೆ ನೆನಪಿಸುವುದು ಶರಣಾಗತಿಯ ಒಂದು ಲಕ್ಷಣ. ಶ್ರೀಪಾದರಾಜರು ದೇವರಲ್ಲಿ 'ನಿನ್ನವನೆಂಬೆ ನಾನು ಮತ್ತನ್ಯವನರಿಯೆನು' ಎನ್ನುತ್ತ 'ನೀನು ಕರುಣಿಯೆಂದು ತಿಳಿದೇ ನಿನ್ನ ಮೊರೆಹೊಕ್ಕೆ' ಎಂದು ತನ್ನ ನಂಬಿಕೆಯನ್ನೂ ವ್ಯಕ್ತಪಡಿಸುತ್ತಾರೆ. ನಂಬಿಕೆಯಿಲ್ಲದೆ ಶರಣಾಗತಿ ಸಾಧ್ಯವಿಲ್ಲ. ಪರಿಪೂರ್ಣವಾಗಿ ನಂಬಿಕೊಳ್ಳುವುದೇ ಶರಣಾಗತಿಯ ಮತ್ತೊಂದು ಲಕ್ಷಣ.

ಹೀಗೆ ಪೂರ್ತಿಯಾಗಿ ತನ್ನನ್ನು ಸಮರ್ಪಿಸಿಕೊಂಡಾದಮೇಲೂ ಮತ್ತೆ ಮರಮರಳಿ 'ಇವನು ನನ್ನನ್ನು ನಂಬಿರುವುದು ಪೂರ್ಣವಾಗಿ ಹೌದೋ ಅಲ್ಲವೋ....'ಎಂದು ದೈವ ಪರೀಕ್ಷೆ ಮಾಡುತ್ತಿದ್ದರೆ? ಮತ್ತೆ ಮತ್ತೆ ಸಂಕಟಗಳನ್ನು ದೈವ ತಂದೊಡ್ಡಿದರೆ? ಆಗ ಜೀವದ ವಿಹಲ್ವತೆಯನ್ನು ಶ್ರೀಪಾದರಾಜರು ಉಗಾಭೋಗವೊಂದರಲ್ಲಿ ಅತ್ಯಂತ ಕಾವ್ಯಾತ್ಮಕವಾಗಿ ವ್ಯಕ್ತಪಡಿಸಿದ್ದಾರೆ.

ಕರುಣದಿ ತನುಮನಧನಂಗಳೆಲ್ಲವು
ನಿನ್ನ ಚರಣಕಮಲಕೊಪ್ಪಿಸಿದ ಬಳಿಕ

ಮರಳಿ ಎನ್ನನು ಮರುಳು ಮಾಡುವರೆ

ಸರಕು ಒಪ್ಪಿಸಿದ ಮೇಲೆ ಸುಂಕವುಂಟೆ ದೇವಾ

ಕರುಣಾಕರ ನಿನ್ನ ಚರಣದಡಿಯೊಳಿಟ್ಟು ಕಾಯೋ ರಂಗವಿಠಲ॥

ಸರ್ವಸಮರ್ಪಣದಲ್ಲಿದ್ದರೂ ದೈವ ಅನುಗ್ರಹ ಮಾಡದಿದ್ದರೆ ಭಕ್ತನಿಗಾಗುವ ಬೇಗುದಿ ಎಂಥದ್ದೆಂದು ಮೇಲಿನ ರಚನೆ ಹೃದಯಸ್ಪರ್ಶಿಯಾಗಿ ತಿಳಿಸುತ್ತದೆ.

ನಾನಾ ಬಗೆಯ ದುಷ್ಕರ್ಮಗಳಲ್ಲಿ ಆಯಸ್ಸನ್ನು ಕಳೆದಾಯಿತು. ನಾನಾ ಜನ್ಮಗಳಲ್ಲಿ ಉದಿಸಿಬಂದು ಮರಮರಳಿ ಪಾತಕಿಯಾಗಿದ್ದುದಾಯಿತು. ಮಾನಹೀನನಾಗಿ ಬದುಕನ್ನು ಸೋರಗೊಟ್ಟಿರುವ ತನಗೆ ದೀನ ರಕ್ಷಕನಾದ ನೀನೇ ಪರಮಗತಿ, "ನಾರಾಯಣ ನಾನೀಗ ನಿನ್ನ ನಂಬಿರುವೆ. ನಿನ್ನ ಹೊರತು ಪೊರೆವ ದೈವವಿಲ್ಲ" ಮರಳಿ ಮರಳಿ ನನಗೆ ಜನ್ಮವೇ ಬೇಡ. ನಾನಾ ವಿಚಿತ್ರ ಕರ್ಮಗಳನ್ನು ಮಾಡಿರುವ ಈ ಜೀವವನ್ನು ಸಜ್ಜನರ ಸಹವಾಸದಲ್ಲಿಟ್ಟು ಕಾಪಾಡಬೇಕೆಂದು ಬೇಡಿದ್ದಾರೆ. ಏಕೆಂದರೆ ಎಷ್ಟೆಷ್ಟು ಜನ್ಮಗಳನ್ನು ಪಡೆದಿದ್ದರೂ ಎಲ್ಲವೂ ಹೀನಜನಗಳ ಒಡನಾಟದಲ್ಲಿ ವ್ಯರ್ಥವಾಯಿತೆಂದು ವಿಷಾದಿಸಿದ್ದಾರೆ. ಏನೇ ಆದರೂ ಈ ಮುನ್ನ ಭಕ್ತರನ್ನೆಲ್ಲ ಚೆನ್ನಾಗಿ ಪಾಲಿಸಿರುವ ಸ್ವಾಮಿಯು ತನ್ನನ್ನೂ ಈಗ ಸಲಹುವನೆಂದು ಭರವಸೆ ತಾಳಿ ಶರಣಾಗಿರುವ ಈ ಕೀರ್ತನೆ ಶ್ರೀಪಾದರಾಜರ ಸರಳ ಸುಂದರ ಭಾವಾಭಿವ್ಯಕ್ತಿಗೆ ಸಂಕೇತವಾಗಿದೆ.[*೫]

ಈ ಮನುಜ ಶರೀರದ ಕರಣಚೇಷ್ಟೆಗಳು, ಯೋಗ್ಯತೆಯ ಸಾಧನ ಸಾಧ್ಯಗಳು, ಆತ್ಮ ಬುದ್ಧಿಗಳೆಲ್ಲವೂ ನಿನ್ನ ಅಧೀನವಿರುವಾಗ ಅದೆಂತು ನನ್ನ ಪುಣ್ಯಪಾಪಗಳನ್ನು ಎಣಿಸುವೆ ದೇವಾ? ಎಂದು ತಮ್ಮ ಸುಳಾದಿಯೊಂದರಲ್ಲಿ[*೬] ಪ್ರಶ್ನಿಸಿದ್ದಾರೆ. ಎಲ್ಲವೂ ನಿನ್ನ ನಿಯಮದಂತೆಯೇ ನಡೆಯುವಾಗ ಮಾನವನಾದ ತನಗೇನು ತಾನೇ ಹೆಚ್ಚಿನ ಸ್ವಾತಂತ್ರ್ಯವಿದೆ? ಎಲ್ಲವನ್ನೂ ನೀಡುವವನು, ನಿಯಂತ್ರಿಸುವವನು ನೀನೆ ಆಗಿರುವಾಗ 'ನಾನು, ನನ್ನದು, ನನ್ನಿಷ್ಟ' ಎಂಬೆಲ್ಲ ವ್ಯರ್ಥ ಅಹಂಕಾರದ ವರ್ತನೆಗಳೇಕೆ ನನಗೆ? ಕಷ್ಟವೋ, ಸುಖವೋ, ಇಷ್ಟವೋ, ಅನಿಷ್ಟವೋ ಒಟ್ಟಿನಲ್ಲಿ "ಇಟ್ಹಾಂಗೆ ಇರುವೆನು ಹರಿಯೇ ನನ್ನ ದೊರೆಯೇ" ಎಂದು ಪೂರ್ಣವಾಗಿ ಸಮರ್ಪಿಸಿಕೊಂಡಿದ್ದಾರೆ. ಶ್ರೀಪಾದರಾಜರ ಈ ಕೃತಿಯು 'ತೇನವಿನಾ ತೃಣಮಪಿ ನ ಚಲತಿ' ಎಂಬ ಸೂಕ್ತಿಯನ್ನು ನೆನಪಿಸುತ್ತದೆ. ಬದುಕಿನ ಏರಿಳಿತಗಳು ಕಷ್ಟಸುಖಗಳು ಎಲ್ಲವೂ ಭಗವಂತ ಕೊಟ್ಟಂತೆ ಇರುತ್ತದೆ. ಯಾವಾಗ ಏನು ಕೊಡುತ್ತಾನೋ ಅದನ್ನೇ ಹಸಾದವೆಂದುಣ್ಣುವುದಲ್ಲದೆ ಬೇರೆ ದಾರಿಯಿಲ್ಲ. ಮನುಷ್ಯನ ಭೋಗಭಾಗ್ಯಗಳು, ಆಗುಹೋಗುಗಳೆಲ್ಲವೂ ಅವನ ಚಿತ್ತದಲ್ಲಿದ್ದಂತೆ ನಡೆಯುತ್ತದೆ. ಆದ್ದರಿಂದ ಅವನು ಹೇಗಿರಿಸುತ್ತಾನೋ ಹಾಗಿರುತ್ತೇನೆ ಎಂಬ ಅರ್ಪಣಾಗತಿಯಿಲ್ಲಿದೆ. ಶ್ರೀಪಾದರಾಜರ ಪ್ರಸಿದ್ಧ ಕೃತಿಗಳಲ್ಲಿ ಇದು ಒಂದಾಗಿದ್ದು, ಈ ಕೀರ್ತನೆಯ ಪ್ರತಿನುಡಿಯ ಪೂರ್ವಾರ್ಧದ ಸಾಲುಗಳು ಹರಿಕರುಣೆಯ ಸುಖಸಂತಸಗಳನ್ನೂ, ಉತ್ತರಾರ್ಧದ ಸಾಲುಗಳು ಹರಿಕರುಣೆ ತಪ್ಪಿದಾಗ ಉಂಟಾಗುವ ಸಂಕಟಗಳನ್ನೂ ಚಿತ್ರಿಸುತ್ತದೆ.

ಕೆಂಪಿಲಿ ಪೊಳೆವ ಪೀತಾಂಬರ ಉಡಿಸುವಿ

ಸೊಂಪಿನಂಚಿನ ಶಾಲು ಹೊದಿಸುವಿಯೋ

ಕಪಿಲಹರೇ ನಿನ್ನ ಕೃಪೆಯು ತಪ್ಪಿದ ಮ್ಯಾಲೆ

ಕಪರ್ದಕ ಕೌಪೀನವು ದೊರೆಯದೋ ಹರಿಯೇ

॥ಇಟ್ಹಾಂಗೆ ಇರುವೆನು ಹರಿಯೇ ಎನ್ನ ದೊರೆಯೇ॥

ಹೀಗೆಯೇ ಐದು ನುಡಿಗಳಲ್ಲಿ ಅಭಿವ್ಯಕ್ತಗೊಂಡಿರುವ ಕೀರ್ತನೆಯು ಬೇರೆ ಬೇರೆ ದೃಷ್ಟಾಂತಗಳನ್ನು ನೀಡುತ್ತ ಮನುಷ್ಯ ಪೂರ್ಣ ಸ್ವತಂತ್ರನಲ್ಲ ಎನ್ನುವ ಸತ್ಯವನ್ನು ಬಯಲಿಗಿಟ್ಟು "ನಾಹಂ ಕರ್ತಾ ಹರಿಃ ಕರ್ತ್ಯಾ " ಎನ್ನುವ ವಿಧೇಯ ಭಾವವನ್ನು ಬಿಂಬಿಸಿದೆ.

ತನ್ನ ಮೇಲೆ ಅನುಮಾನ ಪಡದೆ ದಯವಿರಿಸಿ ತನ್ನನ್ನು ನೋಡಿಕೊಳ್ಳಬೇಕೆಂದು "ಬಾರೋ ಮನೆಗೆ ಗೋವಿಂದ" ಎಂಬ ತಮ್ಮ ಕೃತಿಯಲ್ಲಿ ನಿವೇದಿಸಿಕೊಂಡಿದ್ದಾರೆ. ವಿನಯ,ವಿಹಲ್ವತೆಗಳು ಅಪ್ಯಾಯಮಾನತೆಯಲ್ಲಿ ವ್ಯಕ್ತವಾಗಿ ಈ ಕೃತಿ ದೈವದೊಡನೆ ತನ್ನ ಬೇಡಿಕೆಯನ್ನು ಸಲ್ಲಿಸುತ್ತದೆ. ತನ್ನ ಅವಗುಣಗಳನ್ನೆಲ್ಲ ಲೆಕ್ಕಿಸದೆ ಕಾಯಬೇಕೆಂಬ ಮೊರೆಯು "ದುರಿತಗಜ ಪಂಚಾನನ ನರಹರಿಯೆ ದೇವರ ದೇವ" ಎಂಬ ಕೀರ್ತನೆಯಲ್ಲಿ ದೃಷ್ಟಾಂತಗಳ ಮೂಲಕ ನಿವೇದನೆಗೊಂಡಿದೆ.

"ಹೆಸರುಳ್ಳ ನದಿಗಳ ಒಳಗೊಂಬೊ ಸಮುದ್ರನು

ಬಿಸುಡುವನೆ ಕಾಲುಹೊಳೆಗಳ ಗೋವಿಂದ?

ಹೆತ್ತ ಮಕ್ಕಳು ಹುಚ್ಚಾದರೆ ತಾಯಿತಂದೆ

ಎತ್ತದೆ ನೆಲಕೆ ಬಿಸುಡುವರೆ ಗೋವಿಂದ? ॥ದುರಿತ ಗಜ॥

ಹೀಗೆ ಹೃದಯಸ್ಪರ್ಶಿಯಾಗಿ ಸಾಗುವ ಈ ಕೀರ್ತನೆಯಲ್ಲಿ 'ನೀನು ವಾತ್ಸಲ್ಯಮಯಿಯಲ್ಲವೇ?' ಎಂಬ ಭಾವ ಧ್ವನಿಪೂರ್ಣವಾಗಿ ಬಂದಿದೆ. ಷಡ್ವೈರಿಗಳು ಬಂದು ನನ್ನನ್ನು ಮುತ್ತಿರುವಾಗ ನನ್ನನ್ನು ಪಾರುಗಾಣಿಸಬೇಡವೆ? 'ನೀನು ಮಾಡಿದ ಕರ್ಮವನ್ನು ನೀನು ಅನುಭವಿಸು' ಎಂದು ನನ್ನನ್ನು ಬಿಟ್ಟು ಬಿಡುವುದಾದರೆ ನಿನ್ನನ್ನು ಒಲೈಸುವುದಾದರೂ ಯಾಕೆ ನಾವು? ಆಪತ್ತು ತಾಪತ್ರಯಗಳು ನಮ್ಮ ಬೆನ್ನು ಬಿಡುವುದಿಲ್ಲವೆಂದಾದರೆ ಶ್ರೀಪತಿಯೆ ನಿನ್ನ ಬಳಿ ಶರಣಾಗುವುದಾದರೂ ಯಾಕೆ ನಾವು? ಎಂಬೆಲ್ಲ ರೀತಿಯ ಸಣ್ಣ ಅಸಮಾಧಾನದ ಮುನಿಸು ಕೂಡ ಈ ಕೃತಿಯಲ್ಲಿ ವ್ಯಕ್ತವಾಗಿದೆ. ಭಗವಂತನನ್ನು ಪ್ರೀತಿಸುವ ಭಕ್ತನಿಗೆ ಇಂಥ ಮುನಿಸು ಕೂಡ ಸಹಜ, ಅಪ್ಯಾಯಮಾನಕರ ಎಂಬಂತಿದೆ.

ಇಂಥ ಸಣ್ಣ ಅಸಮಾಧಾನದೊಂದಿಗೆ ಸಣ್ಣ ರೀತಿಯ ಸ್ವಾಭಿಮಾನವೂ ಭಕ್ತನಿಗಿರಬೇಕಾದುದೇ. ಪ್ರೀತಿಯ, ಭಕ್ತಿಯ ಪ್ರಪಂಚದಲ್ಲಿ ಈ ಎಲ್ಲ ಭಾವಗಳಿಗೂ ಅಷ್ಟಿಷ್ಟು ಅವಕಾಶಗಳಿದ್ದೇ ಇರುತ್ತವೆ. ಇಲ್ಲವಾದಲ್ಲಿ 'ಪ್ರೀತಿ' ಎಂದು ಅದನ್ನು ಗುರುತಿಸುವುದಾದರೂ ಹೇಗೆ? ಶ್ರೀಪಾದರಾಜರು ಭಗವಂತನ ಬಳಿ ಇಂಥ ಪುಟ್ಟದಾದ ವ್ಯಾಜ್ಯವನ್ನು "ಇದನಾದರು ಕೊಡದಿದ್ದರೆ ನಿನ್ನ ಪದಕಮಲವ ನಂಬಿ ಭಜಿಸುವುದೆಂತೊ?" ಎಂಬ ತಮ್ಮ ಕೃತಿಯ ಮೂಲಕ ಹೂಡಿದ್ದಾರೆ, ಸ್ವಾಭಿಮಾನದ ಜೊತೆಗೆ ಹತಾಶೆಯ ಭಾವವೂ ತುಂಬಿಕೊಂಡಂಥ ಪ್ರಶ್ನೆಯು ಪರಮಾತ್ಮನಿಗೆ ಸಲ್ಲುತ್ತಿದೆ.

ಸಾಲವಾಯಿತೆಂದು ಸಂಬಳ ಎನಗೆ
ಸಾಲದೆಂದು ಬೇಡ ಬಂದುದಿಲ್ಲ।
ನಾಲಗೆಯಲಿ ನಿನ್ನ ನಾಮದುಚ್ಚರಣೆಯ
ಪಾಲಿಸಬೇಕೆಂದು ಬೇಡಿದೆನಲ್ಲದೆ ॥ಇದನಾದರು॥

ಒಡವೆಗಳಿಲ್ಲ ಒಡ್ಯಾಣಗಳಿಲ್ಲೆಂದು
ಬಡವನೆಂದು ಬೇಡ ಬಂದುದಿಲ್ಲ।
ಒಡೆಯ ನಿನ್ನಡಿಗಳಿಗೆರಗುವುದಕೆ ಮನ
ಬಿಡದಿಹದೊಂದನು ಕೊಡು ಸಾಕೆಂದರೆ ॥ಇದನಾದರು॥

ಸಾಮಾನ್ಯ ಮಾನವನ ಅತಿ ಸಣ್ಣ ಸುಖ ಸಂತಸಗಳನ್ನೂ ನಾನು ಕೇಳುತ್ತಿಲ್ಲ. ನಿನ್ನ ನೆನಪನ್ನು, ನಾಮಸ್ಮರಣೆಯನ್ನು ಕೊಡು ಎಂದು ಕೇಳಿದೆ. ಅದಕ್ಕೂ ನೀನು ಒಲಿಯದಿದ್ದರೆ ನಿನ್ನ ನಂಬಿ ಮುಂದುವರೆಯಲಾದೀತಾದರೂ ಹೇಗ? ಎಂಬ ಈ ಭಾವದಲ್ಲಿ ಪ್ರೀತಿಯ ಪರಾಕಾಷ್ಠೆಯೇ ತುಂಬಿದೆ.

ಮನುಷ್ಯನನ್ನು ಕಂಗೆಡಿಸಿ ಕಾಡುವ ಬಡತನ, ಅದರಿಂದಾಗಿ ಹುಟ್ಟುವ ಅನಾಥಪ್ರಜ್ಞೆ ಇವೆಲ್ಲವೂ ಮಡುಗಟ್ಟಿ ನಿಂತು ಅಸಹಾಯಕ ಕೂಗಾಗಿ, ಹೃದಯವೇ ಬಾಯಿಬಿಟ್ಟು ಆರ್ತವಾಗಿ ಭಗವಂತನನ್ನು ಶರಣು ಹೋಗಿರುವುದು ಶ್ರೀಪಾದರಾಜರ "ಯಾಕೆ ಪುಟ್ಟಿಸಿದೆ ನೀ ಸಾಕಲಾರದೆ ಜಗದೀಶ ಕಾರಣಪುರುಷನೆ ಕೃಷ್ಣ" ಎಂಬ ಕೀರ್ತನೆಯಲ್ಲಿ. ಈ ಕೃತಿಯ ಐದನೆಯ ನುಡಿಯಲ್ಲಿ "ಪೃಥಿವಿಯೊಳಗುದಿಸಿ ಮೂವತ್ತಾರು ವರುಷ ಈ ರೀತಿ ಕಾಲ ಕಳೆದೆನೋ ಕೃಷ್ಣ" ಎಂಬ ಹೇಳಿಕೆಯಿಂದಾಗಿ ಇದು ಶ್ರೀಪಾದರಾಜರ ಸ್ವಂತ ಅನುಭವವೂ ಆಗಿರಬಹುದೆಂದು ಊಹಿಸಬಹುದು. ಹರಿಯೇ ಗತಿಯೆಂದು ನಂಬಿರುವ ಭಕ್ತನಿಗೆ ಕೂಳಿಗೂ ಕಷ್ಟವಾಗುವ ಪರಿಸ್ಥಿತಿ ಬಂದಾಗ ಉದಿಸುವ ಆರ್ತತೆಯು ಲೋಕದ ಹೊಣೆಯನ್ನೆಲ್ಲ ಹೊತ್ತಿರುವ ಸ್ವಾಮಿಗೆ ತಾನೊಬ್ಬನು ಭಾರವಾದೆನೇ? ಎಂದು ಪ್ರಶ್ನಿಸುವಂತಾಗುತ್ತದೆ. ತನಗೆ ಯಾರೂ ಇಲ್ಲ, ಯಾವ ಆಸರೆಯೂ ಇಲ್ಲ ಎನ್ನುವುದು "ಇತ್ತ ಬಾರೆಂತೆಂದು ಹಿತ್ತಿಲಿಗೆ ಕರೆದೊಂದು ತುತ್ತು ಕೊಡುವರ ಕಾಣೆನೋ ಕೃಷ್ಣ" ಎಂಬ ಮಾರ್ಮಿಕ ನುಡಿಯಾಗಿ ಹೊಮ್ಮಿದೆ.

"ಕುಡುತೆ ಕೊಡುವವರಿಲ್ಲ ನುಡಿಯ ಕೇಳುವರಿಲ್ಲ

ಬಡತನವು ಕಂಗೆಡಿಸಿತೋ ಕೃಷ್ಣ

ಕಡೆ ಹಾಯಿಸುವರ ಕಾಣೆ ನಡುಮಡುವಿನೊಳು ಕೈ

ಬಿಡದೆ ದಡವನು ಸೇರಿಸೋ ಕೃಷ್ಣ......॥ಯಾಕೆ ಪುಟ್ಟಿಸಿದಿ॥

ಹಾಳು ಹೊಟ್ಟೆಪಾಡಿಗಾಗಿ ಹೋಗಿ ಹೋಗಿ ಪರರನ್ನು ಎಷ್ಟೆಂದು ಓಲೈಸಲಿ? ಆಳುದ್ದ ದೇಹವನ್ನು ಗೇಣುದ್ದ ಮಾಡಿಕೊಂಡು ಅಂಗಲಾಚುವ ಯಾತನೆ ಎಷ್ಟೆಂದು ಅರಿಯದೇ ನಿನಗೆ? ಇಷ್ಟೆಲ್ಲ ಕಷ್ಟದಲ್ಲಿ ಇನ್ನೆಷ್ಟು ಕಾಲ ಈ ಭೂಮಿಯ ಮೇಲೆ ಬದುಕಿರಬೇಕು? ಭಗವಂತನಾದ ನೀನು ನನ್ನ ಮೊರೆ ಕೇಳಲಿಲ್ಲವೆಂದ ಮೇಲೆ ಈ ಪ್ರಾಣವಿಟ್ಟುಕೊಂಡಿರಬೇಕಾದರೂ ಯಾಕೆ?

ಉರಿಯೊಳಗೆ ಬಿದ್ದು ಶರೀರವನು ಕಳೆಯಲೊ

ಪರುವತವನೇರುರಳ್ಯಲೋ

ಗರಳ ಮಡುವನೆ ಧುಮುಕಿ ಉರಗಫಣ ತುಳಿಯಲೊ

ಎರಡೊಂದು ಶೂಲಕ್ಹಾಯಲೋ ಕೃಷ್ಣ

ಕೊರಳಿಗ್ಹಗ್ಗವ ಹಾಕಿ ಮರವೇರಿ ಕರ ಬಿಡಲೊ

ಕರಗಸದಿ ಶಿರಕೊಯ್ಯಲೋ ಕೃಷ್ಣ...... ॥ ಯಾಕೆ ಪುಟ್ಟಿಸಿದಿ ॥

ಹೀಗೆ ಸಾಗುವ ಈ ಇಡೀ ಕೀರ್ತನೆ ಹನ್ನೊಂದು ದೀರ್ಘ ನುಡಿಗಳಲ್ಲಿ ಮಾನವನನ್ನು ಕಿತ್ತು ತಿನ್ನುವ ಬಡತನ, ಆ ಬಡತನದಿಂದಾಗಿ ಉಂಟಾಗುವ ಕಂಗಾಲುತನ, ಕೀಳರಿಮೆ, ಹತಾಶಭಾವ, ಅಸಹಾಯಕತೆ, ಅನಾಥಪ್ರಜ್ಞೆ ಎಲ್ಲವನ್ನೂ ಪರಿಣಾಮಕಾರಿಯಾಗಿ ನಿರೂಪಿಸುತ್ತದೆ. ಇದಕ್ಕೆಲ್ಲ ಪರಿಹಾರ ಅ ಪರಮಾತ್ಮ. ಆದರೆ ಆ ದೈವದ ಅನುಗ್ರಹವಾಗದಿದ್ದ ಮೇಲೆ ಬದುಕಾದರೂ ಏಕೆ? ಆತ್ಮಹತ್ಯೆಗೆ ಮನಸ್ಸು ಎಳೆಯುವ ಪರಿ, ಆದರೂ ದೇವರು ಬಂದು ತನ್ನನ್ನು ಕಾಯುತ್ತಾನೆಂಬ ನಿರೀಕ್ಷೆ, ಭರವಸೆ ಈ ಎಲ್ಲ ತುಮುಲಗಳನ್ನು ಶ್ರೀಪಾದರಾಜರು ಕೃತಿಯಲ್ಲಿ ತಂದಿದ್ದಾರೆ. "ಶ್ರೀಪಾದರಾಜರ ವೈಯಕ್ತಿಕ ಮೊರೆಯಾಗಿ ಹೊರಟ ಭಾವನೆಗಳು ದೀನದಲಿತರೆಲ್ಲರ ಮನದ ಮಾತಾಗಿ ಮೈದುಂಬಿ ಸಾರ್ವತ್ರಿಕತೆಯನ್ನು ಪಡೆದುಕೊಂಡಿದೆ ಈ ಕೃತಿಯಲ್ಲಿ."[2] ಮನುಷ್ಯ ಅನುಭವಿಸುವ ಬಡತನದ ಬವಣೆಯನ್ನು ನಗ್ನವಾಗಿ ತೋರಿಸುವ ಕನ್ನಡಿಯಾಗಿರುವ ಈ ಕೃತಿ ಕನ್ನಡಭಾಷೆಯ ಅಭಿವ್ಯಕ್ತಿಗೊಂದು ಸಶಕ್ತ ಸಾಕ್ಷಿಯೂ ಹೌದು. ದಟ್ಟ ಬಡತನದ ಕಾಡುವಿಕೆಯಲ್ಲೂ ಭಕ್ತ ಭಗವಂತನ ಬಳಿ ಶರಣು ಹೋಗುವ, ನಂಬಿಕೆಯಿರಿಸುವ, "ಕಷ್ಟ ಪಟ್ಟ ಮಗನೆಂದು ದೃಷ್ಟಿ ನೀರೊರೆಸೆನ್ನ ಪೊಟ್ಟೆಯೋಳ್ಪಿಡಿಮಾರೋ ಕೃಷ್ಣ" ಎಂಬ ಆರ್ತತೆಯ ಅಹವಾಲು, ಅಭಿಲಾಷೆಗಳನ್ನು ಅಭಿವ್ಯಕ್ತಿಸುವ ಕನ್ನಡಿಗ ಭಕ್ತನೊಬ್ಬನ ಕಾವ್ಯಸಂವೇದನೆಯೂ ಹೌದು.

೩. ಸಂಸಾರದ ನಿಸ್ಸಾರತೆ/ಬದುಕಿನ ನಶ್ವರತೆ

ಶ್ರೀಪಾದರಾಜರ ಇನ್ನು ಕೆಲವು ಕೃತಿಗಳು ಮಾನವ ಸಂಸಾರದಲ್ಲಿನ ನಿಸ್ಸಾರತೆಯನ್ನು ಮನುಗಂಡುಕೊಳ್ಳಬೇಕೆಂದು ಆಶಿಸಿ ರಚಿತವಾದವುಗಳಾಗಿವೆ. "ಅಕಟಕಟ ಸಂಸಾರವನು ನೆಚ್ಚಿ ಕೆಡಬೇಡ" ಎಂಬ ಅವರ ಕೀರ್ತನೆಯಲ್ಲಿ ಐಹಿಕ ಸಂಪತ್ತನ್ನೇ ನಂಬಿ ಕೆಟ್ಟ ನರಕಾಸುರ, ನಹುಷ, ದುರ್ಯೋಧನ ಮುಂತಾದವರ ದೃಷ್ಟಾಂತಗಳನ್ನು ನೀಡಿದ್ದಾರೆ. ಈ ರೀತಿಯಲ್ಲದೆ ಧ್ರುವ, ವಿಭೀಷಣ, ಹನುಮಂತರು ಹರಿಯನ್ನು ಧ್ಯಾನಿಸಿ ಎಲ್ಲವನ್ನೂ ಪಡೆದರೋ ಹಾಗೆಯೇ ರಂಗವಿಠಲನನ್ನು ಧ್ಯಾನಿಸಿ ಕೃತಾರ್ಥರಾಗಬೇಕೆಂದು ಸೂಚಿಸಿದ್ದಾರೆ. 'ಸಂಸಾರ ಚಕ್ರದಲ್ಲಿ ಸಿಲುಕಿ ಬಳಲುವ ಜೀವಗಣಕ್ಕೆ ನಳಿನನಾಭನ ಪದಾಂಭೋಜ ನೆಳಲು ಮಾತ್ರ ನೆಮ್ಮುಗೆಯಲ್ಲವೆ?' ಎನ್ನುವುದು ಅವರ ಚಿಂತನೆಯ ರೀತಿ. "ಪರರ ಬಾಗಿಲು ಕಾಯಿದು ಹೋಯಿತೀ ಸಂಸಾರ"ಎಂದು ಅವರ ಸುಳಾದಿಯ ಸಾಲೊಂದು ವಿಷಾದಿಸುತ್ತದೆ. "ಭವವೆಂಬಟವಿಯಲ್ಲಿ ಭಯ ಕೊಳದಲಿ ಸಿಕ್ಕಿ ತಾಪತ್ರಯವೆಂಬ ದಾವಾನಲ ತಪ್ತ ನರರಿಗೆ" ಎನ್ನುವ ಸಾಲು ಸಂಸಾರಿಕ ತೊಂದರೆಗಳ ಭೀಕರತೆಯನ್ನು ಕಟ್ಟಿಕೊಡುವ ಚಿತ್ರಣವಾಗಿದೆ.

ಮನುಷ್ಯರಿಗೆ ಈ ಸಂಸಾರಜೀವನದಲ್ಲಿ ಏಕಿಷ್ಟು ವ್ಯಾಮೋಹದ ಭ್ರಮೆಯೋ ಎಂದು ಶ್ರೀಪಾದರಾಜರು ಅಚ್ಚರಿ ಪಟ್ಟಿದ್ದಾರೆ.[*೮] ನೀರಗುಳ್ಳೆಯಂತಿರುವ ಸಂಸಾರದ ಹಗರಣಗಳಲ್ಲಿ ಮುಳುಗಿ ಮಿಗಿಲು ಆಸೆಗೆ ಬಿದ್ದು ಬಗೆ ಬಗೆ ಹೂಣಿಕೆಯಲ್ಲಿ ಸಿಕ್ಕು ಹಾಕಿಕೊಳ್ಳುವವರ ಬಗ್ಗೆ ಅನುಕಂಪ ತೋರಿಸುತ್ತ "ನನ್ನ ಮನೆ ನನ್ನ ಸತಿ ನನ್ನ ಸುತರೆಂದೆನಿಸಿ ಹೊನ್ನುಗಳಗಳಿಸಿ ಹೆಚ್ಚಾಗಿ ಹೋರ್ಯಾಡಿ"ಗಳಿಸುವುದೆಲ್ಲ "ಮೀನು ಗಾಣದ ಹುಳ ನುಂಗಿ ಮೋಸ ಹೋದ ತೆರನಂತೆ" ಎಂದು ಎಚ್ಚರಿಸಿದ್ದಾರೆ. ಇಂಥ ಭವಸಾಗರವನ್ನು ದಾಟಿಸಿ ದಡಸೇರಿಸಬೇಕೆಂದು ಮೊರೆಯಿಡುತ್ತ "ಸರಸಿಜನಾಭನೆ ಸೆರಗೊಡ್ಡಿ ಬೇಡುವೆ, ದುರಿತಗಳೆಲ್ಲ ತರಿದು ವರವಿತ್ತು ಕರುಣಿಸೋ" ಎಂದು ಪ್ರಾರ್ಥಿಸಿದ್ದಾರೆ. ಇಂಥ ಸಂಸಾರದಲ್ಲಿ ಹೇಗಿಟ್ಟರೂ ನಿನ್ನ ಶರಣು ಹೋಗದೆ ಬಿಡಲಾರೆನೆನ್ನುತ್ತ 'ಪಾಲೊಳಗದ್ದು ನೀರೊಳಗದ್ದು ಹರಿ ನಾ ನಿನ್ನ ನಂಬಿದೆನೋ' ಎಂದು ಹಾಡಿದ್ದಾರೆ. ಈ ಕೃತಿಯ ಪ್ರತಿನುಡಿಯಲ್ಲೂ ದ್ವಂದ್ವಭಾವದ ವಿವರಣೆ ಇದೆ.

ಸಂಸಾರದಲ್ಲಿ ಸುಖ ಕಡಿಮೆ, ದುಃಖವೇ ಹೆಚ್ಚು ಎಂಬ ತತ್ತ್ವವು ಶ್ರೀಪಾದರಾಜರ ಜನಪ್ರಿಯವಾದ "ಕಾಳ ಬೆಳದಿಂಗಳು ಈ ಸಂಸಾರ ಕತ್ತಲೆ ಬೆಳದಿಂಗಳು" ಎಂಬ ಕೀರ್ತನೆಯಲ್ಲಿ ಹೃದಯಗಮ್ಯ ನಿರೂಪಣೆಯಾಗಿದೆ. ಕಾಡಿನಲ್ಲಿ ಮೇಲೆ ಮನೋಹರವಾದ ಬೆಳದಿಂಗಳನ್ನು ತಂಗದಿರನು ಸುರಿಯುತ್ತಿದ್ದರೂ ಅದು ಕಾಡೊಳಗೆ ಬೀಳುವುದಿಲ್ಲ. ದಟ್ಟವಾದ ಮರಗಿಡಗಳು ಆಗಸದ ಬೆಳದಿಂಗಳು ಇಳೆಗಿಳಿಯಲು ಬಿಡುವುದಿಲ್ಲ. ಹಾಗೆಯೇ ಸಂಸಾರದಲ್ಲಿಯೂ ಸುಖವೆಂಬ ಬೆಳದಿಂಗಳು ಒಂದು ಭ್ರಮೆ ಮಾತ್ರ ಎಂದು ಕವಿಯ ಅಭಿಪ್ರಾಯ. ತತ್ವವನ್ನೂ, ಸತ್ಯವನ್ನೂ ಏಕೈಕ ಕಾಲಕ್ಕೆ ನೀಡುವ ಮನೋಜ್ಞ ನುಡಿಗಳು ಈ ಕೀರ್ತನೆಯಲ್ಲಿವೆ.

ಉಂಟಾದ ಕಾಲಕ್ಕೆ ನೆಂಟರು ಇಷ್ಟರು
ಬಂಟರಾಗಿ ಮನೆಯ ಬಾಗಿಲ ಕಾಯ್ವರು
ಉಂಟಾದತನ ತಪ್ಪಿ ಬಡತನ ಬಂದರೆ
ಒಂಟೆಯಂತೆ ಗೋಣ ಮೇಲೆತ್ತುವರು ॥ಕಾಳಬೆಳೆದಿಂಗಳ॥

ಧನಿಕತನವಿದ್ದರೆ ಮಾನ ಮರ್ಯಾದೆ ಘನತೆ ಗೌರವ. ಆ 'ಉಂಟಾದತನ' ತಪ್ಪಿ ಹೋದಾಗ ಅದೇ ನೆಂಟರಿಷ್ಟರು ಕಂಡೂ ಕಾಣದಂತೆ ತಲೆಯೆತ್ತಿ ಹೊರಟುಹೋಗುತ್ತಾರೆ ಎನ್ನುವ ಕಟುಸತ್ಯವನ್ನು ಹೇಳಿರುವ ಕವಿ 'ಮೂರುದಿನದ ಭಾಗ್ಯ ಝಣ ಝಣವು' ಎಂದು ಐಸಿರಿಯ ಚಂಚಲತೆಯನ್ನು ಕುರಿತು ಎಚ್ಚರಿಸಿದ್ದಾರೆ. ಶ್ರೀಪಾದರಾಜರ ಉತ್ಕೃಷ್ಟ ಕವಿತೆಗಳಲ್ಲಿ ಇದೊಂದಾಗಿದೆ.

ಈ ಬದುಕು ನಶ್ವರತೆಯಿಂದ ಕೂಡಿದೆ. ಶಾಶ್ವತವಾಗಿ ನಾವಿಲ್ಲಿ ಇರಲು ಬಂದವರಲ್ಲ ಎಂಬ ಕಹಿಸತ್ಯವು "ಚಿತ್ತಜನಯ್ಯನ ಚಿಂತಿಸು ಮನವೇ, ಹೊತ್ತು ಕಳೆಯದೆ ಸರ್ವೋತ್ತಮನ ನೆನೆ" ಎಂಬ ಕೀರ್ತನೆಯಲ್ಲಿ ಪ್ರಕಟಗೊಂಡಿದೆ. ಸಾವು ಸಮೀಪಿಸಿದಾಗ ಕಾಯುವವರಾರು ಇಲ್ಲ. ಮೃತ್ಯು ಭೀಕರವಾಗಿ ನುಂಗಲು ಬಂದಾಗ ಆತುಗೊಂಡು ರಕ್ಷಿಸುವವರಾರೂ ಇಲ್ಲ.

ಕಾಲನ ದೂತರು ನೂಲು ಹಗ್ಗವ ತಂದು
ಕಾಲು ಕೈಗಳ ಕಟ್ಟಿ ಮ್ಯಾಲೆ ಕುಟ್ಟಿ
ಕಾಲಪಾಶದೊಳಿಟ್ಟು ಶೂಲದಿಂದಿರಿವಾಗ
ಪಾಲಿಸುವರುಂಟೆ ಜಾಲವ ಮಾಡದೆ ॥ಚಿತ್ತಜನಯ್ಯನ॥

ಈ ಶರೀರ ಸ್ಥಿರವಲ್ಲವಾಗಿ ರಂಗವಿಠಲನನ್ನು ನೆರೆನಂಬಿ ಭಜಿಸಬೇಕು ಎಂದು ಹೇಳಿದ್ದಾರೆ.

೪. ತಾತ್ವಿಕತೆ/ನೀತಿಬೋಧೆ

ಸಂಸಾರದಲ್ಲಿರುವ ನಿಸ್ಸಾರತೆಯನ್ನು ಬೆರಳಿಟ್ಟು ತೋರಿರುವಂತೆಯೇ ಶ್ರೀಪಾದರಾಜರು ನಿಜವಾದ ಕುಟುಂಬ, ಸಂಸಾರ ಜೀವನ ಹೇಗಿರಬೇಕು ಎನ್ನುವುದನ್ನೂ ತಮ್ಮ ಕೃತಿಯೊಂದರಲ್ಲಿ ಕಟ್ಟಿಕೊಡುತ್ತಾರೆ. ಜೊತೆಯಲ್ಲೇ ಇಡೀ ಬದುಕು ಸಾಗಬೇಕಾದ ರೀತಿಯನ್ನೂ ತೋರಿಸುತ್ತಾರೆ.

ಭಕ್ತಿ ಬೇಕು ವಿರಕ್ತಿ ಬೇಕು ಸರ್ವ
ಶಕ್ತಿ ಬೇಕು ಮುಂದೆ ಮುಕ್ತಿಯ ಬಯಸುವಗೆ॥ಪ॥
ಸತಿ ಅನುಕೂಲಬೇಕು ಸುತನಲ್ಲಿ ಗುಣ ಬೇಕು

ಮತಿವಂತನಾಗಬೇಕು ಮತ ಒಂದಾಗಬೇಕು॥೧॥
ಜಪದ ಜಾಣುವೆ ಬೇಕು ತಪದ ನೇಮವೆ ಬೇಕು
ಉಪವಾಸ ವ್ರತ ಬೇಕು ಉಪಶಾಂತವಿರಬೇಕು॥೨॥
ಸುಸಂಗ ಹಿಡಿಯಲಿ ಬೇಕು ದುಸ್ಸಂಗ ಬಿಡಲಿ ಬೇಕು
ರಂಗವಿಠ್ಠಲನ್ನ ಬಿಡದೆ ನೆರೆ ನಂಬಿರಬೇಕು॥೩॥

ಬಾಳಿನಲ್ಲಿ ಜಪತಪ ಉಪವಾಸಾದಿಗಳ ನಿಯಮವಿದ್ದು ಶಾಂತ ಮನಸ್ಸಿನ ಸಂತಗುಣದಲ್ಲಿರುತ್ತ ಹರಿಯಲ್ಲಿ ನಂಬಿಕೆ ಇಟ್ಟು ಒಳ್ಳೆಯ ಸಹವಾಸದಲ್ಲಿರಬೇಕು ಎನ್ನುತ್ತಾರೆ. ಹಾಗೆಯೇ ಬದುಕಿಗೆ ಯಾವ ರೀತಿ ನೀತಿಗಳು ಉತ್ತಮವಾದ ಭೂಷಣವನ್ನೀಯುತ್ತವೆ ಎನ್ನುವುದನ್ನೂ "ಭೂಷಣಕೆ ಭೂಷಣ ಇದು ಭೂಷಣ" ಎಂಬ ಕೀರ್ತನೆಯಲ್ಲಿ ತೋರಿದ್ದಾರೆ. ಶ್ರೀಹರಿಯಲ್ಲಿ ಭಕ್ತಿಯಿರಿಸಿ ಬಾಳುವೆ ನಡೆಸಬೇಕು ಎನ್ನುವ ತತ್ವವೇ ಇಲ್ಲಿಯೂ ಪ್ರತಿಪಾದಿತವಾಗಿದೆ. ಮಾನವ ಜನ್ಮವನ್ನು ಸನ್ಮಾರ್ಗದಲ್ಲಿ ಸದಾಚಾರದ ನಡೆವಳಿಕೆಗಳಿಂದ ದಿನದಿನಕ್ಕೂ ಹೇಗೆ ಸಾರ್ಥಕ ಪಡಿಸಿಕೊಳ್ಳಬೇಕು ಎನ್ನುವುದನ್ನು ತಿಳಿಯ ಹೇಳಲು ಕೆಲವು ನೇಮನಿಯಮಗಳನ್ನು 'ವ್ಯರ್ಥವಲ್ಲವೆ ಜನುಮ ವ್ಯರ್ಥವಲ್ಲವೆ' ಎಂಬ ತಮ್ಮ ಕೀರ್ತನೆಯಲ್ಲಿ ನಿರೂಪಿಸಿದ್ದಾರೆ. ಮನುಜನಾದವನು ದೇವರಲ್ಲಿ ಬೇಡಬೇಕಾದುದಾರೂ ಏನು? ಸದಾ ತನ್ನ ಹೃದಯದಲ್ಲಿ ವಾಸವಾಗಿರು ಎಂದು ಸೂಚಿಸುವ ಅವರ ಕೀರ್ತನೆ "ನಾ ನಿನಗೇನು ಬೇಡುವುದಿಲ್ಲ ಎನ್ನ ಹೃದಯ ಕಮಲದೊಳು ನೆಲೆಸಿರು ಹರಿಯೆ". ದೇಹದ ಸಮಸ್ತ ಕರಣಗಳೂ, ಅಂಗಾಂಗಗಳೂ ನಿನ್ನ ಪರವಾದ ಕೆಲಸವನ್ನೆ ಮಾಡಿಕೊಂಡಿರಲಿ ಎಂದಿಲ್ಲಿ ಬೇಡಿದ್ದಾರೆ.

ಹಾಗೆಂದು ಈ ಲೋಕದ ಎಲ್ಲವನ್ನೂ ಹರಿಸಮ್ಮುಖವಾಗಿಯೆ ತಿರುಗಿಸಲು ಸಾಧ್ಯವಿದೆಯೆ? ಇಲ್ಲ. ನಾನಾ ಬಗೆಯ ಮೋಹ, ಆಕರ್ಷಣೆಗಳಿರುವ ಈ ಪ್ರಪಂಚದಲ್ಲಿನ ಜನರಿಗೆ ಒಬ್ಬೊಬ್ಬರಿಗೆ ಒಂದೊಂದು ರೀತಿಯ ಸೆಳೆತ, ಸಾಧನೆ ಇದ್ದೇ ಇರುತ್ತದೆ ಎನ್ನುವುದನ್ನೂ ಶ್ರೀಪಾದರಾಜರು ಅಲ್ಲಗೆಳೆಯುವುದಿಲ್ಲ. ತಮ್ಮ ಉಗಾಭೋಗವೊಂದರಲ್ಲಿ ಅವರು ಹೀಗೆ ಹಾರೈಸುತ್ತಾರೆ.

ಮನೆಯಿಂದ ಸಂತೋಷ ಕೆಲವರಿಗೆ ಲೋಕದಲಿ
ಧನದಿಂದ ಸಂತೋಷ ಕೆಲವರಿಗೆ ಲೋಕದಲಿ
ವನಿತೆಯಿಂ ಸಂತೋಷ ಕೆಲವರಿಗೆ ಲೋಕದಲಿ
ತನಯರಿಂ ಸಂತೋಷ ಕೆಲವರಿಗೆ ಲೋಕದಲಿ
ಇನಿತು ಸಂತೋಷ ಅವರವರಿಗಾಗಲಿ ನಿನ್ನ
ನೆನಪಿನ ಸಂತೋಷ ಎನಗಾಗಲಿ ರಂಗವಿಠಲ॥

ಅವರವರಿಗೇನು ಬೇಕೋ ಅದು ಅವರವರಿಗೆ ಸಿದ್ಧಿಸಲಿ, ಸುಖ ಸಂತೋಷಗಳಾಗಲಿ, ನನಗೆ ನಿನ್ನ ಸ್ಮರಣೆಯೇ ಸಂತೋಷ ಎನ್ನುವ ಈ ಮನೋಭಾವನೆ ಶ್ರೀಪಾದರಾಜರ ಸಂತಗುಣವನ್ನು ಸೂಚಿಸುತ್ತದೆ. "ಸರ್ವೇಜನಾಃ ಸುಖಿನೋಭವಂತು" ಎನ್ನುವ ಮನೋವೃತ್ತಿಯನ್ನು ಪ್ರಕಟಿಸುತ್ತದೆ.

೫. ಗುಣಗಾನ

ಭಕ್ತನಾದವನಿಗೆ ತಾನು ನಂಬಿರುವ ದೈವವನ್ನು ಎಷ್ಟು ಹಾಡಿ ಹೊಗಳಿದರೂ ಸಾಲದು. ಎಷ್ಟು ಗುಣಗಾನ ಮಾಡಿ ಸ್ತುತಿಸಿದರೂ ತೃಪ್ತಿಯಿರದು. ತನ್ನ ಪ್ರೀತಿಯ ದೇವರಾದ ರಂಗವಿಠಲನನ್ನು ನಾನಾ ಬಗೆಯಲ್ಲಿ ಕೊಂಡಾಡುತ್ತ ಭಕ್ತಿ ಪರವಶರಾಗುತ್ತ ಶ್ರೀಪಾದರಾಜರು ಹರಿ ಪಾರಮ್ಯದ ಅನೇಕ ಕೃತಿಗಳನ್ನು ನೀಡಿದ್ದಾರೆ. ದೈವದ ಜೊತೆಗೆ ಮಾನವ ಸಂಬಂಧಗಳಂತೆಯೇ ಸಂಬಂಧವನ್ನು ಕಲ್ಪಿಸಿಕೊಂಡು ಅವನನ್ನು ಪ್ರೀತಿಸುವುದು ಭಕ್ತಿಯ ಲಕ್ಷಣ. ಹಾಗೆಯೇ ಭಕ್ತನು ದಾಸತ್ವವನ್ನು ತನಗಾರೋಪಿಸಿಕೊಂಡು ಒಡೆಯನೆಂದು ದೈವವನ್ನು ಭಾವಿಸಿಕೊಳ್ಳುವುದೂ ಭಕ್ತಿಯ ಒಂದು ಪರಿ. ತನ್ನ ಒಡೆಯನಾದ ಶ್ರೀಹರಿಯ ಗುಣಗಾನದಲ್ಲಿ ಮೈಮರೆಯುತ್ತ ಆತ ಭಕ್ತಪರಾಧೀನನೆಂದು ಸಾಧಿಸಿ ತೋರುವ ಶ್ರೀಪಾದರಾಜರು ಭಕ್ತರಿಗೆ ತನ್ನ ಸ್ವಾಮಿ ಹೇಗೆ ವಶನಾಗಿಬಿಡುವನೆಂದು ಸ್ವಾರಸ್ಯವಾಗಿ ಹೇಳುತ್ತಾರೆ. "ನೀನೆ ಬಲ್ಲಿದನೋ ರಂಗ, ನಿನ್ನ ದಾಸರು ಬಲ್ಲಿದರೋ...." ಎಂದು ಪ್ರಶ್ನಿಸುತ್ತ ಮೂಡುವ ಕೀರ್ತನೆಯ ಪಲ್ಲವಿ ತುಂಬ ಸೊಗಸಾಗಿದೆ. ಶ್ರೀಕೃಷ್ಣನ ಪ್ರೀತಿಯ ವರ್ತನೆಗಳನ್ನು ನೆನೆಯುತ್ತ ಆತ ಧರ್ಮಜನ ಪಕ್ಷಕ್ಕೆ ಒಲಿದು ನಿಂತಿದ್ದು, ಪಾರ್ಥನ ಬಂಡಿಯ ಬೋವನಾಗಲು ಒಪ್ಪಿ ಯುದ್ಧದ ಸಾರಥ್ಯವನ್ನೇ ವಹಿಸಿದ್ದು, ಪಾತಾಳಕ್ಕೆ ಬಲಿಯನ್ನು ತಳ್ಳಿದರೂ ಆತನ ಭಕ್ತಿಗೆ ವಶನಾಗಿ ಅವನ ಮನೆ ಬಾಗಿಲನ್ನು ಕಾದಿದ್ದು, ಭೀಷ್ಮ, ಪ್ರಹ್ಲಾದರ ಭಕ್ತಿಗೊಲಿದ ಪರಿ, ಹೀಗೆ ಹೇಳುತ್ತ ಭಾರತ, ಭಾಗವತಗಳ ಅವಲೋಕನ ಮಾಡಿ ಕಡೆಗೆ ಶ್ರೀಹರಿಯು "ಸ್ಮರಿಪರ ಮನದಲಿ ಸೆರೆಯ ಸಿಕ್ಕಿದ ಮ್ಯಾಲೆ" ಎಂದು ಹರಿಯ ಭಕ್ತವಾತ್ಸಲ್ಯವನ್ನು ಎತ್ತಿ ಹಿಡಿಯುತ್ತಾರೆ. ಇಂಥ ಸ್ವಾಮಿಯನ್ನು ನಂಬಿರುವ ದಾಸರೇ ನಿಜವಾಗಿ ಬಲ್ಲಿದರು, ಸ್ವಾಮಿಗಿಂತ ಬಲ್ಲಿದರು ಎಂದು ಹಿಗ್ಗುತ್ತಾರೆ. ಈ ಹಿಗ್ಗುವಿಕೆ ಹೃದಯದಿಂದ ಮೂಡಿದ್ದು, ಒಡೆಯನ ಕೃಪಾಗುಣವನ್ನು ಅಭಿಮಾನವನ್ನು, ವಾತ್ಸಲ್ಯವನ್ನು ನೆನೆನೆನೆದು ಧನ್ಯತೆಯಿಂದ ಮೂಡಿದ್ದು, ಮುಂದೆ ಬಂದ ಪುರಂದರ ದಾಸರ "ನಿನ್ನಂಥಾ ತಾಯಿ ಎನಗುಂಟು ನಿನಗಿಲ್ಲ" ಎಂಬ ಉಗಾಭೋಗವನ್ನು ನೆನಪಿಗೆ ತರುತ್ತದೆ.

"ಬಿಡಿ ಬಿಡಿ ಸಂದೇಹವನು ಪೊಡವಿ ಮನುಜರೆಲ್ಲ" ಎಂಬ ತಮ್ಮ ಕೀರ್ತನೆಯೊಂದರಲ್ಲಿ ಭೃಗುಮುನಿಯ ಕಥೆಯ ದೃಷ್ಟಾಂತದ ಮೂಲಕ ಹರಿಸರ್ವೋತ್ತಮತ್ವವನ್ನು ಪ್ರತಿಪಾದಿಸಿದ್ದಾರೆ. ಶ್ರೀಹರಿಯ ಶ್ರೇಷ್ಠತೆಯನ್ನು ಇನ್ನೂ ಅನೇಕ ಕಥೆಗಳ ಮೂಲಕವೇ ತಿಳಿಸಿ ಶ್ರೀಹರಿಯೊಬ್ಬನೇ ಮಂಗಳಾತ್ಮಕನು, ಪೊಡವಿಗೆ ಒಡೆಯನೆಂದು ಸಾರಿ ಹೇಳಿದ್ದಾರೆ. ಇದೇ ರೀತಿ ಹರಿಯ ಗುಣಗಾನ ಮಾಡಿರುವ ಇನ್ನಿತರ ಕೀರ್ತನೆಗಳು "ನಂದನಂದನ ಪಾಹಿ

ಗುಣವೃಂದ" "ಸಾಗಿ ಬಾರಯ್ಯ ನೀ ಬಾಗಿ ನಮಿಸುವೆ" "ಕಂತು ಪಿತನೆ ನಿನ್ನ ಎಂತು ವರ್ಣಿಪೆ" ಮುಂತಾದವುಗಳು. ತಿರುಪತಿಯ ವೆಂಕಟರಮಣನ ಕುರಿತಾದ "ಸ್ಮರಿಸಿದವರನು ಕಾಯ್ವ ನಮ್ಮ ಸೂರ್ಯಾನೇಕ ಪ್ರಭಾವ" ಎಂಬ ಕೀರ್ತನೆಯು ಸ್ವಾಮಿಯು ಭಕ್ತವತ್ಸಲನೆಂದು ಮನದುಂಬಿ ಹಾಡಿಕೊಂಡಂತಿದೆ. ಶ್ರೀರಂಗದಲ್ಲಿರುವ ಶ್ರೀರಂಗನಾಥನನ್ನು ಕುರಿತು ಬರೆದ ಕೃತಿಯಾದ "ಕಂಗಳಿದ್ಯಾತಕೊ ಕಾವೇರಿ ರಂಗನ ನೋಡದ" ಹರಿದಾಸ ಸಾಹಿತ್ಯದಲ್ಲೇ ಬಹಳ ಪ್ರಸಿದ್ಧವಾದ ಕೃತಿ ಎಂಬ ಅಭಿಪ್ರಾಯವಿದೆ. ಆಯುಷ್ಯದಲ್ಲಿ ಒಂದಲ್ಲ ಒಂದು ದಿನ ಶ್ರೀರಂಗಕ್ಕೆ ಹೋಗಿ ಅಲ್ಲಿನ ಚಂದ್ರಪುಷ್ಕರಿಣಿಯಲ್ಲಿ ಸ್ನಾನಮಾಡಿ ಶ್ರೀರಂಗನಾಥನನ್ನು ಆನಂದದಿಂದ ನೋಡಲೇಬೇಕೆನ್ನುವುದು ಶ್ರೀಪಾದರಾಜರ ಅಶಯ. ಮುಳುಬಾಗಿಲಿಗೆ ಬಂದು ನೆಲೆಸುವ ಮುನ್ನ ಅವರು ಪೂಜಿಸಿಕೊಂಡಿದ್ದ ಶ್ರೀರಂಗಸ್ವಾಮಿಯ ಸನ್ನಿಧಿಯಾದ್ದರಿಂದ ಆ ಕ್ಷೇತ್ರದ ಕುರಿತಾದ ಅವರ ಒಲವು ಅತ್ಯಂತ ಸ್ವಾಭಾವಿಕವೇ ಆಗಿದೆ.

ಶ್ರೀರಂಗವಿಠಲನನ್ನು ಬಣ್ಣಿಸಿದಷ್ಟೂ ಸಾಲದು ಶ್ರೀಪಾದರಾಜರಿಗೆ, ಅವರ ಆರಾಧ್ಯದೈವನಾದ ಅವನ ಚೆಲುವು ಮೋಹಕವಂತೆ! ಅಡಿಯಿಂದ ಮುಡಿಯವರೆಗೂ ಆತ ಕಡು ಚೆಲುವಿನ ಲಾವಣ್ಯಮೂರ್ತಿಯಾಗಿದ್ದಾನೆ ಅವರ ಪಾಲಿಗೆ, ಸೌಂದರ್ಯವೇ ಮೈವೆತ್ತಂತಿರುವ ಅವನ ಕೀರೀಟದಿಂದ ಮೊದಲ್ಗೊಂಡು ಪಾದಾರವಿಂದಗಳ ಒಡವೆ ವೈಭವಗಳನ್ನು ಎಡಬಿಡದೆ ವರ್ಣಿಸುತ್ತ ಪರಮಾತ್ಮನ ಪ್ರತಿ ಅಂಗಾಂಗಗಳಿಗೂ ಶರಣುಹೋಗಿರುವ ಅವರ ಈ ಒಂದು ಕೀರ್ತನೆ ಭಾವವೈಶಿಷ್ಟ್ಯತೆಯಿಂದ ಕೂಡಿ ಶೋಭಾಯಮಾನವಾಗಿದೆ.

ಶ್ರೀರಂಗವಿಠಲನ ಶ್ರೀಮುಖಟಕೆ ಶರಣು ॥ಪ॥

ಎಂದೇ ಈ ಕೀರ್ತನೆ ಪ್ರಾರಂಭವಾಗುತ್ತದೆ. ಶಿರದಲ್ಲಿ ಶೋಭಿಸುತ್ತಿರುವ ಕಪ್ಪಾದ ಗುಂಗುರು ಕೂದಲಿಗೆ ಶರಣು, ಸೊಂಪಾದ ನೋಟ ಬೀರುವ ನವಿಲುಗಣ್ಣುಗಳಿಗೆ ಶರಣು, ಸಂಪಿಗೆ ಹೂವಿಗೆ ಸಮನಾಗಿರುವ ನಾಸಿಕಕ್ಕೆ ಶರಣು, ರತ್ನಗಳ ಗುಂಪನ್ನು ಕೂಡಿಸಿಕೊಂಡಿರುವ ಕರ್ಣಕುಂಡಲಗಳಿಗೆ ಶರಣು, ಕನ್ನಡಿಯಂತೆ ಹೊಳೆಯುವ ಕಪೋಲಗಳಿಗೆ ಶರಣು.....ಹೀಗೆಯೇ ಮುಂದೆ ಸಾಗುವ ನುಡಿಗಳಲ್ಲಿ ಭಗವಂತನ ಮಲ್ಲಿಗೆಯ ಮೊಗ್ಗಿನ ಹಾಗಿರುವ ದಂತಪಂಕ್ತಿಗೆ, ಅಂದವಾಗಿರುವ ತುಟಿಗಳಿಗೆ, ಆ ತುಟಿಗಳಿಂದ ಹೊಮ್ಮುತ್ತಿರುವ ಬೆಳದಿಂಗಳಿನಂಥ ಮಂದಹಾಸಕ್ಕೆ, ಶಂಖವನ್ನು ಹೋಲುತ್ತಿರುವ ಕಂಠಭಾಗಕ್ಕೆ, ಲಕ್ಷ್ಮಿಯು ನೆಲೆಸಿರುವ ವಕ್ಷಸ್ಥಳಕ್ಕೆ, ರನ್ನ ಗಂಟೆಗಳಿಂದಾವೃತವಾಗಿರುವ ಕಟಿಪ್ರದೇಶಕ್ಕೆ, ಬ್ರಹ್ಮನನ್ನು ಹೆತ್ತ ಹೊಕ್ಕುಳಿಗೆ, ಹೊನ್ನಬಣ್ಣದ ಬಾಳೆದಿಂಡುಗಳನ್ನು ಹೋಲುವ ತೊಡೆಗಳಿಗೆ, ಆನೆಯ ಸೊಂಡಿಲುಗಳೆರಡಾಗಿರುವಂತಿರುವ ನಿತಂಬಕ್ಕೆ, ಚೆನ್ನಾಗಿ ಕುಣಿಯುವ ಮೊಣಕಾಲುಗಳಿಗೆ ಶರಣು ಶರಣಾಗುತ್ತ ಹೋಗಿದ್ದಾರೆ. ರಂಗವಿಠಲನ ಬಾಹುಗಳನ್ನು ವರ್ಣಿಸಿರುವ ವಿಶಿಷ್ಟತೆಯಲ್ಲಿ ಕುಬ್ಜೆಯನ್ನು ಮೇಲೆತ್ತಿಹಿಡಿದು ಅವಳ ಗೂನನ್ನು ಪರಿಹರಿಸಿದ ಭುಜಗಳೆಂದು ನೆನಪಿಸಿಕೊಳ್ಳಲಾಗಿದೆ. ಭಗವಂತನ ಸ್ಪರ್ಶವೇ ಕುರೂಪವನ್ನು ಸುರೂಪವನ್ನಾಗಿಸುತ್ತದೆ ಎಂಬ ನೆನೆವರಿಕೆಯಲ್ಲಿ ಶರಣಾಗಿದ್ದಾರೆ.

ಮೊಂಗೊಳಲನೂದುವಾ ಅಂಗುಲಿಗಳಿಗೆ ಶರಣು
ರಂಗವಿಠಲನ ಸರ್ವಾಂಗಕೆ ಶರಣು॥

ಎಂದು ಈ ಕೀರ್ತನೆ ಕೊನೆಗೊಳ್ಳುತ್ತದೆ. ಜಗತ್ತಿನಲ್ಲಿರುವ ಸೌಂದರ್ಯಗಳಿಗೆಲ್ಲ ಸೌಂದರ್ಯವನ್ನು ನೀಡಿರುವ ಪರಮಾತ್ಮನನ್ನು ಈ ಕೃತಿಯಲ್ಲಿ "ನಂದಗೋಪನ ಮುದ್ದುಕಂದ"ನೆಂದು ಕರೆದು ಹಸುಳೆಯ ಚೆಲುವನ್ನು ಅಣುಅಣುವಾಗಿ ಆಸ್ವಾದಿಸುವ ಹೆತ್ತ ಅಪ್ಪನ ರೀತಿಯಲ್ಲಿ ತಮ್ಮ ಇಷ್ಟದೇವತೆಯ ಚೆಲುವನ್ನು ಕೊಂಡಾಡಿ ಆನಂದಿಸಿದ್ದಾರೆ. ಆದರದು ಸಾಮಾನ್ಯವಾದ ಮಗುವೆ? ಅಲ್ಲ, ಜಗದೊಡೆಯನಾದ ಮಹಾನ್ ಶಕ್ತಿ ಮಗುವಿನ ರೂಪದಲ್ಲಿದೆ. ಹೀಗಾಗಿ ಮಗುವಿನ ಸೌಂದರ್ಯವನ್ನು ಆಸ್ವಾದಿಸುವುದರೊಂದಿಗೇ ಆ ಮಹತ್ತಾದ ಮಗುವಿನ ಸರ್ವಾಂಗಗಳಿಗೂ ಶರಣಾಗಿಬಿಟ್ಟಿದ್ದಾರೆ! ಪ್ರೀತಿಗೊಂದು, ಭಕ್ತಿಗೊಂದು ಹೊಸದಾದ ರೀತಿಯನ್ನು, ಆರಾಧನೆಗೊಂದು ವಿಶಿಷ್ಟವಾದ ಪರಿಯನ್ನು ಶ್ರೀಪಾದರಾಜರಿಲ್ಲಿ ತೆರೆದುಬಿಟ್ಟಿದ್ದಾರೆ. ಬಹುಕಾಲದ ನಂತರ ಬಂದ ಪುರಂದರದಾಸರ "ಕೃಷ್ಣಮೂರ್ತಿ ಕಣ್ಣಮುಂದೆ ನಿಂತಿದಂತಿದೆ" ಎಂಬ ಕೃತಿಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಪುರಂದರದಾಸರ ಈ ಕೃತಿ ಶ್ರೀಪಾದರಾಜರು ಮೇಲಿನ ತಮ್ಮ ಕೀರ್ತನೆಯಲ್ಲಿ ತೋರಿರುವ ಭಾವಸೌಂದರ್ಯವನ್ನೇ ಮತ್ತೊಂದು ರೀತಿಯಲ್ಲಿ ಹೇಳುತ್ತದೆ ಎನ್ನುವುದು ವಿದಿತವಾಗುತ್ತದೆ. ಪುರಂದರದಾಸರ ಆ ಕೃತಿ ಹೀಗಿದೆ.

ಕೃಷ್ಣಮೂರ್ತಿ ಕಣ್ಣಮುಂದೆ ನಿಂತಿದಂತಿದೆ ॥ಪ॥
ಕಷ್ಟಗಳೆಲ್ಲವ ಪರಿಹರಿಸಿ ಮನದಿಷ್ಟಾರ್ಥಗಳನೆಲ್ಲ
ಕೊಟ್ಟು ರಕ್ಷಿಸುವಂಥ ॥ಪ॥

ಮಸ್ತಕದಲಿ ಮಾಣಿಕದ ಕಿರೀಟ
ಕಸ್ತೂರಿ ತಿಲಕದಿ ಹೊಳೆವ ಲಲಾಟ
ಶಿಸ್ತಿಲಿ ಕೊಳಲನೂದುವ ಓರೆನೋಟ
ಕೌಸ್ತುಭ ಎಡ ಬಲದಲಿ ಓಲ್ಯಾಟ ॥೧॥

ಮಘಮಘಿಸುವ ಸೊಬಗಿನ ಸುಳಿಗುರುಳು
ಚಿಗುರು ತುಳಸಿ ವನಮಾಲೆಯ ಕೊರಳು
ಬಗೆ ಬಗೆ ಹೊನ್ನ ಉಂಗುರವಿಟ್ಟ ಬೆರಳು
ಸೊಬಗಿನ ನಾಭಿಯ ತಾವರೆಯರಳು ॥೨॥

ಉಡುದಾರ ಒಡ್ಯಾಣ ಸಕಲಾಭರಣ
ಉಡುಗೆ ಪೀತಾಂಬರ ಶತ ರವಿ ಕಿರಣ
ಕಡಗ ನೂಪುರ ಗೆಜ್ಜೆಗಳನಿಟ್ಟ ಚರಣ
ಒಡೆಯ ಶ್ರೀಪುರಂದರ ವಿಠಲನ ಕರುಣ ॥೩॥

ಪುರಂದರದಾಸರ ಮೇಲಿನ ಕೃತಿಗೆ ಶ್ರೀಪಾದರಾಜರ "ಶ್ರೀರಂಗವಿಠಲನ ಶ್ರೀಮುಕುಟಕೆ ಶರಣು" ಎಂಬ ಕೀರ್ತನೆಯೇ ಮೂಲಸ್ಫೂರ್ತಿಯೂ ಆಗಿದ್ದಿರಬಹುದು. ಒಟ್ಟಿನಲ್ಲಿ ಮುಂದೆ ಹರಿದ ಹರಿದಾಸ ಸಾಹಿತ್ಯವಾಹಿನಿಗೆ ಶ್ರೀಪಾದರಾಜರು ಅನೇಕ ರೀತಿಯಲ್ಲಿ ಹೀಗೆ ಮೂಲಸ್ರೋತವೇ ಆಗಿ ಒದಗಿದವರು ಎನ್ನಲು ಅಡ್ಡಿಯೇ ಇಲ್ಲ. ಇಡೀ ದಾಸಸಾಹಿತ್ಯದಲ್ಲಿ ಕಂಡುಬರುವ ಭಾವಸೌಂದರ್ಯ, ಸಂಪತ್ತುಗಳೆಲ್ಲ ಮೂಲತಃ ಕಾಣಿಸಿಕೊಂಡಿದ್ದು ಶ್ರೀಪಾದರಾಜರ ರಚನೆಗಳಲ್ಲೇ. ಹೀಗೆ ಅವರು ಹರಿದಾಸ ಸಾಹಿತ್ಯದ ಪ್ರವರ್ತಕರೇ ಆಗಿ ಮುಂದಿನೊಂದು ದೊಡ್ಡ ಪರಂಪರೆಯು ನಿರ್ಮಾಣವಾಗಲು ಹಾದಿ ತೋರಿಸಿಕೊಟ್ಟರು.

ಶ್ರೀಪಾದರಾಜರು "ಪಾಲಿಸಯ್ಯ ಸ್ವಾಮಿ ಕೃಷ್ಣ" ಎಂಬ ತಮ್ಮ ಉಗಾಭೋಗವೊಂದರಲ್ಲಿ ವೇಣುಗೋಪಾಲಮೂರ್ತಿಯ ವರ್ಣನೆಯನ್ನು ಮೈದುಂಬಿ ಹಾಡಿದ್ದಾರೆ, "ವ್ಯಾಸಮುನಿ ವಂದ್ಯ ಗೋಪಿನಾಥ" ಎಂಬ ಉಲ್ಲೇಖ ಈ ಕೃತಿಯಲ್ಲಿ ಬರುತ್ತದೆ. ಹೀಗಾಗಿ ಶ್ರೀಪಾದರಾಜರ ಶಿಷ್ಯ ಶ್ರೀವ್ಯಾಸರಾಯರ ಜೀವನಕ್ಕೆ ಸಂಬಂಧಿಸಿದ ಒಂದು ಘಟನೆಯ ಮೇಲೆ ಈ ಕೃತಿ ಬೆಳಕು ಚೆಲ್ಲುತ್ತದೆ ಎನ್ನುವುದೊಂದು ಅಭಿಪ್ರಾಯವಿದೆ.[೬] ಇಲ್ಲಿ ವೇಣುಗೋಪಾಲಸ್ವಾಮಿಯ ವರ್ಣನೆ ಬಲು ಸುಂದರವಾಗಿ ಮೂಡಿದೆ. ಭಕ್ತರ ಇಷ್ಟಾರ್ಥ ಸಲ್ಲಿಸುವನೆಂದು ಅವನ ಗುಣಗಾನ ಮಾಡಿದ್ದಾರೆ.

೬. ವಾತ್ಸಲ್ಯ

ಪ್ರೀತಿಗೆ ನಾನಾ ಮುಖಗಳು. ಭಕ್ತಿಗೂ ನಾನಾ ರೀತಿಗಳಿವೆ. ಭಗವದ್‌ಶಕ್ತಿಯನ್ನು ನಮಗಿಂತ ಹಿರಿಯನೆಂದು ಗೌರವಿಸಿ ನಮಿಸುವಂತೆಯೇ ಆ ಶಕ್ತಿಯನ್ನು ಮಗುವೆಂದು ಭಾವಿಸಿ ಮಮತೆ, ವಾತ್ಸಲ್ಯ ತೋರಿ ಆತುಕೊಂಡವರಿದ್ದಾರೆ.

ಭಕ್ತ ಭಗವಂತರ ನಡುವೆ ತಾಯಿ ಮಗುವಿನ ಸಂಬಂಧ ಕಲ್ಪಿಸಿಕೊಂಡು ಶ್ರೀಪಾದರಾಜರು ಕೃಷ್ಣನನ್ನು ಪ್ರೀತಿಸಿ ಅಪ್ಪಿ ಮುದ್ದಾಡಿದ್ದಾರೆ, ಮಹದ್‌ಶಕ್ತಿಯು ಮಗುವಾಗಿ ನಮ್ಮ ತೆರೆದ ತೋಳಿಗೆ ಬಂದು ನಮ್ಮ ಲಲ್ಲೆ ಸ್ವೀಕರಿಸುವುದು ಎಂಥ ಅಪ್ಯಾಯಮಾನ ಭಾವನೆ!.

ಭಾಗವತದ ದಶಮಸ್ಕಂದದಲ್ಲಿ ಕೃಷ್ಣನ ಬಾಲ್ಯದ ವರ್ಣನೆಯಿದೆ. ಈ ಬಾಲಲೀಲೆಗಳೆಲ್ಲ ಹರಿದಾಸರುಗಳಿಗೆ ಅವರಲ್ಲಿನ ತಾಯ್ತನವನ್ನು ತೆರೆದು ತಟ್ಟಿದ ಸ್ಫೂರ್ತಿಯಾಗಿದೆ. ಹರಿದಾಸರುಗಳ ಆದ್ಯ ಪ್ರವರ್ತಕರಾದ

ಶ್ರೀಪಾದರಾಜರಂತೂ ಭಗವಂತನ ಮೇಲಿನ ವಾತ್ಸಲ್ಯವನ್ನು ತಮ್ಮ ಅನೇಕ ಕೀರ್ತನೆಗಳಲ್ಲಿ ಅಭಿವ್ಯಕ್ತಗೊಳಿಸಿ ತಾವು ತಾಯಿಯಾಗಿ ಕೃಷ್ಣನನ್ನು ಮಗುವಾಗಿಸಿಕೊಂಡು ಪ್ರೀತಿಸಿ ಸುಖಿಸಿದ್ದಾರೆ.

ಅನೇಕ ಲೀಲೆಗಳನ್ನು ತೋರಿದ ಭಗವಂತ ಮಗುವಾಗಿ ಅವರ ಭಾವ ಪ್ರಪಂಚಕ್ಕೆ ಬಂದು ಒದಗಿದ್ದಾನೆ. ತಾನೇ ಗೋಪಿಯಾಗಿ ಬಾಲಗೋಪಾಲನ ಪುಟ್ಟಪಾದಗಳು ತನಗೆ ದರ್ಶಿಸಲು, ಸ್ಪರ್ಶಿಸಲು ದೊರಕಿದವೆಂದು ಶ್ರೀಪಾದರಾಜರು "ಇಕ್ಕೋ ನೋಡೆ ರಂಗನಾಥನ ಚಿಕ್ಕಪಾದವ! ಸಿಕ್ಕೀತೆ ಶ್ರೀ ಲಕ್ಷ್ಮೀಪತಿಯ ದಿವ್ಯ ಪಾದವ" ಎಂಬ ಕೃತಿಯಲ್ಲಿ ಹಿಗ್ಗಿದ್ದಾರೆ. ಅದು ಶಂಖ ಚಕ್ರ ಗದಾ ಪದ್ಮ ಅಂಕಿತ ಪಾದ, ಅಂಕುಶ ಕುಲಿಶ ಧ್ವಜ ರೇಖಾಂಕಿತ ಪಾದ, ಲಕ್ಷ್ಮಿಯ ತೊಡೆಯಲ್ಲಿ ನಲಿಯುವ ಪಾದ, ಬಲಿಯ ಮೆಟ್ಟಿ ಭಾಗೀರಥಿಯ ಪಡೆದ ಪಾದ, ಬಂಡೆಯನ್ನು ಬಾಲೆಯನ್ನಾಗಿ ಮಾಡಿದ ಉದ್ಧಂಡ ಪಾದ, ಎಂಬಿತ್ಯಾದಿ ವರ್ಣನೆಗಳೆಲ್ಲ ಬಂದು ಆ ಎಲ್ಲ ಮಹಿಮೆಗಳನ್ನೊಳಗೊಂಡ ದಿವ್ಯ ಪಾದವು ತಮ್ಮ ಪಾಲಿಗೆ ರಂಗನಾಥನ ಚಿಕ್ಕ ಪಾದವಾಗಿ ಸಿಕ್ಕಿರುವ ಪರಿಯನ್ನು ನೆನೆದು ಹಿಗ್ಗಿದ್ದಾರೆ. ಎಷ್ಟು ದೊಡ್ಡ ಅರಸನೇ ಆದರೇನು? ತಾಯಿಗೆ ಅವನು ಮಗನಲ್ಲವೆ? ಹಾಗೆಯೇ ಸೃಷ್ಟಿಕರ್ತೃ ಇಲ್ಲಿ ಇಷ್ಟದೇವತೆ ರಂಗನಾಥನ ಪುಟ್ಟ ಶಿಶು ರೂಪದಲ್ಲಿ ಒದಗಿದ್ದಾನೆ!

ಭಕ್ತನಾಗಿ ಶ್ರೀಪಾದರಾಜರು ತಾಯಿಯಾಗಿ ಭಗವಂತನನ್ನು ಮಗುವಾಗಿಸಿಕೊಂಡು ಬಗೆಬಗೆಯಾಗಿ ಶೃಂಗರಿಸಿ ತೃಪ್ತಿ ಪಡುವ ಭಾವವು "ದೃಷ್ಟಿ ತಾಕೀತೋ ಬೀದಿ ಮೆಟ್ಟಬ್ಯಾಡವೋ" ಎಂಬ ಕೃತಿಯಲ್ಲಿದೆ. ತಾನಿಷ್ಟು ಸಿಂಗಾರ ಮಾಡಿದ ಮಗುವನ್ನು ಬೇರೆ ಅಂಗನೆಯರೆಲ್ಲ ಕಂಡು ದೃಷ್ಟಿತಾಕೀತು ಎಂದು ಭಯಪಡುವ ಪೂರ್ಣ ತಾಯಿಯಾಗಿದ್ದಾರೆ. ಇಷ್ಟೆಲ್ಲ ಶೃಂಗರಿಸಿ ಬಿಟ್ಟ ಮಗು ಅವರ ಕಣ್ಣಮುಂದೆಯೇ ಆಟವಾಡಿಕೊಂಡಿರಬಾರದೆ? ಪುಟ್ಟ ಕೃಷ್ಣಯ್ಯನಿಗೆ ಇನ್ನೆಷ್ಟು ಹೇಳುವುದು? ಹೇಳಿದ್ದು ಕೇಳಬಾರದೆ? ಎಲ್ಲೆಲ್ಲಿಯೋ ಆಟವಾಡಲು ಹೋಗಿದ್ದಾನೆ! ತಾಯಿಯಾದವಳ ಈ ಆತಂಕ, ವಾತ್ಸಲ್ಯಭಾವವು ಶ್ರೀಪಾದರಾಜರ ಮತ್ತೆರೆಡು ಕೃತಿಗಳಲ್ಲಿ ಮನೋಜ್ಞವಾಗಿ ಹೊಮ್ಮಿದೆ.[೧೦,೧೧] ಹೀಗೆ ಹೊರಗೆಲ್ಲೋ ಆಟವಾಡಿಕೊಂಡು ಬಂದಿರುವ ಮಗುವನ್ನು ಕಾಣುತ್ತಾರೆ, "ನೊಸಲಲ್ಲಿ ಕಿರು ಬೆವರಿಟ್ಟಿದೆ"ಯಂತೆ! ಬೆರಳ ಉಂಗುರವೆಲ್ಲೋ ಕಾಣುತ್ತಿಲ್ಲ. ರಂಗವಿಠಲನ ಚೇಷ್ಟೆಗಳೇನು ಒಂದೆರಡೆ? ಎಲ್ಲರಿಗೂ ಮೋಸ ಮಾಡಿ ನಗೆಗೀಡಾಗುತ್ತಿರುವ ಗೋಪಾಲಕೃಷ್ಣನನ್ನು 'ನಿಲ್ಲು ನಿಲ್ಲು' ಎಂದು ಪರಿಕಿಸತೊಡಗುತ್ತಾರೆ. ಹೇಳಿದ್ದು ಕೇಳದಿರುವ ತುಂಟ ಮಗುವಿನ ತಾಯಿಯಾಗಿ ಇಲ್ಲೆಲ್ಲ ಶ್ರೀಪಾದರಾಜರ ವಾತ್ಸಲ್ಯವು ಕೃಷ್ಣನ ಮೇಲೆ ವಾಹಿನಿಯಾಗಿದೆ.

ಶ್ರೀಪಾದರಾಜರ ತಾಯ್ತನದ ತರಾಟೆಗೇನು ಕೃಷ್ಣ ಸುಮ್ಮನೆ ಇದ್ದುಬಿಡುತ್ತಾನೆಯೇ? ತಾನು ಮಾಡಿದ ತಪ್ಪುಗಳಿಗೆಲ್ಲ ತನ್ನ ಬಾಲಭಾಷೆಯಲ್ಲಿ ತಾನೇ ಸಮರ್ಥನೆ ಕೊಟ್ಟುಕೊಳ್ಳುತ್ತಿರುವ ಭಾವಲಹರಿಯೊಂದು

ಶ್ರೀಪಾದರಾಜರ "ಗೊಲ್ಲತಿಯರೆಲ್ಲ ಕೂಡಿ ಎನ್ನ ಮೇಲೆ ಇಲ್ಲದ ಸುದ್ದಿ ಪುಟ್ಟಿಸಿ" ಎಂಬ ಕೀರ್ತನೆಯಲ್ಲಿ ಮೈದುಂಬಿಕೊಂಡು ಬಂದಿದೆ! ಎಲ್ಲ ಸೇರಿ ಸುಮ್ಮನೆ ನನ್ನನ್ನು ಕಳ್ಳ ಎಂದು ದೂರುತ್ತಾರಮ್ಮಾ ಎನ್ನುತ್ತಾನಂತೆ ಅವನು. ಅಷ್ಟೊಂದು ಹಾಲು ಕುಡಿದೆನೆನ್ನುತ್ತಾರಲ್ಲ, ಹಾಗೆ ಕುಡಿಯಲು ನನ್ನ ಹೊಟ್ಟೆ ಕೆರೆ ಏನಮ್ಮ? ಎಂದು ಪ್ರಶ್ನಿಸುತ್ತಿದ್ದಾನೆ. ಮಿಾಸಲು ಬೆಣ್ಣೆಯನ್ನು ತಿಂದುಬಿಟ್ಟರೆ ದೇವರು ನನ್ನ ಕಣ್ಣನ್ನು ಮೋಸದಿಂದ ಕುಕ್ಕಿಬಿಡುತ್ತಾನೆಂದು ನನಗೆ ಗೊತ್ತಿಲ್ಲವೆ? ಎಂದು ದೇವರೇ ಆದ ಕೃಷ್ಣನಿಲ್ಲಿ ಶ್ರೀಪಾದರಾಜರೆಂಬ ತಾಯಿಯನ್ನು ಪ್ರಶ್ನಿಸುತ್ತಿದ್ದಾನೆ!

"ಪುಂಡುತನವ ಮಾಡಲು ನಾನು ದೊಡ್ಡ
ಗಂಡಸೇನೆ ಹೇಳಮ್ಮಯ್ಯ ಎನ್ನ
ಕಂಡವರು ದೂರುತಾರೆ ಗೋಪಮ್ಮ ನಾ ನಿನ್ನ
ಕಂದನಲ್ಲವೇನೆ ಅಮ್ಮಯ್ಯ? "

ನಿನ್ನ ಮಗುವಾಗಿರುವ ನಾನು ಅಷ್ಟು ಪುಂಡುತನ ಮಾಡುವಂಥ ದೊಡ್ಡ ಗಂಡಸೇನಮ್ಮ? ಎಂದು ಕೇಳುತ್ತಿರುವ ಮುದ್ದು ಮಗುವನ್ನು ಬಾಚಿ ತಬ್ಬಿ ತನ್ನ ಶೃಂಗಾರದ ಈ ಕೂಸನ್ನೆತ್ತಿಕೊಂಡು ತೊಟ್ಟಿಲಲ್ಲಿಟ್ಟು ತೂಗಿದಳಂತೆ ಶ್ರೀಪಾದರಾಜರೆಂಬ ಗೋಪಿ! ವಾತ್ಸಲ್ಯ, ಮಮತೆಗಳ ಪ್ರತೀಕವಾದ ತಾಯ್ತನದ ಭಾವಕ್ಕೆ ಶ್ರೀಪಾದರಾಜರಲ್ಲಿ ಮತ್ತಾವ ಉದಾಹರಣೆ ಬೇಕು?

ಪೂತನಿಯ ಮೊಲೆಯನ್ನು ಭೀತಿಯಿಲ್ಲದೆ ಉಂಡೆಯಲ್ಲ ಕೃಷ್ಣ! ಆ ರಕ್ಕಸಿಯ ಭೀಕರಾಕೃತಿಯ ವಕ್ಷಸ್ಥಳವು ಭಯ ತರಲಿಲ್ಲವೆ ಮಗು ನಿನಗೆ? ಅಂಥ ದುಷ್ಟ ರಕ್ಕಸರಾದ ಮುಷ್ಟಿಕ, ಕಂಸರನ್ನು ಕಷ್ಟವಿಲ್ಲದೆ ಮಡುಹಿ ಕೊಂದೆಯಲ್ಲ ಕಂದ! ದೃಷ್ಟಿ ತಾಕದಿದ್ದೀತೆ ನಿನಗೆ? ಹೀಗೆಲ್ಲ ಕೇಳುತ್ತ "ಯಾಕೆ ಇಂಥ ದುಡುಕು ಕೃಷ್ಣಯ್ಯ ನಿನಗ್ಯಾಕೆ ಇಂಥ ದುಡುಕು?" ಎಂಬ ತಮ್ಮ ಕೃತಿಯಲ್ಲಿಯೂ ವಾತ್ಸಲ್ಯಭಾವವನ್ನು ಮೆರೆದಿದ್ದಾರೆ.

"ಬಾರೋ ನಮ್ಮ ಮನೆಗೆ ಗೋಪಾಲಕೃಷ್ಣ" ಎಂಬ ಕೃತಿಯಲ್ಲಿಯೂ ಕೃಷ್ಣನ ಬಾಲಲೀಲೆಗಳ ಚಿತ್ರಣವಿದೆ. ಅವನ ತುಂಟತನಗಳ ಬಗ್ಗೆಯೆ ಹೇಳುತ್ತ ಅವನ ಪುಟಾಣಿ ಡೊಳ್ಳು ಹೊಟ್ಟೆಯನ್ನುದ್ದೇಶಿಸಿ "ಮುಜ್ಜಗವನೆಲ್ಲ ಆ ಬೊಜ್ಜೊಳಗೆ ಇಟ್ಟು" "ಗೆಜ್ಜೆಯ ಹಾಕಿ ತಪ್ಪು ಹೆಜ್ಜೆಯನಿಕ್ಕುತ" ಎಂದೆಲ್ಲ ವಾತ್ಸಲ್ಯಪೂರಿತವಾಗಿ ಬರಮಾಡಿಕೊಂಡಿದ್ದಾರೆ. ಅವನು ಎಷ್ಟು ದೊಡ್ಡ ದೇವರಾದರೇನು? ಅವರ ಪಾಲಿಗೆ ಅವನಿನ್ನೂ ತಪ್ಪು ಹೆಜ್ಜೆ ಹಾಕುವ, ಅದೇ ತಾನೇ ನಡಿಗೆ ಕಲಿಯುತ್ತಿರುವ ಪುಟ್ಟ ಡೊಳ್ಳಿನ ಮಗು! ಬಾಲಕೃಷ್ಣ!

ಇಂಥ ತುಂಟನನ್ನು ಕೆಲವೊಮ್ಮೆ ಹೆದರಿಸಿ ಸುಮ್ಮನಾಗಿಸಬೇಕಾಗುತ್ತದೆ. ಶ್ರೀಪಾದರಾಯರು ತಮ್ಮ "ಗುಮ್ಮ ಬಂದನೆಲೊ ದುರ್ಜನ!, ಬೇಡ, ಸುಮ್ಮನಿರೆಲೊ ರಂಗಯ್ಯ" ಎಂಬ ಕೃತಿಯಲ್ಲಿ ತಾಯ್ತನದ ಈ ತಂತ್ರವನ್ನೂ ಪ್ರಯೋಗಿಸಿದ್ದಾರೆ. ಆದರಿಲ್ಲಿ ಅವರು ಹೇಳುತ್ತಿರುವ ಗುಮ್ಮ ಮತ್ತಾರು ಅಲ್ಲ, ಅದು ಈಶ್ವರ! "ರುದ್ರ ದೇವರು

ಸರ್ವೋತ್ತಮನಾದ ಹರಿಯ ಸೇವೆಗೆ ಬದ್ಧನಾಗಿರುವುದರಿಂದ ಆ ಭಾವವನ್ನು ಇಲ್ಲಿ ಮೇಲಿಂದ ಮೇಲೆ ತಿಳಿಸಿದೆ"[*೧೨] ತುಂಟನಾದ ಶ್ರೀಕೃಷ್ಣನನ್ನು ಹೆದರಿಸಲೋಸುಗ ಇಲ್ಲಿ ಶಿವನನ್ನು ಗುಮ್ಮನೆಂದು ಕರೆದು ವರ್ಣಿಸಲಾಗಿದೆ.

ಇಷ್ಟಾದರೂ ಈ ತುಂಟ ಕೃಷ್ಣನ ಮೇಲೆ ಗೋಪಿಗೆ ಪದೇ ಪದೇ ಎಲ್ಲೆಡೆಯಿಂದ ದೂರುಗಳು! ಅವರುಗಳ ದೂರು ಕೇಳಿ ಸದಾ ತನ್ನ ಕಂದನನ್ನು ಶಿಕ್ಷಿಸಲಾರದೆ ಶ್ರೀಪಾದರಾಜರೊಳಗಿನ ಗೋಪಿ ಹೀಗೆ ಆಕ್ಷೇಪಿಸಿಯೂ ಇದ್ದಾಳೆ! "ಏಕೆ ದೂರುವಿರೇ ರಂಗಯ್ಯನ? ಏಕೆ ದೂರುವಿರೇ?" ನಿಮ್ಮ ಆಕ್ಷೇಪಣೆಗಳನ್ನು ನಾನು ಬಲ್ಲೆ, ಆದರೆ ನನ್ನ ಕಂದ ಅಂಥ ಕೃತ್ಯಗಳನ್ನು ಮಾಡಲಾರ ಎಂದು ಸಮರ್ಥಿಸಿಕೊಂಡಿದ್ದಾಳೆ. ಸರಿಯಾಗಿ ಹೆಜ್ಜೆಯಿಡಲು ಬಾರದಂಥ ನನ್ನ ಮಗು ಇನ್ನು ಗೋವುಗಳ ಕೊಟ್ಟಿಗೆಗೆ ಹೋಗಿ ಹಾವಳಿ ಮಾಡುವುದು ಹೇಗೆ ಸಾಧ್ಯ? ಕಟ್ಟಿದ್ದ ಕರುಗಳನ್ನೆಲ್ಲ ಬಿಟ್ಟಿದ್ದಾನೆಂಬ ನಿಮ್ಮ ದೂರು ಕೇವಲ ಅವನ ಮೇಲಿನ ಹೊಟ್ಟೆಕಿಚ್ಚಿನಿಂದ ಉದಿಸಿದೆ ಎನ್ನುತ್ತಾರೆ ಶ್ರೀಪಾದರಾಜರು. ಗೋಪಿಯಾಗಿ ಇಲ್ಲಿ ಅವರು ಮಾತೃವಾತ್ಸಲ್ಯದಿಂದ ಕೃಷ್ಣನ ತುಂಟಾಟಗಳನ್ನು ಸಮರ್ಥಿಸಿಕೊಂಡಿರುವ ಪರಿ ಸ್ವಾರಸ್ಯಕರವಾಗಿದೆ. "ನಿನ್ನ ಮಗನ ಲೀಲೆಯ ತಾಳಲಾರೆವೆ ನಾವು"[*೧೩] ಎನ್ನುತ್ತ ದೂರು ತಂದ ಗೋಪಿಕೆಯರನ್ನು ಹೀಗೆ ದೂರತಳ್ಳಲಾಗಿದೆ, ನಿರಾಕರಿಸಲಾಗಿದೆ.

ಶ್ರೀಪಾದರಾಜರ ವಾತ್ಸಲ್ಯಭಾವದ ಕೃತಿಗಳಲ್ಲಿ ಬಹು ಜನಪ್ರಿಯವಾಗಿ ಕನ್ನಡ ಮನೆತನಗಳ ತಾಯಂದಿರು ತಮ್ಮ ತಮ್ಮ ಕೂಸುಗಳನ್ನಾಡಿಸುವಾಗ ಹಾಡಿಕೊಳ್ಳುವಂತೆ ಉಳಿದಿರುವ ಕೃತಿ "ಪೋಪು ಹೋಗೋಣ ಬಾರೋ ರಂಗ, ಪೋಪು ಹೋಗೋಣ ಬಾರೋ". ಶ್ರೀಪಾದರಾಜರು ಹಿರಿಯರಾಗಿ ಇಲ್ಲಿ ಕಂದ ಕೃಷ್ಣನನ್ನು ಎಲ್ಲಿಯೋ ಹೊರಗೆ ಕರೆದೊಯ್ಯಲು, ಬಾರೆಂದು ಮಕ್ಕಳ ಮಾತಿನಲ್ಲಿಯೇ ಆಹ್ವಾನಿಸುತ್ತಿರುವ ರೀತಿ ಮನೋಜ್ಞವಾಗಿದೆ. ಭಕ್ತರ ಕರೆಗೆ ಓಗೊಟ್ಟು ಸಂರಕ್ಷಿಸುವ ಭಗವಂತನ ಭಕ್ತವಾತ್ಸಲ್ಯ ಗುಣವನ್ನು ಶಿಶುರೂಪಿಯಾದ ಭಗವಂತನ ಬಳಿಯೇ ಹೇಳುತ್ತ ಹೋಗುವ ರೀತಿ, ಭಕ್ತವತ್ಸಲ ಕಾರ್ಯಕ್ಕೇ ಅದೇ ಮಗುವನ್ನೇ ಕರೆದೊಯ್ಯಲೆಂದು ಆಹ್ವಾನಿಸುವ ಪರಿ ಅಸಾದೃಶ್ಯವಾಗಿದ್ದು ಶ್ರೀಪಾದರಾಜರ ಕವಿತ್ವಗುಣಕ್ಕೆ ಈ ಕೃತಿ ಸಾಕ್ಷಿಯಾಗಿ ನಿಲ್ಲುತ್ತದೆ, ಸವಿಯಾದ ಮಮತಾಭಾವಕ್ಕೂ ಸಂಕೇತವಾಗಿ ನಿಲ್ಲುತ್ತದೆ. ಅವನೇ ಒಮ್ಮೆ ಮಾಡಿರುವ ಭಕ್ತ ಸಂರಕ್ಷಣೆಯ ಕಾರ್ಯಕ್ಕೆ ಈಗ ಪುನಃ ಅವನನ್ನೇ ಶಿಶುವಾಗಿಸಿ ಅದೇ ಕಾರ್ಯಕ್ಕೆ ಮರಳಿ ಆಹ್ವಾನಿಸಿ 'ಹೋಗೋಣ ಬಾ.....' ಎಂದು ಕರೆದೊಯ್ಯಲು ಸಿದ್ಧವಾಗಿರುವ ಈ ಕವಿತ್ವ ಹೊಚ್ಚಹೊಸತನದಿಂದ ಕೂಡಿದೆ.

ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ಹಾಡು ಹೇಳುತ್ತ ತೂಗುವುದು ಎಲ್ಲ ತಾಯಂದಿರಿಗೂ ಸಹಜವಾಗಿ ಒಲಿದ ಕ್ರಿಯೆ, ಇಷ್ಟವಾಗುವ ಕೆಲಸ. ಭಗವಂತನನ್ನೆ ಮಗುವಾಗಿಸಿ ತೂಗುತ್ತ ಲಾಲಿಪದ ಹಾಡುವ ಕ್ರಿಯೆಯನ್ನು ತಮ್ಮ ಕೃತಿಗಳಲ್ಲಿ ಶ್ರೀಪಾದರಾಜರು ತಂದಿದ್ದಾರೆ. "ಲಾಲಿ ಗೋವಿಂದ ಲಾಲಿ" ಎಂಬ ಕೀರ್ತನೆಯಲ್ಲಿ ಪರಮಾತ್ಮನನ್ನೆ ಮಗುವಾಗಿಸಿಕೊಂಡು ಅವನ ಮಹಿಮಾ ವಿಶೇಷಗಳಿಗೆ ತಕ್ಕಂತೆ ಭೌಮವಾದ ಕಲ್ಪನಾವಿಶೇಷದಲ್ಲಿ ತೂಗು

ತೊಟ್ಟಿಲನ್ನು ಕಟ್ಟಿ ಮಲಗಿಸಿ ಜೋಗುಳವನ್ನು ಹಾಡುತ್ತ ತೂಗುವ ರಮಣೀಯ ಚಿತ್ರಣವಿದರಲ್ಲಿದೆ. ಭೂಮಂಡಲವನ್ನೇ ಹಲಗೆಯಾಗಿಸಿ ಮಾಡಿದ ತೊಟ್ಟಿಲಿನಲ್ಲಿ ಅವನನ್ನು ಮಲಗಿಸಿ ಅಪೂರ್ವ ರಮಣಿಯರೆಲ್ಲ ಹಾಡುತ್ತ ತೂಗುವ ಕಲ್ಪನೆಯಿದೆ. ಪದ್ಮಿನಿ, ಹಸ್ತಿನಿ, ಚಿತ್ತಿನಿ, ಶಂಖಿನೀ ಲಕ್ಷಣವುಳ್ಳ ನಾರಿಯರೆಲ್ಲ ಹೀಗೆ ಶ್ರೀಹರಿಯನ್ನು ತೂಗಿದರು. ಕಲ್ಯಾಣಿ, ಆನಂದಭೈರವಿ ಮತ್ತು ದೇವಗಾಂಧಾರ ರಾಗಗಳಲ್ಲಿ ಜೋಗುಳವನ್ನು ಹಾಡಿದರು ಎಂಬೆಲ್ಲ ನಿರೂಪಣೆಯು ಕಾವ್ಯಾತ್ಮಕವಾಗಿ ಹೊರಹೊಮ್ಮಿದೆ. ದಶಾವತಾರದ ವರ್ಣನೆಯಲ್ಲಿ ಮಗುವನ್ನು ತಣಿಸಲಾಗಿದೆ.

ಶ್ರೀಪಾದರಾಜರು ರಚಿಸಿದ ಮತ್ತೊಂದು ಲಾಲಿಪದ ತುಂಬ ಪ್ರಸಿದ್ಧಿಯಾಗಿದೆ.

"ಜೋಜೋ ಜೋಜೋ ಜೋ ರಂಗಧಾಮ
ಜೋಜೋ ಜೋಜೋ ಜೋ ರಣಭೀಮ ॥ಪ॥
ಜೋಜೋ ಭಕ್ತರ ಕಷ್ಟ ನಿರ್ಧೂಮ
ಜೋಜೋ ದಶರಥ ರಾಮ ನಿಸ್ಸೀಮ ॥ಅ.ಪ॥

ಹೀಗೆ ಪ್ರಾರಂಭವಾಗುವ ಕೀರ್ತನೆಯು ಏಳು ನುಡಿಗಳಲ್ಲಿ ಸಾಗುತ್ತದೆ. ಭೂಮಿಯೇ ಚಿನ್ನದ ತೊಟ್ಟಿಲಾಯಿತಂತೆ. ಅದಕ್ಕೆ ಸೋಮ, ಸೂರ್ಯರನ್ನೆ ಕಲಶವನ್ನಾಗಿ ಹೂಡಿ ವೇದಗಳನ್ನೆ ಸರಪಣಿಗಳನ್ನಾಗಿ ಮಾಡಿ ಆ ಮಹಾ ಆಕಾಶಕ್ಕೆ ಕೊಂಡಿಗಳನ್ನು ಹಾಕಲಾಯಿತಂತೆ! ಎಂಥ ಉದಾತ್ತವಾದ, ಭೌಮವಾದ ಕಲ್ಪನೆಯನ್ನು ಶ್ರೀಪಾದರಾಜರ ಕವಿಮನಸ್ಸು ಕಂಡಿದೆ! ನಂತರ ದೇವಾನುದೇವತೆಗಳೆಲ್ಲ ಈ ತೊಟ್ಟಿಲಲ್ಲಿ ಪರಮಾತ್ಮನನ್ನು ಮಲಗಿಸಿ ಸ್ತುತಿಸಿ ಹಾಡುತ್ತ ತೂಗಿದರಂತೆ! ಜೋಗುಳ ಹಾಡುವಲ್ಲಿ ಮೊದಲು ಕೃಷ್ಣನ ಲೀಲಾ ವಿನೋದಗಳನ್ನು ತುತಿಸಿ ನಂತರ ದಶಾವತಾರದ ಇತರ ವಿವರಗಳನ್ನೆಲ್ಲ ಹಾಡುವ ಈ ಕೀರ್ತನೆ ಕಡೆಯ ಭಾಗದಲ್ಲಿ ಹೀಗೆ ಬರುತ್ತದೆ.

"ಪದ್ಮನಾಭ ಸಿರಿ ಭಕ್ತವತ್ಸಲನೇ
ನಿದ್ರೆಯ ಮಾಡಯ್ಯ ಶ್ರೀರಂಗವಿಠಲ ॥

ಹೀಗೆ ಭಕ್ತನಾದವನು ಭೌಮವಾದ ಭಗವದ್ ಶಕ್ತಿಯನ್ನು ತನ್ನ ತೊಡೆಯ ಮೇಲಾಡುವ ಪುಟ್ಟ ಮಗುವಾಗಿಸಿಕೊಂಡು ತಾಯ್ತನದ ವಾತ್ಸಲ್ಯದಿಂದ ಕಾಣುವ ಭಾವವು ಶ್ರೀಪಾದರಾಜರ ಮಾತೃಹೃದಯದಿಂದ ಅನನ್ಯವಾಗಿ ಹೊಮ್ಮಿದೆ. ಶ್ರೀಪಾದರಾಜರು ತೆರೆದು ತೋರಿಸಿಕೊಟ್ಟ ಈ ವಾತ್ಸಲ್ಯ ಭಾವಗುಣವು ಮುಂದೆ ಬೆಳೆದ ಹರಿದಾಸ ಸಾಹಿತ್ಯದ ವಿಶಿಷ್ಟ ಪ್ರಕಾರಗಳಲ್ಲಿ ಒಂದಾಗಿ ಬೆಳೆದು ಜೋಗುಳ ಪದಗಳಾಗಿ ಹೊಮ್ಮಿ ದಾಸರುಗಳಲ್ಲಿ ತಾಯ್ತನವನ್ನು ತುಂಬಿತೆನ್ನುವುದನ್ನು ಇಲ್ಲಿ ಸ್ಮರಿಸಬಹುದು.

೭. ಸಖ್ಯ ಭಾವ

ಭಕ್ತನಿಗೆ ಭಗವಂತ ಮಗುವಾದ ಹಾಗೇ ಕೆಲವೊಮ್ಮೆ ಸ್ನೇಹಿತನೂ ಆಗುತ್ತಾನೆ.ಪ್ರೀತಿಯಲ್ಲಿ ಇಲ್ಲದಿರುವ ಭಾವವಾದರೂ ಯಾವುದು? ಸ್ನೇಹವೆಂದ ಮೇಲೆ ಗೆಳೆತನದ ಒಡನಾಟ, ಸಲಿಗೆ ಎಲ್ಲ ಇದ್ದೇ ಇರುತ್ತದೆ. ಹೀಗೆ ಭಗವಂತನ ಬಳಿ ಗೆಳೆತನವನ್ನು ಬೆಳೆಸಿಕೊಂಡು ಸ್ನೇಹದ ಸವಿಯನ್ನು ಪ್ರಕಟಿಸುವ ಕೃತಿಗಳು ಕೂಡ ಶ್ರೀಪಾದರಾಜರಿಂದ ಕಾವ್ಯಸೌಂದರ್ಯದಲ್ಲಿ ರಚಿತವಾಗಿವೆ.

ಶ್ರೀಕೃಷ್ಣನು ತಮ್ಮ ಬಾಲ್ಯಸ್ನೇಹಿತನೆಂದು ಭಾವಿಸಿ ಬರೆದ ಕೀರ್ತನೆಯೊಂದರಲ್ಲಿ ಅನೇಕವರ್ಷಗಳ ನಂತರದ ಭೇಟಿಯಲ್ಲಿ ಆ ಬಾಲ್ಯ ಸ್ನೇಹಿತ ತನ್ನನ್ನು ಮರೆತುಹೋಗಿದ್ದಾನೆಂದು ಕಲ್ಪಿಸಿಕೊಂಡು ನೆನಪು ಮಾಡಿಕೊಡುವ ಮೋಹಕ ಭಾವವಿದೆ.

ಮರೆತೆಯೇನೋ ರಂಗಾ ಮಂಗಳಾಂಗ
ತುರುಕರು ಕಾಯ್ವಲ್ಲಿ ತೊಂಡನಾಗಿದ್ದೆನ್ನ ॥ಪ॥
ಕೋಲು ಕೈಯಲಿ ಕೊಳಲು ಜೋಲುಗಂಬಳಿ ಹೆಗಲ
ಮ್ಯಾಲೆ ಕಲ್ಲಿ ಚೀಲ ಕೊಂಕಳಲ್ಲಿ
ಕಾಲಗಡಗವನಿಟ್ಟು ಕಾಡೊಳಿಹ ಪಶುಹಿಂಡ
ಲಾಲಿಸುವ ಬಾಲಕರ ಮ್ಯಾಳದೊಳಗಿದ್ದೆನ್ನ ॥೧॥

ಹಿಂದೆ ಕೃಷ್ಣ ಗೋವುಗಳನ್ನು ಕಾಯುತ್ತಿರುವಾಗ ಆ ಗೋಪಾಲಕರ ಗೆಳೆಯರ ಬಳಗದಲ್ಲಿ ನಾನೂ ಒಬ್ಬನಾಗಿದ್ದೆನಲ್ಲ, ಮರೆತುಬಿಟ್ಟೆಯೇನು ನನ್ನನ್ನು? ಎಂದು ಪ್ರಶ್ನಿಸುತ್ತಾರೆ. ಐದು ಸಾವಿರವರ್ಷಗಳಿಗೂ ಹಿಂದಿನ ಸ್ನೇಹವಿದು ಹಾಗಾದರೆ! ಏಕೆ ಮರೆಯಬೇಕು ಕೃಷ್ಣ? ಸಿರಿದೇವಿ ಅವನಿಗೆ ಒಲಿದು ಬರುವ ಮುನ್ನ ಹೇಗಿದ್ದ ಅವನು? ಅವನ ಹಿಂದಿನ ದಿನಗಳ ವೇಷಭೂಷಣ,ಸರಸ ಸಲ್ಲಾಪಗಳನ್ನು ಅವನಿಗೇ ನೆನಪು ಮಾಡಿಕೊಟ್ಟರಾದರೂ ತನ್ನನ್ನು ಗುರುತಿಸಿಯಾನೆ ಅವನು? "ಚಿತ್ರಕಾರನ ಕುಂಚಕ್ಕೆ ಒಂದು ಸೊಗಸಾದ ಶಬ್ದ ಚಿತ್ರ ಈ ಕೃತಿ" [*೧೪] ಹಳೆಯ ಗೆಳೆತನವನ್ನು ನೆನಪು ಮಾಡಿಕೊಟ್ಟಿರುವ ಮನೋಹರವಾದ ಭಾವಚಿತ್ರಣವೂ ಹೌದು ಈ ಕೃತಿ.

ಮತ್ತೊಂದು ಕೀರ್ತನೆಯಲ್ಲಿ ಗೆಳೆತನದ ಸಲಿಗೆಯಿಂದ ಕೃಷ್ಣನನ್ನು ಬೆದರಿಸುವ ಭಾವವಿದೆ. "ವಾಸುದೇವ ನಿನ್ನ ಮರ್ಮ ಕರ್ಮಂಗಳ ದೇಶದೇಶದಲ್ಲಿ ಪ್ರಕಟಿಸಲೋ" ಎಂದು ಕೇಳಿದ್ದಾರೆ. ತರಳತನದಲ್ಲಿ ದುರುಳನಾಗಿ ವರ್ತಿಸಿ ಒರಳಿಗೆ ಕಟ್ಟಿ ಹಾಕಿಸಿಕೊಂಡಿದ್ದು, ಗೊಲ್ಲರು ತಂದಿದ್ದ ಕಂಬಳಿಯಲ್ಲಿನ ಅನ್ನವನ್ನು ತಿಂದಿದ್ದು, ನೆರೆಮನೆ ಹೊರಮನೆಗಳನ್ನು ಹೊಕ್ಕು ಯಾರೂ ಅರಿಯದಂತೆ ಬೆಣ್ಣೆ ಕದ್ದು ಮೆದ್ದದ್ದು....ಎಲ್ಲವನ್ನೂ ಹೇಳಿಬಿಡುತ್ತೇನೆ. "ಎಲವೊ ನರಹರಿ, ನನ್ನನ್ನು ಕೆರಳಿಸಿಯಾದರೆ ನನ್ನ ಬಾಯಿಗೆ ಬಂದುದ್ದನ್ನೆಲ್ಲ ಒದರಿಬಿಡುತ್ತೇನೆ" ಎಂದು ಕೃಷ್ಣನನ್ನು ಬೆದರಿಸಿಬಿಟ್ಟಿದ್ದಾರೆ! ಸಖ್ಯ ಭಾವದ ಸಲಿಗೆ ಇದ್ದುದರಿಂದಲ್ಲವೆ ಇಂಥ ಶಕ್ತ್ಯ ಪ್ರೀತಿಯ ಅಭಿವ್ಯಕ್ತಿ ಸಾಧ್ಯವಾದುದು?.

ಕೃಷ್ಣನ ಅನೇಕ ಲೀಲಾಕಾರ್ಯಗಳನ್ನು ಈ ಕೀರ್ತನೆಯಲ್ಲಿ ಹೇಳುತ್ತಲೇ ಹೋಗುತ್ತಾರೆ.ಹೇಳಿರುವ ರೀತಿ

ಮಾತ್ರ ತುಂಬ ಸ್ವಾರಸ್ಯಕರವಾಗಿದೆ. "ಎಲ್ಲವನ್ನೂ ಹೇಳಿಬಿಡುತ್ತೇನೆಂದು ಬೆದರಿಸುತ್ತಲೇ ಎಲ್ಲವನ್ನೂ ಹೇಳಿಬಿಟ್ಟಿರುವ ತಂತ್ರಗಾರಿಕೆಯಲ್ಲಿ ಸೊಗಸಿದೆ"[೧೫]

ಶ್ರೀಪಾದರಾಜರು ತಮ್ಮ ಪೂರ್ವಾಶ್ರಮದ ಬಾಲ್ಯಕಾಲದಲ್ಲಿ ದನಗಾಹಿಯೇ ಆಗಿದ್ದುದು ಅವರ ಈ ಕೀರ್ತನೆಯ ರಚನೆಯಲ್ಲಿ ಹೆಚ್ಚಿನ ಭಾವಾನುಭವದ ನಿರ್ಭರತೆಯನ್ನು ತಂದಿತ್ತಿದೆ, ಈ ಕೃತಿ ಒಂದು ರೀತಿಯಲ್ಲಿ ನಿಂದಾಸ್ತುತಿಯೂ ಹೌದು, ಹೆದರಿಸಿ, ನಿಂದಿಸಿ ಕಡೆಗೆ ಒಲಿಸಿಕೊಳ್ಳುವ ಈ ವಿಧಾನದಲ್ಲಿ ಸಖ್ಯಭಾವದ ಸಲಿಗೆ ಕಂಡುಬರುತ್ತದೆ.

ಶ್ರೀಪಾದರಾಜರ ಕವಿಮನಸ್ಸು, ಕೆಲವೊಮ್ಮೆ ತುಂಟತನದಿಂದ ಹರಿಯನ್ನು ಕೆಣಕುವುದೂ ಉಂಟು. ಹರಿಯ ಪತ್ನಿಯನ್ನು "ಒಲಿದೆ ಯಾತಕಮ್ಮ ಲಕ್ಷುಮಿ ವಾಸುದೇವಗೆ?" ಎಂದು ಕೇಳುತ್ತ ಶುದ್ಧ ನೀಲವರ್ಣದ ಕಪ್ಪು ಮೈಯವನು, ಅದು ಹ್ಯಾಗೆ ಒಲಿದೆಯಮ್ಮ ಅವನಿಗೆ? ಗೋಕುಲದಲ್ಲಿ ಏನೆಲ್ಲ ಹಾವಳಿಮಾಡಿದ ಅಭಿಮಾನಗೇಡಿ ನಿನಗೆ ಹ್ಯಾಗೆ ಅನುರೂಪನಾದನಮ್ಮ? ಮಾವನನ್ನು ಕೊಂದವನು, ಹಾವಿನ ಮೇಲೆ ಮಲಗಿದವನು ಎಂದೆಲ್ಲ ವ್ಯಂಗ್ಯವಾಡಿಕೊಂಡು ಚೇಷ್ಟೆಮಾಡಿದ್ದಾರೆ. ಇದೂ ಕೂಡ ಹರಿಯ ಮೇಲಿನ ನಿಂದಾಸ್ತುತಿಯೇ ಆಗಿದೆ.

ಮಧುರ ಭಾವ

ಭಗವಂತ ಮಗುವೆಂಬ ಭಾವವಾಯಿತು, ಸಖನೆಂಬ ಸಲಿಗೆಯೂ ಆಯಿತು. ಮತ್ತೂ ಒಂದು ವಿಶೇಷವಾದ ಭಾವರತಿಯಲ್ಲಿ ಶ್ರೀಪಾದರಾಜರು ಭಗವಂತನನ್ನು ಪ್ರೀತಿಸಿದ್ದಾರೆ. ಅದೇ ಮಧುರಭಾವ! ಭಗವಂತನನ್ನು ಪತಿಯಾಗಿ ಭಾವಿಸಿಕೊಂಡು ತಾವು ಸತಿಯಾಗಿ ಅವನನ್ನು ಆರಾಧಿಸುವುದು 'ಮಧುರಭಕ್ತಿ' ಅಥವಾ 'ಮಧುರಭಾವ'ವೆನಿಸಿಕೊಳ್ಳುತ್ತದೆ. ಹೀಗೆ ಸತಿಪತಿಭಾವದ ಭಕ್ತಿಯು ವಚನಕಾರರ ಕಾಲದಲ್ಲೇ ಸುಮಾರು ೧೨ನೆಯ ಶತಮಾನದಷ್ಟು ಹಿಂದಿನ ಕಾಲದಲ್ಲೇ ಪ್ರಚಲಿತವಿದ್ದಿತು. ಶ್ರೀಪಾದರಾಜರ ಅನೇಕ ಬಿಡಿಯಾದ ಕೃತಿಗಳಲ್ಲಿಯೂ ವೇಣುಗೀತೆ, ಗೋಪಿಗೀತೆ ಹಾಗೂ ಭ್ರಮರಗೀತೆಗಳಲ್ಲಿಯೂ ಗೋಪಿಯರ ಮತ್ತು ಕೃಷ್ಣನ ಮಧುರ ಪ್ರೀತಿಯ ಬಾಂಧವ್ಯದ ಚಿತ್ರಣ ಸೊಗಸಾಗಿ ಮೂಡಿರುವುದನ್ನು ಕಾಣಬಹುದು.

ಶ್ರೀಕೃಷ್ಣ ರಾಜಕಾರ್ಯದ ಕರೆಯ ಮೇರೆಗೆ ಮಧುರಾ(ಮಥುರಾ) ನಗರಿಗೆ ತೆರಳಿದ ಮೇಲೆ ಅಷ್ಟು ದಿನಗಳೂ ಅವನ ಒಡನಾಟದಲ್ಲಿ ಕಳೆದಿದ್ದ ಗೋಪಿಕಾಸ್ತ್ರೀಯರಿಗೆ ವಿರಹವನ್ನು ಸಹಿಸುವುದು ಅಸಾಧ್ಯವಾಗಿ ಕೃಷ್ಣನ ಅಗಲಿಕೆಯ ನೋವನ್ನು, ವ್ಯಥೆಯನ್ನು ಪರಿಪರಿಯಾಗಿ ಬಣ್ಣಿಸುವುದೇ ಇಲ್ಲಿನ ಅನೇಕ ಕೃತಿಗಳ ಮುಖ್ಯಬಾವವಾಗಿದೆ, "ಒಲ್ಲೆನವ್ವಾ ಲಕುಮಿಯ ನಲ್ಲ ಬಾರದಿದ್ದರೆ ತನು ಹೊರೆಯನೊಲ್ಲೆನವ್ವಾ" ಎಂಬ ಒಂದು ಕೀರ್ತನೆಯಲ್ಲಿ ಗೋಪಿಯೊಬ್ಬಳಿಗೆ ಕೃಷ್ಣನಿಲ್ಲದೆ ಶರೀರವೇ ಹೊರೆಯಾಗಿ, ಕೊರಳಲ್ಲಿ ಧರಿಸಿದ ಹೂಹಾರ ಕೂಡ ಭಾರವಾಗಿ ಅಸಹನೀಯ ಸ್ಥಿತಿಯೊದಗಿದೆ.

ಮಂದಾನಿಲನ ಸಹಿಸಲಾಗದು
ನೊಂದೆ ಶುಕಪಿಕ ರವಗಳಿಂದ
ಚಂದ್ರ ಕಿರಣದಿ ಬೆಂದೆ ಇನ್ನೀ
ವೃಂದಾವನವೇಕವನನಗಲಿ......॥

ಬಿಲ್ಲ ಹಬ್ಬದ ನೆವ ಮಾಡಿ ಮಧುರೆಗೆ ಹೋದ ಕೃಷ್ಣನನ್ನು ಬೈದುಕೊಳ್ಳುತ್ತಿದ್ದಾಳೀಕೆ. ತಂಪು ಕೊಡುವ ವಸ್ತುಗಳನ್ನೇ ಇವಳಿಂದ ಸಹಿಸಲಾಗದು, ಕಾರಣ ಕೃಷ್ಣನಿಲ್ಲದ ವಿರಹದ ಉರಿಯ ತೀವ್ರತೆ! ತನ್ನೊಂದಿಗೆ ಮೊದಲು ಸರಸವಾಡಿದ್ದನ್ನೆಲ್ಲ ಮರೆತು ಇವನು ಪುರದ ವನಿತೆಯರನ್ನು ಮೆಚ್ಚಿ ಹೊರಟುಹೋಗಿದ್ದಾನೆ ಎಂದು ವ್ಯಥಿಸಿ ಆಪಾದಿಸುತ್ತಿದ್ದಾಳೆ, ಅಸೂಯಾಪರಳಾಗಿದ್ದಾಳೆ! ಪ್ರೀತಿಯಿದ್ದಲ್ಲಿ ಅಸೂಯೆಯೂ ಇರಲೇಬೇಕೇ? ಹೆಂಗಳೆಯರ ಭಾವದಲ್ಲಿ ಕವಿ ಹೀಗೆ ಒಂದಾಗಿದ್ದಾರೆ.

ಮತ್ತೊಂದು ಕೃತಿ ಇಬ್ಬರು ಗೋಪಿಯರು ಕೃಷ್ಣನ ಅಗಲಿಕೆಯಿಂದುಂಟಾದ ಯಾತನೆಯನ್ನು ಪರಸ್ಪರ ಹೇಳಿಕೊಳ್ಳುತ್ತಿರುವಂತಿದೆ. ಪ್ರೀತಿಯಲ್ಲಿರುವ ಆತುರತೆ, ಕಾತುರತೆಯ ಭಾವಗಳಿಲ್ಲಿ ಸೊಗಸಾಗಿ ಮೂಡಿವೆ. ಕೀರ್ತನೆಯ ರೂಪದಲ್ಲಿದ್ದರೂ ಸುಂದರವಾದ ಪುಟ್ಟ ಸತ್ಕಾವ್ಯವೇ ಆಗಿದೆ.

"ವಿಧಿಗೆ ದಯವಿಲ್ಲವಕ್ಕ ಎಮ್ಮ ಮ್ಯಾಲೆ ॥ಪ॥
ಯದುಪತಿಯನಗಲಿಸಿದ ಒಮ್ಮಿಂದಲೊಮ್ಮೆ ॥ಅ.ಪ॥

ಎಂದೇ ಪ್ರಾರಂಭವಾಗುವ ಸಾಲುಗಳು ಪಲ್ಲವಿ ಮತ್ತು ಅನುಪಲ್ಲವಿಯಾಗಿವೆ. ಆ ಸುಳಿಗುರುಳಿನ ಮುದ್ದು ಮುಖವನ್ನು, ಕಡೆಗಣ್ಣ ನೋಟದಿಂದ ಕವಕವಿಸಿ ನಗುವಂಥವನನ್ನು ನಾವು ತವಕದಿಂದ ಮರಮರಳಿ ನೋಡದಿರುವಂತಾಯಿತಲ್ಲ ಎಂದು ಹಪಿಹಪಿಸುತ್ತಾರೆ. ಶ್ರೀಕೃಷ್ಣನನ್ನು ಕೂಡಿಸಿಕೊಂಡು ಹೋದ ಆ ಹಕ್ಕಿಗಿರುವ ಭಾಗ್ಯ ನಮಗಿಲ್ಲವಾಯಿತು. ನಮಗಾದರೂ ಎರಡು ರೆಕ್ಕೆಗಳಿದ್ದಿದ್ದರೆ ಫಕ್ಕನೆ ಹಾರಿಹೋಗಿ ಈಗಿಂದೀಗಲೇ ಹರಿಯನ್ನು ಕೂಡುತ್ತಿದ್ದೆವಲ್ಲ ಎಂದು ಹಾರಯಿಸುತ್ತ ನಿರಾಶರಾಗುತ್ತಾರೆ. ರಂಗವಿಠಲನ ಅಂಗಸಂಗವ ಬಿಟ್ಟು ಇನ್ನೂ ಹೀಗೆ ಭಂಡರಾಗಿ ಬದುಕಿರುವ ನಮ್ಮ ಜನ್ಮವನ್ನು ಸುಡಬೇಕು ಆತ್ಮನಿಂದೆ ಮಾಡಿಕೊಳ್ಳುತ್ತಿದ್ದಾರೆ. ಹೆಣ್ಣಿನ ಮನಸ್ಸಿನ ಕೋಮಲಭಾವಗಳು ಹೀಗಿಲ್ಲಿ ಕಾವ್ಯವಾಗಿದೆ.

ಕೃಷ್ಣನ ಅಗಲಿಕೆಯಿಂದ ಒದ್ದಾದುತ್ತಿರುವ ಗೋಪಿಯರ ಹತಾಶೆ, ಕಳವಳವನ್ನು ಚಿತ್ರಿಸುವ ಮತ್ತೊಂದು ಕೀರ್ತನೆ "ವನಜನಯನನ ಮನವ ಮಧುಪ ನಂಬುವರೆ? ಮನದೆಗೆದ ಮದನಪಿತ ವಿಠಲರೇಯಾ"ಎಂದು ಪ್ರಾರಂಭವಾಗುತ್ತದೆ.ದುಂಬಿಯೊಂದನ್ನು ಸಂಭೋಧಿಸುತ್ತ ತಮ್ಮ ಅಳಲನ್ನು ತೋಡಿಕೊಳ್ಳುತ್ತಾರೆ.

"ಅರಿಯದ ಬಾಲೇರಿಗೆ ತನ್ನ ಪರಿಯನರುಹಿಸಿ ಮುನ್ನ
ನೆರೆದು ರತಿಪತಿಯ ಸುಖ ನೆರೆದೋರಿದ
ತೊರೆದು ಬದುಕುವೆವೆಂತೋ ರತಿಪತಿಯ ಪಿತನಗಲಿ
ವಿರಹದುರಿ ತಾನಳವಡರಿ ಸುಡುತಿಹುದು ॥

ಏನೂ ಅರಿಯದ ಮುಗ್ಧಬಾಲೆಯರನ್ನು ಕೂಡಿ ಸುಖವನ್ನು ನೀಡಿದವನೀಗ ಅಗಲಿ ಹೋಗಿದ್ದಾನೆ. ಅವನ ನಗೆ,ನುಡಿ,ನೋಟ ಎಲ್ಲ ನಮ್ಮನ್ನು ಅವನಿಗೆ ವಶವಾಗಿಸಿಬಿಟ್ಟಿತು! "ಪಡಿಯಿಲ್ಲದನುಭವದ ಸುಖದ ಸವಿಯನೆ ತೋರಿ"ದವನಿವನು. ಈಗ ಮಧುರೆಯ ನಾರಿಯರನ್ನು ನೆಚ್ಚಿ ಅಲ್ಲೇ ಉಳಿದುಬಿಟ್ಟನೆ? ಇವನ ಮಾತುಗಳಿಗೆ ಮರುಳಾದೆವೇ ಹೊರತು ಅದರ ಹಿಂದಿನ ಕಪಟವನ್ನು ಕಾಣದೇ ಹೋದವು. ಪತಿಸುತರ ಬಂಧನಗಳನ್ನೆಲ್ಲ ಈಡಾಡಿ ಇವನೇ ಗತಿಯೆಂದು ನಂಬಿ ಮನ ಸೋತು ಒಂದಾದೆವು. ಈಗ ಈ ಶ್ರೀಪತಿಯ ಕೂಟವನ್ನು ಮತ್ತೆ ಮತ್ತೆ ಬಯಸಿ ಇರುಳೂ ಹಗಲೂ ಜರಿಜರಿದಳಲುತ್ತಿದ್ದೇವೆ! ಹೀಗೆಲ್ಲ ದುಂಬಿಯ ಬಳಿ ಹೇಳಿಕೊಂಡು ದುಃಖಿಸಿದರೂ ಕಡೆಗೆ ತಮ್ಮ ಆಕ್ಷೇಪಣೆಗಳನ್ನು ಬದಿಗಿರಿಸಿ

"ಸಿರಿಯವನ ಉಂಗುಟದ ಉಗುರು ಗುಣ ಕಾಣಳೆಲೋ
ಹರಿ ನಮ್ಮ ನೆನೆವುದಚ್ಚರಿಯಲ್ಲವೆ?

ಎಂದು ಸಮಾಧಾನಪಟ್ಟುಕೊಂಡು, ಆತನ ದರ್ಶನ ಭಾಗ್ಯವಾದರೂ ತಮಗಿರಲಿ ಎಂದು ಹಾರೈಸುತ್ತ ಮಧುರೆಗೆ ಹೋಗಿ ಆತನನ್ನು ಕರೆತರಬೇಕೆಂದು 'ಮಧುಪ'ನಲ್ಲಿ ವಿನಂತಿಸಿಕೊಳ್ಳುತ್ತಾರೆ. ಹೀಗೆ ಶ್ರೀಪಾದರಾಜರು ಸ್ವತಃ ತಾವು ಗೋಪಿಕಾಸ್ತ್ರೀಯಾಗಿ ಕೃಷ್ಣನಲ್ಲಿ 'ಮಧುರಭಾವ'ದಿಂದ ಒಂದಾಗಿದ್ದಾರೆ,

ಮಧುರಭಾವದಲ್ಲಿ ಪರಮಾತ್ಮನೊಂದಿಗಿನ ಕೂಡುವಿಕೆಯನ್ನು ವಾಚ್ಯವಾಗಿಯೇ ಆದರೂ ಗುಪ್ತ ಸುಪ್ತ ಸಂಬಂಧವನ್ನು ತೆರೆದಿಡುವಂಥ ಕೀರ್ತನೆ "ಸದ್ದು ಮಾಡಲು ಬೇಡವೋ ನಿನ್ನ ಕಾಲಿಗೆ ಬಿದ್ದು ನಾ ಬೇಡಿಕೊಂಬೆ" ಎಂದು ಪ್ರಾರಂಭವಾಗುತ್ತದೆ. ಶ್ರೀರಂಗವಿಠಲನಲ್ಲಿ ಅನುರಾಗವಿಟ್ಟ ಒಬ್ಬ ಗೋಪಿಕಾ ಸ್ತ್ರೀಯಾಗಿ ಇಲ್ಲಿ ಶ್ರೀಪಾದರಾಜರು ಕೂಡಲು ಬಂದಾಗ ಶಬ್ದ ಮಾಡಕೂಡದೆಂದು, ಮನೆಯ ಮಂದಿಗೆಲ್ಲ ಎಚ್ಚರವಾಗಿ ಅನಾಹುತವಾಗುತ್ತದೆಂದು ಎಚ್ಚರಿಸುತ್ತಿದ್ದಾರೆ.

ಕೃಷ್ಣನ ಶೃಂಗಾರ ಚೇಷ್ಟೆಗಳನ್ನು ನಯವಾಗಿ ರೂಪಿಸುವ ಈ ಪುಟ್ಟ ಕವಿತೆಯಲ್ಲಿ ಬೇಡಿಕೆಯೊಂದಿಗೇ ಹೆಣ್ಣಾದವಳು ಅವನ ಪ್ರಣಯಲೀಲೆಗಳನ್ನು ಗುಪ್ತವಾಗಿರಿಸಿಕೊಳ್ಳಬೇಕೆಂದು ಆಶಿಸುವುದೂ ವ್ಯಕ್ತವಾಗುತ್ತದೆ.

ಕಿರುದುಟಿಗಳ ನೀನು ಸವಿದು ಚಪ್ಪರಿಸಲು
ತರವಲ್ಲ ಪತಿಯು ಮತ್ಸರವ ತಾಳುವನಲ್ಲ॥

ಎಂಬಲ್ಲಿ ತಾನು ತನ್ನ ಗಂಡನಿಗೆ ಸೇರಿದವಳು ಎನ್ನುವುದನ್ನೂ ಆಕೆ ನೆನೆದುಕೊಳ್ಳುತ್ತಿದ್ದಾಳೆ. ಉತ್ಕಂಠಿತ ಪ್ರಣಯವನ್ನು ಪರಮಾತ್ಮನೊಂದಿಗೆ ಬೆಸೆದುಕೊಂಡು ಈ ಕೀರ್ತನೆಯು ಸ್ವಾರಸ್ಯಕರವಾಗಿದೆ. ಹರಿದಾಸ ಸಾಹಿತ್ಯವು ಮುಂದೆ ಬೆಳೆದು ಬಂದಾಗಲೂ ಈ ಮಧುರಭಾವದ ಅನೇಕ ಕೃತಿಗಳು ದಾಸರುಗಳಿಂದ ಅಸಂಖ್ಯವಾಗಿ ಸೃಷ್ಟಿಯಾದುದನ್ನು ಕಾಣುತ್ತೇವೆ. ಶ್ರೀಪಾದರಾಜರ ಈ ಮೇಲಿನ ಕೀರ್ತನೆಯು ಅಭಿವ್ಯಕ್ತಿಸುವ ಪ್ರಣಯಿನೀಭಾವವನ್ನೇ ಪುರಂದರದಾಸರ "ಹಾಲು ಉಕ್ಕಿತೋ ರಂಗಾ ಹಾದಿಯ ಬಿಡೋ" ಎಂಬ ಕೀರ್ತನೆಯಲ್ಲಿ ಕಾಣಬಹುದು. "ಹಾಲು ಬೇಕೇನೋ? ಸೆರಗ ಬಿಡೋ॥" ಎನ್ನುವ ಸಾಲು ಇಲ್ಲಿ ಅನುಪಲ್ಲವಿ. ಕೃಷ್ಣನಿಲ್ಲಿ ಚಿಕ್ಕವನೆ? ದೊಡ್ಡವನೆ? ಅದು ಅನುಸಂಧಾನಕ್ಕೇ ಬಿಟ್ಟಿರುವಂಥದ್ದು.

ಥಟ್ಟನೆ ತುಟಿಯ ಚುಂಬಿಸುವುದೇನೋ?
ರಟ್ಟು ಮಾಡಲು ಬೇಡ ರಾಜ್ಯದೊಳಗೆ
ಗುಟ್ಟಿನಿಂದಲಿ ಎನ್ನ ತವಕದಿ ಕೂಡೋ
ಅಟ್ಟಹಾಸದಿ ಮೆರೆವ ಪುರಂದರವಿಠಲ॥

ಹೀಗೆ ಸಾಗುವ ಪುರಂದರದಾಸರ ಹಾಡಿನಲ್ಲಿಯೂ ಶ್ರೀಪಾದರಾಜರ 'ಸದ್ದು ಮಾಡಲು ಬೇಡವೋ' ಹಾಡಿನಲ್ಲಿಯೂ ಗುಪ್ತ ಪ್ರಣಯದ ಭಾವಸ್ವಾಮ್ಯವಿದೆ. ಇಲ್ಲಿಯ ಮಧುರಭಾವವೆಂದರೆ ಅದು ಅಂತರಂಗಕ್ಕೆ, ಆತ್ಮಕ್ಕೆ ಸೇರಿದಂಥ ಗುಪ್ತತೆ. ಪರಮಾತ್ಮನೊಂದಿಗಿನ ಕೂಡುವಿಕೆಗೆ ಆತ್ಮವು ಸದಾ ಮೊರೆಯುತ್ತದೆ, ಬೇಡುತ್ತದೆ, ಕಾಡುತ್ತದೆ. ಹೀಗೆ ಅದು ಪಾರಮಾರ್ಥಿಕ ನೆಲೆಗಟ್ಟನ್ನು ತಲುಪುತ್ತದೆ.

ಮಧುರಭಾವದ ಮತ್ತೊಂದು ಕೀರ್ತನೆಯಲ್ಲಿ ಶ್ರೀಪಾದರಾಜರು ಕೃಷ್ಣನ ಮಧುರ ಮೋಹಕ ಮುರಲೀನಾದದ ಪರಿಣಾಮಗಳನ್ನು ಸುಂದರವಾಗಿ ಕಟ್ಟಿಕೊಡುತ್ತಾರೆ. "ತುರುಗಾಯ ಬಂದ ಗೋಪಿಯ ಕಂದ" ಎಂಬ ಪಲ್ಲವಿಯಿರುವ ಈ ಕೃತಿಯು ಮನೋಹರವಾದ ವೇಣುಗೀತೆಯೆಂದೇ ಪ್ರಸಿದ್ಧವಾಗಿದೆ. ಶ್ರೀಕೃಷ್ಣನ ಕೊಳಲನಾದಕ್ಕೆ ಗೋಪಿಕಾ ಸ್ತ್ರೀಯರೆಲ್ಲ ಹೇಗೆ ಮರುಳಾದರು ಎಂಬ ನಿರೂಪಣೆಯಿದೆ. ಗೋಕುಲದಲ್ಲಿದ್ದ ಗೋಪಿಯರೆಲ್ಲ ನಾದದ ಮೋಹಕತೆಗೆ, ಮಾಧುರ್ಯಕ್ಕೆ ಮನಸೋತು ತಬ್ಬಿಬ್ಬಾಗಿ ಪರವಶಗೊಂಡು ಧಾವಂತದಿಂದ ಕೃಷ್ಣನಿರುವೆಡೆ ಧಾವಿಸಿ ಹೋದರು ಎಂಬ ನುಡಿಚಿತ್ರವಿದೆ. ಕೊಳಲನಾದ ಕೇಳುತ್ತ ಕೇಳುತ್ತ ಎಷ್ಟೊಂದು ಸಂಭ್ರಾಂತರಾದರು ಎಂದರೆ 'ಕರುಗಳನು ತಂದು ಕರದಿಂದಲೆತ್ತಿ ತೊಟ್ಟಿಲೊಳಗೆ ಇರಿಸಿದರು!" ಮಗುವನ್ನು ಮರೆತು ಕರುವನ್ನು ತೊಟ್ಟಿಲಲ್ಲಿಟ್ಟಿದ್ದಾರೆ!

"ಹೊರಟರು ಬಿಸಿಲು ಚಳಿ ಮಳೆಯೊಳಗೆ
ಮನೆ ಮನೆಯೊಳಗೆ
ತರಳರ ಬೆದರಿಸಿ ಮಾರ್ಜಾಲಕೆ ಮೊಲೆ
ತ್ವರಿತದಿ ಉಣಿಸುತ ಸರಿಸರಿಯೆನುತಲಿ

ಮಗುವಿಗೆ ಬದಲಾಗಿ ಮಾರ್ಜಾಲಕ್ಕೆ ಮೊಲೆಯುಣ್ಣಿಸುತ್ತಿರುವ ಪರಿವೆಯೂ ಇಲ್ಲದಷ್ಟು ಪರವಶರಾಗಿದ್ದಾರೆ ಪರಮಾತ್ಮನ ಮುರುಳಿಯ ಕರೆ ಕೇಳುತ್ತ!

ಹೀಗೆ ಹೊರಟುಬಂದವರನ್ನು ಕೃಷ್ಣ ಪರಿಪರಿಯಾಗಿ ಉಪಚರಿಸಿದನಂತೆ. "ಅಧರಾಮೃತ ಪಾನ ಮಾಡಿರೆಂದ, ಬಾಯಾರಿದಿರೆಂದ" ಹತ್ತಿರವೇ ಬಂದು ಕುಳಿತುಕೊಳ್ಳಿ ಎಂದನಂತೆ. ಗೋಪಿಯರಿಗೆ ತನ್ನ ದಿವ್ಯ ಸಮಾಗಮ ಭಾಗ್ಯವನ್ನು ಕರುಣಿಸಿದನಂತೆ ಶ್ರೀರಂಗವಿಠ್ಠಲ!

ಮಧುರಭಾವದ ಸುಳಾದಿಯೊಂದನ್ನು ರಚಿಸಿದ್ದಾರೆ ಶ್ರೀಪಾದರಾಜರು. ಉದ್ದಕ್ಕೂ ಹರಿದಿರುವ ಶೃಂಗಾರ ರಸದಿಂದಾಗಿ ಇಡೀ ಸುಳಾದಿಯ ನುಡಿಗಳು ರಸಾತ್ಮಕವಾಗಿ ಸೊಗಯಿಸಿವೆ. ಮಥುರೆಗೆ ಹೊರಟು ಹೋದ ಕೃಷ್ಣನ ಬಗೆಗಿನ ವಿರಹವೇ ಈ ಸುಳಾದಿಯ ವಸ್ತು. ಕೃಷ್ಣನ ನೆನಪು ಗೋಪಿಕೆಯರನ್ನು ಸುಟ್ಟು ಉರುಹುತ್ತಿದೆ. ಅವನ ಅಗಲಿಕೆಯನ್ನು ತಾಳಲಾರದೆ ನೊಂದು ಬೆಂದು ಒದ್ದಾಡುವ ಗೋಪಿಕೆಯರ ಚಿತ್ರಣ ಮನಕರಗುವಂತೆ ಮೂಡಿದೆ.

ಒಂದು ವಸ್ತುವನ್ನು ಉಪಯೋಗಿಸಿದ ನಂತರ ಹೇಗೆ ಅದು ತ್ಯಾಜ್ಯವಾಗುವುದೆಂದು ಪರಿಪರಿಯ ದೃಷ್ಟಾಂತಗಳಲ್ಲಿ ಹೇಳುತ್ತ ಹೀಗೆಯೇ ತಮ್ಮೊಂದಿಗೆ ಸರಸದಿಂದ ಸುರತವಾಡಿದ್ದ ಕೃಷ್ಣನು ತಮ್ಮನ್ನು ಬಿಟ್ಟುಬಿಟ್ಟನೆಂದು ಗೋಪಿಯರು ದುಃಖಿಸುವ ಚಿತ್ರಣ ಕಾವ್ಯಾತ್ಮಕವಾಗಿ ಬಂದಿದೆ.

ಬಿಡುವರು ಅಧನರ ಗಣಿಕೆಯರು ನೆರೆ
ಬಿಡುವುವು ವಿಫಲತರುವ ದ್ವಿಜಗಣ
ಬಿಡುವನು ಜಾರ ಪರವಧುವನು ನೆರೆದಿನ್ನು
ಇವು ದಿಟವಾಯಿತು ನಮ್ಮ ವಲ್ಲಭನೊಳು
ಅಕಟಕಟಾ ರಂಗವಿಠಲನು ಕರುಣಿಯೇ ॥೪॥

ಶ್ರೀಕೃಷ್ಣನ ಜೀವನದಲ್ಲಿ ಸಂಭವಿಸಿದ ಪ್ರಮುಖ ಘಟನೆಯೊಂದನ್ನು ಗೋಪಿಯರ ಬಾಯಿಯಿಂದ ಹೇಳಿಸುವ ಮೂಲಕವೇ ಹೃದಯಂಗಮವಾಗಿ ಹೆಣೆದಿದ್ದಾರೆ ಶ್ರೀಪಾದರಾಜರು ಈ ಕೃತಿಯ ಮೂಲಕ.

ಕೇಳಿದ್ಯಾ ಕೌತುಕವನ್ನು ಕೇಳಿದ್ಯಾ ॥ಪ॥

ಕೇಳಿದ್ಯಾ ಕೌತುಕವನ್ನು ನಾ
ಕೇಳಿದೆ ನಿನಗಿಂತ ಮುನ್ನು ಆಹಾ
ಚಾಳಿಕಾರ ಕೃಷ್ಣ ಪೇಳದೆ ಮಧುರೆಗೆ
ಕೋಳಿ ಕೂಗದ ಮುನ್ನ ನಾಳೆ ಪಯಣವಂತೆ ॥ಅ>ಪ॥

ಕೃಷ್ಣನನ್ನು ಕರೆದೊಯ್ಯಲು ಅಕ್ರೂರ ಬಂದಿರುವುದು, ಉಪಾಯದಿಂದ ಕರೆದೊಯ್ಯಲಿರುವುದು, ಸೋದರಮಾವನಲ್ಲಿಗೆ ಬಿಲ್ಲಹಬ್ಬಕ್ಕಾಗಿ ಕೃಷ್ಣ ಹೊರಟಿರುವುದು ಎಲ್ಲವೂ ಇಲ್ಲಿ ಗೋಪಿಯರ ಸಂಭಾಷಣೆಯ ರೂಪದಲ್ಲಿದೆ. ಹೀಗೇ ಹೊರಟುಹೋದ ಕೃಷ್ಣನ ಜೊತೆಗೇ ತಮ್ಮೆಲ್ಲರ ಮನಸ್ಸೂ ಹೋಗಿಬಿಟ್ಟಿರುವುದು "ಕೊಂಬುಕೊಳಲನೂದುತ್ತ ನಂಬಿಸಿ ಪೋದನೆಯವ್ವಾ"" ಎಂಬ ಕೀರ್ತನೆಯಲ್ಲಿಯೂ ವ್ಯಕ್ತವಾಗಿದೆ.

ಕೃಷ್ಣನ ಮಧುರೆಯ ಪಯಣವನ್ನು ಕೇಳಿ ತಿಳಿದ ಗೋಪಿಯರು ತಾಳಲಾರದೆ ಎಲ್ಲ ಸೇರಿ ಹೋಗಿ ಅವನನ್ನು ಅಡ್ಡಗಟ್ಟಿ ತಡೆದು ಹೋಗಬೇಡವೆಂದು ಗೋಗೆರೆಯುವ ಚಿತ್ರಣವು ನಾಟಕೀಯ ಗುಣದಿಂದ ಕೂಡಿಕೊಂಡು "ಮಾನನಿಧಿ ಶ್ರೀಕೃಷ್ಣ ಮಧುರೆಗೈದುವನಂತೆ ಏನು ಪಥವಮ್ಮ ನಮಗೆ" ಎಂಬ ದೀರ್ಘವಾದ ಕೀರ್ತನೆಯಲ್ಲಿದೆ. ಗೀತನಾಟಕವಾಗಿ ಪ್ರದರ್ಶಿಸಬಹುದಾದಂಥ ಕೃತಿಯಿದು. ಕೃಷ್ಣನಿಗೂ ಗೋಪಿಯರಿಗೂ ಸಂಭಾಷಣೆ ನಡೆದು ಗೋಪಿಯರ ಬೇಡಿಕೆ ಕೇಳಿ ಕೃಷ್ಣ ಅವರ ಸಂಶಯವನ್ನು ಪರಿಹರಿಸಿ ಭರವಸೆ ನೀಡುತ್ತಾನೆ, ತಾನು ಅವರನ್ನು ಬಿಟ್ಟು ಪುರದ ನಾರಿಯರಿಗೊಲಿಯುವುದಿಲ್ಲವೆನ್ನುತ್ತಾನೆ. ಸ್ವಾರಸ್ಯಕರವಾಗಿ ಸಂಭಾಷಣೆಯು ಹಾಡಿನ ರೂಪದಲ್ಲಿಯೆ ಸಾಗುವ ಪರಿ ಮನೋಜ್ಞವಾಗಿದೆ. "ಈ ಕೀರ್ತನೆ ವಿಷಯದ ದೃಷ್ಟಿಯಿಂದಲೂ ಮತ್ತು ರಚನೆಯ ದೃಷ್ಟಿಯಿಂದಲೂ ಬಲು ಮುಖ್ಯವಾದುದು. ಇಲ್ಲಿ ವೃತ್ತದಂತಿರುವ ಒಂದು ಶ್ಲೋಕವಾದ ಮೇಲೆ ಒಂದು ಪದವು ಬರುತ್ತದೆ. ಇದಕ್ಕೆ 'ವೃತ್ತನಾಮ'ವೆಂದು ಹೆಸರು"[*೧೬] ಗೋಪಿಯರ ಶ್ರೀಕೃಷ್ಣನ ಮೇಲಿನ ನಿರ್ವಾಜ್ಯ ಪ್ರೀತಿ, ಅವರ ಅಂತರಂಗದ ಮಾರ್ದವತೆ, ಅವರನ್ನು ನೋಯಿಸಲಾರದ, ಮಧುರೆಗೆ ಹೋಗದಿರಲಾಗದ ಶ್ರೀಕೃಷ್ಣನ ಸೌಮ್ಯಾಂತಃಕರಣ ಎಲ್ಲವನ್ನೂ ಶ್ರೀಪಾದರಾಜರು ಇಲ್ಲಿ ಹೃದಯಂಗಮವಾಗಿ ಚಿತ್ರಿಸಿಕೊಟ್ಟಿದ್ದಾರೆ.

"ರಂಗ ಕೊಳಲನೂದುತ ಬಂದ" "ತೆರಳಿ ನೀ ಮಧುರೆಗೆ ಗೋಕುಲದಲಿ ನಾವು ಇರಲಾರೆ, ಇರಲಾರೆವೋ ಗೋಪಾಲ" "ಇನ್ನಿವನು ಈಗ ಬರಲಿದಕೆ ಬಗೆಯೇನು" ಮುಂತಾದ ,ಇನ್ನೂ ಕೆಲವು ಕೃತಿಗಳು ಹೀಗೆ ಬಹು ಸುಂದರವಾಗಿ ಗೋಪಿಯರ ಮಧುರ ಪ್ರೀತಿಯ ಹೃದಯಾಭಿಲಾಷೆಯನ್ನು ಅನಾವರಣಗೊಳಿಸುತ್ತವೆ. ಪರಮಾತ್ಮನನ್ನು ಪ್ರೀತಿಸಲು ನೂರೆಂಟು ಭಾವಗಳು, ನೂರೆಂಟು ಪರಿಗಳು, ಹೇಗೆ ಪ್ರೀತಿಸಿ ಕರೆದರೆ ಹಾಗೆ ಬಂದು ಓಗೊಡುವ ಕರುಣಿ ಅವನೆಂದು ಶ್ರೀಪಾದರಾಜರು ಹೀಗೆ ತಮ್ಮ ಅನೇಕ ಕೃತಿಗಳಲ್ಲಿ ತೋರಿಸಿ ಕೊಟ್ಟಿದ್ದಾರೆ. ಶೃಂಗಾರ ರಸವಾಹಿನಿಯೇ ಅವರ ಮಧುರಭಾವದ ಕೃತಿಗಳಲ್ಲಿ ಮೈತುಂಬಿ ಹರಿದಿದೆ.

"ಚಿಂತೆಯನು ಮಾಡದಿರು ಚದುರೆ ನಿನಗೆ ನಾನು ಕಂತುಪಿತನನು ತೋರುವೆ" ಎಂಬ ಕೃತಿಯೊಂದು ಕೃಷ್ಣನಿಗಾಗಿ ಹಂಬಲಿಸುತ್ತಿರುವ ಗೆಳತಿಗೆ ಗೋಪಿಯೊಬ್ಬಳು ಸಂತೈಸುತ್ತ ತಾನು ಅವನನ್ನು ಕರೆತರುವುದಾಗಿಯೂ, ಅವನು ಬಂದಾಗ ಹೇಗೆ ಅವನನ್ನು ಒಲಿಸಿಕೊಳ್ಳಬೇಕೆಂದೂ ತಿಳಿಸುವ ರೀತಿಯಲ್ಲಿ ವಿಶಿಷ್ಟವಾಗಿದೆ. ಇದೂ ಕೂಡ ಶೃಂಗಾರರಸಕ್ಕೆ ಪೋಷಕವಾಗುವಂಥ ಕೃತಿಯಾಗಿದೆ. ಸಂತೋಷದಿಂದ ಸರ್ವಾಭರಣ ಧರಿಸಿ ಬಾಗಿಲಲ್ಲಿ ನಿಂತು ಕಾಯುತ್ತಿರಬೇಕಂತೆ! ಬಂದೊಡನೆ ಪಾದಾರವಿಂದಗಳನ್ನು ತೊಳೆದು ಕುಡಿಯಬೇಕಂತೆ. ಅಷ್ಟೇ ಅಲ್ಲ. ನಂತರ ಅವನನ್ನು ಬಿಗಿದಪ್ಪಿಕೊಂಡು "ಎಂದೆಂದಿಗೂ ನನ್ನನ್ನು ಅಗಲದಿರು ಎನ್ನೆ" ಎಂದು ಈ ಗೆಳತಿ ಹೇಳಿಕೊಡುತ್ತಾಳೆ!

ಆಸನವ ಕೊಟ್ಟು ಕಮಲಾಸನನ ಪಿತ
ಗೆ ಸವಿಯೂಟಗಳನುಣ್ಣಿಸಿ
ಲೇಸಾಗಿ ತಾಂಬೂಲ ತಬಕದಲಿ ತಂದಿಟ್ಟು
ವಾಸನೆಗಳನೆ ತೊಟ್ಟು
ಸೂಸುವ ಸುಳಿಗುರುಳುಗಳ ತಿದ್ದುತಲಿ ನಕ್ಕು
ಶ್ರೀಶನ್ನ ಮರೆಯ ಹೊಕ್ಕು
ಆ ಸಮಯದಲಿ ನಿನಗೆ ದಾಸಿ ಎನ್ನಯ ಮನದಿ
ವಾಸವಾಗು ಬಿಡದೆ ಎನ್ನೆ ರನ್ನೆ ॥೨॥

ಕೃಷ್ಣನಿಗಾಗಿ ಹೀಗೊಂದು ಅಭಿಸಾರಿಕೆಯಾಗಬೇಕು ಹೆಣ್ಣು ಎಂದು ಗೆಳತಿಯ ಮೂಲಕ ಹೇಳಿಸುತ್ತಿರುವ ಕವಿ ಹೀಗೆ ಈ ರೀತಿಯಲ್ಲಿ "ಶ್ರೀಕಾಂತನನು ಕೂಡಿ ಏಕಾಂತದಲಿ ರತಿಯ ಮಾಡಿ ಸಂತೋಷವನು ಪಡಿಸಿ ಸಕಲ ಭೋಗವ ತಿಳಿಸಿ ಸಂತತ ಸ್ನೇಹ ಬೆಳೆಸಿ ಅಂತರಂಗಕೆ ಹಚ್ಚಿ ಅವನಾಗಿ ತಾ ಮೆಚ್ಚಿ ಪ್ರೀತಿಯಿಂದಧರ ಕಚ್ಚಿ ಕಂತು ಕೇಳಿಯೊಳು ಕಡುಚೆಲ್ವ ರಂಗವಿಠಲ ಇಂತು ನಿನ್ನಗಲ ಕಾಣೆ-ಜಾಣೆ" ಎಂದು ಇನಿಯನನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳಲು ಹೆಣ್ಣು ಅನುಸರಿಸಬೇಕಾದ ಸಕಲ ಒಲುಮೆಯ ವಿದ್ಯೆಗಳನ್ನು ತಿಳಿಸುವುದಲ್ಲದೆ, ಪರಮಾತ್ಮನೊಲಿಯಬೇಕಾದರೆ ಅವನಿಗೆ ಸರ್ವಸ್ವವನ್ನೂ ಪ್ರೀತಿಯಿಂದ ಅರ್ಪಿಸಿ ಬದುಕಬೇಕು ಎನ್ನುವುದನ್ನೂ ಧ್ವನಿಸುತ್ತಾರೆ.

ತಿಳಿಗನ್ನಡದ ನುಡಿಯಲ್ಲಿ ಹೀಗೆ ಗೋಪಿಯರ ವಿರಹ, ಸಮಾಗಮದ ನೆನಪು, ಬಯಕೆಗಳು, ಎಲ್ಲವನ್ನೂ ರಸಾತ್ಮಕವಾಗಿ ನೀಡಿರುವ ಶ್ರೀಪಾದರಾಜರಿಗೆ ಭಾಗವತದ ದೃಷ್ಟಾಂತಗಳೇ ಮೂಲ ಆಧಾರವಾಗಿವೆಯಾದರೂ ಮಧುರ ಭಾವದ ಅವರ ಕೀರ್ತನೆಗಳಿಗೆಲ್ಲ ಅವರ ಕವಿಹೃದಯದ ರಸಾನುಭವದ ಮಿಡಿತವೂ ಮೂಲ ಕಾರಣವಾಗಿದೆ ಎನ್ನಬಹುದು.

"ಕನ್ನಡದಲ್ಲಿ ಗೋಪಿಗೀತ, ವೇಣುಗೀತ ಮತ್ತು ಭ್ರಮರಗೀತಗಳನ್ನು ರಚಿಸಿದ ರಸಿಕರಲ್ಲಿ ಶ್ರೀಪಾದರಾಜರಿಗೆ ಅಗ್ರಮರ್ಯಾದೆ ಸಲ್ಲುತ್ತದೆ"[•೧೭] ಶ್ರೀಪಾದರಾಜರ ಭ್ರಮರಗೀತೆಗೂ ಭಾಗವತದಲ್ಲಿ ನಿರೂಪಿತವಾಗಿರುವ ಭ್ರಮರಗೀತೆಯೇ ಪ್ರೇರಕವಾದರೂ ಶ್ರೀಪಾದರಾಜರಲ್ಲಿ ಇದೊಂದು ರಸಾತ್ಮಕವಾದ ಸ್ವತಂತ್ರವಾದ ಭಾವಗೀತೆಯಂತೆ ಹೊಮ್ಮಿದೆ. ಸಂಸ್ಕೃತ ಮೂಲದಲ್ಲಿ ಹದಿನೇಳು ಶ್ಲೋಕಗಳಿದ್ದರೆ ಕನ್ನಡದಲ್ಲಿ ಅಷ್ಟಪಾದಗಳುಳ್ಳ ಒಂಬತ್ತು ನುಡಿಗಳಲ್ಲಿ ಭ್ರಮರಗೀತದ ರಚನೆಯಾಗಿದೆ.

ಗೋಕುಲಕ್ಕೆ ಬಂದಿರುವ ಉದ್ಧವನೊಡನೆ ಗೋಪಿಯರೆಲ್ಲ ಮಾತಾಡುತ್ತಿರುವಾಗ ದುಂಬಿಯೊಂದು ಅಲ್ಲಿಗೆ ಝೇಂಕರಿಸುತ್ತ ಬರುತ್ತದೆ. ತಮ್ಮ ಬಳಿ ಬಂದ ಈ ಭ್ರಮರವನ್ನು ಶ್ರೀಕೃಷ್ಣನ ದೂತನಿರಬೇಕೆಂದು ತಿಳಿದು ಗೋಪಿಯರೆಲ್ಲ ಅದರೊಂದಿಗೆ ತಮ್ಮ ಅಗಲಿಕೆಯ ಬೇಗುದಿಯನ್ನು ವ್ಯಕ್ತಪಡಿಸುತ್ತಾರೆ. ಕೃಷ್ಣನ ಯೋಗಕ್ಷೇಮ ಕುರಿತು ವಿಚಾರಿಸಿಕೊಳ್ಳುತ್ತಾರೆ. ಕೃಷ್ಣನೊಂದಿಗೆ ಕಳೆದ ತಮ್ಮ ಹಳೆಯ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ. ತಮ್ಮನ್ನು ಒತ್ತರಿಸಿ ಮಧುರೆಗೆ ಹೇಗೆ ಹೊರಟುಹೋದನೆಂದು ವಿಲಪಿಸುತ್ತಾರೆ.

ಅಬ್ಜಭವ ಮುನಿಜನ ಪೂಜ್ಯನಗಲಿದ ಮ್ಯಾಲೆ
ನಿರ್ಜೀವಿಗಳಾಗಿ ಕಣ್ಣ ಕಜ್ಜಲ ಕಲಕಿಕೊಂಡು
ಲಜ್ಜೆಗೆಟ್ಟು ತನುಲತೆ ಜರ್ಝರಿತದಿ ಜೀವಿಸೆ
ವಜ್ಜರೆದೆಯಲ್ಲವೆ ನಮ್ಮದು ಹೇ ಕಿತವಾ ॥

ಎಂದು ತಮ್ಮನ್ನು ತಾವೇ ನಿಂದಿಸಿಕೊಳ್ಳುತ್ತಾರೆ. ಭಾಗವತ ಮೂಲದಲ್ಲಿ ಗೋಪಿಯರು ಒಂದೇಸಮನೆ ಕೃಷ್ಣ ಮೋಸ ಮಾಡಿ ಹೋದನೆಂದು ಪರಿತಪಿಸುವ ಚಿತ್ರಣವಿದೆ. ಆದರೆ ಶ್ರೀಪಾದರಾಜರ ಕನ್ನಡ ರಚನೆಯಲ್ಲಿ ಗೋಪಿಯರು ತಮ್ಮ ದುಃಖದಲ್ಲೇ ಲಕ್ಷ್ಮೀರಮಣನಾದ ಅವನಿಗೂ ಕೇವಲ ಸಾಧಾರಣ ನಾರಿಯರಾದ ತಮಗೂ ಬಾಂಧವ್ಯವುಂಟೆ ಎಂದು ತಾರತಮ್ಯಭಾವದಿಂದ ವಿವೇಚಿಸಿಕೊಳ್ಳುತ್ತಾರೆ. ಲೋಕರಕ್ಷಕನಾದ ಆ ಸ್ವಾಮಿಯನ್ನು 'ನರರಸಾಮ್ಯ'ನೆಂದು ಬಗೆಯುವುದು ತಮ್ಮ 'ಅಕ್ಷಮ್ಯ ಅಪರಾಧ'ವೆಂದು ಹೇಳುವುದು ಶ್ರೀಪಾದರಾಜರದ್ದೇ ವಿಶಿಷ್ಟ ದೃಷ್ಟಿಕೋನವಾಗಿ ಬಂದಿದೆ. ಈಗ ಅವನೊಂದಿಗೆ ರಮಿಸುವ ಮಧುರೆಯ ಮಾನಿನಿಯರು ಪುಣ್ಯವಂತರೆಂದೂ ಅವನು ತಮ್ಮೊಂದಿಗಿದ್ದಾಗ ತಾವೇನಾದರೂ ತಪ್ಪಿ ನಡೆದಿದ್ದರೆ ಕ್ಷಮಿಸಬೇಕೆಂದು ಕೃಷ್ಣನಲ್ಲಿ ತಿಳಿಸುವ ಗೋಪಿಯರ ಮನಃಪಾಕ ಮೆಚ್ಚುಗೆಗಳಿಸುತ್ತದೆ, ಇನ್ನುಳಿದ ತಮ್ಮ ದಿನಗಳನ್ನು ಅವನೊಂದಿಗೆ ಕಳೆದ ರಸಗಳಿಗೆಗಳನ್ನು ನೆನೆಯುತ್ತ, ಅವನನ್ನೇ ಹಾಡುತ್ತ ಹೊಗಳುತ್ತ ಕಳೆಯುವೆವೆಂದು ಹೇಳುತ್ತಾರೆ.

ಹೀಗೆ ಶ್ರೀಪಾದರಾಜರು 'ಭ್ರಮರಗೀತ' ದಲ್ಲಿ ಮೂಲಕ್ಕಿಂತ ಭಿನ್ನವಾಗಿ ಗೋಪಿಯರ ಪ್ರೇಮವು ನಿರ್ಮಲವೂ, ನಿರಸೂಯಾಪರವೂ, ನಿಷ್ಕಾಪಟ್ಯದಿಂದ ಕೂಡಿದ್ದು ಎಂದೂ ಸಾಧಿಸಿ ತೋರಿಸಿದ್ದಾರೆ. "ಈ ಕೃತಿಯ ಉದ್ದಕ್ಕೂ ಗೋಪಿಯರ ಮೊರೆ ತೊರೆಯಾಗಿ ಹರಿದಿರುವುದು ಅನುಭವಕ್ಕೆ ಬರುತ್ತದೆ. ಅದು ಗೋಪಿ-ಕೃಷ್ಣರ ನಡುವಿನ ಮಧುರಭಾವದ ತೊರೆ"[•೧೮]

ಇನ್ನಿತರ ರಚನೆಗಳು

ಶ್ರೀಪಾದರಾಜರ ಕೃತಿಗಳಲ್ಲಿ ಈ ವರೆಗೂ ಕಂಡಂತೆ ನಾಟಕೀಯ ಗುಣವು ಬೇಕಾದಹಾಗೆ ತುಂಬಿಕೊಂಡಿರುವುದಕ್ಕೆ ಮತ್ತೂ ಒಂದು ಸಾಕ್ಷಿಯಾಗಿ ನಿಲ್ಲಬಲ್ಲ ಕೃತಿ "ವೃಷಭನೇರಿದ ವಿಷಧರನ್ಯಾಕೆ ಪೇಳಮ್ಮಯ್ಯ" ಎಂದು ಪ್ರಾರಂಭವಾಗಿದೆ. ಈಶ್ವರನ ಮೇಲೆ ಶ್ರೀಪಾದರಾಜರು ರಚಿಸಿದ ಒಂದೇ ಒಂದು ಕೀರ್ತನೆಯಿದೆನ್ನಲಾಗಿದೆ. ಈ ಕೃತಿಯ ನಿರೂಪಣೆ ಸ್ವಾರಸ್ಯಕರವಾಗಿದೆ. ಗೆಳತಿ ಕೇಳಿದ ಮೇಲಿನ ಪ್ರಶ್ನೆಗೆ ಶಿವನ ಪರಿಚಯವನ್ನು ನೀಡುತ್ತ ಹೋಗುತ್ತಾಳೆ ಮತ್ತೊಬ್ಬಳು. ವೈರಾಗ್ಯದ ಪ್ರತಿಮೂರ್ತಿಯಾದ ಶಿವನ ಲೀಲೆಗಳನ್ನು ಸೊಗಸಾಗಿ ಬಣ್ಣಿಸಲಾಗಿದೆ. ಹರಿಯ ಮೋಹಿನೀ ರೂಪವನ್ನು ನೋಡಬಯಸಿದ ಶಿವ ಮೋಹಿನಿಯನ್ನು ಕಂಡು ಮೋಹವಶನಾಗಿದ್ದು, ಕಡೆಗೆ ಅದು ವಿಷ್ಣುವೆಂದರಿತಾಗ ನಾಚಿ ಕ್ಷಮಾಪಣೆ ಕೇಳುವುದು ಹೀಗೆ ಸೊಗಸಾದ ನಾಟಕೀಯತೆ ತಂದಿದ್ದಾರೆ.

ಮಧ್ವಾಚಾರ್ಯರ ತತ್ತ್ವದ ಪ್ರಕಾರ ಈಶ್ವರ ರುದ್ರನಾಮದಿಂದ ಹರಿಯ ಮೊಮ್ಮಗ ಎನಿಸಿಕೊಂಡು ಮನೋಭಿಮಾನಿ ದೇವತೆಯಾಗಿದ್ದಾನೆ. "ಬಿಡಿ ಬಿಡಿ ಸಂದೇಹವನು ಮೂಡವಿ ಮನುಜರೆಲ್ಲ, ಒಡೆಯನೊಬ್ಬನೆ ಜಗಕೆ ರಂಗವಿಠಲ" ಎಂಬ ಕೀರ್ತನೆಯಲ್ಲಿಯೂ ಹರಿಸರ್ವೋತ್ತಮ ತತ್ವವೇ ಪ್ರತಿಪಾದಿತವಾಗಿದೆ. ಇನ್ನೊಂದು ಕೃತಿಯಲ್ಲಿ ಹರಿಹರರು ಸಮಾನರಾಗಿರದೆ ಹರಿಯೇ ಶ್ರೇಷ್ಠನೆಂದು ಸಾಧಿಸಲಾಗಿದೆ. ಈ ಕೃತಿಯ ಪ್ರಾರಂಭದ ಸಾಲುಗಳು ಹೀಗೆ ಪಲ್ಲವಿಯಾಗಿವೆ.

> ಹರಿಹರರು ಸರಿಯೆಂಬ ಮರುಳು ಜನರು
> ಹರಿಹರರ ಚರಿತೆಯನು ತಿಳಿದು ಭಜಿಸುವುದು ॥ಪ॥

ಹಲವಾರು ಪೌರಾಣಿಕ ಕಥೆಗಳನ್ನು ನಿದರ್ಶಿಸುವ ಮೂಲಕ ಹರಿಯೇ ಮೇಲ್ಮೆ ಉಳ್ಳವನೆಂದು ತೋರಿದ್ದಾರೆ. ಹನ್ನೊಂದು ನುಡಿಗಳ ಈ ದೀರ್ಘ ಕೃತಿಯಲ್ಲಿ ಶ್ರೀಹರಿಯೇ ಅಧಿಕನು, ದುಷ್ಟ ಶಿಕ್ಷಕನು, ಶಿಷ್ಟ ರಕ್ಷಕನು ಎಂಬುದಕ್ಕೆ ಪ್ರಾಮಾಣ್ಯವನ್ನೂ ಪುರಾಣಕಥೆಗಳಿಂದಲೇ ಆಯ್ದು ನಿರೂಪಿಸಿದ್ದಾರೆ. ನಂತರ ಬೆಳೆದ ಹರಿದಾಸ ಪರಂಪರೆಯಲ್ಲಿಯೂ ಪುರಾಣಕಥೆಗಳ ಬಳಕೆಯು ಒಂದು ಸಂಪ್ರದಾಯವಾಗಿ ಬೆಳೆದು ಬಂದಿತು ಎನ್ನುವುದನ್ನು ಗಮನಿಸಿದಾಗ ಶ್ರೀಪಾದರಾಜರು ಹಾಕಿಕೊಟ್ಟ ಮೇಲ್ಪಂಕ್ತಿಯ ಅರಿವು ಮೂಡುತ್ತದೆ. ಹರಿದಾಸರಿಗೆ ಹೀಗೆ ಹತ್ತು ಹಲವು ಬಗೆಯ ಸಾಹಿತ್ಯ ರಚನೆಯ ಹೆದ್ದಾರಿಗಳನ್ನು ತೆರೆದುತೋರಿಸಿದವರು ಶ್ರೀಪಾದರಾಜರು.

ಶ್ರೀಪಾದರಾಜರ ನಿಡಿದಾದ ರಚನೆ ಎಂದರೆ "ಶ್ರೀಲಕ್ಷ್ಮೀನೃಸಿಂಹ ಪ್ರಾದುರ್ಭಾವ ದಂಡಕಂ" ಶ್ರೀವಿಷ್ಣುವು ನರಸಿಂಹಾವತಾರವೆತ್ತಿ ಹಿರಣ್ಯಕಶಿಪುವನ್ನು ಸಂಹರಿಸಿ ಪ್ರಹ್ಲಾದನನ್ನು ಅನುಗ್ರಹಿಸಿದುದೇ ಈ ಕಾವ್ಯದ ಕಥಾವಸ್ತು. ಭಾಗವತದಲ್ಲಿ ಉಕ್ತವಾದ ಕಥೆಯ ಬಹುಭಾಗವನ್ನು ಇಲ್ಲಿ ಅನುವಾದಿಸಿದ್ದಾರೆ.

"ಶ್ರೀಪಾದರಾಜರು ರಚಿಸಿರುವ ಈ ದಂಡಕದಲ್ಲಿ ಪ್ರತಿಯೊಂದು ಪಾದದಲ್ಲಿಯೂ ಐದೈದು ಮಾತ್ರೆಯ ನಾಲ್ಕು ಗಣಗಳಿದ್ದು, ಪ್ರಾಸ ನಿರ್ಬಂಧವಿಲ್ಲದೆ ನಿರರ್ಗಳವಾಗಿ ಸಾಗುತ್ತದೆ. ಶ್ರೀಪಾದರಾಜರು ಈ ಕ್ರಮವನ್ನು ಯಾವ ಮೇಲುಪಂಕ್ತಿಯನ್ನು ಅನುಸರಿಸಿ ರಚಿಸಿರುವರೋ ತಿಳಿಯದು. ಕನ್ನಡದಲ್ಲಿ ಈ ಮೊದಲೇ ಪ್ರಚಲಿತವಾಗಿದ್ದ ಲಲಿತರಗಳೆಯಲ್ಲಿರುವ ಪ್ರಾಸನಿಯಮವನ್ನು ಬಿಟ್ಟು ಆಧುನಿಕ ಕನ್ನಡ ಕವಿಗಳು ಬಳಕೆಗೆ ತಂದಿರುವ ಸರಳರಗಳೆಯನ್ನು ಈ ದಂಡಕವೂ ಹೋಲುತ್ತಿರುವುದು ತುಂಬ ಕುತೂಹಲಕಾರಿಯಾಗಿದೆ"[*೧೯] "ಈ ರಚನೆಯ ನಿರರ್ಗಳವಾದ ಶೈಲಿ ಹೇಗೆ ಆಹ್ಲಾದಕಾರಿಯಾಗಿದೆಯೋ ಹಾಗೆಯೇ ಅಲ್ಲಲ್ಲಿಯೇ ಬಳಸಿರುವ ವ್ಯಾವಹಾರಿಕ ಕನ್ನಡದ ಪ್ರಯೋಗಗಳೂ ಸಹ ವಿಶಿಷ್ಟವಾಗಿವೆ"[*೨೦]

ಒಟ್ಟು ಐದುನೂರ ನಲವತ್ತಾರು ಸಾಲುಗಳಲ್ಲಿ ಇರುವ ಈ ಕೃತಿಯು ಭಾಷಾ ಪ್ರಯೋಗದ ಅಭ್ಯಾಸಕ್ಕೂ ಯೋಗ್ಯವಾಗಿದೆ. ದಂಡಕ ರಚನೆಯು ಮುಂದಿನ ಹರಿದಾಸ ಸಾಹಿತ್ಯದಲ್ಲಿ ಮುಂದುವರೆಯಲಿಲ್ಲ. "ಇದುವರೆಗೆ ಹರಿದಾಸ ಸಾಹಿತ್ಯದಲ್ಲಿ ಸಿಕ್ಕಿರುವ ದಂಡಕ ಇದೊಂದೇ"[*೨೧]

ಶ್ರೀಪಾದರಾಜರು ರಚಿಸಿದ 'ಮಧ್ವನಾಮ' ಗುರುವಂದನೆಯ ಕೀರ್ತನೆಯಾಗಿದ್ದು ಆಚಾರ್ಯ ಮಧ್ವರನ್ನು ಕುರಿತ ಸ್ತುತಿಯಾಗಿದೆ. ಇದು ಹರಿದಾಸ ಸಾಹಿತ್ಯ ಪರಂಪರೆಯಲ್ಲೇ ಬಹಳ ಪ್ರಸಿದ್ಧವಾಗಿ ಉಳಿದು ಬಂದಿದೆ. ಮಧ್ವಮತದ ಮುಖ್ಯ ನಂಬಿಕೆಯಾಗಿರುವಂತೆ ಆಚಾರ್ಯ ಮಧ್ವರ ಮೂಲವು ವಾಯುವಿನಿಂದ ಬಂದಿತೆನ್ನಲಾಗಿದೆ. ತ್ರೇತಾಯುಗದಲ್ಲಿ ಹನುಮನಾಗಿ, ದ್ವಾಪರಯುಗದಲ್ಲಿ ಭೀಮನಾಗಿ ಕಲಿಯುಗದಲ್ಲಿ ಮಧ್ವಾಚಾರ್ಯರಾಗಿ ವಾಯುವು ಅವತಾರ ತ್ರಯ ಮಾಡಿರುವುದನ್ನು ಈ ಕೀರ್ತನೆಯು ಚಿತ್ರಿಸುತ್ತದೆ. "ಜಯ ಜಯ ಜಗತ್ರಾಣ ಜಗದೊಳಗೆ ಸುತ್ರಾಣ ಅಖಿಳಗುಣ ಸದ್ಧಾಮ ಮಧ್ವನಾಮ" ಎಂದು ಪ್ರಾರಂಭವಾಗುವ ಈ ಕೀರ್ತನೆಯು ಇಪ್ಪತ್ತೇಳು ನುಡಿಗಳಲ್ಲಿ ಸಾಗಿ ಆಚಾರ್ಯ ಮಧ್ವರ ಮೂರು ಅವತಾರಗಳ ಹಿರಿಮೆ, ಮಹಿಮೆಗಳನ್ನು ಶ್ರದ್ಧಾಭಕ್ತಿಗಳಿಂದ ಕೊಂಡಾಡುತ್ತದೆ.

ಆವವನು ದೇಹದೊಳಗಿರಲು ಹರಿ ನೆಲಸಿಹನು
ಆವವನು ತೊಲಗೆ ಹರಿ ತಾನು ತೊಲಗುವ
ಆವವನು ದೇಹದಾ ಒಳಹೊರಗೆ ನಿಯಾಮಕನು
ಆ ವಾಯು ನಮ್ಮ ಕುಲ ಗುರುರಾಯನು ॥೨॥

ಹೀಗೆ ಪ್ರಾಣದೇವರೇ (ವಾಯುದೇವರು) ನಮ್ಮ ಕುಲಕ್ಕೆ ಗುರುವು ಎಂದು ಸಾರಿ ಹೇಳುತ್ತ ಮಾಧ್ವಮತದ ನಂಬಿಕೆಯನ್ನು ಪ್ರತಿಪಾದಿಸಿದ್ದಾರೆ. ಪ್ರಾಣವು ದೇಹದೊಳಗಿರುವಾಗ ಮಾತ್ರ ಚೈತನ್ಯವು (ಹರಿಯು) ನಮ್ಮಲ್ಲಿ ನೆಲೆಸಿರುತ್ತದೆ. ಪ್ರಾಣ ಹೊರಟುಹೋದರೆ ಚೈತನ್ಯವೂ ಹೊರಟುಹೋಗುವುದು ಸಹಜ ಎನ್ನುವುದನ್ನು, ಪ್ರಾಣವು

ಗಾಳಿಯ (ವಾಯುವಿನ) ಉಸಿರಾಟರೂಪದಲ್ಲಿ ನಮ್ಮೊಳಗಿದ್ದರಷ್ಟೆ ನಾವು ಚೇತನ ರೂಪಿಗಳು ಎಂದು ಈ ಸತ್ಯವನ್ನು ಪರಿಭಾವಿಸಿದಾಗ ಮೇಲಿನ ನುಡಿಗಳು ವೈಜ್ಞಾನಿಕವಾಗಿಯೂ ಇವೆಯೆನ್ನಬಹುದು.

ಶ್ರೀಪಾದರಾಜರ 'ಮಧ್ವನಾಮ' ಕೃತಿಯ ಶ್ರೇಷ್ಠತ್ವವನ್ನು ಮುಂದೆ ಕಾಲಾಂತರದಲ್ಲಿ ಬಂದ (೧೭೨೮-೧೮೦೯) ಜಗನ್ನಾಥದಾಸರು ತಮ್ಮ ಮೂರು ನುಡಿಗಳ ಫಲಸ್ತುತಿಯ ಮೂಲಕ ಸಾರಿಹೇಳಿದ್ದಾರೆ. ಶ್ರೀಪಾದರಾಜರ ಕಾಲಕ್ಕೆ ಸುಮಾರು ಮುನ್ನೂರು ವರ್ಷಗಳ ನಂತರ ಬಂದವರು ಹಾಗೂ ಹರಿದಾಸ ಪರಂಪರೆಯಲ್ಲಿ ಹೆಸರುವಾಸಿಯಾದವರು ಜಗನ್ನಾಥದಾಸರು. ಅವರ ಪ್ರಕಾರ ಈ ಮಧ್ವನಾಮವನ್ನು ಬರೆದು ಓದಿ ಕೇಳಿದವರಿಗೆ ತುಂಬ ಪುಣ್ಯಫಲವಿದೆ. ಗ್ರಹಣ ಕಾಲದಲ್ಲಿ, ಗಂಗಾನದಿಯ ದಡದಲ್ಲಿ ಸಹಸ್ರಗೋವುಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದ ಫಲ ಬರುತ್ತದೆ. ಅಷ್ಟೇ ಅಲ್ಲ, ಮಕ್ಕಳಿಲ್ಲದವರಿಗೆ ಒಳ್ಳೆಯ ಮಕ್ಕಳು ಜನಿಸುತ್ತಾರೆ. ಶತ್ರುಗಳು ನಾಶವಾಗಿ ಸರ್ವತ್ರದಲ್ಲೂ ದಿಗ್ವಿಜಯ ಪ್ರಾಪ್ತಿಯಾಗುತ್ತದೆ. ಅಪಮೃತ್ಯು ಬರುವುದಿಲ್ಲ ಎನ್ನುತ್ತ ಕಡೆಯಲ್ಲಿ ಜಗನ್ನಾಥದಾಸರು ಹೀಗೆನ್ನುತ್ತಾರೆ.

ಶ್ರೀಪಾದರಾಯ ಹೇಳಿದ ಮಧ್ವನಾಮ ಸಂ
ತಾಪ ಕಳೆದಖಿಳ ಸೌಖ್ಯವನೀವುದು
ಶ್ರೀಪತಿ ಜಗನ್ನಾಥ ವಿಠಲನ ತೋರಿ ಭವ
ಕೂಪಾರದಿಂದ ಕಡೆ ಹಾಯಿಸುವುದು ॥

ಹೀಗೆ ಶ್ರೀಪಾದರಾಜರ 'ಮಧ್ವನಾಮ' ಕೃತಿ ಪ್ರಸಿದ್ಧ ಗುರುವಂದನೆಯಾಗಿ ಇಂದಿಗೂ ಮಾಧ್ವಮತದ ಜನಾಂಗದವರಲ್ಲಿ ಉಳಿದು ಬಂದಿದೆ.

"ಮರುದಂಶರ ಮತ ಪಿಡಿಯದೆ ಇಹಪರದಲ್ಲಿ ಸುಖವಿಲ್ಲವಂತೆ" ಎಂಬ ಇನ್ನೊಂದು ಕೀರ್ತನೆ ಕೂಡ ಶ್ರೀಪಾದರಾಜರ ಗುರುಭಕ್ತಿ, ನಿಷ್ಠೆಗಳನ್ನು ಸಾರುತ್ತವೆ. "ಅರಿತು ವಿವೇಕದಿ ಮರೆಯದೆ ನಮ್ಮ ಗುರುರಾಯರ ನಂಬಿ ಬದುಕಿರೋ" ಎಂದಿಲ್ಲಿ ಅವರು ಸಾರಿ ಹೇಳುತ್ತಾರೆ. ಮತ್ತೊಂದು ಕೃತಿಯಲ್ಲಿ "ಮಾಯಮತವೊಳಿತಲ್ಲ ನಿನಗೆ, ನಾಯಿ ಜನ್ಮವು ಬಾರದೆ ಬಿಡದಲ್ಲ" ಎಂದು ನೇರವಾಗಿ ಎಚ್ಚರಿಸುವಲ್ಲಿ ಅದ್ವೈತ ಮತ ಖಂಡನೆಯಿದೆ. ಅದ್ವೈತ ಮತದ ಮಾಯವಾದ ಮತ್ತು ಅಭೇದ ತತ್ವವನ್ನು ಇಲ್ಲಿ ಅಲ್ಲಗೆಳೆಯುತ್ತ ಕೆಲವು ಲೌಕಿಕ ನಿದರ್ಶನಗಳ ಮೂಲಕ ಪ್ರಶ್ನಿಸಿದ್ದಾರೆ. ಭೇದ ಎಂಬುದು ಈ ಜಗತ್ತಿನ ಎಲ್ಲ ಅಂಶಗಳಲ್ಲೂ, ನಡವಳಿಕೆಗಳಲ್ಲೂ ಇದ್ದೇ ಇದೆ ಎನ್ನುವುದನ್ನು ತೋರಿಸುತ್ತ ಅಭೇದ ತತ್ವವನ್ನು ಖಂಡಿಸಿದ್ದಾರೆ. ಕೇವಲ ತಾತ್ವಿಕ ದೃಷ್ಟಿಯಿಂದ ಈ ಭೇದವನ್ನು ಒಪ್ಪಿಕೊಂಡು ವ್ಯಾವಹಾರಿಕವಾಗಿ ತಾರತಮ್ಯಗಳನ್ನು ಆಚರಿಸುವುದಕ್ಕಿಂತಲೂ ಭೇದಮತವನ್ನು ಬೋಧಿಸುವ ದ್ವೈತಮತವನ್ನು ಗೌರವಿಸಬೇಕೆಂದು ಇಲ್ಲಿನ ವಾದಸರಣಿ."[೨೨]

ಮುಂದೆ ಶ್ರೀಪಾದರಾಜರಲ್ಲಿ ಶಿಷ್ಯತ್ವ ವಹಿಸಿದವರು 'ದಾಸಕೂಟ'ದ ವಿಶಿಷ್ಟ ವಿಶಾಲ ಬೆಳವಣಿಗೆಗೆ ಕಾರಣರಾದ ಶ್ರೀವ್ಯಾಸತೀರ್ಥರು. ಬಹಳ ಪ್ರಭಾವಶಾಲೀ ವ್ಯಕ್ತಿತ್ವದವರೂ, ಧಾರ್ಮಿಕ ಮತ್ತು ಲೋಕವ್ಯವಹಾರದಲ್ಲೂ ಯಶಸ್ವಿಗಳಾಗಿದ್ದ ವ್ಯಾಸತೀರ್ಥರ ಬಗ್ಗೆ ಶ್ರೀಪಾದರಾಜರು ಮನದುಂಬಿ ಎರಡು ಕೀರ್ತನೆಗಳನ್ನು ರಚಿಸಿದ್ದಾರೆ. "ಇದಿರದಾವನು ನಿನಗೀಧರೆಯೊಳು ಪದುಮನಾಭನ ದಾಸ ಪರಮೋಲ್ಲಾಸ" ಎಂಬ ತಮ್ಮ ಕೀರ್ತನೆಯಲ್ಲಿ ವ್ಯಾಸರಾಯರ ವ್ಯಕ್ತಿತ್ವ ಚಿತ್ರಣ ನೀಡಿದ್ದಾರೆ. "ಸಾಸಿರ ಜಿಹ್ವೆಗಳುಳ್ಳ ಶೇಷನೆ ಕೊಂಡಾಡಬೇಕು ವ್ಯಾಸಮುನಿರಾಯರ ಸಂನ್ಯಾಸದಿರವ" ಎಂದು ಶಿಷ್ಯನನ್ನು ಮತ್ತೊಂದು ಕೀರ್ತನೆಯಲ್ಲಿ ತಾನು ಗುರುವೆಂಬ ಹಮ್ಮುಬಿಮ್ಮಿಲ್ಲದೆ ಹೃದಯತುಂಬಿ ಸ್ತುತಿಸಿದ್ದಾರೆ. ಹಾಗೆ ಶ್ರೀಪಾದರಾಜರು "ಗುಣಕ್ಕೆ ಮತ್ಸರವಿಲ್ಲ" ಎಂಬುದನ್ನು ಸಾಧಿಸಿ ತೋರಿಸಿದ್ದಾರೆ. ವ್ಯಾಸರಾಯರು ಕೂಡ ತಮ್ಮ ಕೀರ್ತನೆಗಳ ಮೂಲಕ ಶ್ರೀಪಾದರಾಜರ ಗುಣಗಾನ ಮಾಡಿರುವುದನ್ನು ತಿಳಿಯಬಹುದಾಗಿದೆ.

ಹೀಗೆ ತಮ್ಮ ರಚನೆಗಳ ಮೂಲಕ, ದೇಗುಲದ ಪೂಜೆಗಳಲ್ಲಿ ಕನ್ನಡ ಹಾಡುಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಕನ್ನಡ ವಾಙ್ಮಯಕ್ಕೇ ಮಿಗಿಲಾದ ಒಂದು ಗೌರವವನ್ನು ತಂದವರು ಶ್ರೀಪಾದರಾಜರಾಗಿದ್ದಾರೆ. ಹೊಸಗನ್ನಡ ಶೈಲಿಯೊಂದರ ಪ್ರಾದುರ್ಭಾವವಾಗಿದ್ದು ಶ್ರೀಪಾದರಾಜರಿಂದಲೇ ಎನ್ನುವುದು ಒಪ್ಪಬೇಕಾದ ಸಂಗತಿ. ಮುಂದೆ ತೊರವೆ ರಾಮಾಯಣ, ಕನ್ನಡ ಭಾರತ ಮುಂತಾದ ಗ್ರಂಥಗಳು ರಚಿತವಾದುದಕ್ಕೆ ಪ್ರೇರಣೆ ಶ್ರೀಪಾದರಾಜರ ರಚನೆ, ಶೈಲಿ.

ಮಠಾಧಿಪತಿಗಳೂ, ಸಂಪ್ರದಾಯ ಆಚರಣೆಯಲ್ಲಿದ್ದವರೂ, ಮಹಾನ್ ಶಾಸ್ತ್ರ ಪಂಡಿತರೂ ಆಗಿದ್ದ ಶ್ರೀಪಾದರಾಜರು ವಿಜಯನಗರದ ಅರಸರಿಂದ ಸನ್ಮಾನಿತರಾಗಿದ್ದವರು. ಆದರೆ ಎಲ್ಲಿಯೂ ತಾನು ಪಂಡಿತನೆನ್ನುವ ಗೋಜಿಗೆ ಹೋಗದೆ, ವೇದಾಂತ ವಾಕ್ಯಾರ್ಥಗಳಲ್ಲಿ ಜಯಗಳಿಸಿಯೂ ಆ ಯಶಸ್ಸಿನಿಂದ ಬೀಗದೆ 'ಕನ್ನಡ'ವನ್ನು ತುಂಬು ಪ್ರೀತಿಯಿಂದ ಕೈಗೆತ್ತಿಕೊಂಡು ಕನ್ನಡದಲ್ಲಿಯೇ ನಾನಾ ಪ್ರಕಾರಗಳ ಭಕ್ತಿಸಾಹಿತ್ಯ ರಚಿಸಿ, ದ್ವೈತ ಮತ ಸಿದ್ಧಾಂತವನ್ನು ಕನ್ನಡದಲ್ಲಿಯೇ ಹೃದಯ ಸ್ಪರ್ಶಿಯಾಗಿ ಸಾರಿ ಜನಸಾಮಾನ್ಯರ ಪ್ರೀತಿಯ ಗುರುವಾಗಿದ್ದವರು. ಈ ಹಿರಿಯ ಜೀವಿಯ ಆದರ್ಶ ಮುಂದೆಯೂ ಫಲನೀಡಿ ದಾಸಸಾಹಿತ್ಯ ವಿಪುಲವಾಗಿ ರಚಿತವಾಗಲು ಪ್ರೇರಣೆಯಾಯಿತು, ದಾರಿ ನಿರ್ಮಾಣವಾಯಿತು. ಮುಂದೆ ಬಂದ ದಾಸಕೂಟಕ್ಕೆ ಇವರ ಪ್ರಭಾವ, ಮಾರ್ಗದರ್ಶನ ಸಿದ್ಧಹಾದಿಯಾಯಿತು. ಎಂತಲೇ ಶ್ರೀಪಾದರಾಜರು ದಾಸಪಂಥದ ಪ್ರವರ್ತಕರೆಂದೇ ಸ್ಮರಣೀಯರಾಗಿದ್ದಾರೆ.

* * * * * *

ಅಡಿಟಿಪ್ಪಣಿಗಳು :

೧. "ಉತ್ತಮರ ಸಂಗ ಎನಗಿತ್ತು ಸಲಹೋ" ಶ್ರೀಪಾದರಾಜರ ಕೃತಿ.

೨. "ಇಷ್ಟು ಪಾಪವನೆ ಮಾಡಿದ್ದು ಸಾಕೋ, ಸೃಷ್ಟಿಕರ್ತನೆ ನೀನೆನ್ನ ಉದ್ಧರಿಸಬೇಕೋ"– ಪುರಂದರದಾಸರ ಕೀರ್ತನೆ.

೩. ಅದೇ ಕೀರ್ತನೆಯ ಒಂದು ನುಡಿ : ಒಡಲ ಕಿಚ್ಚಿಗೆ ಪರರ ಕಡುನೋಯಿಸಿದೆ ಕೃಷ್ಣಾ
ಬಿಡದೆ ಅನ್ಯರ ಋಣವಾ ಅಪಹರಿಸಿದೆ।
ಮಡದಿಯರ ನುಡಿ ಕೇಳಿ ಒಡಹುಟ್ಟಿದವರೊಡನೆ
ಹಡೆದ ತಾಯಿಯ ಕೂಡೆ ಹಗೆ ಮಾಡಿದೆ ಕೃಷ್ಣಾ॥ ಇಷ್ಟು॥

ಅದೇ ಕೀರ್ತನೆಯ ಮತ್ತೊಂದು ನುಡಿ : ವ್ರತ ನೇಮ ಉಪವಾಸ ಒಂದು ದಿನವು ಮಾಡಲಿಲ್ಲ
ಅತಿಥಿಗಳಿಗನ್ನವಾ ನೀಡಲಿಲ್ಲಾ
ಶ್ರುತಿ ಶಾಸ್ತ್ರ ಪುರಾಣ ಒಂದು ದಿನವು ಕೇಳಲಿಲ್ಲ
ವ್ಯರ್ಥವಾಗಿ ಬಹುಕಾಲ ಗತವಾಯಿತಲ್ಲಾ ॥ಇಷ್ಟು॥

೪. ಅನ್ನಂತ ಕಾಲದಲಿ ನಿನ ನಾನರಿಯದೆ ಭವಗಳಲ್ಲಿ ಬಂದೆನೋ
ಅನ್ನಂತ ಕಾಲದಲಿ ನಿನ್ನವೆನಿಸದೆ ಮೂರ್ಖನಾದೆನೋ
ಅನ್ನಂತ ಕಾಲದಲಿ ನಿನ್ನ ಚರಣರತಿಯಿಲ್ಲದೆ ನೊಂದೆನೋ
ಅನ್ನಂತ ಕಾಲದಲಿ ಅದಾವ ಪುಣ್ಯದಿಂದ ಬಂದು ಇಂದು
ನಿನ್ನವನೆನಿಸಿದೇ.... ಅದಾವ ಪುಣ್ಯದಿಂದ ಲೆನ್ನಮನ
ನಿನ್ನಲ್ಲೆರಗಿತೋ.... ನೋಯದಂತೆ ಎನ್ನ ಪೊರೆದು ಪಾಲಿಸೋ
ದೀನನಾಥ.... ಶ್ರೀರಂಗವಿಠ್ಠಲಾ॥

೫. 'ಉತ್ತಮರ ಸಂಗ ಎನಗಿತ್ತು ಸಲಹೋ
ಚಿತ್ತಜಜನಕ ಸರ್ವೋತ್ತಮ ಮುಕುಂದ' – ಶ್ರೀಪಾದರಾಜರ ಕೀರ್ತನೆ

೬. 'ನಿನ್ನಾಧೀನ ಶರೀರ ಕರಣ ಚೇಷ್ಟೆಗಳೆಲ್ಲ' – ಶ್ರೀಪಾದರಾಜರ ಸುಳಾದಿ

೭. ಪುಟ ೪೧. "ಶ್ರೀಪಾದರಾಜರು" – ಡಾ॥ ಟಿ.ಎನ್. ನಾಗರತ್ನ– ಪ್ರಸಾರಾಂಗ, ಕ.ವಿ.ವಿ. ಹಂಪಿ.

೮. ಪುಟ ೨೦೧ "ಏನು ಭ್ರಮೆ ಮನುಜರಿಗೆ ಎಷ್ಟು ಮಮತೆ ಪ್ರಕೃತಿಯಲಿ" –ಶ್ರೀಪಾದರಾಜರ ಕೃತಿಗಳು ಸಂ: ಡಾ॥ ಜಿ. ವರದರಾಜರಾವ್.

೯. ಶ್ರೀಪಾದರಾಜರ ಕೃತಿಗಳು. ಸಂ:ಡಾ॥ಜಿ.ವರದರಾಜರಾವ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ಪುಟ –೩೧೬.

೧೦. ಎಲ್ಲಾಡಿ ಬಂದ್ಯೋ ಎನ್ನ ರಂಗಯ್ಯಾ

೧೧. ಎಲ್ಲಾಡಿ ಬಂದ್ಯೋ ನೀ ಹೇಳಯ್ಯಾ

೧೨. ಶ್ರೀಪಾದರಾಜರ ಕೃತಿಗಳು. ಸಂ:ಡಾ॥ಜಿ.ವರದರಾಜರಾವ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ಪುಟ–೩೦೧.

೧೩. ಶ್ರೀಪಾದರಾಜರ ಕೃತಿಗಳು. ಸಂ:ಡಾ॥ಜಿ.ವರದರಾಜರಾವ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ಪುಟ– ೨೧೫

೧೪. ಶ್ರೀಪಾದರಾಜರು: ಜೀವನ ಮತ್ತು ಕೃತಿಗಳು, ಡಾ॥ ಟಿ.ಎನ್. ನಾಗರತ್ನ– ಪ್ರಸಾರಾಂಗ ಕ.ವಿ.ವಿ. ಹಂಪಿ. ಪುಟ –೫೧

೧೫. ಶ್ರೀಪಾದರಾಜರು: ಜೀವನ ಮತ್ತು ಕೃತಿಗಳು, ಡಾ॥ಬಿ.ಎನ್.ನಾಗರತ್ನ– ಪ್ರಸಾರಾಂಗ ಕ.ವಿ.ವಿ. ಹಂಪಿ. ಪುಟ–೫೧

೧೬. ಶ್ರೀಪಾದರಾಜರ ಕೃತಿಗಳು. ಸಂ: ಡಾ॥ ಜಿ.ವರದರಾಜರಾವ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ವಿ.ವಿ., ಪುಟ ೨೮೪

೧೭. ಶ್ರೀಪಾದರಾಜರ ಕೃತಿಗಳು. ಸಂ: ಡಾ॥ ಜಿ.ವರದರಾಜರಾವ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ವಿ.ವಿ. ಪುಟ -xiv

೧೮. ಶ್ರೀಪಾದರಾಜರ ಜೀವನ ಮತ್ತು ಕೃತಿಗಳು: ಡಾ॥ ಟಿ.ಎನ್. ನಾಗರತ್ನ, ಕ.ವಿ.ವಿ. ಹಂಪಿ ಪುಟ ೫೦

೧೯. ಶ್ರೀಪಾದರಾಜರ ಕೃತಿಗಳು. ಸಂ: ಡಾ॥ ಜಿ.ವರದರಾಜರಾವ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ವಿ.ವಿ. ಪುಟ ೩೦೯

೨೦. ಶ್ರೀಪಾದರಾಜರ ಕೃತಿಗಳು. ಸಂ: ಡಾ॥ ಜಿ.ವರದರಾಜರಾವ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ವಿ.ವಿ. ಪುಟ ೩೦೯

೨೧. ಶ್ರೀಪಾದರಾಜರ ಜೀವನ ಮತ್ತು ಕೃತಿಗಳು: ಡಾ॥ ಟಿ.ಎನ್. ನಾಗರತ್ನ, ಕ.ವಿ.ವಿ. ಹಂಪಿ ಪುಟ ೩೫

೨೨. ಶ್ರೀಪಾದರಾಜರ ಕೃತಿಗಳು. ಸಂ: ಡಾ॥ ಜಿ.ವರದರಾಜರಾವ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ವಿ.ವಿ. ಪುಟ –೨೮೬

ಅಧ್ಯಾಯ–3

ಚಾರಿತ್ರಿಕ ವ್ಯಾಖ್ಯಾನಗಳು

ವ್ಯಾಸಕೂಟದ
ಹುಟ್ಟು
ಮತ್ತು ಬೆಳವಣಿಗೆ

ವ್ಯಾಸಕೂಟ, ದಾಸಕೂಟಗಳ
ಪ್ರವರ್ತಕ
ವ್ಯಾಸತೀರ್ಥರು
[ಬದುಕು–ಸಾಧನೆ]

ದಾಸಕೂಟದ
ಹುಟ್ಟು ಮತ್ತು
ಮತ್ತು ಬೆಳವಣಿಗೆ

ವ್ಯಾಸತೀರ್ಥರ ಕನ್ನಡ ಕೃತಿಗಳೆಡೆ ಕಿರುನೋಟ

ವ್ಯಾಸಕೂಟದ ಮುಖ್ಯ
ತಾತ್ವಿಕ ಪರಿಕಲ್ಪನೆಗಳು
ಮತ್ತು ವ್ಯಾಸಕೂಟದ
ವ್ಯಾಖ್ಯಾನಕಾರರು

ದಾಸಕೂಟದ ಮುಖ್ಯ
ತಾತ್ವಿಕ ಪರಿಕಲ್ಪನೆಗಳು
ಮತ್ತು ದಾಸಕೂಟದ
ವ್ಯಾಖ್ಯಾನಕಾರರು

ವಾದಿರಾಜರು

[ವಿಜಯೀಂದ್ರ ತೀರ್ಥರು, ಶ್ರೀನಿವಾಸ ತೀರ್ಥರು
ನಾರಾಯಣ ತೀರ್ಥರು, ಗೋವಿಂದ ಒಡೆಯರು]

[ಪುರಂದರ ದಾಸರು, ಕನಕದಾಸರು]

ಅಧ್ಯಾಯ–೩

ಚಾರಿತ್ರಿಕ ವ್ಯಾಖ್ಯಾನಗಳು

ವ್ಯಾಸಕೂಟದ ಹುಟ್ಟು ಮತ್ತು ಬೆಳವಣಿಗೆ	ಪ್ರವರ್ತಕ ವ್ಯಾಸತೀರ್ಥರು	ದಾಸಕೂಟದ ಹುಟ್ಟು ಮತ್ತು ಬೆಳವಣಿಗೆ

ವ್ಯಾಸಕೂಟ ಮತ್ತು ದಾಸಕೂಟಗಳೆಂಬ ಮಾತುಗಳು ಮೊದಲಿನಿಂದಲೂ ಮಠಗಳಲ್ಲಿ ಅಂದು ಇದ್ದ ಒಂದು ಅಧಿಕೃತ ವ್ಯವಸ್ಥೆಗಳನ್ನು ನಿರ್ದೇಶಿಸುವ ಸಲುವಾಗಿ ಹುಟ್ಟಿಕೊಂಡು ಇದ್ದವುಗಳೇನಲ್ಲ. ಅಂಥಾ ಒಂದು ವ್ಯವಸ್ಥಾತ್ಮಕ ಪರಿಭೇದವೇನೂ ಶ್ರೀಪಾದರಾಜರ ಶಿಷ್ಯರಾಗಿ ಮಠದಲ್ಲಿ ಪಂಡಿತರನ್ನೂ, ದಾಸರುಗಳನ್ನೂ ಪೋಷಿಸಿಕೊಂಡು ಬಂದ ವ್ಯಾಸತೀರ್ಥರ ಕಾಲದಲ್ಲೂ ಇರಲಿಲ್ಲ. "ವ್ಯಾಸಕೂಟ–ದಾಸಕೂಟಗಳೆಂಬ ಮಾತೇನೋ ಈಚಿನವು; ಸುಮಾರು ನೂರು ವರ್ಷಗಳಿಗೆ ಮಿಾರಿ ಅವುಗಳ ಪ್ರಾಚೀನತೆ ಕಾಣುವುದಿಲ್ಲ" ಎಂದು ಸಾ.ಕೃ.ರಾಮಚಂದ್ರರಾಯರು ಹೇಳುತ್ತಾರೆ.[*೧] ವ್ಯಾಸಕೂಟ, ದಾಸಕೂಟಗಳೆಂಬ ಇಬ್ಭಾಗದ ವ್ಯವಸ್ಥೆ ಅಧಿಕೃತವಾಗಿ ಮಠಗಳಲ್ಲಿ ಮಾಡಿಕೊಂಡಿದ್ದಿಲ್ಲವಾದರೂ ಮಠಗಳಲ್ಲಿನ ಪೂಜೆ ಮನಸ್ಕಾರಗಳಿಗೆ ಓಡಿಯಾಡುತ್ತ, ಕೆಲಕೆಲವು ಜವಬ್ದಾರಿ, ಆಡಳಿತ ನಿರ್ವಹಣೆ ನಡೆಸುತ್ತಿದ್ದ ಪಂಡಿತ, ವಿದ್ವಾಂಸವರ್ಗವನ್ನು ನಿರ್ದೇಶಿಸುವಾಗ ವ್ಯಾಸಕೂಟವೆಂಬ ಹೆಸರು ಬಳಕೆಯಲ್ಲಿ ಬಂದಿದ್ದಿರಬಹುದಾಗಿದೆ. ಹರಿದಾಸರುಗಳೆಲ್ಲರೂ ಕೂಡ ವ್ಯಾಸತೀರ್ಥರ ಶಿಷ್ಯರೇ ಆಗಿದ್ದುದರಿಂದ ಅಂಥ ಗೃಹಸ್ಥ ಭಕ್ತರುಗಳು ಸಂಘಟಿತರಾಗಿ ತಮ್ಮನ್ನು ದಾಸಕೂಟವೆಂದೇ ಕರೆದುಕೊಂಡಿದ್ದಿರಬಹುದು, ಹಾಗೆ ಅವರುಗಳನ್ನು ಉಳಿದವರು ಗುರುತಿಸಿರಬಹುದು. ಒಟ್ಟಿನಲ್ಲಿ ವ್ಯಾಸಕೂಟ, ದಾಸಕೂಟಗಳ ಆವಿಷ್ಕಾರವೆನ್ನುವುದು ಬೇರೆ ಬೇರೆ ಕಾಲದಲ್ಲಿ ಹುಟ್ಟಿಕೊಂಡಂಥದ್ದಲ್ಲ. ವ್ಯಾಸತೀರ್ಥರೇ ಹರಿದಾಸರುಗಳನ್ನು ಸಂಘಟಿಸಿ ದಾಸಕೂಟವನ್ನು ಕಟ್ಟಿದರು, ವ್ಯಾಸತೀರ್ಥರು ಸ್ವತಃ ಪಂಡಿತರೂ ಆಗಿದ್ದು ಪಂಡಿತ, ವಿದ್ವಾಂಸರನ್ನೂ ಪೋಷಿಸಿದ್ದರಿಂದ ಈ ಪಂಡಿತರ ಗುಂಪು ತಮ್ಮನ್ನು ವ್ಯಾಸಕೂಟ ಎಂದೇ ಕರೆದುಕೊಂಡಿರಬಹುದು, ಗುರುತಿಸಿಕೊಂಡಿರಬಹುದು.

ಶ್ರೀಪಾದರಾಜರ ಕಾಲಕ್ಕಿಂತ ಮುಂಚಿನ ಮಠಾಧಿಪತಿಗಳು ಸಾಮಾನ್ಯವಾಗಿ ಸಂಸ್ಕೃತ ಭಾಷಾಭಿಮಾನಿಗಳು, ಪಂಡಿತರನ್ನು ಪೋಷಿಸುವವರು, ವೈದಿಕ ಜನರಿಗೇ, ವಿದ್ವಾಂಸರುಗಳಿಗೇ ಅಗ್ರಮಣೆಯನ್ನು ನೀಡುವಂಥವರಾಗಿದ್ದರು. ಕನ್ನಡದಲ್ಲಿ ದೇವರ ಸ್ತುತಿಯ ರಚನೆಗಳಾಗಲೀ, ಹಾಡುವುದಾಗಲೀ ಅದುವರೆಗಿನ ಮಠಾಧೀಶರುಗಳಿಗೆ ತಿರಸ್ಕಾರವೇ, ನಿಷಿದ್ಧವೇ. ರೂಢಿಗತವಾಗಿ ಪರಂಪರೆಯಿಂದ ನೆಲೆಸಿದ್ದ ಈ ಮನೋಧರ್ಮವನ್ನು ಮೊತ್ತ ಮೊದಲ ಬಾರಿಗೆ ಮುರಿದು ಮಾತೃಭಾಷೆಯಲ್ಲಿನ ರಚನೆ, ಹಾಡು, ಕುಣಿತದ ಭಕ್ತಿಲೋಕವನ್ನು ಸಾಮಾನ್ಯರಿಗೆ ತೆರೆದುಕೊಟ್ಟ ಶ್ರೀಪಾದರಾಜರ ಮಾರ್ಗದಲ್ಲಿಯೇ ಮುಂದಡಿಯಿಟ್ಟು ತಾವೂ ಕನ್ನಡ ಕೃತಿಗಳನ್ನು ರಚಿಸಿ ಅವುಗಳನ್ನು ರಾತ್ರಿ ಪೂಜೆಯ ವೇಳೆಗೆ ಹಾಡಿ, ಹಾಡಿಸಿ, ನರ್ತನರೂಪದಲ್ಲಿ ಭಜಿಸಿ ಕುಣಿದು ಕುಶಿಪಟ್ಟು ಹರಿದಾಸ ಪಂಥಕ್ಕೆ ವಿಪುಲವಾಗಿ ಪೋಷಣೆ ನೀಡಿದವರು ವ್ಯಾಸತೀರ್ಥರು. ಹೀಗಾಗಿ ದಾಸರುಗಳ ಗುಂಪು ಹೆಚ್ಚು ಹೆಚ್ಚಾಗಿ ವ್ಯಾಸತೀರ್ಥರ ಶಿಷ್ಯತ್ವ ವಹಿಸಿ ಭಕ್ತಿಪಂಥದಲ್ಲಿ ಮುನ್ನಡೆಯುವಾಗ ಅವರುಗಳೆಲ್ಲ ದಾಸವರ್ಗದವರೆಂದೂ, ದಾಸಕೂಟದವರೆಂದೂ ಗುರುತಿಸಿಕೊಂಡರು. ಅಥವಾ ಹಾಗೆ ಅವರನ್ನು ದಾಸಕೂಟವೆನ್ನುತ್ತ ತಮ್ಮನ್ನು, ತಮ್ಮ ವರ್ಗದವರನ್ನು ವ್ಯಾಸಕೂಟ ಎಂದು ಕರೆದು ಹೆಮ್ಮೆ ಪಟ್ಟುಕೊಂಡಿರಬಹುದಾದವರು ಮಠದ ಅನುಯಾಯಿಗಳಾಗಿ ಸಂಸ್ಕೃತಾಭಿಮಾನಿಗಳಾಗಿ ನಡೆದುಕೊಂಡ ಪಂಡಿತವರ್ಗದವರು.

ಶ್ರೀಪಾದರಾಜರ ಕಾಲದಲ್ಲಿಯೂ ಕನ್ನಡದ ಈ ಬದಲಾವಣೆಯನ್ನು ಸ್ವಾಗತಿಸದ ಪಂಡಿತವರ್ಗ ಇದ್ದಿರಬಹುದು. ಕನ್ನಡ ಕೃತಿಗಳ ಮಾನ್ಯತೆಯನ್ನು ಒಪ್ಪದ ಮುಂದಿನ ಈ ವರ್ಗದವರ ಅಸಮಾಧಾನ ದಟ್ಟವಾಗಿ ಹೊಗೆಯಾಡತೊಡಗಿದ್ದು ವ್ಯಾಸತೀರ್ಥರ ಕಾಲದಲ್ಲಿ. ಅದ್ಭುತ ಜ್ಞಾನಿಯಾಗಿದ್ದ ವ್ಯಾಸತೀರ್ಥರು ದಾಸಪಂಥವನ್ನೂ ಬೆಳೆಸಿದರು, ಪಂಡಿತರುಗಳನ್ನೇನೂ ಅವರು ದೂರ ಮಾಡಲಿಲ್ಲ. ಮಠದ ಅನುಯಾಯಿಗಳೆನ್ನಿಸಿಕೊಂಡು ಮಠದ ರೀತಿರಿವಾಜುಗಳಿಗೆ ಹೊಂದಿಕೊಂಡಿದ್ದ ವಿದ್ವಾಂಸರುಗಳನ್ನೂ ಪೋಷಿಸಿಕೊಂಡು, ಗೌರವಿಸಿಕೊಂಡು ವಾದ, ವಾಕ್ಯಾರ್ಥ, ಸಂಚಾರ, ಸಿದ್ಧಾಂತ ನಿರ್ಣಯ, ಶಾಸ್ತ್ರ ರಚನೆ, ಜೊತೆಗೆ ರಾಜ್ಯಾಡಳಿತಕ್ಕೆ ಮಾರ್ಗದರ್ಶನ ಈ ಎಲ್ಲವನ್ನೂ ಮಾಡುತ್ತ ನಿಭಾಯಿಸಿಕೊಂಡವರು ಅವರು. ಜೊತೆಜೊತೆಯಾಗಿ ಅವರು ಸಾಮಾನ್ಯರಿಗೆ, ಗೃಹಸ್ಥರಿಗೆ ಭಕ್ತಿಯನ್ನು ಬೋಧಿಸಿ ಹರಿದಾಸ ದೀಕ್ಷೆ ಇತ್ತು ದಾಸಸಾಹಿತ್ಯ ಬೆಳೆಯುವಂತೆ ನೋಡಿಕೊಂಡರು. ಕನ್ನಡವೆಂದರೆ ಮೂಗು ಮುರಿಯುತ್ತಿದ್ದ ಮಹಾ ಪಂಡಿತವರ್ಗವೆನ್ನಿಸಿಕೊಂಡ ಗುಂಪು ಈ ದಾಸಕೂಟದಿಂದ ಬೇರೆಯಾಗಿಯೇ ತಮ್ಮನ್ನು ಗುರುತಿಸಿಕೊಳ್ಳಲು ಬಯಸಿ ದೂರಾಗಿಯೇ ಉಳಿದು ವ್ಯಾಸಕೂಟವೆನ್ನಿಸಿಕೊಂಡಿತು. ಎಂದೂ ಹರಿದಾಸರುಗಳನ್ನು ಮನ್ನಿಸುವ ಮನಸ್ಸು ಅವರಲ್ಲಿ ಮೂಡದೇ ಹೋಯಿತು. ಹೀಗೆ ವ್ಯಾಸಕೂಟ, ದಾಸಕೂಟಗಳ ಹುಟ್ಟು ವ್ಯಾಸತೀರ್ಥರ ಕಾಲದಲ್ಲಿಯೇ, ಎಂದರೆ ಹದಿನೈದನೇ ಶತಮಾನದ ಅವಧಿಯಲ್ಲೇ ಅಧಿಕೃತ ವ್ಯವಸ್ಥೆ ಎಂದಲ್ಲದಿದ್ದರೂ, ಪರಸ್ಪರ ವಿರೋಧಿ ಗುಂಪುಗಳಾಗಿಯೇ ಮಠಗಳಲ್ಲಿನ ದಿನಚರಿಗಳಲ್ಲಿ ಭಾಗವಹಿಸಿಕೊಳ್ಳುತ್ತ ಟಿಸಿಲೊಡೆಯಿತು. ಎರಡೂ ಕೂಟಗಳವರು ವ್ಯಾಸತೀರ್ಥರ ಶಿಷ್ಯರುಗಳೇ.

'ವ್ಯಾಸಕೂಟ' ಎಂಬ ಹೆಸರಿನಲ್ಲಿಯ ಅರ್ಥ ತಮ್ಮ ಗುರು ವ್ಯಾಸತೀರ್ಥರು ಎಂದು ಈ ಪಂಡಿತರು ಅನ್ವಯಿಸಿಕೊಂಡಂತಿಲ್ಲ. ವೇದವ್ಯಾಸರು ಬ್ರಹ್ಮಸೂತ್ರಗಳನ್ನು ರಚಿಸಿದವರೆಂದು, ತಾವೆಲ್ಲ ಆ ಬ್ರಹ್ಮಸೂತ್ರಗಳನ್ನು ಪರಮ ಪ್ರಮಾಣವಾಗಿ ಸ್ವೀಕರಿಸಿದ್ದೇವೆಂದು, ತಮ್ಮನ್ನು ಆ ವೇದವ್ಯಾಸರ ಅನುಯಾಯಿಗಳೆಂದು ಹೀಗೆ ವ್ಯಾಸಕೂಟವೆಂದು ತಮ್ಮನ್ನು ನಿರ್ದೇಶಿಸಿಕೊಂಡರು. ವೇದವ್ಯಾಸರ ರಚನೆಯಾದ ಬ್ರಹ್ಮಸೂತ್ರಗಳನ್ನು, ಅದಕ್ಕೆ ಮುಂದೆ ಮಧ್ವಾಚಾರ್ಯರಿಂದ ರಚಿತವಾದ ಭಾಷ್ಯ-ಅನುವ್ಯಾಖ್ಯಾನ ಮೊದಲಾದ ಗ್ರಂಥಗಳನ್ನು, ಆ ಗ್ರಂಥಗಳಿಗೆ ಜಯತೀರ್ಥರೇ ಮುಂತಾದವರು ಬರೆದಿರುವ ಟೀಕೆ ಟಿಪ್ಪಣಿಗಳನ್ನು ವಿಶದವಾಗಿ ಅಧ್ಯಯನ ಮಾಡುತ್ತ, ಅವುಗಳಲ್ಲಿರುವ ಸಿದ್ಧಾಂತವನ್ನು ಸಮರ್ಥಿಸುತ್ತ, ವಾದ, ಚರ್ಚೆಗಳಲ್ಲಿರುವ ಪಂಡಿತರ ಗುಂಪು ಮೊದಲಿನಿಂದಲೂ ಮಠದ ಅವಿಭಾಜ್ಯ ಅಂಗವೆನ್ನಿಸಿಕೊಂಡವರೇ. ಇಂಥ ತಂಡ ವ್ಯಾಸತೀರ್ಥರ ಮಠದಲ್ಲಿಯೂ ಇದ್ದು, ವೇದವ್ಯಾಸರ ಜ್ಞಾನಕ್ಕೆ ತಾವೇ ಪೂರ್ತಿ ವಾರಸುದಾರರೆಂಬ ಹೆಮ್ಮೆಯಲ್ಲಿ ವ್ಯಾಸಕೂಟದವರೆಂದು ಕರೆದುಕೊಂಡರು, ಕರೆಯಿಸಿಕೊಂಡರು!

ಆದರೆ ಸಾಮಾನ್ಯವರ್ಗದಿಂದಲೇ ಬಂದು ಯಾವೊಂದು ವಿದ್ವತ್ತು, ಪಾಂಡಿತ್ಯಗಳ ಅಹಂ ಇಲ್ಲದೆಯೆ ಭಕ್ತಿಯೊಂದನ್ನೆ ಹಿಡಿದು ಭಾಗವತರಾಗಿ ಹರಿಯದಾಸರೆಂದು ತಮ್ಮನ್ನು ಕರೆದುಕೊಂಡು ಬದುಕಿದವರು ಹೀಗೆಯೇ ವ್ಯಾಸತೀರ್ಥರ ಮಾರ್ಗದರ್ಶನದಲ್ಲಿ ಮುನ್ನಡೆದವರು ದಾಸಕೂಟದವರೆನ್ನಿಸಿಕೊಂಡರು, ಹರಿಯ ದಾಸ್ಯವೇ ತಮ್ಮ ಹೆಮ್ಮೆಯೆಂದು ಹೇಳಿಕೊಂಡರು.

ವ್ಯಾಸಕೂಟ ದಾಸಕೂಟಗಳು ಹೀಗೆ ಆ ಕಾಲದಲ್ಲಿನ ತಮಗೆ ತಾವೇ ವಿಭಿನ್ನವೆಂದು ಗುರುತಿಸಿಕೊಂಡ ಎರಡು ಗುಂಪುಗಳೇ ವಿನಹಾ ಈ ಎರಡೂ ಅಧಿಕೃತ ಸಂಸ್ಥೆಗಳೂ ಅಲ್ಲ, ಅಧಿಕೃತ ವಿಭಾಗಗಳೂ ಅಲ್ಲ. ಶಾಸ್ತ್ರನಿಷ್ಠರೆನಿಸಿಕೊಂಡ ವ್ಯಾಸಕೂಟ, ಹರಿದಾಸ್ಯನಿಷ್ಠರೆನಿಸಿಕೊಂಡ ದಾಸಕೂಟ ಎರಡನ್ನೂ ಪೋಷಿಸಿದವರು ವ್ಯಾಸತೀರ್ಥರು. ಈ ಎರಡೂ ಕೂಟದವರ ನಡುವೆ ಸದಾ ವಿರಸ, ಸೆಣಸಾಟ ನಡೆಯುತಿತ್ತು ಎಂದಲ್ಲವಾದರೂ, ಪರಸ್ಪರ ವಿರುದ್ಧಮುಖಿಗಳೇ ಆಗಿದ್ದ ಎರಡೂ ಕಡೆಯವರ ನಡುವಿನ ವೈಮನಸ್ಯ, ಭಿನ್ನಾಭಿಪ್ರಾಯಗಳನ್ನು ದೂರಾಗಿಸಲು ಪ್ರಯತ್ನಿಸುತ್ತ ಮಾನವೀಯ ಮೌಲ್ಯಗಳಿಗೆ, ಹರಿಯನ್ನು ಪ್ರೀತಿಸುವುದೇ ಪಾರಮ್ಯವೆಂಬ ಬದುಕಿಗೆ ಒತ್ತು ಕೊಟ್ಟವರು ವ್ಯಾಸತೀರ್ಥರು. ಅವರ ಉಜ್ವಲ ಸಾಮರ್ಥ್ಯದ ವ್ಯಕ್ತಿತ್ವವೇ ಈ ಎರಡೂ ಕೂಟಗಳನ್ನು ಸಮಾನವಾಗಿ ನಿಭಾಯಿಸಲು ಕಾರಣವಾಗಿತ್ತು. ವಿದ್ವತ್ತಿಗೂ ಭಕ್ತಿಗೂ; ಪಾಂಡಿತ್ಯಕ್ಕೂ ಸರಳತೆಗೂ; ಬುದ್ಧಿ ಮತ್ತು ಹೃದಯಗಳ ನಡುವೆಯ ಸೇತುವೆಯಾಗಿದ್ದ ವ್ಯಾಸತೀರ್ಥರ ಬದುಕಿನ ವಿವರಗಳೇ ಈ ದಾಸಕೂಟ ವ್ಯಾಸಕೂಟಗಳ ಬೆಳವಣಿಗೆಯ ಮಾಹಿತಿಯನ್ನೂ ಒದಗಿಸುತ್ತವೆ. ವ್ಯಾಸಕೂಟ, ದಾಸಕೂಟಗಳು ತಮ್ಮ ಅಸ್ತಿತ್ವ ಕಂಡುಕೊಂಡಿದ್ದೂ ಇವರ ಕಾಲದಲ್ಲಿಯೇ, ಬೆಳವಣಿಗೆ ಪಡೆದುಕೊಂಡಿದ್ದೂ ಇವರ ಶಿಷ್ಯರೆನಿಸಿಕೊಂಡೇ ಎನ್ನುವುದು ಇತಿಹಾಸ.

ವ್ಯಾಸತೀರ್ಥರ ಜನನ ಕಾಲದ ಚಾರಿತ್ರಿಕ ಹಿನ್ನಲೆ:

ಇಡೀ ಭಾರತವೇ ಆಧ್ಯಾತ್ಮಿಕವಾದೊಂದು ಆಂದೋಲನದಲ್ಲಿ, ಭಕ್ತಿಭಾವದ ಪ್ರವಾಹದಲ್ಲಿ ಸಿಲುಕಿದಂಥ, ಸಂತ ಮನಸ್ಸೊಂದನ್ನು ಪಡೆದುಕೊಂಡಂಥ ಕಾಲವೆಂದರೆ ಹದಿನೈದನೆಯ ಶತಮಾನ. ಉತ್ತರ ಭಾರತದಲ್ಲಿ ಅನೇಕ ಸಂತರು ಹುಟ್ಟಿಕೊಂಡು ಸಂಸ್ಕೃತಕ್ಕೆ ಬದಲಾಗಿ ತಮ್ಮ ತಮ್ಮ ಮಾತೃಭಾಷೆಯಲ್ಲಿ ಗೀತರಚನೆ ಮಾಡಿ ಭಕ್ತಿಯ ಪ್ರಚಾರ ನಡೆಸಿದ ಕಾಲವಿದು. ಸಂತ ರಾಮಾನಂದ, ಕಬೀರ್,ನಾಮದೇವ, ಚೈತನ್ಯ ಮಾಹಾಪ್ರಭು, ಗುರುನಾನಕ್, ತುಕಾರಾಮ್, ವಲ್ಲಭಾಚಾರ್ಯ, ಸೂರದಾಸ, ರವಿದಾಸ ಈ ಮುಂತಾದವರೆಲ್ಲ ತಮ್ಮ ತಮ್ಮ ನಾಡಿನಲ್ಲಿ ವೈಷ್ಣವ ಭಕ್ತಿಯ ಪ್ರಚಾರವನ್ನು ತಮ್ಮ ತಮ್ಮ ತಾಯಿಭಾಷೆಯಲ್ಲಿಯೇ ಮಾಡುತ್ತಿದ್ದ ಕಾಲ. ಇದೇ ಸಮಯದಲ್ಲಿ ದಕ್ಷಿಣದಿಂದ, ಅದರಲ್ಲೂ ಕನ್ನಡನಾಡಿನಿಂದ ಹೊರಹೊಮ್ಮಿದ ಪ್ರತಿಭೆಯೇ ಶ್ರೀವ್ಯಾಸತೀರ್ಥರು.

ಮಹಾರಾಷ್ಟ್ರದಲ್ಲಿ ವಿಠಲಭಕ್ತಿಯು ವ್ಯಾಪಕವಾಗಿ ಹರಡಿಕೊಂಡಿದ್ದ ಕಾಲವೂ ಇದೇ ಆಗಿದ್ದು ದೇಶಾದ್ಯಂತವೂ ಧರ್ಮ, ಭಕ್ತಿಯ ಜಾಗೃತಿ ಉನ್ನತವಾಗಿದ್ದ ವಾತಾವರಣವಿದ್ದಾಗ ಕರ್ನಾಟಕದಿಂದ ಮೂಡಿಬಂದ ಮಹಾನ್ ಧಾರ್ಮಿಕ ಸನ್ಯಾಸಿಯೇ ವ್ಯಾಸತೀರ್ಥರು.

ರಾಜಕೀಯವಾಗಿಯೂ ವ್ಯಾಸತೀರ್ಥರು ಜನಿಸಿದ ಕಾಲವು ಕನ್ನಡನಾಡಿನ ಇತಿಹಾಸದಲ್ಲಿಯೇ ಸುವರ್ಣ ಅಧ್ಯಾಯವೆನ್ನುವಂತಿತ್ತು. ವಿಜಯನಗರ ಸಾಮ್ರಾಜ್ಯವು ಉನ್ನತಿಗೆ ಏರಿ ಏಳಿಗೆ ಪಡೆಯುತ್ತಿದ್ದ ಕಾಲವದು. ಇಡೀ ದಕ್ಷಿಣ ಭಾರತವು ಸಾಂಸ್ಕೃತಿಕವಾಗಿ ಒಂದೆಂದು ಈ ಸಾಮ್ರಾಜ್ಯದ ಪಾಲಕರ ಕೆಳಗೆ ಗುರುತಿಸಿಕೊಂಡಂಥ ಅಪೂರ್ವಕಾಲ. ಹೀಗಿರುವಲ್ಲಿ ಚನ್ನಪಟ್ಟಣದ ಬಳಿ ಇರುವ ಬನ್ನೂರಿನಲ್ಲಿ ವ್ಯಾಸತೀರ್ಥರ ಜನನವಾಯಿತು. ಹುಟ್ಟು ಹೆಸರು 'ಯತಿರಾಜ' ಎಂದೇ. ೧೪೪೭ನೇ ಇಸವಿಯ ಏಪ್ರಿಲ್ ೨೨ರಂದು ಜನಿಸಿದರು.

ಬದುಕು–ಸಾಧನೆ

ಏಳು ವರ್ಷದ ಬಾಲಕನಿರುವಾಗಲೇ ಅಬ್ಬೂರು ಮಾಧ್ವಮಠದ ಸ್ವಾಮಿಗಳಾಗಿದ್ದ ಬ್ರಹ್ಮಣ್ಯತೀರ್ಥರ ಇಚ್ಛೆಯ ಮೇರೆಗೆ ಯತಿರಾಜನಿಗೆ ಸನ್ಯಾಸಾಶ್ರಮವಾಯಿತು,ವ್ಯಾಸತೀರ್ಥರೆಂಬ ಅಭಿದಾನವೂ ಆಯಿತು. ಬಾಲ್ಯದಲ್ಲೇ ನ್ಯಾಯ, ವೇದಾಂತ, ಶಾಸ್ತ್ರಗಳಲ್ಲಿ ಪಾಠಪ್ರವಚನ ದೊರೆತು ಪ್ರತಿಭಾವಂತನಾಗಿ ಬೆಳೆಯುತ್ತ ಮುಂದೆ ಶ್ರೀಪಾದರಾಜರಲ್ಲಿ ಶಿಷ್ಯತ್ವವನ್ನು ವಹಿಸಿ ಹನ್ನೆರಡು ವರ್ಷಗಳ ಕಾಲ ಅವರಲ್ಲಿ ಹೆಚ್ಚಿನ ಅಧ್ಯಯನ ಮುಂದುವರೆಸಿದರು, ಅದಾಗಲೇ ವಿಜಯನಗರದ ರಾಜಮನೆತನದವರು ಶ್ರೀಪಾದರಾಜರನ್ನು ರಾಜಗುರುಗಳೆಂದು ಭಾವಿಸಿ ಮನ್ನಣೆ ತೋರುತ್ತಿದ್ದುದರಿಂದ ವ್ಯಾಸತೀರ್ಥರಿಗೂ ಶ್ರೀಪಾದರಾಜರ ಅಪೇಕ್ಷೆಯ ಮೇರೆಗೆ ವಿಜಯನಗರದ ಅರಸರ ಜೊತೆಗೆ ಸೌಹಾರ್ದ ಸಂಬಂಧ ಗೌರವಯುಕ್ತವಾಗಿ ದೊರೆಯುವಂತಾಯಿತು.

ಶ್ರೇಷ್ಠ ಸಾಮ್ರಾಟ ಎನಿಸಿಕೊಂಡ ಕೃಷ್ಣದೇವರಾಯನಿಗೆ ವ್ಯಾಸತೀರ್ಥರೇ ರಾಜಗುರುಗಳಾದರು. ಇದಕ್ಕೂ ಮುಂಚೆ ಚಂದ್ರಗಿರಿಯ ರಾಜ ಸಾಳುವ ನರಸಿಂಹನ (ಶ್ರೀಪಾದರಾಜರನ್ನು ರಾಜಗುರುಗಳಾಗಿರಿಸಿಕೊಂಡವನು) ಅಪೇಕ್ಷೆಯ ಮೇರೆಗೆ ವ್ಯಾಸತೀರ್ಥರು ಹನ್ನೆರಡು ವರ್ಷಗಳ ಕಾಲ ತಿರುಪತಿಯ ವೆಂಕಟರಮಣ ದೇವರಿಗೆ ಅರ್ಚಕರಾಗಿದ್ದು ಸೇವೆ ಸಲ್ಲಿಸಿದ ಖ್ಯಾತಿಯನ್ನೂ ಪಡೆದುಕೊಂಡವರಾದರು. ಅರಸ ಕೃಷ್ಣದೇವರಾಯನಿಗೆ ಕುಹುಯೋಗವೆಂಬ ಆಪತ್ತು ಬಂದಾಗ ಈ ಗಂಡಾಂತರವನ್ನು ಪರಿಹರಿಸಲು ತಾವೇ ಆ ಗಳಿಗೆಯಲ್ಲಿ ಸಿಂಹಾಸನಾರೂಢರಾಗಿದ್ದು, ಆಪತ್ತಿನಿಂದ ಅರಸನನ್ನು ಪಾರುಮಾಡಿದರೆಂಬ ಖ್ಯಾತಿಗೂ ಒಳಗಾಗಿದ್ದಾರೆ. ಹೀಗಾಗಿಯೇ ವ್ಯಾಸತೀರ್ಥರನ್ನು "ವ್ಯಾಸರಾಯ" "ವ್ಯಾಸರಾಜ"ರೆಂದೂ ಕರೆಯುವ ವಾಡಿಕೆ ಬಂದಿದೆ.

ಕೃಷ್ಣದೇವರಾಯನು ಕೃತಜ್ಞತಾಪೂರ್ವಕವಾಗಿ ವ್ಯಾಸತೀರ್ಥರಿಗೆ ಕೊಡಮಾಡಿರುವ ಅನೇಕ ದಾನಶಾಸನಗಳು ತಿರುಪತಿಯಲ್ಲಿ ಇಂದಿಗೂ ಇವೆ. ವ್ಯಾಸತೀರ್ಥರೊಂದಿಗಿನ ಆಪ್ತ ಮಂತ್ರಾಲೋಚನೆ ಹಾಗೂ ಪಡೆದ ಆಧ್ಯಾತ್ಮಿಕ ಬೆಂಬಲದಿಂದಲೇ ಕೃಷ್ಣದೇವರಾಯ ವಿಜಯನಗರದ ಆಡಳಿತವನ್ನು ಸಮರ್ಥವಾಗಿ ನಡೆಯಿಸಿಕೊಂಡು ಬಂದ, ವಿದ್ಯೆಗೆ ಅಪೂರ್ವ ಮಹತ್ವ ನೀಡಿ ಸಾಂಸ್ಕೃತಿಕವಾಗಿ ಸಾಮ್ರಾಜ್ಯವನ್ನು ಕಟ್ಟಿ ಬೆಳೆಯಿಸಿದ. ಒಟ್ಟು ತಮ್ಮ ಜೀವಿತಾವಧಿಯಲ್ಲಿ ವಿಜಯನಗರವನ್ನಾಳಿದ ಸಾಳುವ ನರಸಿಂಹ, ವೀರನರಸಿಂಹ, ತಮ್ಮಾರಾಯ, ತುಳುವ ನರಸನಾಯಕ, ಕೃಷ್ಣದೇವರಾಯ ಮತ್ತು ಅಚ್ಚುತದೇವರಾಯ ಈ ಆರುಮಂದಿ ಅರಸರಿಗೆ ಮಾರ್ಗದರ್ಶನ ಮಾಡಿರುವ ಹಿರಿಮೆ ಇವರಿಗಿದೆ.

ರಾಜಕೀಯದಲ್ಲಿ ಹೀಗೆ ನೈತಿಕ ವರ್ಚಸ್ಸು, ಬೀರಿದಂಥ ವ್ಯಾಸತೀರ್ಥರು ಧಾರ್ಮಿಕವಾಗಿಯೂ ನಾಡಿನ ಜನಮನದಲ್ಲಿ ಉನ್ನತ ಸ್ಥಾನ ಗಳಿಸಿದವರಾಗಿದ್ದರು. ಭಾರತದ ಬೇರೆ ಬೇರೆ ರಾಜ್ಯಗಳಿಗೆ ಸಂಚಾರ ಮಾಡಿ ದ್ವೈತ ಸಿದ್ಧಾಂತವನ್ನು ಮಂಡಿಸಿ ವಾದಿಗಳನ್ನು ಜಯಿಸಿದವರು. ಉತ್ತರಭಾರತದ ಅನೇಕ ವೇದಾಂತ ಪೀಠಗಳಲ್ಲಿ ವಾದಿಸಿ ಮಧ್ವಸಿದ್ಧಾಂತದ ಗೆಲುವಿನ ಪತಾಕೆಯನ್ನು ಎತ್ತರಕ್ಕೆ ಹಾರಿಸಿದವರು. ಮಿಥಿಲಾನಗರದ ವಿದ್ಯಾಪೀಠದ ಅಂದಿನ ಅದ್ವೈತ ಗುರುವಾಗಿದ್ದ, ಅದ್ವೈತ ಶಾಸ್ತ್ರ ಪಂಡಿತನಾದ ಪಕ್ಷಧರ ಮಿಶ್ರನೊಡನೆ ವಾಕ್ಯಾರ್ಥವನ್ನು ಮಾಡಿ ವಿಜಯ ಪಡೆದರು. ವ್ಯಾಸರಾಜರ ಪಾಂಡಿತ್ಯ, ವಾದವೈಖರಿ, ತರ್ಕಶಾಸ್ತ್ರದಲ್ಲಿನ ಹಿಡಿತ, ಸಿದ್ಧಾಂತದ ಮೇಲಿನ ಪ್ರಭುತ್ವ, ವಿವೇಚನೆಗಳಿಗೆ ಪೂರ್ಣವಾಗಿ ಮಾರು ಹೋದ ಪಕ್ಷಧರಮಿಶ್ರರು ವ್ಯಾಸತೀರ್ಥರ ಬಗ್ಗೆ ಅವರ ಗುರುಗಳಾದ ಶ್ರೀಪಾದರಾಜರಲ್ಲಿಗೇ ಬಂದು ಭೇಟಿ ಮಾಡಿ ಹೀಗೊಂದು ಶ್ಲೋಕವನ್ನು ರಚಿಸಿ ಹೇಳಿದ್ದಾರೆ.

ಯದಧೀತಂ ತದಧೀತಂ ಯದನಧೀತಂ ತದಪ್ಯಧೀತಂ
ಪಕ್ಷಧರ ವಿಪಕ್ಷೋ ನಾವೇಕ್ಷಿವಿನಾ ನವೀನ ವ್ಯಾಸೇನ॥[2]

ಆ ಕಾಲದಲ್ಲಿನ ಸುಪ್ರಸಿದ್ಧ ವಿದ್ಯಾಕೇಂದ್ರವೆನಿಸಿದ್ದ ತಮಿಳುನಾಡಿನ ಕಂಚಿಗೂ ಹೋಗಿ ಪರವಾದಿಗಳನ್ನು ಜಯಿಸಿ ಮಧ್ವಸಿದ್ಧಾಂತದ ಸಾರವನ್ನು ನಿರೂಪಿಸಿ ಬಂದರು. ಹೀಗೆ ಭಾರತದಾದ್ಯಂತ ಸಂಚರಿಸಿ ವೇದಾಂತ ಸಾಮ್ರಾಜ್ಯದಲ್ಲಿ ದಿಗ್ವಿಜಯಿಗಳಾಗಿ ಬಂದು ಮತ್ತೆ ಅನೇಕ ಸಮಾಜ ಕಲ್ಯಾಣ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ವಿದ್ವತ್ತಿನೊಂದಿಗೆ ಔದಾರ್ಯಗುಣ, ಪಾಂಡಿತ್ಯದ ಜೊತೆಯಾಗಿ ಕವಿ ಹೃದಯವಿದ್ದ ವ್ಯಾಸತೀರ್ಥರು ಯಾವುದೇ ವಾದವಿವಾದಗಳ ಸಭೆಯಲ್ಲಿಯೂ ಯಾವ ಪಕ್ಷದ ಪಂಡಿತಪಾಮರರಿಗೂ ಬೇಸರವಾಗದಂತೆ, ಸಮಾಧಾನ ನೆಲೆಸುವಂತೆಯೇ ನಡೆದುಕೊಳ್ಳುತ್ತ ಎಲ್ಲರಿಂದಲೂ ಮಾನ್ಯರಾಗುತ್ತಿದ್ದವರು. "ಸರ್ವಧರ್ಮ ಸಮನ್ವಯಾಚಾರ್ಯ" ಎಂದೇ ಗೌರವಿಸಲ್ಪಟ್ಟವರು. ಅವರ ಆಧ್ಯಾತ್ಮಿಕ ಸಾಧನೆ ವೈಯಕ್ತಿಕ ನೆಲೆಯಲ್ಲಿಯೆ ಉಳಿಯದೆ ಸಮಾಜದ ಅನ್ಯರಿಗೂ, ಸಾಮಾನ್ಯರಿಗೂ ಕಲ್ಯಾಣವುಂಟುಮಾಡುವಂತೆ ಪಸರಿಸಿತ್ತು. ತಮ್ಮ ಇಡೀ ಬದುಕಿನಲ್ಲಿ ಅವರು ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಅನನ್ಯವಾಗಿ ದುಡಿದು ಸೇವೆಸಲ್ಲಿಸಿದವರು.

ವಿಜಯನಗರದಲ್ಲಿನ ತಮ್ಮ ಮಠವನ್ನು ವ್ಯಾಸತೀರ್ಥರು ಅತಿದೊಡ್ಡ ವಿದ್ಯಾಕೇಂದ್ರವನ್ನಾಗಿ ಪರಿವರ್ತಿಸಿದರು. ಈ ಸರ್ವಜ್ಞ ವಿದ್ಯಾಪೀಠವನ್ನು ಎಲ್ಲ ಬಗೆಯ ಲೌಕಿಕ ಹಾಗೂ ವೈದಿಕ ವಿದ್ಯೆಗಳನ್ನು ಹೇಳಿಕೊಡುವ ವಿಶ್ವವಿದ್ಯಾಲಯವಾಗಿ ಬೆಳೆಯಿಸಿದರು. ಷಡ್ದರ್ಶನಗಳೇ ಮೊದಲಾದ ಶಾಸ್ತ್ರಗಳನ್ನೂ, ಸಾಹಿತ್ಯ, ಮೀಮಾಂಸೆ, ತರ್ಕ, ವ್ಯಾಕರಣ, ಛಂದಸ್ಸುಗಳನ್ನೂ, ವೈದ್ಯ, ಜ್ಯೋತಿಷ್ಯ, ಯಂತ್ರವಿಜ್ಞಾನ, ತಂತ್ರವಿಜ್ಞಾನಗಳನ್ನೂ, ಸಂಗೀತ, ನರ್ತನ ಮುಂತಾದ ಲಲಿತಕಲೆಗಳನ್ನೂ ಕಲಿಸಿಕೊಡುವ ವ್ಯವಸ್ಥೆಯಿದ್ದು ಸ್ವತಃ ತಾವೇ ಒಂದು ಜಂಗಮ ವಿಶ್ವಕೋಶವಾಗಿ ಎಲ್ಲ ಜವಾಬ್ದಾರಿಗಳನ್ನು ನಿರ್ವಹಿಸಿದರು. ಬೇರೆ ಬೇರೆ ಕಡೆಗಳಿಂದ ಬಂದ ವಿದ್ಯಾರ್ಥಿಗಳಿಗೆ ಊಟ, ಇಳಿದುಕೊಳ್ಳಲು ವಸತಿ ಎಲ್ಲವೂ ಅಚ್ಚುಕಟ್ಟಾದ ಏರ್ಪಾಡೆಂದು ಹೆಸರಾಗಿತ್ತು. ಈ ವಿಶ್ವವಿದ್ಯಾಲಯದ ಪರಿಪೂರ್ಣ ಚಿತ್ರಣವನ್ನು ಕವಿ ರಾಘವೇಂದ್ರಪ್ಪ ಎಂಬಾತನ "ಸಾರಸ್ವತ ಪರಿಣಯ" ಎಂಬ ಗ್ರಂಥದಲ್ಲಿ ಕಾಣಬಹುದಾಗಿದೆ.[*೩] ಈ ವಿದ್ಯಾಪೀಠಕ್ಕೆ ಬಹಳ ದೂರದೆಡೆಯ ನಾಡುಗಳಿಂದ ಅನೇಕ ವಿದ್ವಾಂಸರುಗಳು ಆಗಮಿಸಿ ವಿದ್ವತ್‌ಗೋಷ್ಠಿಯಲ್ಲಿ ಭಾಗವಹಿಸಿ ಸೋಲಲಿ, ಗೆಲ್ಲಲಿ, ವ್ಯಾಸತೀರ್ಥರಿಂದ ಸನ್ಮಾನಿತರಾಗಿಯೇ ತೆರಳುತ್ತಿದ್ದರೆಂದು ಹೇಳಲಾಗಿದೆ. ವ್ಯಾಸತೀರ್ಥರ ಸಹೃದಯತೆಯನ್ನು ತೋರುವ ಇಂಥ ಪ್ರಕರಣಗಳಲ್ಲಿ ಕಳಿಂಗದೇಶದಿಂದ ಬಂದು ವಾದ ಮಾಡಿ ಸೋತು ಕೂಡ ಸನ್ಮಾನಿತನಾದ ಬಸವಭಟ್ಟನೆಂಬ ಪಂಡಿತನ ವಿಚಾರವೂ ಒಂದು. ವ್ಯಾಸತೀರ್ಥರ ಸುಸಂಸ್ಕೃತಿಗೆ ಮೆಚ್ಚಿಕೊಂಡು ತನ್ನಲ್ಲಿದ್ದ ಪಚ್ಚೆಯಲಿಂಗವೊಂದನ್ನು ಆತ ಕಾಣಿಕೆಯಾಗಿ ನೀಡಿದ್ದು ಈ ಪಚ್ಚೆಯಲಿಂಗವು ಇಂದೂ ವ್ಯಾಸರಾಜಮಠದಲ್ಲಿದ್ದು ಪೂಜೆಯನ್ನು ಸ್ವೀಕರಿಸುತ್ತಿದೆ.

ಕೃಷ್ಣದೇವರಾಯನಿಂದ ತನಗೆ ದಾನವಾಗಿ ದೊರೆತ ಕಂದಕೂರಿನಲ್ಲಿ (ಈಗಿನ ಮದನಪಲ್ಲಿ ಎಂಬ ಸ್ಥಳದ ಹತ್ತಿರ) ವ್ಯಾಸತೀರ್ಥರು ಜನರ ಕೃಷಿಗೆ ಅನುಕೂಲವಾಗಲೆಂದು ದೊಡ್ಡಕೆರೆ ಕಟ್ಟಿಸಿದ್ದು ಅದು ವ್ಯಾಸಸಮುದ್ರವೆಂದೇ ಹೆಸರಾಯಿತು. ರೈತರ ನೀರಿನ ಬವಣೆ ನೀಗಿಸಿದ, ಸಮಾಜೋಪಕಾರಿಯಾಗಿದ್ದ ಅವರ ವ್ಯಕ್ತಿತ್ವದ ಇನ್ನೊಂದು ಮಗ್ಗುಲನ್ನು ಇದು ಸೂಚಿಸುತ್ತದೆ. ನಾನಾ ಜನ ಹಿತಕಾರ್ಯ ನಡೆಸಿಕೊಡುತ್ತಿದ್ದ ಅಪರೂಪದ ಸನ್ಯಾಸಿ ಅವರು.

ಕನ್ನಡ ನಾಡಿನ ಒಳಗೂ ಹೊರಗೂ ಸೇರಿದಂತೆ ಒಟ್ಟು ಏಳುನೂರಾಮುವ್ವತ್ತೆರಡು ಆಂಜನೇಯ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಿದಂಥ ಧಾರ್ಮಿಕ ಹೆಗ್ಗಳಿಕೆಯೂ ಅವರಿಗಿದೆ.[**] ಇವುಗಳಲ್ಲಿ ಮುಳುಬಾಗಿಲು, ಅಬ್ಬೂರು, ಚೆನ್ನಪಟ್ಟಣ, ಬನ್ನೂರು, ಹಂಪಿಯ ಚಕ್ರತೀರ್ಥ ಮುಂತಾದ ಎಡೆಗಳಲ್ಲಿನ ಮಾರುತಿ ದೇವಾಲಯಗಳು ತುಂಬ ಪ್ರಸಿದ್ಧಿಯಾಗಿವೆ. ಪೆನುಗೊಂಡೆ ಪ್ರಾಂತ್ಯದಲ್ಲಿಯೇ ಸುಮಾರು ಮುನ್ನೂರ ಐವತ್ತಕ್ಕೂ ಮಿಗಿಲಾಗಿ ಮಾರುತಿ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ್ದಾರೆನ್ನುವುದು ಕೂಡ ದಾಖಲೆಯಲ್ಲಿದೆ. ಸಾಮಾನ್ಯರಿಗೆ ದೇವಾಲಯಗಳ ವಾತಾವರಣದ ಮೂಲಕ ಭಕ್ತಿಯನ್ನು ಪ್ರಚಾರಗೈಯ್ಯುವುದು ಈ ಎಲ್ಲ ಪ್ರತಿಷ್ಠಾಪನೆಯ ಹಿಂದಿದ್ದ ಉದ್ದೇಶವೆನ್ನುವುದು ಸ್ಪಷ್ಟ.

ಅರಸನಿಂದ ದೊರೆತ ಭೂಮಿಕಾಣಿಕೆಯೆಲ್ಲವನ್ನೂ ವ್ಯಾಸತೀರ್ಥರು ತಾವೇ ಇಟ್ಟುಕೊಳ್ಳದೆ ಸಮಯೋಚಿತವಾಗಿ ಇತರರಿಗೆ ದಾನವಾಗಿ ಕೊಟ್ಟುಬಿಡುತ್ತಿದ್ದರೆನ್ನಲಾಗಿದೆ. ಶಿವಮೊಗ್ಗ ಜಿಲ್ಲೆಯ ಕೂಡಲಿ ಗ್ರಾಮದ ಕಲ್ಲುಮಠದಲ್ಲಿ ತಾಮ್ರಶಾಸನವೊಂದು ದೊರೆತಿದ್ದು ಅದು ಹೇಳುವಂತೆ ಕೃಷ್ಣದೇವರಾಯನು ವ್ಯಾಸರಾಯರಿಗೆ ದಾನವಾಗಿ ಕೊಟ್ಟ ಹಾನಗಲ್ ಸೀಮೆಯ ಬಂಕಾಪುರ ವೇಂಟೆಯ ಗೌರಾಪುರವನ್ನು ವ್ಯಾಸರಾಯರು ಮೂವತ್ತು ವೃತ್ತಿಗಳನ್ನಾಗಿ ವಿಂಗಡಿಸಿ ಮಠದ ದೇವಾಲಯಗಳಿಗೆ ಹಾಗೂ ಬ್ರಾಹ್ಮಣರಿಗೆ ದಾನವಾಗಿ ನೀಡಿದ್ದಾರೆ. ಈ ಗೌರಾಪುರ ನಂತರದಲ್ಲಿ ವ್ಯಾಸಪುರವೆಂದೇ ಖ್ಯಾತಿ ಹೊಂದಿತು.

ಹಂಪೆಯ ವಿಠಲಸ್ವಾಮಿ ದೇವಾಲಯದಲ್ಲಿನ ಅಂಗಳದಲ್ಲಿ ಯೋಗಾನರಸಿಂಹನ ವಿಗ್ರಹದ ಪ್ರತಿಷ್ಠಾಪನೆಯೂ ವ್ಯಾಸತೀರ್ಥರದೇ. ಅಚ್ಯುತರಾಯ ದೊರೆಯ ನೆರವು ಪಡೆದು ಉಡುಪಿಯ ಅನಂತೇಶ್ವರ ದೇವಾಲಯ, ಮಧ್ವಸರೋವರಗಳ ಜೀರ್ಣೋದ್ಧಾರ ಗೈದರು. ತಮ್ಮ ಜೀವಿತಾವಧಿಯಲ್ಲಿ ಹರಿದ್ವಾರ, ಗಯೆ, ಕಾಶಿ, ಬಂಗಾಳ, ಕುಂಭಕೋಣ, ಕಂಚಿ, ಉಡುಪಿ, ಮುಳಬಾಗಿಲು ಮೊದಲಾದ ಸ್ಥಳಗಳಲ್ಲಿ ಅವರು ದ್ವೈತವೇದಾಂತದ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಿದರು.

ಜ್ಞಾನ, ಭಕ್ತಿಗಳೆರಡರ ಮಾರ್ಗವಾಗಿಯೂ ಅಂದಿನ ಜನಜೀವನವನ್ನು ಮುನ್ನಡೆಸಿದ ವ್ಯಾಸತೀರ್ಥರು ಗುಣಗ್ರಾಹಿಗಳು, ಅನಸೂಯಾ ವ್ಯಕ್ತಿತ್ವದವರು. ತಮಿಳು ನಾಡಿನ ಕಂಚಿ ಬಳಿ ಇರುವ ಗೋವಿಂದ ತೀರ್ಥಪುರದ

ಅಗ್ರಹಾರದಲ್ಲಿದ್ದ ಸಂಸ್ಕೃತದ ಮಹಾವಿದ್ವಾಂಸ ಸೋಮನಾಥ ಕವಿಯನ್ನು ವಿಜಯನಗರಕ್ಕೆ ಬರಮಾಡಿಸಿಕೊಂಡು ವಿಶೇಷವಾಗಿ ಸನ್ಮಾನಿಸಿದರು. ವ್ಯಾಸತೀರ್ಥರ ವ್ಯಕ್ತಿತ್ವ, ವರ್ಚಸ್ಸುಗಳಿಗೆ ಮಾರು ಹೋದ ಸೋಮನಾಥ ಕವಿ "ವ್ಯಾಸಯೋಗಿ ಚರಿತೆ" ಎಂಬ ಕಾವ್ಯರಚಿಸಿ ವ್ಯಾಸತೀರ್ಥರ ಬದುಕಿನ ಬಗ್ಗೆ ಅನೇಕ ಐತಿಹಾಸಿಕ ಮಹತ್ವದ ವಿವರಗಳನ್ನು ದಾಖಲಿಸಿದ್ದಾನೆ.

ವ್ಯಾಸತೀರ್ಥರು ಸ್ವಯಂ ಪ್ರಕಾಂಡ ಪಂಡಿತರಾಗಿದ್ದು ಅವರ ಮಠದಲ್ಲಿ ನಡೆಯುತ್ತಿದ್ದ ಜ್ಞಾನಯಜ್ಞದಲ್ಲಿ ವಿಶೇಷವಾಗಿ ಪಾಲುಗೊಳ್ಳುತ್ತಿದ್ದ "ವ್ಯಾಸಕೂಟ"ದ ಅಧ್ಯಕ್ಷ ಪೀಠದಲ್ಲಿ ಇದ್ದವರು. ಅವರು ಸಂಸ್ಕೃತದಲ್ಲಿ ರಚಿಸಿರುವುದು ಹತ್ತು ಗ್ರಂಥಗಳು ಎಂದು ತಿಳಿಯಲಾಗಿದೆ. ಇವುಗಳಲ್ಲಿ "ಸತ್ತರ್ಕವಿಲಾಸ" ಎಂಬ ಗ್ರಂಥದ ಪ್ರತಿಯು ಇನ್ನೂ ಉಪಲಬ್ಧವಿಲ್ಲದಾಗಿದೆ. ಉಳಿದ ಒಂಬತ್ತು ಗ್ರಂಥಗಳ ಹೆಸರು ಇಂತಿವೆ: ತಾತ್ಪರ್ಯ ಚಂದ್ರಿಕೆ, ನ್ಯಾಯಾಮೃತ, ತರ್ಕತಾಂಡವ, ಮಾಯಾವಾದ ಖಂಡನ ಟೀಕಾ ಮಂದಾರ ಮಂಜರಿ, ಉಪಾಧಿಖಂಡನ ಟೀಕಾ ಮಂದಾರ ಮಂಜರಿ, ಪ್ರಪಂಚ ಮಿಥ್ಯಾತ್ವಾನುಮಾನ ಟೀಕಾ ಮಂದಾರ ಮಂಜರಿ, ತತ್ವವಿವೇಕ ಟೀಕಾ ಮಂದಾರ ಮಂಜರಿ, ಭೇದೋಜ್ಜೀವನ ಮತ್ತು ವೇದಾಂತ ಸಂಗ್ರಹ ಖಂಡನ. ಇವಲ್ಲದೆ ಅನೇಕ ಸಂಸ್ಕೃತ ಸ್ತೋತ್ರಗಳನ್ನೂ ರಚಿಸಿದ್ದಾರೆ.

ವೇದವ್ಯಾಸರ ಬ್ರಹ್ಮಸೂತ್ರದಂಥ ಗ್ರಂಥಗಳನ್ನು ಶಾಸ್ತ್ರಗ್ರಂಥಗಳೆಂದೇ ಮನ್ನಿಸಿ ಪಂಡಿತರೆಲ್ಲ ಆ ಗ್ರಂಥಗಳನ್ನು ಮಡಿಯಲ್ಲೇ ಓದಬೇಕೆಂಬ ವಿಚಿತ್ರ ವಿಧಿಗಳೂ ಪರಂಪರಾಗತವಾಗಿ ಮಠದಲ್ಲಿ ನೇಮಕವಿದ್ದೂ, ಸಂಸ್ಕೃತದ ಮಡಿವಂತಿಕೆಯೊಂದನ್ನೇ ಹಿಡಿದು ನಡೆಯದೆ, ಸ್ವತ: ತಾನೇ ಅದ್ಭುತವಾದ ಸಂಸ್ಕೃತ ಗ್ರಂಥ ರಚನಕಾರರಾಗಿದ್ದೂ, ರಾಜಗುರುಗಳಾಗಿದ್ದೂ ಯಾವ ಬಿಂಕ ಬಿಗುಮಾನಗಳಿಲ್ಲದೆ ಕನ್ನಡ ಭಾಷೆಯನ್ನು ಕೈಗೆತ್ತಿಕೊಂಡು ಹರಿದಾಸ ಮನೋಭಾವನೆಯಿಂದ ಸ್ವತ: ದೇವರನಾಮಗಳನ್ನು ರಚಿಸಿ, ದಾಸಕೂಟದವರಿಗೆ ಆಶ್ರಯದಾತರಾಗಿ, ಪ್ರೋತ್ಸಾಹಿಸಿ ಹರಿದಾಸ ಸಾಹಿತ್ಯವನ್ನು ದೊಡ್ಡದಾಗಿ ಬೆಳೆಯಿಸಿದ್ದು ವ್ಯಾಸರಾಯರ ಹಿರಿತನದ, ಕವಿತನದ ಪ್ರೀತಿವಂತ ಮನಸ್ಸನ್ನು ಸೂಚಿಸುತ್ತದೆ.

ವ್ಯಾಸತೀರ್ಥರ ಬದುಕಿನ, ಸಾಧನೆಯ, ವ್ಯಕ್ತಿತ್ವದ ವಿವರಗಳನ್ನು ತಿಳಿಯಲು ಸಂಸ್ಕೃತದಲ್ಲಿಯೂ, ಕನ್ನಡದಲ್ಲಿಯೂ ಅನೇಕ ಆಕರಗಳು ದೊರೆತಿವೆ. ವಿಜಯಿಂದ್ರತೀರ್ಥರು ಬರೆದಿರುವ ಶ್ರೀವ್ಯಾಸರಾಜಾಭ್ಯುದಯ, ಸುಧೀಂದ್ರತೀರ್ಥರು ಬರೆದಿರುವ ಗುರುರತ್ನಮಾಲಿಕೆ, ವಿದ್ಯಾರತ್ನಾಕರ ತೀರ್ಥರ ಅಷ್ಟಕ, ಸೋಮನಾಥ ಕವಿಯ ಶ್ರೀವ್ಯಾಸಯೋಗಿ ಚರಿತೆ ಈ ಸಂಸ್ಕೃತದ ಆಕರಗಳಲ್ಲದೆ ಮುಂದಿನ ಹರಿದಾಸ ಸಾಹಿತ್ಯದಲ್ಲಿಯೂ, ಅವರ ಸಮಕಾಲೀನರಾದ ವಾದಿರಾಜಯತಿ, ಪುರಂದರದಾಸ, ಕನಕದಾಸರ ಕೀರ್ತನೆಗಳಲ್ಲಿಯೂ, ಸ್ವತಃ ವ್ಯಾಸತೀರ್ಥರ ಕೆಲವು ಕೀರ್ತನೆಗಳಲ್ಲಿ ಕೂಡಾ ಅವರ ಬದುಕಿನ ಬಗ್ಗೆ ಅನೇಕ ವಿವರಗಳು ದೊರೆಯುತ್ತವೆ. ದೊರೆತಿರುವ

ಕೆಲವು ವಿಜಯನಗರ ಕಾಲದ ಶಾಸನಗಳೂ ಅವರ ಬದುಕಿನ ಚಿತ್ರಣ ನೀಡುತ್ತವೆ. ದೊಡ್ಡಬಳ್ಳಾಪುರದಲ್ಲಿ ಕೆಲವು ಕಾಲ ವ್ಯಾಸತೀರ್ಥರು ನೆಲೆಸಿದ್ದು ಅಪಾರವಾಗಿ ಸಲ್ಲಿಸಿದ ಜನಸೇವೆಯನ್ನು "ಷಾಷ್ಟಿಕ ವಂಶ ಪ್ರದೀಪ"ವೆಂಬ ರಾಘವೇಂದ್ರಪ್ಪ ಕವಿ ವಿರಚಿತ ಗ್ರಂಥವು ದಾಖಲಿಸಿದೆ. ಇವಲ್ಲದೆ ಮಿರ್ ಆಲಂ ಎಂಬಾತ ಉರ್ದುಭಾಷೆಯಲ್ಲಿ ಬರೆದಿರುವ 'ಗರ್ದಂಕಹನೆ"; ಲಿಸ್ಬಾನಸ್ ಆದಾ ಎಂಬ ಪೋರ್ಚುಗೀಸ್ ರಾಯಭಾರಿ ಬರೆದಿರುವ ಒಂದು ಪುಸ್ತಕ; ಇಟಲಿಯ ರಾಯಭಾರಿ ವೀನಸ್ ಎಂಬಾತ ರೋಮನ್ ಭಾಷೆಯಲ್ಲಿ ಬರೆದಿರುವ ಒಂದು ಪುಸ್ತಕ ಇವುಗಳಲ್ಲಿ ವ್ಯಾಸತೀರ್ಥರ ಬದುಕಿನ ಚಿತ್ರಣವಿದೆ ಎನ್ನಲಾಗಿದೆ.[*೫] ಆದರೆ ಸಧ್ಯಕ್ಕೆ ಈ ಗ್ರಂಥಗಳು ಉಪಲಬ್ಧವಿಲ್ಲ.

ಕರ್ನಾಟಕ ಸಂಗೀತ ಸಂಪ್ರದಾಯಕ್ಕೂ ವ್ಯಾಸತೀರ್ಥರು ಅಪಾರ ಕೊಡುಗೆ ನೀಡಿದ್ದರು. ತಂಜಾವೂರನ್ನು ಆಳಿದ ತುಕ್ಕೋಜಿ ಮಹಾರಾಜನು ತನ್ನ 'ಸಂಗೀತಸಾರಾಮೃತ' ರಚನೆಯಲ್ಲಿ ವ್ಯಾಸತೀರ್ಥರ ಸಂಗೀತಜ್ಞಾನವನ್ನು ಕುರಿತು ಸ್ಮರಿಸಿಕೊಂಡಿದ್ದಾನೆ.

ಬಹುಮುಖ ಪ್ರತಿಭೆಯ, ಬಲುದೊಡ್ಡ ವಿದ್ವತ್ತಿನ, ಕನ್ನಡ ಕವಿತ್ವದ ಭಾವುಕ ಭಕ್ತಿಯ ಸಾಕಾರರಾದ ವ್ಯಾಸತೀರ್ಥರು ತಮ್ಮ ಬದುಕಿನುದ್ದಕ್ಕೂ ವಿದ್ಯಾದಾನ, ಗ್ರಂಥರಚನೆ, ಹರಿದಾಸ ಸಾಹಿತ್ಯಕ್ಕೆ, ದಾಸಕೂಟಕ್ಕೆ ಅಖಂಡವಾದ ಆಶ್ರಯ, ಪ್ರೋತ್ಸಾಹ, ವ್ಯಾಸಕೂಟದ ಶಿಷ್ಯರಿಗೆ ಜ್ಞಾನಸಂವರ್ಧನೆ, ಕರ್ನಾಟಕ ಸಂಗೀತಕ್ಷೇತ್ರಕ್ಕೆ ಸೇವೆ, ವೃತ್ತಿ ಕಲ್ಪನೆಯ ಮೂಲಕ ಲಕ್ಷ ಲಕ್ಷ ಕುಟುಂಬಗಳಿಗೆ ಆಸರೆ, ರಕ್ಷಣೆ, ರಾಜಗುರುವಾಗಿ ವಿಜಯನಗರದ ಆರುಮಂದಿ ಸಾಮ್ರಾಟರಿಗೆ ಮಾರ್ಗದರ್ಶನ, ಎಲ್ಲಕ್ಕಿಂತ ಮಿಗಿಲಾಗಿ ಮಾತೃಭಾಷೆ ಕನ್ನಡದಲ್ಲಿ ಹರಿಪ್ರೀತಿ ಮತ್ತು ಭಾಗವತಧರ್ಮ ಪ್ರಚಾರ, ನಾಡಿನ ಜನರಿಗೆ ಸನ್ಮಾರ್ಗದರ್ಶನ, ಇವನ್ನೆಲ್ಲ ಮಾಡಿಯೂ ಯತಿಧರ್ಮದ ವೈರಾಗ್ಯ ಶೀಲತೆಯಲ್ಲಿ ಬಾಳಿ ಬದುಕಿದ ಮಹಾನ್ ಚೇತನ. ಸನ್ಯಾಸಿಗಳೂ. ಮಠಗಳೂ ಇರಬೇಕಾದ, ನಡೆದುಕೊಳ್ಳಬೇಕಾದ ಪರಿಗೆ ಅವರು ಮಾದರಿಯಾಗಿದ್ದಾರೆ. "ಶ್ರೀವ್ಯಾಸರಾಜರು ರಾಜ್ಯವನ್ನೂ, ವೇದಾಂತ ಸಾಮ್ರಾಜ್ಯವನ್ನೂ ಒಟ್ಟಿಗೆ ಆಳಿದ ಧೀರರು. ಲೌಕಿಕ ಕಾರ್ಯನಿರ್ವಹಣೆ, ರಾಜನೀತಿ ಶಾಸ್ತ್ರ ಬೋಧೆ, ಸತ್‌ಸಿದ್ಧಾಂತ ಅಧ್ಯಯನ, ಉಪದೇಶ ಮತ್ತು ಪ್ರಚಾರಗಳನ್ನೂ ಒಟ್ಟಿಗೇ ದಕ್ಷತೆಯಿಂದ ಮಾಡಿದ ವೀರರು! ಪರಮಾತ್ಮನನ್ನು ಜ್ಞಾನಭಕ್ತಿ ವೈರಾಗ್ಯಗಳಿಂದ ಒಲಿಸಿಕೊಂಡು ಕುಣಿಸಿ ಮಹಾ ಅಪರೋಕ್ಷ ಜ್ಞಾನಿಗಳಾದ ಭಾಗವತೋತ್ತಮರು"[*೬] ಎಂಬ ಪ್ರಶಂಸೆಗೆ ಪಾತ್ರರಾಗಿದ್ದಾರೆ. ರಾಜಕೀಯವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ವ್ಯಾಸತೀರ್ಥರು ವ್ಯಾಪಕವಾಗಿ, ಅನುಪಮವಾಗಿ ಸೇವೆ ಸಲ್ಲಿಸಿದವರಾಗಿದ್ದಾರೆ.

ಬಂಗಾಳದ ಕವಿ 'ಕರ್ಣಪೂರ' ಎಂಬ ವಿದ್ವಾಂಸರು ತಮ್ಮ 'ಗೌರಾಂಗದೀಪಿಕಾ' ಎಂಬ ಗ್ರಂಥದಲ್ಲಿ ವ್ಯಾಸರಾಯರ ಗ್ರಂಥಗಳನ್ನು ಉಲ್ಲೇಖಿಸುತ್ತಾ ಅವುಗಳನ್ನು 'ವಿಷ್ಣುಸಂಹಿತೆ' ಎಂದು ಕರೆದಿದ್ದಾರೆ. ವಿಷ್ಣು ಭಕ್ತಿಯನ್ನು ಭಾರತದಾದ್ಯಂತ ಪ್ರಸರಿಸಿದ ವ್ಯಾಸತೀರ್ಥರು ಬೇರೆಲ್ಲ ಚಟುವಟಿಕೆ, ಕಾರ್ಯಬಾಹುಳ್ಯ, ಜವಾಬ್ದಾರಿಯ ನಡುವೆಯೂ ಹರಿದಾಸತ್ವವನ್ನು ಆರೋಪಿಸಿಕೊಂಡು ತಮ್ಮ ಅನೇಕ ಶಿಷ್ಯರುಗಳಿಗೆ ಹರಿದಾಸ ದೀಕ್ಷೆ ಇತ್ತು, ದಾಸಕೂಟಕ್ಕೂ

ವ್ಯಾಸಕೂಟಕ್ಕೂ ಅಧ್ವರ್ಯುವಾಗಿ ನಿಂತು ವ್ಯಾಸಸಾಹಿತ್ಯಕ್ಕೆ ಮಿಗಿಲಾಗಿ ದಾಸಸಾಹಿತ್ಯ ಸೊಂಪಾಗಿ ಬೆಳೆದು ಕನ್ನಡ ಭಾಷೆಯ ಸೊಗಸು, ಸೊಗಡುಗಳು ಹರಡಿ ಹರಿಭಕ್ತಿಯು ಕನ್ನಡ ಮನಸ್ಸುಗಳಲ್ಲಿ ಬೇರೂರುವಂತೆ ಮಾಡಿರುವ ಅನನ್ಯ ಮಾರ್ಗದರ್ಶಕರಾಗಿದ್ದಾರೆ.

ವ್ಯಾಸತೀರ್ಥರು ೯೨ ವರ್ಷಗಳ ಕಾಲ ಬದುಕಿದ್ದು ಸಾರ್ಥಕ ಬಾಳನ್ನು ಬಾಳಿ ಕ್ರಿ.ಶ.೧೫೩೯ರ ಮಾರ್ಚ ೮ನೇ ದಿನಾಂಕ, ಶನಿವಾರದಂದು (ಫಾಲ್ಗುಣ ಬಹುಳ ಚೌತಿಯಂದು) ಲೋಕದ ಬದುಕಿಗೆ ವಿದಾಯ ಹೇಳಿದರು. ಹಂಪೆಯ ಬಳಿ ಇರುವ ತುಂಗಾಭದ್ರಾ ನದಿಯ ನಡುಗಡ್ಡೆಯಲ್ಲಿ ಈಗಲೂ 'ನವವೃಂದಾವನ' ದ ನಡುವೆ ವ್ಯಾಸತೀರ್ಥರ ವೃಂದಾವನವಿದೆ.

ವ್ಯಾಸತೀರ್ಥರ ಕನ್ನಡ ಕೃತಿಗಳು ಮತ್ತು ವಿಶ್ವವಿದ್ಯಾಲಯ

ಮುಳುಬಾಗಿಲಿನ ಶ್ರೀಪಾದರಾಜರಲ್ಲಿ ಹನ್ನೆರಡು ವರ್ಷಗಳ ಕಾಲ ವಿದ್ಯಾರ್ಜನೆ ಮಾಡುತ್ತಿದ್ದ ಕಾಲದಲ್ಲೇ ವ್ಯಾಸತೀರ್ಥರ ಕವಿಹೃದಯದ ಮೇಲೆ ತಮ್ಮ ಗುರುವು ಅಳವಡಿಸಿಕೊಂಡಿದ್ದ ಹರಿಪ್ರೀತಿ, ಹರಿದಾಸ್ಯ ಮನೋಭಾವ, ಕನ್ನಡಕೃತಿಗಳ ರಚನೆ, ಸಂಜೆಯಹೊತ್ತಿನ ಭಜನೆ, ನರ್ತನಸೇವೆ ಇತ್ಯಾದಿಗಳು ತುಂಬ ಪ್ರಭಾವ ಬೀರಿರಬೇಕು. ಮುಂದೆ ತಾವೇ ಹರಿದಾಸ ಪರಂಪರೆಯನ್ನು ಬೆಳೆಸಲು ಅವರಿಗೆ ಶ್ರೀಪಾದರಾಜರೇ ಸ್ಫೂರ್ತಿಯಾದರೆನ್ನುವುದರಲ್ಲಿ ಸಂದೇಹವಿಲ್ಲ. ತಾವೂ ಕನ್ನಡಕೀರ್ತನೆಗಳನ್ನು, ಉಗಾಭೋಗ, ಸುಳಾದಿಗಳನ್ನು ರಚಿಸಿ ಸಾಯಂಪೂಜೆಯ ವೇಳೆಗೆ ಹಾಡಿಕೊಂಡು, ಹಾಡಿಸಿ ನರ್ತನ ಮಾಡುತ್ತಿದ್ದರೆಂಬ ಪ್ರತೀತಿ ಇದೆ. ಅಷ್ಟೇ ಅಲ್ಲ, ಹರಿದಾಸರುಗಳನ್ನೆಲ್ಲ ಸೇರಿಸಿಕೊಂಡು ಅವರಿಂದಲೂ ಕೃತಿರಚನೆಯನ್ನು ಪ್ರೇರೇಪಿಸುತ್ತ, ಆ ಕೃತಿಗಳನ್ನೆಲ್ಲ ಸಾಮಾನ್ಯಜನರ ನಡುವೆ ತಿರುಗಾಡಿ ಹಾಡಿ ಪ್ರಚಾರಮಾಡಲು ಪ್ರೋತ್ಸಾಹಿಸುತ್ತ ಹೀಗೊಂದು 'ದಾಸಕೂಟ' ಎಂಬಂಥ ಸಂಘಟನೆಗೂ ಕಾರಣಪುರುಷರಾದರು.

'ಕೃಷ್ಣ'ನೇ ವ್ಯಾಸತೀರ್ಥರ ಕೃತಿಗಳ ಅಂಕಿತನಾಮವಾಗಿದ್ದಾನೆ. ಕೃಷ್ಣ, ಶ್ರೀಕೃಷ್ಣ, ಸಿರಿಕೃಷ್ಣ ಎಂಬ ಮೂರು ರೂಪಗಳಲ್ಲಿ ಈ ಅಂಕಿತವು ಪ್ರಯೋಗವಾಗಿದೆ. ಉಡುಪಿಯ ಕೃಷ್ಣನ ಮೇಲೆ ತುಂಬ ಪ್ರೀತಿಯಿದ್ದು ಅನೇಕ ಕೃತಿಗಳಲ್ಲಿ ಅವನನ್ನೆ ಹಾಡಿ ಸ್ತುತಿಸಿರುವುದು ಅವರಿಗೂ ಉಡುಪಿಗೂ ಇದ್ದ ಸಂಪರ್ಕ, ಮತ್ತು ಅವರ ಶಿಷ್ಯ ವಾದಿರಾಜರೊಂದಿಗೆ ಅವರಿಗಿದ್ದ ಸ್ನೇಹ ಸೌಹಾರ್ದತೆಯ ದ್ಯೋತಕವಾಗಿದೆ. ತತ್ವಜ್ಞಾನಿಯಾಗಿದ್ದ ಅವರಲ್ಲಿ ಜ್ಞಾನ, ಭಕ್ತಿ ವೈರಾಗ್ಯಗಳು ಸಂಗಮಿಸಿದ್ದು ಆ ಮುಪ್ಪುರಿಗೊಂಡ ಪಕ್ವ ಮನೋಭಾವವು ಅವರ ಕೃತಿಗಳಲ್ಲಿ ಅಭಿವ್ಯಕ್ತವಾಗಿವೆ. ಆತ್ಮವಿಮರ್ಶೆ, ಅಂತರಂಗ ನಿವೇದನೆ, ವಾತ್ಸಲ್ಯ ಮತ್ತು ಸಖ್ಯಭಾವಗಳಲ್ಲಿ ಹರಿಯ ಆರಾಧನೆ, ವ್ಯಾಜನಿಂದಾಸ್ತುತಿ, ಕೃಷ್ಣನ ಬಾಲಲೀಲೆಗಳ ವರ್ಣನೆ ಇವೆಲ್ಲ ಭಾವಗಳು ಅವರ ಕೃತಿಗಳಲ್ಲಿ ಹಾಸುಹೊಕ್ಕಾಗಿವೆ.

"ನಂಬಿ ಕೆಟ್ಟವರಿಲ್ಲವೋ ರಂಗಯ್ಯನ, ನಂಬದೆ ಕೆಟ್ಟರೆ ಕೆಡಲಿ...." ಎನ್ನುವ ಅವರ ಕೀರ್ತನೆ ಇಂದಿಗೂ ಕರ್ನಾಟಕ ಸಂಗೀತ ಪರಂಪರೆಯಲ್ಲಿ ಆಲಾಪನೆ, ಸ್ವರವಿಸ್ತಾರಗಳೊಂದಿಗೆ ಹಾಡುವ ಜನಪ್ರಿಯತೆಯನ್ನು

ಉಳಿಸಿಕೊಂಡಿದೆ. "ಕೃಷ್ಣಾ ನೀ ಬೇಗನೆ ಬಾರೋ " ಎಂಬ ಉಡುಪಿಯ ಕೃಷ್ಣನ ಮೇಲಿನ ಹಾಡು ಕೂಡ ಮಿಗಿಲಾದ ಜನಪ್ರಿಯತೆಯಲ್ಲಿದೆ. ಹರಿಯು ಅಪಾರ ಕರುಣಾಪರನೆಂದು ಸಾರುತ್ತ "ಸಾರಿದವರಿಗೆ ತಂದೆ ತಾಯಿ ಸಿರಿ ಕೃಷ್ಣ ಗಡ!" "ಮಿತಿಯುಂಟೆ ನಿನ್ನ ದಯಕೆ ಹರಿ ಹರಿ ! ನಿನ್ನ ಭಕುತರಲಿ ಮಿತಿಯುಂಟೆ ನಿನ್ನ ದಯಕೆ ?" ಎಂದು ಮುಂತಾಗಿ ಸ್ತುತಿಸಿದ್ದಾರೆ. ಮಾನವ ಬದುಕಿನ ಕಷ್ಟಗಳ ಅರಿಕೆ ಮಾಡಿಕೊಳ್ಳುತ್ತ ಸಲಹಬೇಕೆಂದು ಆರ್ತಮೊರೆ ಸಲ್ಲಿಸಿರುವ ಕೀರ್ತನೆ, ಸುಳಾದಿಗಳು ಸಾಕಷ್ಟಿವೆ. ಮಾನವ ಜನ್ಮದಲ್ಲಿ ಸುಲಭವಾಗಿ ನೀಗಿಕೊಳ್ಳಲು ಆಗದ ಅರಿಷಡ್ವರ್ಗಗಳ ಬಗ್ಗೆ ಅವರ ಕಾವ್ಯಾತ್ಮಕ ಶೈಲಿ ಹೀಗೆ ಚಿಮ್ಮಿದೆ.

ದೇಹ ಜೀರ್ಣವಾಯಿತು ಧನದೆ ಜೀರ್ಣವಾಗದು
ಕಣ್ಣು ಕಿವಿ ಮಂದವಾದವು ಹೆಣ್ಣು ಮಣ್ಣಿನಾಶೆ ಮಂದವಾಗದು......

ಹೀಗೆ ಸಾಗುವ ಸುಳಾದಿಯಲ್ಲಿ ಮುಪ್ಪು ಬಂದು ಇಂದ್ರಿಯ ಪಟುತ್ವ ಮಾಸಿದರೂ ಭೋಗಲಾಲಸೆ ಕಮ್ಮಿಯಾಗದೆ ಪರಿತಾಪಪಡುವ ಮನುಷ್ಯನ ಕುಂದುಕೊರತೆಗಳ ಚಿತ್ರಣವಿದೆ, ಮತ್ತೊಂದೆಡೆ ಗರ್ವಿಸಬಾರದೆಂದು ಮನುಷ್ಯನನ್ನು ಎಚ್ಚರಿಸುವಲ್ಲಿ

ಬಿಗಿಯದಿರು ಬಿಗಿಯದಿರು ಎಲೆ ಮಾನವಾ
ಧಿಗಿ ಧಿಗಿ ಧಿಗಿಯೆನುತ ನಿನಗೇಕೆ ಗರ್ವ?

ಎಂದು ಹಾಡಿದ್ದಾರೆ. "ಎನ್ನ ಮನ ಕಂಡ ಕಂಡ ಕಡೆಗೆ ಎರಗುತಿದೆ, ನಿನ್ನಲ್ಲಿ ನಿಲಿಸಿ ಕಾಯೋ"" ಎಂದು ಬೇಡಿದ್ದಾರೆ. ಮಾನವ ಮನದ ಪರದಾಟ, ತೊಳಲಾಟಗಳು ಅವರ ಕೃತಿಯಲ್ಲಿ ನಿವೇದನೆಯಾಗಿ, ಪಾರುಗಾಣಿಸಲು ಹರಿಯ ಮೊರೆ ಹೊಕ್ಕು ಅನನ್ಯ ಶರಣಾಗತಿಯಲ್ಲಿ ಅವನನ್ನು ಕರೆಯಬೇಕೆಂದು ಸೂಚಿಸುತ್ತವೆ. ನವವಿಧ ಭಕ್ತಿ ಕೈಂಕರ್ಯಗಳ ಕಡೆಗೆ ಮನಸ್ಸು ಮಾಡಿ ಹರಿಯನ್ನು ಒಲಿಸಿಕೊಳ್ಳಬೇಕೆಂದು ಅನೇಕ ಕೃತಿಗಳು ಸಾರುತ್ತವೆ.

ಮಾಧ್ವಸಿದ್ಧಾಂತವು ಸಾರುವ ಹರಿಸರ್ವೋತ್ತಮ ತತ್ವವನ್ನು ವ್ಯಾಸತೀರ್ಥರ ಕನ್ನಡ ಕೃತಿಗಳು ತಮ್ಮ ಒಡಲಲ್ಲಿ ಹೊತ್ತಿವೆ. ಕ್ಷುದ್ರ ದೇವತೆಗಳನ್ನು ಟೀಕಿಸಿ "ತೋರಿರೈ ನೀವೆಲ್ಲರು ನಾರಾಯಣನಲ್ಲದ ಅನ್ಯತ್ರ ದೈವವ" ಎಂದು ಪಂಥಾಹ್ವಾನ ನೀಡಿದ್ದಾರೆ. ದ್ವೈತವೇದಾಂತದಲ್ಲಿನ ದರ್ಶನದಂತೆಯೇ ಇತರ ದೇವತೆಗಳಾದ ಈಶ್ವರ, ಗಣಪತಿ, ಲಕ್ಷ್ಮಿ ಮುಂತಾದವರನ್ನೂ ಅನೇಕ ಕೃತಿಗಳಲ್ಲಿ ಸ್ತುತಿಸಿದ್ದಾರೆ. ಮನೋಭಿಮಾನಿಯಾದ ಶಿವನನ್ನು ಸ್ತುತಿಸಿರುವ "ನಮಃ ಪಾರ್ವತಿಪತಿ ನತಜನ ಪರ ನಮೋ ವಿರೂಪಾಕ್ಷ" ಎಂಬ ಕೀರ್ತನೆ ತುಂಬ ಪ್ರಸಿದ್ಧವಾಗಿದೆ. ಈ ಕೃತಿಯಲ್ಲಿನ ಲಯ, ಗೇಯ, ಭಾವಪರವಶತೆ ತಲೆದೂಗುವಂತಿವೆ, ಗುರುಗಳಾದ ಆನಂದತೀರ್ಥರ ಮೇಲೆ, ಶ್ರೀಪಾದರಾಜರ ಮೇಲೆ, ಜಯತೀರ್ಥರ ಮೇಲೆ ರಚಿತವಾಗಿರುವ ಕೃತಿಗಳು ಐತಿಹಾಸಿಕ ದಾಖಲೆಗಳಾಗಿಯೂ ಇವೆ. ಈ ಕೃತಿಗಳು ಸೊಗಸಾದ ಉಪಮೆಗಳಿಂದ ಕೂಡಿವೆ, ಕಾವ್ಯಸೊಗಸಿನಿಂದ ಕೂಡಿಕೊಂಡು ಮನದುಂಬುತ್ತವೆ.

ಪ್ರಾಣದೇವರ ಪ್ರತಿಮೆಗಳನ್ನು ಅಷ್ಟೊಂದು ಸಖ್ಯೆಯಲ್ಲಿ (ಏಳುನೂರಾ ಮುವತ್ತೆರಡು) ಪ್ರತಿಷ್ಠಾಪನೆ ಗೈದವರಾದರೂ ವ್ಯಾಸತೀರ್ಥರು ಪ್ರಾಣದೇವರ ಕುರಿತಾಗಿ ಸುಮಾರು ಹತ್ತು ಕೀರ್ತನೆಗಳನ್ನು ಮಾತ್ರ ರಚಿಸಿದ್ದಾರೆ. "ಜಯ ವಾಯು ಹನುಮಂತ ಜಯ ಭೀಮ ಬಲವಂತ" ಎಂಬ ಹಾಡು ತುಂಬ ಜನಪ್ರಿಯವಾಗಿ ಉಳಿದಿದೆ.

ತಮ್ಮ ಸಮಕಾಲೀನರಾದ ಹರಿದಾಸರುಗಳ (ಪುರಂದರ, ಕನಕರೇ ಮುಂತಾಗಿ) ಬದುಕಿನ ಬಗ್ಗೆ ಅನೇಕ ಸಂಗತಿಗಳನ್ನು ದಾಖಲಿಸುವ ಕೀರ್ತನೆಗಳನ್ನೂ ವ್ಯಾಸತೀರ್ಥರು ರಚಿಸಿದ್ದಾರೆ. ತಮ್ಮ ಶಿಷ್ಯರಾದ ವಾದಿರಾಜಯತಿ ಮತ್ತು ನಾರಾಯಣಯೋಗಿಯ ಬಗ್ಗೆಯೂ ಕೃತಿರಚನೆ ಮಾಡಿದ್ದಾರೆ. ಸಂಗೀತದಲ್ಲಿಯೂ ಪಾಂಡಿತ್ಯವಿದ್ದ ವ್ಯಾಸತೀರ್ಥರು ತಮ್ಮ ರಚನೆಗಳಿಗೆ ತಾವೇ ಸಂಗೀತ ಸಂಯೋಜಿಸಿ ತಾವೇ ಹಾಡುತ್ತಿದ್ದು ಸಂಗೀತ ಲೋಕಕ್ಕೂ ಇವರಿಂದ ಅದಮ್ಯ ಕಾಣಿಕೆ ಸಂದಿದೆ. ಸಂಗೀತ ಶಾಸ್ತ್ರಕಾರ ತುಳಜಾಜಿ ಮಹಾರಾಜರಿಂದ "ಸಂಗೀತ ವಿದ್ಯಾ ಸಂಪ್ರದಾಯ ಪ್ರವರ್ತಕಃ ವಿದ್ಯಾ ಸಿಂಹಸನಾಧ್ಯಕ್ಷ" ಎಂಬ ಪ್ರಶಂಸೆಗೆ ಪಾತ್ರರಾಗಿರುವುದು ಹೆಚ್ಚಳವೇನಲ್ಲ.

"ಬಹು ಭಾವಗರ್ಭಿತವಾದ, ಶಾಸ್ತ್ರ ಸಮ್ಮತವಾದ, ಕಾವ್ಯರಸಪೂರಿತವಾದ ಅನೇಕ ಹಾಡು, ಉಗಾಭೋಗ, ಸುಳಾದಿ, ವೃತ್ತನಾಮಗಳನ್ನು ಕನ್ನಡದಲ್ಲಿ ರಚಿಸಿ ಚಿರಸ್ಮರಣೀಯರು, ಮುಂದೆ ಬಂದ ಹರಿದಾಸರಿಗೂ, ತಮ್ಮ ಸ್ವಂತ ಶಿಷ್ಯರಿಗೂ ಆದರ್ಶಪ್ರಾಯರೂ ಆದರು."*೭

ಹಾಗೆ ತಮ್ಮ ಬದುಕಿನಲ್ಲಿ ಅನೇಕ ಯತಿ ಶಿಷ್ಯರನ್ನು ವ್ಯಾಸತೀರ್ಥರು ರೂಪಿಸಿದ್ದು ಆ ಯತಿಗಳೆಲ್ಲ 'ವ್ಯಾಸಕೂಟ' ವೆನಿಸಿದ ಹಾದಿಯಲ್ಲಿ ಮುನ್ನಡೆದು ಮಠಾಧಿಪತಿಗಳಾದರು. ಅದೇ ರೀತಿ ಅನೇಕಾನೇಕ ಹರಿದಾಸ ಶಿಷ್ಯರುಗಳನ್ನು ವ್ಯಾಸತೀರ್ಥರು ರೂಪಿಸಿದ್ದು ಆ ಹರಿದಾಸರುಗಳೆಲ್ಲ 'ದಾಸಕೂಟ'ವೆನಿಸಿಕೊಂಡು ಹರಿಭಕ್ತಿ ಪ್ರಚಾರಗೈದರು. ವ್ಯಾಸತೀರ್ಥರ ಸಂಸ್ಕೃತ ಶಿಷ್ಯೋತ್ತಮರೇ ವ್ಯಾಸಕೂಟದ ಪ್ರಮುಖರು; ಕನ್ನಡ ಶಿಷ್ಯರುಗಳೇ ದಾಸಕೂಟದ ಪ್ರಮುಖರು ಹೀಗೆ ವ್ಯಾಸಕೂಟ ದಾಸಕೂಟಗಳ ಪ್ರವರ್ತಕರು ಶ್ರೀವ್ಯಾಸತೀರ್ಥರು.

ವಿಜಯನಗರದಲ್ಲಿ ಅರಸ ತಮ್ಮಾರಾಯನಿಂದ ತಮಗೆ ಕೊಡಮಾಡಲ್ಪಟ್ಟ ಲೋಕಪಾವನಮಠವನ್ನೇ ವೇದಾಂತ ವಿಶ್ವವಿದ್ಯಾಲಯವನ್ನಾಗಿ ವ್ಯಾಪಕಮಟ್ಟಕ್ಕೆ ಬೆಳೆಯಿಸಿ ತಾವೇ ಅದರ ಕುಲಪತಿಗಳಾಗಿದ್ದು ಹತ್ತು ಸಾವಿರ ಸಂಖ್ಯೆಗೂ ಮಿಗಿಲಾಗಿ ವಿದ್ಯಾರ್ಥಿಗಳಿಗೆ ಶಿಕ್ಷಣ, ವಸತಿ, ಆಹಾರಗಳ ಏರ್ಪಾಡನ್ನು ಕಲ್ಪಿಸಿ ಜ್ಞಾನದಾನವನ್ನು ಅಭೂತಪೂರ್ವಕವಾಗಿ ನಡೆಯಿಸಿದ ವ್ಯಾಸರಾಜರಿಗೆ ನಾನಾ ಬಗೆಯ ಶಿಷ್ಯರುಗಳಿದ್ದರು. ವೈದಿಕ ಬ್ರಾಹ್ಮಣರು, ಲೌಕಿಕರು, ಗೃಹಸ್ಥರು, ಬ್ರಹ್ಮಚಾರಿಗಳು, ಯತಿಗಳು, ಹರಿದಾಸರುಗಳು ಹೀಗೆ ಅನೇಕ ಬಗೆಯ ಅಪಾರ ಸಂಖ್ಯೆಯ ಶಿಷ್ಯರುಗಳಿಗೆ ಅವರು ಗುರು. ಅಷ್ಟಲ್ಲದೆ ವಿಜಯನಗರದ ಆರು ಮಂದಿ ಸಾರ್ವಭೌಮರೂ, ಈ ಸಾರ್ವಭೌಮರ ಕೈಕೆಳಗಿನ ಮಂತ್ರಿ, ಸಾಮಂತ, ದಂಡನಾಯಕರೆಂದು ಬೇರೆ ಬೇರೆ ಅಧಿಕಾರಿಗಳೂ ಅವರಿಗೆ ಶಿಷ್ಯರೇ.

ಈ ವಿಶ್ವವಿದ್ಯಾಲಯದ ಸವಿಸ್ತಾರ ಚಿತ್ರಣವು ರಾಘವೇಂದ್ರಪ್ಪ ಕವಿಯ "ಷಾಷ್ಟಿಕ ವಂಶ ಪ್ರದೀಪ" ಗ್ರಂಥದಲ್ಲಿ ದೊರೆಯುತ್ತದೆ. ಈ ವಿಶ್ವವಿದ್ಯಾಲಯದಲ್ಲಿ ಬೋಧಿಸಲು ಖ್ಯಾತಿವೆತ್ತ ಪಂಡಿತರು, ವಿದ್ವಾಂಸರು ನೇಮಕಗೊಂಡಿದ್ದರು. ದೇಶವಿದೇಶಗಳಿಂದ ವಿದ್ಯೆಯನ್ನು ಕಲಿಯಬೇಕೆಂದು ಜ್ಞಾನ ಭಿಕ್ಷುಗಳು ಬಂದು ಇಲ್ಲಿನ ವಸತಿಗಳಲ್ಲಿ ತಂಗಿದ್ದು ಪಾಠ ಪ್ರವಚನ ಅಭ್ಯಾಸ ನಡೆಸಿದ್ದರು. ಜೈನ, ಬೌದ್ಧ, ಕ್ರೈಸ್ತ, ಯೆಹೂದ್ಯರೇ ಮುಂತಾಗಿ ಭಿನ್ನಮತೀಯರೂ ವಿದ್ಯಾಭ್ಯಾಸಕ್ಕಾಗಿ ಬರುತ್ತಿದ್ದರು. ಅನೇಕ ಪ್ರಮುಖ ಶಿಷ್ಯರು ವ್ಯಾಸತೀರ್ಥರ ಪದತಲದಲ್ಲಿ ಕುಳಿತು ಷಡ್ದರ್ಶನಗಳನ್ನೂ, ಚತುಶ್ಶಾಸ್ತ್ರಗಳನ್ನೂ ತರ್ಕ, ವ್ಯಾಕರಣ, ಛಂದಸ್ಸು, ಮೀಮಾಂಸೆಗಳನ್ನು ಕಲಿಯುತ್ತಿದ್ದರು. ಅವಕಾಶ ದೊರೆತಾಗಲೆಲ್ಲ ಸ್ವಯಂ ವ್ಯಾಸತೀರ್ಥರೇ ಇವುಗಳನ್ನು ಬೋಧಿಸುತ್ತಿದ್ದರೆನ್ನಲಾಗಿದೆ. ವ್ಯಾಸರಾಯರಿಂದಲೇ ಅದ್ವೈತ, ವಿಶಿಷ್ಟಾದ್ವೈತಗಳನ್ನು ತಿಳಿದು ದ್ವೈತವನ್ನು ಅರಿಯಲು ಮಹಾವಿದ್ವಾಂಸರೇ ಬರುತ್ತಿದ್ದರು ಎನ್ನಲಾಗಿದೆ. ವಿದ್ಯೆಯ ವೈಭವವೇ ತಾಂಡವವಾಡುತ್ತಿದ್ದಂಥ ಪರಿಸರವಿತ್ತು.

ಹೀಗೆ ವ್ಯಾಸರಾಜರಲ್ಲಿ ವೇದಾಂತ ಶಾಸ್ತ್ರವನ್ನು ಅಧ್ಯಯನ ಮಾಡಲು ಬಂದ ಸನ್ಯಾಸಿ ಶಿಷ್ಯರುಗಳೇ ಮುವ್ವತ್ತೆರಡು ಮಂದಿ ಇದ್ದರು. ಈ ಶಿಷ್ಯರುಗಳಲ್ಲಿ ಕೇಶವಾದಿ ಇಪತ್ನಾಲ್ಕು ಹೆಸರುಗಳುಳ್ಳ ಯತಿಗಳೂ ಸೇರಿದ್ದಾರೆ. ವಿಜಯೀಂದ್ರರು, ವಾದಿರಾಜರು, ನಾರಾಯಣಯತಿಗಳು, ಗೋವಿಂದತೀರ್ಥರು, ವನಮಾಲಿಮಿಶ್ರರು, ಪ್ರಜ್ಞಾನಿಧಿಗಳು, ಶ್ರೀನಿವಾಸತೀರ್ಥರು ಮುಂತಾದ ಪ್ರಮುಖ ಯತಿಗಳ ಸಮೂಹವೇ ಶಿಷ್ಯತ್ವ ವಹಿಸಿ ಮುಂದೆ ಕೂಡಲಿ ಅಕ್ಷೋಭ್ಯ ಪರಂಪರೆಯ ಮಠಕ್ಕೂ, ಮುಳಬಾಗಿಲು, ಕಾಂಚಿ, ಉಡುಪಿ, ಕುಂಭಕೋಣ ಕಾಶಿ, ಬಂಗಾಲಗಳಲ್ಲಿಯೂ ಗುರುಪೀಠಗಳನ್ನು ಅಲಂಕರಿಸಿದವರಾದರು. ವ್ಯಾಸತೀರ್ಥರು ಸ್ಥಾಪಿಸಿದ ಅಷ್ಟ ಶಾಖಾ ವಿದ್ಯಾಪೀಠಗಳಿಗೆ ಅಧಿಪತಿಗಳೂ ಆದರು. ಹರಿದಾಸ ಪಂಥದಲ್ಲಿ ಮುಂದೆ ಬಂದ ಗೋಪಾಲದಾಸರೂ, ವಿಜಯದಾಸರೂ ತಮ್ಮ ಕೃತಿಗಳಲ್ಲಿ ವ್ಯಾಸರಾಜರ ಶಿಷ್ಯಂದಿರು ಕೆಲವರನ್ನು ಕುರಿತು ಉಲ್ಲೇಖಿಸಿದ್ದಾರೆ.[*೮]

ಹೀಗೆ ಅನೇಕ ಪಂಡಿತರನ್ನು, ವಿದ್ವಾಂಸರನ್ನು, ಯತಿಶ್ರೇಷ್ಠರನ್ನು ತಮ್ಮ ಶಿಷ್ಯತ್ವ ನೀಡಿ ರೂಪಿಸಿದ್ದಲ್ಲದೆ ಗೃಹಸ್ಥರನ್ನು, ಸಾಮಾನ್ಯರನ್ನು ಬಳಿಕರೆದು ಹರಿಭಕ್ತಿಯನ್ನು ಬೋಧಿಸಿ, ಹರಿಪ್ರೀತಿಯನ್ನು ಪ್ರೇರೇಪಿಸಿ ಹರಿದಾಸ ದೀಕ್ಷೆಯಿತ್ತು ದಾಸಪರಂಪರೆಯನ್ನೂ ವ್ಯಾಸತೀರ್ಥರು ಬೆಳೆಯಿಸಿದವರಾಗಿದ್ದಾರೆ, ವ್ಯಾಸಪೀಠವೊಂದು ಕಡೆ ಜ್ಞಾನಮಾರ್ಗವನ್ನು ಆಯ್ದುಕೊಂಡು ಇಲ್ಲಿ ಬೆಳೆದ ಯತಿಗಳನ್ನು, ಪಂಡಿತೋತ್ತಮರನ್ನು ಮಠದ ಪರಂಪರೆಯಲ್ಲಿರಿಸಿಕೊಂಡರೆ ದಾಸರುಗಳ ಸಮೂಹವೊಂದು ಕಡೆ ಭಕ್ತಿ ಮಾರ್ಗವನ್ನು ಆಯ್ದುಕೊಂಡು ಜನಸಾಮಾನ್ಯರ ನಡುವೆ ಸಾಗಿ ಬೆರೆತು ಹರಿಪ್ರೀತಿಯನ್ನು ಪ್ರಚಾರ ಗೈಯಲಾರಂಭಿಸಿದುದು ವ್ಯಾಸತೀರ್ಥರ ಪ್ರೇರಣೆ, ಪ್ರೋತ್ಸಾಹ, ಆಶ್ರಯ, ಆಸರೆಯಲ್ಲಿಯೇ. ವ್ಯಾಸಕೂಟವೂ, ದಾಸಕೂಟವೂ ಜೊತೆಜೊತೆಯಾಗಿ ಈ ವಿಶ್ವವಿದ್ಯಾಲಯದ ವಾತಾವರಣದಲ್ಲಿ, ಈ ವ್ಯಾಸರಾಯರ ಮಠದಲ್ಲಿ ಆವಿಷ್ಕಾರಗೊಂಡು ಜೊತೆಜೊತೆಯಾಗಿಯೇ ಹೀಗೆ ಬೆಳವಣಿಗೆಯಾದದ್ದು ವ್ಯಾಸತೀರ್ಥರ ಜೀವಿತದ ಅವಧಿಯಲ್ಲೇ. ವ್ಯಾಸತೀರ್ಥರ ನೇತೃತ್ವದಲ್ಲೇ. ವ್ಯಾಸತೀರ್ಥರ ಕಣ್ಣಳತೆಯ ಪ್ರದೇಶದಲ್ಲೇ.

ವ್ಯಾಸಕೂಟದ ತಾತ್ವಿಕ ಪರಿಕಲ್ಪನೆಗಳು ಮತ್ತು ಅದರ ವ್ಯಾಖ್ಯಾನಕಾರರು

ಈ ಎಲ್ಲ ಪಾಂಡಿತ್ಯದ ಶಿಕ್ಷಣ ಪಡೆಯುತ್ತಿದ್ದ ವಿದ್ಯಾರ್ಥಿಗಳ ವೃಂದದಲ್ಲಿ 'ವ್ಯಾಸಕೂಟ' ಎಂಬೊಂದು ಹೆಸರಿನಿಂದ ಗುರುತಿಸುವಿಕೆಯು ಬಳಕೆಯಲ್ಲಿ ಸ್ಪಷ್ಟವಾಗಿ ಬರದಿದ್ದರೂ ಮಧ್ವಾಚಾರ್ಯರ ಸರ್ವಮೂಲ ಗ್ರಂಥಗಳನ್ನು ಸಮಗ್ರವಾಗಿ ವ್ಯಾಸಂಗ ಮಾಡುತ್ತ ವಿದ್ವಾಂಸರೆನಿಸಿಕೊಂಡವರು, ವ್ಯಾಸತೀರ್ಥರ ತರ್ಕತಾಂಡವ, ನ್ಯಾಯಾಮೃತ, ಚಂದ್ರಿಕಾ ಗ್ರಂಥಗಳನ್ನು ಪೂರ್ಣವಾಗಿ ಅಭ್ಯಸಿಸಿ ಪಂಡಿತರೆನಿಸಿಕೊಂಡವರು, ಇವರೆಲ್ಲ ವ್ಯಾಸಕೂಟದಲ್ಲಿ ಪ್ರಮುಖವಾಗಿ ಗುರುತಿಸಲ್ಪಡುವವರೇ ಆದರು. ಇವರೇ ವ್ಯಾಸಕೂಟದ ಪ್ರಮುಖ ವಾಖ್ಯಾನಕಾರರೆನಿಸಿಕೊಂಡವರಾದರು. "ಮೂಲ ಸಂಸ್ಕೃತ ಗ್ರಂಥಗಳನ್ನು, ಅವುಗಳಿಗೆ ಬಂದ ಟೀಕೆಟಿಪ್ಪಣಿಗಳನ್ನು ವ್ಯಾಸಂಗ ಮಾಡಿ ಖಂಡನ ಮಂಡನ ಪರಿಣತರೆನಿಸಿಕೊಂಡು ದಿಗ್ವಿಜಯಕ್ಕೆ ಹೊರಡುವ ಪ್ರಕಾಂಡ ಪಂಡಿತರು ಮತ್ತು ಅವರ ಅನುಯಾಯಿಗಳು 'ವ್ಯಾಸಕೂಟ'ದವರೆನಿಸಿದರು."[೯]

ವೇದವ್ಯಾಸರ ಶಾಸ್ತ್ರಗಳ ದಿಕ್ಕಿನಲ್ಲಿಂದ ವಿದ್ವಾಂಸರಾಗಿ ಒಡಮೂಡಿ ಬಂದವರೆಲ್ಲ ವ್ಯಾಸಕೂಟದ ಸದಸ್ಯರೇ, ಹಾಗೊಂದು ಅಧಿಕೃತ ಶೀರ್ಷಿಕೆಯ ಸಂಸ್ಥೆಯಾಗಲೀ, ವ್ಯವಸ್ಥೆಯಾಗಲೀ ಇಲ್ಲದಿದ್ದರೂ ಇವರೆಲ್ಲ ವ್ಯಾಸಕೂಟಸ್ಥರೇ. ವ್ಯಾಸತೀರ್ಥರ ಕಾಲದ ಮುಂಚೆಯೂ ಈ ಬಗೆಯ ಅಧ್ಯಾಪನ, ವ್ಯಾಸಂಗಗಳು ಇರಲಿಲ್ಲವೆಂದಲ್ಲ. ಸಂಸ್ಕೃತಾಭಿಮಾನಿಗಳಿಂದ ಅದು ಅನೂಚಾನವಾಗಿ ನಡೆದುಕೊಂಡು ಬಂದದ್ದೇ ಇತ್ತು. ಆದರೆ ವ್ಯಾಸರಾಜರ ವ್ಯಕ್ತಿತ್ವದ ಪ್ರಭಾವಲಯದಲ್ಲಿ, ವ್ಯಾಸಕೂಟವೆಂಬ ಪಂಡಿತರ ಗುಂಪು ಹೆಚ್ಚು ಹೆಚ್ಚಾಗಿ ತಮ್ಮ ಬಗೆಗಿನ ವಿದ್ವತ್ತು, ಪ್ರೌಡಿಮೆಗಳನ್ನು ಹೆಮ್ಮೆಯಿಂದ ಗುರುತಿಸಿಕೊಳ್ಳುತ್ತ ಬೀಗಿತು. ದಿಕ್ಕುದಿಕ್ಕುಗಳಿಗೂ ಸಂಚಾರ ಮಾಡುತ್ತ ದಿಗ್ವಿಜಯ ಪಡೆಯುತ್ತ ಯಶಸ್ಸು ಪಡೆಯುತ್ತ ಸಾಗಿತು.

ವ್ಯಾಸತೀರ್ಥರ ಪ್ರಮುಖ ಶಿಷ್ಯರೂ, ವ್ಯಾಸಕೂಟದ ಮುಖ್ಯ ವ್ಯಾಖ್ಯಾನಕಾರರೂ ಆಗಿರುವವರಲ್ಲಿ ಈ ಕೆಳಗಿನವರನ್ನು ಹೆಸರಿಸಬಹುದು.

ಶ್ರೀ ವಿಜಯೀಂದ್ರ ತೀರ್ಥರು

ಶ್ರೀ ವಾದಿರಾಜರು – ವ್ಯಾಸಕೂಟ, ದಾಸಕೂಟಗಳೆರಡಕ್ಕೂ ಮುಖ್ಯ ವ್ಯಾಖ್ಯಾನಕಾರರು.

ಶ್ರೀ ಶ್ರೀನಿವಾಸ ತೀರ್ಥರು

ಶ್ರೀ ನಾರಾಯಣ ತೀರ್ಥರು

ಶ್ರೀ ಗೋವಿಂದ ಒಡೆಯರು

ಮುಖ್ಯ ತಾತ್ವಿಕ ಪರಿಕಲ್ಪನೆಗಳು:

ಮಾಯಾವಾದವನ್ನು ತಡೆಗಟ್ಟಿ, ದುರ್ಮತಗಳನ್ನೆಲ್ಲ ಜಯಿಸಿ ಮಧ್ವಮತವನ್ನು ಪುಷ್ಟಿಗೊಳಿಸಿ ಪ್ರಚಾರ ಗೈಯುವುದೇ ವ್ಯಾಸಕೂಟದ ಪ್ರಮುಖರ ಪ್ರಮುಖವಾದ ಗುರಿಯಾಗಿತ್ತು. ಹೀಗಾಗಿ ಸಂಸ್ಕೃತಭಾಷೆಯಲ್ಲೇ ಅನೇಕ ಗ್ರಂಥಗಳ ರಚನೆ, ಟೀಕೆ ಟಿಪ್ಪಣಿ, ಸಾರಸಂಗ್ರಹಗಳು, ವ್ಯಾಖ್ಯಾನ ರಚನೆ ಇವುಗಳೇ ಬದುಕಿನ ಪರಮ ಸಾಧನೆಯೆಂದು ಭಾವಿಸಿ ಅಂತೆಯೇ ಬಾಳಿದರು. ಅನೇಕಾನೇಕ ವಿದ್ವಾಂಸರನ್ನು ವಾಕ್ಯಾರ್ಥಗಳಲ್ಲಿಯೂ, ವಿವಿಧ ಮತಗಳ ಪಂಡಿತರನ್ನು ಖಂಡನೆ ಮಂಡನೆಗಳಲ್ಲಿಯೂ ಸೋಲಿಸಿ ದ್ವೈತಮತದ ವಿಜಯಪತಾಕೆಯನ್ನು ಮೇಲೆತ್ತಿ ಹಿಡಿಯುವುದೇ ಈ ವ್ಯಾಖ್ಯಾನಕಾರರ ಮುಖ್ಯ ಉದ್ದಿಶ್ಯವಾಗಿತ್ತು, ಧ್ಯೇಯ, ಧೋರಣೆಯಾಗಿತ್ತು. ವಿದ್ಯಾಪ್ರಸಾರ, ಪಂಡಿತಪುರಸ್ಕಾರ, ವಾದಿನಿಗ್ರಹಗಳನ್ನು ಬಿಡದೆ ನಡೆಯಿಸಿಕೊಂಡು ಬರುವುದು ಇವರ ಬದುಕಿನಲ್ಲಿಯ ಅವಿಭಾಜ್ಯ ಅಂಗವೇ ಆಗಿತ್ತು.

ಈ ವ್ಯಾಸಕೂಟದ ಪ್ರಮುಖರ ಪ್ರಣಾಲಿಯೇ ಮಾಧ್ವಮತ ತತ್ತ್ವಗಳ ಪ್ರಸಾರವಾಗಿತ್ತು. ಇವರುಗಳ ಮುಖ್ಯ ತಾತ್ವಿಕ ಪರಿಕಲ್ಪನೆಗಳು ಹೀಗಿದ್ದವು.

೧, ಹರಿಯೇ ಸರ್ವೋತ್ತಮ (ಹರಿಃ ಪರತರಃ)

ಚರಾಚರಾತ್ಮಕವಾದ ಈ ಪ್ರಪಂಚವನ್ನೆಲ್ಲ ವ್ಯವಸ್ಥಾತ್ಮಕವಾಗಿ ನಿಯಮಿಸುವ, ರೂಪಿಸುವ, ರಕ್ಷಿಸುವ ಪರಶಕ್ತಿ ಬ್ರಹ್ಮನೇ ವಿಷ್ಣು. ಮುಖ್ಯಬ್ರಹ್ಮ ಅಥವಾ ಪರಬ್ರಹ್ಮನೆಂದರೆ ವಿಷ್ಣುವೇ ಸರಿ, ಜಗತ್ತಿನ ಉದಯ, ಅಳಿವು ಉಳಿವುಗಳಿಗೆ ಮುಖ್ಯ ಕಾರಣ ಒಬ್ಬನೇ, ಅವನೇ ಶ್ರೀಹರಿ. ಅವನಿಗೆ ಹುಟ್ಟೂ ಇಲ್ಲ, ಸಾವೂ ಇಲ್ಲ. ಅವನು ತಾನೇ ಬ್ರಹ್ಮನಿಂದ ಉತ್ಪತ್ತಿಯನ್ನೂ, ರುದ್ರನಿಂದ ಸಂಹಾರವನ್ನೂ ಮಾಡಿಸುತ್ತಾನೆ. ವಿಷ್ಣುವಿನ ಸರ್ವೋತ್ತಮತ್ವವನ್ನು ಹೇಳುವುದೇ ವೇದಶಾಸ್ತ್ರಗಳ ಪರಮಮುಖ್ಯ ತಾತ್ಪರ್ಯವಾಗಿದೆ.

೨. ಸತ್ಯಂ ಜಗತ್ (ಜಗತ್ತು ಸತ್ಯ)

ಮಧ್ವಾಚಾರ್ಯರ ಮತ್ತೊಂದು ತತ್ವ ಕಾಣಿಕೆ ಇದು. ಈ ಚರಾಚರವಾದ ಪ್ರಪಂಚವೆಲ್ಲವೂ ಸತ್ಯ. ಜಗತ್ತು ಸತ್ಯ ಎನ್ನುವುದು ಪ್ರತ್ಯಕ್ಷಾನುಮಾನಗಳಿಂದ ಸಿದ್ಧವಾದಂತೆ ಆಗಮಸಿದ್ಧವೂ ಆಗಿದೆ. ಭಗವಂತನು ಸೃಷ್ಟಿಸಿದ ಜಗತ್ತೆಲ್ಲವೂ ಸತ್ಯವೇ ಅಗಿದೆ, ಇದಾವುದೂ ವ್ಯರ್ಥವಲ್ಲ, ಮಿಥ್ಯೆ ಅಲ್ಲ, ಇಂಥ ಜಗತ್ತಿನ ಕರ್ತನಾದ ಶ್ರೀಹರಿಯನ್ನು ಉಪಾಸನೆ ಮಾಡುವುದೇ ಶ್ರೇಯೋಮಾರ್ಗ.

೩. ತತ್ತ್ವತೋ ಭೇದ. (ಭೇದವು ಪಾರಮಾರ್ಥಿಕ)

ಜಗತ್ತಿನಲ್ಲಿರುವ ಎಲ್ಲ ವಸ್ತುಗಳೂ ಭಿನ್ನ ಭಿನ್ನ ಗುಣಧರ್ಮ ಸ್ವಭಾವಗಳಿಂದ ಕೂಡಿದೆ. ಪರಸ್ಪರ ಭಿನ್ನತೆಯು ಅನೇಕ ಸಲ ಪರಸ್ಪರ ವಿರೋಧದಿಂದಲೂ ಕೂಡಿರುತ್ತದೆ.

ಜೀವ ಪರಮಾತ್ಮರಲ್ಲಿ ಭೇದ

ಜೀವ ಜೀವರಲ್ಲಿ ಭೇದ

ಜಡ ಜೀವರಲ್ಲಿ ಭೇದ

ಜಡ ಈಶ್ವರರಲ್ಲಿ ಭೇದ

ಜಡ ಜಡಗಳಲ್ಲಿ ಭೇದ

ಹೀಗೆ "ಪಂಚ ಭೇದಾಂಶ್ಚ ವಿಜ್ಞಾಯ ವಿಷ್ಣೋಃ ಸ್ವಾಭೇದಮೇವ ಚ॥ "[೧೧]

ಪ್ರಮಾಣ ವಚನಗಳಿಂದ ಈ ಭೇದ ಜ್ಞಾನವು ಮೋಕ್ಷಸಾಧಕ ಎಂದು ಸಿದ್ಧವಾಗುತ್ತದೆ.

೪. ಜೀವಗಣಾಃ ಹರೇನುಚರಾಃ (ಜೀವರೆಲ್ಲರೂ ವಿಷ್ಣುವಿನ ದಾಸರು)

ಶ್ರೀಹರಿಯು ಎಲ್ಲ ದೇವ ಜೀವರಿಂದಲೂ ಉತ್ತಮನೆಂದು ಸಿದ್ಧವಾದ ಬಳಿಕ ದೇವಾದಿ ಜೀವರೆಲ್ಲ ಅವನ ಅನುಚರರೆಂದು ಸಿದ್ಧವಾಗುತ್ತದೆ.

೫. ನೀಚೋಚ್ಚ ಭಾವಂ ಗತಾಃ(ಜೀವರುಗಳಲ್ಲಿ ತಾರತಮ್ಯವಿದೆ)

ಜೀವಜೀವರಲ್ಲಿ ತರತಮ ಭಾವವಿದೆ, ದೇವತೆಗಳಲ್ಲಿಯೂ ತಾರತಮ್ಯವಿದೆ.

೬. ಮುಕ್ತಿರ್ನೈಜ ಸುಖಾನುಭೂತಿ (ಸ್ವರೂಪ ಸುಖಾನುಭವವೇ ಮುಕ್ತಿ)

ತನ್ನ ಸ್ವರೂಪಭೂತವಾದ ಆನಂದವನ್ನು ಅನುಭವಿಸುವುದೇ ಸಜ್ಜೀವರುಗಳಿಗೆ ಮೋಕ್ಷ. ಎಂದರೆ ಜೀವನು ಪರಬ್ರಹ್ಮನನ್ನು ಹೊಂದಿ ತನ್ನ ಸುಖಸ್ವರೂಪವನ್ನು ಪಡೆಯುತ್ತಾನೆ. ಸ್ವರೂಪದ ಆನಂದಾವಿರ್ಭಾವವೇ ಮೋಕ್ಷವಾಗುತ್ತದೆ. ಇಂಥ ಮೋಕ್ಷವು ಆ ಶ್ರೀಹರಿಯ ಅನುಗ್ರಹದಿಂದ ಮಾತ್ರ ಲಭ್ಯ. ಎಲ್ಲ ಜೀವರುಗಳಿಗೂ ಸ್ಥೂಲ, ಸೂಕ್ಷ್ಮ, ಲಿಂಗ ಮತ್ತು ಸ್ವರೂಪ ಎಂಬ ನಾಲ್ಕು ರೀತಿಯ ದೇಹಗಳಿರುತ್ತವೆ.ಮೊದಲಿನ ಈ ಮೂರು ಪ್ರಾಕೃತಿಕ ದೇಹಗಳನ್ನು ಕಳಚಿದ ಬಳಿಕ ನಾಲ್ಕನೆಯ ಸ್ವರೂಪ ದೇಹವು ಪ್ರಕಟವಾಗುತ್ತದೆ. ಈ ಸ್ವರೂಪ

ದೇಹದಿಂದ ಯೋಗ್ಯವಾದ ಸುಖಾನುಭವವನ್ನು ಹೊಂದುವುದೇ ಮೋಕ್ಷ. ಪ್ರಾಕೃತ ದೇಹಗಳಿಂದ ಅನುಭವಿಸುವ ಸುಖಕ್ಕಿಂತ ಸ್ವರೂಪದೇಹದಿಂದ ಅನುಭವಿಸುವ ಸುಖವು ಉತ್ಕೃಷ್ಟವೂ, ನಿರ್ದುಷ್ಟವೂ ಆಗಿರುತ್ತದೆ. ಈ ಮೋಕ್ಷವು ದೊರಕಬೇಕಾದರೆ ಜೀವವು ಕರ್ಮಕ್ಷಯ, ಉತ್ಕ್ರಾಂತಿ, ಮಾರ್ಗ, ಭೋಗಗಳೆಂಬ ನಾಲ್ಕು ಹಂತಗಳನ್ನು ದಾಟಬೇಕಾಗುತ್ತದೆ. ಮುಕ್ತಿಯಲ್ಲಿಯೂ ಸಾಲೋಕ್ಯ, ಸಾಮಿಪ್ಯ, ಸಾಯುಜ್ಯಗಳೆಂಬ ನಾಲ್ಕು ಬಗೆಗಳಿವೆ.

೭. ಅಮಲಾ ಭಕ್ತಿಶ್ಚ ತತ್ಸಾಧನಂ (ನಿರ್ಮಲವಾದ ಭಕ್ತಿಯೇ ಮುಕ್ತಿಗೆ ಕಾರಣವಾಗಿದೆ)

ಮೋಕ್ಷೋಪದಾಯಕವಾದ ಸಕಲ ಸಾಮಗ್ರಿಗಳಲ್ಲಿ ಭಕ್ತಿಯು ಅತ್ಯಂತ ಶ್ರೇಷ್ಠವಾಗಿದೆ.

ಯಾರ ಭಕ್ತಿಗೆ ಮೆಚ್ಚಿ ಶ್ರೀಹರಿಯು ಅನುಗ್ರಹ ಮಾಡುತ್ತಾನೋ ಅವನಿಗೆ ಮಾತ್ರ ಭಗವದಪರೋಕ್ಷವಾಗಿ ಸ್ವರೂಪದೇಹದಿಂದ ಅನುಭವಿಸಬೇಕಾದ ಮೋಕ್ಷ ಸುಖ ಪ್ರಾಪ್ತವಾಗುತ್ತದೆ. ಯೋಗ್ಯತಾನುರೂಪವಾದ ಭಕ್ತಿ ಉಪಾಸನೆಗಳೇ ಮೋಕ್ಷವನ್ನು ಈಯುತ್ತದೆ. ಭಗವಂತನ ಗುಣಗಳನ್ನು ಅರಿತು ಅವನ ಮಹಾಮಹಿಮೆಗಳನ್ನು ತಿಳಿದುಕೊಂಡು ಅವನಲ್ಲಿ ನಿರತಿಶಯವಾದ ಪ್ರೇಮವನ್ನು ಮಾಡುವುದೇ ಭಕ್ತಿ.

೮. ಅಕ್ಷಾದಿ ತ್ರಿತಯಂ ಪ್ರಮಾಣಂ (ಪ್ರತ್ಯಕ್ಷ ಅನುಮಾನ ಆಗಮ ಮೂರು ಪ್ರಮಾಣಗಳು)

ಈ ಮೂರರಲ್ಲಿ ಅನುಮಾನವು ಸ್ವತಂತ್ರ ಪ್ರಮಾಣವಲ್ಲ. ಅದಕ್ಕೆ ಪ್ರತ್ಯಕ್ಷ ಮತ್ತು ಆಗಮಗಳ ಬೆಂಬಲವಿದ್ದರೆ ಮಾತ್ರ ಅದು ಪ್ರಮಾಣವಾಗಬಲ್ಲುದು. ಸ್ವತಂತ್ರ ಅನುಮಾನಕ್ಕೆ ಪ್ರಾಮಾಣ್ಯವಿಲ್ಲ. ಆಗಮ ಎಂದರೆ ಶಾಸ್ತ್ರ. ಭಗವಂತನ ಬಗ್ಗೆ ನಿರ್ದುಷ್ಟವಾಗಿ ತಿಳಿಸಿಕೊಡುವ ಶಬ್ದಗಳೇ ಆಗಮ. ವೇದಗಳನ್ನು ಅನುಸರಿಸುವ ಗ್ರಂಥಗಳೆಲ್ಲ ಶಾಸ್ತ್ರವೆನಿಸುತ್ತವೆ. ಬ್ರಹ್ಮಸೂತ್ರಗಳು, ವೇದ, ಸ್ಮೃತಿ, ಪುರಾಣ ಮುಂತಾದ ಸರ್ವ ಪ್ರಮಾಣ ಗ್ರಂಥಗಳ ನಿರ್ಣಾಯಕ ಶಾಸ್ತ್ರವಾದ್ದರಿಂದ ಅವು ಅತ್ಯುತ್ತಮ ಪ್ರಮಾಣವಾಗಿರುತ್ತವೆ.

೯. ಅಖಿಲಾಮ್ನಾಯೈಕವೇದ್ಯೋ ಹರಿಃ (ಸರ್ವವೇದಗಳಿಂದಲೂ ಶ್ರೀಹರಿಯೇ ಪ್ರತಿಪಾದ್ಯನು)

ಸಕಲವೇದ ಶಾಸ್ತ್ರಗಳೂ ಶ್ರೀಹರಿಯ ಮಹಿಮೆಯನ್ನು ತಿಳಿಸುತ್ತವೆ. ವೇದವಚನಗಳು ಮುಖ್ಯ ವೃತ್ತಿಯಿಂದ ಕರ್ಮವನ್ನೂ ಉಳಿದ ಇಂದ್ರಾದಿ ದೇವತೆಗಳನ್ನೂ ಪ್ರತಿಪಾದಿಸಿದರೂ ಪರಮಮುಖ್ಯ ವೃತ್ತಿಯಿಂದ ಶ್ರೀಹರಿಯನ್ನು ಮಾತ್ರ ಪ್ರತಿಪಾದಿಸುತ್ತವೆ. ಸಕಲ ವೈದಿಕ ಶಬ್ದಗಳೂ ನಾರಾಯಣನನ್ನೇ ಗರ್ಭೀಕರಿಸಿಕೊಂಡಿವೆ. "ಆಮ್ನಾಯೈಕ ವೇದ್ಯ" ಎನ್ನುವ ಮಾತಿಗೆ ಎರಡು ಅರ್ಥವಿದೆ, ಎಲ್ಲ ವೇದಗಳಿಂದಲೂ ಅವನೇ ವೇದ್ಯ ಮತ್ತು ಅವನು ವೇದಗಳಿಂದ ಮಾತ್ರ ವೇದ್ಯ ಎಂದು.

ಪ್ರತ್ಯಕ್ಷವಾಗಿ ಎಂದೂ ಅವನನ್ನು ಕಾಣಲು ಸಾಧ್ಯವಾಗದು, "ನ ಚಕ್ಷುಷಾ ನ ಗೃಹ್ಯತೇ ನಾಪಿ ವಾಚಾ" ಎಂದು ಮತ್ತೊಂದು ಪ್ರಮಾಣವಚನವಿದೆ. ಇಂದ್ರಿಯಗಳಿಂದ ಅವನು ವೇದ್ಯನಲ್ಲ. ವೇದಗಳು ಮಾತ್ರ ಅವನನ್ನು ತಿಳಿಸುತ್ತವೆ. ವೇದಶಾಸ್ತ್ರಗಳೇ ಆ ಪರಮಾತ್ಮನನ್ನು ತಿಳಿಸಿಕೊಡಬಲ್ಲುವು.

ಇಂಥ ಪ್ರಮಾಣತಮವಾದ ದಿವ್ಯವಾದ ವೇದಜ್ಞಾನವಿಲ್ಲದೆ ಶ್ರೀಹರಿಯ ಬಗ್ಗೆಯಾಗಲೀ, ಅವನ ಜ್ಞಾನ, ಪ್ರಸಾದ, ಮೋಕ್ಷ ಯಾವುದೂ ದೊರಕುವುದಿಲ್ಲ.

ಮೇಲಿನ ಒಟ್ಟು ಮುಖ್ಯ ತತ್ವಗಳನ್ನು, ದ್ವೈತಮತದ ಒಟ್ಟು ವಿಚಾರವನ್ನು ಹೀಗೆ ಸಂಗ್ರಹಿಸಿ ಕ್ರೋಢೀಕರಿಸಿ ಕೊಟ್ಟವರು ವ್ಯಾಸತೀರ್ಥರೇ. ಅವರು ರಚಿಸಿದ ಈ ಕುರಿತ ಶ್ಲೋಕವು ಹೀಗಿದೆ. ದ್ವೈತ ಮತದ ಮುಖ್ಯ ತತ್ವವಿಚಾರಗಳೆಲ್ಲ ಈ ಶ್ಲೋಕದಲ್ಲಿ ಅಡಕವಾಗಿದೆ.

ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ತತ್ತ್ವತೋ
ಭೇದೋ ಜೀವಗಣಾ ಹರೇರನುಚರಾ ನೀಚೋಚ್ಚ ಭಾವಂಗತಾಃ ।
ಮುಕ್ತಿರ್ನೈಜ ಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ
ಹ್ಯಕ್ಷಾದಿತ್ರಿತಯಂ ಪ್ರಮಾಣಮಖಿಲಾಮ್ನಾಯೈಕವೇದ್ಯೋ ಹರಿಃ॥

ಮೇಲಿನ ಶ್ಲೋಕದಲ್ಲಿ ಮಧ್ವಮತದ ನವವಿಚಾರಗಳನ್ನೂ, ಅಥವಾ ನವ ತತ್ತ್ವಗಳನ್ನು ವ್ಯಾಸತೀರ್ಥರು ಜಾಣತನದಿಂದ ಪೋಣಿಸಿಟ್ಟಿದ್ದಾರೆ. ತಮ್ಮ ಗುರುಗಳಾದ ವ್ಯಾಸತೀರ್ಥರಿಂದ ನೀಡಲ್ಪಟ್ಟ ಈ ಮುಖ್ಯ ತತ್ತ್ವಗಳನ್ನು ವಿಶದವಾಗಿಯೂ, ವಿವರವಾಗಿಯೂ, ವೇದಶಾಸ್ತ್ರಗಳ ಬೆಳಕಿನಲ್ಲಿ ಅಧ್ಯಯನ ಮಾಡುವುದೇ ವ್ಯಾಸಕೂಟದ ಮುಖ್ಯ ವ್ಯಾಖ್ಯಾನಕಾರರ ಗುರಿಯಾಯಿತು.

ಮಧ್ವಾಚಾರ್ಯರ ಸಿದ್ಧಾಂತದ ತಿರುಳು ಹುರುಳನ್ನು ಆಮೂಲಾಗ್ರವಾಗಿ ಅಭ್ಯಸಿಸಿ, ಅವರ ಸರ್ವಮೂಲ ಗ್ರಂಥಗಳನ್ನು ಅಧ್ಯಯನ ಮಾಡಿ, ಜಯತೀರ್ಥರೇ ಮುಂತಾದವರ ಟೀಕಾಕೃತಿಗಳನ್ನು ವ್ಯಾಸಂಗಮಾಡಿ ತಾವೂ ಅನೇಕ ವ್ಯಾಖ್ಯಾನಗಳನ್ನು ರಚಿಸುವ ಸಾಮರ್ಥ್ಯ ಹೊಂದಿದ ಜ್ಞಾನ ಮಾರ್ಗಾವಲಂಬಿಗಳಾಗಿ ವ್ಯಾಸಕೂಟದ ಮೊದಮೊದಲ ಗುಂಪಿನವರು ದ್ವೈತ ಮತದ ಪ್ರಸರಣಕ್ಕೆ ಕಟಿಬದ್ಧರಾದರು. ದ್ವೈತ ದರ್ಶನದ ಮುಖ್ಯತತ್ವಗಳಿಗೆ ಇರುವ ವೈಶಿಷ್ಟತೆಯ ಕಡೆಗೆ ವಿದ್ವತ್ ಜಗತ್ತಿನ ಗಮನ ಸೆಳೆಯುತ್ತ ಮೀಮಾಂಸಾ ಪಟುಗಳೆನ್ನಿಸಿಕೊಂಡರು. ಹಿಂದೆ ಆಗಿ ಹೋದ ಜಯತೀರ್ಥರ ಕಾಲ (ಕ್ರಿ.ಶ ೧೩೪೫-೧೩೮೮) ವನ್ನು ಬಿಟ್ಟರೆ ವ್ಯಾಸತೀರ್ಥರ ಕಾಲದಲ್ಲೇ, ವ್ಯಾಸಕೂಟ, ದಾಸಕೂಟಗಳೆರಡರ ಮೂಲಕವೂ ಮಾಧ್ವ ಮತ ಪ್ರಚಾರ ಸುಭದ್ರವಾಗಿ ಸುವಿಶಾಲವಾಗಿ ಬೆಳೆದು ಸುಪ್ರತಿಷ್ಠಿತವಾಯಿತು. ಮಾಧ್ವ ಸಿದ್ಧಾಂತದಲ್ಲಿ ಅಷ್ಟೊಂದು ಸತ್ವವಿದೆ ಎಂದು ತೋರಿಸಿಕೊಟ್ಟ ವ್ಯಾಖ್ಯಾನಕಾರರೇ ವ್ಯಾಸತೀರ್ಥರು. ಮತ್ತು ಅವರ ಪ್ರಮುಖ ಶಿಷ್ಯರಲ್ಲಿ ಕೆಲವರು ಈ ಪರಿಕಲ್ಪನೆಗಳ ಮುಂದಿನ ವ್ಯಾಖ್ಯಾನಕಾರರಾಗಿ ದೊರೆಯುತ್ತಾರೆ.

ವಿಜಯೀಂದ್ರ ತೀರ್ಥರು

ಇವರು ವ್ಯಾಸತೀರ್ಥರ ಪೂರ್ವಾಶ್ರಮದ ಸೋದರ ಮಧ್ವಪತಿ ದೇವನ ಪುತ್ರ. ಮೊದಲಿನ ಹೆಸರು ವಿಠಲಾಚಾರ್ಯ. ವ್ಯಾಸರಾಜರಿಗೆ ಶಿಷ್ಯರಾಗಿ ವೇದ, ವೇದಾಂಗ, ನ್ಯಾಯ, ಇತಿಹಾಸ, ಮೀಮಾಂಸಗಳಾದಿಯಾಗಿ ಸಕಲ ಶಾಸ್ತ್ರ ಪಾರಂಗತರಾದರು. ಇವರನ್ನು ಮುಂದೆ ತಮ್ಮ ಪೀಠದ ಉತ್ತರಾಧಿಕಾರಿಯನ್ನಾಗಿ ಮಾಡಬೇಕೆಂದು ಆಶಿಸಿ, ಅದಕ್ಕೆ ಬೇಕಾದ ಅರ್ಹತೆಗಳೆಲ್ಲವೂ ಇವರಲ್ಲಿದ್ದುದನ್ನು ಮನಗಂಡು ವ್ಯಾಸತೀರ್ಥರು "ವಿಷ್ಣುತೀರ್ಥ" ಎಂದು ಆಶ್ರಮನಾಮವನ್ನಿತ್ತು ತಮ್ಮ ಯತಿಶಿಷ್ಯನನ್ನಾಗಿಸಿಕೊಂಡಿದ್ದರು. ಅತ್ಯಾಸಕ್ತಿಯಿಂದ ಆರುಬಾರಿ ಇವರಿಗೆ ವ್ಯಾಸತೀರ್ಥರು ಸರ್ವಮೂಲಗ್ರಂಥಗಳ ಮೂಲಪಾಠವನ್ನೂ, ಒಂಬತ್ತು ಬಾರಿ ಶ್ರೀಮನ್ನ್ಯಾಯಸುಧಾ ಗ್ರಂಥದ ಸಮಗ್ರಪಾಠವನ್ನು ಹೇಳಿದ್ದರೆನ್ನಲಾಗಿದೆ*[11] ಹೀಗಾಗಿ ಪ್ರಶ್ನಾತೀತವಾದ ಮಧ್ವಶ್ರದ್ಧೆ ವಿಷ್ಣುತೀರ್ಥರಲ್ಲಿ ಮಿಳಿತಗೊಂಡಿತು.

ಆದರೆ ವಿಷ್ಣುತೀರ್ಥರನ್ನು ತಮ್ಮ ಸಂಸ್ಕೃತ ವಿದ್ಯಾಪೀಠದ ಉತ್ತರಾಧಿಕಾರಿಯಾಗಿ ಮಾಡುವ ವ್ಯಾಸತೀರ್ಥರ ಅಪೇಕ್ಷೆ ನೆರವೇರಲಿಲ್ಲ. ವಿಜಯನಗರಕ್ಕೆ ಬಂದ ಸುರೇಂದ್ರತೀರ್ಥರು (ವಿಬುಧೇಂದ್ರತೀರ್ಥರ ಪೀಳಿಗೆಯಲ್ಲಿ ಬಂದ ರಘುನಂದನ ತೀರ್ಥರಿಂದ ಆಶ್ರಮ ಪಡೆದು ಅವರ ಉತ್ತರಾಧಿಕಾರಿಗಳಾದವರು ಈಗಿನ ರಾಘವೇಂದ್ರ ಸ್ವಾಮಿ ಮಠದ ಪೂರ್ವಿಕ ನಾಲ್ಕನೇ ತಲೆಮಾರಿನ ಯತಿಗಳು. ಉತ್ತರಾದಿ ಮಠದ ಪರಂಪರೆಯಲ್ಲಿ ಆರನೆಯ ಯತಿಗಳು. ಇವರ ಸೋದರ ಬ್ರಹ್ಮಣ್ಯ ತೀರ್ಥರೇ ವ್ಯಾಸರಾಜರಿಗೆ ಆಶ್ರಮವಿತ್ತ ಗುರುಗಳು) ವಿಷ್ಣುತೀರ್ಥರನ್ನು ಕಂಡು ಅವರ ಬಾಲತೇಜಸ್ಸು, ವಿದ್ಯಾವರ್ಚಸ್ಸು, ವಿನಯ,ಭಕ್ತಿಗಳಿಗೆ ಮಾರುಹೋಗಿ ತಮ್ಮ ಮಠದ ಉದ್ಧಾರಕ್ಕೆ

ಬಾಲಕನನ್ನು ಕಳುಹಿಸಿಕೊಡಬೇಕೆಂದು ವ್ಯಾಸರಾಜರಲ್ಲಿ ವಿನಂತಿಸಿಕೊಂಡು ಒಪ್ಪಿಗೆ ಪಡೆದು ಕರೆದೊಯ್ದರು. ವಿಷ್ಣುತೀರ್ಥರನ್ನು ಸಂತೋಷವಾಗಿಯೇ ಸುರೇಂದ್ರತೀರ್ಥರಿಗೆ ಒಪ್ಪಿಸಿ ವ್ಯಾಸರಾಜರು ಹೃದಯವೈಶಾಲ್ಯತೆ ತೋರಿದರು. ಇದೇ ವಿಷ್ಣುತೀರ್ಥರೇ ಸುರೇಂದ್ರರ ಪೀಠಕ್ಕೆ ಬಂದನಂತರ ವಿಜಯೀಂದ್ರ ತೀರ್ಥರೆಂದು ನಾಮಾಂಕಿತಗೊಂಡರು.

ತಮ್ಮ ಉತ್ತರಾಧಿಕಾರಿಯನ್ನಾಗಿ ರೂಪಿಸಬೇಕೆಂದು ಅನನ್ಯ ಶ್ರದ್ಧೆಯಿಂದ ಬಾಲಕ ವಿಷ್ಣುತೀರ್ಥರನ್ನು ಜ್ಞಾನಭಕ್ತಿ ವೈರಾಗ್ಯಗಳ ಖಣಿಯಾಗಿ, ಬಹುಮುಖ ಪ್ರತಿಭಾವಂತನಾಗಿ, ವಿದ್ವನ್ಮಣಿಯಾಗಿ ರೂಪಿಸಿದ್ದ ವ್ಯಾಸತೀರ್ಥರು ಹೀಗೆ ಸುರೇಂದ್ರರಿಗೆ ಬಾಲಕನನ್ನು ಒಪ್ಪಿಸಿದ್ದು ಅವರ ತ್ಯಾಗಶೀಲತೆ, ಉದಾರತೆಯನ್ನು ಸೂಚಿಸುತ್ತದೆ. ದಾಸಕೂಟದ ಅಗ್ರಗಣ್ಯರಾದ ಪುರಂದರದಾಸರು ತಮ್ಮ ಗುರುಗಳ ಈ ಹೃದಯವಂತಿಕಗೆ ನೇರ ಸಾಕ್ಷಿಯಾಗಿದ್ದು ತಮ್ಮ ಒಂದು ಸುಳಾದಿಯಲ್ಲಿ ಹೀಗೆ ದಾಖಲಿಸಿದ್ದಾರೆ.

> ಸುರೇಂದ್ರರು ಪುತ್ರ ಭಿಕ್ಷವ ಬೇಡೆ ವಿಜಯೀಂದ್ರರ
> ಕರುಣಿಸಿ ಮಠವನುದ್ಧರಿಸಿದ ಕಾರಣ
> ಗುರು ವ್ಯಾಸರಾಯರೆ ಪರಮಗುರುಗಳು
> ಪುರಂದರ ವಿಠಲ ಪರದೈವ ಜಗಕೆ ಕಾಣಿರೋ॥

ತಮ್ಮ ನೂತನ ಆಶ್ರಮನಾಮದಲ್ಲಿಯೇ ತಮ್ಮ ಗುರು ವ್ಯಾಸರಾಯರನ್ನು ನೆನೆದು ಕನ್ನಡ ಕೀರ್ತನೆಯನ್ನು ವಿಜಯೀಂದ್ರ ತೀರ್ಥರು ರಚಿಸಿದ್ದಾರೆ. "ಯೋಗಿ ವ್ಯಾಸರಾಜರೆಂಬ ಮೇಘ । ಬೇಗ ವಿಷ್ಣು ಪದವ ತೋರಿಸುತ್ತ ಬಂತಿದಕೋ" ಎಂಬ ಈ ಹಾಡು ಸುಂದರವಾದ ರೂಪಕದಿಂದ ವ್ಯಾಸರಾಯರ ಸಾಧನೆಗಳನ್ನು ಚಿತ್ರಿಸುತ್ತದೆ.

ವಿಜಯೀಂದ್ರತೀರ್ಥರ ಕನ್ನಡ ಕೃತಿಗಳಲ್ಲಿ ಸುಳಾದಿಗಳು "ವಿಜಯೀಂದ್ರರಾಮ"ನೆಂಬ ಅಂಕಿತದಲ್ಲಿ ರಚನೆಯಾಗಿದ್ದು ಲಭ್ಯವಿದೆ. ಸಂಸ್ಕೃತಭಾಷೆಯಲ್ಲಿ ವ್ಯಾಸರಾಯರ ಸ್ತೋತ್ರವನ್ನು ರಚಿಸಿದ್ದು ಅದರಲ್ಲಿ ತಮ್ಮ ಗುರುವನ್ನು "ವಿದಧ್ಯಾದಾನಂದತೀರ್ಥ ಹೃದಯಾಂಬುಜ ಮತ್ತ ಭೃಂಗಃ" ಎಂದು ಕೀರ್ತಿಸಿದ್ದಾರೆ. ಆ ಸ್ತೋತ್ರದ ಕೆಲವು ಸಾಲುಗಳು ಹೀಗಿವೆ:

ಶ್ರೀವ್ಯಾಸಯೋಗೀ ಹರಿಪಾದರಾಗೀ
ಭಕ್ತಾತಿಪೂಗೀ ಹಿತದಕ್ಷ ಸದ್ಗೀಃ
ತ್ಯಾಗೀ ವಿರಾಗೀ ವಿಷಯೇಷು ಭೋಗೀ
ಮುಕ್ತೌ ಸದಾ ಗೀತ ಸುರೇಂದ್ರ ಸಂಗೀ ॥

ಇಪ್ಪತ್ತೈದು ಶ್ಲೋಕಗಳಲ್ಲಿರುವ ಈ ಸ್ತೋತ್ರವು "ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾರ್ಯಾಣಾಂ ಶ್ರೀಸುರೇಂದ್ರ ತೀರ್ಥ ಪೂಜ್ಯ ಪಾದಾನಾಂ ಶಿಷ್ಯೇಣ ವಿಜಯೀಂದ್ರ ಭಿಕ್ಷುಣಾ ವಿರಚಿತಂ ಶ್ರೀವ್ಯಾಸರಾಜ ಸ್ತೋತ್ರಂ ಸಂಪೂರ್ಣಂ" ಎಂದು ಕೊನೆಯಾಗುತ್ತದೆ.[•೧]

ಕಳುಹಿಸಿಕೊಡುವಾಗ ವ್ಯಾಸತೀರ್ಥರು ಈ ಶಿಷ್ಯನಿಗೆ ಮಧ್ವಸಿದ್ಧಾಂತವನ್ನು ರಾಷ್ಟ್ರವ್ಯಾಪಿಯಾಗಿಸಬೇಕೆಂದು ಸೂಚಿಸಿದ್ದರು. ವಿಜಯೀಂದ್ರರು ಗುರುವಾಕ್ಯವನ್ನು ನನಸು ಮಾಡಬೇಕೆಂದು ಮೊದಲು ಚೋಳದೇಶ, ತಂಜಾವೂರಿನ ಕಡೆಗೆ ಪಯಣಿಸಿದರು. ಅಲ್ಲಿಂದ ಕಾವೇರಿ ನದೀತೀರದ ಕುಂಭಕೋಣದಲ್ಲಿನ ವಿಪ್ರರ ಆಹ್ವಾನದ ಮೇರೆಗೆ ಅಲ್ಲಿಗೆ ಹೋದರು. ಅಲ್ಲಿನ ವಿಪ್ರಜನರಿಗೆ ತೊಂದರೆಕೊಡುತ್ತಿದ್ದ, ವಾಮಾಚಾರ ಪ್ರಯೋಗ ಪಟುವಾಗಿದ್ದ ಲಿಂಗರಾಜೇಂದ್ರನೆಂಬ ಶೈವಸನ್ಯಾಸಿಯನ್ನು ವಾದಯುದ್ಧದಲ್ಲಿ ಸೋಲಿಸಿ ಮಣಿಸಿದರು. ಅಂದಿನಿಂದ ಅವನಿದ್ದ ಶೈವಮಠ ವಿಜಯೀಂದ್ರರ ಮಠವಾಗಿ ಪರಿವರ್ತಿತವಾಯಿತು. (ಆ ಮಠದ ರಸ್ತೆಗೆ ಈಗಲೂ ಸಹ 'ಶ್ರೀ ವಿಜಯೀಂದ್ರ ಸ್ವಾಮಿ ಮಠದ ರಸ್ತೆ' ಎಂದೇ ಹೆಸರು ನಿಂತಿದೆ) ವಿಜಯೀಂದ್ರ ತೀರ್ಥರು ಮುಂದೆ ಇಲ್ಲಿಯೇ ತಮ್ಮ ಗುರುಗಳೊಂದಿಗೆ ನೆಲೆಸಿದರು. ಉಳಿದ ಅವರ ಜೀವಿತಾವಧಿಯ ಸಾಧನೆಗಳಿಗೆ ಕುಂಭಕೋಣವೇ ಕೇಂದ್ರಬಿಂದು ಸ್ಥಳವಾಯಿತು.

ಕಂಚಿ, ಮೋಕ್ಷಪುರಿ ಮುಂತಾದೆಡೆಗಳಿಗೆ ಹೋಗಿ ಪರವಾದಿಗಳನ್ನು ಜಯಿಸಿದರು. ವಿಜಯೀಂದ್ರರ ಸಮಕಾಲೀನರಾದ ಶ್ರೀತರಂಗಿಣಿ ರಾಮಾಚಾರ್ಯರೆನ್ನುವವರು "ವಿಜಯೀಂದ್ರ ಗುರುರಾಯರ ಅನುದಿನ ಪೂಜಿಸಿರೈ

ಮುದದಿ" ಎಂದು ಪ್ರಾರಂಭವಾಗುವ ಕೀರ್ತನೆಯೊಂದನ್ನು ಬರೆದಿದ್ದು, ಅದರಲ್ಲಿ ಕಂಚಿಯ ಶ್ರೀವರದರಾಜ ಸ್ವಾಮಿಯ ಸನ್ನಿಧಿಯಲ್ಲಿ ಗುರುಗಳನ್ನು ತಾವು ಕಂಡ ಚಿತ್ರಣವನ್ನು ವಿವರವಾಗಿ ದಾಖಲಿಸಿದ್ದಾರೆ. ಈ ರಾಮಾಚಾರ್ಯರು ವಿಜಯೀಂದ್ರರ ಸಹಪಾಠಿಗಳಾಗಿದ್ದು ವ್ಯಾಸರಾಜರಲ್ಲಿ ಶಿಷ್ಯರಾಗಿದ್ದವರೆಂದು ಶ್ರೀರಾಜಾ ಎಸ್.ಗುರುರಾಜಾಚಾರ್ಯರು ತಮ್ಮ "ಅಜಯ್ಯ ವಿಜಯೀಂದ್ರರು" ಕೃತಿಯಲ್ಲಿ ಅಭಿಪ್ರಾಯ ಪಡುತ್ತಾರೆ.

ಕಂಚಿಯಲ್ಲಿ ವಿಜಯ ದುಂಧುಬಿ ಮೊಳಗಿಸಿ ಹಿಂದಿರುವಾಗ ಕೋಲಾರಕ್ಕೆ ಆಗಮಿಸಿ ತಂಗಿದ್ದು ಅಲ್ಲಿಯೂ ಸಭೆ ಸೇರಿ ಆಹ್ವಾನಿಸಿದ ಪರವಾದಿಗಳನ್ನು ಜಯಿಸಿ ತಮ್ಮ ವಿಜಯದ ಸಂಕೇತವಾಗಿ ಅಲ್ಲಿ ಒಂದು ಬೃಹತ್ತಾದ ಆಂಜನೇಯನ ಶಿಲಾವಿಗ್ರಹವನ್ನು ನಗರದ ದೊಡ್ಡಪೇಟೆಯಲ್ಲಿ ಪ್ರತಿಷ್ಠಾಪಿಸಿದರು. ಇಂದಿಗೂ ಇದು ದೇಶಮುಖೀ ದೊಡ್ಡ ಆಂಜನೇಯನೆಂದು ಜನರಿಂದ ಪೂಜೆಗೊಳ್ಳುತ್ತಿದೆ, ವಿಜಯಮಾರುತಿ ಎಂದೂ ಈ ಅಂಜನೇಯನನ್ನು ಕರೆಯುವ ಪರಿಪಾಠ ಉಳಿದುಕೊಂಡು ಬಂದಿದೆ. ಈ ವಿವರವನ್ನೆಲ್ಲ ಕುರಿತಾದ ಹಳೆಯದಾಗಿರುವ ಅಸ್ಪಷ್ಟ ಶಾಸನವೊಂದು ದೇಗುಲದ ಗೋಡೆಯ ಮೇಲಿದೆ. ಸಂರಕ್ಷಣೆ ಪಡೆಯದೇ ನಶಿಸುತ್ತಿದೆ. ನಂತರ ಮುಳುಬಾಗಿಲಿನಲ್ಲಿ ತಮ್ಮ ಪರಮಗುರುಗಳಾದ ಶ್ರೀಪಾದರಾಜರ ಬೃಂದಾವನವನ್ನು ದರ್ಶಿಸಿ ಅಲ್ಲಿಯೇ ಅವರ ಮೇಲೆ ಅಷ್ಟಕವೊಂದನ್ನು ರಚಿಸಿ ಸಮರ್ಪಿಸಿದರು. ತುಮಕೂರಿನಲ್ಲೂ ವಿಜಯೀಂದ್ರರು ತಮ್ಮ ಭೇಟಿಯ ಸ್ಮರಣಾರ್ಥ ಆಂಜನೇಯನ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ.

ಕುಂಭಕೋಣದಲ್ಲೊಂದು ವಿದ್ಯಾಪೀಠ ಸ್ಥಾಪನೆ ಮಾಡಿದ ವಿಜಯೀಂದ್ರರು ತಂಜಾವೂರಿನ ರಾಜನಾದ ಚೆವ್ವಪ್ಪನಾಯಕನ ನೆರವಿನಿಂದ ಮುಂದೆ ಅದನ್ನು ವ್ಯಾಪಕವಾದ ವಿದ್ಯಾದಾನ ನಡೆಯುವಂತೆ ಬೆಳೆಯಿಸಿದರು. (ಮುಂದೆ ಬಂದ ರಾಘವೇಂದ್ರ ಯತಿ(ಸ್ವಾಮಿ)ಗಳು ಇದೇ ವಿದ್ಯಾಪೀಠದಲ್ಲಿ ವ್ಯಾಸಂಗ ನಡೆಸಿದುದಾಗಿದೆ) ದಿನನಿತ್ಯದ ವಿದ್ಯಾದಾನ, ಅನ್ನದಾನಗಳಿಂದ ಪ್ರಖ್ಯಾತಿ ಪಡೆದ ಈ ವಿದ್ಯಾಪೀಠ ವಿಜಯೀಂದ್ರರ ನೇತೃತ್ವದಲ್ಲಿ ಕುಂಭಕೋಣೆಯ ವಿದ್ಯಾನಗರಿಯಾಗಿ ಶೋಭಿಸಿ "ದಕ್ಷಿಣ ವಾರಣಾಸಿ" ಎಂದೇ ಖ್ಯಾತಿ ಪಡೆಯಿತು.

ವಿಜಯನಗರದ ಅರಸ ಅಳಿಯರಾಮರಾಯನಿಂದ ವಿಜಯೀಂದ್ರರಿಗೆ ರತ್ನಾಭಿಷೇಕ ನಡೆದ ಉತ್ಸವವನ್ನು, ಮೆರವಣಿಗೆಯನ್ನು ಪುರಂದರದಾಸರು ತಮ್ಮ "ವಿಜಯೀಂದ್ರ ಮುನೀಂದ್ರರೆಂಬ ಆಶ್ಚರ್ಯದ ಗಜೇಂದ್ರ ಬಂದಿದೆ ಸುಜನರು ನೋಡೋಣ ಬನ್ನಿ" ಎಂಬ ಕೀರ್ತನೆಯಲ್ಲಿ ದಾಖಲಿಸಿದ್ದಾರೆ.

ತಮಿಳುನಾಡಿನಲ್ಲಿ ಅದ್ವೈತ, ವಿಶಿಷ್ಠಾದ್ವೈತ, ಶೈವಪಂಥಗಳ ಪುನಃ ಪ್ರತಿಷ್ಠಾಪಾನಾಕಾಂಕ್ಷಿಯಾದವರು ತಲೆ ಎತ್ತಿದ್ದ ಕಾಲವದು. ಇಂಥ ಸಂದರ್ಭದಲ್ಲಿ ಮಾಧ್ವತತ್ವದ ವಿಜಯವನ್ನು ಅಲ್ಲಿ ನಡೆಸಿದವರು ವಿಜಯೀಂದ್ರರು. 'ಅರಿವೀಲಿಮಂಗಲಂ' ಎಂಬಲ್ಲಿನ ಶಾಸನದಲ್ಲಿ ಅದ್ವೈತ ಪಂಡಿತರೊಡನೆ ವಿಜಯೀಂದ್ರರು ನಡೆಸಿದ ಚಾರಿತ್ರಿಕ ವಾಕ್ಯಾರ್ಥದ ಉಲ್ಲೇಖವಿದೆ. ಒಟ್ಟು ೧೦೪ ಗ್ರಂಥಗಳನ್ನು ಇವರು ರಚಿಸಿದ್ದು ಹದಿನಾರನೇ ಶತಮಾನದ

ತಮಿಳುನಾಡಿನ ಇತಿಹಾಸದಲ್ಲಿ ವೈಷ್ಣವ ಮತೋದ್ಧಾರಕರಾದ ಕೀರ್ತಿ ಇವರದ್ದಾಗಿದೆ. ಇಷ್ಟಲ್ಲದೆ ಇವರು ೬೪ ಕಲೆಗಳಲ್ಲಿಯೂ ಪರಿಣಿತರಾಗಿದ್ದರೆಂದು ವಾದೀಂದ್ರ ತೀರ್ಥರ [೧೨] ಗ್ರಂಥದಿಂದ ತಿಳಿದುಬರುತ್ತದೆ. ಮಧ್ವಮತದ ಪಾರಮ್ಯವನ್ನು ಎತ್ತಿ ಹಿಡಿಯಲು ತಾವು ಕರಗತ ಮಾಡಿಕೊಂಡಿದ್ದ ಅರವತ್ನಾಲ್ಕು ಕಲೆಗಳನ್ನು ಪ್ರಯೋಗಿಸಿದ ಪ್ರಪಥಮ ಯತಿಶ್ರೇಷ್ಠರೆಂಬ ಹೆಗ್ಗಳಿಕೆ ಇವರದ್ದಾಗಿದೆ.

ಇವರ ರಚನೆಗಳಲ್ಲಿನ ಪೂರ್ವಮಿಮಾಂಸಾ, ನ್ಯಾಯಶಾಸ್ತ್ರ ಹಾಗೂ ಅಲಂಕಾರ ಶಾಸ್ತ್ರಗಳಿಂದ ಇವರ ಕಲಾಸಂಪತ್ತಿನ ಪ್ರೌಢಿಮೆ ಅರಿವಾಗುತ್ತದೆ. ಒಟ್ಟು ಹತ್ತು ಪ್ರಕರಣ ಗ್ರಂಥಗಳಿಗೆ ಟಿಪ್ಪಣಿಗಳನ್ನು ಬರೆದಿದ್ದಾರೆಂದು ಹೇಳಲಾಗುತ್ತಿದೆಯಾದರೂ ಇವರು 'ತತ್ವಸಂಖ್ಯಾನ' ಮತ್ತು 'ತತ್ವೋದ್ಯೋತ' ಈ ಎರಡು ಕೃತಿಗಳಿಗೆ ಬರೆದ ಟಿಪ್ಪಣಿಗಳು ಮಾತ್ರ ಉಪಲಬ್ಧವಿವೆ. ವಿಜಯೀಂದ್ರರ ಅತಿ ಪ್ರಸಿದ್ಧ ಟಿಪ್ಪಣಿ ಎಂದರೆ ವ್ಯಾಸತೀರ್ಥರ 'ನ್ಯಾಯಾಮೃತ'ದ ಮೇಲೆ ಬರೆದದ್ದು ಎಂಬ ಅಭಿಪ್ರಾಯವಿದೆ.

ಇವರ "ನ್ಯಾಯ ಮೌಕ್ತಿಕ ಮಾಲಾ" ಕೃತಿಯಲ್ಲಿ ಪ್ರತಿವಾದಿಗಳ ಭಾಷ್ಯ-ಟೀಕೆಗಳನ್ನು ದ್ವೈತ ವೇದಾಂತದ ನಿಲುವಿನಿಂದ ವಿಮರ್ಶಿಸಿ ಶ್ರೀಕಂಠ ಹಾಗೂ ಅಪ್ಪಯ್ಯದೀಕ್ಷಿತರ ಅಭಿಪ್ರಾಯಗಳನ್ನು ಖಂಡಿಸಿ ಮಾಧ್ವತತ್ವಗಳನ್ನು ಸಮರ್ಥಗೊಳಿಸಿದ್ದಾರೆ. "ದ್ವೈತ ದಾರ್ಶನಿಕ ವಿದ್ವಾಂಸರು ಹಿಂದಿನಿಂದ ಅನುಸರಿಸಿಕೊಂಡು ಬಂದ ಸೂತ್ರಭಾಷ್ಯದ ತೌಲನಿಕ ಅಧ್ಯಯನವನ್ನು ಮುಂದುವರೆಸಿ ವೈಚಾರಿಕ ಸಾಹಿತ್ಯದ ಮುನ್ನಡೆಗೆ ಕಾರಣರಾದವರು ವಿಜಯೀಂದ್ರರು" ಎಂದು ಡಾ॥ ಬಿ.ಎನ್.ಕೆ ಶರ್ಮಾ ಅವರು ತಮ್ಮ "ದ್ವೈತ ವೇದಾಂತ ವಾಙ್ಮಯ ಹಾಗೂ ಇತಿಹಾಸ" ಗ್ರಂಥದಲ್ಲಿ ಹೇಳಿದ್ದಾರೆ. 'ಚಕ್ರಮಿಮಾಂಸಾ' (ತಪ್ತ ಮುದ್ರಾಧಾರಣೆಯ ಶಾಸ್ತ್ರದ ವಿವರಗಳನ್ನು ಕುರಿತಾದ ಗ್ರಂಥ) 'ಭೇದ ವಿದ್ಯಾ ವಿಲಾಸ' 'ಅಪ್ಪಯ್ಯ ಕಪೋಲ ಚಪೇಟಿಕಾ' 'ಮಧ್ವಾಧ್ವ ಕಂಟಕೋದ್ಧಾರ' 'ಸಿದ್ಧಾಂತ ಸಾರಾಸಾರಾ ವಿವೇಕ' 'ಪರತತ್ವ ಪ್ರಕಾಶಿಕಾ' ಮುಂತಾದ ಅನೇಕ ಗ್ರಂಥಗಳನ್ನು ರಚಿಸಿ ಪ್ರಚಂಡವಾದ ಪಾಂಡಿತ್ಯ ಪ್ರತಿಭೆ ಪ್ರಕಟಿಸಿದ್ದಾರೆ.

ಹೆಸರಾಂತ ಟೀಕಾಕಾರರಾಗಿ, ಪ್ರಬಲವಾದ ಪ್ರತಿವಾದ ಖಂಡನಕಾರರೆನಿಸಿಕೊಂಡು ವ್ಯಾಸಕೂಟದ ಪ್ರಪ್ರಮುಖರಲ್ಲಿ ಒಬ್ಬರಾಗಿ ಬೆಳೆದ ವಿಜಯೀಂದ್ರತೀರ್ಥರು ಸಾಹಿತ್ಯಕೃತಿಗಳನ್ನೂ, ನಾಟಕಗಳನ್ನೂ ಬರೆದಿದ್ದಾರೆಂದು ತಿಳಿದುಬರುತ್ತದೆ. ಇವುಗಳಲ್ಲಿ ನಮಗೀಗ ದೊರೆತಿರುವುದು ಮೂರೇ ಕೃತಿಗಳು. ಅವುಗಳಲ್ಲಿ "ಸುಭದ್ರಾ ಧನಂಜಯ" ಎಂಬ ನಾಟಕ, "ಉಭಯಗ್ರಸ್ತರಾಹೂದಯ"ವೆಂಬ ಪ್ರತೀಕಾತ್ಮಕ ದೃಶ್ಯಕಾವ್ಯ, ಈ ಕೃತಿಗಳು ರಸಾತ್ಮಕವಾಗಿವೆ.

ಮಾಧ್ವ ಸಾಹಿತ್ಯ ಕ್ಷೇತ್ರದಲ್ಲಿ ಅತಿ ವಿಪುಲವಾದ ಕೃಷಿ ಮಾಡಿದವರು ವಿಜಯೀಂದ್ರರು. "ಭಾರತೀಯ ತತ್ವಶಾಸ್ತ್ರದ ಇತಿಹಾಸದಲ್ಲಿ ವ್ಯಾಸತೀರ್ಥರ ತರುವಾಯ ವಿಜಯೀಂದ್ರರೇ ದ್ವೈತ ದರ್ಶನದ ಸಂರಕ್ಷಣೆಯಲ್ಲಿ ಪ್ರಮುಖ ಯೋಧರೆನ್ನುವುದನ್ನು ಮರೆಯಲಾಗದು" ಎಂದು ಡಾ॥ ಬಿ.ಎನ್.ಕೆ ಶರ್ಮಾ ಅಭಿಪ್ರಾಯ ಪಡುತ್ತಾರೆ.

ಉಡುಪಿಯಲ್ಲಿ ಕೃಷ್ಣನಿಗೆ ಸೇವಾ ಕೈಂಕರ್ಯ ಸಲ್ಲಿಸುತ್ತಿದ್ದ, ತಮ್ಮ ಸಹಪಾಠಿ ಸ್ನೇಹಿತರೇ ಆಗಿದ್ದ ವಾದಿರಾಜರ ಆಹ್ವಾನದ ಮೇರೆಗೆ ವಿಜಯೀಂದ್ರರು ಕುಂಭಕೋಣದಿಂದ ಪಯಣಿಸಿ ಉಡುಪಿಗೆ ಬಂದು ಕೆಲಕಾಲ ತಂಗಿದ್ದರು. ತಮ್ಮ ಸ್ನೇಹದ ಕಾಣಿಕೆಯಾಗಿ ವಾದಿರಾಜರು ರಥಬೀದಿಯ ಉತ್ತರಕ್ಕಿರುವ (ಈಗಿನ ಕನಕನ ಕಿಂಡಿ ಎನ್ನುವ ಸ್ಥಳಕ್ಕೆ ಎದುರಾದ ದಿಕ್ಕಿನಲ್ಲಿ) ಮಠವನ್ನು ವಿಜಯೀಂದ್ರರಿಗೆ ನೀಡಿದರು. ಮುಂದೆ ವಿಜಯೀಂದ್ರರ ಪರಂಪರೆಯಲ್ಲಿಯೇ ಬಂದ ಶ್ರೀಸುಶೀಲೇಂದ್ರ ತೀರ್ಥರು ಕ್ರಿಶ ೧೯೨೬ರಲ್ಲಿ ಉಡುಪಿಯ ಕೃಷ್ಣ ದರ್ಶನಕ್ಕಾಗಿ ಬಂದಿದ್ದಾಗ ವಾದಿರಾಜರಿಂದ ತಮ್ಮ ಪರಂಪರೆಯ ಮೂಲದಲ್ಲಿ ದೊರೆತಿದ್ದ ಇದೇ ಮಠದಲ್ಲಿ ರಾಘವೇಂದ್ರಸ್ವಾಮಿಯವರ ಮೂಲ ಮೃತ್ತಿಕೆಯನ್ನು ತಂದು ಬೃಂದಾವನ ಪ್ರತಿಷ್ಠಾಪನೆ ಮಾಡಿದ್ದಾರೆ. ಈಗ ಅದು ಉಡುಪಿಯಲ್ಲಿನ ರಾಘವೇಂದ್ರಸ್ವಾಮಿಮಠವೆಂದೇ ಖ್ಯಾತಿಗೊಂಡಿದೆ.

ವಿಜಯೀಂದ್ರರ ಉಲ್ಲೇಖಾರ್ಹವಾದ ವಿಶಿಷ್ಟ ಸಾಧನೆ ಎಂದರೆ ಗೌಡ ಸಾರಸ್ವತರೆಂದು ಪ್ರಸಿದ್ಧಿಯಾಗಿರುವ ಬ್ರಾಹ್ಮಣರಿಗೆ ಶುದ್ಧ ವೈಷ್ಣವ ದೀಕ್ಷೆಯನ್ನಿತ್ತು ಅವರಿಗಾಗಿ ಒಂದು ಪ್ರತ್ಯೇಕವಾದ ಪೀಠವನ್ನೇ ಸ್ಥಾಪನೆ ಮಾಡಿದ್ದು. ಗೌಡ ಸಾರಸ್ವತರು ಈ ಮುಂಚೆ ಮಧ್ವರ ಕಾಲದಲ್ಲೇ ಅವರ ಉಪದೇಶಗಳನ್ನು ಕೇಳಿ ದ್ವೈತ ಮತಾನುಯಾಯಿಗಳಾಗಿ ಮುಂದುವರೆದುಕೊಂಡು ಬಂದಿದ್ದರೂ ಈ ಜನಾಂಗದ ಮಧ್ವ ದೀಕ್ಷೆಯ ಅಭಿವ್ಯಕ್ತಿಗೆ ಒಂದು ವ್ಯವಸ್ಥಿತ ರೂಪವನ್ನು ಮಠಸ್ಥಾಪನೆಯ ಮೂಲಕವಾಗಿ ನೀಡಿದ್ದು ವಿಜಯೀಂದ್ರರೇ.

ಕೊಚಿನ್‌ನಲ್ಲಿ ನೆಲೆಸಿದ್ದ ಕೆಲವು ಗೌಡಸಾರಸ್ವತ ಬ್ರಾಹ್ಮಣರು ವಿಜಯೀಂದ್ರರನ್ನು ಒಮ್ಮೆ ಚಾತುರ್ಮಾಸ್ಯ ವ್ರತವನ್ನು ತಮ್ಮಲ್ಲಿಯೇ ಕೈಗೊಳ್ಳಬೇಕೆಂದು ಆಹ್ವಾನಿಸಿದ ಮೇರೆಗೆ ಅಲ್ಲಿಗೆ ತೆರಳಿದ್ದ ವಿಜಯೀಂದ್ರರು ಅಲ್ಲಿನ ಈ ಜನಾಂಗಕ್ಕೆಲ್ಲ ಮಾಧ್ವ ದೀಕ್ಷೆ ಇತ್ತು, ಅವರ ಸಮುದಾಯದಲ್ಲಿನ ಒಬ್ಬ ವಟುವಿಗೆ[*೧೪] ಪೂರ್ತಿಯಾಗಿ ಶಾಸ್ತ್ರಾಭ್ಯಾಸ ದೊರೆಯುವ ವ್ಯವಸ್ಥೆ ಮಾಡಿ ಅವನನ್ನು ವಿದ್ವಾಂಸನನ್ನಾಗಿ ರೂಪಿಸಿ ಮುಂದೆ ಆ ತರುಣನನ್ನು ತಮ್ಮೊಂದಿಗೆ ಕಾಶಿಗೆ ಕರೆದೊಯ್ದು ಅಲ್ಲಿಯ ಗಂಗಾತೀರದಲ್ಲಿ ಅವನಿಗೆ "ಶ್ರೀಯಾದವೇಂದ್ರ ತೀರ್ಥ" ಎಂಬ ಅಭಿದಾನವನ್ನಿತ್ತು ಅಲ್ಲಿ ಮಠ ಸ್ಥಾಪನೆ ಮಾಡಿ ಸನ್ಯಾಸ ಆಶ್ರಮವನ್ನಿತ್ತರು. ತಾವೇ ಪೂಜಿಸುತ್ತಿದ್ದ ಒಂದು ರಾಮದೇವರ ಪ್ರತಿಮೆ, ವೇಧವ್ಯಾಸರ ಪ್ರತಿಮೆ. ಸಾಲಿಗ್ರಾಮಗಳಲ್ಲದೆ ಪಲ್ಲಕ್ಕಿ, ಶ್ವೇತಛತ್ರಿ, ಚಾಮರ ಇತ್ಯಾದಿ ಮಠದ ಮರ್ಯಾದೆಗಳಿಗೆ ಬೇಕಾದ ಎಲ್ಲವನ್ನೂ ಕೊಟ್ಟರು. ಇದೇ ಮಠವೇ ಮುಂದೆ ಕಾಶೀಮಠ ಸಂಸ್ಥಾನವೆಂದು ಹೆಸರಾಗಿ ಅದು ಇಂದಿಗೂ ಪರಂಪರೆಯನ್ನು ಮುಂದುವರೆಯಿಸಿಕೊಂಡು ಬಂದಿದೆ. ವಿಜಯೀಂದ್ರರು ತಮ್ಮ ಕುಂಭಕೋಣ ಮಠದ ವತಿಯಿಂದ ಕ್ರಿಶ ೧೫೪೨ರಲ್ಲಿ ಪ್ಲವನಾಮ ಸಂವತ್ಸರದ ಮಾಘ ಶುದ್ಧ ಪಂಚಮಿ ದಿನದಂದು ಒಂದು ತಾಮ್ರಶಾಸನವನ್ನು ತಮ್ಮ ಗುರು ಶ್ರೀಸುರೇಂದ್ರತೀರ್ಥರ ಹೆಸರಿನಲ್ಲಿ ರಾಯಸದ ಸಮೇತ ಶ್ರೀಯಾದವೇಂದ್ರರಿಗೆ ನೀಡಿದ್ದು ಇಂದಿಗೂ ಆ ತಾಮ್ರಶಾಸನವನ್ನು ಮತ್ತು ರಾಯಸವನ್ನು ಕಾಶಿಮಠದ ಸಂಸ್ಥಾನದಲ್ಲಿ ಜೋಪಾನವಾಗಿ ರಕ್ಷಿಸಿ ಇಡಲಾಗಿದೆ. ವಿಜಯೀಂದ್ರರಿಂದ ದತ್ತವಾಗಿ ನಿತ್ಯಪೂಜೆಗೊಳ್ಳುತ್ತಿರುವ ಮೂರ್ತಿಗಳನ್ನು ಇಂದಿಗೂ ಜನರು ಪೂಜಾಸಮಯದಲ್ಲಿ ನೋಡಬಹುದಾಗಿದೆ.[*೧೫]

ಹೀಗೆ ಗೌಡಸಾರಸ್ವತ ಜನಾಂಗ (ಸಮಾಜ)ವನ್ನೇ ಮಧ್ವರ ಅನುಯಾಯಿಗಳನ್ನಾಗಿ ಮಾಡಿ ಅವರಿಗಾಗಿ ಪ್ರತ್ಯೇಕ ಪೀಠವೊಂದನ್ನೇ ಸ್ಥಾಪಿಸಿಕೊಟ್ಟು, ತಮ್ಮ ಶಿಷ್ಯನನ್ನು ಅಲ್ಲಿ ಪೀಠಾಧಿಪತಿಯಾಗಿ ನಿಯಮಿಸಿದ ವಿಜಯೀಂದ್ರರಿಗೆ "ಸಾರಸ್ವತ ಧರ್ಮಪೀಠ ಸ್ಥಾಪನಾಚಾರ್ಯ" ಎಂಬ ಬಿರುದು ದೊರಕಿದೆ.*[೧೬] ಇದಲ್ಲದೆ ಮಂಗಳೂರಿಗೆ ಸಮೀಪವಿರುವ ಮೂಲ್ಕಿಯಲ್ಲಿ ಅಲ್ಲಿನ ಶ್ರೀವೆಂಕಟರಮಣ ದೇವಸ್ಥಾನದಲ್ಲಿ ಉಗ್ರನರಸಿಂಹಸ್ವಾಮಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿಕೊಟ್ಟರು. ಇಲ್ಲಿನ ಕಾಶೀಮಠದ ಅನುಯಾಯಿಗಳು ಇಂದಿಗೂ ಇಲ್ಲಿ ಕ್ರಮವಾಗಿ ಪೂಜೆ ಸಲ್ಲಿಸಿಕೊಂಡು ಬಂದಿದ್ದು ಅಲ್ಲಿ ನಿತ್ಯಪೂಜೆಯ ವೇಳೇಯಲ್ಲಿ ಹೇಳುವ ಸ್ತೋತ್ರ ಹೀಗಿದೆ:

"ಕಾಶೀಮಠೀಯ ವಿಜಯೀಂದ್ರ ಕೃತ ಪ್ರತಿಷ್ಠೋ
ದೈತ್ಯೇಂದ್ರ ಮತ್ತ ಗಜದಾರುಣ ಚಾರುಹಸ್ತಃ।
ಸದ್ವೈಷ್ಣವ ಪ್ರಭವ ಭಕ್ತ ವರಪ್ರದಾತಾ
ದೇದೀಪ್ಯತೇ ತಿದಶರಾಧ್ಯಹ ನಾರಸಿಂಹಃ॥

ಇದೇ ದೇವಸ್ಥಾನದ ವಸಂತಮಂಟಪದ ಮೇಲೆ ಕೆತ್ತಿರುವ ಶಾಸನಗಳಿಂದ ವಿಜಯೀಂದ್ರರಿಗೆ ವಿದ್ಯಾರತ್ನಾಕರ, ವಿದ್ಯಾನಿಧಿ, ವಿದ್ಯಾಬ್ಧಿ ಎಂಬೆಲ್ಲ ಬಿರುದುಗಳು ದೊರಕಿರುವ ಮಾಹಿತಿ ಸಿಗುತ್ತದೆ.

ಕಾಶೀಮಠದ ದಾಖಲೆಗಳ ಪ್ರಕಾರ ಈ ಕೆಳಗಿನ ಸಂಗತಿಗಳು ತಿಳಿಯುತ್ತವೆ.*[೧೭]

ತಾಳಿಕೋಟೆಯ ಕದನದಲ್ಲಿ ಸಂಪೂರ್ಣವಾಗಿ ವಿಜಯನಗರ ಸಾಮ್ರಾಜ್ಯ ನಾಶಗೊಂಡಾಗ ಅಲ್ಲಿನ ದೇವಾಲಯಗಳ ಕೆಲವು ಅಮೂಲ್ಯ ವಿಗ್ರಹಗಳನ್ನು ಯವನರ ಧಾಳಿಯಿಂದ ರಕ್ಷಿಸಬೇಕೆಂದು ಬಾವಿಯೊಂದರಲ್ಲಿ ಅಡಗಿಸಡಲಾಗಿತ್ತು. ಕೆಲವು ವರ್ಷಗಳ ನಂತರ ವಿಜಯೀಂದ್ರರು ಆ ಮಾರ್ಗವಾಗಿ ಪಯಣಿಸುವಾಗ ದೈವ ಪ್ರೇರಣೆಯಿಂದಾಗಿ ಎಂಬಂತೆ ಈ ವಿಗ್ರಹಗಳು ಅವರಿಗೆ ಲಭ್ಯವಾದವು. ಈ ವಿಗ್ರಹಗಳನ್ನು ಅವರು ತಮ್ಮ ಗೌಡಸಾರಸ್ವತ ವಿಪ್ರ ಶಿಷ್ಯರಿಗಾಗಿ ಈ ಕೆಳಕಂಡ ಸ್ಥಳಗಳಲ್ಲಿ ಪ್ರತಿಷ್ಠಾಪಿಸಿದರು.

೧. ಮೂಲ್ಕಿಯಲ್ಲಿ ಶ್ರೀ ಉಗ್ರನರಸಿಂಹಸ್ವಾಮಿ ವಿಗ್ರಹ

೨. ಮಂಜೇಶ್ವರದಲ್ಲಿ ಶ್ರೀ ಭದ್ರನರಸಿಂಹ ಸ್ವಾಮಿ ವಿಗ್ರಹ

೩. ಕೇರಳದ ಆಲಪ್ಪಿಯಲ್ಲಿ ಮಹಾಲಕ್ಷ್ಮಿಯ ವಿಗ್ರಹ

೪. ಕೇರಳದ ಕೊಚ್ಚಿಯಲ್ಲಿ ಭೂಸಮೇತ ವೆಂಕಟೇಶನ ವಿಗ್ರಹ [ವಿಜಯೀಂದ್ರರಿಂದ ಈ ಎಲ್ಲ ಪ್ರತಿಮೆ ಪಡೆದು ಅವರ ಶಿಷ್ಯರಾದ ಶ್ರೀ ಸುಧೀಂದ್ರರು ಪ್ರತಿಷ್ಠಾಪಿಸಿದರು]

ಇವಲ್ಲದೆ ಕೇರಳದ ವರಾಹಪುರಂ ಎಂಬಲ್ಲಿ ವರಾಹದೇವರ ವಿಗ್ರಹ ಪ್ರತಿಷ್ಠಾಪಿಸಿದರು ಎನ್ನಲಾಗಿದೆ. ಹೀಗೆ ವಿಜಯೀಂದ್ರರಿಂದಲೇ ಕೇರಳದ ಕಾಸರಗೋಡು, ಮಂಗಳೂರು, ಗೋವಾ ಮುಂತಾದೆಡೆಗಳಲ್ಲೆಲ್ಲ ಮಧ್ವಮತ ಹರಡಲು ಕಾರಣವಾಯಿತು. ಗೌಡಸಾರಸ್ವತ ವಿಪ್ರರನ್ನು ಮಾಧ್ವ ಅನುಯಾಯಿಗಳನ್ನಾಗಿ ಮಾಡಿದರು. ಇಂದಿಗೂ ಈ ಜನಾಂಗದವರು ವಿಜಯೀಂದ್ರರನ್ನು ತಮ್ಮ ಸಂಸ್ಥಾನದ ಉಗಮಕ್ಕೆ ಕಾರಣರಾದ ಪರಂಪರೆಯ ಮೂಲಗುರುಗಳೆಂದು ಶ್ರದ್ಧೆ ಭಕ್ತಿಗಳಿಂದ ಸ್ಮರಿಸುತ್ತಾರೆ.

ಅನೇಕ ದೇವತಾಮೂರ್ತಿಗಳನ್ನು ಸ್ವತಃ ತಾವೇ ನಿರ್ಮಾಣ ಮಾಡಿದ ಶಿಲ್ಪಿಯೆಂದೂ ವಿಜಯೀಂದ್ರರು ಪ್ರಖ್ಯಾತರಾಗಿದ್ದಾರೆ. .ಅದ್ಭುತ ಗ್ರಂಥ ರಚನಾಕುಶಲಿ, ಅರವತ್ನಾಲ್ಕು ವಿದ್ಯಗಳಲ್ಲಿ ಪಾರಂಗತ, ವ್ಯಾಪಕ ದ್ವೈತಮತ ಪ್ರಚಾರಕರಾಗಿ ವ್ಯಾಸಕೂಟದ ಪ್ರಮುಖರಾಗಿ ವಿಜಯೀಂದ್ರರು ಬಾಳಿ ಬದುಕಿದರು. ವಿಜಯೀಂದ್ರರ ಪ್ರಶಿಷ್ಯರೇ ಮುಂದೆ ಬಂದ ಪ್ರಸಿದ್ಧರಾದ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳು.

ಶ್ರೀನಿವಾಸ ತೀರ್ಥರು

ವ್ಯಾಸರಾಜರ ಯತಿ ಶಿಷ್ಯರಲ್ಲಿ ಇವರೂ ಪ್ರಮುಖವಾಗಿದ್ದವರು. ವ್ಯಾಸರಾಜರ ಪೂರ್ವಾಶ್ರಮದ ಅಕ್ಕ 'ಭೀಮಕ್ಕ' ಎಂಬಾಕೆಯ ಪುತ್ರ ಇವರೆಂದೂ, ಸೋದರಮಾವ ವಾವೆಯಲ್ಲಿ ವ್ಯಾಸತೀರ್ಥರಲ್ಲಿಗೆ ವಿದ್ಯಾಭ್ಯಾಸಕ್ಕೆಂದು ಬಂದು ಅವರ ವ್ಯಕ್ತಿತ್ವಕ್ಕೆ ಮಾರುಹೋಗಿ ತಾನೂ ಯತಿಶಿಷ್ಯರಾದರು ಎಂದೂ ಕೆಲವರು ವಿದ್ವಾಂಸರ ಅಭಿಪ್ರಾಯವಿದೆ.[*೧೮] ತುಂಬ ಅಕ್ಕರೆಯಿಂದ ಸ್ವತಃ ತಾವೇ ಪಾಠ ಹೇಳಿ ವ್ಯಾಸತೀರ್ಥರು ರೂಪುಗೊಳಿಸಿದ್ದವರಲ್ಲಿ ವಿಷ್ಣುತೀರ್ಥರು ಹಾಗೂ ಈ ಶ್ರೀನಿವಾಸತೀರ್ಥರೇ ಮುಖ್ಯರು. ವಿಷ್ಣುತೀರ್ಥರನ್ನು ಸುರೇಂದ್ರತೀರ್ಥರಿಗೆ ಬಿಟ್ಟುಕೊಡಬೇಕಾಗಿ (ವಿಜಯೀಂದ್ರರಾದವರು ಈ ವಿಷ್ಣುತೀರ್ಥರೇ) ಬಂದಮೇಲೆ ಶ್ರೀನಿವಾಸ ತೀರ್ಥರಿಗೇ ವೇದಾಂತಾದಿ ಶಾಸ್ತ್ರ, ಷಡ್ದರ್ಶನಗಳಲ್ಲಿ ಹೆಚ್ಚಿನ ಮಟ್ಟದ ಪರಿಣಿತಿ ಬರುವಂತೆ ಶ್ರಮ ವಹಿಸಿ ಪಾಠ ಹೇಳಿದರು. ಮುಂದೆ ಶ್ರೀನಿವಾಸತೀರ್ಥರನ್ನು ಕಾಂಚಿಯಲ್ಲಿ ತಾವು ಸ್ಥಾಪಿಸಿದ್ದ ವಿದ್ಯಾಪೀಠಕ್ಕೆ ಕುಲಪತಿಗಳನ್ನಾಗಿ ಮಾಡಿದರು.

ತಮ್ಮ ತೊಂಬತ್ತೆರಡನೆಯ ವಯಸ್ಸಿನಲ್ಲಿ ವ್ಯಾಸತೀರ್ಥರು ಮತ್ತೆ ಈ ಶ್ರೀನಿವಾಸತೀರ್ಥರನ್ನು ಕಾಂಚಿಯಿಂದ ಕರೆಯಿಸಿಕೊಂಡು ಅವರಿಗೆ ತಾವು ನಡೆಸುತ್ತಿದ್ದ ವಿಜಯನಗರ ವಿಶ್ವವಿದ್ಯಾಲಯ ಸಂಸ್ಥಾನದ ಪಟ್ಟ ಕಟ್ಟಿ ಜವಾಬ್ದಾರಿ ವಹಿಸಿ ತಮ್ಮ ಉತ್ತರಾಧಿಕಾರಿಗಳನ್ನಾಗಿ ಮಾಡಿದರು, ತಾವು ಪೂಜಿಸುತ್ತಿದ್ದ ದೇವತಾ ಪ್ರತಿಮೆಗಳನ್ನೆಲ್ಲ ಶಿಷ್ಯನಿಗೇ ನೀಡಿಬಿಟ್ಟರು. ಕ್ರಿ.ಶ.೧೫೩೯ರಿಂದ ೧೫೬೪ ರವರೆಗೂ ಶ್ರೀನಿವಾಸತೀರ್ಥರು ವಿದ್ಯಾನಗರದ ವಿಶ್ವವಿದ್ಯಾಲಯದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ಜೊತೆಗೆ ತಿರುಪತಿ ಕ್ಷೇತ್ರ ದೇವಾಲಯದ ಅಧ್ಯಕ್ಷರೂ ಆಗಿ ಆಡಳಿತದ ಹೊಣೆ ಹೊತ್ತಿದ್ದರು. ೧೫೬೪ರ ವೈಶಾಖ ಬಹುಳ ಪಂಚಮಿಯಂದು ಇಹಲೋಕದ ಕರ್ತವ್ಯ ಮುಗಿಸಿ ತೆರಳಿದರು. ವ್ಯಾಸತೀರ್ಥರ ಬೃಂದಾವನದ ಬಳಿಯೇ ಇವರ ಬೃಂದಾವನವೂ ಇದೆ.

ತಮ್ಮ ಗುರು ವ್ಯಾಸತೀರ್ಥರು ಬೃಂದಾವನಸ್ಥರಾದಾಗ ಶ್ರೀನಿವಾಸತೀರ್ಥರು ಸಲ್ಲಿಸಿದ ಚರಮ ಶ್ಲೋಕ ಇಂತಿದೆ:

ಅರ್ಥಿಕಲ್ಪಿತ ಕಲ್ಪೋಯಂ ಪ್ರತ್ಯರ್ಥಿ ಗಜಕೇಸರೀ
ವ್ಯಾಸತೀರ್ಥ ಗುರುರ್ಭೂಯಾದಸ್ಮದಿಷ್ಟಾರ್ಥ ಸಿದ್ಧಯೇ॥

ಇವರ ರಚಿಸಿದ್ದಾರೆಂಬ ಗ್ರಂಥಗಳ ಬಗ್ಗೆ ಇದುವರೆಗೂ ಏನೊಂದೂ ಮಾಹಿತಿ ಲಭ್ಯವಾಗಿಲ್ಲ.

ನಾರಾಯಣ ತೀರ್ಥರು

ವ್ಯಾಸತೀರ್ಥರ ಶಿಷ್ಯರಾಗಿ ಸಮಗ್ರವಾಗಿ ಮಧ್ವ ಸಿದ್ಧಾಂತವನ್ನು ಅಧ್ಯಯನ ಮಾಡಿದವರು, ವ್ಯಾಸಕೂಟದ ಮತ್ತೊಬ್ಬ ಮುಖ್ಯ ವ್ಯಾಖ್ಯಾನಕಾರರು ಎಂದರೆ ನಾರಾಯಣ ತೀರ್ಥರು. ವೇದಾಂತ ವಿದ್ಯೆಯಲ್ಲಿ ಪೂರ್ಣ ಪಂಡಿತರಾಗಿ ಹೊರಹೊಮ್ಮಿದವರು. ವಿಜಯನಗರದ ಅರಸ ಕೃಷ್ಣದೇವರಾಯನಿಂದ ಅರಗ ಸಂಸ್ಥಾನದಲ್ಲಿನ ಹಳೇಹಟ್ಟಿ, ಹುರಳೀಹಳ್ಳಿ, ಬುಳಾಪುರ ಬೀರನಹಳ್ಳಿ (ಶಿವಮೊಗ್ಗ) ಗ್ರಾಮಗಳನ್ನು ದಾನವಾಗಿ ಪಡೆದರು ಎನ್ನುವುದು ಲಭ್ಯವಿರುವ ಶಾಸನದಿಂದ ತಿಳಿದುಬರುತ್ತದೆ.[*೧೯] ಇದಲ್ಲದೆ ಗುರುಗಳಾದ ವ್ಯಾಸತೀರ್ಥರಿಂದಲೂ ಆರುವೃತ್ತಿಯನ್ನು ದಾನವಾಗಿ ಪಡೆದಿರುವುದು ಮತ್ತೊಂದು ವೃತ್ತಿದಾನದ ಶಾಸನದಿಂದ ತಿಳಿದುಬರುತ್ತದೆ.[*೨೦] ವ್ಯಾಸತೀರ್ಥರೇ ಇದರಲ್ಲಿ ತಮ್ಮ ಶಿಷ್ಯನನ್ನು 'ಸರ್ವಶಾಸ್ತ್ರವಿಶಾರದ'ನೆಂದು ಹೊಗಳಿದ್ದಾರೆ.

ವ್ಯಾಸರಾಜರಲ್ಲಿ ವಿದ್ಯಾಭ್ಯಾಸ ಮುಗಿಸಿದ ಮೇಲೆ ಇವರು ಕೂಡಲಿ-ಬಾಳಗಾರು ಎಂಬ ಎರಡು ಮಠಗಳಿಗೂ ಏಕಕಾಲದಲ್ಲೇ ಅಧಿಪತಿಗಳಾಗಿ ನೇಮಕಗೊಂಡರು. ಇವರಿಗೆ ಆಶ್ರಮ ದೀಕ್ಷೆ ನೀಡಿದ ಗುರುಗಳು ಶ್ರೀರಘುಪತಿ ತೀರ್ಥರು. ಆರ್ಯ ಅಕ್ಷೋಭ್ಯತೀರ್ಥ ಮಠದ ಪೀಳಿಗೆಯಲ್ಲಿ ಹತ್ತನೆಯವರಾಗಿ ಇವರು ಪೀಠ ಪಡೆದರು. ವ್ಯಾಸರಾಜರು ತಾವೇ ಪೂಜಿಸುತ್ತಿದ್ದ ಗೋಪಾಲಕೃಷ್ಣ ಪ್ರತಿಮೆಯನ್ನು ಈ ಶಿಷ್ಯನಿಗೆ ಕೊಟ್ಟಿದ್ದು ಅದು ಈಗಲೂ ಕೂಡಲಿ ಮಠದಲ್ಲಿ ಪೂಜೆಗೊಳ್ಳುತ್ತಿದೆ.

ಅಚ್ಚುತರಾಯನ ಆಳ್ವಿಕೆಯ ಕಾಲದಲ್ಲಿ ಈ ನಾರಾಯಣತೀರ್ಥರು ಸೋಮನಾಥ ಕವಿಯನ್ನು ವ್ಯಾಸತೀರ್ಥರಿಗೆ ಪರಿಚಯ ಮಾಡಿಸಿದರು. ಇದನ್ನು ಅವನೇ ಬರೆದಿರುವ "ವ್ಯಾಸಯೋಗಿ ಚರಿತೆ"ಯಲ್ಲಿ ಹೇಳಿಕೊಂಡಿದ್ದಾನೆ. ಈ ನಾರಾಯಣ ತೀರ್ಥರು ಮತ್ತು ಅವರ ಆಶ್ರಿತ ಶಿಷ್ಯರು ಅಚ್ಚುತ ರಾಯನ ಕಾಲದಲ್ಲಿಯೂ ಕೆಲವು ಕಾಲವಿದ್ದರೆಂದು ಹೀಗಾಗಿ ತಿಳಿಯಬಹುದಾಗಿದೆ.

ನಾರಾಯಣ ತೀರ್ಥರು ರಚಿಸಿರುವ ಗ್ರಂಥಗಳು ಉಪಲಬ್ಧವಿದ್ದು ಅವುಗಳ ಪಟ್ಟಿ ಹೀಗಿದೆ: ಕೃಷ್ಣ ಲೀಲಾ ತರಂಗಿಣಿ, ಭಾಟ್ಟ ಭಾಷಾ ಪ್ರಕಾಶ, ನ್ಯಾಯ ಮುಕ್ತಾವಲೀ ಟೀಕಾ, ಸಾಂಖ್ಯಕಾರಿಕಾ ವ್ಯಾಖ್ಯಾನ, ಯೋಗ

ಸೂತ್ರ ವ್ಯಾಖ್ಯಾನ, ಸಿದ್ಧಾಂತ ಬಿಂದು ಲಘು ಚಂದ್ರಿಕಾ, ವೇದಸ್ತವ ಟೀಕಾ, ಹರಿಭಕ್ತಿ ಸುಧಾರ್ಣವ, ಪಂಚೀಕರಣ ವಾರ್ತಿಕೆ, ಮತ್ತು ಪಾರಿಜಾತಾಪಹರಣವೆಂಬ ತಲುಗು ನಾಟಕ-ಈ ಹದಿಮೂರು ಅವರ ಉಪಲಬ್ಧವಿರುವ ಕೃತಿಗಳು. ಇವರು ಆಂಧ್ರಮೂಲದವರಾಗಿದ್ದು ವ್ಯಾಸತೀರ್ಥರಲ್ಲಿಗೆ ವಿದ್ಯಾಭ್ಯಾಸಕ್ಕಾಗಿ ಬಂದವರಾಗಿದ್ದರು.

ಕ್ರಿ.ಶ. ೧೫೨೭ ಮಾಘ ಶುದ್ಧ ರಥಸಪ್ತಮಿಯಂದು ವೃಂದಾವನಸ್ಥರಾದರು.

ಗೋವಿಂದಒಡೆಯರು

ಹಂಪೆಯಲ್ಲೆ ವಾಸವಾಗಿದ್ದ ಅದ್ವೈತ ಸನ್ಯಾಸಿಗಳಾಗಿದ್ದ ಇವರು ವ್ಯಾಸತೀರ್ಥರೊಂದಿಗೆ ಹದಿನೆಂಟು ದಿನಗಳು ವಾದ ಮಾಡಿ ಸೋತು ತಮ್ಮ ಇದುವರಗಿನ ಅದ್ವೈತ ಮತದ ನಂಬಿಕೆಯ ಜನ್ಮ ವ್ಯರ್ಥವಾಯಿತೆಂದು

ಪಶ್ಚಾತ್ತಾಪದಿಂದ ವ್ಯಾಸತೀರ್ಥರಿಗೆ ಶರಣಾಗತರಾದವರು. ವ್ಯಾಸತೀರ್ಥರು ಸೋತವರನ್ನೂ ಆತುಕೊಳ್ಳುವ ಸಹೃದಯಿಗಳಾಗಿದ್ದು ಗೋವಿಂದ ಒಡೆಯರಿಗೆ ದಂಡಪಲ್ಲಟಾದಿಗಳನ್ನು ಮಾಡಿಸಿ ಪುನಃ ಸನ್ಯಾಸ ದೀಕ್ಷೆಯಿತ್ತು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡರು.

ತಮ್ಮ ಗುರು ವ್ಯಾಸತೀರ್ಥರಂತೆಯೇ ಹರಿದಾಸ ಸಾಹಿತ್ಯರಚನೆಯನ್ನೂ ಮಾಡಿದ್ದಾರೆ. ವ್ಯಾಸತೀರ್ಥರಲ್ಲಿ ಹರಿದಾಸ ದೀಕ್ಷೆಯನ್ನೂ ಪಡೆದು "ಗುರು ಮುದ್ದು ಕೃಷ್ಣ"ನೆಂಬ ಅಂಕಿತದಲ್ಲಿ ಪದ್ಯ, ಸುಳಾದಿಗಳನ್ನು ರಚಿಸಿದ್ದಾರೆ.[೨೧] ಯತಿಯಾಗಿದ್ದೂ ಹರಿದಾಸದೀಕ್ಷೆಯನ್ನೂ ವ್ಯಾಸತೀರ್ಥರಿಂದ ಪಡೆದು ವ್ಯಾಸಕೂಟ, ದಾಸಕೂಟಗಳೆರಡರಲ್ಲಿಯೂ ಅನುಸಂಧಾನವಿರಿಸಿಕೊಂಡವರು.

ವ್ಯಾಸತೀರ್ಥರ ಈ ಪ್ರಮುಖ ಯತಿಶಿಷ್ಯರುಗಳಲ್ಲದೆ ಮತ್ತೂ ಇಪ್ಪತ್ನಾಲ್ಕು ಮಂದಿ (ಕೇಶವಾದಿ ಇಪ್ಪತ್ನಾಲ್ಕು ಹೆಸರಿರಿಸಿಕೊಂಡವರು) ಯತಿಗಳೂ, ಕವೀಂದ್ರರಂಬ ಮತ್ತೊಬ್ಬ ಯತಿಗಳೂ ಅವರಿಗೆ ಶಿಷ್ಯರುಗಳಾಗಿದ್ದರೆಂದು ಸೋಮನಾಥ ಕವಿಯ "ಶ್ರೀವ್ಯಾಸಯೋಗಿ ಚರಿತಂ" ಗ್ರಂಥದ ೮೧ನೆಯ ಪುಟದಲ್ಲಿ ಉಲ್ಲೇಖವಿದೆ. ಇವರೆಲ್ಲರೂ ವ್ಯಾಸಕೂಟದ ಪ್ರಮುಖರೇ, ಪ್ರತಿನಿಧಿಗಳೇ ಆಗಿದ್ದಿರಲು ಶಕ್ಯವಿದೆ.

ವಾದಿರಾಜರು

ವ್ಯಾಸತೀರ್ಥರಲ್ಲಿ ವಿದ್ಯಾಭ್ಯಾಸ ಮಾಡಿದವರಾಗಿ ಅವರ ಪ್ರಮುಖ ಶಿಷ್ಯರಲ್ಲಿ ಒಬ್ಬರೆನಿಸಿ, ವ್ಯಾಸಕೂಟದಲ್ಲಿಯ ಪ್ರಮುಖ ಪ್ರತಿಭಾವಂತ ವ್ಯಕ್ತಿತ್ವದವರಾಗಿ, ಜೊತೆಗೆ ದಾಸಕೂಟ ಪರಂಪರೆಯನ್ನೂ ಪೋಷಿಸಿದ ಮಹಾನ್ ಯತಿಗಳೇ ವಾದಿರಾಜರು. ವ್ಯಾಸ-ದಾಸ ಪರಂಪರೆಗಳೆರಡರ ಪ್ರತೀಕವಾಗಿ ಜ್ಞಾನ-

ಪಾಂಡಿತ್ಯದಲ್ಲಿ ಸರಿಸಾಟಿಯಿಲ್ಲವೆನಿಸಿಕೊಂಡು ಉದ್ಗ್ರಂಥಗಳನ್ನು ರಚಿಸಿ ಮಾಧ್ವಮತ ವಿಜಯಪತಾಕೆಯನ್ನು ಎತ್ತಿ ಹಿಡಿದುದರ ಜೊತೆಗೆಯೇ ಕನ್ನಡ ಹರಿದಾಸ ಸಾಹಿತ್ಯದಲ್ಲಿಯೂ ಮಿಗಿಲಾದ ರಚನೆಗಳನ್ನು ಮಾಡಿ, ಹಾಡಿ, ಭಕ್ತಜನರಿಂದ ಹಾಡಿಸಿ ದಾಪರಂಪರೆಯನ್ನು ಬೆಳೆಯಿಸಿದವರು. ಪಂಡಿತ ಪಾಮರರಿಬ್ಬರ ಮೆಚ್ಚುಗೆಯನ್ನೂ ಗಳಿಸಿ ಮಹಾಜ್ಞಾನಿಯೂ, ಕವಿಹೃದಯದ ಭಾವುಕ ಹರಿದಾಸರೂ ಎನಿಸಿದ ಅಪರೂಪದ ಯತಿಶ್ರೇಷ್ಠ. ತಮ್ಮ ಗುರು ವ್ಯಾಸತೀರ್ಥರು ನಡೆದ ಮಾರ್ಗದಲ್ಲೆ ತಾವೂ ನಡೆದು ವ್ಯಾಸ-ದಾಸ ಎಂಬ ಎರಡೂ ಕೂಟಗಳಿಗೆ ಆಶ್ರಯ, ಪ್ರೋತ್ಸಾಹವಿತ್ತವರು. ವಾದಿರಾಜರು ವ್ಯಾಸಕೂಟದ ಪ್ರಮುಖ ವ್ಯಾಖ್ಯಾನಕಾರರೂ . ಹೌದು, ದಾಸಕೂಟಕ್ಕೂ ಅವರು ಪ್ರಮುಖ ವ್ಯಾಖ್ಯಾನಕಾರರೂ ಹೌದು. ಸಂಸ್ಕೃತ-ಕನ್ನಡ ಭಾಷೆಗಳೆರಡರಲ್ಲಿಯೂ ಅವರ ಪ್ರಮುಖ ಕೊಡುಗೆ ಸಂದಿವೆ.

ತಮ್ಮ ಶಿಷ್ಯವೃಂದದಲ್ಲಿಯೆ ಅಗ್ರಗಣ್ಯರೆನಿಸಿದ್ದ ವಾದಿರಾಜರ ಮೇಲೆ ವ್ಯಾಸತೀರ್ಥರಿಗೆ ಗುರು-ಶಿಷ್ಯ ವಾತ್ಸಲ್ಯವಷ್ಟೆ ಅಲ್ಲ, ಸ್ನೇಹ ಕೂಡ ತುಂಬ ಇತ್ತು. ವ್ಯಾಸತೀರ್ಥರು ರಚಿಸಿದ್ದ ಪ್ರೌಢ ಪ್ರಬಂಧಗಳನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿದ ವಾದಿರಾಜರ ತರುಣ ಮನಸ್ಸಿಗೆ ವ್ಯಾಸತೀರ್ಥರ ಧೀಮಂತ ವ್ಯಕ್ತಿತ್ವ ತುಂಬ ಪ್ರಭಾವ ಬೀರಿರಬೇಕು. ವ್ಯಾಸತೀರ್ಥರು ಪೋಷಿಸುತ್ತಿದ್ದ ವ್ಯಾಸ-ದಾಸಕೂಟಗಳಲ್ಲಿ ಕಂಡುಬರುತ್ತಿದ್ದ ಜ್ಞಾನ, ಭಕ್ತಿಗಳ ಮೇಳದಿಂದ ಪ್ರಭಾವಿತಗೊಂಡು ವಿದ್ಯಾಭ್ಯಾಸ ಮುಗಿಸಿ ತಮ್ಮ ಮೂಲ ಮಠಕ್ಕೆ ಹಿಂದಿರುಗಿದ ಮೇಲೆ ತಾವೂ ಅಂತೆಯೇ ದಾಸಕೂಟವನ್ನೂ, ವ್ಯಾಸಕೂಟವನ್ನೂ ಪ್ರೋತ್ಸಾಹ ನೀಡಿ ಬೆಳೆಯಿಸಿಕೊಂಡು ಬಂದರು. ಅವರು ತಮ್ಮ ಗುರು ವ್ಯಾಸರಾಯರ ಬಗ್ಗೆ ರಚಿಸಿದ ಒಂದು ಕನ್ನಡ ಹಾಡು "ವ್ಯಾಸ ಮುನಿರಾಯ ನಿಮ್ಮ ಪೆಸರುಲೇಸು" ಎಂದು ಪ್ರಾರಂಭವಾಗುತ್ತದೆ.

"ವಿದ್ಯಾದಿ ಮಹಾದಾನಗಳ ಪೊಂದಿದವರಿಗಿತ್ತು
ಹೃದ್ಯ ಹಯವದನನ ಕೃಪಾಬಲದಿ
ಗೆದ್ದು ರಾಯರ ಕೈಯಿಂದ ಪಟ್ಟವ ಕಟ್ಟಿಸಿಕೊಂಡು
ಶುದ್ಧ ಕೀರುತಿ ಛತ್ರದಿಂದ ಲೋಕದಿ ಬೆಳಗಿದ ॥ವ್ಯಾಸಮುನಿರಾಯ॥

ಮೇಲಿನ ಅವರ ರಚನೆಯು ವ್ಯಾಸತೀರ್ಥರ ವಿಶ್ವವಿದ್ಯಾಲಯದ ಬಗ್ಗೆಯೂ, ವಿಜಯನಗರದ ಚಾರಿತ್ರಿಕ ಅಂಶವನ್ನೂ ಚಿತ್ರಿಸುತ್ತದೆ. ಇದಲ್ಲದೆ ಮಾದಿರಾಜರು ತಾವು ರಚಿಸಿದ 'ಪ್ರಮೇಯಮಾಲಾ' ಎಂಬ ಗ್ರಂಥದಲ್ಲಿ ವ್ಯಾಸತೀರ್ಥರು ತಮ್ಮ ಗುರುಗಳೆಂದು ಸ್ಮರಿಸಿದ್ದಾರೆ.*[೨೨] ಇದಲ್ಲದೆ ತಾವು ರಚಿಸಿರುವ ಅಶ್ವಧಾಟಿಯ ಪದ್ಯದಲ್ಲೂ ಫಲಶ್ರುತಿಯನ್ನು ಹೇಳುವಾಗ ತಾವು ವ್ಯಾಸರಾಜಯತಿಗಳ ಶಿಷ್ಯಸಮೂಹದಲ್ಲಿ ಶ್ರೇಷ್ಠರಾದ ಶಿಷ್ಯರೆಂದು ಹೇಳಿಕೊಂಡಿದ್ದಾರೆ.*[೨೩]

ವಾದಿರಾಜರು ತಾವು ರಚಿಸಿದ ಏಕಾದಶೀನಿರ್ಣಯವೆಂಬ ಗ್ರಂಥದಲ್ಲಿಯೂ ಗುರುವ್ಯಾಸರಾಜರನ್ನು ಸ್ಮರಿಸಿಕೊಂಡಿದ್ದಾರೆ. "ಮಂಡೆ ಬೋಳಾದರೂ ಮನ ಶುದ್ಧವಿಲ್ಲ....." ಎಂಬ ತಮ್ಮೊಂದು ಕನ್ನಡ ಕೃತಿಯಲ್ಲಿ ತಮ್ಮ ಗುರುಗಳಾದ ವ್ಯಾಸರಾಜರ ವಿಷಯದಲ್ಲಿ ತಪ್ಪಿ ನಡೆದವನು "ಒಮ್ಮೆನೆ ತಮಸಿ ನಲಿ ಬೀಳುವುದು ಸತ್ಯ" ಎಂದು ಸಾರಿದ್ದಾರೆ. "ವ್ಯಾಸಮುನಿರಾಯರು ಕೇಳ್ದರು ದಾಸರಿಗೊಂದು ಶ್ರೀಶನ ಸ್ವರೂಪವನು ಲೇಸಾಗಿ ಪೇಳಿರೆಂದು" ಎಂಬ ತಮ್ಮ ಇನ್ನೊಂದು ಕೀರ್ತನೆಯಲ್ಲಿ

"ವ್ಯಾಸರಾಯರ ಮಹಿಮೆ ದಾಸರೇ ಬಲ್ಲರು
ದಾಸರ ಮಹಿಮೆಗಳ ವ್ಯಾಸಮುನಿ ಬಲ್ಲ"

ಎನ್ನುವ ಮೂಲಕ ವ್ಯಾಸತೀರ್ಥರು ಬೆಳೆಯಿಸಿದ ದಾಸಕೂಟದ ಬಗೆಗಿನ ಆಪ್ತತೆಯ ಚಿತ್ರಣವನ್ನು ನೀಡಿದ್ದಾರೆ. ವ್ಯಾಸತೀರ್ಥರು ಮತ್ತು ಪುರಂದರದಾಸರು ಏಕಾಂತಗೋಷ್ಠಿಯಲ್ಲಿ ಶ್ರೀಕಾಂತನ ಮಹಿಮೆಯನ್ನು ಪರಸ್ಪರ ಹೇಳಿಕೊಳ್ಳುತ್ತ ಸಂತೋಷದಿಂದ ವಿಜಯವಿಠಲನ ಗುಡಿಯಲ್ಲಿ ಕೈ ಕೈ ಹಿಡಿದುಕೊಂಡು ಕುಣಿದಾಡಿದುದಕ್ಕೆ ತಾವು ಸಾಕ್ಷಿಯೆಂದು ವಾದಿರಾಜರು ತಮ್ಮ ಇದೇ ಕೀರ್ತನೆಯಲ್ಲಿ ದಾಖಲಿಸಿದ್ದಾರೆ. "ಆನೆ ಬರುತ್ತಿದಿಕೋ ವ್ಯಾಸರಾಜರೆಂಬಾನೆ ಬರುತ್ತಿದಿಕೋ" ಎಂಬ ತಮ್ಮ ಮತ್ತೊಂದು ಕೃತಿರಚನೆಯಲ್ಲಿ 'ಪರಮಾತ್ಮನೆಂಬ ಅರಮನೆಯ ಪಟ್ಟದಾನೆ' ಎಂದು ಗುರುವನ್ನು ವರ್ಣಿಸಿದ್ದಾರೆ. ಈ ಎಲ್ಲ ಕೃತಿಗಳ ಮೂಲಕ ವಾದಿರಾಜರು ತಮ್ಮ ಗುರು ವ್ಯಾಸತೀರ್ಥರಲ್ಲಿರಿಸಿದ್ದ ಅಪಾರ ಪ್ರೀತಿ, ಗೌರವ, ಹೆಮ್ಮೆಗಳ ಭಾವವನ್ನು ಅರಿಯಬಹುದಾಗಿದೆ.

೧೯ನೆಯ ಶತಮಾನದ ರಾಘವೇಂದ್ರಪ್ಪ ಕವಿಯು ತನ್ನ "ಷಾಷ್ಟಿಕ ವಂಶ ಪ್ರದೀಪ" ದಲ್ಲಿ ತಾನು ಸೋದೆಗೆ ಹೋಗಿದ್ದಾಗ ಅಲ್ಲಿ ವಾದಿರಾಜರ ನಿರೂಪವು ದೊರೆಯಿತೆಂದೂ, ಆ ನಿರೂಪದ ಒಕ್ಕಣೆ ಹೇಗಿದೆಯೆಂದೂ ಪದ್ಯರೂಪದಲ್ಲೆ ತಿಳಿಸಿದ್ದಾನೆ. ಆ ಪ್ರಕಾರ, ಉಡುಪಿಯಲ್ಲಿಯೂ, ಸೋದೆಯಲ್ಲಿಯೂ ವ್ಯಾಸರಾಜರಿಗೆ ಅಗ್ರಪೂಜೆಯು ಸಲ್ಲಬೇಕೆಂದು ವಾದಿರಾಜರು ಬರೆಯಿಸಿರುವ ನಿರೂಪವು ಅದೆಂದು ತಿಳಿದುಬರುತ್ತದೆ.

ಪುರಂದರದಾಸರು,ವಿಜಯದಾಸರು,ಗೋಪಾಲದಾಸರು,ಜಗನ್ನಾಥದಾಸರು ಇವರ ರಚನೆಗಳಲ್ಲಿ ವಾದಿರಾಜರು ವ್ಯಾಸತೀರ್ಥರ ಪ್ರಮುಖ ಶಿಷ್ಯರೆಂಬ ಪ್ರಸ್ತಾಪವಿದೆ. ಇವೆಲ್ಲದರಿಂದ ವ್ಯಾಸತೀರ್ಥರ ವ್ಯಕ್ತಿತ್ವದ ಪ್ರಭಾವವು ವಾದಿರಾಜರನ್ನು ವ್ಯಾಸಕೂಟ-ದಾಸಕೂಟಗಳೆರಡರ ಮುಖ್ಯ ವ್ಯಾಖ್ಯಾನಕಾರರಾಗುವಂತೆ ರೂಪಿಸಿತೆಂದು ತಿಳಿಯಬಹುದಾಗಿದೆ.

ವಾದಿರಾಜರಲ್ಲಿ ಶಾಸ್ತ್ರ ಪ್ರಭುತ್ವವೂ, ಸಾಹಿತ್ಯಪಟುತ್ವವೂ ನೆಲೆಗೊಂಡಿದ್ದವೆಂದೇ ಅವರು ವ್ಯಾಸ-ದಾಸ ಪರಂಪರೆಯನ್ನು ಮುಖ್ಯವಾಹಿನಿಗಳನ್ನಾಗಿ ಮುಂದುವರೆಯಿಸಿಕೊಂಡು ಹೋದರು. ತತ್ವಜ್ಞಾನದ ಪ್ರಸಾರ, ವೈಷ್ಣವ ಸಿದ್ಧಾಂತದ ಪ್ರಬಲ ಪ್ರತಿಷ್ಠಾಪನೆಯಲ್ಲಿ ಅವರು ಸಿದ್ಧಹಸ್ತರು. ಜೊತೆಜೊತೆಯಾಗಿ ಕನ್ನಡ ಸಂಸ್ಕೃತಿ, ಸಾಹಿತ್ಯ, ಸಂಗೀತಗಳಿಗೆ ಪ್ರೋತ್ಸಾಹದ ನೀರೆರದು ಪೋಷಿಸಿರುವ ಕವಿವರೇಣ್ಯರು. ಮಾಧ್ವ ವಾಙ್ಮಯ ಪ್ರಪಂಚದಲ್ಲಿ ಅವರು ಮಹಾಜ್ಞಾನಿಯಾಗಿ ಮೆರೆದರು. ಕನ್ನಡ ಹರಿದಾಸ ಸಾಹಿತ್ಯ ಲೋಕದಲ್ಲಿ ಅವರು ಮಾನವೀಯತೆ ತುಂಬಿದ ಭಾವುಕ ಕವಿಯಾಗಿ ಸ್ಮರಣೀಯರಾಗಿದ್ದಾರೆ. ಇದು ವಾದಿರಾಜಯತಿವರೇಣ್ಯರ ವ್ಯಕ್ತಿತ್ವದ ಹಿರಿಮೆ, ವೈಶಿಷ್ಟ್ಯವಾಗಿದೆ.

ಬದುಕು-ಸಾಧನೆ

ದಕ್ಷಿಣ ಕರಾವಳಿಯಲ್ಲಿ ಉಡುಪಿಯ ಸಮೀಪದ ಕುಂದಾಪುರ ತಾಲ್ಲೂಕಿನ ಕುಂಭಾಸಿಯ ಬಳಿಯ 'ಹೂವಿನ ಕೆರೆ' ಎಂಬುದು ವಾದಿರಾಜರ ಹುಟ್ಟೂರು. ಮೂಲ ಹೆಸರು ಭೂವರಾಹ. ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಸೋದೆಯ ಮಠದ ಮೂಲಪುರುಷರಾದ ವಿಷ್ಣುತೀರ್ಥರ[*೨೪] ಪರಂಪರೆಯಲ್ಲಿ ಬಂದ ವಾಗೀಶತೀರ್ಥರು ಭೂವರಾಹನಿಗೆ ಬಾಲಯತಿದೀಕ್ಷೆಯನ್ನು ನೀಡಿ ವಿದ್ಯಾಭ್ಯಾಸ ಮಾಡಿಸಿದರು. 'ವಾದಿರಾಜ'ನೆಂಬ ಅಭಿದಾನವಿತ್ತರು. ವಿದ್ಯಾನಿಧಿ ತೀರ್ಥರೆಂಬ ಯತಿಗಳ ಬಳಿ ಹೆಚ್ಚಿನ ವಿದ್ಯಾಭ್ಯಾಸ ಮುಂದುವರೆಯಲು ವಾದಿರಾಜರನ್ನು ಕಳುಹಿಸಿಕೊಟ್ಟರು. ವಿದ್ಯಾಭ್ಯಾಸ ಮುಗಿಸಿ ಹಿಂದಿರುಗಿದ ಬಾಲಯತಿಗೆ ವಾಗೀಶತೀರ್ಥರೇ ಹಯವದನ ಮಹಾಮಂತ್ರವನ್ನು ಉಪದೇಶಿಸಿದರು. 'ಹಯವದನ' ಎಂಬುದೇ ಮುಂದೆ ಅವರ ಕೃತಿಗಳ ಅಂಕಿತನಾಮವೂ ಆಯಿತು.

ಜಪ, ತಪಾನುಷ್ಠಾನ, ಪೂಜೆ ಪುನಸ್ಕಾರ, ಗ್ರಂಥಾಭ್ಯಾಸ ಇವುಗಳಲ್ಲಿಯೇ ಮನಸ್ಸನ್ನು ತೊಡಗಿಸಿಕೊಂಡು ಬೆಳೆದ ವಾದಿರಾಜರಲ್ಲಿ ವೈರಾಗ್ಯಶೀಲತೆ ಎನ್ನುವುದು ವ್ಯಕ್ತಿತ್ವದ ಹಾಸುಹೊಕ್ಕಾಗಿ ಬೆರೆತುಕೊಂಡಿತ್ತು. ಹಾಗೆಂದು ಶುಷ್ಕ ವೇದಾಂತಿಯಾಗಿ ಮಾರ್ಪಡದೆ ಸಾಹಿತ್ಯ, ಕಲೆಗಳಲ್ಲಿ ಆಸಕ್ತರೂ, ಭಾವಭಕುತಿಯ ಸಹೃದಯರೂ ಆಗಿದ್ದರು. ಪಂಡಿತಗೋಷ್ಠಿ, ವಾಕ್ಯಾರ್ಥ ವಿಚಾರ, ಪರಮತ ಖಂಡನೆ, ಸ್ವಮತ ಮಂಡನೆ ಇಂಥ ಚಟುವಟಿಕೆಗಳಲ್ಲಿ ತೊಡಗಿಕೊಂಡಂತೆಯೇ ತಮ್ಮ ಸುತ್ತಣ ಜನತೆಯ ನೋವು, ದುಃಖಗಳನ್ನು ಗಮನಿಸುತ್ತ, ಅವುಗಳ ನಿವಾರಣೆಗಾಗಿ ಶ್ರಮಿಸುತ್ತ, ಸಾಮಾನ್ಯರ ಬದುಕಿಗೆ ಸಾಧ್ಯವಿದ್ದಷ್ಟೂ ನೆರವು ನೀಡುತ್ತ ಮಾನವೀಯ ವ್ಯಕ್ತಿತ್ವವನ್ನು ಪ್ರಕಟಗೊಳಿಸುತ್ತ ಇದ್ದವರಾದರು. ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಕುಂಭಾಸಿ ಮಠದ ಉತ್ತರಾಧಿಕಾರಿಯಾಗಿ 'ವಾದಿರಾಜತೀರ್ಥ'ರೆನಿಸಿಕೊಂಡರು.

ತೀರ್ಥಕ್ಷೇತ್ರಗಳ ಸಂದರ್ಶನ, ಸಂಚಾರವನ್ನು ಕೈಗೊಂಡು ಭಾರತವಿಡೀ ತಾವು ಸಂದರ್ಶಿಸಿದ ವೈಷ್ಣವ ತೀರ್ಥಕ್ಷೇತ್ರಗಳನ್ನು ಕುರಿತಾದ ಆಮೂಲಾಗ್ರ ವಿವರಗಳನ್ನೊಳಗೊಂಡ 'ತೀರ್ಥಪ್ರಬಂಧ'ವೆಂಬ ಉತ್ಕೃಷ್ಟ ಗ್ರಂಥವನ್ನು ರಚಿಸಿದ್ದಾರೆ. ಆಯಾ ತೀರ್ಥಕ್ಷೇತ್ರಗಳ ಪೌರಾಣಿಕ, ಐತಿಹಾಸಿಕ ಹಿನ್ನಲೆಯನ್ನಷ್ಟೇ ಅಲ್ಲ, ಅವುಗಳಲ್ಲಿಯ ಆಧ್ಯಾತ್ಮಿಕ ರಹಸ್ಯವನ್ನೂ ತೆರೆದು ತೋರಿಸುವಂಥದ್ದು ಈ ಕೃತಿಯ ವೈಶಿಷ್ಟ್ಯವಾಗಿದೆ. ಪಶ್ಚಿಮ, ಉತ್ತರ, ಪೂರ್ವ ಮತ್ತು ದಕ್ಷಿಣ ಎಂಬ ಹೆಸರಿನ ನಾಲ್ಕು ಪ್ರಬಂದಗಳಲ್ಲಿ ಒಟ್ಟು ೨೩೫ ಸಂಸ್ಕೃತ ಶ್ಲೋಕಗಳನ್ನು ಒಳಗೊಂಡಿರುವ ಈ ಗ್ರಂಥ ತುಂಬ ಕಾವ್ಯಾತ್ಮಕವಾಗಿಯೂ, ಹರಿಭಕ್ತಿಯನ್ನು ಪ್ರಚೋದಿಸುವ ದಿವ್ಯ ಸ್ತೋತ್ರವೆಂಬಂತೆಯೂ ರಚಿತಗೊಂಡಿದೆ. ಈ ಬಗ್ಗೆ ಹರಿದಾಸ ಪರಂಪರೆಯಲ್ಲಿ ಮುಂದೆ ಬಂದ ಜಗನ್ನಾಥದಾಸರು "ಅರ್ಥಿಗಳಿಗೆ ಪರಮಾರ್ಥವ ತೋರುವ। ತೀರ್ಥ ಪ್ರಬಂಧವ ಕೀರ್ತನೆ ಗೈದೇ" ಎಂದು ವಾದಿರಾಜರನ್ನು ಸ್ತುತಿಸಿದ್ದಾರೆ. ಈ ಗ್ರಂಥ ಕೇವಲ ಯಾತ್ರಿಕರ ಕೈಪಿಡಿಯಾಗಿ ನಿಲ್ಲದೆ, ಇದರ ನಿರಂತರ ಶ್ರವಣ, ಮನನಾದಿಗಳಿಂದ ಇದ್ದ ಸ್ಥಳದಲ್ಲಿಯೇ ತೀರ್ಥಯಾತ್ರೆಯ ಮಹದನುಭವವನ್ನು ತಂದುಕೊಡುತ್ತದೆಂದೂ ಜಗನ್ನಾಥದಾಸರು ಸೂಚಿಸಿದ್ದಾರೆ.

ಮಹಾಭಾರತ ಲಕ್ಷಾಲಂಕಾರ,

ಮಹಾಭಾರತ ತಾತ್ಪರ್ಯ ನಿರ್ಣಯ ಭಾವ ಪ್ರಕಾಶಿಕಾ

ತಲವಕಾರೋಪನಿಷದ್ಭಾಷ್ಯ ಟೀಕಾ

ತೈತ್ತಿರೀಯೋಪನಿಷದ್ಭಾಷ್ಯ ಟೀಕಾ

ಕಾಠಕೋಪನಿಷದ್ಭಾಷ್ಯ ಟೀಕಾ

ಅಥರ್ವಣೋಪನಿಷದ್ಭಾಷ್ಯ ಟೀಕಾ

ಮಾಂಡೂಕೋಪನಿಷದ್ಭಾಷ್ಯ ಟೀಕಾ

ತಂತ್ರಸಾರ ಟೀಕಾ

ಎಂಬುದಾಗಿ ಎಂಟು ಟೀಕಾಗ್ರಂಥಗಳನ್ನು ವಾದಿರಾಜರು ರಚಿಸಿದ್ದಾರೆ. ನ್ಯಾಯಸುಧಾಗುರ್ವರ್ಥದೀಪಿಕಾ, ತತ್ತ್ವಪ್ರಕಾಶಿಕಾಗುರ್ವರ್ಥ ದೀಪಿಕಾ, ಈಶಾವಾಸ್ಯೋಪನಿಷದ್ಭಾಷ್ಯ ಟೀಕಾ ಟಿಪ್ಪಣಿ, ಷಟ್ಪ್ರಶ್ನೋಪನಿಷದ್ಭಾಷ್ಯ ಟೀಕಾ ಟಿಪ್ಪಣಿ, ಗೀತಾಭಾಷ್ಯ ಟಪ್ಪಣಿ ಎಂಬ ಐದು ಉತ್ಕೃಷ್ಟವೆನ್ನಲಾಗಿರುವ ಟಿಪ್ಪಣೀಗ್ರಂಥಗಳನ್ನು ರಚಿಸಿದ್ದಾರೆ.

ಇವಲ್ಲದೆ ಇಪ್ಪತ್ತು ಸ್ವತಂತ್ರ ಶಾಸ್ತ್ರಗ್ರಂಥಗಳನ್ನು ವಾಙ್ಮಯ ಲೋಕಕ್ಕೆ ರಚಿಸಿ ಕೊಟ್ಟಿದ್ದಾರೆ. 'ತೀರ್ಥಪ್ರಬಂಧ' ವಲ್ಲದೆ ಇವರ ಇನ್ನಿತರ ಸ್ವತಂತ್ರ ಕಾವ್ಯಗಳೆಂದರೆ ರುಕ್ಮಿಣೀಶ ವಿಜಯ, ಸರಸಭಾರತೀವಿಲಾಸ, ಕವಿಕದಂಬಕಂಠಭೂಷಾ ಎಂಬ ಕೃತಿಗಳು.

'ರುಕ್ಮಿಣೀಶ ವಿಜಯ'ವು ಮಹಾಕಾವ್ಯದ ಸೊಬಗಿನಿಂದ ಕೂಡಿದ್ದು ಭಾಗವತದ ದಶಮಸ್ಕಂಧದ ಕೃಷ್ಣಚರಿತ್ರೆಯನ್ನು ಕಥಾವಸ್ತುವನ್ನಾಗಿ ಹೊಂದಿದೆ. "ಶಬ್ದಾಲಂಕಾರ, ಅರ್ಥಾಲಂಕಾರ, ಸರಸ ಸುಂದರ ಶೈಲಿ, ಮಾತು ಮಾತೂ ಸುಭಾಷಿತ, ಶಾಸ್ತ್ರ ವಾಕ್ಯ ಕಾವ್ಯ ಸಿದ್ಧಾಂತ ಪ್ರತಿಪಾದನೆ ಇವುಗಳಿಂದಾಗಿ ರುಕ್ಮಿಣೀಶ ವಿಜಯವು ಮನಮೋಹಕ ಮೌಲಿಕ ಕಾವ್ಯ" [*೨೫]

ಇದೇ ಶತಮಾನದಲ್ಲಿ ಪುಣೆಯನ್ನಾಳುತ್ತಿದ್ದ ಬೌನ್ಸ್ಲೆ ಮನತನದ ದಾದಾಜಿ ಎಂಬ ಅರಸ ವಿದ್ವಜ್ಜನ ಪಕ್ಷಪಾತಿಯೂ, ಕಾವ್ಯಕಲಾರಸಿಕನೂ ಆಗಿದ್ದು ಆಗಾಗ ವಿದ್ವಾಂಸರ, ಕವಿಗಳ ಸಮ್ಮೇಳನವನ್ನು ಏರ್ಪಡಿಸುತ್ತಿದ್ದು ಹಾಗೊಮ್ಮೆ ಅಂಥದೊಂದು ಮಹಾವಿದ್ವತ್ಸಭೆಯಲ್ಲಿ "ಭಾರತೀಯ ಸಂಸ್ಕೃತ ಸಾಹಿತ್ಯ ಪರಂಪರೆಯಲ್ಲಿ ಯಾವುದು ಶ್ರೇಷ್ಠಕಾವ್ಯ?" ಎಂಬ ನಿರ್ಣಯ ಮಾಡಬೇಕಾಗಿ ಬಂದು ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಮಾಘಕವಿಯ 'ಶಿಶುಪಾಲವಧೆ'ಯೇ ಶ್ರೇಷ್ಠವಾದ ಕಾವ್ಯರತ್ನವೆಂಬ ನಿರ್ಣಯಕ್ಕೆ ವಿದ್ವಾಂಸರು ಬಂದು ಈ ಕಾವ್ಯಕ್ಕೆ 'ಕಾವ್ಯರಾಜ' ಎಂಬ ಬಿರುದಿತ್ತು ಆನೆಯ ಮೇಲಿನ ಅಂಬಾರಿಯಲ್ಲಿಟ್ಟು ಮೆರವಣಿಗೆ ಮಾಡಬೇಕೆಂದು ಒಮ್ಮತದ ನಿಶ್ಚಯವಾಯಿತು. ಈ ಸಂದರ್ಭದಲ್ಲಿ ಸಂಚಾರದಲ್ಲಿದ್ದ ವಾದಿರಾಜರು ಕೂಡ ಈ ಸಭೆಯಲ್ಲಿದ್ದು "ತಮ್ಮಲ್ಲಿ ಒಂದು ಅಪೂರ್ವಕಾವ್ಯವಿದೆ. ಇನ್ನು ಹತ್ತೊಂಬತ್ತು ದಿನಗಳ ಒಳಗೆ ಅದನ್ನು ತರಿಸಿಕೊಡುತ್ತೇವೆ. ಅದನ್ನು ಪರಿಶೀಲಿಸಿದ ನಂತರ ನಿರ್ಣಯಕ್ಕೆ ಬರಬೇಕು" ಎಂದು ತಿಳಿಸಿದ್ದಲ್ಲದೆ ಹತ್ತೊಂಬತ್ತು ದಿನಗಳಲ್ಲಿ ಹತ್ತೊಂಬತ್ತು ಸರ್ಗಗಳ "ರುಕ್ಮಿಣೀಶ ವಿಜಯ"ವನ್ನು ರಚಿಸಿ ಸಭೆಗೆ ಕಳುಹಿಸಿಕೊಟ್ಟರು. ವಿದ್ವಾಂಸರು ಮತ್ತೆ ಎರಡೂ ಕಾವ್ಯಗಳಲ್ಲಿಯ ಮೌಲ್ಯನಿರ್ಣಯದಲ್ಲಿ "ರುಕ್ಮಿಣೀಶವಿಜಯ"ವೇ ಶ್ರೇಷ್ಠವೆಂದು ನಿರ್ಣಯಿಸಿ 'ಕಾವ್ಯರಾಜ' ಬಿರುದನ್ನೂ, ಆನೆಯ ಮೇಲಿರಿಸಿ ಮೆರವಣಿಗೆಯ ಸಂಭ್ರಮ, ಸನ್ಮಾನಗಳನ್ನೂ ವಾದಿರಾಜರ ಈ ಕೃತಿಗೇ ಸಲ್ಲಿಸಿದರು, ಹಾಗೂ ವಾದಿರಾಜರಿಗೆ "ಕವಿಕುಲತಿಲಕ"ರೆಂಬ ಬಿರುದನ್ನೂ ದಯಪಾಲಿಸಿದರು ಎಂಬೆಲ್ಲ ವಿವರಗಳೂ ವಿರಚಿತ 'ವಾದಿರಾಜ ಗುರು ಚರಿತೆ'ಯಿಂದ ತಿಳಿದುಬರುತ್ತದೆ.

ಮಧುರವಾದ ಭಾಷಾಶೈಲಿ, ಮಂಜುಳವಾದ ಪದಪುಂಜಗಳಿಂದೊಡಗೂಡಿ ಸಾಗುವ "ರುಕ್ಮಿಣೀಶ ವಿಜಯ"ಕ್ಕೆ ಸಂಸ್ಕೃತ ಕಾವ್ಯಗಳಲ್ಲೇ ಮಹತ್ತರವಾದ ಸ್ಥಾನ ದೊರೆತಿದೆ. ಕಾವ್ಯಮಾಧುರ್ಯದೊಂದಿಗೆ ತತ್ವಚಿಂತನೆಯನ್ನೂ ಹೃದಯಂಗಮವಾಗಿ ಉಣಬಡಿಸುವ ಈ ಕೃತಿ ವಾದಿರಾಜರ ಮೇಧಾಶಕ್ತಿಗೂ, ಕಾವ್ಯಪ್ರತಿಭೆಗೂ, ಭಕ್ತಿಶೀಲ ಮನೋಧರ್ಮಕ್ಕೂ ಜ್ವಲಂತವಾದ ಉದಾಹರಣೆಯಾಗಿ ನಿಂತಿದೆ.

ಅದ್ವೈತ ಪ್ರತಿಪಾದಕಗಳೆಂದು ಅದ್ವೈತ ದರ್ಶನದಲ್ಲಿ ಪ್ರಸಿದ್ಧವಾಗಿರುವ ಪಂಚಮಹಾವಾಕ್ಯಗಳನ್ನು ವಾದಿರಾಜರು ತಮ್ಮ 'ಶೃತಿತತ್ತ್ವ ಪ್ರಕಾಶಿಕಾ' ಗ್ರಂಥದಲ್ಲಿ ವಿಶದವಾಗಿ ಚರ್ಚಿಸಿ, ಅದ್ವೈತಪರ ಅರ್ಥಗಳಲ್ಲಿನ ಅಸಮಂಜಸತೆಯನ್ನು ತೋರಿಸಿಕೊಟ್ಟು ದ್ವೈತ ಪರ ಅರ್ಥಗಳನ್ನು ಪರಿಣಾಮಕಾರಿಯಾಗಿ ಪ್ರತಿಪಾದಿಸಿದ್ದಾರೆ.

"ಯುಕ್ತಿಮಲ್ಲಿಕಾ" ಎಂಬುದು ವಾದಿರಾಜರ ಮೇರುಕೃತಿ. ೫೩೭೮ರಷ್ಟು ಶ್ಲೋಕಗಳಿಂದ ಕೂಡಿದ ಬಹು ವಿಸ್ತಾರ ಗ್ರಂಥ, ವಸ್ತುತಃ ಮಧ್ವಾಚಾರ್ಯರ ಸೂತ್ರಭಾಷ್ಯದ ಸಾರಸರ್ವಸ್ವವನ್ನೂ ಆಕರ್ಷಕ ಶೈಲಿಯಲ್ಲಿ ನಿರೂಪಿಸಿದ್ದಾರೆ. ಹಿಂದಿನವರಾರೂ ಹೇಳಿರದ ನವ್ಯ ಉದಾಹರಣೆಗಳು. ಹೊಸಯುಕ್ತಿಗಳು, ಹೊಸದಾದ ಅರ್ಥಗಳಿಂದಾಗಿ ಈ ಕೃತಿಯು ಮಹತ್ವದ್ದೆನಿಸಿದೆ. ಮಾಯಾವಾದದ 'ಜಗನ್ಮಿಥ್ಯ'ವಾದವನ್ನು ಖಂಡಿಸಿ, ಜೀವಬ್ರಹ್ಮೈಕ್ಯವು ಎಂದಿಗೂ ಸಾಧ್ಯವಿಲ್ಲವೆನ್ನುವುದನ್ನು ಸಶಕ್ತವಾಗಿ ಪ್ರತಿಪಾದಿಸಿದ್ದಾರೆ. "ದ್ವೈತವೇದಾಂತ ಕೋಶ"ವೆಂದೇ ಈ ಗ್ರಂಥ ಪ್ರಖ್ಯಾತವಾಗಿದೆ.*[೨೬]

ತಮ್ಮ "ಭೂಗೋಳ ವಿವರಣೆ" ಕೃತಿಯಲ್ಲಿ ವಾದಿರಾಜರು ನೀಡಿರುವ ಭೌಗೋಲಿಕ ವಿವರಣೆ ಸಮುದ್ರ, ಭೂಮಿ, ಪರ್ವತ, ಸಪ್ತಸಮುದ್ರಗಳು, ಸಪ್ತ ದ್ವೀಪಗಳು ಇತ್ಯಾದಿಗಳಿಂದ ಕೂಡಿ ಪ್ರಮಾಣಬದ್ಧ ವಿಶದೀಕರಣವನ್ನು ಹೊಂದಿರುವಂಥದ್ದಾಗಿ ಆಶ್ಚರ್ಯ ಹುಟ್ಟಿಸುತ್ತದೆ. ತಮ್ಮ ಹೆತ್ತತಾಯಿಯ ಹರಕೆಯನ್ನು ಸಲ್ಲಿಸುವ ಸಲುವಾಗಿ ಅವರು ರಚಿಸಿದ "ಲಕ್ಷಾಲಂಕಾರ" ಕೃತಿ ಮಹಾಭಾರತದ ಒಂದು ಲಕ್ಷ ಕ್ಲಿಷ್ಟ ಪದಗಳ ಅರ್ಥ ಮತ್ತು ಟೀಕಾರೂಪದಲ್ಲಿದೆ.

ಹೀಗೆ ತಮ್ಮೆಲ್ಲ ಗ್ರಂಥರಚನೆಗಳ ಮೂಲಕ ವಿಷ್ಣು ಪಾರಮ್ಯವನ್ನು ವಿಸ್ತಾರವಾಗಿ ವಿಚಾರಮಾಡಿ ದ್ವೈತಮತ ಪ್ರಚಾರಕ್ಕೆ ಮಹತ್ವ ಕೊಟ್ಟಿರುವವರು ವಾದಿರಾಜರು. ೧೬ನೇ ಶತಮಾನದಲ್ಲಿ ಅನ್ಯಮತಗಳ ಪ್ರಾಬಲ್ಯ ಹೆಚ್ಚಿದ್ದು,ಮಾಧ್ವ ಸಿದ್ಧಾಂತವನ್ನು ವಿರೋಧಿಸುವವರು, ವಾದ ಮಾಡಿ ಖಂಡಿಸುವವರು ಅಪಾರ ಸಂಖ್ಯೆಯಲ್ಲಿದ್ದುದ್ದರಿಂದ ವಾದಿರಾಜರು ಪ್ರಬಲ ಸಮರ್ಥನೆಯಿಂದ ವಿಷ್ಣು ಸರ್ವೋತ್ತಮತ್ವವನ್ನು ಪ್ರತಿಪಾದಿಸಿ ಜಯಗಳಿಸಿದರು. "ವ್ಯಾಸತೀರ್ಥರ ಶಿಷ್ಯರಾದ ವಿಜಯೀಂದ್ರ ಮತ್ತು ವಾದಿರಾಜರೇ ಈ ಕಾರ್ಯವನ್ನು ದಕ್ಷತೆಯಿಂದ ಮಾಡಿರುವವರು" ಎಂದು "ದ್ವೈತ ವೇದಾಂತ ವಾಙ್ಮಯ ಹಾಗೂ ಇತಿಹಾಸ" ಕೃತಿಯ ಲೇಖಕರಾದ ಡಾ॥.ಬಿ.ಎನ್.ಕೆ ಶರ್ಮಾ ನಿರೂಪಿಸುತ್ತಾರೆ. ವಾದಿರಾಜರ ಕೃತಿಗಳಲ್ಲಿ ಅನುಭವಜನ್ಯ ನಿಷ್ಠೆ, ಭಾವಪೂರ್ಣ ಶ್ರದ್ಧೆ ತುಂಬಿ ತುಳುಕುವುದೆಂದೂ ಇದೇ ಲೇಖಕರು ಸೂಚಿಸುತ್ತಾರೆ.

ವ್ಯಾಸಕೂಟದಲ್ಲಿನ ವ್ಯಾಸತೀರ್ಥರ ಪ್ರಮುಖ ಶಿಷ್ಯರಲ್ಲಿ ಒಬ್ಬರಾದ ನಾರಾಯಣತೀರ್ಥರು ವಾದಿರಾಜರ ಸಹಪಾಠಿಗಳೂ, ನಿಕಟವರ್ತಿಗಳೂ ಆಗಿದ್ದರು. ನಾರಾಯಣತೀರ್ಥರು ವಾದಿರಾಜರೊಡನೆ ಹೊಂದಿದ್ದ ಸೌಹಾರ್ದ ಸಂಬಂಧ ಬಗೆಗಿನ ದಾಖಲೆಯೊಂದು ವಿದ್ವಾಂಸರಾದ ಚಿಕ್ಕೇರೂರು ಗೋವಿಂದಾಚಾರ್ಯರ ಸಂಗ್ರಹದಲ್ಲಿ ದೊರೆತಿದೆ. ನಾರಾಯಣತೀರ್ಥರು ತಮ್ಮ ಸ್ವಹಸ್ತದಲ್ಲಿಯೇ (ಕ್ರಿ.ಶ ೧೫೪೫ ರಲ್ಲಿ) ಬರೆದಿಟ್ಟಿರುವ ಈ ದಾಖಲೆ ನಾಲ್ಕು ಪುಟಗಳಲ್ಲಿದೆ. ಕನ್ನಡ ಹಾಗೂ ಸಂಸ್ಕೃತ ಎರಡೂ ಭಾಷೆಗಳಲ್ಲಿರುವ ಈ ಪ್ರಾಚೀನ ಪ್ರಮುಖ ದಾಖಲೆಯಲ್ಲಿ ಶ್ರೀ ವ್ಯಾಸರಾಜರು ಬೃಂದಾವನಸ್ಥರಾದ ಕಾರಣ ಶ್ರೀ ವಾದಿರಾಜಸ್ವಾಮಿಗಳ ಆಹ್ವಾನದ ಮೇರೆಗೆ ತಾವು ಉಡುಪಿ ಪ್ರಾಂತಕ್ಕೆ ಹೊರಟುಹೋಗಲು ನಿಶ್ಚಯಿಸಿರುವುದಾಗಿಯೂ, ತಮ್ಮ ಪೀಠಕ್ಕೆ ಉತ್ತರಾಧಿಕಾರಿಯನ್ನು ನೇಮಿಸಿ ಸಂಸ್ಥಾನವನ್ನು ಅವರಿಗೆ ಒಪ್ಪಿಸುವುದಾಗಿಯೂ, ತಮ್ಮ ಹಾದಿಯನ್ನು ಕಾಯುವ ಕಾರಣವಿಲ್ಲವೆಂದೂ, ಮಠಕ್ಕೆ ಸಂಬಂಧಿಸಿದ ಕೆಲವು

ವ್ಯವಸ್ಥೆಗಳನ್ನು ಮಾಡುವ ಅಧಿಕಾರವನ್ನು ವಿಜಯನಗರದ ಅರಸರಿಗೆ ಕೊಟ್ಟಿರುವುದಾಗಿಯೂ ತಿಳಿಸಿದ್ದಾರೆ. ಈ ಉಲ್ಲೇಖಗಳು ವ್ಯಾಸರಾಜರ ಕಾಲ, ವ್ಯಾಸರಾಜರು ಹಾಗೂ ವಾದಿರಾಜರಲ್ಲಿ ನಾರಾಯಣತೀರ್ಥರಿಗಿದ್ದ ವಿಶ್ವಾಸ, ಗೌರವಗಳನ್ನು, ಒಡನಾಟವನ್ನು ತಿಳಿಯಲು ಪ್ರಮುಖವೆನಿಸುತ್ತವೆ.

ನಾರಾಯಣತೀರ್ಥರು ತಮ್ಮ ಹಾದಿ ಕಾಯುವ ಅಗತ್ಯವಿಲ್ಲವೆಂದು ಸೂಚಿಸಿದ್ದಂತೆಯೇ ಮತ್ತೆ ವಿಜಯನಗರಕ್ಕೆ ಮರಳದೆ ಉಡುಪಿ ಪ್ರಾಂತದಲ್ಲಿಯೇ ಉಳಿದು ಉಡುಪಿಯ ಹತ್ತಿರದ 'ವಾಯುಗೊಂಡ' ಎಂಬಲ್ಲಿ ಬೃಂದಾವನಸ್ಥರಾದರು. ವಾದಿರಾಜರೊಂದಿಗೆ ಅವರಿಗಿದ್ದ ಸ್ನೇಹದ ದ್ಯೋತಕವೆಂಬಂತೆ ತಮ್ಮ ಕಡೆಗಾಲವನ್ನು ವಾದಿರಾಜರೊಂದಿಗಿನ ಸಾಮೀಪ್ಯದಲ್ಲಿ ಅವರು ಕಳೆದಿದ್ದಾರೆ.

ವ್ಯಾಸತೀರ್ಥರು ಕೂಡ ತಮ್ಮ ವೃದ್ಧಾಪ್ಯದಲ್ಲಿ ಉಡುಪಿಗೆ ಆಗಮಿಸಿದ್ದು, ಕೆಲಕಾಲ ಕೃಷ್ಣನನ್ನು ಪೂಜಿಸಿಕೊಂಡು ಅಲ್ಲಿಯೇ ತಂಗಿದ್ದು ವಾದಿರಾಜರ ಆಹ್ವಾನವನ್ನು ಮನ್ನಿಸಿಯೇ. ವಿಜಯನಗರದ ಅರಸರುಗಳಾದ ಶ್ರೀಕೃಷ್ಣ ದೇವರಾಯ ಮತ್ತು ಅಚ್ಯುತರಾಯರೊಂದಿಗೂ ವಾದಿರಾಜರಿಗೆ ಸ್ನೇಹಸೌಹಾರ್ದವಿದ್ದವು. ವ್ಯಾಸತೀರ್ಥರು ಉಡುಪಿಯಲ್ಲಿ ತಂಗಿದ್ದಾಗ ಅಲ್ಲಿಗೆ ದೊರೆ ಅಚ್ಯುತರಾಯ ಕೂಡ ಆಗಮಿಸಿ ಕೃಷ್ಣ ಮಠದ ಮತ್ತು ಮಧ್ವಸರೋವರದ ಜೀರ್ಣೋದ್ಧಾರಕ್ಕೆ ನೆರವು ನೀಡಿ ನಾನಾ ಬಗೆಯ ದತ್ತಿಗಳನ್ನು ದೇವಾಲಯಕ್ಕೆ ಕೊಡಿಸಿದ್ದು, ಕೃಷ್ಣನಿಗೆ ಅಮೂಲ್ಯ ಆಭರಣಗಳನ್ನು ಕಾಣಿಕೆಯಾಗಿ ಕೊಟ್ಟಿದ್ದು, ವಾದಿರಾಜರ ಮೇಲಿನ ಗೌರವದಿಂದಲೇ.ಮುಂದೆ ೧೫೮೫ ರಲ್ಲಿ ಸಿಂಹಾಸನವೇರಿದ ದೊರೆ ವೆಂಕಟಪತಿದೇವರಾಯನು ವಾದಿರಾಜರ ವಿದ್ವತ್ತಿಗೆ, ಪ್ರತಿಭೆಗೆ ಮಾರುಹೋಗಿ "ಪ್ರಸಂಗಾಭರಣ ತೀರ್ಥ" ಎಂಬ ಬಿರುದಿತ್ತು ಅವರನ್ನು ಸನ್ಮಾನಿಸಿದನು.

ಅನೇಕ ಬಗೆಯ ಪವಾಡಗಳು, ದೈವೀಘಟನೆಗಳು ವಾದಿರಾಜರಿಂದ ನಡೆದಿದೆ ಎಂಬ ನಂಬಿಕೆಯ ಕಥೆಗಳು ಪ್ರಚಲಿತವಿವೆ. ಇಂಥ ಅನೇಕ ಘಟನೆಗಳು ವಾದಿರಾಜರ ಜೀವನ ಚರಿತ್ರೆಯನ್ನು ಕುರಿತು ತಿಳಿಸುವ ಎಲ್ಲ ಗ್ರಂಥಗಳಲ್ಲೂ ನಮೂದಿತಗೊಂಡಿವೆ.

ಉಡುಪಿಯೇ ವಾದಿರಾಜರ ಮೂಲ ಕಾರ್ಯಕ್ಷೇತ್ರ. ಆದರೆ ಅವರು ತಮ್ಮ ಸಾಧನೆಯನ್ನು ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಬಳಿ ಇರುವ 'ಸೋದೆ' ಎಂಬ ಊರಿನಲ್ಲೂ ವಿಸ್ತರಿಸಿದರು. ಸೋದೆಗೂ ವಾದಿರಾಜರಿಗೂ ಅವಿನಾಭಾವ ಸಂಬಂಧವೆಂಬಂತೆ ಅಲ್ಲಿಯ ಕ್ಷೇತ್ರವನ್ನು ಬೆಳೆಯಿಸಿದರು. ಉಡುಪಿಯ ಕೃಷ್ಣನೆಂದರೆ ವಾದಿರಾಜರಿಗೆ ಪರಮ ಪ್ರೀತಿ, ಅಪಾರ ಭಕ್ತಿ. ಉಡುಪಿ ಕ್ಷೇತ್ರವು ವಾದಿರಾಜರ ಕಾಲದಲ್ಲಿ ಕ್ರಾಂತಿಕಾರಕ ಬದಲಾವಣೆ ಪಡೆದುಕೊಂಡಿತು. ಕೃಷ್ಣ ಮಠದಲ್ಲಿ ಪೂಜಾ ಕಾರ್ಯಕ್ರಮಗಳನ್ನು ಅವರು ಸಶಿಸ್ತುಗೊಳಿಸಿದರು, ನಿತ್ಯ ಪೂಜೆ ಮತ್ತು ವಿಶೇಷ ಉತ್ಸವ ಪೂಜೆಗಳನ್ನು ಸಕ್ರಮಗೊಳಿಸಿದರು. ಅದುವರೆಗಿನ ಎರಡು ತಿಂಗಳ ಪರ್ಯಾಯ ಕ್ರಮವನ್ನು ಬದಲಿಸಿ ಎರಡುವರ್ಷಕ್ಕೊಮ್ಮೆ ಪರ್ಯಾಯವೆಂದು ಪುನರ್ ಕಲ್ಪಿಸಿಕೊಟ್ಟರು, ಅಷ್ಟಮಠಗಳ ಯತಿಗಳೂ ಆವರೆಗೆ ಕೃಷ್ಣಮಠದಲ್ಲಿಯೇ ವಾಸ್ತವ್ಯವಿರುವ ಕ್ರಮವನ್ನು ಬದಲಿಸಿ ವಾದಿರಾಜರು ರಥಬೀದಿಯ ನಾಲ್ಕು ಕಡೆಗಳಲ್ಲೂ ಎಂಟು ಪ್ರತ್ಯೇಕ ಮಠಗಳ ಮಂದಿರಗಳನ್ನು ನಿರ್ಮಾಣ ಮಾಡಿಕೊಟ್ಟು ಪ್ರತ್ಯೇಕ ವಾಸಸ್ಥಾನವನ್ನು ವ್ಯವಸ್ಥೆ ಮಾಡಿಕೊಟ್ಟರು.

ಇದೇ ಉಡುಪಿಯ ತಮ್ಮ ವಾಸ್ತವ್ಯದಲ್ಲಿಯೇ ವಾದಿರಾಜರು ಕೃಷ್ಣನಿಗೆ ಪೂಜೆ, ಅಭಿಷೇಕ ಸಲ್ಲಿಸುತ್ತಾ, ದಿನಸಂಜೆಯೂ ಪುರಾಣ ಪ್ರವಚನಗಳನ್ನು ಮಾಡುತ್ತಾ, ಅನ್ಯ ವಿದ್ವಾಂಸರಿಂದ ತಾತ್ತ್ವಿಕ ಜಿಜ್ಞಾಸೆಗಳನ್ನು ಏರ್ಪಡಿಸುತ್ತಾ, ಜೊತೆಯಾಗಿ ಕರ್ನಾಟಕ ಸಂಗೀತ, ದಾಸಸಾಹಿತ್ಯ, ಹರಿಕಥಾ ಕಾಲಕ್ಷೇಪ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದವರಾಗಿದ್ದರು. ದಶಾವತಾರ, ಯಕ್ಷಗಾನ ಬಯಲಾಟದ ಮೇಳಗಳು, ಜಾನಪದ ಕಲಾಮಾಧ್ಯಮಗಳು ಇವುಗಳ ಪ್ರದರ್ಶನಕ್ಕೆ ಅನುವು ಮಾಡಿಕೊಟ್ಟು ಕಲಾಪೋಷಕರೂ ಆದರು. ನೃತ್ಯ ಸಹಿತವಾಗಿ ಹರಿಸಂಕೀರ್ತನೆಯ ಪದ್ಧತಿಯನ್ನು ಮನೆಮನೆಯಲ್ಲೂ ಜಾರಿಗೆ ತಂದವರು ವಾದಿರಾಜರೇ. ಪುರಂದರದಾಸರು, ಕನಕದಾಸರುಗಳಾದಿಯಾಗಿ ಎಲ್ಲ ದಾಸಕೂಟದವರು ಈ ಹರಿಸಂಕೀರ್ತನೆಯಲ್ಲಿ ತೊಡಗಿಕೊಂಡು ಭಕ್ತಿ ಪ್ರಚಾರಗೈಯಲು ವಾದಿರಾಜರು ಅಪಾರವಾಗಿ ಪ್ರೋತ್ಸಾಹ, ಮಾರ್ಗದರ್ಶನ ನೀಡಿದವರಾಗಿದ್ದಾರೆ.

ಕೃಷ್ಣದೇವಾಲಯದ ಆವರಣದಲ್ಲಿ ಸುಬ್ರಹ್ಮಣ್ಯನನ್ನೂ, ಪಾಜಕ ಹಾಗೂ ಉಡುಪಿ ಕ್ಷೇತ್ರಗಳಲ್ಲಿ ಮಧ್ವಾಚಾರ್ಯರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದವರು ವಾದಿರಾಜರು. ಉಡುಪಿಯ ಬಳಿಯ ಧರ್ಮಸ್ಥಳದಲ್ಲಿ ಮಂಜುನಾಥೇಶ್ವರನನ್ನು ಪ್ರತಿಷ್ಠಾಪಿಸಿದರು. ಜಾತಿಮತ ಭೇದವಿಲ್ಲದೆ ದಿನನಿತ್ಯವೂ ಅಲ್ಲಿ ಇಂದಿಗೂ ನಡೆಯುತ್ತಿರುವ ಅನ್ನದಾನದ ಮೂಲವ್ಯವಸ್ಥೆ ಮಾಡಿದವರು ವಾದಿರಾಜರೇ.

ಉಡುಪಿಯ ಸುತ್ತಮುತ್ತಣ ಗ್ರಾಮಗಳಾದ ಮಟ್ಟು, ಕೋಟ, ಕೋಟೇಶ್ವರ ಮುಂತಾದೆಡೆಗಳಲ್ಲಿ ಬ್ರಾಹ್ಮಣರ ಒಳಪಂಗಡಗಳೇ ಪರಸ್ಪರ ವೈಷಮ್ಯ, ಬಹಿಷ್ಕಾರಗಳಲ್ಲಿ ತೊಡಗಿಕೊಂಡಿದ್ದವು. ಅವರ ಒಳಜಗಳಗಳನ್ನೆಲ್ಲ ಪರಿಹರಿಸಿ, ವೈಷ್ಣವದೀಕ್ಷೆಯಿತ್ತು, ಸೋದೆಮಠದ ಶಿಷ್ಯರುಗಳನ್ನಾಗಿಸಿಕೊಂಡರು. ದೀನದಲಿತರನ್ನೂ ತಾವೇ ವಿಚಾರಿಸಿಕೊಂಡು ಹೋಗಿ ಅವರುಗಳಿಗಾಗಿ ಅವರದೇ ತುಳು ಭಾಷೆಯಲ್ಲಿ ಪಾಡ್ದನಗಳನ್ನು ರಚಿಸಿಕೊಟ್ಟು ಹರಿಪ್ರೀತಿಯನ್ನು ಅವರಲ್ಲಿ ಬೆಳೆಯಿಸಿದರು. ಇದೆಲ್ಲ ಅವರ ದೀನಾನುಕಂಪಿತ ಹೃದಯವಂತಿಕೆಗೂ, ಸಮಾಜಸೇವೆಗೂ ಸಾಕ್ಷಿಯಾಗುತ್ತವೆ.

ಬದರಿಕಾಶ್ರಮದ ವ್ಯಾಸರಲ್ಲಿಂದ ತ್ರಿವಿಕ್ರಮ ಮೂರ್ತಿಯನ್ನು ತಂದು ಸೋದೆಯಲ್ಲಿ ಪ್ರತಿಷ್ಠಾಪನೆ ಮಾಡಿದರು. ಆಗ ಸೋದೆ (ಆಗಿನ ಹೆಸರು ಸ್ವಾದೀಗ್ರಾಮ)ಯನ್ನು ಆಳುತ್ತಿದ್ದ ಅರಸಪ್ಪನಾಯಕನ ನೆರವಿನಿಂದ ತ್ರಿವಿಕ್ರಮ ದೇವಾಲಯದ ಬಳಿ 'ಧವಳಗಂಗೆ' ಎಂಬ ಸರೋವರ ನಿರ್ಮಾಣ ಗೈದರು. ಈ ಸಂದರ್ಭದಲ್ಲಿ ದೊರೆಯಿಂದ ದೊರೆತ ಅನೇಕ ದಾನಧರ್ಮಗಳ ಬಗ್ಗೆ ಅಲ್ಲಿ ಈಗಲೂ ಇರುವ ಶಿಲಾಶಾಸನಗಳು ಸಾಕ್ಷಿ ನುಡಿಯುತ್ತವೆ. ಉಡುಪಿಯಲ್ಲಿದ್ದಂತೆಯೇ ಸೋದೆಯಲ್ಲೂ ಅನಂತೇಶ್ವರ, ಚಂದ್ರಮೌಳೀಶ್ವರ ದೇವಾಲಯಗಳನ್ನು ಕಟ್ಟಿಸಿ ಉಡುಪಿಯ ಕಡೆಗೋಲು ಕೃಷ್ಣನ ಬದಲಾಗಿ ಅಲ್ಲಿ ಮುರಲೀಧರ ಕೃಷ್ಣನನ್ನು ಪ್ರತಿಷ್ಠಾಪಿಸಿದರು. ಈ ಎಲ್ಲ ವಿವರಗಳೂ ಅವರೇ ರಚಿಸಿರುವ "ವೈಕುಂಠ ವರ್ಣನೆ"ಯಿಂದ ತಿಳಿದುಬರುತ್ತದೆ.

ಉಡುಪಿಯಲ್ಲಿ ವಾದಿರಾಜರಷ್ಟು ದೀರ್ಘಕಾಲ ಪೀಠಾಧಿಪತ್ಯ ಮಾಡಿದ ಯತಿಗಳು ಬೇರೊಬ್ಬರಿಲ್ಲ. ಬಹುಶಃ ಭಾರತದ ಯಾವ ಧರ್ಮಪೀಠದಲ್ಲೂ ಇಲ್ಲ. ರಾಮಾನುಜಾಚಾರ್ಯರು ವಾದಿರಾಜರಷ್ಟೇ ದೀರ್ಘಾಯುಷಿಗಳಾಗಿ

ಬದುಕಿದ್ದರೂ ಇಷ್ಟು ವಿಸ್ತಾರಕಾಲದಲ್ಲಿ ಅವರು ಪೀಠಾಧಿಪತ್ಯ ಮಾಡಿಲ್ಲ. ತಾವೇ ಪ್ರಚಲಿತಗೊಳಿಸಿದ ವ್ಯವಸ್ಥೆಯ ಮೇರೆಗೆ ಸ್ವಯಂ ಹದಿನಾರು ವರ್ಷಗಳಿಗೊಮ್ಮೆ ತಮ್ಮ ಪಾಲಿಗೆ ಬಂದ ಪರ್ಯಾಯವನ್ನು ವಾದಿರಾಜರು ನಾಲ್ಕುಸಲ ನಡೆಸಿದರು. ತಮ್ಮ ಜೀವಿತದ ಕಾಲದಲ್ಲೇ ಬಂದ ಐದನೆಯ ಪರ್ಯಾಯವನ್ನು ತಮ್ಮ ಪೀಠದ ಉತ್ತರಾಧಿಕಾರಿಗಳಾಗಿ ನಿಯಮಿತಗೊಂಡಿದ್ದ ಚಿಕ್ಕ ಸ್ವಾಮಿ ವೇದವೇದ್ಯತೀರ್ಥರಿಗೆ ವಹಿಸಿಕೊಟ್ಟು ತಾವು ಸೋದೆಗೆ ತೆರಳಿ ಆ ಬಾರಿಯ ಪರ್ಯಾಯವನ್ನು ಅಲ್ಲಿ ಆಚರಿಸಿದರು.

ವಾದಿರಾಜರು ಉಡುಪಿಯಲ್ಲಿ ನಡೆಸಿದ ಮಹಾವೈಭವಯುಕ್ತ ಪರ್ಯಾಯ ಕಾಲಗಳು ಹೀಗಿವೆ:

೧) ಕ್ರಿ.ಶ ೧೫೩೨ ಮತ್ತು ೩೩ನೇ ಇಸವಿ – ಇದೇ ಅವಧಿಯಲ್ಲಿ ಆಮಂತ್ರಣದ ಮೇರೆಗೆ ಉಡುಪಿಗೆ ವ್ಯಾಸತೀರ್ಥರೂ, ಅಚ್ಯುತರಾಯದೊರೆಯೂ ಆಗಮಿಸಿದ್ದು. ವ್ಯಾಸತೀರ್ಥರು ಕೃಷ್ಣನ ಪೂಜೆ ಮಾಡಿಕೊಂಡಿದ್ದ ಕಾಲ ಹಾಗೂ ಅಚ್ಯುತರಾಯನು ಮಠ, ಸರೋವರಗಳ ಜೀರ್ಣೋದ್ಧಾರ ಮಾಡಿಸಿದಕಾಲ.

೨) ಕ್ರಿ.ಶ ೧೫೪೮ ಮತ್ತು ೪೯ನೇ ಇಸವಿ –

೩) ಕ್ರಿ.ಶ ೧೫೬೪ ಮತ್ತು ೬೫ನೇ ಇಸವಿ – ಇದೇ ಅವಧಿಯಲ್ಲಿ ಶ್ರೀಕೃಷ್ಣ ದೇವಾಲಯಕ್ಕೆ ತಾಮ್ರದ ಛಾವಣಿ ತೆಗೆದು ಬಂಗಾರದ ತಗಡುಗಳಿಂದ ಶೃಂಗರಿಸಲು ವಾದಿರಾಜರ ಯತ್ನ ನಡೆಯಿತು. ಆದರೆ ಈ ವೇಳೆಗೆ ವಿಜಯನಗರ ಹಿಂದೂ ಸಾಮ್ರಾಜ್ಯ ನಾಶವಾಗಿದ್ದರಿಂದ ಅವರ ಪ್ರಯತ್ನ ಫಲಿಸದೆ ತಟಸ್ಥರಾದರು. [ವೆಂಕೋಬರಾಯರ 'ವ್ಯಾಸವಿಜಯ' ಕೃತಿಯಲ್ಲಿ ಈ ಬಗ್ಗೆ ದಾಖಲೆ ಇದೆ]

೪) ಕ್ರಿ.ಶ ೧೫೮೦ ಮತ್ತು ೮೧ನೇ ಇಸವಿ

೫) ಕ್ರಿ.ಶ ೧೫೯೬ ಮತ್ತು ೯೭ನೇ ಇಸವಿ – ತಮ್ಮ ಉತ್ತರಾಧಿಕಾರಿ ಯತಿ ವೇದವೇದ್ಯತೀರ್ಥರಿಗೆ ಪರ್ಯಾಯ ವಹಿಸಿಕೊಟ್ಟು ತಾವು ಸೋದೆಗೆ ತೆರಳಿ ಅಲ್ಲಿ ಪರ್ಯಾಯವನ್ನು ನಡೆಸಿದ ಅವಧಿ.

ವಾದಿರಾಜರು ಉಡುಪಿಯಲ್ಲಿದ್ದಾಗ ಬರೆದ "ವೈಕುಂಠ ವರ್ಣನೆ" ಕೃತಿಯಲ್ಲಿ ಜಗತ್ತಿನ ಸೃಷ್ಟಿ ಸ್ಥಿತಿ ಲಯ ಮೋಕ್ಷಗಳ ಬಗ್ಗೆ ವಿವರವಾದ ಚಿತ್ರಣಗಳಿವೆ. ಈ ಕೃತಿಯಲ್ಲಿ ಶ್ರೀಮದ್ಭಾಗವತ, ಪಾಂಚರಾತ್ರಾಗಮ, ಶ್ರುತಿಗಳಲ್ಲಿ ಬರುವ ಪ್ರಮಾಣಗಳನ್ನು ಅನುಸರಿಸಿ ಅವುಗಳನ್ನು ಕನ್ನಡ ಹಾಡುಗಳನ್ನಾಗಿ ಮಾಡಿಕೊಟ್ಟಿದ್ದಾರೆ. ಪ್ರಾಸಾಲಂಕಾರದಿಂದ ಕೂಡಿ ತತ್ತ್ವಜ್ಞಾನದ ತಿರುಳನ್ನು ಸರಳವಾಗಿ ತಿಳಿಸುವ ಪದ್ಯಗಳಾಗಿವೆ ಇವು.

ತಮ್ಮ ಪರ್ಯಾಯ ಕಾಲದಲ್ಲಿ ಉಡುಪಿಯಲ್ಲಿಯೇ ವಾಸ್ತವ್ಯವಿರುತ್ತಿದ್ದು ನಂತರದ ದಿನಗಳಲ್ಲಿ ಅನೇಕಬಾರಿ ಭಾರತ ಸಂಚಾರ ಕೈಗೊಂಡು ಭಾಗವತಧರ್ಮ ಹಾಗೂ ದ್ವೈತ ಮತ ಪ್ರಸಾರವನ್ನು ಕೈಗೊಂಡ ವಾದಿರಾಜರು ಮದಗರ್ವಿತ ಪಂಡಿತರನ್ನೂ ಭಕ್ತಿಮಾರ್ಗಕ್ಕೆ ಎಳೆದುತಂದವರು. ವೃದ್ಧಾಪ್ಯದ ದಿನಗಳನ್ನು ಸೋದೆಯಲ್ಲೇ ಕಳೆದು ಕ್ರಿ.ಶ ೧೬೦೦ ರಲ್ಲಿ ಸಜೀವವಾಗಿ ವೃಂದಾವನ ಪ್ರವೇಶಿಸಿದವರು. ಒಟ್ಟು ೧೨೦ ವರ್ಷಗಳ ಕಾಲ ಬದುಕಿ ಅತ್ಯಂತ ಸಾರ್ಥಕ ಜೀವಿತವನ್ನು ಕಳೆದವರು.

ಭಾರತದ ಯತಿಗಳಲ್ಲಿ ಸಶರೀರವಾಗಿ ಬೃಂದಾವನ ಪ್ರವೇಶ ಮಾಡಿದವರಲ್ಲಿ ವಾದಿರಾಜರೇ ಮೊದಲಿಗರು. ಅನಂತರದ ಶತಮಾನಗಳು ಕಳೆದ ಮೇಲೆ ಬಂದ ಮಂತ್ರಾಲಯದ ರಾಘವೇಂದ್ರ ಸ್ವಾಮಿ ಯತಿಗಳು ಎರಡನೆಯವರು. ಮತ್ತಾವ ಯತಿಗಳೂ ಹೀಗೆ ಸಶರೀರ ಬೃಂದಾವನಸ್ಥರಾಗಿರುವ ದಾಖಲೆ ಇಲ್ಲ.

ಅದ್ಭುತ ಗ್ರಂಥ ರಚನಾ ಕುಶಲಿಯಾಗಿದ್ದು, ಶಾಸ್ತ್ರವಾದಿಗಳೊಡನೆ ವಾದಿಸಿ ಜಯಪಡೆದು ಮಧ್ವಸಿದ್ಧಾಂತ ಪ್ರತಿಪಾದನೆಯಲ್ಲಿ ಮಿಗಿಲಿಲ್ಲವೆನಿಸಿಕೊಂಡ ವಾದಿರಾಜರು ಸಂಸ್ಕೃತ ಪಾಂಡಿತ್ಯ, ಪ್ರೌಢಿಮೆಗಳಲ್ಲೆ ಉಳಿದುಬಿಡದೆ ತಮ್ಮ ಮಾತೃಭಾಷೆಯಾದ ಕನ್ನಡವನ್ನು ಕೈಹಿಡಿದು ದಾಸಸಾಹಿತ್ಯ ಲೋಕದಲ್ಲಿ ಮುನ್ನಡೆಸಿದರು ಎನ್ನುವುದೇ ಕನ್ನಡ ಸಂಸ್ಕೃತಿಯ, ಸಾಹಿತ್ಯದ ಜೊತೆಗಿನ ಅವರ ಆಪ್ತತೆಗೆ, ಅನುಬಂಧಕ್ಕೆ ಸಾಕ್ಷಿಯಾಗಿ ನಿಂತು ಕನ್ನಡಿಗರ ಆದರಾಭಿಮಾನಗಳನ್ನು ವಾದಿರಾಜರಿಗಾಗಿ ಎಂದಿಗೂ ಮೀಸಲಿಡುತ್ತದೆ.

ಶ್ರೀಪಾದರಾಜರಿಂದ ಮೊದಲುಗೊಂಡು ವ್ಯಾಸತೀರ್ಥರಿಂದ ಮುಂದೆ ಸಾಗಿದ ಹರಿದಾಸ ಸಾಹಿತ್ಯವು ವಾದಿರಾಜರಿಂದ ಶ್ರೀಮಂತಗೊಂಡಿತು. ಎಂತಲೇ ಅವರು ವ್ಯಾಸಕೂಟದ ಪ್ರಮುಖ ವ್ಯಾಖ್ಯಾನಕಾರರಾಗಿಯೂ, ದಾಸಕೂಟದ ಪ್ರಮುಖ ವ್ಯಾಖ್ಯಾನಕಾರರಾಗಿಯೂ ನಮಗೆ ದೊರಕುವ ಯತಿಪುಂಗವರಾಗಿದ್ದಾರೆ. ಕನ್ನಡ ಹರಿದಾಸ ಸಾಹಿತ್ಯದಲ್ಲಿ ಅವರ ರಚನೆಗಳು ಕನ್ನಡ ಭಾಷೆಯ ಸತ್ವಭಾವಸಿರಿಯನ್ನೂ, ತತ್ತ್ವ ಜ್ಞಾನದ ಬೆಳಕನ್ನೂ ಜೊತೆಜೊತೆಯಾಗಿ ತೋರುತ್ತವೆ.

<u>ಅಡಿಟಿಪ್ಪಣಿಗಳು</u> :

೧. ದಾಸಸಾಹಿತ್ಯ ಮತ್ತು ಸಂಸ್ಕೃತಿ – ಸಾ.ಕೃ. ರಾಮಚಂದ್ರರಾವ್.

೨. ಅರ್ಥ: "ನಾನು ವ್ಯಾಸಂಗ ಮಾಡಿರುವುದೆಲ್ಲವನ್ನೂ ವ್ಯಾಸತೀರ್ಥರು ವ್ಯಾಸಂಗ ಮಾಡಿದ್ದಾರೆ; ಓದದೇ ಇರುವುದನ್ನು ಸಹ ಅವರು ಅಧ್ಯಯನ ಮಾಡಿದ್ದಾರೆ. ಪಕ್ಷಧರ ಮಿಶ್ರನನ್ನು ಸೋಲಿಸಬಲ್ಲ ಪಾಂಡಿತ್ಯವನ್ನು ನಾನು ನವೀನವ್ಯಾಸರೆನ್ನಿಸಿದ ವ್ಯಾಸತೀರ್ಥರಲ್ಲಿ ಅಲ್ಲದೆ ಅನ್ಯರಲ್ಲಿ ಕಾಣಲಿಲ್ಲ"

೩. ಸೋಮನಾಥ ಕವಿಯ ವ್ಯಾಸಯೋಗಿ ಚರಿತೆಯಲ್ಲೂ ಈ ಚಿತ್ರಣ ಬಂದಿದೆ.

೪. ವ್ಯಾಸತೀರ್ಥರ ನೇರಶಿಷ್ಯರಾದ ವಿಜಯೀಂದ್ರತೀರ್ಥರ ಕೃತಿ "ವ್ಯಾಸರಾಜಸ್ತೋತ್ರ"ದಲ್ಲಿ ಈ ಕುರಿತ ದಾಖಲೆ, ವಿವರ ದೊರೆಯುತ್ತದೆ.

೫. ಶ್ರೀ ವ್ಯಾಸರಾಯರು; ಕೊರಟಿ ಶ್ರೀನಿವಾಸರಾವ್ ಪುಟ– ೬೩.

೬. ಶೀ ಜಗನ್ನಾಥದಾಸರು, ೧೯೫೬, ಡಾ. ಕೆ.ಎಂ. ಕೃಷ್ಣರಾವ್, ಉಷಾ ಸಾಹಿತ್ಯಮಾಲೆ, ಮೈಸೂರು.

೭. ಶೀ ಜಗನ್ನಾಥದಾಸರು, ೧೯೫೬, ಡಾ. ಕೆ.ಎಂ. ಕೃಷ್ಣರಾವ್, ಉಷಾ ಸಾಹಿತ್ಯಮಾಲೆ, ಮೈಸೂರು. ಪುಟ –೯೪

೮. ಯಂತ್ರೋದ್ಧಾರಕನ ಪ್ರತಿಷ್ಠಿಸಿ ವಿಜಯೀಂದ್ರ
ಸಂತ ವಾದಿರಾಜರಿಗೊಲಿದು ಪುರಂದರ
ಇಂತು ಶಿಷ್ಯರನು ಪಡೆದು ಉಪದೇಶಿಸಿ
ಮಂತ್ರ ಸಿದ್ಧಿಯನೆ ಕೊಟ್ಟ ॥ವ್ಯಾಸರಾಯರ ಭಜಿಸಿರೋ॥ –ವಿಜಯದಾಸರು.

ಎರಡು ನಾಲ್ಕು ಮಂದಿ ಪರಮ ಶಿಷ್ಯರು ಆದವರು
ಸಿರಿ ವಾದಿರಾಜ ವಿಜಯೀಂದ್ರ ಗೋವಿಂದ ಒಡೆಯರು
ಪುರಂದರದಾಸರು ಪರಿಪರಿಯ ಶಿಷ್ಯರುಗಳ
ಬೆರೆದು ಸಕಲ ಶಾಸ್ತ್ರವೆರೆದು ಅವರುಗಳ
ಪರಮ ಶುದ್ಧರ ಮಾಡಿ ಪರಸಾಧನೆಯ ತೋರಿದ ॥ವ್ಯಾಸರಾಯರ ದಿವ್ಯಪಾದ। – ಗೋಪಾಲ ದಾಸರು

೯. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ– ಬೆಂಗಳೂರು.ವಿ.ವಿ. ಪುಟ ೩೭೦. ಡಾ॥ ಕೆ.ಎಂ. ಕೃಷ್ಣರಾವ್.

೧೦. ಮಹಾಭಾರತ ತಾತ್ಪರ್ಯನಿರ್ಣಯ– ಸರ್ಗ–೧, ಶ್ಲೋಕ ೮೨.

೧೧. ವಿಜಯೀಂದ್ರ ಸ್ತೋತ್ರ– ಸೇತುಮಾಧವಸೂರಿಗಳು– ಶ್ಲೋಕ ೩–೪.

೧೨. ವಿಜಯೀಂದ್ರತೀರ್ಥರು ತಮ್ಮ ಗುರು ವ್ಯಾಸತೀರ್ಥರ ಬಗ್ಗೆ ಬರೆದಿರುವ ಕನ್ನಡ ಕೀರ್ತನೆಗಳು ಲಭ್ಯವಿವೆ.

೧. ಯೋಗಿ ವ್ಯಾಸರಾಯರೆಂಬ ವಿಚಿತ್ರ ಮೇಘ
ಬೇಗ ವಿಷ್ಣುಪದವ ತೋರಿಸುತ್ತ ಬಂತಿದಿಕೋ॥

೨. ವ್ಯಾಸಮುನಿರಾಯ ಸನ್ಯಾಸ ಕುಲರತುನ ಮನ
ದಾಸೆ ಸಲಿಸುತ ಸಲಹು ದಾಸನನು ಗುರುವೆ॥

೧೩. ಡಾ॥ ಬಿ.ಎನ್.ಕೆ. ಶರ್ಮಾ 'ದ್ವೈತ ವೇದಾಂತ ವಾಙ್ಮಯ ಹಾಗೂ ಇತಿಹಾಸ ಪುಟ -೨೮೫

೧೪. ಆ ವಟುವಿನ ಹೆಸರು ಹನುಮಂತ ಭಟ್ಟ.

೧೫. ಈ ವಿವರಗಳನ್ನು ಅಲ್ಲಿನ ತಾಮ್ರಶಾಸನದ ಪ್ರತಿಯ ಸಮೇತವಾಗಿ ಒದಗಿಸಿಕೊಟ್ಟವರು ಇದೇ ಕಾಶಿಮಠದ ಪರಂಪರೆಯಲ್ಲಿ ಬಂದಿರುವ ಈಗಿನ ಹರಿದಾಸ ಸಂತ ಭದ್ರಗಿರಿ ಅಚ್ಚುತದಾಸರು.

೧೬. "The Origin of Shri Kashi Math Samsthan" - by V.A. Shenai

೧೭. ಜಯಸಿಂಹ "ಶ್ರೀ ವಿಜಯೀಂದ್ರ ವೈಭವ" ಪುಟ ೨೨೧.

೧೮. ಟಿ.ಕೆ ವೇಣುಗೋಪಾಲದಾಸರು "ಶ್ರೀ ವ್ಯಾಸರಾಜ ಗುರುಸಾರ್ವಭೌಮರು"

೧೯. ಪ್ರಾಚ್ಯ ಸಂಶೋಧನೆ ಇಲಾಖೆಯ ತಾಮ್ರಶಾಸನ – (ಎಂಟನೇ ವರದಿ-ಪುಟ ೯೧ರಿಂದ೯೩)

೨೦. ಈ ವೃತ್ತಿದಾನದ ಶಾಸನದಲ್ಲಿ "ಯತೇ ರಘುಪತೇಃ ಶಿಷ್ಯಸ್ಸರ್ವಶಾಸ್ತ್ರ ವಿಶಾರದಃ ನಾರಾಯಣ ಯತೀಂದ್ರೋತ್ರ ವೃತ್ತಿಷಟ್ಕಂ ಸಮಶ್ನುತೇ" ಎಂದಿದೆ.

೨೧. ತಮ್ಮ ಸಹಪಾಠಿಗಳಾದ ವಾದಿರಾಜರ ಮೇಲೆ "ವಾದಿಗಳೆಲ್ಲರನೇ ಗೆದ್ದ ವಾದ ಧೀರನೇ..." ಎಂಬ ಕೃತಿಯೊಂದನ್ನು ಇವರು ರಚಿಸಿದ್ದಾರೆ.

೨೨. ವ್ಯಾಸತೀರ್ಥ ಗುರೂನ್ನತ್ವಾ ಪರಪಕ್ಷ ವಿದಾರಣನ್ ಗುರುರೇವ ನ ಸಂಶಯಃ॥ – "ಪ್ರಮೇಯಮಾಲಾ" ಗ್ರಂಥದಿಂದ ೧೯೬೫ನೇ ನವಂಬರ್ ತಿಂಗಳ "ತತ್ತ್ವವಾದ" ಸಂಚಿಕೆಯ ಲೇಖನದಲ್ಲಿ ಪ್ರಕಟಿತ.

೨೩. ಶ್ರೀಪಾದರಾಜಗುಣವರ್ಣನಪದ್ಯಷಟ್ಕಂ
ಶ್ರೀ ವ್ಯಾಸರಾಜ ಶಿಷ್ಯಗಣರ್ಷ ಭೇಣ
ಶ್ರೀವಾದಿರಾಜಯತಿನಾ ರಚಿತಂ ಹಿ ಶಶ್ವತ್
ಸೇವಾದರೇಣ ಪಠತಾಂ ಪ್ರಕರೋತ್ಯಬೀಕ್ಷ್ಣಂ॥ ವಾದಿರಾಜಯತಿ ವಿರಚಿತ ಶ್ರೀಪಾದರಾಜರ ಸ್ತೋತ್ರ

೨೪. ಆಚಾರ್ಯ ಮಧ್ವರು ತಮ್ಮ ಸ್ವಂತ ಸೋದರ ವಿಷ್ಣುತೀರ್ಥರಿಗೆ ಆಶ್ರಮನೀಡಿ, ವಿದ್ಯಾಪಾರಂಗತರನ್ನಾಗಿ ಮಾಡಿ ಹೊಸ ಪರಂಪರೆಯನ್ನೆ ಪ್ರಾರಂಭಿಸಬೇಕೆಂದು ಪ್ರೋತ್ಸಾಹಿಸಿದಾಗ ಮೂಡಿಬಂದ ಮಠವೇ ಸೋದೆಯ ಮಠ. ಇದೇ ಮಠವೇ ಮುಂದೆ ವಾದಿರಾಜ ಮಠವೆಂದು ಪ್ರಖ್ಯಾತಿಗೊಂಡಿತು.

೨೫. ಡಾ. ಅರಳುಮಲ್ಲಿಗೆ ಪಾರ್ಥಸಾರಥಿ "ಶ್ರೀ ವಾದಿರಾಜ ಸಂಪುಟ" – ಪುಟ ೧೨೯.

೨೬. ವಾದಿರಾಜರ ಈ ಕೃತಿಗೆ ಅವರ ಪೂರ್ವಾಶ್ರಮದ ಸೋದರರೂ, ಭಂಡಾರಕೇರಿ ಮಠದ ಪ್ರವರ್ತಕರೂ ಆದ ಸುರೋತ್ತಮತೀರ್ಥರು 'ಭಾವ ವಿಲಾಸಿನೀ' ಎಂಬ ಟೀಕಾಗ್ರಂಥ ರಚಿಸಿದ್ದಾರೆ.

೨೭. ಇದೇ ಅವಧಿಯಲ್ಲಿಯೇ ವ್ಯಾಸತೀರ್ಥರಿಂದ ಈ ಕೀರ್ತನೆ ರಚಿತಗೊಂಡು ಅವರು ಹಾಡಿದ್ದು (ಐದು ನುಡಿಗಳು).

"ಶ್ರೀವದನ ಕುಮುದ ಚಂದ್ರಮ ಚಿದಾನಂದಮಯ ಸೇವಕಪ್ರಿಯ ಶ್ರೀಕೃಷ್ಣ ॥ಪ॥
ಉಡುಪಿ ಪುರವಾಸ ಸಜ್ಜನ ಪೋಷ ಪರಮೇಶ
ಉಡುರಾಜ ವರದ ಶ್ರೀಕೃಷ್ಣ
ಜಡಮಾರ್ಗಣ ಕೋಟಿ ಲಾವಣ್ಯ ಮಧ್ವಪತಿ
ಕಡಗೋಲು ಪಿಡಿದ ಶ್ರೀಕೃಷ್ಣ ॥

ದಾಸಕೂಟದ ಪ್ರಮುಖ ವ್ಯಾಖ್ಯಾನಕಾರರಾಗಿ ವಾದಿರಾಜರು

ವ್ಯಾಸಕೂಟದ ಪ್ರಮುಖ ವ್ಯಾಖ್ಯಾನಕಾರರಾಗಿ ಮಧ್ವ ಸಿದ್ಧಾಂತದ ಉದ್ಗ್ರಂಥ ರಚನಾಕಾರರಾಗಿ, ಮಠಾಧಿಪತ್ಯದ ಯತಿಗಳಾಗಿ ಬಾಳಿದ ವಾದಿರಾಜರು ಹರಿದಾಸರನ್ನು ಸಂಘಟಿಸಿ ದಾಸಸಾಹಿತ್ಯ ಕೃಷಿಗೆ ಮಾರ್ಗದರ್ಶಕರಾಗಿ, ಕನ್ನಡದಲ್ಲಿ ಭಕ್ತಿಪೂರ್ಣ ಕೃತಿಗಳ ರಚನಾಕಾರರಾಗಿ, ದಾಸಕೂಟದ ಪ್ರಮುಖ ವ್ಯಾಖ್ಯಾನಕಾರರಾಗಿಯೂ ಇದ್ದಾರೆ. ಕನ್ನಡ ಹರಿದಾಸ ಸಾಹಿತ್ಯಕ್ಕೊಂದು ಧೀಮಂತಿಕೆ, ಸತ್ವಯುಕ್ತ ಶ್ರೀಮಂತಿಕೆಯನ್ನು ತುಂಬಿಕೊಟ್ಟ ಅವರು ಯತಿಗಳೂ ಹೌದು, ಹರಿದಾಸರೂ ಹೌದು. ಕನ್ನಡ ಜನರನ್ನು ಸಂಘಟಿಸಿ ಹರಿಭಕುತಿಯನ್ನು ಅವರಲ್ಲಿ ಪ್ರಸರಿಸಿ . ಸದಾಚಾರ, ಸದಭಿರುಚಿಗಳನ್ನು ತಮ್ಮ ಬದುಕು ಮತ್ತು ಸಾಹಿತ್ಯದ ಮೂಲಕ ಅವರಲ್ಲಿ ಪ್ರೇರೇಪಿಸಿ ಸನ್ಮಾರ್ಗಕ್ಕೆ ಹಚ್ಚಿದ ಅಸಾಮಾನ್ಯರು.

ವ್ಯಾಸತೀರ್ಥರು, ಪುರಂದರದಾಸರು, ಕನಕದಾಸರು, ಬೇಲೂರು ವೈಕುಂಠದಾಸರೇ ಮುಂತಾದವರ ಸಮಕಾಲೀನರಾಗಿದ್ದು, ಅವರೆಲ್ಲರ ಒಡನಾಟದಲ್ಲಿ ಒಂದಾಗಿ ಬೆರೆತು ಕೃಷ್ಣಭಕ್ತಿ, ಕೃಷ್ಣಪ್ರೀತಿಯೇ ತಮ್ಮ ಉಸಿರೆಂಬಂತೆ ಬಾಳಿದ ವಾದಿರಾಜರು ಉಡುಪಿಯ ತಮ್ಮ ಕಾರ್ಯಕ್ಷೇತ್ರದಲ್ಲಿ ದಾಸಕೂಟವನ್ನು ಬೆಳೆಯಿಸಿದರು, ದಾಸಸಾಹಿತ್ಯ ರಚನೆಗೆ ನೀರೆರೆದರು, ಹರಿದಾಸರ ಜೊತೆಗೆ ತಾವೂ ಭಜನೆ ಹಾಡಿ ಕುಣಿದು ನರ್ತನಸೇವೆಗೈದ ನಿಗರ್ವಿಗಳಾಗಿ ಭಕ್ತಿಶೀಲ ವ್ಯಕ್ತಿತ್ವದಲ್ಲಿ ದಾಸಕೂಟಕ್ಕೂ ಪ್ರಮುಖ ವ್ಯಾಖ್ಯಾನಕಾರರೇ ಆದರು. ತಮ್ಮ ಉಪಾಸ್ಯಮೂರ್ತಿ 'ಹಯವದನ' ಅಂಕಿತದಿಂದ ಸಾವಿರಾರು ಕನ್ನಡ ಕೀರ್ತನೆಗಳನ್ನು ರಚಿಸಿ ಕನ್ನಡ ಜನರ ಭಕ್ತಿಭಾವ ಶ್ರೀಮಂತಿಕೆಗೆ ಪ್ರೇರಣರಾದರು. ತಮ್ಮ ಸುತ್ತಣ ಸಮಾಜದ ನೂರೆಂಟು ಸಮಸ್ಯೆಗಳಿಗೆ ಸ್ಪಂದಿಸಿ, ಡಾಂಭಿಕತೆ, ಶೋಷಣೆ, ಕುಲಪೀಡನೆಗಳ ಬಗ್ಗೆ ದಿಟ್ಟ ಅಭಿವ್ಯಕ್ತಿಯನ್ನು ತಮ್ಮ ಕನ್ನಡ ರಚನೆಗಳಲ್ಲಿ ತೋರಿದರು.

ಈಗಲೂ ಉಡುಪಿಯ ಮಠಗಳಲ್ಲಿ ವಾದಿರಾಜರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸಿ ರಾತ್ರಿ ಪೂಜಾನಂತರ ಭಾಗವತರ ಜೊತೆಗೆ ಯತಿಗಳೂ ಕಲೆತು ಭಜನೆ ಮಾಡುವ ಪದ್ಧತಿಯನ್ನು ತಪ್ಪದೇ ನಡೆಸಿಕೊಂಡು ಬರುತ್ತಿದ್ದಾರೆ. ಈಗಲೂ ಉಡುಪಿಯ ಮಠಗಳಲ್ಲಿ ಅತಿ ಹೆಚ್ಚಾಗಿ ಹಾಡುವುದೆಂದರೆ ವಾದಿರಾಜರ ರಚನೆಗಳನ್ನೇ. ತಾಳಗಳನ್ನು ಬಾರಿಸುತ್ತಾ ಎಲ್ಲರೂ ಒಟ್ಟಾಗಿ ನರ್ತನ ಸೇವೆಯೊಂದಿಗೆ ಹಾಡುವ ಈ ಪದ್ಧತಿ ಈಗಲೂ ಚಾಲ್ತಿಯಲ್ಲಿದೆ. ದೇವಸ್ಥಾನ, ಮಠಗಳಷ್ಟೇ ಅಲ್ಲ, ದಕ್ಷಿಣ ಕನ್ನಡ ಜಿಲ್ಲೆಯ ಮನೆಮನೆಗಳಲ್ಲೂ ಈ ಭಜನಾಪದ್ಧತಿ ಚಾಲ್ತಿಯಲ್ಲಿದ್ದು, ಸಂಜೆಗತ್ತಲು ಆವರಿಸಿದೊಡನೆ ಮನೆಮಂದಿ, ಮಕ್ಕಳೆಲ್ಲ ಸೇರಿ ನಡುವೆ ದೀಪವಿರಿಸಿಕೊಂಡು ಸುತ್ತಲೂ ನರ್ತನದ ಹೆಜ್ಜೆಗಳನ್ನು ಹಾಕುತ್ತಾ ಕೈಯಲ್ಲಿ ಹಿತ್ತಾಳೆಯ ತಾಳ ಹಿಡಿದು ಬಾರಿಸುತ್ತಾ ಕನ್ನಡ ದೇವರನಾಮ ಸಂಕೀರ್ತನವನ್ನು ಮಾಡುತ್ತಿದ್ದರು. ಈ ಭಕ್ತಿಪೂರ್ಣ ವಾತಾವರಣ ಕಾಲರಾಯನ ಬೇರೆ ಬೇರೆ ಇಂದಿನ ಆಯಾಮ, ಆಕರ್ಷಣೆಗಳಿಗೊಳಗಾಗಿ ಇತ್ತೀಚೆಗೆ ಕನ್ನಡ ಸಂಸ್ಕೃತಿಯಿಂದ ಕಾಲ್ತೆಗೆದು ಮರೆಯಾಗಿದೆ.

ವಾದಿರಾಜರ ಕನ್ನಡ ಕೀರ್ತನೆಗಳಲ್ಲಿ ಭಾವಾರ್ಥಗಳ ಸ್ಪಂದನಕ್ಕೆ ಹೆಚ್ಚು ಅವಕಾಶವಿದ್ದು ನಾದಕ್ರಿಯೆಯ ಆವರ್ತನವು ಭಕ್ತಿಯನ್ನು ಪ್ರಚೋದಿಸುವಂತೆ ಅವು ರಚನೆಗೊಂಡಿರುವುದನ್ನು ಕಾಣಬಹುದು. ಇಂದಿಗೂ ಮಠಗಳಲ್ಲಿ ಹೆಚ್ಚು ಚಾಲ್ತಿಯಲ್ಲಿರುವ ಅವರ ಹಾಡುಗಳಲ್ಲಿ ಅವರ "ಲಕ್ಷುಮಿನಾರಾಯಣ ಜಯ ಲಕ್ಷುಮಿನಾರಾಯಣ" ಎಂಬ ಜನಪ್ರಿಯ ಕೀರ್ತನೆ ಉದಾಹರಣೆಯಾಗಿದೆ. ಅವರ ಕನ್ನಡ ಕೃತಿಗಳಲ್ಲಿ ಅನುಭಾವತೆ, ರಸದೃಷ್ಟಿ ಎರಡೂ ಕಾವ್ಯಾತ್ಮಕವಾಗಿ ಚಿಮ್ಮಿವೆ. ದಶಾವತಾರವನ್ನು ವರ್ಣರಂಜಿತವಾಗಿ, ವೈವಿಧ್ಯಪೂರ್ಣತೆಯಾಗಿ ಚಿತ್ರಿಸಿದ್ದಾರೆ. ನಾಟಕೀಯತೆಯನ್ನು ತುಂಬಿಕೊಂಡ ಕೃತಿಗಳಲ್ಲಿ ಸಂಭಾಷಣೆಯ ಸೊಗಸುಗಾರಿಕೆ ರಸಪೂರ್ಣವಾಗಿ ಹೊಮ್ಮಿದೆ. ಉದಾಹರಣೆಗೆ ಕೃತಿಯೊಂದರಲ್ಲಿ ಕೃಷ್ಣ ಮತ್ತು ಭಾಮೆಯರ ಕಾವ್ಯಾತ್ಮಕ ಸಂವಾದದ ಮೂಲಕವೇ ಹತ್ತು ಅವತಾರಗಳನ್ನು ತೆರೆದಿಡುವ ಪರಿ ಅನನ್ಯವಾಗಿರುವುದನ್ನು ಕಾಣಬಹುದು. ಕೃಷ್ಣ ಬಂದು ಬಾಗಿಲು ತಟ್ಟಿದರೂ ಭಾಮೆ ಬಾಗಿಲು ತೆರೆಯದೆ ಯಾರು? ಎಂದು ಕೇಳುತ್ತಿದ್ದಾಳೆ.ಉತ್ತರವಾಗಿ ಕೃಷ್ಣ ಹೇಳುತ್ತಾನೆ.

ಕೃಷ್ಣ : "ನೀರೊಳು ಮುಳುಗಿ ನಿಗಮಚೋರನ ಗೆದ್ದ ನೀರಜಾಕ್ಷನೆ ಭಾಮೆ"

ಭಾಮೆ : "ನಾರುವ ಮೈಯನ್ನು ಎನ್ನಲ್ಲಿ ತೋರದೆ ಸಾರು ಸಾರು ನೀ ದೂರ"

ಕೃಷ್ಣ: "ಮಂದರಗಿರಿಯನು ಬೆನ್ನಲ್ಲಿ ಪೊತ್ತಂಥ ಇಂದಿರೆಯರಸನೇ ಭಾಮೆ"

ಭಾಮೆ: "ಇಂದು ನಿನಗೆ ತಕ್ಕ ಭಾರಗಳಿಲ್ಲವೋ ಸಿಂಧುವಿನೊಳಗೆ ನೀ ಪೋಗೈ"

ಹೀಗೆ ತನ್ನ ಹತ್ತು ಅವತಾರಗಳನ್ನು ಅವನ ಬಾಯಿಯಿಂದಲೇ ಸ್ವಾರಸ್ಯಕರವಾಗಿ ಹೇಳಿಸುತ್ತ ಬಾಗಿಲು ತೆರೆಯದೆ ನಾಟಕವಾಡುವ ಭಾಮಿನಿಯಾಗಿ ಸತ್ಯಭಾಮೆಯನ್ನು ಚಿತ್ರಿಸುತ್ತ ಸಾಗುವ ಈ ಹಾಡು ಸೊಗಸಾದ ಗೀತರೂಪಕವಾಗಿ, ನೃತ್ಯಾಭಿನಯಕ್ಕೊಂದು ಕೀರ್ತನೆಯಾಗುವ ಗುಣಹೊಂದಿದೆ. ಕಡೆಗೆ ಕೃಷ್ಣ "ಸರ್ವ ಜೀವಗಳ ಉದರದೊಳಿಂಬಿಟ್ಟು ಶರಧಿಯೊಳ್ ಮಲಗಿದೆ ಭಾಮೆ" ಎನ್ನುತ್ತ ಸಾಗರದೆಡೆಗೆ ಮರಳುವ ನಾಟಕವಾಡಿದಾಗ "ದೊರೆ ಹಯವದನನ ಚರಣಕ್ಕೆ ಎರಗುತ್ತಾ ತೆರೆದಳು ಬಾಗಿಲು ಭಾಮೆ, ಆಗ ತೆರೆದಳು ಬಾಗಿಲ ಭಾಮೆ" ಎಂದು ಮುಕ್ತಾಯ ತಂದಿದ್ದಾರೆ. ಇದೇ ರೀತಿ ಉರುಟಣೆಯ ಹಾಡುಗಳಲ್ಲಿಯೂ ದಶಾವತಾರದ ಚಿತ್ರಕಶಕ್ತಿ ತುಂಬಿದೆ. ಇತ್ತೀಚಿಗೆ ಜನಮನದಿಂದ ಮರೆಯಾಗುತ್ತಿರುವ ಈ ಉರುಟಣೆಯ ಹಾಡು ಮದುವೆಮನೆಗಳಲ್ಲಿ ಮಹಿಳೆಯರು ಕೂತು ಮದುಮಕ್ಕಳ ಮುಂದೆ ಹಾಡಿ ನಲಿಯುತ್ತಿದ್ದುದೇ ಆಗಿದೆ.

ಯಶೋದೆ ಹಾಗೂ ಕೃಷ್ಣನ ಸಂವಾದವೇ ತುಂಬಿರುವ ಹಾಡುಗಳು ಬೇಕಷ್ಟಿದ್ದು ಕೃಷ್ಣನ ತುಂಟತನ, ಗೋಪಿಯರ ಚಾಡಿ, ಬಲರಾಮನ ದೂರು ಎಲ್ಲವನ್ನೂ ನಿಭಾಯಿಸಿಕೊಂಡೇ "ಬಾರೆಂದು ಕರೆದಳು ಯಶೋದೆ ಬಿಗಿದಪ್ಪಿ ಧೀರ ಹಯವದನನ್ನ" ಎಂದು ಕೃಷ್ಣನನ್ನು ಕ್ಷಮಿಸಿ ಪ್ರೀತಿಸುವ ತಾಯ್ತನದ ಭಾವ ಚಿತ್ರಣ ಅವುಗಳಲ್ಲಿ

ತುಂಬಿಕೊಂಡಿದೆ. "ಏನು ಸುಕೃತವ ಮಾಡಿದಳೋ ಯಶೋದೆ ಶ್ರೀನಿಧಿ ಕೃಷ್ಣನ್ನ ಕರೆದೆತ್ತಿ ಮುದ್ದಿಪಳಂತೆ" ಎಂಬ ಕೀರ್ತನೆಯಲ್ಲಿ ತಾಯಿಯಾಗಿ ಯಶೋದೆಯ ಅಂತಃಕರಣವನ್ನು ಪದರುಪದರಾಗಿ ಬಿಡಿಸಿಟ್ಟಿದ್ದಾರೆ. ಭಾಗವತದ ದಶಮಸ್ಕಂಧದ ವಸ್ತುವೇ ವಾದಿರಾಜರ 'ರುಕ್ಮಿಣೀಶ ವಿಜಯ'ಕ್ಕೂ, ಕೃಷ್ಣನ ಬಾಲಲೀಲೆಗಳನ್ನು ವರ್ಣಿಸುವ ಅವರ ಕನ್ನಡ ಹಾಡುಗಳಿಗೂ ಮೂಲ ಆಕರ. ಸಾಮಾನ್ಯ ಜನರಿಗೆ, ವಿಶೇಷವಾಗಿ ಮಹಿಳೆಯರಿಗೆ ಹಾಡಿಕೊಳ್ಳಲು ವಾದಿರಾಜರು ರಚಿಸಿಕೊಟ್ಟ ಲಾಲಿಪದಗಳಲ್ಲಿನ ಲಾಲಿತ್ಯವೇ ಬೇರೆ ಸೊಗಸಿನಿಂದ ಕೂಡಿದೆ. "ಶ್ರೀಕೃಷ್ಣ ಬಾಲಲೀಲೆ" ಎಂಬ ಅವರ ಕನ್ನಡ ಕಾವ್ಯ ಹಾಡುಗಬ್ಬದ ಎಲ್ಲ ಬಾಗು ಬಳಕುಗಳನ್ನು ಹೊಂದಿದ್ದು ಜನಬಳಕೆಯ ನಿತ್ಯ ವ್ಯವಹಾರದ ಭಾಷೆಯು ಅದರಲ್ಲಿ ಢಾಳಾಗಿ ಗೋಚರಿಸುತ್ತದೆ ಎಂದು ಪ್ರೊ॥ ಎ.ವಿ ನಾವಡ ಅವರು ತಮ್ಮ "ವಾದಿರಾಜರ ಶ್ರೀಕೃಷ್ಣ ಬಾಲಲೀಲೆ" ಎಂಬ ಕೃತಿಯಲ್ಲಿ ಅಭಿಪ್ರಾಯಪಡುತ್ತಾರೆ. ಅಷ್ಟಲ್ಲದೆ ಸಂಸ್ಕೃತ ಭಾಗವತದಲ್ಲಿಲ್ಲದ ಅನೇಕ ಪ್ರಾದೇಶಿಕ ಸೊಗಡಿನ ವರ್ಣನೆಗಳನ್ನೂ ಕವಿ ಹೃದಯಂಗಮವಾಗಿ ಚಿತ್ರಿಸಿದ್ದಾರೆ. "ಸಂಸ್ಕೃತದ ಅದಿರನ್ನು ಸಂಸ್ಕರಿಸಿ ಈ ನೆಲದ ಇನ್ನೊಂದು ಲೋಹದೊಂದಿಗೆ ಸೇರಿಸಿ ತಯಾರಿಸಿದ ಮಿಶ್ರಲೋಹದ ಪ್ರತಿಮೆ ಇದು" ಎಂದು ಅದೇ ಕೃತಿಯಲ್ಲಿ ಪ್ರೊ॥ ಎ.ವಿ. ನಾವಡ ಅವರು ಹೇಳುತ್ತಾರೆ [ಪ್ರಸಾರಾಂಗ ಕ.ವಿ.ವಿ. ಹಂಪಿ]

ಸರಳವಾದ, ಸೊಗಸಾದ ಇನ್ನೂ ಅನೇಕ ಆರತಿಹಾಡು, ಹಸೆಗೆ ಕರೆಯುವ ಹಾಡು, ಸುವ್ವಿ ಹಾಡುಗಳನ್ನು ಮಹಿಳೆಯರ ಲೋಕಕ್ಕೆಂದೇ ರಚಿಸಿಕೊಟ್ಟವರು ವಾದಿರಾಜರು. ವಾತ್ಸಲ್ಯಭಾವ, ವಿರಹಭಾವಗಳು ತುಂಬಿರುವ ಕೀರ್ತನೆಗಳು ಭಾವಗೀತಾತ್ಮಕವಾಗಿವೆ. ಭಗವಂತ ಕರುಣಾಮಯಿ ಎಂದು ಸಾರುವ ಕೃತಿಗಳು ಅನೇಕವಿವೆ. ಅನನ್ಯ ಶರಣಾಗತಿ, ಅಪೂರ್ವ ಸಮರ್ಪಣಾಭಾವ ಅವರ ಕೃತಿಗಳಲ್ಲಿ ಹಾಸುಹೊಕ್ಕಾಗಿವೆ. ಶರಣಾಗತಿಯಲ್ಲಿನ ದೈನ್ಯ, ಬವಣೆಯ ನಿವೇದನೆಗಳು ಕರುಣೆಯನ್ನು ಬೇಡುತ್ತ ಭಕ್ತಿ, ಭಾವತೀವತೆಯಿಂದ ಕೂಡಿಕೊಂಡು ಮಾನವಜನ್ಮದ ರಗಳೆಗಳನ್ನು ಹಿಡಿದು ತೋರುತ್ತವೆ. ಅವರ ಸುಳಾದಿ ಒಂದರಲ್ಲಿ,

ಅಡಿಗಾಧಾರವಿಲ್ಲ ಹಿಡಿವುದಕೆ ಕೊಂಬಿಲ್ಲ
ಕಡೆ ಹಾಯಿಸುವರಿಲ್ಲ ಕಷ್ಟ ಪಟ್ಟೆನಲ್ಲ
ಕಣ್ಣೀರು ತಪ್ಪಲಿಲ್ಲ ಕಾಯಸುಖ ಪಡಲಿಲ್ಲ
ಉಣಹೋಗಿ ಬಾಯ ಮರೆತಂತಾಯಿತಲ್ಲ.....

ಮತ್ತೊಂದು ಕೀರ್ತನೆಯಲ್ಲಿ

ಸತಿಪುರುಷರು ನಾವು ಸಂತೋಷದಿಂದಿರಲಿಲ್ಲ
ಯತಿಯಾಗಿ ತೀರ್ಥಯಾತ್ರೆ ಮಾಡಲಿಲ್ಲ

ಶ್ರುತಿಶಾಸ್ತ್ರ ಪುರಾಣಗಳ ಕಿವಿಗೊಟ್ಟು ಕೇಳಲಿಲ್ಲ
ಮೃತವಾಗೋ ಕಾಲ ಬಂತು ಬರಿದೆ ಮುಪ್ಪಾದೆನಲ್ಲ....

ಉಂಡು ಸುಖಿ ಅಲ್ಲ ಉಟ್ಟು ತೊಟ್ಟು ಪರಿಣಾಮ ಇಲ್ಲ
ಕೊಂಡು ಕೊಟ್ಟು ಹರಿ ಸೇವೆ ಮಾಡಲಿಲ್ಲ
ದುಂಡುನಾಯಿಯಂತೆ ಮನೆಮನೆಗಳ ತಿರುಗಿ ಕೆಟ್ಟೆ
ಮೊಂಡು ಜೋಗಿ ಗುಣಂಗಳ ಬಿಡಿಸೂ ಹಯವದನ॥

ಹೀಗೆ ಮನುಷ್ಯ ಬದುಕನ್ನು ವ್ಯರ್ಥಮಾಡಿಕೊಳ್ಳುವ ಪರಿ ಸಚಿತ್ರಕವಾಗಿ ಆಭಿವ್ಯಕ್ತಿಯಾಗಿದೆ. "ವೃದ್ಧನಾದೆನು ಪಲ್ಗಳೆಲ್ಲ ಬಿದ್ದವು ಕಣ್ಣು ಕಾಣಲೀಸದು ಎದ್ದು ನಿಲ್ಲಲಾರೆನಯ್ಯ ಉದ್ಧರಿಸೋ ಹಯವದನ" ಎಂಬಲ್ಲಿ ಮುದಿತನ ತರುವ ಅಸಹಾಯಕತೆ ಆರ್ತವಾಗಿದೆ. ಸಾಮಾಜಿಕವಾಗಿ, ನೈತಿಕವಾಗಿ ಹಣವು ಹೇಗೆ ಮನುಷ್ಯನನ್ನು ಅಧಃಪತನಕ್ಕೆ ತಳ್ಳುವುದೆಂಬ ಚಿತ್ರಣ "ಹಣವೇ ನಿನ್ನಯ ಗುಣವೇನು ಬಣ್ಣಿಪೆನೋ, ಹಣವಿಲ್ಲದವನೊಬ್ಬ ಹೆಣವೇ ಸರಿ ಕಂಡ್ಯಾ" ಎಂಬ ಕೀರ್ತನೆಯಲ್ಲಿದೆ.

ವಾದಿರಾಜರ ಕವಿತ್ವಗುಣದ ಅಂತಃಕರಣವು ಮಾರ್ಮಿಕವಾಗಿ ಅಭಿವ್ಯಕ್ತಿಯಾಗಿರುವ ಕೀರ್ತನೆಗಳಲ್ಲಿ ಒಂದು "ಈ ತನುವಿನೊಳಗೆ ಅನುದಿನವಿದ್ದು ಎನಗೊಂದು ಮಾತ ಹೇಳದೆ ಹೋದಿ ಹಂಸ" ಎನ್ನುವುದು. ಸಾವು ಬಂದೊಡನೆ ಜೀವವು ವಿಶ್ವಾಸ ಘಾತಕಿಯಾಗಿ ಬಿಡುವುದೇ? ಅಥವಾ ಜೀವವನ್ನು ಹಾಗೆ ಎಗರಿಸಿಕೊಂಡು ಹೋಗುವ ಸಾವು ಅಷ್ಟು ಕ್ರೂರಿಯೆ? ನಿರ್ದಯವೆ? ಜೀವನ ಮರಣಗಳ ಬಗ್ಗೆ ಚಿಂತನೆಯನ್ನು ತಾತ್ವಿಕತೆಯ ಒರೆಗಲ್ಲಿಗೆ ತೀಡುವಂಥ ಈ ಕೃತಿ ಮರಣದ ಮುಂದೆ ಮಾನವನ ಅಸಹಾಯಕತೆಯನ್ನು ಮರ್ಮಭೇದಕವಾಗಿ ಹೊರಹೊಮ್ಮಿಸಿದೆ.

ಜಾಳಾಂಧರಯೆಂಬೊ ಮಾಳಿಗೆಮನೆಯಲ್ಲಿ
ನೋಳ್ಪರೆ ಒಂಬತ್ತು ಬಾಗಿಲು
ಗಾಳಿ ಪುಟ್ಟುತ್ತ ಎಲೆ ಹಾರಿ ಹೋಗುವಾಗ ಈ
ಬೇರಿಗೆ ಹೇಳಿ ಹೋಯಿತೆ ಒಂದು ಮಾತ॥

ಇದ್ದಕ್ಕಿದ್ದಂತೆ ಎದುರಾಗುವ ಶೂನ್ಯವನ್ನು, ಭ್ರಮನಿರಸನವನ್ನು, ವಿಧಿಯ ವಿದ್ರೋಹದ ದಿವ್ಯ ನಿರ್ಲಕ್ಷ್ಯವು ತರುವ ಈ ದಾರುಣನೋವನ್ನು ಈ ಕೀರ್ತನೆಯಲ್ಲಿ ಬರುವ ರೂಪಕಗಳು ಕಟ್ಟಿಕೊಡುತ್ತವೆ.

ಬೆಟ್ಟ ಗಟ್ಟಿಗಳಲ್ಲಿ ಅಟ್ಟಡವಿಯಲ್ಲಿ ಇಕ್ಕಿತ್ತು
ಇಟ್ಟಿತ್ತು ಜೇನು ತನ್ನ ಸುಖಕಾಗಿ
ಇಟ್ಟ ತುಪ್ಪವನುಂಡು ನೊಣ ಹಾರಿಹೋಗುವಾಗ ಈ
ಬೆಟ್ಟಿಗೆ ಹೇಳಿ ಹೋಯಿತೆ ಒಂದು ಮಾತ॥
\- - - - - - - - - - - - - -
\- - - - - - - - - - - - - -
ಸುಪ್ಪಾಣಿ ಮುತ್ತು ಬಾಯ್ಬಿಟ್ಟು ಹೋಗುವಾಗ ಈ
ಚಿಪ್ಪಿಗೆ ಹೇಳಿಹೋಯಿತೆ ಒಂದು ಮಾತ॥

ಜೀವವನ್ನು ಎಷ್ಟೇ ಪ್ರೀತಿಯಿಂದ ದೇಹದೊಳಗೆ ಸಾಕಿರಲಿ, [ಜೀವದ ಸಂತೋಷಕ್ಕಾಗಿಯೇ ಬಗೆ ಬಗೆಯ ಉಣಿಸು ತಿನಿಸು ಉಡುಗೆ ತೊಡುಗೆ, ಸಕಲ ಭೋಗಗಳು] ಏನೂ ಮುನ್ಸೂಚನೆಯನ್ನು ಕೊಡದೆ ಆಸರೆಯಾಗಿದ್ದ ದೇಹವನ್ನು ಅದು ತೊರೆದು ಹೋಗುವ ನಿರ್ದಾಕ್ಷಿಣ್ಯ, ನಿಷ್ಠುರತೆಯನ್ನು ವಾದಿರಾಜರು "ಎನಗೊಂದು ಮಾತ ಹೇಳದೆ ಹೋದೆ ಹಂಸ! ಈ ತನುವಿನೊಳಗೆ ಅನುದಿನವಿದ್ದು?...." ಎಂಬ ಸೊಲ್ಲಿನಲ್ಲಿ ಗರ್ಭೀಕರಿಸಿದ್ದಾರೆ. *೧

ಅನೇಕ ಕೃತಿಗಳಲ್ಲಿ ಸಜ್ಜನರ ಲಕ್ಷಣಗಳನ್ನು ತಿಳಿಸುವ ವಾದಿರಾಜರು ಮತ್ತೆ ಕೆಲವು ಕೃತಿಗಳಲ್ಲಿ ಆಚಾರಹೀನ ಬದುಕಿನ ವ್ಯರ್ಥತೆಯನ್ನೂ ಮನಗಾಣಿಸಿಕೊಡುತ್ತಾರೆ. ಬದುಕಿಗೆ ಅವಶ್ಯಕವಾಗಿ ಬೇಕಾಗುವ ನೀತಿ ನಿಯಮ, ಸಾಂತ್ವನದ ಮಾತುಗಳನ್ನಾಡಿ ದಾರಿ ತೋರುತ್ತಾರೆ. ತಾಳ್ಮೆ ಗುಣದ ಅವಶ್ಯಕತೆಯನ್ನು ಅವರು ತಿಳಿಸುವ ಪರಿ ನೈತಿಕವಾಗಿ ಮಾನವನನ್ನು ಎತ್ತಿ ಹಿಡಿದು ಸಮಾಧಾನ, ಧೈರ್ಯ ನೀಡುತ್ತದೆ.

ತಾಳುವಿಕೆಗಿಂತ ಅನ್ಯ ತಪವು ಇಲ್ಲ ॥ಪ॥
ಕೇಳಬಲ್ಲವರಿಂಗೆ ಹೇಳುವೆನು ಸೊಲ್ಲ ॥ಅ.ಪ॥
\- - - - - - - - - - - - - -
ದುಷ್ಟ ಮನುಜರು ಪೇಳ್ವ ನಿಷ್ಠುರದ ನುಡಿತಾಳು
ಕಷ್ಟ ಬಂದರೆ ತಾಳು ಕಂಗೆಡದೆ ತಾಳು
ನೆಟ್ಟ ಸಸಿ ಫಲ ಬರುವ ತನಕ ಶಾಂತಿಯ ತಾಳು
ಕಟ್ಟು ಬುತ್ತಿಯ ಮುಂದೆ ಉಣಲುಂಟು ತಾಳು॥
\- - - - - - - - - - - - - -

\- - - - - - - - - - - - - - - - - -

\- - - - - - - - - - - - - - - - - -

ನಕ್ಕು ನುಡಿವರ ಮುಂದೆ ಮುಕ್ಕರಿಸದೆ ತಾಳು
ಅಕ್ಕಸವ ಮಾಡುವರ ಅಕ್ಕರದಿ ತಾಳು
ಉಕ್ಕೊ ಹಾಲಿಗೆ ನೀರು ಇಕ್ಕುವಂದದಿ ತಾಳು
ಪಕ್ಷೀಶ ಹಯವದನ ಶರಣೆಂದು ಬಾಳು॥

ತಾಳ್ಮೆಯ ಪಾಠವನ್ನು ಇದಕ್ಕಿಂತ ಮನೋಜ್ಞವಾಗಿ ತಿಳಿಸಿಕೊಡಲು ಸಾಧ್ಯವಿಲ್ಲ.

ಕೃಷ್ಣ ಸ್ತುತಿಪರ ಅನೇಕ ಕೃತಿಗಳಿರುವಂತೆ ತಮ್ಮ ಗುರು ವ್ಯಾಸತೀರ್ಥರ ಬಗ್ಗೆ, ಗುರುವಿನ ಗುರು ಶ್ರೀಪಾದರಾಜರ ಬಗ್ಗೆ ಕೃತಿ ರಚಿಸಿದ್ದಾರೆ. "ಶ್ರೀಪಾದರಾಜರ ದಿವ್ಯ ಶ್ರೀಪಾದವ ಭಜಿಸುವೆ" ಎಂಬ ಕೃತಿ, ವ್ಯಾಸರಾಯರ ಬಗ್ಗೆ ಬರೆದ ಕೃತಿಯಲ್ಲಿ "ಓದಿದಾಕ್ಷಣದಿಂದ ಧನ್ಯನಾದೆನು ನಾನು, ಸಾಧಿಸಲಾಪೆನೆ ನಿನ್ನ ಸೇವೆಯನು? ಆದಿಮೂರುತಿ ಸಿರಿಹಯವದನರೇಯ, ಮೋದದಿಂದ ನಿನ್ನ ದಾಸರ ಸಂಗದಲಿಡು ಕಂಡ್ಯ" ಎಂದು ಕೇಳಿಕೊಂಡಿರುವ ಸಾಲುಗಳು ಎಲ್ಲವೂ ಅವರ ಗುರುಭಕ್ತಿಯನ್ನು ಪ್ರಕಟಿಸುತ್ತವೆ. ತಮ್ಮ ಮಠಕ್ಕೆ ಬಂದು ಒಡನಾಡಿಯಾಗಿ ಕೆಲವು ಕಾಲ ಇದ್ದಿದ್ದ ಬೇಲೂರು ವೆಂಕಟದಾಸರನ್ನು "ದಾಸೋತ್ತಮ ನೀನೆ ಶ್ರೀ ವೈಕುಂಠದಾಸೋತ್ತಮ ನೀನೆ" ಎಂಬ ಕೃತಿಯಲ್ಲಿ ಮನದುಂಬಿ ಕೊಂಡಾಡಿದ್ದಾರೆ.

ವೈಕುಂಠದಾಸರು ವೃದ್ಧಾಪ್ಯದಲ್ಲಿದ್ದಾಗ ವಾದಿರಾಜರು ಬೇಲೂರಿಗೆ ಸಂದರ್ಶನವಿತ್ತರು. ಬೇಲೂರಿನ ಚೆನ್ನಕೇಶವನ ಮೇಲೆ ವಾದಿರಾಜರು ರಚಿಸಿರುವ ದೇವರನಾಮಗಳು ನೂರಕ್ಕೂ ಹೆಚ್ಚಿವೆ. ಪುರಂದರದಾಸರೂ ಈ ಸಂದರ್ಭದಲ್ಲಿ ಅಲ್ಲಿದ್ದು ತಾವೂ ಬೇಲೂರಿನ ಕೇಶವನ ಮೇಲೆ ಅನೇಕ ಕೃತಿಗಳನ್ನು ರಚಿಸಿದರು. ವಾದಿರಾಜರು ಬೇಲೂರಿನ ಚೆನ್ನಕೇಶವನ ಮೇಲೆ ರಚಿಸಿರುವ "ಆನಂದಮಯಗೆ ಚಿನ್ಮಯಗೆ" ಎಂಬ ಆರತಿ ಹಾಡು ಇಂದಿಗೂ ಬಹುಜನಪ್ರಿಯವಾಗಿ ಉಳಿದು ಬಂದಿದೆ.

ಕನಕದಾಸರು, ಪುರಂದರದಾಸರು ಇವರೆಲ್ಲ ಉಡುಪಿಗೆ ಬಂದು ದೀರ್ಘಕಾಲ ಅಲ್ಲಿದ್ದು ವಾದಿರಾಜರೊಂದಿಗೆ ಶ್ರೀಕೃಷ್ಣಭಕ್ತಿಯ ಒಡನಾಟವನ್ನು ಸವಿದವರೇ. ವಾದಿರಾಜರು ಕನಕದಾಸರನ್ನು ಉಡುಪಿಗೆ ಕರೆಯಿಸಿಕೊಂಡ ಸಂದರ್ಭದಲ್ಲೇ ಪೂರ್ವಾಭಿಮುಖನಾಗಿದ್ದ ಕೃಷ್ಣ ಕನಕರಿಗೆ ದರ್ಶನ ನೀಡಬೇಕೆಂದು ಪಶ್ಚಿಮಾಭಿಮುಖನಾಗಿ ತಿರುಗಿದನೆಂಬ ಘಟನೆ ನಡೆದುದೆಂದು ಹೇಳುತ್ತಾರೆ. ಕೃಷ್ಣನನ್ನು ಕನಕದಾಸರು ನೋಡಿದಂತೆ ಉಳಿದವರೂ ಕೃಷ್ಣನನ್ನು ಕಾಣಬೇಕೆಂದು "ಕನಕನ ಕಿಂಡಿ" ಏರ್ಪಾಡು ಮಾಡಿಸಿದ್ದು ವಾದಿರಾಜರೇ.[1] ಕನಕದಾಸರು ಗುಡಿಯ ಹಿಂಬದಿಯಲ್ಲಿ ನಿಂತು ಕೃಷ್ಣನನ್ನು ನೋಡಿದ ಸ್ಥಳದಲ್ಲಿ ವಾದಿರಾಜರು ಒಂದು ಮಂಟಪವನ್ನು ಕಟ್ಟಿಸಿದರು. ಅದೇ ಗೋಪುರ ಇಂದಿಗೂ ಕನಕನ ಗೋಪುರ ಎಂದೇ ಪ್ರಸಿದ್ಧವಾಗಿದೆ.[2]

ಸೋದೆಯಲ್ಲಿ ತ್ರಿವಿಕ್ರಮದೇವರ ಗುಡಿಯನ್ನು ಕಟ್ಟಿಸಿದ ಮೇಲೆ ವಾದಿರಾಜರು ತಮ್ಮನ್ನು "ತ್ರಿವಿಕ್ರಮದಾಸ" ಎಂತಲೇ ಕರೆದುಕೊಂಡಿದ್ದರು. ವಿಷ್ಣುವಿನ ಈ ತ್ರಿವಿಕ್ರಮರೂಪ ಅವರಿಗೆ ತುಂಬ ಮೆಚ್ಚಿನದಾಗಿತ್ತು. ವ್ಯಾಸತೀರ್ಥರಂತೆಯೇ ತಮ್ಮನ್ನು ತುಂಬಾ ಆದರಿಸುತ್ತಿದ್ದ ವಾದಿರಾಜರ ಮೇಲೆ ಕನಕದಾಸರಿಗೂ ತುಂಬ ಗೌರವ, ವಿಶ್ವಾಸ. ವಾದಿರಾಜಸ್ವಾಮಿಗಳಲ್ಲಿಯೂ ಕನಕದಾಸರು ಶಿಷ್ಯತ್ವ ವಹಿಸಿದ್ದರು. ತಮ್ಮ "ಮೋಹನ ತರಂಗಿಣಿ" ಕಾವ್ಯದಲ್ಲಿ ತಾನು ತ್ರಿವಿಕ್ರಮದಾಸರ ದಾಸನೆಂದು ಕನಕದಾಸರು ಹೇಳಿಕೊಂಡಿರುವುದೇ ಅವರ ವಾದಿರಾಜರ ಬಗೆಗಿನ ಗೌರವ, ವಿಶ್ವಾಸವನ್ನು ಸೂಚಿಸುತ್ತದೆ.

ಪೇಜಾವರ ಮಠದಲ್ಲಿ ಈಗಲೂ ಲಭ್ಯವಿರುವ ತಾಳೆಪತ್ರವೊಂದು ಕೃಷ್ಣ ಪಶ್ಚಿಮಾಭಿಮುಖವಾಗಿ ತಿರುಗಿದ ಈ ಪವಾಡವನ್ನು ಒಂದು ರೂಪಕವಾಗಿ ಸೂಚಿಸುತ್ತದೆ ಎಂದೂ, ಈ ಪತ್ರದಲ್ಲಿರುವ ಮತ್ತೊಂದು ಚಾರಿತ್ರಿಕ ಅಂಶವೆಂದರೆ ಈ ಘಟನೆ ಯಾರ ಸಂಬಂಧವಾಗಿ ನಡೆಯಿತೋ ಆ ವೀರಭಕ್ತನಿಗೆ ಕನಕದಾಸರೆಂಬ ಹೆಸರನ್ನು ವಾದಿರಾಜಸ್ವಾಮಿಗಳು ಅನುಗ್ರಹಿಸಿದರೆಂದೂ ತಿಳಿಸುತ್ತದೆ.[*೪] "ಆ ವೀರಭಕ್ತನಿಗೆ ಕನಕದಾಸರೆಂಬ ನಾಮಕರಣ ಉಡುಪಿಯಲ್ಲೇ ಆಯಿತೆಂದೂ, ಅವರ ಈ ಅಂಕಿತ ಶ್ರೀವಾದಿರಾಜ ಗುರುಗಳಿಂದಲೇ ಅನುಗ್ರಹಿಸಲಾಗಿದೆ ಎನ್ನುವುದಿಲ್ಲಿ ಸುವೇದ್ಯವು"[*೫] "ಕನಕದಾಸರು ವಾದಿರಾಜರಿಂದಲೇ ಚಕ್ರಾಂಕನ ಮೂಡಿಸಿಕೊಂಡಂತೆ ತೋರುವುದು. ಉಡುಪಿಯಲ್ಲಿ ವಾದಿರಾಜರು ಕನಕದಾಸರನ್ನು ಸನ್ಮಾನಿಸಿದರು."[*೬]

ಉಡುಪಿಯ ಕೃಷ್ಣಮಠದಲ್ಲಿ ಈಗಲೂ ರೊಟ್ಟಿಯನ್ನು ಮತ್ತು ಬೆಳ್ಳಿ ಗರಟದಲ್ಲಿ ಗಂಜಿಯನ್ನು ಕೃಷ್ಣನ ನೇವೇದ್ಯಕ್ಕೆ ಇಡುವ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿದ್ದಾರೆ. ಕನಕದಾಸರು ಅಂದು ಮಾಡಿ ಅರ್ಪಿಸಿದ್ದನ್ನು ಕೃಷ್ಣ ನಿತ್ಯವೂ ಸ್ವೀಕರಿಸಬೇಕು ಎಂಬಂತೆ ಈ ಒಂದು ಸಂಪ್ರದಾಯ ಆರಂಭಿಸಿದವರು ವಾದಿರಾಜರೇ ಎನ್ನುತ್ತಾರೆ. ಕನಕದಾಸರೊಂದಿಗಿನ ವಾದಿರಾಜರ ಆಪ್ತತೆ ಹೀಗೆ ವ್ಯಕ್ತವಾಗಿದೆ ಎನ್ನಬಹುದು.

ಕನಕದಾಸರು ತಮ್ಮ ಕೃತಿಯಲ್ಲಿ ಒಂದೆಡೆ "ಸಗುಣ ವಾದಿರಾಜರು" ಎಂದಲ್ಲದೆ "ತ್ರಿವಿಕ್ರಮದಾಸರ ದಾಸ" ಎಂದು ಇನ್ನೊಂದೆಡೆ ತನ್ನ ಬಗ್ಗೆ ಹೇಳಿಕೊಂಡಿರುವುದು ಕಂಡಾಗ ಅವರಿಬ್ಬರ ನಡುವಿನ ಗುರುಶಿಷ್ಯ ಸಂಬಂಧದ ಆತ್ಮೀಯತೆ ಅರಿವಾಗುತ್ತದೆ. ಇದಕ್ಕೂ ಮಿಗಿಲಾಗಿ ವಾದಿರಾಜರೇ ತಮ್ಮ 'ತೀರ್ಥಪ್ರಬಂಧ' ಕೃತಿಯಲ್ಲಿ ಬಂಕಾಪುರದ ಕೇಶವನನ್ನು ಮುಕ್ತಕಂಠದಿಂದ ಸ್ತುತಿಸಿದ್ದಾರೆ. ಬಂಕಾಪುರವು [ಅಲ್ಲಿಯೂ ಇರುವ ಕೇಶವ ದೇವಸ್ಥಾನವು] ಮುಖ್ಯವಾಗಿ ಕನಕದಾಸರ ಕಾರ್ಯಕ್ಷೇತ್ರವೆನ್ನುವುದನ್ನು ಕಂಡಾಗ ಈ ಬಾಂಧವ್ಯದ ಅರಿವಾಗದಿರದು.

ಕೃಷ್ಣ, ಹರಿಪರ ಕೀರ್ತನೆಗಳಲ್ಲದೆ ವಾದಿರಾಜರು ದ್ವೈತ ಸಿದ್ಧಾಂತದ ತತ್ವಗಳಿಗೆ ಅನುಗುಣವಾಗಿ ಮಧ್ವರ ಸ್ತುತಿ, ರುದ್ರ ಅಥವಾ ಶಿವಸ್ತುತಿಗಳನೇಕವನ್ನು ರಚಿಸಿದ್ದು ವಿಶೇಷವಾಗಿ ವಾಯುಪುತ್ರ ಭೀಮಸೇನ ಸ್ತುತಿಪರವಾದ ನೀಳ್ಗವಿತೆಯನ್ನು ಕೂಡ ರಚಿಸಿದ್ದಾರೆ. ಇವುಗಳಲ್ಲಿ "ಭೀಮಸೇನ ಭಾಮಿನಿಯಾದನು" ಎಂದು ಪ್ರಾರಂಭವಾಗುವ ಕೃತಿ ಸೊಗಸಾದ ನಾಟಕೀಯ ಸ್ವೋಪಜ್ಞತೆ ಹೊಂದಿದ್ದು ಇದೊಂದು ಸಣ್ಣ ಸತ್ಕಾವ್ಯವೇ ಎನ್ನಬಹುದಾಗಿದೆ.

ರಸಭಿಜ್ಞತೆಯಿಂದ ಕೂಡಿದ ಗೀತರೂಪಕವಾಗಿದೆ. ವೇದಿಕೆಯ ಮೇಲೆ ನೃತ್ಯರೂಪಕವಾಗಿ ಪ್ರದರ್ಶನವಾಗಬಲ್ಲಂಥ ದೃಶ್ಯಕಾವ್ಯ ಸಂಪತ್ತಿನಿಂದ ಕೂಡಿದೆ. ದ್ರೌಪದಿಯನ್ನು ಕೀಚಕ ಕಾಮಿಸುವುದು, ಸೈರಂಧ್ರಿ ತಮ್ಮನಿಗೆ ಬುದ್ಧಿ ಹೇಳುವುದು, ದ್ರೌಪದಿ ಭೀಮನಲ್ಲಿಗೆ ತೆರಳಿ ಕಷ್ಟ ಹೇಳಿಕೊಳ್ಳುವ ಪರಿ, ಮುಂದೆ ಕೀಚಕವಧೆಗೆಂದು ಹೊರಡುವಾಗ ಭೀಮನು ಭಾಮಿನಿಯಾಗಿ ಸಿಂಗರಿಸಿಕೊಳ್ಳುವ ಪರಿ ಎಲ್ಲವೂ ಸೊಗಸಾದ ಚಿತ್ರಕಶಕ್ತಿಯಿಂದ ಕೂಡಿದೆ, "ಕೀಚಕವಧೆ" ಎಂಬ ಶೀರ್ಷಿಕೆಯ ಈ ಕೃತಿಯು ಸುಂದರವಾದ ಕಥನಕಾವ್ಯವೇ ಆಗಿದೆ.

ಇವಲ್ಲದೆ ಕನ್ನಡದಲ್ಲಿ 'ಲಘುವಾಯುಸ್ತುತಿ' 'ಅವತಾರತ್ರಯ ಮಧ್ವ-ಸುವ್ವಾಲಿ' "ಸ್ವಪ್ನಪದ" ಧೀರ್ಘಕೃತಿಗಳನ್ನು ವಾದಿರಾಜರು ರಚಿಸಿದ್ದಾರೆ. ತಮಗೆ ಸ್ವಪ್ನದಲ್ಲಿ ಹಯವದನ ದೇವರು ಉಪದೇಶಿಸಿದಂತಾಗಿ, ಆ ಉಪದೇಶವನ್ನು ಸಂಕ್ಷಿಪ್ತವಾಗಿ ಸಾತ್ವಿಕರಿಗೆ, ಸಹೃದಯರಿಗೆ ತಿಳಿಸಬೇಕೆಂದು ಈ ಕೃತಿ ರಚಿಸಿದ್ದೇನೆಂದು "ಸ್ವಪ್ನಪದ"ದಲ್ಲಿ ಹೇಳಿಕೊಂಡಿದ್ದಾರೆ. ಭಾಮಿನೀ ಷಟ್ಪದಿಯಲ್ಲಿರುವ ಈ ಕೃತಿ ದೇಸಿಯ ಚೆಲುವಿನಿಂದ ಕೂಡಿದೆ. "ಲಕ್ಷೀ ಶೋಭಾನೆ" ಎಂಬ ಅವರ ಕನ್ನಡ ಕೃತಿ ಹರಿಸರ್ವೋತ್ತಮ ತತ್ವವನ್ನು ವಿನೂತನ ರೀತಿಯಲ್ಲಿ ಸಾಧಿಸುತ್ತದೆ. ಅಮೃತ ಮಂಥನ ಕಾಲದಲ್ಲಿ ಲಕ್ಷ್ಮಿ ಜನಿಸಿಬಂದು ನಾರಾಯಣನನ್ನು ವರಿಸುವ ಕಥೆಯನ್ನು ಮನೋಹರವಾದ ಶೈಲಿಯಲ್ಲಿ ನಿರೂಪಿಸುತ್ತದೆ. ಹೆಣ್ಣಿನ ಕೋಮಲ ಭಾವಚಿತ್ತಾರವನ್ನು ಲಕ್ಷ್ಮಿಯ ಪಾತ್ರದಲ್ಲಿ ಮಿಳಿತಗೊಳಿಸಿದ್ದಾರೆ. ಪ್ರೀತಿಭಾವದ ಹೊಸದೊಂದು ಬಗೆಲೋಕವನ್ನು ತೆರೆಯುತ್ತಾ ಹರಿಯ ಸರ್ವಶ್ರೇಷ್ಠತೆಯನ್ನು ಮೆರೆಯಿಸುವ ಹೊಸ ಬಗೆಯ ನೇಯ್ಗೆಯಿದು. ವಾದಿರಾಜರ ಹುಟ್ಟು ಕವಿತ್ವಗುಣಕ್ಕೊಂದು ಸಾಕ್ಷಿಯಾಗಿ ನಿಲ್ಲುವ ಕೃತಿ.

ನೃತ್ಯರೂಪಕ ಅಥವಾ ಗೀತರೂಪಕವೆನ್ನಬಹುದಾದ ಇನ್ನೊಂದು ಕೃತಿ "ನಾರದ ಕೊರವಂಜಿ". ಹರಿಯೇ ತನ್ನ ಪತಿಯಾಗಬೇಕೆಂದು ಹಾರಯಿಸಿಕೊಂಡಿದ್ದ ರುಕ್ಮಿಣಿಯ ಬಳಿಗೆ ನಾರದರು ಕೊರವಂಜಿ ವೇಷದಿಂದ ಬಂದು ಅವಳೊಂದಿಗೆ ಹರಿಪಾರಮ್ಯವನ್ನು ತಿಳಿಸುವ ಕಥಾನಕ. ಅಚ್ಚರಿ ಎಂದರೆ ಈ ಕಾವ್ಯದಲ್ಲಿ ತೆಲುಗು ಭಾಷೆಯೂ ಅಲ್ಲಲ್ಲಿಯ ಸಂಭಾಷಣೆಯಲ್ಲಿ ನುಸುಳಿರುವುದು!

ಯಪ್ಪುಡು ವಚ್ಚುನು ಯಪ್ಪುಡು ಚೂಸ್ತುನು
ತಪ್ಪಾ ಚಪ್ಪತಿನಿ ನೀವತಿ ಚಿಂತಿಂಚವದ್ದೂ
- - - - - - - - - - - -
ಕನ್ನೂರು ಕನ್ನ್ಯಮುಗಮೊಲು ಮುಗ
ಮೈಕರ ಮೂಲೋಕರಮ್ಮೆರೋ
- - - - - - - - - - - -

ಎಂಬಿತ್ಯಾದಿಯಾಗಿ ಅನೇಕ ಕಡೆ ತೆಲುಗು ಭಾಷೆಯಲ್ಲಿ ಸಂವಾದ ತೊಡಗಿ ಮರಳಿ ಕನ್ನಡದಲ್ಲಿ ಶೈಲಿ ಮುಂದೆ ಸಾಗುತ್ತದೆ. ಬಹುಶಃ ಪರನಾಡಿನಿಂದ ಬಂದ ಕೊರವಂಜಿ ಆಕೆಯೆಂದು ಸ್ಥಾಪಿಸಲು ವಾದಿರಾಜರು ಈ ತಂತ್ರ ಬಳಸಿರಬಹುದು.

ನಾಲ್ಕು ಸಂಧಿಗಳಲ್ಲಿರುವ "ವೈಕುಂಠ ವರ್ಣನೆ" ಕೂಡ ವಾದಿರಾಜರ ಕನ್ನಡಕೃತಿ. ಈ ಕೃತಿಯಲ್ಲಿ ಸೃಷ್ಟಿ ಮುಂತಾದ ಅಷ್ಟ ಕರ್ತೃತ್ವ ಹಾಗೂ ಬ್ರಹ್ಮ ಮೀಮಾಂಸಾ ಶಾಸ್ತ್ರದಲ್ಲಿ ಪ್ರತಿಪಾದಿತವಾಗಿರುವ ಸಕಲ ರಹಸ್ಯ ಪ್ರಮೇಯಗಳನ್ನು ಕನ್ನಡದ ಕಾವ್ಯಶೈಲಿಯಲ್ಲಿ ತಿಳಿಸಿಕೊಡಲಾಗಿದೆ. ಪ್ರತಿಸಂಧಿಯ ಕೊನೆಯಲ್ಲೂ ವಾದಿರಾಜೇಂದ್ರ ವಿರಚಿಸಿದ ಈ ದಿವ್ಯಕಾವ್ಯ ಪೊಸ ಬಗೆಯಲ್ಲಿದೆ ಎಂದು ಕವಿಯೇ ಹೇಳಿಕೊಂಡಿದ್ದಾರೆ.

ವಾದಿರಾಜರ "ಗುಂಡಕ್ರಿಯೆ" ಎಂದರೆ ದುರ್ಮತಗಳನ್ನು ಧ್ವಂಸಮಾಡುವ ಕ್ರಿಯೆ ಎಂಬ ಧ್ವನಿ ಸೂಚನೆಯೂ ಇಲ್ಲಿದೆ. ಇಲ್ಲಿಯ ಪ್ರತಿಪದ್ಯದಲ್ಲೂ ಹಯವದನನ ಮುದ್ರಿಕೆ ಇದೆ. ಮತ್ತೊಂದು ಕೃತಿ "ಕಲ್ಕಿಸುಳಾದಿ". ಶ್ರೀಹರಿಯ ಅಚಿಂತ್ಯವಾದ ಅದ್ಭುತ ಮಹಿಮೆಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುವ ಸುಳಾದಿ ಕೃತಿ. "ಹರಿಸರ್ವೋತ್ತಮತ್ವ"ವನ್ನು ಪ್ರತಿಪಾದಿಸುತ್ತದೆ. ಈ ಕೃತಿಯು ಪ್ರಾರಂಭವಾಗುವುದೇ ಈ ಸಾಲುಗಳಿಂದ:

ಕಾಲತೊಳೆದವನೊಬ್ಬ ತೊಳೆಸಿಕೊಂಡವನೊಬ್ಬ
ಮೌಳಿಯ ಮೇಲೆ ಜಲವ ಧರಿಸಿದವನೊಬ್ಬ
ಪಾಲಿಸುವ ಪ್ರಭುವೊಬ್ಬ ಕೊಲುವ ತಳವಾರನೊಬ್ಬ
ಮೂಲೋಕವರಿಯೆ ಪುಟ್ಟಿಸಿದ ಪಿತನೊಬ್ಬ
ಆಲೋಚನೆಯಲಿ ಬಲ್ಲವರಿಗೆ ಸಂಶಯವಿಲ್ಲ
ಮಾಲೆಯನು ಮಹಾಲಕುಮಿ ಹಯವದನಗಿತ್ತಳಾಗಿ ॥

ಭಾಗವತದ ದಶಮಸ್ಕಂಧದಲ್ಲಿ ನಿರೂಪಿತವಾಗಿರುವ ಭ್ರಮರಗೀತೆಯ ಪ್ರಸಂಗವನ್ನು ಕೈಗೆತ್ತಿಕೊಂಡು ವಾದಿರಾಜರು ವಿಸ್ತಾರವಾಗಿ ಕನ್ನಡದಲ್ಲಿ ಮರುರಚಿಸಿರುವ ಅಪೂರ್ವಕೃತಿ "ಭ್ರಮರ ಗೀತೆ". ವಾದಿರಾಜರು 'ಹರಿಭಕ್ತಿಲತಾ' ಎಂಬ ತಮ್ಮ ಕನ್ನಡ ಕೃತಿಯಲ್ಲಿ ಋಗ್ವೇದ ಸೂಕ್ತಗಳ ಕೆಲವು ಋಕ್ಕುಗಳನ್ನು ವಿಚಾರಮಾಡಿ ದೇವತಾ ತಾರತಮ್ಯವನ್ನು ತೋರುವ ಋಕ್ಕುಗಳನ್ನು ತೋರಿಸಿ ಶ್ರೀಹರಿಯೇ ಮುಖ್ಯವಾಗಿ ಪ್ರತಿಪಾದ್ಯನೆಂದು ನಿರೂಪಿಸಿದ್ದಾರೆ.

ಹುಟ್ಟು ಕವಿಯಾದ ವಾದಿರಾಜರು ಹೀಗೆ ತಮ್ಮ ಮಾತೃಭಾಷೆ ಕನ್ನಡದಲ್ಲಿ ಅನೇಕ ಕಾವ್ಯಕೃತಿ, ದೀರ್ಘಕೃತಿಗಳನ್ನು ರಚಿಸಿ ಹರಿದಾಸ ಸಾಹಿತ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿದ್ದಾರೆ. ಇಷ್ಟಲ್ಲದೆ ಜನಸಾಮಾನ್ಯರು ನಾನಾ ವಿಧದ ತೊಂದರೆ, ಖಾಯಿಲೆಗಳಿಗೆ ಈಡಾದಾಗ ಪರಿಹಾರಕ್ಕಾಗಿ ವಾದಿರಾಜರಲ್ಲಿಗೆ ಬಂದು ಶರಣಾಗುತ್ತಿದ್ದರು ಎಂದು ಅವರ ಜೀವನ ಚರಿತ್ರೆಯಿಂದ ತಿಳಿದು ಬರುತ್ತದೆ. ಅನೇಕರು ಅವರು ಅಭಿಮಂತ್ರಿಸಿಕೊಟ್ಟ ಪ್ರಸಾದ ಸೇವಿಸಿ ರೋಗಮುಕ್ತರಾಗುತ್ತಿದ್ದರು. ವಾದಿರಾಜರನ್ನು ಹೊಗಳಿ ಕೃತಜ್ಞರಾಗುತ್ತಿದ್ದರು. ಈ ಪವಾಡಸದೃಶ ಶಕ್ತಿಯ ಬಗ್ಗೆ ತಾನೇ ಹೀಗೆ ಸೊಲ್ಲೆತ್ತಿದ್ದಾರೆ 'ವೈಕುಂಠವರ್ಣನೆ' ಕೃತಿಯಲ್ಲಿ.

ಅದುಭುತವಲ್ಲವೆ ಹಯವದನ ತನ್ನ ಶ್ರೀ
ಪದ ಪದುಮ ಸನ್ನಿಧಿಯಲ್ಲಿ
ಹುದುಗಿಸಿ ವಾದಿರಾಜನ ಪಾದೋದಕದಿ ವಿ
ವಿಧ ಭೀತಿಯನೊದೆದಟ್ಟುವುದು?...

ಎಲ್ಲದಕ್ಕೂ ಹಯವದನನೆ ಕಾರಣವಾಗಿದ್ದುಕೊಂಡು ತನ್ನ ಹೆಸರಿಗೆ ಹಿರಿಮೆ ತಂದನೆಂದು ಎಲ್ಲವನ್ನೂ ಅವನಿಗೇ ಒಪ್ಪಿಸಿದ್ದಾರೆ. ಸಂಪೂರ್ಣ ಸಮರ್ಪಣ ಭಾವದಲ್ಲಿ ಹರಿಯೊಂದಿಗೆ ಒಡನಾಡಿ ರಚಿಸಿದ ಅವರ ಕನ್ನಡ ಕೀರ್ತನೆಗಳು, ಕೃತಿಗಳು ಕಾವ್ಯಗುಣದಿಂದಲೂ. ಭಕ್ತಿ ಭಾವ ಪಾರಮ್ಯದಿಂದಲೂ ಕೂಡಿಕೊಂಡು ಸೊಗಯಿಸುತ್ತವೆ. ಮುಂದೆ ಬಂದ ಅನೇಕಾನೇಕ ಹರಿದಾಸರುಗಳಿಗೆ ವಾದಿರಾಜರೇ ಕೈಹಿಡಿದು ಮುನ್ನಡೆಸಿದ ಗುರುವಾದರು. ಹೀಗೊಂದು ಉಡುಪಿಯ ಪರಿಸರದಲ್ಲಿ ದಾಸಕೂಟವೊಂದು ಸ್ಥಾಪಿತವಾಗಿ ಬೆಳೆಯಲು ಕಾರಣರೂ, ನೇತಾರರೂ ಆದರು. ಉಡುಪಿಯ ಆಡುಭಾಷೆಗಳಲ್ಲಿ ಒಂದಾದ ತುಳುವಿನಲ್ಲೂ ಅವರು ಅನೇಕ ಭಕ್ತಿಸಾಹಿತ್ಯವನ್ನು, ಪಾಡ್ದನಗಳನ್ನು ರಚಿಸಿ ಕೊಟ್ಟರು. ಅವೆಲ್ಲ ಈಗಲೂ ತುಳು ಆಡುವ ಜನಾಂಗದವರಲ್ಲಿ ಪ್ರಚಲಿತವಿದೆ. ಹೀಗೆ ಮಠಾಧಿಪತಿಗಳಾಗಿದ್ದೂ ಯಾವೊಂದು ಮದವಿಲ್ಲದೆ ದಾಸಕೂಟದವರೊಂದಿಗೆ ಬೆರೆತು, ಪುರಂದರದಾಸ ಕನಕದಾಸರುಗಳನ್ನು ಆತ್ಮೀಯತೆಯಿಂದ ನಡೆಸಿಕೊಂಡು ಹರಿದಾಸ ಸಾಹಿತ್ಯವನ್ನು ಎಲ್ಲೆಡೆ ಪ್ರಚುರ ಪಡಿಸಿದ ಅಪರೂಪದ ಯತಿಗಳಿವರು. ಪಂಡಿತರು, ಜ್ಞಾನಿಗಳು, ಎಂದೆನಿಸಿಕೊಂಡು ಬೀಗುತ್ತಿದ್ದ ವ್ಯಾಸಕೂಟದ ಅನೇಕ ಮಂದಿಯ ಮನಸ್ಸನ್ನು ಪರಿವರ್ತಿಸಿ ಅವರನ್ನೂ ಭಕ್ತಿಮಾರ್ಗದಲ್ಲಿ ಸಾಗುವಂತೆ ಮಾಡಿದವರು. ಮಧ್ವ ಸಿದ್ಧಾಂತವನ್ನು ಎಲ್ಲೆಡೆಯೂ ವಾದಮಾಡಿ ಜಯಿಸಿ ಪ್ರಚುರಪಡಿಸಿದವರು. ಸಂಸ್ಕೃತಕ್ಕಿಂತ ಕನ್ನಡವೇನೂ ಕಮ್ಮಿ ಇಲ್ಲ, ಕನ್ನಡದಲ್ಲಿ ಕೊರತೆಯೇನಿಲ್ಲ, ಬದಲಾಗಿ ಭಕ್ತಿ ನೀತಿ ತತ್ತ್ವಗಳ ಒರತೆಯೇ ತುಂಬಿದೆ ಎನ್ನುವುದನ್ನು ತಮ್ಮ ರಚನೆಗಳ ಮೂಲಕವೇ ತೋರಿಸಿಕೊಟ್ಟವರು. ಕನ್ನಡ ನಾಡು-ನುಡಿಗೆ ಒಬ್ಬ ಧಾರ್ಮಿಕ ಮಹಾಪುರುಷನಾಗಿ ದಾರಿ ತೋರಿದ ಗುರುವಾದವರು. ಪಂಡಿತರನ್ನು ಗೌರವಿಸಿದರು, ಹರಿದಾಸರುಗಳನ್ನು ಪ್ರೀತಿಯಿಂದ ಆದರಿಸಿದರು. ವ್ಯಾಸ ಸಾಹಿತ್ಯಕ್ಕೂ ಮನ್ನಣೆ ಇತ್ತರು, ದಾಸ ಸಾಹಿತ್ಯಕ್ಕೂ ಮಮತೆಯ ನೀರೆರೆದರು. ಕನ್ನಡ ಜನಮನದಲ್ಲಿ ಇಂದಿಗೂ "ಸೋದೆಮಠದ ವಾದಿರಾಜರು" ಎಂದರೆ ಭಕ್ತಿ ಗೌರವಗಳಿವೆ. ಹೆಮ್ಮೆಯಿದೆ.

ಸಮಾಜಮುಖೀ ಚಿಂತನೆಗಳಿರುವ ದಾಸ ಸಾಹಿತ್ಯ ರಚಿಸಿ ವಾದಿರಾಜರು ದಾಸಕೂಟದವರಿಗೆ ಮೇಲ್ಪಂಕ್ತಿಯಾದರು. ಉನ್ನತ ಪಾಂಡಿತ್ಯದಿಂದ ಕೂಡಿದ ಚಿಂತನೆಗಳನ್ನು, ಸಿದ್ಧಾಂತ ಪ್ರತಿಪಾದನೆಗಳನ್ನು ತಮ್ಮ ಸಂಸ್ಕೃತಗ್ರಂಥಗಳ ರಚನೆಯ ಮೂಲಕ ಮೆರೆದು ವ್ಯಾಸಕೂಟದವರಿಗೂ ಅಗ್ರಪಂಕ್ತಿಯ ನೇತಾರರೆನಿಸಿಕೊಂಡರು.

ಸುತ್ತಲಿನ ಸಾಮಾನ್ಯರನ್ನು ಪ್ರೀತಿಸಿದ ಸೌಹಾರ್ದಗುಣದ ಅಪರೂಪದ ಯತಿ ಅವರು. ವ್ಯಾಸ–ದಾಸಕೂಟಗಳೆರಡಕ್ಕೂ ಸಮಾನ ಗೌರವಾದರ, ಪ್ರಾಶಸ್ತ್ಯ ನೀಡಿದವರು. ಶಾಸ್ತ್ರ ಕೋವಿದರಾಗಿ, ಉಭಯ ಭಾಷೆಗಳಲ್ಲಿಯೂ ಅಸಾಧಾರಣವಾದ ಪ್ರತಿಭೆ ಪ್ರಕಟಿಸಿ, ಅಂತರಂಗದ ಸುಶೀಲತೆಯಿಂದ ಹರಿದಾಸಸಾಹಿತ್ಯ, ಭಕ್ತಿಗೀತೆಗಳನ್ನು ಹೃದಯದಿಂದ ಚಿಮ್ಮಿಸಿದ ಒಬ್ಬ ಅಪೂರ್ವ ಮಠಾಧೀಶರು. ಗುರು ವ್ಯಾಸತೀರ್ಥರಂತೆಯೇ ದಾಸಕೂಟಕ್ಕೊಂದು ಆಸರೆ, ವ್ಯಾಸಕೂಟಕ್ಕೊಂದು ಮೌಲ್ಯವನ್ನು ತಂದವರು. "ಕುಲಮದ, ವೈಭವಮದ, ವಿದ್ಯಾಮದಗಳನುಳಿದು ಹರಿದಾಸರ ಮರೆಹೊಕ್ಕು ಸುಖಿಯಾಗು" ಎನ್ನುವುದೇ ಅವರು ವ್ಯಾಸಕೂಟಕ್ಕೆ, ಮಾನವತೆಗೆ ನೀಡಿದ ಸಂದೇಶವಾಗಿದೆ.

ಮುಂದೆ ಬೆಳೆದು ಬಂದ ವ್ಯಾಸಕೂಟ ಪರಂಪರೆಯಲ್ಲಿ ಅನೇಕ ಯತಿಗಳು ವಾದಿರಾಜರನ್ನು ತಪ್ಪದೆ ಸ್ಮರಿಸಿದ್ದಾರೆ, ಸ್ತುತಿಸಿದ್ದಾರೆ. ಹಾಗೆಯೇ ಮುಂದಿನ ದಾಸಕೂಟ ಪರಂಪರೆಯಲ್ಲಿ ಬಂದ ಅನೇಕ ಹರಿದಾಸರುಗಳು ವಾದಿರಾಜರನ್ನು ಕೊಂಡಾಡುವ ಕೀರ್ತನೆಗಳನ್ನು ರಚಿಸಿದ್ದಾರೆ, ಭಕ್ತಿಗೌರವಗಳನ್ನು ಸಲ್ಲಿಸಿದ್ದಾರೆ.

ವ್ಯಾಸಕೂಟದ ಅನೇಕ ಪ್ರಮುಖ ಯತಿಗಳು ಸಂಸ್ಕೃತದಲ್ಲಿ ವಾದಿರಾಜಸ್ತುತಿ ಗೈದಿದ್ದಾರೆ. ವಾದಿರಾಜರ ನೇರ ಶಿಷ್ಯರಾದ ಶ್ರೀ ವೇದವೇದ್ಯ ತೀರ್ಥರ 'ಶ್ರೀವಾದಿರಾಜಸ್ತುತಿ', ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಗುರುಗಳಾದ ಶ್ರೀ ಸುಧೀಂದ್ರ ತೀರ್ಥರ "ಶ್ರೀವಾದಿರಾಜ ಪ್ರಶಂಸನಂ"'; ಶ್ರೀ ವಾದಿವಂದ್ಯ ಯತಿಗಳ "ಶ್ರೀವಾದಿರಾಜಾಷ್ಟಕಂ"; ಸತ್ಯಧರ್ಮತೀರ್ಥರ "ಶ್ರೀವಾದಿರಾಜ ಸ್ತೋತ್ರಂ"; ಸುರೋತ್ತಮ ತೀರ್ಥರ ಶ್ಲೋಕಗಳು; ರಘುನಾಥಾಚಾರ್ಯರ "ವೃತ್ತ ರತ್ನ ಸಂಗ್ರಹ"; ನಾರಾಯಣಾಚಾರ್ಯರ 'ರುಕ್ಮೀಶ ವಿಜಯ ವ್ಯಾಖ್ಯಾನ'ದಲ್ಲಿನ ವಾದಿರಾಜಪರಸ್ತುತಿಗಳು, ಹಾಗೂ ಅವರದೇ 'ತೀರ್ಥಪ್ರಬಂಧ ವ್ಯಾಖ್ಯಾನ' ದಲ್ಲಿಯೂ ಇರುವ ಸ್ತುತಿಗಳು; ನಾರಾಯಣಾಚಾರ್ಯರ "ವಾದಿರಾಜಕವಚ; ವೇದನಿಧಿತೀರ್ಥರ "ವಾದಿರಾಜ ನಮನ" ಇವೆಲ್ಲವುಗಳಲ್ಲಿಯೂ ವಾದಿರಾಜರ ವ್ಯಕ್ತಿತ್ವವನ್ನು ಭಕ್ತಿ, ಗೌರವಗಳಿಂದ ಚಿತ್ರಿಸಲಾಗಿದೆ. ವಾದಿರಾಜರು ಸದಾ ಪ್ರಸನ್ನವದನರೂ, ಮಿತಭಾಷಿಗಳೂ, ಸಿರಿಕಂಠದವರೂ, ದೀನಾನುಕಂಪಿಗಳೂ, ಸಕಲ ಶಾಸ್ತ್ರ ಕೋವಿದರಾಗಿದ್ದೂ ಸರಳತೆಯ ಪ್ರತೀಕವೂ ಆಗಿದ್ದರೆಂದು ಈ ಸ್ತೋತ್ರ ಸಾಹಿತ್ಯದ ಮೂಲಕವೇ ತಿಳಿದು ಬರುತ್ತದೆ.

ದಾಸಕೂಟದಲ್ಲಿ ನಂತರ ಬಂದ ಪ್ರಮುಖ ದಾಸವರೇಣ್ಯರುಗಳನೇಕರು ವಾದಿರಾಜರನ್ನು ಹೃದಯತುಂಬಿ ಹಾಡಿ ಹೊಗಳುವ ಕನ್ನಡ ಕೀರ್ತನೆಗಳನ್ನು ರಚಿಸಿದ್ದಾರೆ. ವಿಜಯದಾಸರು ಹೆಚ್ಚಿನ ಸಂಖ್ಯೆಯಲ್ಲಿ ವಾದಿರಾಜ ಸ್ತುತಿ ಪರ ಕೀರ್ತನೆಗಳನ್ನು ನೀಡಿದ್ದಾರೆ. "ಮಾಯಿಗಳ ಒದ್ದ| ಮಮತೆಯ ಗೆದ್ದ| ಗಾಯನ ಪ್ರಸಿದ್ಧ| ಗುಣದಲಿ ಇದ್ದ||" ಎಂಬ ಸಾಲೊಂದು ಅವರ ಕೀರ್ತನೆಗಳಲ್ಲಿ ಬಂದು ವಾದಿರಾಜರು ಸೊಗಸಾಗಿ ಹಾಡುತ್ತಿದ್ದರೆನ್ನುವುದನ್ನು ನೆನಪಿಗೆ ತಂದುಕೊಡುತ್ತದೆ. ಜಗನ್ನಾಥ ದಾಸರು ವಾದಿರಾಜರನ್ನು ಸ್ತುತಿಸುವ ಕೀರ್ತನೆಗಳನ್ನು ನೀಡಿದ್ದಾರೆ, ವಾದಿರಾಜರ ಮಹಿಮಾನ್ವಿತ ವ್ಯಕ್ತಿತ್ವವನ್ನು ಮನತಂಬಿ ತಮ್ಮ ಕೃತಿಗಳಲ್ಲಿ ಕೊಂಡಾಡಿದ್ದಾರೆ.

ನಂತರದ ಶತಮಾನಗಳಲ್ಲಿ ಬಂದ "ವೇಣುಗೋಪಾಲ ವಿಠಲ" ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸಿದ ಆದವಾನಿ ತಿಮ್ಮಣ್ಣದಾಸರು, "ವೆಂಕಟವಿಠಲ" ಅಂಕಿತದಲ್ಲಿನ ಹರಿದಾಸ ರಚನಕಾರ್ತಿಯಾದ ಬಳ್ಳಾರಿ ರಾಧಾಬಾಯಿ, "ರಮಾಪತಿ ವಿಠಲ" ಅಂಕಿತದ ಸರಸಾಬಾಯಿ, "ಅಭಿನವ ಜನಾರ್ದನ ವಿಠಲ" ಅಂಕಿತದ ಶ್ರೀಪ್ರೇಮದಾಸರು, "ಪ್ರಸನ್ನ ವೆಂಕಟ" ಅಂಕಿತದ ಪ್ರಸನ್ನ ವೆಂಕಟದಾಸರು ಮುಂತಾದವರೆಲ್ಲ ವಾದಿರಾಜರನ್ನು ಕುರಿತು ಕೀರ್ತನೆಗಳನ್ನು ರಚಿಸಿ ಭಕ್ತಿಭಾವದಿಂದ ಅವರಿಗೆ ಶರಣಾಗಿದ್ದಾರೆ.

ಹದಿನೇಳು ಮತ್ತು ಹದಿನೆಂಟನೇ ಶತಮಾನದಲ್ಲಿನ ದಾಸ ಸಾಹಿತ್ಯ ಪರಂಪರೆಯಲ್ಲಿ ಬಂದ "ಶ್ರೀಪತಿ ವಿಠಲ" ಅಂಕಿತರಾದ ಗದ್ವಾಲಿ ಶ್ರೀಪತಿದಾಸರು, "ರಘುಪತಿ ವಿಠಲ" ಅಂಕಿತರಾದ ರಾಘವೇಂದ್ರಾಚಾರ್ಯರು, "ಶ್ರೀದ ವಿಠಲ" ಅಂಕಿತರಾದ ಕರ್ಜಗಿ ದಾಸಪ್ಪನವರು (ಶ್ರೀದ ವಿಠಲ ದಾಸರು) ಇವರುಗಳಲ್ಲದೆ ೧೯ನೇ ಶತಮಾನದಲ್ಲಿ (೧೯೦೭-೧೯೮೨) ಬಾಳಿ ಬದುಕಿದ "ವೆಂಕಟೇಶ ವಿಠಲ" ಅಂಕಿತರಾದ ಅರ್.ರಾಮಚಂದ್ರರಾಯರು ಇವರೆಲ್ಲರೂ ಕೂಡ ವಾದಿರಾಜಗುರುಗಳ ಮೇಲೆ ಕೀರ್ತನೆಗಳನ್ನು ರಚಿಸಿ ಅವರ ಮಹಿಮಾನ್ವಿತ ಕರುಣಾಮಯತೆಯನ್ನು ಹಾಡಿ ಹೊಗಳಿದ್ದಾರೆ.

ಶ್ರೀಪಾದರಾಜರು, ವ್ಯಾಸರಾಜರಂತೆಯೇ ವಾದಿರಾಜರು ಹರಿದಾಸ ಸಾಹಿತ್ಯವು ಪುಷ್ಠಿಗೊಳ್ಳಲು ಕಾರಣರಾದವರು, ಬೆಳೆದು ಬಲವಾಗಲು ಪೋಷಣೆ ನೀಡಿದವರು. ಈ ಮೂವರನ್ನು "ದಾಸ ಸಾಹಿತ್ಯದ ಯತಿತ್ರಯರು" ಎಂದೇ ಕರೆಯಲಾಗಿದೆ. ತಮ್ಮ ಗುರು ವ್ಯಾಸತೀರ್ಥರಂತೆಯೇ ಅದ್ಭುತ ಗ್ರಂಥಕರ್ತರಾಗಿ ವ್ಯಾಸಕೂಟದಲ್ಲಿ ಉನ್ನತ ಜ್ಞಾನಿ ಎನಿಸಿಕೊಂಡಿದ್ದಲ್ಲದೆ, ಸಂಸ್ಕೃತಕ್ಕೆ ಸಮನಾದ ಗೌರವ, ಸ್ಥಾನಗಳನ್ನು ಕನ್ನಡಕ್ಕೂ ತಂದುಕೊಟ್ಟು, ಕನ್ನಡ ವಾಙ್ಮಯವನ್ನು ಹರಿದಾಸ ಸಾಹಿತ್ಯ ಪಥದ ಮೂಲಕ ದಿವ್ಯವಾಗಿ ದೇದೀಪ್ಯಮಾನವಾಗಿ ಬೆಳಗಿಸಿ ದಾಸಕೂಟದ ಪ್ರಮುಖ ನೇತಾರರಾಗಿಯೂ ಒದಗಿದವರು ಬುದ್ಧಿ ಭಾವಗಳ, ಜ್ಞಾನ ಭಕುತಿಗಳ ಸಂಗಮವೆನಿಸಿ ಬಾಳಿದ ಶ್ರೀವಾದಿರಾಜರು.

* * * * *

ದಾಸಕೂಟದ ಮುಖ್ಯ ತಾತ್ವಿಕ ಪರಿಕಲ್ಪನೆಗಳು ಮತ್ತು ಅದರ ವ್ಯಾಖ್ಯಾನಕಾರರು

ತಮ್ಮ ಯತಿ, ಪಂಡಿತ ಶಿಷ್ಯೋತ್ತಮರುಗಳನ್ನು ವ್ಯಾಸಕೂಟವೆಂದೆನ್ನಿಸಿಕೊಳ್ಳುವ ರೀತಿಯಲ್ಲಿ ದ್ವೈತ ಮತ ಸಿದ್ಧಾಂತ ಪ್ರವಚನ, ಪ್ರಚಾರಗಳ ಪ್ರಕ್ರಿಯೆಗಳಲ್ಲಿ ತೊಡಗಿಸಿದಂತೆಯೇ ವ್ಯಾಸತೀರ್ಥರು ತಮ್ಮ ಅನುಯಾಯಿಗಳಾಗಿದ್ದ ಗೃಹಸ್ಥ, ಸಾಧು ಸಜ್ಜನರುಗಳನೇಕರನ್ನು ಹರಿದಾಸ ದೀಕ್ಷೆ ನೀಡುವ ಮೂಲಕ ದಾಸಕೂಟವೆಂದೆನ್ನಿಸಿಕೊಳ್ಳುವ ರೀತಿಯಲ್ಲಿ ಸಂಘಟಿಸಿ ಕನ್ನಡದ ಹಾಡು, ಭಜನೆ, ಸಾಹಿತ್ಯ ಸಂಗೀತ ಕಲೆಗಳ ಮೂಲಕ ಮಾನಸ ಪೂಜೆಯ ಪ್ರಕ್ರಿಯೆಗಳಲ್ಲಿ ತೊಡಗಿಸಿದರು. ದಾಸಕೂಟಕ್ಕೆ ಚಾಲಕ ಶಕ್ತಿಯಾದರು. ಯತಿ, ಜ್ಞಾನಿಗಳು ಆತ್ಮೋದ್ಧಾರದ ಗುರಿ ಹಿಡಿದು ವೇದಾಂತ ಶಾಸ್ತ್ರಗ್ರಂಥಗಳ ರಚನೆ, ವ್ಯಾಖ್ಯಾನ ಚಿಂತನ ಮಂಥನ, ಮಂಡನೆಗಳ ಪಥ ಹಿಡಿದರೆ ಈ ದಾಸಕೂಟವು ಲೋಕೋಪಕಾರದ ಗುರಿ ಹಿಡಿದು ತಮ್ಮ ಸಾಹಿತ್ಯ ಸಂಗೀತ ಪಥಗಳ ಮೂಲಕವೇ ಬದುಕಿಗೆ ಅಗತ್ಯವಿರುವ ನೈತಿಕ ತತ್ವಗಳನ್ನು, ಹರಿಪ್ರೀತಿ ಭಕ್ತಿಗಳನ್ನು ಜನಸಾಮಾನ್ಯರಿಗೆ ಬೋಧಿಸತೊಡಗಿತು. ವ್ಯಾಸಕೂಟವು ವೇದಘೋಷ ಮಂತ್ರಗಳ ರಾಜಮಾರ್ಗದಲ್ಲಿ ಉಳಿಯಿತು. ದಾಸಕೂಟವು ಜನಪರವಾಗಿ, ಜನಪದೀಯವಾಗುಳಿದು ಸರಳತೆಯ ಹಾದಿ ಹಿಡಿಯಿತು. ಸಂಸ್ಕೃತವು ವ್ಯಾಸಕೂಟದ ಘೋಷ ಧ್ವನಿಯಾದರೆ ತಿಳಿಗನ್ನಡವು ದಾಸಕೂಟದವರ ಮಾತಾಯಿತು, ಹಾಡಾಯಿತು, ಜನರ ಹೃದಯಪ್ರವೇಶ ಪಡೆಯಿತು.

ಕಾಲಲ್ಲಿ ಗೆಜ್ಜೆಕಟ್ಟಿ ಕೈಯಲ್ಲಿ ತಂಬೂರಿ ಹಿಡಿದು ಮೀಟುತ್ತ, ಲಜ್ಜೆ ತೊರೆದು ಬೀದಿ ಬೀದಿಗಳಲ್ಲಿ ಹರಿನಾಮ ಹಾಡುತ್ತ, ಹರಿಪಾರಮ್ಯವನ್ನು ತಿಳಿ ಹೇಳುತ್ತ, ಬಾಳಬೇಕಾದ ಪರಿಯನ್ನು ಬೋಧಿಸುತ್ತ ದಾಸಕೂಟದವರು ಮುನ್ನಡೆದರು. ದಾಸಕೂಟದವರ ಮುಖ್ಯ ಸಿದ್ಧಾಂತವೇ ಹರಿಯಲ್ಲಿ ಪ್ರೀತಿ, ಭಕ್ತಿ ಮಾಡಬೇಕೆನ್ನುವುದು. ಆದರೆ ಭಕ್ತಿ ಎನ್ನುವುದು ಕುರುಡು ನಂಬಿಕೆಯ, ಮೌಢ್ಯದ ಸೆರೆಯಲ್ಲಿರುವುದನ್ನು ದಾಸಕೂಟವು ಪ್ರಬಲವಾಗಿ ವಿರೋಧಿಸಿತು. ಆಧ್ಯಾತ್ಮದ ತಿಳುವಳಿಕೆಯಿಂದ ವಂಚಿತರಾಗಿದ್ದ ಜನಸಾಮಾನ್ಯರನ್ನು ಅವರ ದಿನನಿತ್ಯದ ಅನುಭವಗಳಿಂದಲೇ ಆಯ್ದುಕೊಂಡ ಪ್ರಸಂಗಗಳಿಂದ ತಿಳಿಹೇಳುವ ಮೂಲಕ ಸಜ್ಜನಿಕೆ, ಸಭ್ಯತೆ, ಸಮಾಧಾನಗಳನ್ನು ಅವರಲ್ಲಿ ಉದ್ದೀಪಿಸುತ್ತ ಹೊಸ ಬಗೆಯ ಸುಸಂಸ್ಕೃತ ಸಮಾಜ ನಿರ್ಮಾಣದತ್ತ ದಾಸಕೂಟವು ಶ್ರಮಿಸತೊಡಗಿತು. ಈ ಬಗೆಯ ಅವರ ಕಾರ್ಯಗಳಿಗೆ ಹಿನ್ನಲೆಯಲ್ಲಿ ನಿಂತು ಈ ಕಾರ್ಯಮಾಡಿದವರು ವ್ಯಾಸತೀರ್ಥರ ಹರಿದಾಸ ಶಿಷ್ಯರಾದ ಪುರಂದರದಾಸರು.

ಹೀಗಾಗಿ ವ್ಯಾಸಕೂಟದ ತಾತ್ವಿಕ ಪರಿಕಲ್ಪನೆಗಳಿಗೂ, ದಾಸಕೂಟದ ತಾತ್ವಿಕ ಪರಿಕಲ್ಪನೆಗಳಿಗೂ ವ್ಯತ್ಯಾಸ, ಭೇದ ಕಂಡುಬರುವುದು ಸಹಜವೇ ಆಗಿದೆ. ವ್ಯಾಸಕೂಟಕ್ಕೆ ಮೂಲ ಕೇಂದ್ರವಾಗಿದ್ದು ಮಧ್ವಾಚಾರ್ಯರ ಸರ್ವಮೂಲಗ್ರಂಥಗಳು, ಅನುವ್ಯಾಖ್ಯಾನ ಟೀಕೆ ಟಿಪ್ಪಣಿಗಳಾದರೆ ದಾಸಕೂಟಕ್ಕೆ ಮುಖ್ಯ ಕೇಂದ್ರವಾಗಿ ಮಧ್ವಾಚಾರ್ಯರ ತಂತ್ರಸಾರ, ಕೃಷ್ಣಾಮೃತಮಹಾರ್ಣವ ಗ್ರಂಥಗಳು ಸಂದವು. ಶಾಸ್ತ್ರಜ್ಞಾನವೇ ವ್ಯಾಸಕೂಟದವರಿಗೆ

ಮುಕ್ತಿಯ ದ್ವಾರವೆನಿಸಿದರೆ, ಈ ಲೋಕದ ಬದುಕಿನಲ್ಲಿ ಹರಿಸ್ಮರಣೆ, ಗುರೂಪದೇಶ, ಭಕ್ತಿವಿರಕ್ತಿಗಳು, ಸಾಧುಸಂತರ ಸಂಗಗಳು ಮುಖ್ಯವೆಂದು ದಾಸಕೂಟದವರಿಗೆ ಎನಿಸಿತು. ಭಾಗವತ, ಭಾರತ, ರಾಮಾಯಣಗಳೇ ದಾರಿದೀಪವೆನಿಸಿ ಹರಿಕಥೆ, ಸಂಕೀರ್ತನೆ, ಭಜನೆಗಳೇ ದಾಸಕೂಟದವರ ದಿನಚರಿಯಾಯಿತು, "ಸಂಘವಾಗಲೀ ಸಾಧು ಸಂಘವಾಗಲೀ" ಪುರಂದರದಾಸರ ಈ ಸಿದ್ಧ ವಾಕ್ಯವೇ ದಾಸಕೂಟದ ಪ್ರಮುಖ ಸೊಲ್ಲಾಯಿತು.

ಮಾಧ್ವ ಸಂಪ್ರದಾಯಕ್ಕೆ ಸೇರಿದ ಮಠಾಧೀಶರಿಂದ ಹರಿದಾಸ ದೀಕ್ಷೆ ಪಡೆದವರೆಂದು ಮೇಲ್ನೋಟಕ್ಕೆ ಕಂಡರೂ ದಾಸಕೂಟದ ಅಧ್ವರ್ಯ ಪುರಂದರದಾಸರಾಗಲೀ, ಅವರ ಜೊತೆಗಿನ ಇನ್ನಿತರ ದಾಸರುಗಳಾಗಲೀ, ಅಥವಾ ಇವರಿಗೆ ದೀಕ್ಷೆ ನೀಡಿದ ಗುರು ವ್ಯಾಸತೀರ್ಥರೇ ಆಗಲೀ, "ಹರಿದಾಸ ಮನೋಧರ್ಮ"ವು ಮತವೊಂದರ ನಿಲುವಿಗೇ ಸಂಕುಚಿತವಾಗಿ ಉಳಿಯದೆ ಉದಾರತೆಯಿಂದ "ಮಾನವಧರ್ಮ"ವೆನಿಸುವಂತೆ ಅದನ್ನು ಬೆಳೆಸುವುದರಲ್ಲಿ ಆಸಕ್ತರಾಗಿದ್ದರು ಎನ್ನುವುದು ಬಹಳ ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಯಶಸ್ಸನ್ನೂ ಹರಿದಾಸರುಗಳು ಪಡೆದಿದ್ದಾರೆ. ಈ ಅವಧಿಯಲ್ಲಿನ ಎಲ್ಲ ದಾಸರುಗಳ ರಚನೆಯಲ್ಲಿ, ಬೋಧನೆಯಲ್ಲಿ ಮಧ್ವ ಸಂಪ್ರದಾಯದ ನಿಷ್ಠೆ, ದ್ವೈತ ದರ್ಶನದ, ಮಧ್ವಾಚಾರ್ಯರ ಹಿರಿಮೆಯನ್ನು ಸಾರುವ ಅಂಶಗಳು ಇವೆ. ಆದರೆ ಕೇವಲ ಇಷ್ಟಕ್ಕೇ ಸೀಮಿತವಾಗಿ ಉಳಿಯದೆ, ದಾಸರುಗಳು ತಮ್ಮ ಜೀವನದರ್ಶನ, ಆಧ್ಯಾತ್ಮಿಕ ದೃಷ್ಟಿಯನ್ನು ಇನ್ನೂ ವ್ಯಾಪಕವಾಗಿರಿಸಿಕೊಂಡು ಮಾನವೀಯತೆಯನ್ನು, ನೈತಿಕತೆಯನ್ನು ಮೆರೆಸಿದರು, ಹಾಗೆಯೇ ಬಾಳಿ ತೋರಿದರು. ಹೀಗಾಗಿ ದಾಸಕೂಟದ ಮುಖ್ಯ ತಾತ್ತ್ವಿಕ ಪರಿಕಲ್ಪನೆಗಳನ್ನು ಹೀಗೆ ಮನಗಾಣಬಹುದಾಗಿದೆ:

೧. ಸಿದ್ಧಾಂತಗಳ ಮಂಡನೆ ಖಂಡನೆಗಳಿಗಿಂತ, ಸಿದ್ಧಾಂತಗಳ ಅರ್ಥವನ್ನು ಮನಗಂಡು ಆ ಅರ್ಥದಲ್ಲಿ ಸಾಧನೆ ಗೈದು ಬಾಳುವುದು ಮುಖ್ಯ. ಶಾಸ್ತ್ರ ಜ್ಞಾನವಿದ್ದರೆ ಒಳ್ಳೆಯದೇ, ಆದರೆ ಅದೇ ಪರಮಾರ್ಥವಲ್ಲ. ಸಾಧನೆಯ ಅನುಭವವೇ ಮುಖ್ಯ. ಈ ಸಾಧನೆ ಎನ್ನುವುದು ವ್ಯಾಸಂಗ-ಪ್ರವಚನಗಳಿಗೇ ಮೀಸಲಾಗಿ ಉಳಿದಿರದೆ ಭಗವತತ್ತ್ವದ ಸಾಕ್ಷಾತ್ಕಾರ ಮಾಡಿಕೊಳ್ಳುವುದರಲ್ಲಿದೆ. ಇದಕ್ಕೆ ದಾರಿಯೆಂದರೆ "ಭಕ್ತಿ". ಪರಮಾತ್ಮನಲ್ಲಿ ಭಕ್ತಿ ತಾಳಿಕೊಂಡು ಆಂತರಿಕ ಸಾಧನೆ ಮಾಡಿ ನೈತಿಕ ನೆಲೆಗಟ್ಟಿನಲ್ಲಿ ಬದುಕುವುದೇ ನಿಜವಾದ ಸಾಧನೆ.

೨. ಇಹ ಮತ್ತು ಪರಗಳೆರಡರಲ್ಲಿಯೂ ಸುಖ, ನೆಮ್ಮದಿಯನ್ನು ಪಡೆಯಬೇಕಾದರೆ 'ಸೂರಿಜನಸಂಗ' 'ಸಾರವೈರಾಗ್ಯ' 'ಅರಿವು ಮತ್ತು ವಿವೇಕ'[*೭] ಇವುಗಳೇ ಮುಖ್ಯ. ಸಾಧುಜನರ ಸಂಗ, ಶಿಷ್ಟ ಸಜ್ಜನರೊಡನೆ ಒಡನಾಟದಲ್ಲಿ ಸದ್ಗುಣಗಳಲ್ಲಿ ಬಾಳುವುದೇ ಇಹಪರಸಾಧನ.

೩. ಚೇತನಗಳಲ್ಲಿ ಎರಡು ಬಗೆ. ಒಂದು, ಸರ್ವನಿಯಾಮಕ ಪರಮಾತ್ಮ. ಮತ್ತೊಂದು ಅನಂತವಾದ ಜೀವರಾಶಿ. ಜೀವರುಗಳಲ್ಲಿ ಅನೇಕಾನೇಕ ಬಗೆಗಳಿವೆ. ಇವರಲ್ಲಿ ತಾರತಮ್ಯವಿದೆ. ವಾಯುವು (ಮುಖ್ಯಪ್ರಾಣ, ಹನುಮ, ಮಾರುತಿ) ಜೀವಕೋಟಿಯಲ್ಲಿ ಪರಮಾತ್ಮನಿಗೆ ತುಂಬ ಹತ್ತಿರವಿರುವ ಚೇತನ, ಜೀವೋತ್ತಮ. ಪರಮಾತ್ಮನೊಬ್ಬ ಸ್ವತಂತ್ರ, ಜೀವರೆಲ್ಲ ಅಸ್ವತಂತ್ರರು. ಜೀವರಲ್ಲಿ ಮೂರು ವಿಧ; ಸಾತ್ವಿಕರು, ರಾಜಸರು ಮತ್ತು ತಾಮಸರು ಎಂದು. ಸಾತ್ವಿಕರಿಗೆ ಮಾತ್ರ ಪರಮಾತ್ಮ, ಮುಕ್ತಿ ಸಾಧನೆಗಳ ಕಡೆಗೆ ಮನಸ್ಸು ಹೋಗುತ್ತದೆ.

೪. ಜೀವನಲ್ಲಿ ಬೀಜರೂಪವಾಗಿರುವ ಸ್ವಭಾವ ಗುಣಗಳು ಮೊಳೆತು ಬೆಳೆದು ಪರಾಕಾಷ್ಠೆಯನ್ನು ಮುಟ್ಟುವುದಕ್ಕಾಗಿಯೇ ಜೀವನಿಗೆ ದೇಹವು ಒದಗಿಬರುತ್ತದೆ, ಇಂದ್ರಿಯಗಳು ಲಭ್ಯವಾಗುತ್ತವೆ, ಮನಸ್ಸು ಸಿದ್ಧವಾಗುತ್ತದೆ. ಇದೇ ಹುಟ್ಟು. ಹೀಗೆ ಜೀವನು ಪ್ರಕೃತಿಯಿಂದ ಬದ್ಧನಾಗಿ ಸಂಸಾರ ಕಷ್ಟ ಸುಖಗಳ ತೊಳಲಾಟಗಳಲ್ಲಿ ಅನುಭವಗಳನ್ನು ಪಡೆಯುತ್ತಾನೆ. [ಇದೇ ಆದ್ಯಪರಾಧ ಮಿಥ್ಯಾಜ್ಞಾನವೆಂದು ವ್ಯಾಸತೀರ್ಥರು ಹೆಸರಿಸಿದ್ದಾರೆ]

೫. ಈ ಮಿಥ್ಯಾಜ್ಞಾನದ ಫಲವಾಗಿ ಸ್ವಗತ ಕರ್ತೃತ್ವ(ನಾನೇ ಸ್ವತಂತ್ರವಾಗಿ ಎಲ್ಲ ಮಾಡುತ್ತಿದ್ದೇನೆ), ಭೋಕ್ತೃತ್ವ ಸ್ವಾತಂತ್ರ್ಯ(ನಾನೇ . ಸ್ವತಂತ್ರವಾಗಿ ಭೋಗಿಸುವವನು) ಕಾರಕ ಮುಖ್ಯ ಸ್ವಾಮ್ಯ [ನನ್ನ ಶರೀರ, ಇಂದ್ರಿಯ, ಮನಸ್ಸುಗಳನ್ನು ಸ್ವೇಚ್ಛೆಯಿಂದ ನಡೆಸುತ್ತೇನೆ] ಕ್ರಿಯಾಫಲ ಮುಖ್ಯ ಸ್ವಾಮಿತ್ವ [ನನ್ನ ಕೆಲಸಗಳಿಗೆ ತಕ್ಕುದಾದ ಫಲಗಳನ್ನು ನಾನೇ ಸ್ವಿಚ್ಛೆಯಿಂದ ಪಡೆದುಕೊಳ್ಳುತ್ತೇನೆ], ಪುರುಷಾರ್ಥ[ಲೌಕಿಕ ವಿಷಯ ಭೋಗಗಳೇ ಸುಖಗಳು] ತತ್ಸಾಧನ, ಅಪರ ಪರ್ಯಾಯ, ಶೋಭನತ್ವ [ಈ ಲೌಕಿಕ ವಿಷಯ ಸುಖಕ್ಕೆ ನೆರವಾಗುವ ಎಲ್ಲವೂ ಹಿತವಾದದ್ದೇ..] ಹೀಗೆ ಆರು ವಿಧದ ಅಭಿಮಾನಗಳು ಜೀವನಿಗೆ ತಗುಲಿಕೊಳ್ಳುತ್ತದೆ. ಆಗ ಹರಿಯ ಸ್ವಾತಂತ್ರ್ಯ, ತನ್ನ ಪರಾಧೀನತ್ವದ ಅರಿವು ಕೈತಪ್ಪಿ ಹೋಗುತ್ತದೆ. ಇದು "ಹರಿಯ ವಿಸ್ಮರಣೆ" ಎಂಬ ಎರಡನೆಯ ಅಪರಾಧ.

೬. ಹರಿಯ ವಿಸ್ಮರಣೆಯ ಫಲವಾಗಿ ಪ್ರಾಪಂಚಿಕ ವಿಷಯಗಳಲ್ಲೇ ಅತ್ಯಾಸಕ್ತಿ, ರತಿ, ಧರ್ಮಮಾರ್ಗದ ಎಚ್ಚರವಿಲ್ಲದೆ ಪಾಪಕೂಪಕ್ಕೆ ಜಾರುವಿಕೆ.ಮೊದಲನೆಯ ಮಿಥ್ಯಾಜ್ಞಾನ ಅಪರಾಧವನ್ನು ಜ್ಞಾನ [ಸಮ್ಯಕ್ ಜ್ಞಾನ,ನಿಜವಾದ ಜ್ಞಾನ] ಮಾರ್ಗದಿಂದ ತಿಳಿದುಕೊಳ್ಳಬೇಕು. ಈ ಜ್ಞಾನದಿಂದ ಜೀವನು ಅಸ್ವತಂತ್ರನೆಂದು ಮನಗಾಣಿಸಿಕೊಳ್ಳುವುದು ಮೊದಲನೆಯ ಸಾಧನೆ, ಹರಿಯೇ ಸ್ವತಂತ್ರನೆಂದು ಮನಗಾಣುವುದು ಎರಡನೆಯ ಸಾಧನೆ.ಒಟ್ಟಿನಲ್ಲಿ ತಿಳಿಯಬೇಕಾದ್ದು ಹರಿಯ ಮಾಹಾತ್ಮ್ಯ ಜ್ಞಾನ. ಹರಿಯೇ ಜೀವನಾದ ತನಗೆ, ಎಲ್ಲ ಜೀವರಿಗೆ, ಇಡೀ ಬ್ರಹ್ಮಾಂಡಕ್ಕೆ , ಬ್ರಹ್ಮಾಂಡದಲ್ಲೆಲ್ಲ ವ್ಯಾಪ್ತನಾದ ವಾಯುದೇವರಿಗೆ ಬಿಂಬನೆಂದು ತಿಳಿಯುವುದೇ ಮಾಹಾತ್ಮ್ಯಜ್ಞಾನ. ಹರಿಯ ವಿಸ್ಮರಣೆಯ ತಪ್ಪನ್ನು ತಿದ್ದಿಕೊಳ್ಳುವುದೆಂದರೆ ಹರಿಯ ಅಖಂಡ ಸ್ಮೃತಿಯನ್ನು ಇರಿಸಿಕೊಳ್ಳುವುದರ ಮೂಲಕವೇ.[ಇದನ್ನೇ ಹರಿಯೊಂದಿಗಿನ ಸುಧೃಡ ಸ್ನೇಹವೆಂದಿದ್ದಾರೆ ವ್ಯಾಸತೀರ್ಥರು] [೮]

೭. ಜ್ಞಾನದಿಂದ ಕೂಡಿದ ಸ್ನೇಹವೇ ಭಕ್ತಿ. ಹರಿಯು ಬಿಂಬ, ಜೀವನು ಪ್ರತಿಬಿಂಬ ಎಂಬ ಅರಿವೇ ಜ್ಞಾನ; ಸ್ನೇಹವೆಂದರೆ ಈ ಬಿಂಬೋಪಾಸನೆ. ಇವೆರಡೂ ಕೂಡಿದ ಭಕ್ತಿ ಎಂದರೆ ಬಿಂಬಾಪರೋಕ್ಷ, ಬಿಂಬೋಪಾಸನೆಯಲ್ಲಿ ಜೀವದ ದಾಸ್ಯಭಾವನೆಯೇ ಮುಖ್ಯ. [ಪ್ರತಿಬಿಂಬ ಚಲಿಸಿದರೂ ಬಿಂಬ ಚಲಿಸದೇ ಇರುವುದು, ಒಂದೇ ಬಿಂಬವಿದ್ದರೂ ಹಲವಾರು ಪ್ರತಿಬಿಂಬಗಳಿರುವುದು, ಬಿಂಬ ಬಲುದೂರದಲ್ಲಿದ್ದು ಪ್ರತಿಬಿಂಬ ಹತ್ತಿರದಲ್ಲಿರುವುದು, (ನೀರು,ಕನ್ನಡಿ,ಸೂರ್ಯ,ಚಂದ್ರರ ಉದಾ)ಬಿಂಬ ಅಗ್ರಾಹ್ಯವಾಗಿ ಪ್ರತಿಬಿಂಬ

ಗ್ರಾಹ್ಯವಾಗಿರುವುದು,ಪ್ರತಿಬಿಂಬ ಕಾಣದಾದರೂ ಬಿಂಬ ಇದ್ದೇ ಇರುವುದು....ಇವೆಲ್ಲ ಬಿಂಬ, ಪ್ರತಿಬಿಂಬ ಕಲ್ಪನೆಯಲ್ಲಿ ಸೇರುವ ವಿವರಗಳಾಗಿವೆ] ಅನಂತರೂಪಗಳಿರುವ, ಸರ್ವವ್ಯಾಪಿಯಾಗಿರುವ ಪರಮಾತ್ಮನೇ ತನ್ನೊಳಗೆ ಹೃದಯಾಂಗರ್ತತನಾಗಿ ಬಿಂಬ ರೂಪದ ಹರಿಯಾಗಿದ್ದಾನೆ ಎಂದು ಅರಿತುಕೊಳ್ಳುವುದೇ ಬಿಂಬೋಪಾಸನೆ. ಜೀವನು ಪರಮಾತ್ಮನಿಗೆ ಪ್ರತಿಬಿಂಬ, ಬಿಂಬರೂಪಿಯಾದ ಪರಮಾತ್ಮನಿಗೆ ಜೀವನು ವಶವರ್ತಿ, ಪರತಂತ್ರ, ದಾಸ. ತಾನೇ ಸ್ವತಂತ್ರನೆಂಬ ಭ್ರಮೆ, ಮಿಥ್ಯಾಜ್ಞಾನದಿಂದ ಕಳಚಿಕೊಳ್ಳಲೆಂದೇ ಬಿಂಬೋಪಾಸನೆ. [ನೀನು ಕುಣಿಸಿದಂತೆ ನಾನು ಕುಣಿವೆ, ನೀನೇ ಸೂತ್ರಧಾರಿ, ನಾನು ಪಾತ್ರಧಾರಿ ಎಂಬ ಹರಿದಾಸರ ನಿಲುವು ಹುಟ್ಟಿದ್ದೇ ಈ ಬಿಂಬೋಪಾಸನೆಯಿಂದ. "ಅಪರಾಧಿ ನಾನಲ್ಲ , ಅಪರಾಧವೆನಗಿಲ್ಲ, ಕಪಟನಾಟಕ ಸೂತ್ರಧಾರಿ ನೀನೇ॥ ನೀನೇ ಆಡಿಸದಿರಲು ಜಡಒನಕೆಯಾ ಗೊಂಬೆ, ಏನು ಮಾಡಬಲ್ಲುದು ತಾನೆ ಬೇರೆ?.....॥ ಎಂಬ ಪುರಂದರದಾಸರ ಕೀರ್ತನೆಯಲ್ಲಿ ಇದೇ ಭಾವ ತುಂಬಿಕೊಂಡಿದೆ. "ಯಂತ್ರವಾಹಕ ನೀನೆ ಒಳಗಿದ್ದು ಎನ್ನ ಸ್ವತಂತ್ರನೆಂದೆನಿಸಿ ಕೊಲಿಸುವರೆ ಹೇಳೋ.. ಎಂದು ಈ ಕಿರ್ತನೆಯಲ್ಲಿ ಅವರು ಕೇಳುತ್ತಾರೆ]

೮. ಜೀವನು ತನ್ನ ಬಿಂಬದ ವಿಸ್ಮೃತಿಯಿಂದಾಗಿ ಅನೇಕವಿಧದ ಸುಖದುಃಖಗಳಿಗೆ ಕಾರಣವಾಗುವ ಕರ್ಮಗಳನ್ನು ಮಾಡುತ್ತಾನೆ. ಕರ್ಮಫಲವನ್ನು ಕರ್ತೃತ್ವದೊಂದಿಗೆ ಜೀವನು ಬಿಂಬನಿಗೇ ಅರ್ಪಣೆ ಮಾಡಬೇಕು. ತಂದೆಯು ತನ್ನ ಮಗುವಿನ ಕೈಯಿಂದ ಕೆಲಸ ಮಾಡಿಸಿ ನೋಡಿ ಸಂತೋಷಪಡುವಂತೆ ಬಿಂಬನಾದ ಹರಿಯೂ ಜೀವನಿಂದ ಕೆಲಸಮಾಡಿಸಿ ಅದನ್ನು ತನ್ನದೇ ಪೂಜೆಯೆಂದು ಸ್ವೀಕರಿಸಿ ಮೆಚ್ಚುತ್ತಾನೆ. [ಇದನ್ನೇ ಹರಿದಾಸರು 'ಹರಿಪ್ರೀತಿ' ಎಂದು ಬಣ್ಣಿಸಿದ್ದಾರೆ]

೯. ಜೀವಾಂತರ್ಗತನಾದ ಬಿಂಬನೇ ಸಗುಣ ಬ್ರಹ್ಮ. ಬ್ರಹ್ಮಾಂಡದ ನಾಯಕನೇ ಪಿಂಡಾಂಡಕ್ಕೆ ಕೂಡ ಒಡೆಯ. ಪರಬ್ರಹ್ಮನೆಂದು ಶ್ರುತಿ ಹೇಳುವುದು ಬಿಂಬವನ್ನು ಕುರಿತೇ. ಈ ಕಾರಣದಿಂದಾಗಿ ಬಿಂಬೋಪಾಸನೆಯಲ್ಲಿ ಸಗುಣ ವರ್ಣನೆಯೇ ಇದೆ.[ಪರಮಾತ್ಮನ ಪುರುಷಾಕಾರ, ಸೌಂದರ್ಯ,ಕಾರುಣ್ಯ ,ವೀರ್ಯ, ತೇಜಸ್ಸು ಮೊದಲಾದವುಗಳನ್ನು ಹರಿದಾಸರು ವರ್ಣಿಸುವುದರಲ್ಲಿ ಸದಾ ನಿರತರು. ಭಗವಂತನ ಅವತಾರಗಳನ್ನು, ಆ ಅವತಾರಗಳ ಸ್ವಾರಸ್ಯಗಳನ್ನು ಹಾಡಿ ಹೊಗಳುವುದರಲ್ಲಿ ದಾಸರುಗಳಿಗೆ ಆಸಕ್ತಿ ಹೆಚ್ಚು. ಈ ಕಾರಣದಿಂದಲೇ ಅವರ ರಚನೆಗಳಿಗೆ ವಸ್ತು ಪುರಾಣಗಳಿಂದಲೇ ಬಹುಮಟ್ಟಿಗೆ ಆಯ್ಕೆಯಾಗಿದೆ]

೧೦. [ಭಾರತ,ಭಾಗವತ,ಪುರಾಣಗಳಲ್ಲಿ ದೊರಕುವ ವಿವರಗಳೇ ಹರಿಯ ಮಾಹಾತ್ಮ್ಯೆಯನ್ನು ವಿಶದಪಡಿಸುತ್ತವಾಗಿ ಅವು ಹರಿದಾಸರಿಗೆ ಮಾನ್ಯ. ಹರಿಕಥಾ ಶ್ರವಣವೆಂದಿಗೂ ಶ್ರೇಯಸ್ಕರ, ಪುರಾಣೋಕ್ತ ನಾಮಸ್ಮರಣೆ, ಸಂಕೀರ್ತನೆಗಳು, ಭಜನೆಗಳು ಹರಿದಾಸರಿಗೆ ಎಂದೂ ವಿಹಿತ. ಇದನ್ನೇ ಮನುಕುಲಕ್ಕೂ ದಾಸರುಗಳು ಬೋಧಿಸಿದರು, ನವವಿಧ ಭಕ್ತಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ತೋರಿದರು.] ಭಕ್ತಿ ಮಾಡಬೇಕಾದವನು

ಜೀವ, ಭಕ್ತಿಗೆ ಗುರಿ ಶ್ರೀಹರಿ. ಪ್ರತಿಬಿಂಬನ ಹೃದಯಾಕಾಶದಲ್ಲೇ ನೆಲೆಸಿರುವ ಮುಖ್ಯಪ್ರಾಣನು ಭಕ್ತಿಯನ್ನು ಮಾಡಿಸುವವನು. ಜೀವನೊಳಗಿದ್ದು ಉಸಿರಾಟದೊಳಗಿನ 'ಹಂಸ' ಜಪವನ್ನು ಹರಿಪ್ರೀತಿಗಾಗಿಯೇ ಮಾಡಿಸುವವನು ಮುಖ್ಯಪ್ರಾಣ.

೧೧. ಜೀವನು ಮಾಡುವ ಭಕ್ತಿಗೆ ಫಲರೂಪವಾಗಿ ಪರಮಾತ್ಮನ ಪ್ರಸಾದವಿರುತ್ತದೆ.ಜೀವನಲ್ಲಿ ಸ್ವಭಾವ ಸಿದ್ಧವಾಗಿ ಭಕ್ತಿ ಇದ್ದರೂ, ಪರಮಾತ್ಮನು ಸ್ವಭಾವಸಿದ್ಧ ಕಾರುಣ್ಯಮಯಿಯೇ ಆಗಿದ್ದರೂ, ಎರಡರ ಸಮಾಗಮವಾಗಲು ಸಾಧನ ಸಾಮಗ್ರಿ ಇರಬೇಕು. ವಿಷ್ಣುವಿನಲ್ಲಿ ಭಕ್ತಿ,ವಿಷಯ ಸುಖಗಳಲ್ಲಿ ವೈರಾಗ್ಯ, ವಿಷ್ಣುವಿನ ಸ್ಮರಣೆ, ಸಂಸಾರದ ಅಸಾರತೆಯ ತಿಳುವಳಿಕೆಯಿಂದಾಗಿ ವಿರಕ್ತಿ, ಇಂದ್ರಿಯ ನಿಗ್ರಹ, ಜೊತೆಯಾಗಿ ಸಾಧು ಸಜ್ಜನ ಸಂಗ, ಪರಮಾತ್ಮನಲ್ಲಿ ಅಧಿಕ ಸ್ನೇಹ ಇವು ಮಾನವನಲ್ಲಿ ಅಧಿಕವಾಗಿ ಬಲಗೊಳ್ಳಬೇಕು. ಭಕ್ತಿ ಬರಿದೆ ಇದ್ದರೆ ಸಾಲದು. ಆದರೆ ಆ ಭಕ್ತಿಯು ಬೇರೂರಿ ಬೆಳೆಯಲು ವಿರಕ್ತಿಯೇ ಮೂಲ ಸಾಮಗ್ರಿ. ಫಲಾಪೇಕ್ಷೆಯಿಂದ ಮಾಡುವ ಭಕ್ತಿ 'ಮಲಭಕ್ತಿ', ಕೊಳೆಯಿಂದ ಕೂಡಿದ್ದು. ಇದು ಮುಕ್ತಿಗೆ ನೆರವು ನೀಡದು. ಅಲಂ ಬುದ್ಧಿಯನ್ನು [ದೊರೆತಷ್ಟು ಸಾಕು ಎನ್ನುವ ಬುದ್ಧಿ] ಬೆಳೆಯಿಸಿಕೊಂಡು ನಿರಪೇಕ್ಷ ಭಕ್ತಿಯನ್ನು ತಾಳಿಕೊಳ್ಳುವುದು ಜೀವನಿಗೆ ಶ್ರೇಯಸ್ಕರ, ಮೋಕ್ಷಕ್ಕೆ ಮಾರ್ಗ.[ಇದನ್ನೇ ದಾಸರುಗಳು ಅನೇಕ ಕೃತಿಯಲ್ಲಿ ಸಾರಿದ್ದಾರೆ. ಶ್ರೀಪಾದರಾಜರು, ವ್ಯಾಸತೀರ್ಥರು, ವಾದಿರಾಜರಾದಿಯಾಗಿ ತಮ್ಮ ಕೃತಿಗಳಲ್ಲಿ ಈ ಭಾವಗಳನ್ನೇ ಸೂಚಿಸಿದ್ದಾರೆ] [*೯]

೧೨. ಶ್ರವಣ, ಮನನ, ನಿಧಿಧ್ಯಾಸನಗಳಿಗೆ ದಾಸಕೂಟದವರು ಕೊಡುವ ವ್ಯಾಖ್ಯಾನವೇ ಬೇರೆ ಇದೆ; ಶ್ರವಣವೆಂದರೆ ಅದು ಹರಿಕಥಾ ಶ್ರವಣವೇ; ಇದರಿಂದ ಮನಸ್ಸಿನ ದೋಷಗಳ ನಿವಾರಣೆ, ಮನನವೆಂದರೆ ಭಗವಂತನ ನಾಮಸ್ಮರಣೆ; ಇದರಲ್ಲಿ ಭಗವಂತನ ರೂಪ, ಗುಣ, ಕ್ರಿಯೆಗಳನ್ನು ಬೇರೆ ಬೇರೆಯಾಗಿ ಮನಸ್ಸಿಗೆ ತಂದುಕೊಳ್ಳುತ್ತಿರುವುದು; ನಿಧಿಧ್ಯಾಸನವೆಂದರೆ ಸಂಕೀರ್ತನದಲ್ಲಿ ಮೈ ಮರೆಯುವುದು; ಇದರಲ್ಲಿ ಭಗವಂತನ ಮಾಹಾತ್ಮ್ಯೆಯನ್ನು ಬದುಕಿನಲ್ಲಿ ನಿರಂತರ ಬೇರೂರಿಸಿಕೊಳ್ಳುವುದು. ಇದೆಲ್ಲದರಿಂದ ಅತ್ಯಧಿಕ ಭಕ್ತಿ ಉಂಟಾಗುತ್ತದೆ.

೧೩. ಆಡಂಬರ, ಶ್ರೀಮಂತಿಕೆಯಿಂದ ಕೂಡಿದ ವಿಧ್ಯುಕ್ತ ಪೂಜೆಗಿಂತ ಭಗವಂತನಿಗೆ ಸಲ್ಲಿಸುವ ಭಾವುಕ ಪ್ರೀತಿಯ ಪೂಜೆಯೇ ಹೆಚ್ಚು ವಿಹಿತವಾದುದು, ಮಾನಸ ಪೂಜೆಯೇ ಹೆಚ್ಚು ಹಿರಿಮೆಯುಳ್ಳದ್ದು. ಇದು ಅನಾಯಾಸದಿಂದ ಮಾಡುವ ಸುಲಭ ಪೂಜೆ. ಸಾಧಕನು ತನ್ನ ಆತ್ಮದಲ್ಲೇ ಪರಮಾತ್ಮನನ್ನು ಕಾಣುವ ಪರಿಯೇ ನಿಜವಾದ ಆಧ್ಯಾತ್ಮ ನಿಷ್ಠೆ [ವ್ಯಾಸತೀರ್ಥರು ಅಂತರಂಗದಲಿ ಹರಿಯಕಾಣದವ ಹುಟ್ಟು ಕುರುಡನೋ" ಎಂದು ಹೇಳಿದ್ದೇ ಇದರ ಮೂಲಸ್ರೋತ]

೧೪. ಭಾಗವತ ಸಂಪ್ರದಾಯದಲ್ಲಿ ಹಾಸುಹೊಕ್ಕಾಗಿ ಬರುವ ತಾತ್ತ್ವಿಕ ನಿಲುವುಗಳೇ ದಾಸಕೂಟದವರಿಗೆ ಮುಖ್ಯ ತಾತ್ತ್ವಿಕ ಪರಿಕಲ್ಪನೆಗಳಾಗಿ ಒದಗಿ ಬಂದವು. ಅಂತರಂಗ ಶುದ್ಧಿ, ಬಹಿರಂಗ ಸುಶೀಲತೆ, ಸರ್ವಭೂತಹಿತ,

'ಸರ್ವ ಸಮತಾಭಾವ, ಬಿಂಬೋಪಾಸನೆ ಹಾಗೂ ಏಕಾಂತಭಕ್ತಿ ಇವೇ ಆ ತಾತ್ವಿಕ ಪರಿಕಲ್ಪನೆಗಳು. ಈ ಏಕಾಂತ ಭಕ್ತಿಗಾಗಿಯೇ ಸಂಗೀತದ ಸಾಹಚರ್ಯ, ಸ್ವಾರಸ್ಯ. ಭಕ್ತಿಯು ನಾದದ ಮೂಲಕ ಪರಿಪಾಕವಾಗುತ್ತದೆನ್ನುವ ಕಾರಣದಿಂದ ಸಂಗೀತದ ಒಡನಾಟ. ಭಗವಂತನ ಮೇಲಿನ ಪ್ರೇಮದ ಹೆಚ್ಚಳವು ಸಂಗೀತ ಮಾಧ್ಯಮದ ಮೂಲಕ ಅವನ ಸಂಪರ್ಕ ಮಾಡುವಾಗ ಸಿದ್ಧಿಸುತ್ತದೆ.

೧೫. ಮಾನವ ಜನ್ಮಕ್ಕೆ ಬರುವುದೇ ದೇವರನ್ನು ಕಂಡುಕೊಳ್ಳಲು ಮತ್ತು ಅವನನ್ನು ಸೇರಿಕೊಳ್ಳಲು, ಸಂಸಾರ ನೀರಸವಿದ್ದರೂ, ಬದುಕು ಅಶಾಶ್ವತವಿದ್ದರೂ ಇಲ್ಲಿಯೇ ನಾವು ಸಾರ್ಥಕವಾಗಿ ಬದುಕಿ ಮುಕ್ತಿಯನ್ನು ಸಾಧಿಸಿಕೊಳ್ಳಬೇಕು.. ದೈವಕ್ಕೆ ಪೂರ್ತಿ ಶರಣಾಗಿ ಬಾಳಬೇಕು. ಆದರೆ ಪೂರ್ತಿ ದೈವವೇ ನಡೆಸಲಿ ಎಂದು ಪುರುಷ ಪ್ರಯತ್ನವಿಲ್ಲದೆ ಅಯಸ್ಸು ಕಳೆಯುವುದು ತಪ್ಪು. ತನ್ನ ಪ್ರಯತ್ನಗಳನ್ನು ತಾನು ಮಾಡಬೇಕು. ಮಾಡುವಾಗ ತಾನು ದಾಸ, ಅವನು ಈಶ ಎಂಬ ವಿನಮ್ರತೆ ಸದಾ ಇರಬೇಕು. ದೇವರನ್ನು ನಂಬಿ ನಮ್ಮ ಪ್ರಯತ್ನಗಳನ್ನು ಮಾಡಿಕೊಂಡು ಸುಶೀಲ ಮನಸ್ಸಿನಲ್ಲಿ ಬಾಳಬೇಕು.

೧೬. ವೈಯುಕ್ತಿಕ ಜೀವನ ಪರಿಶುದ್ಧವಾಗದೆ ಸಮಾಜದಲ್ಲಿ ಶುದ್ಧತೆ, ಸುಶೀಲತೆ ಕಾಣಿಸಿಕೊಳ್ಳಲಾಗದು. ಉದರಂಭರಣಕ್ಕೆ ಮಾಡುವ ವೈರಾಗ್ಯ, ಮಡಿವಂತಿಕೆಯ ಸೋಗು, ಡಂಭಾಚಾರದ ಅಟ್ಟಹಾಸ, ಸುಶೀಲತೆಯಿಲ್ಲದ ಶಾಸ್ತ್ರ ಪಾಂಡಿತ್ಯ ಇವುಗಳನ್ನೆಲ್ಲ ಹರಿಯು ಎಂದಿಗೂ ಮೆಚ್ಚುವುದಿಲ್ಲ. ಶೀಲಶುದ್ಧಿಯೇ ಮುಖ್ಯವಲ್ಲದೆ ಜಾತಿ, ಕುಲ,ಗೋತ್ರಗಳು, ವಿದ್ಯೆಯ ವೈಭವ ಇವು ಗಣನೆಗೆ ಬರುವುದಿಲ್ಲ.

ಹೀಗೆ ಮನುಷ್ಯ ಜನ್ಮದ ಉದ್ಧಾರಕ್ಕೆ ಅಗತ್ಯವಿರುವ ಸರಳತೆಯ, ಸುಶೀಲತೆಯ ಮೌಲ್ಯಗಳನ್ನು ತಮ್ಮ ತಾತ್ತ್ವಿಕ ಪರಿಕಲ್ಪನೆಗಳನ್ನಾಗಿ ರೂಪಿಸಿಕೊಂಡು ಅನನ್ಯ ಹರಿಪ್ರೀತಿ, ಶರಣಾಗತಿಗಳಲ್ಲಿ ಬಾಳಿಬದುಕಿದವರು ದಾಸಕೂಟದವರು. ಶಾಸ್ತ್ರಜ್ಞಾನವನ್ನು ಹೆಗ್ಗಳಿಕೆಯಾಗಿ ಕಾಣದೆ ಭಕ್ತಿ ಭಾವುಕತೆಯನ್ನು ತಮ್ಮ ಮುಖ್ಯ ಜೀವನತತ್ತ್ವವಾಗಿರಿಸಿ ಕೊಂಡವರು ಹರಿದಾಸರುಗಳು. ಶ್ರೀಪಾದರಾಜರು, ವ್ಯಾಸತೀರ್ಥರು, ವಾದಿರಾಜರು ಈ ಯತಿತ್ರಯರು ಮಾಧ್ವಮತ ನಿಷ್ಠೆಯುಳ್ಳ ಜ್ಞಾನಿಗಳಾಗಿದ್ದರೂ ಭಕ್ತಿಯೆಂಬುದು ಈ ಮೂವರಿಗೂ ಮುಖ್ಯವಾದ ಮನೋಧರ್ಮವಾಗಿತ್ತು. ಯಾವ ಸಂಪ್ರದಾಯದವರಾದರೂ ಈ ಯತಿತ್ರಯರ ಕನ್ನಡ ಕೃತಿಗಳನ್ನು ಓದಿ ಭಕ್ತಿಯನ್ನು ಬೆಳೆಸುವ ಬಗೆಯನ್ನು ಅರಿಯಬಹುದಾಗಿದೆ. ಪುರಂದರದಾಸರು ಕೂಡ ತಮ್ಮ ಈ ಗುರುಗಳ ಮತ್ತು ಪರಮಗುರುಗಳ ಹಾದಿಯನ್ನೇ ಹಿಡಿದು ಭಕ್ತಿಪಾರಮ್ಯವನ್ನು ಮೆರೆಯಿಸಿದವರಾದರು. ಹರಿಪ್ರೀತಿ, ಹರಿಭಕ್ತಿಗಳನ್ನುಳಿದ ಯಾವುದೇ ತಾತ್ತ್ವಿಕ ನಿಲುವುಗಳು ಹರಿದಾಸರಲ್ಲಿಲ್ಲ. ಹರಿಸರ್ವೋತ್ತಮತ್ವದ ಪ್ರತಿಪಾದನೆಯು ದಾಸಕೂಟದವರಲ್ಲಿ ಪಾಂಡಿತ್ಯದ ಹೊರೆಯಾಗಿ ಬರದೆ ಭಕ್ತಿಯ ಪ್ರೀತಿನಿವೇದನೆಯಾಗಿ ತಲೆದೋರಿಕೊಂಡಿರುವುದೇ ಅವರುಗಳನ್ನು ಸಾಮಾನ್ಯ ಜನರಿಗೆ, ಸಾಮಾನ್ಯರ ಬದುಕಿಗೆ, ಅನುಭವಗಳಿಗೆ ಹತ್ತಿರವಾಗುವಂತೆ ಮಾಡಿತು. ಸಾಮಾನ್ಯರನ್ನು ಭಕ್ತಿಸಂವೇದನೆಯ ಮೂಲಕ ಉದ್ಧರಿಸುವುದೇ ಅವರ ಗುರಿಯಾಯಿತು.

ವಿಠಲೋಪಾಸನೆಯ ಆದ್ಯ ಪ್ರವರ್ತಕರೆನ್ನಿಸಿಕೊಂಡು ದಾಸಕೂಟದವರು ಜನಸಾಮಾನ್ಯರನ್ನು, ಸ್ತ್ರೀಸಮಾಜವನ್ನು, ಕೆಳವರ್ಗದಲ್ಲಿದ್ದ ಜನಸಮುದಾಯವನ್ನೂ ಉದ್ಧರಿಸಲು, ನೈತಿಕತೆಯ ಮಟ್ಟವನ್ನು ಮೇಲೆತ್ತಲು ಶ್ರಮಿಸುವವರಾದರು. ಮಾಧ್ವ ಸಿದ್ಧಾಂತದ ಸಾರವನ್ನು ಜನರ ಆಡುನುಡಿಯಲ್ಲಿ , ಸರಳವಾಗಿ ಅರಿಯಬಹುದಾದ ಶೈಲಿಯಲ್ಲಿ, ಸುಂದರ ಪ್ರಾಸಬದ್ಧ ಲಾಲಿತ್ಯದಲ್ಲಿ ಸಾಹಿತ್ಯ-ಸಂಗೀತ ಮಾಧ್ಯಮಗಳ ಮೂಲಕ ಜನರಿಗೆ ತಲುಪಿಸಿದವರಾದರು. ಆದರೆ ಮಧ್ವಮತ ಪ್ರಸಾರವೇ ತಮ್ಮ ಗುರಿ ಎಂದು ಹೊರಡಲಿಲ್ಲ, ದ್ವೈತ ತತ್ತ ಜ್ಞಾನವನ್ನೇ ಜನರ ತಲೆಯಲ್ಲಿ ತುಂಬಿಬಿಡಬೇಕೆಂದು ಉದ್ದೇಶಿಸಿ ಗೆಜ್ಜೆ ಕಟ್ಟಿ ಹಾಡಲಿಲ್ಲ. ಬದಲಾಗಿ ಜನಸಾಮಾನ್ಯರ ಬುದ್ಧಿ, ಭಾವನೆ, ನಡವಳಿಕೆಗಳು ಸುಸಂಸ್ಕಾರವನ್ನು ಪಡೆಯುವಂತೆ ಭಕ್ತಿ ಸಾಹಿತ್ಯ ರಚಿಸಿದರು. ಜ್ಞಾನ ಮತ್ತು ಭಕ್ತಿಯೊಂದಿಗೆ ಜನರಿಗೆ ನೈತಿಕ ಮತ್ತು ಧಾರ್ಮಿಕ ಮಾರ್ಗದರ್ಶಕರಾಗಿ ನಿಂತರು. ಭಗವಂತನ ಮಹಿಮಾತಿಶಯಗಳನ್ನು ತಿಳಿಸಿಕೊಡುತ್ತ, ಹಿರಿದಾದ ಪರಮಾತ್ಮ ತತ್ತ್ವವನ್ನು ಜೀವರುಗಳು ಹೇಗೆ ಪ್ರೀತಿಸಬೇಕೆನ್ನುವುದು ಹೇಳಿಕೊಟ್ಟರು. ಪ್ರೀತಿಸುವದೇ ಭಕ್ತಿ ಎನ್ನುವುದು ದಾಸರುಗಳ ಮುಖ್ಯ ತಾತ್ತ್ವಿಕ ಪರಿಕಲ್ಪನೆಯಾಗಿತ್ತು. ಈ ತಾತ್ತ್ವಿಕತೆಯ ಅಂಗಗಳಲ್ಲಿ ಒಂದೆಂಬಂತೆ ಮಧ್ವ ತತ್ತ್ವಗಳು ಅವರ ರಚನೆಗಳಲ್ಲಿ ಬಂದವೇ ವಿನಃ ಅವೇ ಪ್ರಧಾನವಾಗಿ ಬರಲಿಲ್ಲ.

ಹರಿದಾಸರೆಲ್ಲಾ ಕನ್ನಡಿಗರೇ. ಹರಿದಾಸರು ಹಾಡಿದ್ದು, ಭಗವಂತನನ್ನು ಪ್ರೀತಿಸಿದ್ದು ಸಮಾಜವನ್ನು ತಿದ್ದುವ ನುಡಿಗಳನ್ನು ನೀಡಿದ್ದು ಅಚ್ಚ ಕನ್ನಡದಲ್ಲೇ. ಸ್ವಚ್ಛವಾದ ತಿಳಿಯಾದ ಕನ್ನಡದಲ್ಲೇ. ಹೀಗಾಗಿ ಕನ್ನಡ ನಾಡಿಗೆ ಭಾಷೆ,ಭಾವ ಶ್ರೀಮಂತಿಕೆಯನ್ನೂ ಹರಿದಾಸರು ಕೊಟ್ಟವರಾದರು. ಹರಿದಾಸ ಸಂಸ್ಕೃತಿ, ಹರಿದಾಸ ಸಾಹಿತ್ಯ ಎನ್ನುವುದು ಕನ್ನಡ ನಾಡಿಗೇ ವಿಶಿಷ್ಟವಾದೊಂದು ಪರಂಪರೆಯಾಗಿ ಹರಿದು ಬರುವಂತಾಯಿತು. ತತ್ತ್ವಜ್ಞಾನವನ್ನು ತಿಳಿಗನ್ನಡದಲ್ಲಿ ಮನೆಮನೆಗೆ ಹಂಚುವ ಹೊಸ ಕಾಯಕ, ಹೊಸ ವ್ಯವಸ್ಥೆಯನ್ನು ಹಮ್ಮಿಕೊಂಡು ಕನ್ನಡ ಸಾಹಿತ್ಯದ ಕಾಂತಿಯೆಲ್ಲ ದಾಸಸಾಹಿತ್ಯದಲ್ಲಿ ತುಂತುಂಬಿ ಬರುವಂತೆ ಕೀರ್ತನೆಗಳನ್ನು ರಚಿಸಿ ಹಾಡುತ್ತ ದಾಸಸಾಹಿತ್ಯವು ವ್ಯಾಸ ಸಾಹಿತ್ಯಕ್ಕೆ ಸರಿದೊರೆಯಾಗಿ ನಿಲ್ಲುವಂತೆ ಮಾಡಿದವರು ದಾಸಕೂಟದ ಹರಿದಾಸರುಗಳು.

ತಮ್ಮನ್ನು 'ಹರಿದಾಸ'ರೆಂದೇ ಇವರು ಕರೆದುಕೊಳ್ಳಲು ಕಾರಣವಿದೆ. ವಿಷ್ಣುವಿಗೆ ಬೇರೆ ಬೇರೆ ಹೆಸರುಗಳೂ ಇವೆ. ವಿಷ್ಣುದಾಸರೆಂದೋ, ವಿಠಲದಾಸರೆಂದೋ ತಮ್ಮ ಪರಂಪರೆಯನ್ನು ಕರೆದುಕೊಳ್ಳಲಿಲ್ಲವೇಕೆ? ಮಧ್ವಾಚಾರ್ಯರು "ಸರ್ವೇಷಾಂ ಬಿಂಬರೂಪೋ ಹರಿರೇವ" [ಎಲ್ಲ ಮುಕ್ತಿಯೋಗ್ಯ ಜೀವರಿಗೂ ಬಿಂಬರೂಪಿಯಾಗಿರುವ ಭಗವಂತನು ಹರಿಯೇ] ಎಂದು ತಮ್ಮ ಗೀತಾಭಾಷ್ಯದಲ್ಲಿ ಹೇಳಿದುದೇ ಇದಕ್ಕೇ ಕಾರಣವಾಗಿದೆ. ಹೇಗೆ ಇವನು"ಹರಿ"ಯೇ ಆಗಿದ್ದಾನೆ ಎಂದರೆ 'ಹರಿ' ಎಂಬ ಶಬ್ದಕ್ಕೆ ಪಾಪಗಳನ್ನೆಲ್ಲ ಹೋಗಲಾಡಿಸುವವನು ಎಂಬ ಅರ್ಥವಿದೆ. [ಹರಿರ್ಹರತಿ ಪಾಪಾನಿ ದುಷ್ಟ ಚಿತ್ತೈರಪಿ ಸ್ಮೃತಃ] ಅಲ್ಲದೆ 'ಹರಿ' ಎಂಬ ಮಾತಿಗೆ ಯಾವ ದೋಷವೂ ಎಂದೂ ಇಲ್ಲದವನು, ಸಾಧಕನ ಬದುಕಿಗೆ ಸಾರವಾದವನು ಎಂಬ ಅಕ್ಷರಾರ್ಥವಿದೆ. [ನಿತ್ಯ ಹೀನೋಖಿಲೈರ್ದೋಷೈಃ ಸಾರರೂಪೋ

ಯತೋ ಹರಿಃ] ಈ ಒಕ್ಕಣೆಗಳನ್ನೆಲ್ಲ ಮಧ್ವಾಚಾರ್ಯರೇ ನೀಡಿದ್ದಾರೆ. ಬಿಂಬನ ಲಕ್ಷಣ, ಗುಣಗಳೇ ಇವುಗಳಾದ್ದರಿಂದ "ಬಿಂಬೋಪಾಸನೆ"ಯನ್ನು ಸಾಧನೆಯಾಗಿ ಸ್ವೀಕರಿಸಿದ ದಾಸಕೂಟದವರು "ಹರಿದಾಸರು" ಎಂದೇ ಕರೆಯಿಸಿಕೊಂಡರು. "ಎನ್ನ ಬಿಂಬ ಮೂರುತಿಯ ಪೂಜಿಪೆನು ನಾನು, ಮನಮುಟ್ಟಿ ಅನುದಿನ ಮರೆಯದೆ ಮರೆಯದೆ" ಎಂದು ವ್ಯಾಸತೀರ್ಥರು ತಮ್ಮ ಕೀರ್ತನೆಯಲ್ಲಿ ತೋರಿದ ನಿಲುವೇ ಹರಿದಾಸರುಗಳಿಗೆ ಉಸಿರಾಯಿತು. ಮಾನಸ ಪೂಜೆಯ ಮಹತ್ವವು ಮಾನವೀಯ ಗುಣಗಳ, ಸನ್ನಡತೆ ಸದಾಚಾರಗಳ ವ್ಯಕ್ತಿತ್ವದೊಳಗೆ ಮಾತ್ರ ಪರಿಗಣಿಲ್ಪಡುತ್ತದೆ ಎಂದು ಪುರಂದರದಾಸರೇ ಮೊದಲ್ಗೊಂಡು ದಾಸವರ್ಯರುಗಳು ಸಾರಿದರು, ಅಂತೆಯೇ ತಾವು ಬದುಕಿ ಬಾಳಿ ತೋರಿದರು.

* * * *

ದಾಸಕೂಟದ ವ್ಯಾಖ್ಯಾನಕಾರರು

ಪುರಂದರದಾಸರು

ಕನ್ನಡ ಹರಿದಾಸ ಪರಂಪರೆಯಲ್ಲಿ ಪ್ರಮುಖರೂ,ಪರಂಪರೆಯ ನೇತಾರರೂ, ದಾಸಕೂಟದ ಅಧ್ವರ್ಯುಗಳೂ ಅಗಿರುವವರು ಪುರಂದರದಾಸರು. ಕನ್ನಡ ಭಾಷೆಯ ಪ್ರಜ್ಞೆ, ಪ್ರಬುದ್ಧತೆಗಳಿಗೊಂದು ಸಾಕ್ಷಿಯಾಗಿ, ಜನರು ಆಡುವ ಮಾತನ್ನೇ ಕಾವ್ಯದ ಮೌಲ್ಯಕ್ಕೆ ಏರಿಸಿದವರಾಗಿ, ಸಾಹಿತ್ಯಕ್ಕೆ ಸಂಗೀತದ ಸಾಹಚರ್ಯನೀಡಿ ಕರ್ನಾಟಕ ಸಂಗೀತಕ್ಕೊಬ್ಬ ಗೌರವದ ಗುರುವಾಗಿ, ನೈತಿಕತೆಯ ನೆಲೆಗಟ್ಟಿನಲ್ಲಿ ಭಕ್ತಿ ತತ್ತ್ವದ ಪ್ರಚಾರಕರಾಗಿ "ದಾಸಸಾಹಿತ್ಯ"ವನ್ನು ಶ್ರೀಮಂತಗೊಳಿಸಿಕೊಟ್ಟವರು, 'ದಾಸಕೂಟ'ದ ಪ್ರಮುಖ ವ್ಯಾಖ್ಯಾನಕಾರರಾದವರು.

ಪುರಂದರದಾಸರು ಒಟ್ಟು ರಚಿಸಿದ ಕೃತಿಗಳ ಸಂಖ್ಯೆ ನಾಲ್ಕು ಲಕ್ಷದ ಇಪ್ಪತ್ತೈದು ಸಾವಿರ ಎಂಬ ಅಭಿಪ್ರಾಯವಿದ್ದರೂ ನಮಗೆ ಸಿಕ್ಕಿರುವ ಕೀರ್ತನೆಗಳು ಒಂದು ಸಾವಿರವನ್ನೂ ತಲುಪುವುದಿಲ್ಲ. ಅವರೇ ಸ್ವತಃ ಒಂದೆಡೆ "ನಾಲ್ಕು ಲಕ್ಷ ಇಪ್ಪತ್ತೈದು ಸಾವಿರ ಕೃತಿಯು। ಕಂತುಜನಕನ ನಾಮ ಘನಮಹಿಮೆ। ಸಂತಸದಿ ಶ್ರುತಿಸ್ಮೃತಿ ಸಮ್ಮತದಿಂದ। ಅಂತೆ ಪುರಂದರವಿಠಲನೆಂದು ವ್ಯಾಸಮುನಿಗಳು ಪೇಳಿಸಿದರು" ಎಂದು ಹೇಳಿ ಕೊಂಡಿದ್ದಾರೆ. ಇಷ್ಟಲ್ಲದೆ ಅವರೇ "ವಾಸುದೇವನ ನಾಮಾವಳಿಯ ಕ್ಲುಪ್ತಿಯನು। ವ್ಯಾಸರಾಯರ ದಯದಿಂದ ಬಿನ್ನೈಸುವೆನು" ಎನ್ನುತ್ತ ತಮ್ಮ ಕೃತಿಗಳ ವಸ್ತುವಿವರಗಳನ್ನು ವಿಭಜಿಸಿಯೂ ಕೊಟ್ಟಿದ್ದಾರೆ. ಮುಂದೆ ದಾಸಪರಂಪರೆಯಲ್ಲಿ ಬಂದ ವಿಜಯದಾಸರೂ ಪುರಂದರದಾಸರ ಕೃತಿಗಳ ಒಟ್ಟು ಸಂಖ್ಯೆ, ಅವುಗಳಲ್ಲಿನ ವಸ್ತು ವಿವರಗಳನ್ನು ಕುರಿತ ಪಟ್ಟಿ ನೀಡುತ್ತಾ "ತ್ರಿಪಾದ ಕಡಿಮೆ ಐದು ಲಕ್ಷ, ಇಷ್ಟಾದವು ದಾಸರು ಪೇಳಿದ ಪದ" ಎಂದಿದ್ದಾರೆ. ಇಂದಿರೇಶ ಕವಿ ಬರೆದ 'ದಾಸಾರ್ಯ ಸ್ತುತಿ'ಯಲ್ಲಿನ ಪ್ರಕಾರ ಪುರಂದರದಾಸರು ರಚಿಸಿದ ಕೃತಿಗಳು ನಾಲ್ಕು ಲಕ್ಷದ ಎಪ್ಪತ್ತೈದು ಸಾವಿರ. ಇಷ್ಟೆಲ್ಲ ಎಣಿಕೆಗಳು ಸಿಕ್ಕಿದ್ದರೂ ಕೃತಿಗಳು ಮಾತ್ರ ಪೂರ್ತಿಯಾಗಿ ಉಪಲಬ್ಧವಿಲ್ಲದೆ, ಕೇವಲ ಸಾವಿರವನ್ನೂ ಮುಟ್ಟದ ಸ್ಥಿತಿ ಇದೆ. ದೊರೆತಿರುವ ಅವರ ಕೃತಿಗಳು ಏಳುನೂರನ್ನೂ ಮೀರುವುದಿಲ್ಲ. ಉಳಿದ ಅಪಾರ ಸಂಖ್ಯೆಯ ಕೃತಿಗಳು ಹೇಗೆ ನಷ್ಟವಾದವೋ ಹೇಳಬರುವಂತಿಲ್ಲ.

ದಾಸಕೂಟದ ಪ್ರವರ್ತಕರಾಗಿದ್ದ ಅವರ ಕೃತಿಗಳನ್ನು ಇಷ್ಟಾದರೂ ಬರೆದಿಟ್ಟು ಸಂಗ್ರಹಿಸಿಟ್ಟವರು ಅವರ ಅನುಯಾಯಿಗಳೇ, ಶಿಷ್ಯರೇ ಆಗಿದ್ದ ದಾಸಕೂಟದವರೇ ಆದರೂ ಪುರಂದರದಾಸರಿಗೆ ಸರಿಮಿಗಿಲೆನಿಸುವ ಯಾವ ಶಿಷ್ಯರಾಗಲೀ, ನಿಷ್ಠಾವಂತ ಆಪ್ತರೆನಿಸಿಕೊಂಡ ಯಾವ ಅನುಯಾಯಿಗಳಾಗಲಿ ಇದ್ದಂತಿಲ್ಲ, ಯಾರ ಹೆಸರೂ ಹಾಗೆ ಕೇಳಬರುವುದೇ ಇಲ್ಲ.

ಪುರಂದರ ದಾಸರ ಜನನ, ಊರು, ಮರಣಕಾಲ ಯಾವುದೂ ಖಚಿತವಾಗಿ ತಿಳಿಯುವುದಕ್ಕೆ ಸಾಧ್ಯವೇ ಇಲ್ಲ. ಸಿಕ್ಕಿರುವ ಪ್ರಮಾಣಗಳನ್ನು ಅನುಸರಿಸಿ ಅವರ ಬದುಕಿನ ಕಾಲ ಮತ್ತು ಅವರು ಯಾವ ಊರಿನಿಂದ ಬಂದವರೆಂದು ವಿದ್ವಾಂಸರುಗಳು ಚರ್ಚೆ ನಡೆಸಿದ್ದಾರೆ. ಅವರಿಗೆ ಜನ್ಮತಃ ಮೊದಲಿನಿಂದಲೂ ಸಾಹಿತ್ಯ ಸಂಗೀತಗಳ ಸಂಸ್ಕಾರವಿತ್ತೆ? ಪಂಡರಾಪುರದ ವಿಠ್ಠಲನಿಗೂ ಅವರಿಗೂ ಹೇಗೆ ಸಂಪರ್ಕ ಸಂಬಂಧ? ಬದುಕಿನ ಸಾಧನೆಗಳೇನು? ಶ್ರೀಮಂತಿಕೆಯಿಂದ ಹಾಗೆ ಒಮ್ಮೆಲೆ ವೈರಾಗ್ಯದ ಬದುಕಿಗೆ ಧುಮ್ಮಿಕ್ಕಿಬಿಡುವುದಕ್ಕೆ ಸಾಧ್ಯವಾಗಿದ್ದು ಹೇಗೆ? ಅಷ್ಟೊ ಹಾಡುಗಳನ್ನು ಅವರು ಯಾವಾಗ ಬರೆಯುತ್ತಿದ್ದರು? ಹೇಗೆ ಎಲ್ಲಿ ಹಾಡುತ್ತಿದ್ದರು? ಅವುಗಳನ್ನು ಯಾರು ಬರೆದುಕೊಳ್ಳುತ್ತಿದ್ದರು? ಅವರ ಜನನ ಕಾಲವೇನು? ಎಷ್ಟು ವರ್ಷಗಳು ಬದುಕಿದ್ದರು? ಈ ಯಾವ ಯಾವ ಅಂಶಗಳ ಬಗ್ಗೆಯೂ ನಿಷ್ಕೃಷ್ಟವಾಗಿ ತಿಳಿದು ಬಂದಿಲ್ಲ. ಅವರ ವೈಯಕ್ತಿಕ ಬದುಕಿನ ಒಂದೆರಡು ದಂತಕಥೆಗಳು ಪ್ರಚಲಿತವಿವೆ. ಹೊರತಾಗಿ ವೈಯಕ್ತಿಕ ವಿವರ ಸಿಕ್ಕಿಲ್ಲ.

ಅವರು ಹಂಪೆಗೆ ಬಂದು ವ್ಯಾಸತೀರ್ಥರ ಶಿಷ್ಯರಾಗಿ ಸ್ವೀಕೃತಗೊಂಡವರಾಗಿದ್ದು, ವ್ಯಾಸತೀರ್ಥರ ಪರಮನೆಚ್ಚಿನ ಶಿಷ್ಯನಾಗಿ ಗುರುಗಳ ಪ್ರೋತ್ಸಾಹದಿಂದ ದಾಸಕೂಟ ಕಟ್ಟಿದ್ದು, ವಿಜಯನಗರ ಸಾಮ್ರಾಜ್ಯದ ಅವನತಿಯ ಕಾಲದಲ್ಲಿ ಅವರು ವೃದ್ಧಾಪ್ಯದಲ್ಲಿದ್ದದ್ದು ಈ ಎಲ್ಲ ಸಂಗತಿಗಳು ಮಾತ್ರ ಅವರ ಹಾಡುಗಳಿಂದಲೂ, ಕೃಷ್ಣದೇವರಾಯನ ಶಾಸನವೊಂದರಿಂದಲೂ ವ್ಯಾಸತೀರ್ಥರ ಹಾಡುಗಳಿಂದಲೂ ನಿರ್ದಿಷ್ಟವಾಗಿ ತಿಳಿಯಬಹುದಾಗಿದೆ.

ದಾಸಕೂಟದ ಮತ್ತೊಬ್ಬ ನಾಯಕರೆನಿಸಿದ ಚೀಕಲಪರವಿಯ ವಿಜಯದಾಸರು ಪುರಂದರರ ಬದುಕಿನ ಕೆಲವು ವಿವರಗಳನ್ನು ತಿಳಿಸಿದ್ದಾರೆ ನಿಜ, ಆದರೆ ಅವರು ಪುರಂದರದಾಸರ ಸಮಕಾಲೀನರೇನೂ ಅಲ್ಲ, ಪುರಂದರದಾಸರ ಕಾಲದ ನಂತರದ ನೂರುವರ್ಷಗಳು ದಾಟಿದ ಮೇಲೆ ವಿಜಯದಾಸರು ಜನಿಸಿದ್ದು [೧೬೮೭–೧೭೫೫] ಹೀಗಾಗಿ ಅವರಿಗೆ ತಿಳಿದ ವಿಚಾರಗಳಲ್ಲಿ ಏನೇನು ಮಾರ್ಪಾಡುಗಳಾಗಿದ್ದವೋ, ವಿವರಗಳು ಹೇಗೆ ತಿರುಚಿಕೊಂಡಿದ್ದವೋ ಹೇಳಲಾಗದು.ವಿಜಯದಾಸರ ಹಾಡುಗಳ ಮೂಲಕ ಕೆಲವೊಂದು ವಿವರಗಳು ತಿಳಿಯುತ್ತವೆಯಾದರೂ ಕಾಲದ ಅಂತರದಿಂದಾಗಿ ಈ ಅಂಶಗಳೆಲ್ಲ ತೀರಾ ಖಚಿತವೇ ಎನ್ನಲಾಗದು. ಸತ್ಯದ ಲೇಪವು ಅಷ್ಟಿಷ್ಟು ಇಲ್ಲದೆಯೂ ಇಲ್ಲವೆನ್ನಬಹುದು.

ಇಷ್ಟೆಲ್ಲ ಕೃತಿಗಳನ್ನು ನಮ್ಮ ಪಾಲಿಗೆ ಬಿಟ್ಟು ಹೋದ ಪುರಂದರದಾಸರು ತಮ್ಮ ಜನನ ಕಾಲ, ಊರು, ಬಾಲ್ಯ, ಶಿಕ್ಷಣ, ವೈಯಕ್ತಿಕ ಬದುಕಿನ ಯಾವ ಯಾವ ವಿವರಗಳನ್ನು ಕಿಂಚಿತ್ತಾದರೂ ತಮ್ಮ ಯಾವ ಕೃತಿಗಳಲ್ಲಿಯೂ ಸೂಚಿಸಲಿಲ್ಲ ಎನ್ನುವುದು ಅಚ್ಚರಿ ಹುಟ್ಟಿಸುತ್ತದೆ. ತಿಳಿದು ಬಂದಿರುವಂತೆ 'ನವಕೋಟಿ ನಾರಾಯಣ'ನೆಂಬ ಬಿರುದು ಇದ್ದಂಥ ಶ್ರೀಮಂತಿಕೆಯನ್ನು ತ್ಯಾಗ ಮಾಡಿ ಪರಮವೈರಾಗ್ಯದ ಬದುಕನ್ನು ಅಪ್ಪಿಕೊಂಡು ಹರಿದಾಸರಾದವರು ಅವರು. ಇಂಥ ವೈರಾಗ್ಯ ನಿಧಿಯಾಗಿ ತಮ್ಮ ವೈಯಕ್ತಿಕ ಜೀವನ ವಿಚಾರಗಳನ್ನು ಮುಂದಿನವರಿಗೆ ತಿಳಿಯಲೆಂದಾದರೂ ಎಲ್ಲೂ ದಾಖಲಿಸದೆ ದಾಸರಾಗಿ ಹರಿಸಂಕೀರ್ತನೆ ಮಾಡುತ್ತ ಬದುಕಿ ಹೊರಟುಹೋದರು. ತಮ್ಮ ಕೃತಿಗಳ ಮರ್ಮ, ಬೋಧನೆ, ತತ್ವವಿಚಾರಗಳಷ್ಟೆ ಉಳಿದರೆ ಸಾಕು, ಕರ್ತೃವಿನ ಬಗೆಗಿನ ಕಾಳಜಿ, ಹೊಗಳಿಕೆ ಯಾವುದೂ ಮುಂದಿನ ದಿನಗಳ ಜನರಲ್ಲಿ ಬೆಳೆದು ಬರುವ ಅಗತ್ಯವೇ ಇಲ್ಲ ಅಥವಾ ಬೇಡ ಎಂಬುದನ್ನು ನಿರ್ಧರಿಸಿಕೊಂಡು ಈ ಬಗ್ಗೆ ಉದ್ದೇಶಿತ ಮೌನಿಯಾಗಿ ಉಳಿದುಬಿಟ್ಟಂತೆ ತೋರುತ್ತದೆ. ತನ್ನ ಬಗೆಗಿನ ಕೀರ್ತಿ, ಸನ್ಮಾನಗಳೆಂದೂ ಸ್ಮರಣೆಯಾಗುವುದು ಬೇಡವೆಂಬ ವೈರಾಗ್ಯವೇ ಈ ವಿಷಯದಲ್ಲಿ ಅವರು ತಾಳಿಕೊಂಡಂತೆ ಕಾಣುತ್ತದೆ. ನಮ್ಮ ಕಾವ್ಯ ಪರಂಪರೆಯಲ್ಲಿ ಹೀಗೆ ಎಷ್ಟೋ ಕವಿಗಳು ತಮ್ಮ ಬಗ್ಗೆ ಹೇಳಿಕೊಂಡಿಲ್ಲ ಎನ್ನುವುದು ನಿಜವಾದರೂ ಪಂಪ, ರನ್ನ ಮುಂತಾದ ಎಷ್ಟೋಷ್ಟೋ ಕವಿಗಳು ತಮ್ಮ ಜೀವಿತದ ಬಗ್ಗೆ ನಿಖರವಾದ ವಿವರಗಳನ್ನು ಬಿಟ್ಟು ಹೋಗಿರುವುದೂ ಅಷ್ಟೇ ಸತ್ಯವಾಗಿದೆ. ಆದರೆ ಪುರಂದರದಾಸರು ತಮ್ಮ ಗುರುಗಳ ಬಗ್ಗೆ, ಸಮಕಾಲೀನರು ಕೆಲವರ ಬಗ್ಗೆ ಕೆಲವು ಕೃತಿಗಳಲ್ಲಿ ದಾಖಲಿಸಿದ್ದಾರಾದರೂ ತಮ್ಮ ಬಗ್ಗೆ, ದಾಸರಾಗುವ ಮುಂಚಿನ ತಮ್ಮ ಬದುಕಿನ ಬಗ್ಗೆ ಮೌನಿಯೇ ಆಗಿ ಉಳಿದುಬಿಟ್ಟಿದ್ದಾರೆ.

ತಾವು ಹರಿದಾಸರಾಗಿ ಪರಿವರ್ತನೆಯಾಗಲು ತಮ್ಮ ಪತ್ನಿ ಕಾರಣವೆನ್ನುವುದನ್ನು "ಆದದ್ದೆಲ್ಲಾ ಒಳಿತೇ ಆಯಿತು, ನಮ್ಮ ಶ್ರೀಧರನ ಸೇವೆಗೆ ಸಾಧನ ಸಂಪತ್ತಾಯಿತು" ಎಂಬ ತಮ್ಮ ಕೀರ್ತನೆಯಲ್ಲಿ ಮನಗಾಣಿಸಿದ್ದಾರೆ, "ಹೆಂಡತಿ ಸಂತತಿ ಸಾವಿರವಾಗಲಿ। ದಂಡಿಗೆ ಬೆತ್ತ ಹಿಡಿಸಿದಳಯ್ಯ" ಎಂದು ಮನದುಂಬಿ ಹಾರೈಸಿದ್ದಾರೆ. ಪತ್ನಿಯೇ ತಮಗೆ ಜಪಸರ, ಗೋಪಾಳಬುಟ್ಟಿ ಹಿಡಿಸಿದವಳು. ತುಳಸೀಮಾಲೆ ಹಾಕಿಸಿ ತಂಬೂರಿ ಹಿಡಿದು ಹಾಡುತ್ತ ಹೋಗಲು ಪ್ರೇರಕಳಾದಳು ಎಂದು ಸೂಚಿಸಿದ್ದಾರೆ. ಆದರೆ ಈ ಪರಿವರ್ತನೆಯ ಮುಂಚೆ ತಾನು ಭೂಪತಿಯಂತೆ ಗರ್ವಿಸುತ್ತಿದ್ದೆ, ಅರಸನಾಗಿರುವಂಥ ಶೈಲಿಯಲ್ಲಿ ಬದುಕಿದ್ದೆ ಎಂದು ಮಾತ್ರ ಹೇಳುತ್ತಾರಲ್ಲದೆ ಬೇರಾವ ಮುಂಚಿನ ವಿವರಗಳನ್ನೂ, ಈ ಪರಿವರ್ತನೆ ಹೇಗಾಯಿತು ಎಂಬುದನ್ನೂ ಎಲ್ಲಿಯೂ ಹೇಳಿಕೊಂಡಿಲ್ಲ.

ಪುರಂದರದಾಸರ ಪತ್ನಿಯ ಬಗೆಗಿನ ಮೂಗುತಿಯ ಕಥೆಯೊಂದು ಪ್ರಚಲಿತವಿದ್ದು ಸರ್ವರಿಗೂ ತಿಳಿದಿರುವುದೇ ಆಗಿದೆ. ಅಂತೂ ಧಣಿಯಾಗಿ ಬದುಕುತ್ತಿದ್ದ ಜೀವವು ದಾಸನಾಯಿತು. ಹರಿಪ್ರೀತಿಯನ್ನು ಧರಿಸಿಕೊಂಡಿತು. ವೈಭವದ ಬದುಕನ್ನು ತ್ಯಜಿಸಿ ವೈರಾಗ್ಯಶೀಲವಾಯಿತು. ಮಡದಿಯ ಸಂಸ್ಕಾರದಿಂದಲೇ ಮನಃ ಪರಿವರ್ತನೆಯಾಗುವಂತಾಯಿತು. ಸಂಗ್ರಹದಲ್ಲೇ ಸಂತೋಷ ಉಣ್ಣುತ್ತಿದ್ದ ಜಿಪುಣತ್ವದ ಜೀವನವು ಹಾದಿ ಹೊರಳಿ ಸಹನೆ, ಅಂತಃಕರಣ, ತ್ಯಾಗಶೀಲತೆಯ ಉದಾತತ್ತಗೆ ಮುಡಿಪಾಯಿತು. ಕೃಪಣತ್ವದ ಬದುಕಿನಲ್ಲಿ ಅಡಗಿಕೂತಿದ್ದ ಕವಿತ್ವ ಗುಣವು ದಾಸನಾದ ಮೇಲೆ ಹಸನಾಗಿ ಹೊರಹೊಮ್ಮಿತು. ಶ್ರೀಮಂತಿಕೆಯ ಅಮಲಿನಲ್ಲಿ ಜೀವದೊಳಗೆ ಉಡುಗಿಹೋಗಿದ್ದ ಸಂಗೀತ ಸಂಸ್ಕಾರವು ಹರಿಪ್ರೀತಿಯ ಪಥದಲ್ಲಿ ಸೊಗಸಾಗಿ ಚಿಮ್ಮಿ ಹರಿಯಿತು.

ಸಾಹಿತ್ಯ ಸಂಗೀತಗಳ ಸಂಸ್ಕಾರವೆನ್ನುವುದು ಮೂಲಸ್ರೋತವಾಗಿ ಜೀವಸ್ವಭಾವದಲ್ಲಿಯೇ ಇದ್ದು ಕಾಲಪ್ರೇರಣೆಯಲ್ಲಿ ಹೊರ ಬರಬೇಕೇ ವಿನಹ ಇದ್ದಕ್ಕಿದ್ದಂತೆ ಹರಿದಾಸನಾದೊಡನೆ ಹೊಮ್ಮಿಹೊಳೆಯಾಗಿ ಪ್ರವಹಿಸುವಂಥದ್ದಲ್ಲ. ಕರ್ನಾಟಕ ಸಂಗೀತಕ್ಕೇ ಪ್ರಾಚಾರ್ಯನೆನಿಸುವಂಥ ಕೊಡುಗೆಯನ್ನು, ದಾಸಸಾಹಿತ್ಯಕ್ಕೇ ಅಮೂಲ್ಯವಾದ ಕವಿತಾಗುಣದ ಕೀರ್ತನೆಗಳನ್ನು ನೀಡಿದ ಪುರಂದರದಾಸರು ಶ್ರೀನಿವಾಸನಾಯಕನಾಗಿರುವಾಗಲೆ (ಇದು ಅವರ ಹುಟ್ಟು ಹೆಸರು ಎಂದು ಪ್ರಚಲಿತವಿದೆ) ಬಾಲ್ಯದಿಂದಲೂಸಂಗೀತ, ಕಾವ್ಯವಿದ್ಯೆಗಳ ಶಿಕ್ಷಣ ದೊರಕಿದ್ದಿರಲೇ ಬೇಕು. ಭಕ್ತಿಪೂರ್ಣವಾದ ವಾತಾವರಣವೂ ಮನೆತನದಲ್ಲಿ ತುಂಬಿದ್ದಿರಬಹುದಾಗಿದೆ. ಒಳ್ಳೆಯ ವಿದ್ಯಾಭ್ಯಾಸ, ಮತಧರ್ಮ ಪದ್ಧತಿಗಳ ನಂಬಿಕೆಗಳು, ಆಚಾರಗಳೆಲ್ಲ ಆ ಮನೆತನದಲ್ಲಿದ್ದಿರಬಹುದು. ಸಂಗೀತದಲ್ಲಿ ವ್ಯುತ್ಪತ್ತಿ, ಅಭ್ಯಾಸ ಬಾಲ್ಯದಲ್ಲಿಯೇ ಖಂಡಿತಾ ದೊರೆತಿರಬೇಕು. ಇಲ್ಲದಿದ್ದಲ್ಲಿ ಸಂಗೀತ ಕಲೆಯಲ್ಲಿ ನಿಷ್ಣಾತರಾಗಿ ಸಂಗೀತ ಕೃತಿರಚನೆಗಳನ್ನು ಮಾಡುವುದು ತಟ್ಟನೆ ಒದಗಿಬಿಡುವ ತಿಳುವಳಿಕೆ ಅಲ್ಲ. ಹೀಗಾಗಿ ಕಾವ್ಯಸಂಸ್ಕಾರ, ಸಂಗೀತ ಶಿಕ್ಷಣ ಬಾಲ್ಯದಿಂದಲೂ ಅವರಿಗೆ ದೊರಕಿತ್ತೆನ್ನುವುದರಲ್ಲಿ ಸಂದೇಹವಿಲ್ಲ. ಅವರನ್ನು ಮದುವೆಯಾಗಿ ಬಂದ ಮಡದಿ ಸರಸ್ವತೀಬಾಯಿಯೂ ಸ್ವಭಾವತಃ ಸುಶೀಲೆ, ಸೌಜನ್ಯಪೂರಿತೆ ಮತ್ತು ದೈವಭಕ್ತೆ. ಇವೆಲ್ಲ ಸೇರಿ ಮುಂದಿನ ಪುರಂದರದಾಸರೆಂಬ ವಿಶೇಷವ್ಯಕ್ತಿತ್ವಕ್ಕೆ ಬುನಾದಿ ಹಾಕಿದ್ದಿರಬಹುದೆನ್ನುವುದು ನಿಸ್ಸಂದೇಹವಾಗಿದೆ.

ಕೆಲವು ದೊರೆತಿರುವ ಪ್ರಮಾಣಗಳ ಮೂಲಕ ಅವರ ಊರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಆರಗ ಎಂಬ ಪ್ರಾಂತ್ಯದಲ್ಲಿನ ಪುರಂದರ ಎಂಬ ಹಳ್ಳಿ ಎನ್ನುವುದು ಸೂಚಿತವಾಗುತ್ತದೆ. ಪುರಂದರಘಟ್ಟ ಅಥವಾ ಪಾಕಶಾಸನಪುರವೆಂದು ಇದಕ್ಕೆ ಹೆಸರಿತ್ತು.

ಪ್ರಖ್ಯಾತ ಸಂಶೋಧಕರಾದ ಶ್ರೀಕಪಟರಾಳ ಕೃಷ್ಣರಾಯರು ಪುರಂದರದಾಸರ ಜನ್ಮಸ್ಥಳವು ಈ ಮಲೆನಾಡಿನ ತೀರ್ಥಹಳ್ಳಿ ಬಳಿಯ 'ಪುರಂದರಘಟ್ಟ' ಎಂಬ ಹಳ್ಳಿಯೇ ಎನ್ನುವುದನ್ನು ಸ್ಪಷ್ಟಪಡಿಸಿದ್ದಾರೆ. ಅಂದಿನಕಾಲದಲ್ಲಿ ಪ್ರಖ್ಯಾತವಾಗಿದ್ದ ವಾಣಿಜ್ಯ ವ್ಯಾಪಾರ ಕೇಂದ್ರವಾಗಿದ್ದು ಅಲ್ಲಿ ಜೈನಮತಸ್ಥರೂ, ನಾಯಕ ಎಂಬ ಹೆಸರಿನ ಅನೇಕ ಬ್ರಾಹ್ಮಣ ಮನೆತನಗಳೂ ವಾಸಿಸುತ್ತಿದ್ದವು. ಆದ್ಯರೆಂಬ ಹೆಸರಿನ ಅನೇಕ ಜನರು ವಿದ್ಯೆ, ಭಕ್ತಿ ಮಾರ್ಗದಲ್ಲಿದ್ದ ಮೇಧಾವಿಗಳಾಗಿದ್ದರು. ಅಲ್ಲಿ ದೊರೆತಿರುವ ೧೪೬೪ರ ಶಾಸನವೊಂದರ ಮೂಲಕ ಆರಗ ಪ್ರದೇಶದಲ್ಲಿ ಪಾಂಡುರಂಗಭಕ್ತಿ ಪ್ರಚಲಿತವಿತ್ತೆಂದೂ ತಿಳಿಯುತ್ತದೆ. ಈ ಆರಗವು ಪಶ್ಚಿಮದಲ್ಲಿ ಉಡುಪಿಗೂ, ಈಶಾನ್ಯದಲ್ಲಿ ಪಂಢರಪುರಕ್ಕೂ ನಡುವೆಯ ಸ್ಥಳವಾಗಿದೆ. ಇದೇ ಪುರಂದರದಾಸರ ಊರು ಎನ್ನುವುದು ಒಪ್ಪಿಕೊಳ್ಳಬೇಕಾದ ಸಂಗತಿಯೇ ಆಗಿದೆ.

ಇನ್ನು ಕೆಲವರು ಮಹಾರಾಷ್ಟ್ರದ ಪುಣೆಯ ಹತ್ತಿರದ ಪುರಂದರಘಡ ಅವರ ಊರು ಎನ್ನುತ್ತಾರಾದರೂ ಇದನ್ನು ಒಪ್ಪಲು ಅಸಾಧ್ಯವಿದೆ. ಅಲ್ಲಿ ಶ್ರೀನಿವಾಸನಾಯಕನೆಂಬುವವನಾಗಲೀ ಅವನ ಪೂರ್ವಜರಾಗಲೀ ಹಣದ ಲೇವಾದೇವಿ ವರ್ತಕರಾಗಿದ್ದರೆಂಬ ಸಂಗತಿಗೆ ಭೌಗೋಳಿಕ ಆಧಾರವಾಗಲೀ, ಭಾಷೆಯ ಅಥವಾ ಸಾಮಾಜಿಕ ಸಂಬಂಧವಾಗಲೀ ಇದ್ದಿತೆನ್ನುವುದಕ್ಕೆ ಯಾವ ಆಧಾರ ಪ್ರಮಾಣಗಳು ಇಲ್ಲ. ಆ ಪ್ರದೇಶದ ಸುತ್ತಮುತ್ತಲಲ್ಲಿಯೂ ಕೂಡ ಇವರ ಬಗ್ಗೆ ಜನಜನಿತ ಕಥೆಗಳು ಕೂಡಾ ಇಲ್ಲ. ಅಲ್ಲಿ ಮರಾಠಿ ಮಾತ್ರ ಮಾತಾಡುವವರೇ. ಆ ಕಾಲದ ಮರಾಠಿ ದಾಖಲೆ ದಂತಕಥೆಗಳಲ್ಲಿ ಎಲ್ಲಿಯೂ ಪುರಂದರದಾಸರನ್ನು ಕುರಿತ ಯಾವುದೇ ಸೂಚನೆ ಅಪ್ಪಿತಪ್ಪಿ ಕೂಡ ನುಸುಳಿಲ್ಲ.

ಪುರಂದರದಾಸರ ಕೃತಿಗಳ ಭಾಷೆ ಶಿಷ್ಟಕನ್ನಡ. ಆರಗದ ಸುತ್ತಮುತ್ತ ಇರುವ ಪ್ರಾದೇಶಿಕ ಕನ್ನಡಕ್ಕೂ ದಾಸರ ಕೃತಿಗಳಲ್ಲಿಯ ಕನ್ನಡಕ್ಕೂ ವ್ಯತ್ಯಾಸವಿದೆ, ಆದ್ದರಿಂದ ಇದು ದಾಸರ ಪೂರ್ವಬದುಕಿನ ಊರಲ್ಲ ಎಂದು ಕೆಲವರು ಆಕ್ಷೇಪಿಸಬಹುದು. ಆದರೆ ಶ್ರೀನಿವಾಸ ನಾಯಕನಾಗಿದ್ದಾಗ ವ್ಯಾಪಾರ ವಹಿವಾಟಿನ ಕಾರಣದಿಂದಾಗಿ ಬಿಜಾಪುರ, ಸೊಲ್ಲಾಪುರವೇ ಮುಂತಾಗಿ ಹಂಪೆಯೂ ಸೇರಿದಂತೆ ಬೇಕಷ್ಟು ಊರುಗಳ ತಿರುಗಾಟ, ಅಲ್ಲಿನ ಜನರ ಭಾಷಾಸಂಪರ್ಕ ಚೆನ್ನಾಗಿದ್ದು ಮುಂದೆ ಕೃತಿರಚನೆಯಲ್ಲಿ ಶಿಷ್ಟಭಾಷೆಯಾಗಿ ಒದಗಿರುವ ಸಂಭವವಿದ್ದೇ ಇದೆ. ಇಷ್ಟಕ್ಕೂ ಅವರ ರಚನೆಗಳಲ್ಲಿ ಕೆಲವೆಡೆ ಎಳನೀರಿನ ಬದಲಾಗಿ 'ಸೀಯಾಳ', ಸ್ನಾನ ಮಾಡುವುದು ಎಂಬುದರ ಬದಲಿಗೆ "ಮೀಯುವುದು" 'ಮಿಂದು' ಇತ್ಯಾದಿ ಪದಪ್ರಯೋಗಳಿದ್ದು ಅವುಗಳು ತೀರ್ಥಹಳ್ಳಿ, ಮಲೆನಾಡಿನ ಕಡೆಯ ಭಾಷೆಯ ಪ್ರಾದೇಶಿಕತೆಯನ್ನು ಹೊಂದಿರುವುವೇ ಆಗಿವೆ. ಅಚ್ಚ ಮತ್ತು ಸ್ವಚ್ಛವಾದ ಸರಳ ತಿರುಳುಗನ್ನಡದ ಅವರ ಕೃತಿಗಳ ಭಾಷೆಯನ್ನು ಗಮನಿಸಿದಾಗ ಅವರು ಅಚ್ಚ ಕನ್ನಡದ ಹಳ್ಳಿ ಪುರಂದರ ಘಟ್ಟದಿಂದಲೇ ಬಂದವರು ಎನ್ನುವುದು ಸಾಧಿತವಾಗುತ್ತದೆಯೇ ಹೊರತು ಮಹಾರಾಷ್ಟ್ರದ ಯಾವುದೋ ಮರಾಠಿ ಮೂಲದಿಂದ ಬಂದವರೆನ್ನುವುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಕುಮಾರವ್ಯಾಸನ ಭಾರತದಲ್ಲಿರುವ ಹಾಗೆ ಮರಾಠೀ ಪದಪ್ರಯೋಗಗಳು ಅಪ್ಪಿತಪ್ಪಿಯೂ ಪುರಂದರರ ಕೃತಿಗಳಲ್ಲಿ ಇಲ್ಲವೇ ಇಲ್ಲ.

ದಾಖಲೆಯಾಗಿ ಪುರಂದರದಾಸರ ಹೆಸರು ಮೊತ್ತ ಮೊದಲು ಕಾಣಿಸುವುದು ಬಳ್ಳಾರಿ ಜಿಲ್ಲೆಯ ಕಮಲಾಪುರದ (ಈಗಿನ ಕಂಪಲಿ) ತಾಮ್ರಶಾಸನವೊಂದರಲ್ಲಿ. ೧೫೨೬ ರ ಫೆಬ್ರವರಿ ೨೪ನೆಯ ದಿನಾಂಕದಂದು [ಶಾಲಿವಾಹನ ಶಕ ೧೪೪೭ ಪಾರ್ಥಿವ ಸಂವತ್ಸರದ ಫಾಲ್ಗುಣ ಮಾಸದ ಶುದ್ಧ ದ್ವಾದಶಿಯಂದು] ಹೊರಡಿಸಿರುವ ಈ ಶಾಸನ ವಿಜಯನಗರದ ಅರಸ ಕೃಷ್ಣದೇವರಾಯನದ್ದು. ಇದರಲ್ಲಿ ರಾಜಗುರು ವ್ಯಾಸತೀರ್ಥರಿಗೆ 'ವ್ಯಾಸಸಮುದ್ರ' ಎಂಬ ಹೆಸರಿನ ಬೆಟ್ಟಕೊಂಡ ಗ್ರಾಮವನ್ನು ಏಕಭೋಗ್ಯ ದತ್ತಿಯಾಗಿ ಕೊಟ್ಟಿದ್ದು, ಈ ದತ್ತಿಯನ್ನು ಪಡೆದುಕೊಂಡ ವ್ಯಾಸತೀರ್ಥರು ಅದನ್ನು ಮುನ್ನೂರ ಎಂಟು ಮಂದಿ ವಿದ್ವಾಂಸರಿಗೆ ವೃತ್ತಿಗಳನ್ನಾಗಿ (ವಿದ್ಯಾದಾನ)ಹಂಚಿಕೊಟ್ಟಿರುವ ಉಲ್ಲೇಖವಿದೆ.

ಹೀಗೆ ವ್ಯಾಸತೀರ್ಥರಿಂದ ವಿದ್ಯಾದಾನ ವೃತ್ತಿಗಳನ್ನು ಪಡೆದುಕೊಂಡ ವಿದ್ವಾಂಸರಲ್ಲಿ ಶ್ರೀಪುರಂದರದಾಸರ ಮಕ್ಕಳಾದ ಮೂವರ ಹೆಸರುಗಳಿವೆ. ಲಕ್ಷ್ಮಣದಾಸ,ಹೇಬಣದಾಸ, ಮತ್ತು ಮಧ್ವದಾಸ ಇವರು ಮೂವರನ್ನೂ ವಶಿಷ್ಟಗೋತ್ರದವರೆಂದೂ, ಯಜೂಷ ಶಾಖೆಯವರೆಂದೂ ಆ ಶಾಸನದ ಒಕ್ಕಣೆ ಇದೆ. ಶ್ರೀಪುರಂದರದಾಸಜ ಎಂದೇ ಈ ಮೂವರನ್ನು ಕುರಿತು ಒಕ್ಕಣೆ ಸಂಬೋಧಿಸುತ್ತದೆ. ಈ ಶಾಸನ ಬಿಟ್ಟರೆ ಬೇರೆಲ್ಲಿಯೂ ಪುರಂದರದಾಸರ ಹೆಸರಿರುವ ಒಂದೇ ಒಂದು ಶಾಸನ ದೊರಕಿಲ್ಲ.

ಈ ಶಾಸನದ ಪ್ರಕಾರ ಪುರಂದರದಾಸರಿಗೇನೂ ವ್ಯಾಸತೀರ್ಥರು ವೃತ್ತಿಯನ್ನು ಹಂಚದೆ ಅವರ ಮಕ್ಕಳಿಗೆ ಹಂಚಿರುವುದು ಸ್ಪಷ್ಟವಾಗಿದೆ. ಇಲ್ಲಿಯೂ ಪುರಂದರದಾಸರ ವಿರಕ್ತ ಸ್ವಭಾವವೇ ವೃತ್ತಿಯನ್ನು ಒಲ್ಲೆನೆಂದಿರುವ

ಸಾಧ್ಯತೆಯಿದೆ. ಏಕೆಂದರೆ ಇದು ಪುರಂದರದಾಸರು ಬದುಕಿದ್ದಾಗಲೇ ಹೊರಡಿಸಿದ ಶಾಸನವಾಗಿದೆ. ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ [೧೫೦೯-೧೫೩೦] ಪುರಂದರದಾಸರ ಮೂವರು ಮಕ್ಕಳು ಹಂಪಿಯಲ್ಲೇ ಇರುತ್ತಿದ್ದು, ಅವರುಗಳೂ ಆಗಲೇ ದಾಸದೀಕ್ಷೆಯನ್ನು ಪಡೆದವರಾಗಿದ್ದು [ದಾಸ ಎಂದೇ ಮೂವರನ್ನೂ ಕರೆಯಲಾಗಿದೆ] ವೃತ್ತಿದಾನ ಪಡೆಯಲು ಯೋಗ್ಯತೆ ಪಡೆದವರಾಗಿದ್ದರೆಂದು ಇದರಿಂದ ತಿಳಿಯಬಹುದಾಗಿದೆ. ವ್ಯಾಸತೀರ್ಥರಿಂದಲೇ ಇವರುಗಳಿಗೂ ದಾಸದೀಕ್ಷೆ ದೊರಕಿರಬಹುದಾಗಿದೆ.

ತಾಳ್ಳಪಾಕಂ ಅಣ್ಣಮಾಚಾರ್ಯರ ಕುರಿತು ಅವರ ಮೊಮ್ಮಗನಾದ ತೆಲುಗುಕವಿ ತಾಳ್ಳಪಾಕಂ ಚಿನ್ನತಿರುವೇಂಗಳನಾಥ ಬರೆದಿರುವ ದ್ವಿಪದ ಪ್ರಬಂಧವೊಂದರಲ್ಲಿ ತಿರುಮಲೆ-ತಿರುಪತಿಯ ದೇವಾಲಯದಲ್ಲಿ ತನ್ನ ಅಜ್ಜನನ್ನು ಪುರಂದರದಾಸರು ಭೇಟಿಯಾಗಿ ಮಾತುಕಥೆ ನಡೆಸಿದರು ಎಂದು ನಮೂದಿಸಿದ್ದಾನೆ. ಅಣ್ಣಮಾಚಾರ್ಯರೂ [೧೪೦೮-೧೫೦೩] ಅವರ ಮುಂದಿನ ತಲೆಮಾರಿನವರೂ ಕವಿಗಳೇ ಆಗಿದ್ದು ತಿರುಪತಿಯಲ್ಲೇ ನೆಲೆಸಿದ್ದು ಅವರ ರಚನೆಗಳೆಲ್ಲ ಇಂದಿಗೂ ಉಳಿದುಬಂದಿವೆ. ಆದರೆ "ಪುರಂದರದಾಸರು ಗೊಂದಲದ ಹಂಪಿಯಲ್ಲೇ ಬಹುಕಾಲ ಇದ್ದರಾಗಿ, ರಕ್ಕಸತಂಗಡಿಯ ಕದನದಲ್ಲಿ ಹಂಪಿ ನಿರ್ನಾಮವಾದಾಗ ಅವರ ರಚನೆಗಳೆಲ್ಲ ಬಹುಮಟ್ಟಿಗೆ ನಾಶವಾದುವೆಂದು ತೋರುತ್ತದೆ"*[೧೦] ಎಂಬ ಮಾತನ್ನು ಒಪ್ಪಿಕೊಳ್ಳಬಹುದಾಗಿದೆ.

ಪುರಂದರದಾಸರು ಕ್ರಿ.ಶ ೧೪೮೦ ರಿಂದ ೧೫೬೪ ರವರೆಗೂ ಜೀವಿಸಿದ್ದರೆಂದು ಡಾ॥ ಪಂಚಮುಖಿಯವರ ಅಭಿಪ್ರಾಯವಿದೆ.*[೧೧] ಇನ್ನು ಕೆಲವು ವಿದ್ವಾಂಸರು ಸ್ವಲ್ಪ ಬದಲಾವಣೆಗಳನ್ನು ಮಾಡಿಕೊಂಡು ಅವರ ಕಾಲ ೧೪೮೪-೧೫೬೪*[೧೨] ಎಂದು ಖಚಿತಪಡಿಸಿದ್ದಾರೆ. ದಾಸರು ತೀರಿಕೊಂಡ ಮಾಸ, ತಿಥಿ,ವಾರಗಳನ್ನು ಅವರ ಮಗ ಶ್ರೀಮಧ್ವಪತಿದಾಸರು "ರಕ್ತಾಕ್ಷಿ, ಪುಷ್ಯವದ್ಯ, ಅಮಾವಾಸ್ಯೆ, ಮಂದವಾರ (ಶನಿವಾರ)" ಎಂದು ತಮ್ಮ ಕೃತಿಯೊಂದರಲ್ಲಿ ಸೂಚಿಸಿದ್ದಾರೆ.*[೧೩] ಹೀಗಾಗಿ ಪುರಂದರದಾಸರು ತೀರಿಕೊಂಡಿದ್ದು ೧೫೬೪ ಎಂದು ತಿಳಿದುಬರುತ್ತದೆ. ವ್ಯಾಸತೀರ್ಥರಲ್ಲಿ ಶಿಷ್ಯತ್ವ ಕೋರಿ ಬರುವಾಗಲೇ ಅವರಿಗೆ ಒಬ್ಬ ಮಗಳು, ನಾಲ್ವರು ಗಂಡು ಮಕ್ಕಳಿದ್ದರೆಂಬುದು ತಿಳಿದುಬರುತ್ತದೆ. ಹೀಗಾಗಿ ಆಗ ಅವರಿಗೆ ನಲವತ್ತು ವರ್ಷವಾದರೂ ಆಗಿದ್ದಿರಬಹುದು. ಕೃಷ್ಣದೇವರಾಯ ೧೫೩೦ರಲ್ಲಿ ಕಣ್ಣುಮುಚ್ಚಿದಾಗ ದಾಸರಿಗೆ ಮುಪ್ಪು ಅಡರಿತ್ತು.

"ಯಾಕೆನ್ನನೀ ರಾಜ್ಯಕೆಳೆತಂದೆ ಹರಿಯೆ
ಸಾಕಾಗಿದೆ ಎನ್ನನೇಕೆ ಪುಟ್ಟಿಸಿದೆ
ದೇಶಪರಿಚಯವಿಲ್ಲ ದೇಹದಲಿ ಬಲವಿಲ್ಲ
ಹರಣದಲಿ ಹುರುಪಿಲ್ಲ ಕರಣದಲಿ ಧೃಡವಿಲ್ಲ"

ಎಂಬ ಅವರ ಪದರಚನೆಯ ಕಾಲಕ್ಕೆ ಮುಪ್ಪಿನ ಮುದುಕರಾಗಿದ್ದಿರಬಹುದೆಂದು ತಿಳಿಯಬಹುದು. ಒಟ್ಟಿನಲ್ಲಿ ಸಾಯುವಾಗ ಅವರಿಗೆ ಎಂಬತ್ತೈದರಿಂದ ತೊಂಬತ್ತರ ಒಳಗಿನ ವಯಸ್ಸು.

ಪುರಂದರದಾಸರ ಕೃತಿಗಳು

ದಾಸಸಾಹಿತ್ಯದಲ್ಲಿನ ಮೇರು ಕೊಡುಗೆ ಪುರಂದರದಾಸರದು. ತಮ್ಮ ಸ್ವವಿಷಯ (Biodata) ವಿವರಗಳನ್ನು ಅವರು ಎಲ್ಲಿಯೂ ಅಪ್ಪಿ ತಪ್ಪಿಯೂ ಹೇಳಿಕೊಳ್ಳದ ವಿಶಿಷ್ಟ ವ್ಯಕ್ತಿತ್ವದವರಾಗಿ "ಆಧ್ಯಾತ್ಮಿಕ ಜಗತ್ತಿನಲ್ಲಿ ಅಹಂಕಾರ ನಿರಸನಕ್ಕೆ ಅಗ್ರಮಾನ್ಯತೆ" ಎಂಬ ಮಾತಿಗೊಂದು ಜ್ವಲಂತ ಉದಾಹರಣೆಯಾದರೂ, ತಮ್ಮ ಗುರುಗಳಿಂದ ತಮಗೆ ದೀಕ್ಷೆ ದೊರೆತುದನ್ನು ಮಾತ್ರ ಹೇಳಿಕೊಂಡಿದ್ದಾರೆ.[*೧೪] ತಮ್ಮ ಸಮಕಾಲೀನ ಸ್ನೇಹಿತ ದಾಸರುಗಳ ಬಗ್ಗೆ ಕೆಲವೆಡೆ ದಾಖಲಿಸಿದ್ದಾರೆ. ಇಷ್ಟರ ಹೊರತಾಗಿ ಅವರ ಕೃತಿಗಳೆಲ್ಲ ಲೋಕದ ಜನರ ಅನುಸಂಧಾನಕ್ಕಾಗಿ ಮೀಸಲುಳಿದವುಗಳಾದವು. ಲೋಕೋದ್ಧಾರಕ್ಕಾಗಿ ಅರಳಿದ ಕಾವ್ಯಕುಸುಮಗಳಾದವು. ಕನಕದಾಸರ "ನಾನು ಹೋದರೆ ಹೋದೇನು " ಎಂಬ ಮಾತಿಗೆ (ವ್ಯಾಸತೀರ್ಥರ ಸ್ವರ್ಗಕ್ಕೆ ತೆರಳುವವರಾರು ಎಂಬ ಪ್ರಶ್ನೆಗೆ ಉತ್ತರವಾಗಿ :ನಾನು" ಎಂಬ ಅಹಂ ಹೋದರೆ ಪುಣ್ಯಧಾಮಕ್ಕೆ ಹೋಗಬಹುದು ಎನ್ನುವುದು ಕನಕದಾಸರ ಇಂಗಿತವಾಗಿತ್ತು) ಸಜೀವ ಉದಾಹರಣೆಯೆಂದರೆ ಪುರಂದರದಾಸರು. "ನಾನು" ಎನ್ನುವುದನ್ನು ಸಂಪೂರ್ಣವಾಗಿ ತ್ಯಜಿಸಿದ, ಹರಿಗೆ ತನ್ನನ್ನು ಪರಮಪ್ರೀತಿಯಲ್ಲಿ ಸಮರ್ಪಿಸಿಕೊಂಡ ಸಂಪನ್ನರು ಅವರು. ಅವರ ಕಾಲ, ಊರು , ಜನನ ಮರಣ ದಿನಾಂಕಗಳು ಪೂರ್ವ ಚರಿತ್ರಾಂಶಗಳು ನಿಖರವಾಗಿ ನಮಗೆ ತಿಳಿಯದಿದ್ದರೇನಾಯಿತು? ಅವರ ಕೃತಿಗಳ ರೂಪದಲ್ಲಿಯೇ ಸಂಪೂರ್ಣವಾಗಿ ಅವರ ವಿವೇಕ ವೈರಾಗ್ಯಶೀಲ ವ್ಯಕ್ತಿತ್ವವು ಕನ್ನಡಿಗರಿಗೆ ದೊರಕಿದೆ. ಲಭ್ಯವಿರುವಷ್ಟು ಅವರ ಕೃತಿಗಳ ಮೂಲಕವೇ ಭಕ್ತಿಬಾವ ಸನ್ನಡತೆ ಸಂಸ್ಕಾರಗಳ ಅವರ ಸಜ್ಜನಿಕೆಯ ಬದುಕಿನ ವಿಶ್ವರೂಪವೇ ನಮ್ಮ ಪಾಲಿಗೆ ಲಭ್ಯವಿದೆ.

'ನಾನು' ಎಂಬುದು ಎಲ್ಲಿಯೂ ನುಸುಳದ ಸಾಧು, ಸಂತ, ಪ್ರವಾದಿಯಾಗಿ ಬದುಕಿದ ಪುರಂದರದಾಸರ ಪ್ರತಿಭೆ ಇದ್ದಕ್ಕಿದ್ದಂತೆ ಆರೋಪಿತವಾದುದಲ್ಲ. ಅದು ಅವರ ಕವಿ ಹೃದಯದ ಹುಟ್ಟು ಪ್ರತಿಭೆ, "ದಾಸವರ್ಯರ ಪದಗಳು, ಕಲಿತು ಬರೆದ ಕವಿತೆಯಲ್ಲ; ಕುಳಿತು ಬರೆದ ಕವಿತೆಯಲ್ಲ; ಮಹಾರಾಜರ ಮೆಚ್ಚುಗೆಯನ್ನುಯುವುದಕ್ಕಾಗಿ ಬರೆದ ಮಹಾಕಾವ್ಯವಲ್ಲ; ಪಂಡಿತರ ಅಳತೆಗೋಲಿಗೆ ಸಿಕ್ಕುವ ಪ್ರೌಡ ಕೃತಿಯೂ ಅಲ್ಲ; ಸಾಮಾನ್ಯ ಮಾನವರ ಸಲುವಾಗಿ ರಚಿಸಿದ ಕೃತಿಗಳು ಇವು. ಹೃದಯದ ಭಾವದೊಂದಿಗೇ ಬೆರೆತು ಬಂದ, ಸ್ವಾಭಾವಿಕವಾಗಿ ಜೊತೆಗೂಡಿ ಬಂದ ಉಪಮಾನಗಳಿಂದ ಹೆಣೆದ ಹಾಡುಗಳು.[*೧೫]

ಜನರೊಡನೆ ಬೆರೆತುಕೊಂಡು, ಜನಜೀವನವನ್ನು ಹತ್ತಿರದಿಂದ ಕಂಡುಂಡ ಅನುಭವ ಸಂಪತ್ತು, ಹರಿಯನ್ನು ಪ್ರೀತಿಸಿ ಪಡೆದುಕೊಂಡ ಅನುಭಾವ ಸಂಪತ್ತು, ಕನ್ನಡದ ಮನೆ ಮಾತನ್ನೆ ಕೃತಿಯಾಗಿಸುವ ಕನ್ನಡಿಗನ ಕವಿ ಹೃದಯ ಸಂಪತ್ತು, ಸಾಮಾಜಿಕ ಕಳಕಳಿ ಮತ್ತು ಸರ್ವರ ಉದ್ಧಾರವನ್ನು ಬಯಸುವ ಮನೋಸಂಪತ್ತು ಈ ಎಲ್ಲವೂ ಪುರಂದರದಾಸರಲ್ಲಿ ಇದ್ದುದರಿಂದಲೇ ಇಹವನ್ನು ನಿರಾಕರಿಸದೆ ಪರತತ್ವದ ಸಾಧನೆಯ ಕಡೆ ಸಾಮಾನ್ಯರನ್ನು ಒಯ್ಯುವ ಸಹೃದಯ ನೇತಾರರಾದರು. ಭಾವನೆಯ ಉತ್ಕಟತೆಯಿಂದ ಜೀವಂತಿಕೆಯ ಉತ್ಕರ್ಷದಿಂದ ಅವರ ಕೀರ್ತನೆಗಳು ಸೊಗಸಾದ ಭಾವಗೀತೆಗಳಾದವು. ಅವರ ಕಾವ್ಯ ವ್ಯಕ್ತಿ ನಿರಪೇಕ್ಷತೆಯಿಂದ ಕೂಡಿ ಚಿಂತನ ತತ್ತ್ವಗಳಾಗಿ ಮೂಡಿಕೊಂಡವು. ದೈವಭಕ್ತಿಯೇ ಅವರ ಕಾವ್ಯದ ಮೂಲ ಸ್ರೋತವಾದರೂ ಮಾನವನ ಇಹದ ಬದುಕೇ ಅದರ ಕೇಂದ್ರಬಿಂದುವೂ ಆಗಿದೆ. ದೈವ ಹಾಗೂ ಮಾನವನ ನಡುವಿನ ಸಂಬಂಧವನ್ನು ಕಲಾತ್ಮಕವಾಗಿ ತೆರೆದಿಟ್ಟ ಅವರ ಕಾವ್ಯದಲ್ಲಿ ಮಾನವೀಯವಾದ ಎಲ್ಲ ಭಾವನೆಗಳ ತೀವ್ರ ಸಂಚಲನವಿದೆ. ಮಾನವ ಬದುಕಿಗೆ ಅನಿವಾರ್ಯವಾದ ದೈನ್ಯ, ಕಾರುಣ್ಯ, ಭಯ, ಶೋಕ, ಪ್ರೇಮ, ಪ್ರಸನ್ನತೆ, ನಿರಾಶೆ, ವೈರಾಗ್ಯ, ಭಕ್ತಿ, ಆಶ್ರಯದ ಹಂಬಲಿಕೆ ಎಲ್ಲ ಭಾವಗಳ ತೀವ್ರ ಮಿಡಿತವಿದೆ.

ಮಾನವ ಜೀವಿತವನ್ನು ಸಾರ್ಥಕತೆಯ ಪಾರಮ್ಯಕ್ಕೊಯ್ಯಲು ಅಗತ್ಯವಾದ ಮಾರ್ಗದರ್ಶನವು ಪುರಂದರದಾಸರ ಕೃತಿಗಳಲ್ಲಿದೆ. ಯಾವರೀತಿ ನಡೆದುಕೊಳ್ಳಬಾರದು, ಯಾವರೀತಿ ಮಾಡಬೇಕೆನ್ನವುದಕ್ಕೆ ದಿನನಿತ್ಯದ ಬದುಕಿನಿಂದಲೇ ಆಯ್ದು ತೆಗೆದ ಬೇಕಷ್ಟು ಉದಾಹರಣೆ, ಉಪಮೆಗಳಿವೆ. ವ್ಯವಹಾರ ಜ್ಞಾನವಿದೆ, ಅವ್ಯವಹಾರಿಗಳನ್ನು ಕುರಿತ ಭರ್ತ್ಸನೆ ಇದೆ. ಆತ್ಮೋದ್ಧಾರಕ್ಕೆ ಅಗತ್ಯವಿರುವ ದೀಪ್ತಿ ಇರುವಂತೆಯೇ ಲೌಕಿಕವಾದ ಬದುಕಿನ ಮುನ್ನಡೆಗೆ ಅಗತ್ಯವಿರುವ ಧೈರ್ಯ ಸಾಂತ್ವನಗಳಿವೆ, ಈ ಎಲ್ಲ ಕೃತಿಗಳ ಕೇಂದ್ರಬಿಂದುವಾಗಿ ಭಗವಂತನನ್ನು ಪ್ರೀತಿಸಬೇಕೆಂಬ ಅದಮ್ಯ ಸಂದೇಶವೇ ಇದೆ.

ಗುರು ಸ್ತುತಿ

ತಮಗೆ ಹರಿದಾಸ ದೀಕ್ಷೆ ನೀಡಿದ ಗುರುವನ್ನು ಮತ್ತೆ ಕೆಲವೆಡೆ ಸ್ಮರಿಸಿದ್ದಾರೆ. ಬದುಕು ಉದ್ಧಾರವಾಗಬೇಕಾದರೆ ಗುರುವಿನ ಕರುಣೆ, ಗುರುವು ಹಿಡಿಯುವ ದಾರಿದೀಪ ಬೇಕೇಬೇಕೆನ್ನುವುದು ಅವರ ಅಭಿಮತ. ಸುಳಾದಿಯೊಂದರಲ್ಲಿ "ಗುರು ಉಪದೇಶವಿಲ್ಲದ ಜ್ಞಾನವು। ಗುರು ಉಪದೇಶವಿಲ್ಲದ ಸ್ನಾನವು। ಗುರು ಉಪದೇಶವಿಲ್ಲದ ಧ್ಯಾನವು। ಗುರು ಉಪದೇಶವಿಲ್ಲದ ಜಪವು।ಗುರು ಉಪದೇಶವಿಲ್ಲದ ತಪವು।ಗುರು ಉಪದೇಶವಿಲ್ಲದ ಮಂತ್ರ। ಗುರು ಉಪದೇಶವಿಲ್ಲದ ತಂತ್ರ। ಉರಗನ ಉಪವಾಸದಂತೆ ಕಾಣಿರೋ"ಎಂದು ಎಚ್ಚರಿಸುತ್ತ "ಗುರುವ್ಯಾಸರಾಯರೆ ಕರುಣದಿಂದಲಿ ಎನಗೆ। ಪುರಂದರ ವಿಠಲನೇ ಪರನೆಂದರುಹಿ। ದುರಿತ ಭಯವನ್ನೆಲ್ಲ ಪರಿಹರಿಸಿದರಾಗಿ। ವರಮಹಾಮಂತ್ರ ಉಪದೇಶಿಸಿದರಾಗಿ" ಎಂದು ಹೇಳುತ್ತ " ಚಂಕ್ರಾಂಕಿತವನು ಮಾಡಿ ಎನ್ನಂಗಕೆ। ಪಂಕಜನಾಭ ಶ್ರೀ ಪುರಂದರವಿಠಲನ। ಅಂಕಿತವೆನಗಿತ್ತ ಗುರು ವ್ಯಾಸ ಮುನಿರಾಯ" ಎಂಧು ಸ್ಮರಿಸಿದ್ದಾರೆ.

ಇಡೀ ಈ ಸುಳಾದಿಯಲ್ಲಿ ವ್ಯಾಸತೀರ್ಥರ ಬದುಕಿನ ಚಿತ್ರಣವಿದೆ. ವ್ಯಾಸತೀರ್ಥರ ಸಂಸ್ಕೃತ ರಚನೆಗಳ ಬಗ್ಗೆ, ಕೃಷ್ಣದೇವರಾಯನಿಗೆ ಬಂದ ಕುಹುಯೋಗ ಪರಿಹರಿಸಿದ ಬಗ್ಗೆ, "ವ್ಯಾಸಾಬ್ಧಿಯನು ಬದಲಿಸಿ ಕಾಶೀದೇಶದೊಳಗೆಲ್ಲ ಭಾಸುರ ಕೀರ್ತಿಯನು" ಅವರು ಪಡೆದ ಬಗ್ಗೆ ಉಲ್ಲೇಖಗಳಿವೆ. ವ್ಯಾಸತೀರ್ಥರ ಗುರುಗಳ ಬಗ್ಗೆಯೂ, ಶಿಷ್ಯರುಗಳ ಬಗ್ಗೆಯೂ ದಾಖಲಿಸಿದ್ದಾರೆ ಕಡೆಗೆ " ಈಸು ಮುನಿಗಳಿದ್ದರೇನ ಮಾಡಿದರಯ್ಯ? ವ್ಯಾಸರಾಯ ಮಧ್ವಮತವನುದ್ಧರಿಸಿದ" ಎನ್ನುತ್ತ ತಮ್ಮ ಗುರುವಿನ ಸಾಧನೆಗಳ ಪಟ್ಟಿಯನ್ನೇ ಕೊಡುತ್ತಾರೆ.

"ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂಬ ಅವರ ಪ್ರಸಿದ್ಧ ಕೃತಿಯಲ್ಲಿಯೂ ಗುರುಪಾರಮ್ಯದ ಭಾವದೀಪ್ತಿ ಇದೆ. ಏನೇನು ಸಾಧನೆಗಳನ್ನೂ ಗುರುವಿನ ಮಾರ್ಗದರ್ಶನವಿಲ್ಲದೆ ಮಾಡಿದರೆ ವ್ಯರ್ಥವೆನ್ನುತ್ತಾರೆ. ಏನೇನು ಬಾಹ್ಯಾಡಂಬರದ ಭಕ್ತಿ ತೋರಿದರೂ ಗುರುವಿಗೆ ತನ್ನನ್ನು ಅರ್ಪಿಸಿಕೊಳ್ಳದೆಯೆ ಮಾಡುವ ಪರಿಪರಿಯ ಕಾರ್ಯಕಲಾಪಗಳೆಲ್ಲ ನಿಷ್ಪ್ರಯೋಜಕವೆನ್ನುತ್ತಾರೆ. 'ಗುರುವಿನ ಗುಲಾಮ'ನಾಗಬೇಕು ಎನ್ನುವಲ್ಲಿ ತನ್ನನ್ನು ಉದ್ಧರಿಸುವ ಗುರುವಿನಲ್ಲಿ ನಂಬಿಕೆ, ನಿಷ್ಠೆ, ಸೇವಾರ್ಪಣ ಮನೋಭಾವವಿರಬೇಕು ಎನ್ನುವುದು ಅವರ ಆಶಯವಾಗಿದೆ ಎನ್ನುವುದನ್ನು ಗುರುತಿಸಬೇಕೇ ವಿನಹಾ ಗುಲಾಮಗಿರಿಯ ದೀನ ದಾಸ್ಯ ಭಾವವಿದೆಯೆಂದು, ಗುಲಾಮ ಪದ್ಧತಿಯು ಪ್ರಚಲಿತವಿತ್ತೆಂಬುದನ್ನು ಸೂಚಿಸುವ ಕೃತಿ ಇದೆಂದು ವಿಪರೀತ ವಿಮರ್ಶೆಗೆ ಹೋಗುವ ಅಗತ್ಯವೇನೂ ಇಲ್ಲ. ಗುರುವಿನ ಬಗ್ಗೆ ಅತ್ಯಂತ ಪ್ರೀತಿಯ ಸಮರ್ಪಣೆ ಇರಬೇಕು ಎನ್ನುವುದನ್ನು ಸೂಚಿಸುತ್ತಿದ್ದಾರೆ, ಅಷ್ಟೆ ವ್ಯಾಸತೀರ್ಥರಂಥ ಗುರುಗಳನ್ನು ಪಡೆದವರಾಗಿ ಪುರಂದರದಾಸರು ಇಂಥ ಸೊಲ್ಲನ್ನು ಹಾಡಿದ್ದೆನ್ನುವುದನ್ನು ಮರೆಯಬಾರದು. ಹಿರಿತನಕ್ಕೆ ಕಿರಿತನವು ಪೂರ್ತಿಯಾಗಿ ಮಣಿಯುವ ಪ್ರಕ್ರಿಯೆಯ, ವ್ಯಕ್ತಿತ್ವವನ್ನು ಪೂರ್ಣವಾಗಿ ತಿದ್ದಿ ಸಾರ್ಥಕ ಬಾಳುವೆಯ ಹಾದಿಗೆ ಹಿಡಿಸಬಲ್ಲ ಸಮರ್ಥ ಗುರುವಿಗೆ ದಾಸರು ಸಲ್ಲಿಸಿರುವ ಪೂರ್ಣ ಸಮರ್ಪಣೆಯ ಭಾವವಿದಷ್ಟೆ?

ಹರಿ ಸ್ತುತಿ

"ಹರಿಯೇ ಸರ್ವೋತ್ತಮ" ಎಂದು ಸಾರಿದ ಮಧ್ವಾಚಾರ್ಯರ ಪರಂಪರೆಯಲ್ಲಿ ಬಂದ ವ್ಯಾಸತೀರ್ಥರ ಪರಮಶಿಷ್ಯರಾಗಿ ಪುರಂದರದಾಸರು ಹರಿಯನ್ನು ಪ್ರೀತಿಸಿ, ಸ್ತುತಿಸಿ ಬರೆದ ಕೃತಿಗಳು ಅಸಂಖ್ಯವಿವೆ. ಹರಿಪೂಜೆ, ಹರಿಯ ಆರಾಧನೆಯೇ ಉಸಿರಾಗಿ ಬಾಳಿದವರು ಅವರು. ಪರಿಪರಿಯಾಗಿ ಭಗವಂತನ ಸ್ತುತಿಪರ ಹಾಡುಗಳನ್ನು ರಚಿಸಿದ್ದಾರೆ. "ನಾ ನಿನಗೇನೂ ಬೇಡುವುದಿಲ್ಲ ಎನ್ನ। ಹೃದಯಕಮಲದೊಳು ನೆಲೆಸಿರು ಹರಿಯೆ" ಎಂದು ಕೇಳಿಕೊಂಡಿದ್ದಾರೆ. ತನ್ನ ದೇವರಲ್ಲಿ ಅವರಿಗಿರುವ ಅಭಿಮಾನದ ಪರಾಕಾಷ್ಠೆ "ಈ ಪರಿಯ ಸೊಬಗ ಇನ್ನಾವ ದೇವರಲಿ ನಾ ಕಾಣೆ। ಗೋಪೀಜನ ಪ್ರಿಯ ಗೋಪಾಲವಿಠಲಗಲ್ಲದೆ ಎಂಬ ಕೀರ್ತನೆಯಲ್ಲಿ ಸೊಗಸಾಗಿ ಅಭಿವ್ಯಕ್ತವಾಗಿದೆ. ಸಿರಿತನದಲ್ಲಿ, ದೊರೆತನದಲ್ಲಿ, ಹಿರಿತನದಲ್ಲಿ, ಗುರುವುತನದಲ್ಲಿ ಹರಿಗೆ ಸಮಾನರಾದರೂ ಯಾರೂ?

ಅವನ ದೇವತ್ವವೇನು? ಕಾವ ಗುಣವಾದರೂ ಎಂಥದ್ದು ? ಪಾವನತ್ವವಾದರೂ ಎಂಥದ್ದು? ಅವನ ಶೌರ್ಯ ಧೈರ್ಯಗಳಾದರೂ ಎಂಥದ್ದು? ಅವನು ಲೋಕಮೋಹಕನಲ್ಲವೆ? ಹೀಗೆ ಸಂಬಂಧಕ ಸಂಗತಿಗಳನ್ನು ಸೊಲ್ಲಿಸುತ್ತ ಅವರು ಹಿಗ್ಗಿ ಹರಿಯನ್ನು ವರ್ಣಿಸುತ್ತಾರೆ. ದೇವರ ಬಗ್ಗೆ ತಿಳಿಸುವಾಗ ಅವರಲ್ಲಿ ಒಂದು ಆತ್ಮೀಯತೆ ಇದೆ. ಕೇಳುವ (ಓದುವ) ವರಿಗೂ ದೇವರ ಬಗ್ಗೆ ಈ ಆತ್ಮೀಯತೆಯನ್ನು ಒಡಮೂಡಿಸುವ ಪರಿ ಅನನ್ಯವಾಗಿದೆ.

"ಎನಗೊಬ್ಬ ದೊರೆಯು ದೊರಕಿದನು" ಎಂದು ಕೃತಿಯೊಂದರಲ್ಲಿ ಹಿಗ್ಗಿ ಹಾಡಿದ್ದಾರೆ. ಅವನು ಇವರಿಗೆ ಮಾತಾಪಿತೃನಾದನಂತೆ! ಭ್ರಾತೃಬಾಂಧವನಾದನಂತೆ! ಪ್ರೀತಿಯಿಂದಲಿ ತಾನೆ ನಾಥನಾದನಂತೆ! ಮತ್ತೊಂದು ಕೃತಿಯಲ್ಲಿ ಆ ಒಡೆಯನಿಗೆ ತುಸುವಾದರೂ ಗರ್ವವಿಲ್ಲವೆಂದು ಸಾರಿದ್ದಾರೆ. ಅವನ ಸ್ವಭಾವ "ಹೂವ ತರುವರ ಮನೆಗೆ ಹುಲ್ಲ ತರುವ" . ತನ್ನ ಸೇವಕರಿಗೆ ಸೇವಕನಾಗಿ ಇರುವಂಥ ಒಡೆಯ ಅವನು! " ಕಂಡೆ ಕರುಣಾನಿಧಿಯ" "ಕಂಡೆ ಕಂಡೆ ಸ್ವಾಮಿಯ" " ಕಣ್ಣಾರೆ ಕಂಡೆನಚ್ಯುತನ" " ಕೃಷ್ಣಮೂರ್ತಿ ಕಣ್ಣಮುಂದೆ ನಿಂತಿದಂತಿದೆ" " ಆಡಿದನೋ ರಂಗ ಅದ್ಭುತದಿಂದಲಿ" ಮುಂತಾದ ಅನೇಕ ಅಸಂಖ್ಯ ಕೃತಿಗಳು ಅವರು ತಮ್ಮ ಒಳಗಣ್ಣಿನ ದರ್ಶನದಲ್ಲಿ ಕಂಡ ಭಗವಂತನನ್ನು ಕಡೆದಿರಿಸಿವೆ. ಭಾಗವತ ಪುರಾಣಗಳಲ್ಲಿ ಬರುವ ಬಿಂಬೋಪಾಸನೆ, ಏಕಾಂತ ಭಕ್ತಿ ಇವೆಲ್ಲ ಪುರಂದರದಾಸರ ಕೃತಿಗಳಲ್ಲಿ ಹಾಸುಹೊಕ್ಕಾಗಿವೆ. "ಕಣ್ಣಿನಿಂದಲಿ ನೋಡೋ ಹರಿಯ ಒಳಗಣ್ಣಿನಿಂದಲಿ ನೋಡೋ ಮೂಜಗದ ಒಡೆಯನ" ಎಂಬ ಅವರ ಕೀರ್ತನೆಯು ಬಿಂಬೋಪಾಸನೆಯ ಮೂಲಕ ಹರಿಯನ್ನು ಕಾಣಬಹುದಾದ ಯೋಗಾನುಸಂಧಾನವನ್ನು ಚಿತ್ರಿಸಿಕೊಡುತ್ತದೆ. ಇಂಥ ಹರಿಯು "ಒಮ್ಮೆ ನೆನೆಯಲು ನಮ್ಮ ದೇವ । ಗಮ್ಮನೆ ಒಡಿಬರುವ ಬೇಗ" ಎಂದಿದ್ದಾರೆ. 'ಗರುಡಗಮನ ಬಂದನೋ ನೋಡಿರೋ ಬೇಗ' ಎಂಬ ಕೃತಿಯಲ್ಲಿ ಅವರ ನೆಚ್ಚಿನ ದೈವದ ಸಕಲ ಸಲ್ಲಕ್ಷಣಗಳನ್ನು ಚಿತ್ರಿಸಿದ್ದಾರೆ.

ಅವರ ಹರಿಸ್ತುತಿಪರ ಕೀರ್ತನೆಗಳಲ್ಲಿ ಪಂಢರಾಪುರದ ವಿಠ್ಠಲನ ಸ್ತೋತ್ರಗಳಿವೆ. ತಿರುಪತಿಯ ತಿಮ್ಮಪ್ಪನೆಂದರೆ ಅವರಿಗೆ ತುಂಬ ಪ್ರೀತಿ. ಸಾಕಷ್ಟು ಕಾಲ ಅವರು ತಿರುಪತಿಯಲ್ಲೇ ವಾಸಿಸಿದ್ದರು, ಪಂಢರಾಪುರದಲ್ಲಿಯೂ ದೀರ್ಘಕಾಲವಿದ್ದರು. ಹೀಗಾಗಿ ಈ ಕ್ಷೇತ್ರಗಳ ದೈವದ ಮೇಲಿನ ರಚನೆಗಳು ಅಪಾರಸಂಖ್ಯೆಯಲ್ಲಿವೆ. " ತಿರುಪತಿ ವೆಂಕಟರಮಣ। ನಿನಗೇತಕೆ ಬಾರದು ಕರುಣ" " ವೆಂಕಟಾಚಲ ನಿಲಯಂ। ವೈಕುಂಠ ಪುರವಾಸಂ" ಎಂಬ ಅವರ ರಚನೆಗಳು ಇಂದಿಗೂ ಜನಪ್ರಿಯತೆನ್ನುಳಿಸಿಕೊಂಡಿದೆ. ಶ್ರೀನಿವಾಸನ ಮೇಲೆ, ಪಾಂಡುರಂಗ ವಿಠ್ಠಲನ ಮೇಲೆ ಮೈಮರೆತ ಭಕ್ತಿ ಭಾವದಿಂದ ಸೊಗಸಾದ ಕೀರ್ತನೆಗಳು ಚಿಮ್ಮಿವೆ. "ಓಡಿಬಾರಯ್ಯ ವೈಕುಂಠ ಪತಿ ನಿನ್ನ। ನೋಡುವೆ ಮನದಣಿಯೆ" " ಇಂದಿರೆಯರಸ ವೆಂಕಟ ಬಂದ ಮನೆಗೆ" ಇತ್ಯಾದಿ ಹಾಡುಗಳ ಭಂಡಾರವೇ ಈ ದೈವಗಳ ಮೇಲೆ ರಚಿಸಿದವುಗಳಾಗಿವೆ. ಹೀಗೆಯೆ ಅವರು ಸಂಚಾರ ಮಾಡಿದ ಬೇರೆ ಬೇರೆ ಕ್ಷೇತ್ರಗಳಲ್ಲಿನ ವಿಷ್ಣು ಪರ, ಕೃಷ್ಣ ಪರ ಸ್ತುತಿಗಳೂ ಸಾಕಷ್ಟು ಸಂಖ್ಯೆಯಲ್ಲಿ ದೊರಕುತ್ತವೆ. ಉಡುಪಿಯ ವಾಸ್ತವ್ಯದಲ್ಲಿ ಅಲ್ಲಿನ ಕಡೆಗೋಲು ಕೃಷ್ಣನ ಮೇಲಿನ ರಚನೆಗಳೂ ತುಂಬಾ ಇವೆ.

ವಿಷ್ಣುವಿನ ದಶಾವತಾರಗಳನ್ನು ರಸವತ್ತಾಗಿ ಅನೇಕ ಕಡೆ ಚಿತ್ರಿಸಿದ್ದಾರೆ. ಮೋಹಿನಿಯಾಗಿ ವಿಷ್ಣು ದೇವತೆಗಳಿಗೆ ದಾನವರಿಗೆ ಅಮೃತ ಹಂಚಿದ ಕಥೆಯು "ಇಂಥಾ ಹೆಣ್ಣನು ನಾನೆಲ್ಲಿ ಕಾಣೆನೋ, ಹೊಂತಕಾರಿ ಕಾಣಿರೋ" ಎನ್ನುತ್ತ ಹರಿಯ ಮೋಸದ ವರ್ತನೆಗಳನ್ನು ಹೇಳುತ್ತಲೇ ಸ್ತುತಿಸುತ್ತಾರೆ. ಭಕ್ತಿ ಪರವೇ ಆಗಿರುವ ಅನೇಕ ನಿಂದಾಸ್ತುತಿಗಳನ್ನು ಕಾವ್ಯಗುಣದ ಕೀರ್ತನೆಗಳ ಮೂಲಕ ಹೊಮ್ಮಿಸಿದ್ದಾರೆ. ತಾವೇನೂ ನಾರದ ಪ್ರಹ್ಲಾದ ವಿದುರರಂತೆ ನಿನಗೆ ಅನ್ಯಾಯ ಮಾಡಿಲ್ಲ, ಆದರೂ ನೀನು ಅವರಿಗೆ ಒಲಿದೆ, ನನ್ನಂಥ ದೀನಜನರನ್ನು ಒಲಿದು ಕಾಯುವ ಬುದ್ಧಿ ನಿನ್ನಲ್ಲಿಲ್ಲವೆ? ಎಂದು ಕೇಳುತ್ತಾರೆ. ನಾನು ಪ್ರಹ್ಲಾದನಂತೆ ನಿನ್ನ ರೂಪ ಕೆಡಿಸಲಿಲ್ಲ ಅರ್ಜುನನಂತೆ, ಬಂಡಿಯ ಸಾರಥಿಯನ್ನಾಗಿ ಮಾಡಿಲ್ಲ, ಮದಕರಿಯಂತೆ ಮಕರಿಯ ಬಾಯಲ್ಲಿ ಸಿಲುಕಿ ಒದರಲಿಲ್ಲ, ಸದರ ಮಾತುಗಳಾಡಿ ಶಿಶುಪಾಲನಂತೆ ಜರಿಯಲಿಲ್ಲ ಎಂಬಿತ್ಯಾದಿಯಾಗಿ ಪಟ್ಟಿಮಾಡುತ್ತ ಹೋಗುವ ಈ ಪರಿಯು ಪುರಂದರದಾಸರು ಹರಿಯೊಂದಿಗೆ ನಡೆಸಿರುವ ಸ್ನೇಹ ಸರಸ ಸಲ್ಲಾಪವಾಗಿ ಪ್ರಕಟವಾಗಿದೆ.[೧೬] ಅದೇರೀತಿ "ಕೊಡಬಹುದೆ ಮಗಳ ಸಮುದ್ರರಾಜ?" ಎಂಬ ಕೀರ್ತನೆ, "ವಾವೆಯೆಲ್ಲಿಹುದಯ್ಯ ವೈಕುಂಠಪತಿಗೆ। ದೇವ ಭಾರ್ಗವನಾಗಿ ಮಾತೆಯ ಶಿರವ ಕಡಿದ" "ಹಿಂದಿನ ಬವಣೆಗಳೆಲ್ಲ ಆಗಲೆ ಮರೆದೆಯೇನೊ। ಇಂದು ಬಂದ ಭಾಗ್ಯವು ನಿಜವೆ ವೆಂಕಟ ತಂದೆ?" "ಆರು ಬದುಕಿದರಯ್ಯ ಹರಿ ನಿನ್ನ ನಂಬಿ?" " ಏನು ಮರುಳಾದ್ಯಮ್ಮ ಎಲೆ ರುಕ್ಮಿಣಿ" "ಏತರ ಚೆಲುವ ರಂಗಯ್ಯ। ಹರಿಯೆಂಬ ಮಾತಿಗೆ ಮರುಳಾದೆನಲ್ಲದೆ" " ಕೇಳೋ ಕೋಪಿಸಿಕೊಳ್ಳಬೇಡ ಹೇಳೀದರೆ ಫಲವಿಲ್ಲ" "ಏನು ಮೆಚ್ಚಿದೆಲೆ ಹೆಣ್ಣೆ ಏನು ಮರುಳಾದೆ?" ಮುಂತಾದ ಅನೇಕ ಕೃತಿಗಳಲ್ಲಿ ನಿಂದಾಸ್ತುತಿ ಒಂದೊಂದು ಪರಿಯ ಹೊಸ ಹೊಸ ಸೊಗಸುಗಾರಿಕೆಗಳಲ್ಲಿ ವ್ಯಕ್ತವಾಗಿದೆ. ಭಕ್ತಿಯ ಪರಾಕಾಷ್ಠತೆಯಲ್ಲಿ ದೇವರೊಂದಿಗೆ ಭಕ್ತನಿಗೆ ಒದಗುವ ಸ್ನೇಹ, ಸಲಿಗೆ ಭಾವಗಳಿಲ್ಲಿ ಕಾವ್ಯವಾಗಿ ಹೊಮ್ಮಿದೆ.

ಪುರಂದರದಾಸರು ಮಾಧ್ವಮತ ಪೀಠದ ಗುರುಗಳ ಶಿಷ್ಯರು, ಗುರು ವ್ಯಾಸತೀರ್ಥರಿಂದ ಹರಿದಾಸ ದೀಕ್ಷೆ ಪಡೆದು ಕೃತಾರ್ಥರಾದವರು. ಅವರ ಕೃತಿಗಳಲ್ಲಿ ಮಧ್ವಮತದಲ್ಲಿನ ತಾರತಮ್ಯೋಕ್ತ ದೇವ ದೇವತೆಗಳ ಸ್ತುತಿಯನ್ನು ಸಹಜವಾಗಿಯೇ ಕಾಣಬಹುದಾಗಿದೆ. ಈ ಎಲ್ಲ ದೇವದೇವತೆಗಳ ಸ್ತುತಿಯೂ ಹೃದಯಂಗಮ ಸಹಜತೆಯಿಂದ ಕೂಡಿವೆಯೇ ವಿನಹಾ ಮಧ್ವಮತ ಶಾಸ್ತ್ರದ ಹೊರೆಯ ಹಾಡುಗಳಾಗಿ ಹೊರಬಂದಿಲ್ಲವೆನ್ನುವುದು ಗಮನಿಸಬೇಕು. ಎಲ್ಲ ಬಗೆಯ ಜನಸಾಮಾನ್ಯರೂ ಹಾಡಿಕೊಂಡು ದೇವತೆಗಳನ್ನು ಸ್ತುತಿಸಬಹುದಾದಂತೆಯೇ ಈ ಕೃತಿಗಳ ರಚನೆ ಇದೆ. ಲಕ್ಷ್ಮೀದೇವಿ ಸ್ತುತಿ; ಹನುಮ-ಭೀಮ-ಮಧ್ವರ ಸ್ತುತಿ; ರುದ್ರ- ಶೇಷರ ಸ್ತುತಿಗಳು: ನದಿ ದೇವತೆಗಳ ಸ್ತುತಿಗಳು ತುಳಸಿಯ ಸ್ತುತಿಪರ ಗೀತೆಗಳು. ಸರಸ್ವತಿ-ಭಾರತಿಯರ ಮೇಲಿನ ಹಾಡುಗಳು ಈ ಎಲ್ಲ ಕೀರ್ತನೆಗಳೂ ಯಾವ ಕನ್ನಡ ಮನಸ್ಸುಗಳು ಕೂಡ ಪರಿಭಾವಿಸಬಹುದಾದ, ಪೂಜೆಯಲ್ಲಿ ಹಾಡಿಕೊಳ್ಳಬಹುದಾದ ಮಧುರ ಗೀತೆಗಳಾಗಿವೆ. ಹನುಮ, ಮಧ್ವರ ಮೇಲಿನ ರಚನೆಗಳು ವಿಭಿನ್ನ, ವಿಶಿಷ್ಟ ರೀತಿಯ ಸೊಗಸುಗಾರಿಕೆಯಲ್ಲಿವೆ. ಉದಾಹರಣೆಗೆ" ಇಂಥಾತನು ಗುರುವಾದದ್ದು" " ಆ ರಣಾಗ್ರದಿ ಭೀಮಗಡ್ಡಯಿಪರಾರು?" "ಎಂಥಾ ಬಲವಂತನೋ, ಕುಂತಿಯ ಸಂಜಾತನೋ" "ಏನು ಮರುಳಾದೆಯೇ ಎಲೆ ಭಾರತಿ" ಮುಂತಾದ ಕೀರ್ತನೆಗಳು.

ಲಕ್ಷ್ಮೀಪರವಾದ ಪುರಂದರದಾಸರ ರಚನೆಗಳಲ್ಲಿ ಅತ್ಯಂತ ಜನಪ್ರಿಯವೂ ಮನಪ್ರಿಯವೂ ಆಗಿ ಕನ್ನಡಿಗರ ಮನೆ ಮನೆಗಳಲ್ಲಿ ನೆಲೆನಿಂತಿರುವ ಹಾಡೆಂದರೆ " ಭಾಗ್ಯದ ಲಕ್ಷ್ಮೀ ಬಾರಮ್ಮ। ನಮ್ಮಮ್ಮ ನೀ ಸೌಭಾಗ್ಯದ ಲಕ್ಷ್ಮೀ ಬಾರಮ್ಮ" ಎಂಬುದು.

ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ
ಗೆಜ್ಜೆಯ ಕಾಲ್ಗಳ ದನಿಯನು ಮಾಡುತ
ಸಜ್ಜನ ಸಾಧು ಪೂಜೆಯ ವೇಳೆಗೆ
ಮಜ್ಜಿಗೆಯೊಳಗಿನ ಬೆಣ್ಣೆಯಂತೆ....॥

ಬರಿಯ ಪ್ರಾಸೋಕ್ತಿ ಅಥವಾ ದೇವತೆಯೊಬ್ಬಳು ನಡೆದು ಬರುವ ಲಾವಣ್ಯದ ಚಿತ್ರವಷ್ಟೇ ಅಲ್ಲ ಇಲ್ಲಿರುವುದು. ಇಲ್ಲಿ ಮೇಲ್ನೋಟಕ್ಕೆ ಮೀರಿದ ಅರ್ಥಸೌಂದರ್ಯವಿದೆ. ನಿಜವಾದ ಶ್ರೀಮಂತಿಕೆ, ವೈಭವ ಒಮ್ಮಲೇ ಬಂದುಬಿಡುವುದು ಅಸಾಧು, ಅಸಾಧ್ಯ ಕೂಡಾ. ಒಂದಾದ ಮೇಲೊಂದು, ಒಂದರ ನಂತರ ಇನ್ನೊಂದು ಬರುವ ಅನುಕೂಲ, ಐಸಿರಿಗಳೇ ಚಂದ. ಹೀಗಾಗಿ ಐಸಿರಿಯ ದೇವತೆ ಲಕ್ಷ್ಮಿ ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ್ತ ಬರಬೇಕೆಂಬ ಸೂಚನೆ. ಬದುಕಿನಲ್ಲಿ ಶ್ರೀಮಂತಿಕೆ ಒದಗುತ್ತ ಬರುವಾಗ ಸಂತೋಷ, ಉಲ್ಲಾಸಗಳು ತುಂಬಿ ಸಂಭ್ರಮ ನೆಲೆಸುವುದು ಸಹಜ. ಹೀಗಾಗಿ ಗೆಜ್ಜೆ ಕಟ್ಟಿದ ಝುಣತ್ಕಾರದ ನಡಿಗೆಯಲ್ಲಿ ಬಾರಮ್ಮ ಎನ್ನುವ ಕರೆ. ಒಂದೊಂದಾಗಿ ಭಾಗ್ಯವನ್ನು ಆಕೆ ತಂದೀಯುತ್ತಿರುವಾಗ ತುಂಬಿಕೊಳ್ಳುತ್ತ ಬರುವ ಆನಂದೋತ್ಸಾಹಗಳ ಪ್ರತೀಕ ಗೆಜ್ಜೆದನಿ. ಇಷ್ಟಾಗಿ ಶ್ರೀಮಂತಿಕೆಯ ಭಾಗ್ಯವನ್ನು ಹೇಗೆಂದರೆ ಹಾಗೆ, ಯಾರಿಗೆಂದರೆ ಅವರಿಗೆ ಅವಳು ಕರುಣಿಸಬೇಕಾಗಿಲ್ಲ. ಪುರಂದರದಾಸರು ಇಲ್ಲಿ "ಸಜ್ಜನ ಸಾಧು ಜನರಿಗೆ" ಅವಳು ಒಲಿಯಬೇಕು, ಅಷ್ಟಲ್ಲದೆ ತನ್ನ ಪೂಜೆ ಮಾಡಿ ಕರೆಯುವಾಗ ಆಕೆ ಬರಬೇಕು ಎನ್ನುವುದನ್ನು ಆಶಿಸುತ್ತಿದ್ದಾರೆ. [ಕಾಲದ ವೈಪರೀತ್ಯವು ಈಗ ದುಷ್ಟ ದುರುಳರಿಗೆ ದುಡ್ಡಿನ ಸಂಚಯ ಮೂಡಿಸುತ್ತಿದೆ. ಇಲ್ಲಿ ಹಾಗಲ್ಲದೆ ಸಾಧು ಸಜ್ಜನರಿಗಾಗಿ ಆಕೆಯನ್ನು ಕರೆಯುತ್ತಿದ್ದಾರೆ] ಹಂಬಲವಿರಬೇಕು[Yarming],ಪೂಜೆ ಪುನಸ್ಕಾರಗಳಿಂದ ಶರಣಾದ ಮೇಲಷ್ಟೆ ಆಕೆ ಒಲಿದು ಬರಬೇಕು ಎಂಬುದು ಅವರ ಸದಾಶಯ. ಅದಲ್ಲವಾದಲ್ಲಿ ಸುಮ್ಮನೇ ಸೇರಿ ಬಿಡುವ ಸಿರಿವಂತಿಕೆಯ ಬೆಲೆಯನ್ನೇ ನರರು ಅರಿಯಲಾರರು.

ಮೊದಲು ಮೂರು ಸಾಲುಗಳ ಅರ್ಥ ಶ್ರೀಮಂತಿಕೆಗೆ ಕಡೆಯ ಸಾಲು ಮತ್ತಷ್ಟು ದೇದೀಪ್ಯತೆಯನ್ನು ನೀಡುತ್ತಿದೆ. ಇಡೀ ಬದುಕಿನ ಸಾಧನೆ ಪ್ರಯತ್ನಗಳ ಸಾರಮೊತ್ತವಾಗಿ ಆಕೆ ಬರಬೇಕು. ಬದುಕೆಂಬ ಸಂಘರ್ಷದೊಳಗಿನ ಸತ್ತ್ವ ತತ್ತ್ವವಾಗಿ ಮಜ್ಜಿಗೆಯೊಳಗಿನ ಬೆಣ್ಣೆಯಂತೆ ಆಕೆ ಸಾಧು ಸಂತರ ಬದುಕಿನಲ್ಲಿ ಸೇರಿಕೊಳ್ಳಬೇಕು, ಕಾಣಿಸಿಕೊಳ್ಳಬೇಕು ಎನ್ನುವ ಧ್ವನಿ.

ಸರಳತೆಯಲ್ಲೇ ಸೊಗಸಾದ ಕಾವ್ಯ ಸೌಂದರ್ಯವನ್ನು ಹುದುಗಿಸಿಕೊಂಡಿರುವ ಕೃತಿ ಇದು. ಪಲ್ಲವಿಯಲ್ಲಿ ಆಕೆ ಯಾರೋ ದೇವತೆಯಲ್ಲ, ಯಾರವಳು? "ನಮ್ಮಮ್ಮಾ ನೀ" ಎನ್ನುವುದು ಪ್ರೀತಿಯ ಸಂಬಂಧದ ಅರ್ಥವನ್ನು ಹೆಚ್ಚಿಸಿದಂತೆ 'ಸೌ' ಎಂಬ ಉಪಸರ್ಗ ಸೇರಿಸಿ 'ಭಾಗ್ಯದ' ಎಂಬ ಮಾತಿನ ಅರ್ಥವಿಸ್ತರಣೆಯನ್ನೂ ಮಾಡಲಾಗಿದೆ. ಸರಳತೆ, ಸದ್ಗುಣಗಳಲ್ಲಿ ಬದುಕುವ ಯಾರದೇ ಹೃದಯವಾದರೂ ಹಾಡಿ ಕರೆಯುವಂಥ ಕೃತಿ ಇದಾಗಿದೆ. ಇಂಥ ಅನೇಕ ಕೃತಿಗಳನ್ನು ಕೊಟ್ಟರೆಂದೇ ಪುರಂದರದಾಸರು ಕನ್ನಡಿಗರಿಗೆ ಅತ್ಯಂತ ಆಪ್ತರು, ಪ್ರಿಯರು.

ಇಷ್ಟಾದರೂ ಪುರಂದರರು "ನಿಮ್ಮ ಭಾಗ್ಯ ದೊಡ್ಡದೋ ನಮ್ಮ ಭಾಗ್ಯ ದೊಡ್ಡದೋ" ಎಂದು ಹಣವಿರುವವರನ್ನು ಕೆಣಕಿ ಕೇಳಿಯೇ ಬಿಟ್ಟಿದ್ದಾರೆ. ಈ ಕೃತಿಯಲ್ಲಿ ಹೇಮ, ಹೊನ್ನು, ಹಣಗಳಿಗಿರುವ ನಾನಾ ತಾಪತ್ರಯಗಳನ್ನು ಪಟ್ಟಿ ಮಾಡಿ ನೆನಪಿಸಿ ಕಡೆಗೆ "ನಿಮ್ಮ ಭಾಗ್ಯ ಲಕ್ಷ್ಮೀದೇವಿ ನಮ್ಮ ಭಾಗ್ಯ ನಾರಾಯಣನು" ಎಂದು ಹೆಮ್ಮೆಯಿಂದ ಸಾರಿ ತಮ್ಮ ನಿಶ್ಚಿಂತೆಯನ್ನು ಪ್ರಕಟಿಸಿಬಿಟ್ಟಿದ್ದಾರೆ. ತಾಯಿಗಿಂತ ತಂದೆಯ ಮೇಲೆ ಪ್ರೀತಿ ಹೆಚ್ಚಿರುವ ಕೂಸಾಗಿದ್ದಾರೆ ಇಲ್ಲಿ.

ತಾಯ್ತನ

ಹರಿಯನ್ನು ತಂದೆಯಾಗಿ,ತಾಯಿಯಾಗಿ,ಒಡೆಯನಾಗಿ ಪರಿಭಾವಿಸಿ ಪ್ರೀತಿಸಿದ್ದಷ್ಟೇ ಅಲ್ಲ, ಪುರಂದರದಾಸರು ಶ್ರೀಕೃಷ್ಣನನ್ನು ಪುಟ್ಟ ಮಗುವಾಗಿ ಭಾವಿಸಿ ಲಾಲಿಸಿ ಮುದ್ದಿಸಿದಂಥ ಕೃತಿಗಳು ಕೂಡ ಅವರೊಳಗಿನ ತಾಯ್ತನದ ಅಂತಃಕರಣಕ್ಕೆ ಕನ್ನಡಿ ಹಿಡಿದಿವೆ. ವಾತ್ಸಲ್ಯಭಾವದ ವಿಧವಿಧವಾದ ವಿಶಿಷ್ಟ ಚರ್ಯೆಗಳನ್ನು ಅವರ ಕೃತಿಗಳು ಸಾರುತ್ತವೆ. ಭಾಗವತದಲ್ಲಿ ಬರುವ ಕೃಷ್ಣನ ಬಾಲ್ಯ, ಲೀಲಾ ವಿನೋದಗಳು, ತುಂಟತನ ಎಲ್ಲವೂ ಪುರಂದರದಾಸರಲ್ಲಿ ಮಾತೃತ್ವದ ಮಮತೆಯ ಮಜಲುಗಳಾಗಿ ಹೋಗಿವೆ. ಕೃಷ್ಣನ ತಾಯಿ ಗೋಪಿಯಶೋದೆಯ ಚಿತ್ರಣದಲ್ಲಿ ಕವಿ ಮೈಮರೆತಿದ್ದಾರೆ, ತಾವೇ ಆ ಯಶೋದೆಯಾಗಿಬಿಟ್ಟಿದ್ದಾರೆ.

"ಗೋಪಿಯ ಭಾಗ್ಯವಿದೂ। ನಮ್ಮ। ಶ್ರೀಪತಿ ತಾ ಶಿಶುರೂಪಿನಲಿರುವುದು" ಎಂದು ಆರಂಭವಾಗುವ ಕೃತಿ ಹೆಣ್ಣಿನ ತಾಯ್ತನದ ಗುಣಕ್ಕೇ ಮುನ್ನುಡಿ ಬರೆದಂತಿದೆ.ಆದರಿಲ್ಲಿ ವಿಶೇಷವೆಂದರೆ ಈ ಯಶೋದೆ ನಿತ್ಯ ನಿರ್ಮಲನಿಗೆ ನೀರೆರೆಯುತ್ತಾಳೆ, ತೊಡೆಯಮೇಲೆ ಕೂಡಿಸಿಕೊಂಡು ಜಗದದೊಡೆಯನ ಜಡೆ ಹೆಣೆಯುತ್ತಾಳೆ, ದೃಷ್ಟಿ ತೆಗೆದಷ್ಟೂ ಸಾಲದಾಗಿದೆ ಅವಳಿಗೆ. ಬಗೆಬಗೆಯಲ್ಲಿ ಅವನಿಗೆ ಶೃಂಗರಿಸಿ ಕಣ್ತುಂಬ ನೋಡಿ ಆನಂದಿಸುತ್ತಾಳೆ. ಹೊರಗೆ ಆಡಲು ಹೋಗಬಾರದೆಂದು ಕೇಳಿಕೊಳ್ಳುತ್ತಾಳೆ. ಬೆಣ್ಣೆ ಮೊಸರನ್ನು ಅವನಿಗೆ ತಿನ್ನಿಸಿದಷ್ಟೂ ತೃಪ್ತಿಯಿಲ್ಲ ಅವಳಿಗೆ. ಅವನು ನಿತ್ಯ ತೃಪ್ತನೆಂಬ ಅರಿವಿಲ್ಲದೆ ಅವನಿಗೆ ಕರೆಕರೆದು ಊಟ ಉಣ್ಣಿಸಿ ಹಿಗ್ಗುತ್ತಾಳೆ. ನಾಶರಹಿತನ ಆಯಸ್ಸು ಹೆಚ್ಚಲೆಂದು ರಾಶಿ ದೈವಗಳ ಬಳಿ ಬೇಡಿಕೊಳ್ಳುತ್ತಿರುತ್ತಾಳಂತೆ! ಅವನು ಎಷ್ಟೂ ದೊಡ್ಡವನಿರಬಹುದು, ವಿಶ್ವದ ಒಡೆಯನೇ ಇರಬಹುದು, ಆದರೇನು ತಾಯಿಗಿಲ್ಲಿ ಅವನು ಮಗುವೇ! ಆವಳ ಆರೈಕೆಯ ಕುರಿತಾದ ಎಲ್ಲ ಇಲ್ಲಿಯ ಮಾತುಗಳಲ್ಲೂ

ಅಂಥಾ ದೊಡ್ಡವನಿಗೆ ಎಷ್ಟು ಕಮ್ಮಿಯನ್ನು ಇವಳು ಕೊಡುತ್ತಿದ್ದಾಳೆ ಎನ್ನುವುದನ್ನು ಇಲ್ಲಿ ಧ್ವನಿಸಿದರೂ ಇಲ್ಲಿ ಇವಳ ತಾಯ್ತನದ ವಾತ್ಸಲ್ಯವೇ ದೊಡ್ಡದು ಎನ್ನುವುದನ್ನು ದಾಸರು ಸೂಚಿಸುತ್ತಿದ್ದಾರೆ. ಜಗತ್ತನ್ನೇ ಉದ್ಧರಿಸುವ ಅವನನ್ನು ತನ್ನ ಮಗುವೆಂದು ತಿಳಿದು ಆಡಿಸುತ್ತಿದ್ದಾಳೆ ಅವಳು. " ಆಡಿಸಿದಳೆಶೋದ। ಜಗದೋದ್ಧಾರನಾ। ಮಗನೆಂದು ತಿಳಿಯುತ" ಬಹುಜನಪ್ರಿಯವಾದ ಹಾಡು. ಈ ಹಾಡಿನ ತುಂಬ ಆ ವಿಶ್ವಶಕ್ತಿಯ ಗುಣಲಕ್ಷಣಗಳಿವೆ. ಹಾಗೆಯೇ ಮಿಗಿಲಾದ ಮಾತೃವಾತ್ಸಲ್ಯದ ಸಾರ್ಥಕತೆಯೂ ತುಂಬಿಕೊಂಡಿದೆ. " ತೋಳು ತೋಳು ತೋಳು ಕೃಷ್ಣ ತೋಳನ್ನಾಡೈ" ಎಂಬ ಹಾಡಿನಲ್ಲಿ ದಾಸರು ತಾವೇ ತಾಯಿಯಾಗಿ ಕೃಷ್ಣನನ್ನು ತೊಡೆಯ ಮೇಲೆ ಕೂರಿಸಿಕೊಂಡು ಹಿಂದಕ್ಕೂ ಮುಂದಕ್ಕೂ ತೂಗಿಸುತ್ತ ಆಡಿಸುತ್ತಿದ್ದಾಳೆ. ಆ ಪುಟ್ಟ ಮಗು ಕೃಷ್ಣನ ಪುಟಾಣಿ ಪಾದವನ್ನು ಕಾಣುತ್ತ ಕಾಣುತ್ತ "ಮಕ್ಕಳ ಮಾಣಿಕವೆ ಮನೋಹರ ನಿಧಿಯೇ" ಎಂದು ಹಾಡುತ್ತ ಹಾಡುತ್ತ ಇದೇ ಪಾದವೇ ಶಕಟಾಸುರನನ್ನು ತುಳಿದಿದ್ದು, ಇದೇ ಪುಟ್ಟ ಪಾದವೇ ಬಲಿಯಲ್ಲಿ ದಾನವನ್ನು ಬೇಡಿ, ನೆಲವನ್ನು ಈರಡಿ ಮಾಡಿ ಜಲಧಿಯನ್ನು ಪಡೆದದ್ದು ಎಂದೆಲ್ಲ ಭಗವಂತನ ಲೀಲೆಗಳನ್ನು ನೆನಪಿಸಿಕೊಳ್ಳುತ್ತ ಮೈಮರೆಯುತ್ತಾರೆ. "ಮುದ್ದು ಕೊಡೊ ಬಾರೊ ತಂದೆ" ಎಂದು ಆ ಮಗುವನ್ನು ಯಾಚಿಸುತ್ತಾರೆ. ಅಂದವಾದ ಕರ್ಪೂರದ ಕರಡಿಗೆಯ ಬಾಯಲ್ಲಿ ಒಮ್ಮೆ ಮುದ್ದು ಕೊಡು ಎಂದು ಬೇಡುತ್ತಾರೆ.

"ಬಂದನೇನೇ ರಂಗ ಬಂದನೇನೆ? ಎನ್ನ ತಂದೆ ಬಾಲಕೃಷ್ಣ, ನವನೀತ ಚೋರ" ಎಂಬ ಕೃತಿಯಲ್ಲಿಯಂತೂ ಮಗು ಶ್ರೀಕೃಷ್ಣನ ಅಲಂಕಾರಭರಿತವಾದ ಚಿತ್ರಣ ಕಣ್ಣಿಗೆ ಕಟ್ಟುವಂತಿದೆ. ಚಿನ್ನದ ಗೆಜ್ಜೆ ಹಾಕಿಕೊಂಡು ತನ್ನ ಹೊಳೆಹೊಳೆಯುವ ಪಾದವನ್ನು ಊರುತ್ತ ಘಿಲು ಘಿಲು ಘಿಲುರೆಂದು ಶಬ್ದ ಮಾಡುತ್ತ ಈ ಮಗು ಬಂದಿತಂತೆ. ಕೈ ಬೆರಳುಗಳಲ್ಲಿ ಥಳ ಥಳ ಥಳ ಎಂದು ಥಳ್ಳನೆ ಹೊಳೆಯುವ ಉಂಗುರಗಳನ್ನು ಹಾಕಿಕೊಂಡಿದೆಯಂತೆ! ಸಾಲದ್ದಕ್ಕೆ ಕೈಗಳಲ್ಲಿ ಕಿಣಿ ಕಿಣಿ ಕಿಣಿರೆಂಬೊ ಕಂಕಣ ಹಾಕಿಕೊಂಡಿದೆ, ಸೊಂಟಕ್ಕೊಂದು ಝಣ ಝಣ ಝಣರೆಂಬೊ ಗಂಟೆಯ ಉಡ್ಯಾಣ ಆಭರಣವನ್ನು ಸುತ್ತಿಕೊಂಡಿದೆಯಂತೆ! ಇಷ್ಟೆಲ್ಲಾ ಸಾಲದೆಂದು ಈ ಮಗು ಧಣ ಧಣ ಧಣ ಎಂದು ಶಬ್ದಮಾಡುವ ಪಾದದ ಆಭರಣವೊಂದನ್ನು ಧರಿಸಿದೆ! ಇಷ್ಟೆಲ್ಲ ಶಬ್ದಗಳನ್ನು ಮಾಡುತ್ತ ಮಿಣ ಮಿಣ ಮಿಣ ಎಂದು ಕುಣಿಕುಣಿದಾಡುತ್ತ ಬೇರೆ ಬಂದುಬಿಟ್ಟಿದ್ದಾನೆ ಕೃಷ್ಣ ಎಂದ ಮೇಲೆ ಆ ಅಲಂಕಾರಿಕ ಚೆಲುವು, ಆ ಶಾಬ್ದಿಕ ನರ್ತನ ಮಾಡಿಸಿಕೊಳ್ಳುತ್ತ ಬಂದ ಆ ಮಗುವನ್ನು ಕಂಡು ಪುರಂದರ ದಾಸರಿಗೆ ಹೇಗಾಗಿರಬೇಡ!

ಹಿಡಿ ಹಿಡಿ ಹಿಡಿ ಎಂದು ಪುರಂದರ ವಿಠಲನ
ದುಡು ದುಡು ದುಡು ದುಡನೆ ದುಡುಕಿ ಓಡುತ।
ತಡೆ ತಡೆ ತಡೆ ಎಂದು ಮೆಲ್ಲನೆ ಪಿಡಿಯಲು
ಬಿಡಿ ಬಿಡಿ ಬಿಡಿ ದಮ್ಮಯ್ಯ ಎನುತಾ....॥

ಏನೇನು ಶಬ್ದಲಾಲಿತ್ಯಗಳನ್ನು ಮಾಡುತ್ತ ಸರ್ವಾಂಗ ಸುಂದರವಾಗಿ ಕಂಗೊಳಿಸುತ್ತ, ಈ ಕೃಷ್ಣನೆಂಬ ಕಂದ ಬಂದಿತೆಂದು ಅವನನ್ನು ಹಿಡಿದುಕೊಳ್ಳಲು ಹೋದರೆ ದುಡು ದುಡು ದುಡು ಓಡಿಯೇ ಬಿಟ್ಟಿತಲ್ಲ ಅದು? ಆದರೂ ಸ್ವಲ್ಪ ಇರು, ಓಡಬೇಡ ಎನ್ನುತ್ತ ಹೋಗಿ ಮೆಲ್ಲನೆ ಅವನನ್ನು ಹಿಡಿದುಕೊಂಡು ಬಿಟ್ಟರೂ ಕೈಗೆ ಸಿಗುವಂಥ ಮಗುವೆ ಅದು? "ದಮ್ಮಯ್ಯ ಬಿಡಿ ಬಿಡಿ" ಎನ್ನುತ್ತ ಓಡಿಯೇ ಬಿಟ್ಟಿತು!

ಬಂದದ್ದಾದರೂ ಯಾಕೆ? ಹಾಗೆ ಓಡಿದ್ದಾದರೂ ಯಾಕೆ?ಕೇಳುವುದಾರನ್ನು? ಅದು ಆ ಮಗುವಿನ ಬಾಲಲೀಲೆ. ಬಹುಶಃ ಪುರಂದರದಾಸರು ಒಳಗಣ್ಣಲ್ಲಿ ಕಂಡಂಥ ಒಂದು ದಿವ್ಯವಾದ ದರ್ಶನ ಅದು!

ಲಾಲಿಪದಗಳನ್ನು ಬೇರೆ ಬೇರೆ ರೀತಿಯಲ್ಲಿ ಹೆಣೆದುಕೊಟ್ಟಿದ್ದಾರೆ ಪುರಂದರದಾಸರು, "ಜೋಜೋ ಶ್ರೀಕೃಷ್ಣ ಪರಮಾನಂದ" "ತೂಗಿರೇ ರಂಗನ ತೂಗಿರೇ ಕೃಷ್ಣನ" "ಪವಡಿಸು ಪರಮಾತ್ಮನೆ" "ಲಾಲಿ ಲಾಲಿ ನಮ್ಮ ಹರಿಯೆ ಲಾಲಿ" ಮುಂತಾದ ತೊಟ್ಟಿಲು ತೂಗಿ ಮಗುವನ್ನು ಮಲಗಿಸುವ ಹಾಡುಗಳು ಮಹಿಳೆಯರ ತಾಯ್ತನಕ್ಕೆ ಅಪ್ಯಾಯಮಾನವಾಗುತ್ತವೆ.

ಯಶೋದೆ ಮತ್ತು ಕೃಷ್ಣನ ಸಂಬಂಧವಾಗಿ ಪುರಂದರದಾಸರ ಕಣ್ಣು ಕಂಡಷ್ಟು ಮಾತೃ-ಮಗುವಿನ ಅಕ್ಕರಾಸ್ಥೆಯನ್ನು ಬೇರಾವ ದಾಸರೂ ಕಂಡಿಲ್ಲವೆನಿಸುತ್ತದೆ. ದಾಸ ಸಾಹಿತ್ಯದಲ್ಲಿ ಕೃಷ್ಣನ ಬಾಲಲೀಲೆ, ಗೋಪಿಯ ಮುನಿಸು ಎಲ್ಲ ಚಿತ್ರಣವೂ ಬೇಕಷ್ಟು ತುಂಬಿಕೊಂಡಿದೆ. ಆದರೆ ಪುರಂದರದಾಸರು ಕಂಡ ಯಶೋದೆಯ ತಾಯ್ತನಕ್ಕೆ ಇನ್ನೂ ಒಂದು ಕೈ ಮಿಗಿಲು. ಅವರ ಕಂಡಿರಿಸಿದ ಯಶೋದೆಯ ಮಮತೆ ಮುಟ್ಟಿರುವುದು ಮುಗಿಲನ್ನು.

ಮಗುವಿನ ಬಾಲಲೀಲೆಗಳನ್ನು ಕಂಡು ಸಂತೋಷಪಡುತ್ತಾಳೆ. ಅಷ್ಟೇ ಆ ಮಗುವಿನ ತುಂಟಾಟಗಳ ಬಗ್ಗೆ ಆತಂಕವಿದೆ ಅವಳಿಗೆ. ತನ್ನ ಕೊನೆ ಬೆರಳಲ್ಲಿ ಅವನ ಪುಟ್ಟ ಕರ ಹಿಡಿದು "ಅಡಿಯಿಡು ಮಗನೆ ದಟ್ಟಡಿಯಿಡು ಇಡು" ಎಂದು ನಡೆಯನ್ನು ಕಲಿಸಿದಾಕೆ ಅವಳು. ಆದರೆ ಇವನು ತುಸು ದೊಡ್ಡವನಾದ ಮೇಲೆ ನಡೆಸಿದ ತಂಟತನಗಳು ಒಂದೆರಡೆ? ನೆರೆಹೊರೆಯವರಿಂದ ಈ ಬಗ್ಗೆ ದೂರು ಕೇಳಿ ಕೇಳಿ ಸಾಕಾಗುತ್ತದೆ ಅವಳಿಗೆ. ಪುರಂದರದಾಸರ ನೂರಾರು ಕೃತಿಗಳು ಕೃಷ್ಣ ಗೋಕುಲದಲ್ಲಿ ಗೋಪಿಯರ ನಡುವೆ ನಡೆಸಿದ ಅವಾಂತರಗಳನ್ನು ಅನನ್ಯವಾಗಿ ಚಿತ್ರಿಸುತ್ತವೆ. "ನಿನ್ನ ಮಗನ ಲೂಟಿ ಘನವಮ್ಮ, ಕರೆದು ರಂಗಗೆ ಬುದ್ಧಿ ಪೇಳೆ ಗೋಪಮ್ಮ" ಎಂದು ಸದಾ ಬೇರೆ ಮಹಿಳೆಯರಿಂದ ಕಿರಿಕಿರಿ ಅವಳಿಗೆ ತಪ್ಪಿದ್ದಲ್ಲ. ಒಬ್ಬಾಕೆಯಂತೂ "ಹೇಳಿದರೆ ನಮ್ಮ ಮೇಲೆ ಯಾಕಮ್ಮ ಸಿಟ್ಟು? ಇಂಥ ಗಾಡಿಕಾರ ಮಗನನು ಪಡೆದ ಮೇಲೆ ನೀವಿಷ್ಟು" ಎಂದು ಕೇಳುತ್ತಾಳೆ. "ಎಷ್ಟು ದುಷ್ಟನೆ ನಿನ್ನ ಮಗ ಯಶೋದೆ? ಸೃಷ್ಟಿಯೊಳಗೆ ಇಂಥ ಚೇಷ್ಟೆಕೋರನ ಕಾಣೆ" ಎಂದು ಇನ್ನೊಬ್ಬಾಕೆ ದೂರುಗಳ ದೊಡ್ಡ ಪಟ್ಟಿ ಹಿಡಿದು ಬರುತ್ತಾಳೆ. "ಹೇಳಬಾರದೆ ಬುದ್ದಿಯ? ನಿನ್ನ ಮಗನ ಊರಗೂಳಿಯ ಮಾಡಿದೇನೆ?" ಎಂದು ಗೋಪಿಯೊಬ್ಬಳು ಗಟ್ಟಿಸಿ ಕೇಳುತ್ತಿದ್ದಾಳೆ. "ಚಿಕ್ಕವನೇ ಇವನು? ನಮ್ಮ ಕೈಗೆ ಸಿಕ್ಕದೇ ಓಡುವನು?" ಎಂದೊಬ್ಬಳು ಆಕ್ಷೇಪಿಸುತ್ತಿದ್ದಾಳೆ.

ಎಷ್ಟೆಂದು ಕೇಳಿಯಾಳು ಯಶೋದೆ ಮಗನ ಮೇಲಿನ ಅಪವಾದಗಳನ್ನು? "ದೂರು ಮಾಡುವರೇನೆ ರಂಗಯ್ಯನ ದೂರು ಮಾಡುವರೇನೆ?" ಮೂರು ಲೋಕಕೆ ಮುದ್ದು ತೋರುವ ಕಂದನ ಮೇಲೆ ದೂರು ತಂದಿರುವವರನ್ನೇ ಅವಳು ಆಕ್ಷೇಪಿಸುತ್ತಾಳೆ. "ಪೋಗಿರೆ ಮುದ್ದು ತೋರುವ ಕಂದನ ಮೇಲೆ ದೂರೇನ ಕೊಂಡು ಬಂದಿರೆ? ಯೋಗೀಶ ಪುರಂದರ ವಿಠ್ಠಲರಾಯನ। ತೂಗಿ ಪಾಡಿರೆ ಬೇಗ ನಾಗವೇಣಿಯರೆಲ್ಲ" ಎಂದು ಆಜ್ಞಾಪಿಸುತ್ತಾಳೆ. ತೊಟ್ಟಿಲಲ್ಲಿಟ್ಟು ತೂಗಬೇಕಾದ ಹಚ್ಚ ಹಸು ಕಂದ ಅವನು ಅವಳ ಪಾಲಿಗೆ. "ಅಗಣಿತಗುಣ ನಿನ್ನ ಜಗದ ನಾರಿಯರೆಲ್ಲ ಹಗೆಯಾಗಿ ನುಡಿವರೋ ಗೋಪಾಲನೆ। ಪೋಗದಿರೆಲೋ ರಂಗ ಬಾಗಿಲಿನಿಂದಾಚೆಗೆ"ಎಂದು ಮಗನನ್ನೇ ಬೇಡಿಕೊಳ್ಳುತ್ತಾಳೆ. "ಮನೆಯೊಳಗಾಡೋ ಗೋವಿಂದ। ನೆರೆ। ಮನೆಗಳಿಗೇಕೆ ಪೋಗುವಿಯೊ ಮುಕುಂದ?" ಎಂಧು ಅವಲತ್ತುಕೊಳ್ಳುತ್ತಾಳೆ. ಆದರೂ ಈ ಮಗು ಕೆಲವು ಸಲ ಅವಳ ಕಣ್ಣು ತಪ್ಪಿಸಿ ಎಲ್ಲಿಯೋ ಹೋಗಿಯೇ ಬಿಟ್ಟಿರುತ್ತದೆ. ಆತಂಕದಿಂದ ಹುಡುಕುವುದೊಂದೇ ಯಶೋದೆಗೆ ಉಳಿದಿದ್ದು. "ಅಮ್ಮ ನಿಮ್ಮ ಮನೆಗಳಲ್ಲಿ ನಮ್ಮ ಕೃಷ್ಣನ ಕಂಡಿರೇನಮ್ಮ?" ಎಂದು ತಾಯಿ ಯಶೋದೆ ಕಂದನನ್ನು ಹುಡುಕುವ ಪುರಂದರದಾಸರ ಈ ಹಾಡು ಇಂದಿಗೂ ನಮ್ಮ ನೃತ್ಯಾಭಿನಯ ಪ್ರದರ್ಶನಗಳಲ್ಲಿ ಅದ್ಭುತ ಯಶಸ್ಸನ್ನು ಪಡೆದುಕೊಳ್ಳುತ್ತಿದೆ.

ಕೆಲವೊಮ್ಮೆ ಕೃಷ್ಣನ ಅತಿ ತುಂಟಾಟಗಳಿಂದ ಗೋಪಿ ಯಶೋದೆ ತುಂಬ ಖಿನ್ನಳಾಗುತ್ತಾಳೆ. ಮಗನ ಬಗ್ಗೆ ದೂರು, ನಿಂದೆಗಳನ್ನು ಕೇಳಿ ಕೇಳಿ ರೋಸಿಹೋಗಿರುವ ಮನಸ್ಸಿನಲ್ಲಿ ಕೃಷ್ಣನ ಬಳಿಯಲ್ಲೇ ಎಲ್ಲ ಹೇಳಿಕೊಳ್ಳುತ್ತಾಳೆ. "ಏನು ಮಾಡಲೊ ಮಗನೆ ಯಾಕೆ ಬೆಳಗಾಯಿತೊ। ಏನು ಮಾಡಲೊ ಕೃಷ್ಣಯ್ಯ?" ಬೆಳಗಾಯಿತೆಂದರೆ ಕೃಷ್ಣನ ರಂಪಾಟಗಳು ಶುರು, ಮಹಿಳೆಯರ ಚಾಡಿ ಶುರು. ಯಾಕೆ ಬೆಳಗಾಯಿತೋ ಎಂದು ಬೇಸರ ಮಾಡಿಕೊಳ್ಳುತ್ತಿದ್ದಾಳೆ. ಈ ಹಾಡಿನಲ್ಲಿ ಅವಳ ಸಂಕಟವನ್ನು ಅರಿಯಬೇಕು, ಕೃಷ್ಣನಾದರೂ ಎಂಥ ಮಹಾ ಪೋರನೆಂಬುದನ್ನು ತಿಳಿಯಬೇಕು.

ಹಾಲು ಮೊಸರು ಬೆಣ್ಣೆ ಕದ್ದನೆಂಬರೋ
ಮೇಲಿನ ಕೆನೆಗಳ ಮೆದ್ದನೆಂಬುವರೋ
ಬಾಲಕರೆಲ್ಲರ ಬಡಿದಿಹನೆಂಬರೋ
ಎಂಥಕಾಳ ಹೆಂಗಸು ಇವನ ಹಡೆದಳೆಂಬರೋ॥
ಕಟ್ಟಿದ್ದ ಕರುಗಳ ಬಿಟ್ಟನೆಂತೆಂಬರೊ
ಮೆಟ್ಟಿ ಸರ್ಪನ ಮೇಲೆ ಕುಣಿದನೆಂಬರೊ
ಪುಟ್ಟ ಬಾಲೆಯರ ಮೋಹಿಸಿದನೆಂಬರೊ
ಎಂಥ ದುಷ್ಟ ಹೆಂಗಸು ಇವನ ಹಡೆದಳೆಂಬರೋ॥

ಮಗು ಒಳ್ಳೆಯವನಾದರೂ, ಕೆಟ್ಟವನಾದರೂ ಹೆಸರು ಬರುವುದು ತಾಯಿಗೇ. ಎಂಥಾ ಕೆಟ್ಟ ಹೆಂಗಸು ಇವನನ್ನು ಹಡೆದಳಪ್ಪ ಎಂದು ತನ್ನನ್ನು ಬೈದುಕೊಂಡು ತನ್ನ ಮಾನವನ್ನು ಮಾನಿನಿಯರು ಕಳೆಯುತ್ತಾರೆಂದು ಯಶೋದೆ ದುಃಖಿತಳಾಗಿದ್ದಾಳೆ. ಮಗನಿಗೆ ಬುದ್ಧಿ ಹೇಳುತ್ತಾಳೆ. "ಬಣ್ಣಿಸಿ ಗೋಪಿ ಹರಸಿದಳು। ಎಣ್ಣೆಯನೊತ್ತುತ ಯದುಕುಲ ತಿಲಕನಿಗೆ" ಎಣ್ಣೆ ಸ್ನಾನ ಮಾಡಿಸುವಾಗ ಎಲ್ಲ ತಿಳಿವಳಿಕೆ ಹೇಳುವ ತಾಯಿ ಅವಳಾಗುತ್ತಾಳೆ.

"ಆಯುಷ್ಯವಂತನಾಗು ಅತಿ ಬಲ್ಲಿದನಾಗು
ಮಾಯದ ಖಳರ ಮರ್ದನನಾಗು
ರಾಯರ ಪಾಲಿಸು ರಕ್ಕಸರ ಸೋಲಿಸು
ವಾಯುಸುತಗೆ ನೀ ಒಡೆಯನಾಗೆನುತ"

ತಾಯಿ ಯಶೋದೆಯ ಪುಣ್ಯವೇ ಅಂಥದ್ದು. ಎಲ್ಲರ ಹರಕೆಯನ್ನು ನೆರವೇರಿಸುವವನಿಗೇ ತಾಯಿಯಾಗಿ ಹಾರೈಕೆಗಳನ್ನು ನೀಡುತ್ತಿರುವ ಭಾಗ್ಯ ಅವಳದ್ದು. ಇಷ್ಟೊಂದು ತುಂಟತನದ ಕೃಷ್ಣ ಕೆಲವೊಮ್ಮೆ ತಾಯಿಯ ಬಳಿ ಬಂದು ತನ್ನ ಅವಸ್ಥೆಗಳನ್ನು ಹೇಳಿಕೊಳ್ಳುವಂತೆಯೂ ಪುರಂದರದಾಸರು ಕೃತಿಗಳನ್ನು ರಚಿಸಿದ್ದಾರೆ. ಮಾಡುವುದೆಲ್ಲ ಮಾಡಿ ಏನೂ ಗೊತ್ತಿಲ್ಲದಿರುವ ಅಮಾಯಕನಾಗಿ ಕೃಷ್ಣ ಮಗು ತಾಯಿಯ ಬಳಿ ಹೇಳುತ್ತಿದೆ, ಹುಡಗರೆಲ್ಲ ನನ್ನ ಬಳಿ ಕೂಡಿ ಆಡುತ್ತಿಲ್ಲ ನೋಡಮ್ಮ ಎಂದು ಚಾಡಿ ಮಾಡುತ್ತಿದೆ! "ಅಮ್ಮಾ ಎನ್ನ ಕೂಡಾಡುವ ಮಕ್ಕಳಣಕಿಸುವರೆ" ಎಂದು ಬೇಸರ ಮಾಡಿಕೊಂಡು ಬಿಟ್ಟಿದೆ. "ಆಡ ಹೋದಲ್ಲೆ ಮಕ್ಕಳು ಆಡಿಕೊಂಬುವರು ನೋಡಮ್ಮಾ....। ನೋಡಿ ನೋಡಿ ಎನ್ನ ಮುಖವ ನೋಡಿ ಕಣ್ಣು ಮೀಟುವರಮ್ಮ" ಎಂದು ದುಃಖ ಮಾಡಿಕೊಂಡಿದೆ. "ಗೋಕುಲದಲಿ ನಾನಿರಲಾರೆ। ಗೋಪ್ಯಮ್ಮ ಕೇಳೆ" ಎನ್ನುತ್ತ ತಾನೇನೂ ತಪ್ಪೇ ಮಾಡಿಲ್ಲವೆಂದೂ ಎಲ್ಲಾ ಉಳಿದ ಗೋಪಿಯರೇ ಮುಂದಾಗಿ ಮೇಲೆ ಬಿದ್ದು ಹಾಲುಮೊಸರು ನೀಡಿದರೆಂದೂ ಮಗು ತಿಳಿಸುತ್ತದೆ.

"ಮಂದಗಮನೇರು ತಾವೆ ಬಂದು ಕೈ ಹಿಡಿದುಕೊಂಡು। ಬಾಗೋ
ವಿಂದನೆಂದು ಕರೆದು ತಮ್ಮ ಸದನದೊಳಗೆ
ಮಿಂದು ಹಾಸಿಗೆ ಹಾಸಿ ನನ್ನ ಆಧರವ ಸವಿದು
ಅಂದವರ ಅಧರಧರಕ್ಕೆ ನಾ ಗಡಗಡ ನಡುಗಿದೆ"
"ಪಾಲ ಮೊಸರ ನಾನು ಒಲ್ಲೆ ಒಲ್ಲೆನೆಂಬೆ। ಭರದಿಂದಲಿ ಬಂದು। ಕಾಲಲಿ ಬಿದ್ದು ಕುಡಿಸುವರು"

ಎಂದೆಲ್ಲ ಈ ಮಗು ಹೇಳುವಾಗ ತಾಯಿಗೆ ಹೇಗಾಗಬೇಡ? ತಾವೇ ಹೀಗೆಲ್ಲ ಮಾಡಿ ತನ್ನ ಬಳಿ ಬಂದು ಮಗುವಿನ ಮೇಲೇ ಆಪಾದನೆ ಹಾಕುತ್ತಾರಲ್ಲ ಗೋಪಿಕೆಯರು? ಮಗನ ಮಾತನ್ನು ಕೇಳಿ ತಾಯಿ ಯಶೋದೆ ಬಿಗಿದಪ್ಪಿಕೊಂಡು " ಏನೇನು ಬೇಕಾದ್ದು ಕೊಡುವೆ। ಕೆನೆ ಬೆಣ್ಣೆ ಸಕ್ಕರೆ ತಂದು ಕೈಯ್ಯಲ್ಲಿ ಕೊಡುವೆ। ಅನುದಿನ ಗುಣಗಳ ಪಾಡುವೆ ನಿನಗನುವಾಗಿ ಅಲಂಕಾರ ಮಾಡಿ ನಾ ನೋಡುವೆ" ಎಂದೆಲ್ಲ ಹೇಳುತ್ತ ರಮಿಸದಿದ್ದಾಳೆಯೆ?

ಆದರೂ ಈ ಕೃಷ್ಣ ಕೆಲವೊಮ್ಮೆ ಕಾರಣವಿಲ್ಲದೆಯೆ ರಚ್ಚೆ ಹಿಡಿದು ತಾಯಿಯ ಬಳಿ ರಗಳೆ, ಅಳು, ರಂಪಾಟ ನಡೆಸಿರುತ್ತಾನೆ. ಆಗವನನ್ನು ಗದರಿಕೊಳ್ಳಲೇ ಬೇಕಾಗುತ್ತದೆ." ಬವ್ವ ಬಂದಿತಲ್ಲ ರಂಗಯ್ಯ, ಬವ್ವ ಬಂದಿತಲ್ಲ ಬವ್ವ ಬಂದು ನಿನ್ನ ಕಾಲು ಕಚ್ಚೀತೋ ಕೃಷ್ಣ" ಎಂದು ಹೆದರಿಸುತ್ತಾಳೆ. [ಬವ್ವ<ಪರ್ಬು, ಎಲ್ಲೆಡೆ ಹರಡಿಕೊಳ್ಳುವ ದೆವ್ವ, ಇಲ್ಲಿ ರುದ್ರದೇವರಿಗೆ ಅನ್ವಯವಾಗುತ್ತಿದೆ] 'ನನ್ನ ಸೆರಗು ಹಿಡಿದುಕೊಂಡು ಸುಮ್ಮನೆ ಮಲಗಿಕೋ, ಆ ಕಡೆ ತಿರುಗಿದೆ ಅಂತಾದರೆ ಅಲ್ಲೆ ಇದೆ ಬವ್ವ' ಎಂದವಳು ಹೇಳುತ್ತ ಅವನನ್ನು ನಿದ್ರೆ ಮಾಡಿಸಲು ಶ್ರಮಿಸುತ್ತಿದ್ದಾಳೆ. "ಬೂದಿಯ ಹಚ್ಚಿದೆ ಕೂದಲು ಬಿಚ್ಚಿದೆ। ಹಾವು ಕೊರಳಲಿಟ್ಟು ಹುಲಿ ಚರ್ಮವ ಹೊದ್ದು" ಎಂದೆಲ್ಲ ಭಯ ಹುಟ್ಟಿಸುವಾಗ ಎಂಥ ಮಗುವಾದರೂ ತಾಯಿಯನ್ನು ಬಲವಾಗಿ ತಬ್ಬಿ ನಿದ್ರೆ ಹೋಗಲೇ ಬೇಕಲ್ಲ! ಇದು ಪುರಂದರದಾಸರ ಅಂತಃಕರಣದೊಳಗಿನ ತಾಯ್ತನ. ಮತ್ತೊಂದು ಕೃತಿಯಲ್ಲಿ "ಬೂಚಿ ಬಂದಿದೆ ರಂಗಾ ಬೂಚಿ ಬಂದಿದೆ। ಚಾಚಿ ಕುಡಿದು ಸುಮ್ಮನೆ ನೀ ಪಾಚಿಕೊಳ್ಳೋ ಕೃಷ್ಣಯ್ಯ" ಎಂದು ಮಗುವನ್ನು ರಮಿಸುತ್ತಾಳೆ. ದೇಸೀ ಶೈಲಿಯ ರಮ್ಯತೆಯಲ್ಲಿ ಬ್ರಹ್ಮ, ರುದ್ರ, ಇಂದ್ರ, ಷಣ್ಮುಖ, ಹನುಮಂತರೆಲ್ಲ ಬಂದಿದ್ದಾರೆ ಕೃಷ್ಣನನ್ನು ಕರೆದೊಯ್ಯಲು ಎಂದು ಮಗುವಿಗೆ ಹೆದರಿಕೆಯಾಗುವ ಭಾಷೆಯಲ್ಲೇ ಯಶೋದೆಯ ಬಾಯಿಯಲ್ಲಿ ಹೇಳಿಸಿರುವ ಸೊಗಸಾದ ಕೃತಿಯಿದು. "ನಾಲ್ಕು ಮುಖದ ಬೂಚಿಯೊಂದು। ಗೋಕುಲಕ್ಕೆ ಓಡಿ ಬಂದು। ಲೋಕರನ್ನು ಎಳೆದುಕೊಂಡು। ಕಾಕು ಮಾಡಿ ಒಯ್ಯುವುದಕ್ಕೆ" (ಬ್ರಹ್ಮ); "ಮೂರು ಕಣ್ಣಿನ ಬೂಚಿಯೊಂದು। ಊರೂರ ಸುತ್ತಿ ಬಂದು । ದ್ವಾರದಲ್ಲಿ ನಿಂದಿದೆ ನೋಡೋ। ಪೋರರನ್ನು ಒಯ್ಯುವುದಕ್ಕೆ" (ಶಿವ)"; "ಅಂಗವೆಲ್ಲ ಕಂಗಳುಳ್ಳ। ಶೃಂಗಾರ ಮುಖದ ಬೂಚಿ। ಬಂಗಾರದಂಥ ಮಕ್ಕಳನ್ನು। ಕಂಗೆಡಿಸಿ ಒಯ್ಯುವುದಕ್ಕೆ" (ಇಂದ್ರ)। "ಆರು ಮುಖದ ಬೂಚಿಯೊಂದು। ಈರಾರು ಕಂಗಳದಕೆ। ವಾರು ವಾರು ಅಳುವ ಮಕ್ಕಳ। ದೂರ ಸೆಳೆದು ಒಯ್ವದಕ್ಕೆ (ಷಣ್ಮುಖ); "ಮರದ ಮೇಲೆ ಇರುವುದೊಂದು। ಕರಾಳ ಮುಖದ ಕರಿಯ ಬೂಚಿ। ತರಳರನ್ನು ಎಳೆದುಕೊಂಡು। ಪುರಂದರ ವಿಠಲಗೆ ಒಪ್ಪಿಸಲಿಕ್ಕೆ" (ಹನುಮಂತ)

ಈ ರೀತಿಯಲ್ಲಿ ಇಷ್ಟಿಷ್ಟು ಕಣ್ಣಿರುವ ಬೂಚಿ ಬಂದಿದೆ, ಎಳೆದುಕೊಂಡು ಹೋಗಿ ಬಿಡುವುದಕ್ಕೆ.... ಸುಮ್ಮನೇ ಮಲಗಿಕೋ ಎಂಬಲ್ಲಿ ಜಗದೊಡೆಯ ವಿಷ್ಣು ಅವತಾರದಲ್ಲಿ ಕೃಷ್ಣನಾಗಿ ಯಶೋದೆಯ ಮಡಿಲು ಸೇರಿರುವಾಗ ಹೇಗಾದರೂ ಮರಳಿ ಅವನನ್ನು ತಮ್ಮೆಡೆಗೆ ಸೆಳೆದೊಯ್ಯಲು ಈ ದೇವತೆಗಳು ಮತ್ತು ಹನುಮಂತ ಬಂದಿದ್ದಾರೆ ಎಂಬ ಅದ್ಭುತವಾದ ಕಲ್ಪನಾಶಕ್ತಿಗೆ ತಾಯ್ತನದ ಅಂತಃಕರಣವೂ ಸೇರಿಕೊಂಡ ಮೇಲೆ ಇನ್ನೇನು? ಯಶೋದೆ ಇಷ್ಟೆಲ್ಲ, ಹೀಗೆಲ್ಲ ಹೇಳಿರಲು ಸಾಧ್ಯವಿಲ್ಲ. ಅವಳ ಬಾಯಲ್ಲಿ ಹೇಳಿಸಿರುವವರು ಅಥವಾ ಅವಳ ಮೂಲಕ ಹೇಳುತ್ತಿರುವವರು ಪುರಂದರದಾಸರು. ವಿಶ್ವದ ಮಹಾನ್ ಚೈತನ್ಯವನ್ನು ಹೀಗೆ ಮಗುವಾಗಿಸಿ ಲಾಲಿಸಿ ರಮಿಸಿರುವವರು ಪುರಂದರದಾಸರೇ!

ಭಗವಂತನಾದರೇನು? ಅಮ್ಮನಿಗೆ ಮಗುವೇ. ಲಾಲಿಸಿ ರಮಿಸುವ ಭಕ್ತಾದಿಗಳಿಗೆ ಅವನು ಕೂಸೇ. ಪುರಂದರದಾಸರ ತಾಯ್ತನದಲ್ಲಿ ಅವನೂ ಕೆಲವೊಮ್ಮೆ ಅದ್ಭುತವಾಗಿ ನಟಿಸುತ್ತಾನೆ. ತನ್ನ ತುಂಟಾಟಗಳ ತಪ್ಪೊಪ್ಪಿಗೆ ಮಾಡುತ್ತಾನೆ ತಾಯಿಯ ಬಳಿ. ತುಂಬ ಹೆದರಿದವರ ಹಾಗೆ ಈ ಮಗು ತಾಯಿಯಲ್ಲಿ ಬೇಡುತ್ತದೆ. "ಗುಮ್ಮನ ಕರೆಯದಿರೆ। ಅಮ್ಮಾ। ನೀ। ಗುಮ್ಮನ ಕರೆಯದಿರೆ" ಪುರಂದರದಾಸರ ಪ್ರಸಿದ್ಧವಾದ ಹಾಡು. "ಸುಮ್ಮನೆ ಇದ್ದೇನು। ಅಮ್ಮಿಯ ಬೇಡೆನು। ಮಮ್ಮು ಉಣ್ಣುತ್ತೇನೆ। ಅಮ್ಮಾ ಅಳುವುದಿಲ್ಲ" ಎಂದೆಲ್ಲ ಕೇಳಿಕೊಳ್ಳುತ್ತದೆ. "ಆವಿನ ಮೊಲೆಯೂಡೆ। ಕರುಗಳ ಬಿಡೆ ನೋಡೆ। ದೇವರಂತೆ ಒಂದು ಠಾವಿನೊಳ್ ಕೊಡುವೆ" ಎನ್ನುವ ಸಾಲಂತೂ ಹೃದಯಸ್ಪರ್ಶಿ. ದೇವರೇ ಆಗಿರುವ ಕೃಷ್ಣನ ಬಾಯಲ್ಲಿ ಈ ಮಾತು ಹೇಳಿಸಿದ ದಾಸರ ಕವಿ ಹೃದಯ ಅನನ್ಯ.

ಮತ್ತೊಂದು ಕೃತಿಯಲ್ಲಿ ಈ ಮಗು ಕೇಳುತ್ತದೆ "ಗುಮ್ಮನೆಲ್ಲಿಹ ತೋರಮ್ಮಾ। ಸುಮ್ಮನಂಜಿಸಬೇಡಮ್ಮಾ॥ ಆಧ್ಯಾತ್ಮಿಕ ತತ್ತ್ವಗಳನ್ನು ಒಡಲಲ್ಲಿರಿಸಿಕೊಂಡ ಕವಿತೆ ಇದು. ಕಡೆಗೆ ಮಗು "ಚೆಲ್ವಗೋಪಾಲ ಶ್ರೀ ಪುರಂದರ ವಿಠಲನ। ಬಾರಿ ಬಾರಿಗೆ ನೀ ಬೆದರಿಸಬೇಡಮ್ಮ" ಎಂದು ಬೇಡಿಕೊಳ್ಳುತ್ತದೆ. ಇಂಥ ಈ ತಾಯಿಮಗುವಿನ ಅವಿನಾಭಾವ ಅನ್ಯೋನ್ಯತೆಯನ್ನು ಪುರಂದರದಾಸರಂತೆ ಹೃದಯಂಗಮವಾಗಿ ಚಿತ್ರಿಸಿದವರು ಮತ್ತೊಬ್ಬರಿಲ್ಲ. ಸರಳ, ಸುಲಭ, ದೇಸೀ ಪದಲಾಲಿತ್ಯದಿಂದ ಕೂಡಿದ ಈ ಬಗೆಯ ಭಾವಸಂಪತ್ತಿನ ಕನ್ನಡದ ಹಾಡುಗಳನ್ನು ಕೊಟ್ಟವರು ಬೇರಿಲ್ಲ.

ಕೃಷ್ಣ ಮಣ್ಣು ತಿನ್ನುವ ಮಗುವೆಂದು ಅವನ ಈ ಲೀಲೆಗಳನ್ನು ರಸವತ್ತಾಗಿ ಪುರಂದರ ದಾಸರು ರಚಿಸಿದ ಕೃತಿಗಳಿವೆ. ಮಣ್ಣು ತಿನ್ನಬೇಡವೆಂದು ಪದೇ ಪದೇ ತಾಯಿ ಬೇಡಿಕೊಳ್ಳುವುದು, ಅವನು ಕದ್ದು ಮುಚ್ಚಿ ಮಣ್ಣನ್ನು ತಿನ್ನುವುದು, ಬಲರಾಮ ಈ ಬಗ್ಗೆ ದೂರು ಒಯ್ಯುವುದು, ಕಡೆಗೆ ಕೃಷ್ಣನನ್ನು ಶಿಕ್ಷಿಸುವ ಮಟ್ಟಕ್ಕೆ ಹೋಗಿ ನಂತರ ಪಶ್ಚಾತ್ತಾಪಪಟ್ಟು ಅವನನ್ನು ಸಮಾಧಾನ ಪಡಿಸುವ ಯಶೋದೆ ಇವೆಲ್ಲ ಭಾವಗಳೂ ಕೃತಿ ಹೂಗಳಾಗಿ ಪುರಂದರದಾಸರ ಮೂಲಕ ನಮಗೆ ಸಿಕ್ಕಿವೆ. ಪುರುಷನೊಳಗೆ ಮಾತೃತ್ವದ ಸೆಲೆ ಉಕ್ಕುವ ಅಂತಃಕರಣವು ಖಂಡಿತಾ ಇರಬಹುದು ಎನ್ನುವುದಕ್ಕೆ ಪುರಂದರದಾಸರೇ ಸಾಕ್ಷಿ.

ಶೃಂಗಾರ ಭಾವ

ಶ್ರೀಪಾದರಾಜರಂತೆಯೇ ಪುರಂದರದಾಸರೂ ಶೃಂಗಾರಭಾವದ ಆನೇಕ ಕೃತಿಗಳನ್ನು ರಚಿಸಿ ಕೃಷ್ಣನ ಮಾಧುರ್ಯೋಪಾಸನೆ ಮಾಡಿದ್ದಾರೆ. ಕೃಷ್ಣನನ್ನು ಪ್ರೀತಿಸುವ ಗೋಪಿಕಾಸ್ತ್ರೀಯರು, ಅವನು ಮಧುರೆಗೆ ಹೊರಟಾಗ ಅಗಲಿಕೆಯ ಅನುಭವದಲ್ಲಿ ಕೊರಗುವ ಕನ್ನಿಕೆಯರ ಕೋಮಲ ಅಂತಃಕರಣವನ್ನು, ದೀನತೆಯನ್ನೂ ಕೃತಿಗಳಲ್ಲಿ ತಂದಿದ್ದಾರೆ. ಕೃಷ್ಣನ ಪುಂಡಾಟ, ಚೇಷ್ಟೆ, ಕಪಟನಟನೆ, ಶೃಂಗಾರಗಳನ್ನು ಅಕ್ಕರೆಯಿಂದ ಪೋಷಿಸಿದ ಅವರುಗಳೇ ಕೃಷ್ಣನ ನಿರ್ಗಮನ ಸಹಿಸಲಾರದೆ ಅವನ ನೆನಪಲ್ಲಿ ಕುಂದಿಹೋಗುವ ಚಿತ್ರಣಗಳಿವೆ. ಕೆಲವೊಮ್ಮೆ ಅವರ ಕೃತಿಗಳಲ್ಲಿ ಶೃಂಗಾರ ಭಾವ ತುಸು ವಾಚ್ಯವೇ ಆಗಿದೆಯೆನಿಸಿದರೂ ಅದು ನೈಜತೆಯ ಭಾಗವಾಗಿ ಬರುತ್ತದೆ.

ಸಾ.ಕೃ.ರಾಮಚಂದ್ರರಾಯರು ಹೇಳುವಂತೆ "ಅಶ್ಲೀಲವೆಂಬ ಅಪವಾದಕ್ಕೆ ಈಡಾದರೂ ಸಹಜವಾಗಿ ಬಂದ ಮಾತನ್ನು ನುಂಗದೆ, ಇಟ್ಟು ಅಳಿಸದೆ ಹಾಗೆಯೇ ಬಿಟ್ಟುದು ಅವರ ವೈಶಿಷ್ಟ್ಯ"[102] ಈ ಮಾತಿಗೆ ಉದಾಹರಣೆ ಎನಿಸಬಹುದಾದ ಸಾಲುಗಳು:

ಪುರುಷನುಳ್ಳವಳು ನಾ। ಪುರುಷನು ಕೇಳ್ಯಾನು
ಗುರುತು ಕಂಡರೆ ಎನ್ನ ಕೊಂದಾನು।
ಸರಸವಾಡಲು ಬೇಡ। ಸಡಿಲ್ಯಾವು ಮುಡಿಹೂವು
ಸುರತ ಬೇಕಾದರೆ ಬರುವೆ ನಾ ವನಕೆ॥

ಥಟ್ಟನೆ ತುಟಿಯ ಚುಂಬಿಸುವುದೇನೋ ನೀನು
ರಟ್ಟು ಮಾಡಲುಬೇಡ ರಾಜ್ಯದೊಳಗೆ।
ಗುಟ್ಟಿನಿಂದಲಿ ಎನ್ನ ತವಕದಿ ಕೂಡೋ
ಅಟ್ಟಹಾಸದಿ ಮೆರೆವ ಪುರಂದರವಿಠಲ॥ ಹಾಲು ಉಕ್ಕಿತೋ ರಂಗಾ॥

ಉನ್ಮತ್ತ ಪ್ರಣಯ ಚೇಷ್ಟೆಯ, ಗೋಪಿಯರ ನೆಚ್ಚಿನ ಪ್ರೇಮಿಯಾಗಿಯೂ ಪುರಂದರದಾಸರ ಕೃಷ್ಣ ಚಿತ್ರಿತನಾಗಿದ್ದಾನೆ. ಶೃಂಗಾರಭಾವದ ಮೂಲಕವೇ ಗೋಪಿಯರನ್ನು ಕಡೆಗೆ ಆಧ್ಯಾತ್ಮಿಕ ಹಂಬಲಕ್ಕೆ ಕರೆದೊಯ್ಯುವ ಪುರಂದರದಾಸರಿಗೆ ಭಾಗವತದ ಕೃಷ್ಣನೇ ಸ್ಫೂರ್ತಿ ಸೆಲೆಯಾಗಿದ್ದಾನೆ.

ಕಾವ್ಯ ಸಂಪತ್ತು – ಶೈಲಿ

ಪುರಂದರದಾಸರ ಕೃತಿಗಳಲ್ಲಿ ಕಾವ್ಯ ಸಂಪತ್ತು ಹೇರಳವಾಗಿದೆ. ಭಾವನೆಯ ಉತ್ಕಟತೆಯಿಂದ ಕವಿಯ ಕಲಾನಿಕಷದಲ್ಲಿ ಅನುಭವವು ಹಾದುಬಂದು ಕೃತಿಕಾರನ ರಸಾನುಭೂತಿಯಿಂದಾಗಿ ನಿತ್ಯನೂತನವೆನಿಸುತ್ತದೆ. ಅವರ ಕಾವ್ಯದ ವ್ಯಕ್ತಿ ನಿರಪೇಕ್ಷತೆಯನ್ನು ಮುಖ್ಯವಾಗಿ ಗಮನಿಸಬೇಕು. ಅವರ ಕಾವ್ಯದಲ್ಲಿ ಬರಿಯ ಕಲ್ಪನೆ, ಒಣ ಚಿಂತನೆಗಳಿಲ್ಲ, ಬದುಕನ್ನು ಎದುರಿಸಿದ ಧೀಮಂತಿಕೆಯು ಅನುಭವಗಳ ಸಂಕೀರ್ಣತೆಯಲ್ಲಿ ಹಾಸುಹೊಕ್ಕಾಗಿ ಮೂಡಿಸಿದ ಲೌಕಿಕ ಚಿಂತನೆಗಳನ್ನು, ಪಾರಮಾರ್ಥಿಕ ವಿಚಾರಗಳನ್ನು ಕಾವ್ಯದ ಜೀವಾಳವಾಗಿರಿಸಿ ಕೊಂಡವರು ಅವರು. ಅವರ ಕೀರ್ತನೆಗಳು ಸುಲಭ, ಸರಳ , ಆದರೆ ಅವುಗಳ ಒಳಗಿರುವ ಅನುಭವ ಮತ್ತು ಅನುಭಾವ ಸಂಪತ್ತಿನ ಕಾವ್ಯ ತೀವ್ರವಾದ ಜೀವಂತಿಕೆಯಲ್ಲಿದೆ.

ಅವರ ಕಾವ್ಯದಲ್ಲಿನ ಉಪಮೆ, ಹೊಚ್ಚ ಹೊಸ ಹೂಗಳಂತಿವೆ. ಅಮೂರ್ತಕ್ಕೆ ಮೂರ್ತತೆಯನ್ನು ತಂದುಕೊಡುವಂಥವುಗಳಾಗಿವೆ. ಸತ್ವಯುತವಾದ ಭಾವನೆಯ ಬೇಡಿಕೆಗೆ ಪ್ರತೀಕವಾಗಿ ಬರುವ ಈ ಸಾಲು ಉದಾಹರಣೆ: "ಕಿಚ್ಚಿನೊಳಗೆ ಬಿದ್ದ ಕೀಟ ನಾನಯ್ಯ ಅಚ್ಯುತ ತೆಗೆಯೊ ಅನಂತ ಕಾಯೋ..": ಒಮ್ಮೆ ಮಾನಹೋದ

ಮೇಲೆ ಸತ್ಕಾರ ಮಾಡಿದರೆ ಅದು "ತೊಗಲ ಮೂಗ್ಹರಿದು ಚಿನ್ನದ ಮೂಗನಿತ್ತಂತೆ"; ಗುರು ಹಿರಿಯರಿಗೆ ಅಪಮಾನ ಮಾಡಬಾರದೆನ್ನುವ ಮಾತು" ಸಿರಿ ಸೊಡರಿಗೆ ಗುರುಹಿರಿಯರಪಮಾನ ಬಿರುಗಾಳಿ" ಈ ರೂಪಕದಲ್ಲಿ ಐಶ್ವರ್ಯವೆನ್ನುವುದು ಸಣ್ಣ 'ಸೊಡರು' ಅಷ್ಟೆ, ಬೇರೆಯವರನ್ನು ಅಪಮಾನಿಸುವುದು ಬಿರುಗಾಳಿಯಂತೆ ತನಗೇ ಕೇಡು ತರುವುದೆಂಬ ಎಚ್ಚರಿಕೆಯ ಸಂದೇಶವಿದೆ. ಒಬ್ಬರ ಗೊಡವೆಗೆ ಹೋಗದೆ ಬದುಕಬೇಕೆನ್ನುವಲ್ಲಿ "ಭೋಗ್ಯ ಕರ್ಮಂಗಳು ಎಲ್ಲ। ನೀಗಿ ಕಳೆದು ಪೋಗುವ ತನಕ। ಮಾಗಿ ಕೋಗಿಲೆಯಂದದಿ ನೀ। ಮುದುರಿಕೊಂಡಿರು ಒದರಬೇಡ" ಎಂಬ ಸಹನೆಯ ಪಾಠವಿದೆ. "ಮಾಂಸದಾಸೆಗೆ ಮತ್ಸ್ಯ ಸಿಲುಕಿ ಹಿಂಸೆಪಟ್ಟ ಪರಿಯಂತೆ" ಸಂಸಾರದಲ್ಲಿ ಸಿಲುಕಿ ಮೋಸಹೋಗಬೇಡ. ಬದಲಿಗೆ "ಗೇರುಹಣ್ಣಿನಲ್ಲಿ ಬೀಜ ಸೇರಿದಂತೆ ಸಂಸಾರದಿ" ಹೆಚ್ಚು ಆಸೆ ಮಾಡದಂತೆ ಇರಬೇಕು. "ಮಾರಿ ಮನೆಯೊಳಗಿರಲು ಅದು ಸಹಕಾರಿಯೆ?" "ಮಂಡೂಕ ಕೂಗಲದು ಮಂತ್ರವೆನಬಹುದೆ?" "ಹಂದಿಯ ಮರಿಗೆ ಶ್ರೀಗಂಧವ ಪೂಸಿದರೆ ಸಂದುಗೊಂದಿನ ಬಯಕೆ ಬಿಡುಬಹುದೆ?" ಇಂಥ ನೂರಾರು ಉಪಮೆ ರೂಪಕಗಳಲ್ಲಿ ಅರ್ಥಬಾಹುಳ್ಯ ತೆರೆದಿರಿಸುತ್ತಾರೆ.

ಊರೂರು ಕೇರಿ ಕೇರಿ ಸಂಚರಿಸಿ ಹಾಡುತ್ತಿದ್ದ ಪುರಂದರದಾಸರಿಗೆ ಹೆಚ್ಚಾಗಿ ಕಷ್ಟದ ದುಡಿಮೆಗಾರರೂ, ತಾಪತ್ರಯಗಳಲ್ಲಿ ಸಿಕ್ಕು ನೊಂದು ಬೆಂದವರೂ, ಕಷ್ಟದ ಬದುಕಿನ ಸ್ತ್ರೀಯರೂ, ಸಂಸಾರ ಜೀವಿಗಳೂ ಶ್ರೋತೃಗಳಾಗಿ ಒದಗುತ್ತಿದ್ದವರು. ಇಂಥ ಸಾಮಾನ್ಯಜನರಿಗೆ ಪರಿಚಯವಿರುವ ವಸ್ತುಗಳನ್ನೇ ರೂಪಕಗಳನ್ನಾಗಿಸಿ ಹಾಡಿರುವವರು ಈ ಪುರಂದರದಾಸರು. ಚಿನ್ನ ಬಾಲಕೃಷ್ಣನೆನ್ನುವನು ಇವರ ಹಾಡಿನಲ್ಲಿ ಬಾಳೆಯ ಹಣ್ಣಾಗಿದ್ದಾನೆ! ಅಪೂರ್ವವಾದ ಚೆನ್ನಾದ ಚಿನ್ನ ಬಾಲಕೃಷ್ಣನೆಂಬ ಹಣ್ಣನ್ನು ಕೊಳ್ಳಿರಿ ಎಂದು ಹಾಡುತ್ತಾರೆ. ಬಗೆಬಗೆಯ ಹಣ್ಣುಗಳ ವ್ಯಾಪಾರಿಯೇ ಆಗಿಬಿಟ್ಟಿದ್ದಾರೆ. ಹಿಂದೆ ಚಿನ್ನ, ಬೆಳ್ಳಿ ರತ್ನಗಳ ವ್ಯಾಪಾರಿ ಆಗಿದ್ದ ಅವರಿಗೆ ಇಂಥ ರೂಪಕಗಳ ಮೂಲಕ "ಶ್ರೀಪತಿಯ ಪಾದಾರವಿಂದದ ಸೇವೆ ಎಂಬೊ ವ್ಯಾಪಾರ ನಮಗಾಗಿದೆ" ಎಂದು ಹಾಡುವುದು ಸಾಧ್ಯವಾಗಿದೆ. "ಕೊಳೆತು ಹೋಗುವುದಿಲ್ಲ। ಹುಳಿತು ನಾರುವುದಿಲ್ಲ। ಕಳೆದು ಬಿಸಾಡಿಸಿಕೊಳ್ಳುವುದಿಲ್ಲ। ಅಳತೆಗೊಂಬುದಿಲ್ಲ। ಗಿಳಿ ಕಚ್ಚಿ ತಿಂಬುದಿಲ್ಲ। ಒಳಿತಾದ ಶ್ರೀಹರಿ ಎಂಬ ಮಾವಿನ ಹಣ್ಣು" ಎಂದು ಮನತುಂಬಿ ಹಾಡುತ್ತಾರೆ.

ಮತ್ತೊಂದೆಡೆ 'ಮುತ್ತು' ರೂಪಕದಲ್ಲಿ ಸಚ್ಚಿದಾನಂದನ ಗುಣಗಾನ ಮಾಡುತ್ತ ಮುತ್ತಿನ ವ್ಯಾಪಾರಿಯಾಗುತ್ತಾರೆ. "ಜ್ಞಾನವೆಂಬ ದಾರದಲ್ಲಿ ಪೋಣಿಸಿದ ಅಣಿಮುತ್ತು। ಧ್ಯಾನ ಕೊಟ್ಟು ಕೊಂಬುದಿದನು ಮಾನ್ಯರಾದ ಭಕ್ತ ಜನರು" ಮತ್ತೊಂದೆಡೆ ದಾಸರು ಕಲ್ಲು ಸಕ್ಕರೆ ವ್ಯಾಪಾರಿಯಾಗಿ "ಕಲ್ಲುಸಕ್ಕರೆ ಸವಿ। ಬಲ್ಲವರೇ ಬಲ್ಲರು। ಪುಲ್ಲಲೋಚನ ಶ್ರೀಕೃಷ್ಣ ನಾಮವೆಂಬ" ಕಲ್ಲುಸಕ್ಕರೆ ಕೊಳ್ಳಿರೋ ಎಂದು ಮನೆಮನೆಗೆ ಹೋಗಿ ಹಾಡುತ್ತಾರೆ. ದೇವರನಾಮದ ಸವಿ 'ಬಲ್ಲವರೇ ಬಲ್ಲರು' ಎಂಬ ಚಮತ್ಕಾರ, ಕುತೂಹಲದ ನುಡಿಯಲ್ಲಿ ಸಾರ್ಥಕವೆನಿಸಿದೆ. ಇಂಥ ರೂಪಕ ಕೀರ್ತನೆಗಳು ಪುರಂದರದಾಸರ ಖಜಾನೆಯಿಂದ ಬೇಕಷ್ಟು ಹೊರಹೊಮ್ಮಿವೆ.

"ಅಂಬಿಗ ನಾ ನಿನ್ನ ನಂಬಿದೆ ಜಗ। ದಂಬಾರಮಣ ನಿನ್ನ ನಂಬಿದೆ" ಎಂಬ ಅವರ ಸುಪ್ರಸಿದ್ಧ ಹಾಡಿನಲ್ಲಂತೂ ಒಂದು ಸಶಕ್ತ ಸಂಪೂರ್ಣ ರೂಪಕವೇ ತುಂಬಿಕೊಂಡು ಅದರ ಎಲ್ಲ ಅವಯವಗಳಲ್ಲೂ ಕಾವ್ಯದ ಮುದ್ರೆ ಒತ್ತಿಕೊಂಡಿದೆ. "ಹೊಳೆ" ಹರಿಗೋಲು "ಸೆಳವು" "ಸುಳಿ" ಮುಂತಾದ ಅಚ್ಚ ಕನ್ನಡ ಪದಗಳು ತೋರುವ ಕ್ರಿಯೆ ಆರ್ತನಾದವಾಗಿ ಹೊಮ್ಮಿದೆ. 'ಹರಿಗೋಲು' ಎಂಬ ಪದ ಶ್ಲೇಷೆಯಿಂದ ಸಾರ್ಥಕ್ಯವಾಗಿದೆ. ಈ ಕೀರ್ತನೆಯ ಆರ್ತಭಾವಚಿತ್ರಣ ತೆರೆಗಳ ಲೀಲೆಗೆ ದೋಣಿ ಹೊಯ್ದಾಡುತ್ತ ಮುಂದೆ ಸಾಗಿ ದಡ ಸೇರುವ ಪರಿಯಲ್ಲಿ ಪರಿಣಾಮಕಾರಿಯಾಗಿ ಮೂಡಿದೆ. "ನಾರಾಯಣನೆಂಬ ನಾಮವ ನಿಮ್ಮ ನಾಲಗೆ ತುದಿಯಲಿ ಬಿತ್ತಿರಯ್ಯ" ಎಂಬ ಕೃತಿ ಒಕ್ಕಲುತನದ ಬದುಕಿನ ರೂಪಕವನ್ನು, ಬಿತ್ತಿದ ನಂತರ ರಾಶಿ ಮಾಡುವವರೆಗಿನ ಕ್ರಿಯೆಗಳೆಲ್ಲವನ್ನು ಬಳಸಿಕೊಂಡು ಪರಿಣಾಮಕಾರೀ ನಿರೂಪಣೆಯಾಗಿದೆ.

"ಪಂಚೇಂದ್ರಿಯವೆಂಬ ಮಂಚಿಕೆಯನು ಹಾಕಿ
ಚಂಚಲವೆಂಬ ಹಕ್ಕಿಯ ಹೊಡೆಯಿರಯ್ಯ।"

ಎಂಬ ಸೊಗಸಾದ ಅಭಿವ್ಯಕ್ತಿ ಮಾರ್ಮಿಕವಾಗಿ ನುಡಿಚಿತ್ರವಾಗಿದೆ. "ಉದಯಾಸ್ತಮಾನವೆಂಬ ಎರಡು ಕೊಳಗದಲ್ಲಿ ಆಯುಷ್ಯವೆಂಬ ರಾಶಿ ಅಳೆಯುತ್ತಿರೆ..." ಎಂಬಲ್ಲಿ ಅರ್ಥಪೂರ್ಣವಾದೊಂದು ಮುಕ್ತಾಯ ಕೃತಿಗೆ ದಕ್ಕಿದೆ.

ಬಿಂದಿಗೆಯನ್ನು "ದೇಹ"ಕ್ಕೆ ರೂಪಕವಾಗಿಸಿ ಅವರು ಹಾಡಿದ ರಚನೆ ಇಂದಿಗೂ ರಮ್ಯವಾಗಿ ಜನರ ಬಾಯಲ್ಲಿ ನಲಿಯುತ್ತಿದೆ. "ತಾರಕ್ಕ ಬಿಂದಿಗೆ ನಾ ನೀರಿಗ್ಹೋಗುವೆ। ತಾರೇ ಬಿಂದಿಗೆಯ" ಎಂಬ ಈ ಕೃತಿಯು "ಬಿಂದಿಗೆ ಒಡೆದರೆ ಒಂದೇ ಕಾಸು।ತಾರೇ ಬಿಂದಿಗೆಯ" ಎನ್ನುವಲ್ಲಿ ಈ ದೇಹ ಬಿದ್ದು ಹೋಗುವುದರೊಳಗಾಗಿ ಒಳ್ಳೊಳ್ಳೆಯ ಕರ್ತವ್ಯಪಾಲನೆ ಮಾಡೋಣವೆನ್ನುವುದನ್ನು ಮುಂದಿನ ನುಡಿಗಳ ಶಬ್ದ ಚಿತ್ರಗಳ ಮೂಲಕ ಹೇಳುತ್ತ ಹೋಗುತ್ತಾರೆ.

"ಶ್ಲೇಷೆ"ಯನ್ನು ಸಮರ್ಥವಾಗಿ ತನ್ನ ಕಾವ್ಯದಲ್ಲಿ ತಂದು ಭಾಷೆಯ ಮೇಲಿನ ಪ್ರಭುತ್ವವನ್ನು ಮೆರೆದವರು ಪುರಂದರದಾಸರು. "ಪಾಪೋಸು ಹೋದವಲ್ಲ। ಸ್ವಾಮಿ। ಎನ್ನ ಪಾಪೋಸು ಹೋದವಲ್ಲ" ಎಂಬ ಕೀರ್ತನೆಯಲ್ಲಿ ಶ್ಲೇಷಾರ್ಥವನ್ನು ಸೊಗಸಾಗಿ ತಂದಿದ್ದಾರೆ. ಪರಿಪರಿ ತೀರ್ಥಕ್ಷೇತ್ರಗಳಿಗೆ ಹೋಗಿ ದೇವರ ದರ್ಶನದಲ್ಲಿ ಮೈಮರೆತಿದ್ದಾಗ ಹೊರಗೆ ಮೆಟ್ಟುಗಳನ್ನು ಕದಿಯುವ ಕಳ್ಳರು ತನ್ನ ಚಪ್ಪಲಿಗಳನ್ನು ಒಯ್ದರು ಎಂಬ ಅರ್ಥವೂ ಹೌದು. ಆದರೆ ಹೀಗೆ ಹರಿಕಥೆ, ಪ್ರವಚನ, ಪುಣ್ಯಕ್ಷೇತ್ರವೆಂದು ತೊಡಗಿಕೊಂಡಿದ್ದಾಗ ತನ್ನ ಪಾಪೋಸು ಹೋದವು ಎಂದರೆ "ಪಾಪ+ಓಸು" ಪಾಪವು ಅಷ್ಟು ಹೊರಟುಹೋಯಿತು ಎಂಬ ಅರ್ಥವೂ ಇದೆ. "ಮಾಯಾರಮಣ ನಮ್ಮ ಪುರಂದರ ವಿಠಲನ ಮಾಯದಿಂದಲಿ ಮಟ್ಟ ಮಾಯವಾದವು ಎನ್ನ ಪಾಪೋಸು" ಎಂಬ ಮುಕ್ತಾಯದಲ್ಲಿ ಎರಡು ಅರ್ಥಗಳಿಗೂ ಸಮರ್ಥನೆ ಒದಗುತ್ತದೆ. ಇದೇ ರೀತಿಯಾಗಿ "ರಾಗೀ ತಂದೀರ್ಯಾ? ಭಿಕ್ಷಕೆ ರಾಗೀ

ತಂದೀರ್ಯಾ?" ಎಂಬ ಅವರ ಪ್ರಸಿದ್ಧ ಹಾಡಿನಲ್ಲಿಯೂ 'ರಾಗಿ' ಎಂಬ ಶಬ್ದದ ಮೇಲೆ ಉದ್ದಕ್ಕೂ ಶ್ಲೇಷೆಯ ಸರಪಳಿಯನ್ನೇ ಹೆಣೆಯಲಾಗಿ ಅದು ಅರ್ಥಸುಂದರತೆಯನ್ನು ಹೊಮ್ಮಿಸುತ್ತದೆ. "ಅಲ್ಲಿದೆ ನಮ್ಮ ಮನೆ ಇಲ್ಲಿಹುದು ಇದು ಸುಮ್ಮನೆ" ಎಂಬ ಹಾಡು, "ನೀ ತಂದೆ ನಾ ಬಂದೆ। ನೀ ಎನ್ನ ತಂದೆ" "ತುರುಕರು ಕರದರೆ ಉಣಬಹುದಣ್ಣ" ಎಂಬ ಹಾಡುಗಳು, ಇಲ್ಲೆಲ್ಲ ಅವರು ತಂದಿರುವ ಶ್ಲೇಷಾಲಂಕಾರ ಭಾವಗರ್ಭಿತವಾಗಿದೆ.

ಜನರೊಂದಿಗೆ ತೀರ ನಿಕಟ ಸಂಪರ್ಕವಿರಿಸಿಕೊಂಡು ಜನಸಾಮಾನ್ಯರ ನಡುವೆಯೆ ಓಡಾಡಿಕೊಂಡಿದ್ದ ಪುರಂದರದಾಸರಿಗೆ ಜನಜೀವನದ ವಿವರವಾದ ಪರಿಚಯವಿದೆ. ಬಗೆ ಬಗೆಯ ಜನರೊಂದಿಗೆ ಬೆರೆತು ಒಡನಾಡಿದ ಅವರಿಗೆ ಜನಜೀವನದ ವೈವಿಧ್ಯತೆಗಳ ಪರಿಜ್ಞಾನವಿದೆ. ತಮಗೆ ದಕ್ಕಿರುವ ಈ ಲೋಕಾನುಭವವನ್ನು ಅವರು ತಮ್ಮ ಕಾವ್ಯದಲ್ಲಿ ದೇಸಿಯನ್ನು ಬಳಸಿಕೊಳ್ಳುವ ಮೂಲಕವೇ ಪ್ರಭಾವಯುಕ್ತವಾಗಿ ಅಭಿವ್ಯಕ್ತಿಸಿದ್ದಾರೆ. ಆಯಾಯಾ ಜನಪಂಗಡಗಳ ಭಾಷೆಯನ್ನು ಬಳಸಿ ಅವರವರಿಗೆ ತಿಳುವಳಿಕೆಯನ್ನು ಹೇಳುವಲ್ಲಿ ಯಶಸ್ವಿಯಾಗಿದ್ದಾರೆ. ಆಯಾ ಪ್ರಾದೇಶಿಕ ಜನರ ಭಾವಭಾಷೆಗಳು ದೇಸಿಯಲ್ಲೆ ಅವರ ಕಾವ್ಯದ ಒಳಗೆ ಪ್ರವೇಶ ಪಡೆದಿವೆ. ಜನರ ಬಾಯ್ನುಡಿಯಲ್ಲೇ ಬುದ್ಧಿ ಹೇಳುವ ಕೀರ್ತನೆಗಳು ಸೊಗಸಾಗಿ ಜನರ ಹೃದಯದೊಳಹೊಗುವಂತೆ ರಚನೆಯಾಗಿವೆ.

"ಜಯವದೆ ಜಯವದೆ ಈ ಮನೆತನಕೆ"; "ಲೊಳಲೊಟ್ಟೆ ಬದುಕು ಲೊಳಲೊಟ್ಟೆ" "ಮಡಿ ಮಡಿ ಮಡಿ ಎಂದು ಮೂರ್ಮಾರು ಹಾರುತಿ। ಮಡಿಯೆಲ್ಲಿ ಬಂತೆ ಬಿಕನಾಸಿ?" "ಹೊಡಿ ನಗಾರಿ ಮೇಲೆ ಕೈಯ್ಯ। ಘಡ ಘಢ।" "ಹೆಂಡತಿ ಪ್ರಾಣ ಹಿಂಡುತಿ। ದೊಡ್ಡ ಕೊಂಡ ಕೋತಿಯಂತೆ ಕುಣಿಸುತಿ" "ಕೋಳಿಗೆ ಯಾಕೆ ಹೊನ್ನ ಪಂಜರ? ಬೋಳಿಗೆ ಯಾಕೆ ಜಾಜಿಮಲ್ಲಿಗೆ?" ಇಂಥ ಅನೇಕ ಕೃತಿಗಳಲ್ಲಿ ಪುರಂದರರು ಜನಪದ ಸಾಹಿತ್ಯದ ಪರವಾಗಿದ್ದಾರೆ. ದೇಸಿಯನ್ನೆ ಪ್ರಯೋಗಿಸಿದ್ದಾರೆ.

"ದೇಶಿಯು ಮಾರ್ಗದ ರೂಪವನ್ನು ಪಡೆಯದೆಯೆ ಸ್ವಸ್ವರೂಪದಿಂದ ಮೂರ್ತಿವೆತ್ತು ನಿಂತಿರುವುದನ್ನು ನಾವು ಪುರಂದರದಾಸರ ಸಾಹಿತ್ಯದಲ್ಲಿ ಕಾಣುವಂತೆ ಮತ್ತೆಲ್ಲಿಯೂ ಕಾಣಲು ಸಾಧ್ಯವಿಲ್ಲ"*೧ "ಲೊಡಕ ಲೊಡಕ ಜಿಹ್ಮರ ಕೆಟ್ಟ ಸಂಸಾರವು ನೋಡಮ್ಮಮ್ಮ" ಎಂಬ ಕೀರ್ತನೆಯಲ್ಲಿಯೂ ದೇಶೀ ಪದಗಳ ಭಾಮು ಬೆರೆಸಿದೆ. ದೇಸೀ ನುಡಿಗಟ್ಟುಗಳನ್ನು ಬೆರೆಯಿಸಿಕೊಂಡು ಅವರ ಹಾಸ್ಯಪ್ರಜ್ಞೆಯನ್ನು ಮೆರೆಯಿಸುವ ಕೀರ್ತನೆಗಳೂ ತುಂಬಾ ಇವೆ.

ಎಷ್ಟೋ ಬಾರಿ ಅವರು ಹಾಸ್ಯದಿಂದ ಜನರ ಅಹಿತಕರ ನಡವಳಿಕೆಗಳನ್ನು ತಿದ್ದಲು ಯತ್ನಿಸಿದ್ದಾರೆ. ಕೆಲವೊಮ್ಮೆ ಸುತ್ತಣ ಜನರ ರೀತಿನೀತಿಗಳನ್ನು ಕಂಡು ಸಾತ್ವಿಕಕ್ರೋಧದಿಂದ ವ್ಯಂಗ್ಯವಾಗಿ ಅವುಗಳನ್ನು ಅಪಹಾಸ್ಯ ಮಾಡಿದ್ದಾರೆ. "ಡೊಂಕು ಬಾಲದ ನಾಯಕರೆ ನೀವೇನೂಟವ ಮಾಡಿದಿರಿ" ಎಂಬ ಕೃತಿಯಲ್ಲಿ ಹಾಸ್ಯರೂಪದ ಶಬ್ದಚಿತ್ರವಿದ್ದು ತಮಗೆ ಸಿಕ್ಕದುದಕ್ಕೆ ಅತಿಕ್ರಮ ಪ್ರವೇಶ ಮಾಡಿ ಒದ್ದಾಡುವ ಜನರನ್ನು ಕುರಿತ ವಿಡಂಬನೆಯಿದೆ. ಮಾವನ ಮನೆಗೆ ಹೋಗಿ ಅಲ್ಲೇ ಉಳಿದು ಬಿಡುವ ಅಳಿಯನನ್ನು ತಮಾಷೆಯ ಮಾತುಗಳಿಂದ ಎಚ್ಚರಿಸಿದ್ದಾರೆ.

"ಹೆಣ್ಣು ಕೊಟ್ಟ ಮನೆಯಲ್ಲಿ ಸೇರಿ ಇರುವರೇ ಮನುಜ?" ಎಂಬ ಪ್ರಶ್ನೆಯೊಂದಿಗೆ ಪ್ರಾರಂಭವಾಗುವ ಕವಿತೆ ಅಳಿಯನ ಮೇಲಿನ ಆದರವೂ ಆಮೆಲಾಮೇಲೆ ಅನಾದರವಾಗುವ ಪರಿಯನ್ನು ತೋರಿಸುತ್ತದೆ. ಕೃಷ್ಣ ಗೋಪಿಯರನ್ನು ಗೋಳು ಹೊಯ್ದುಕೊಳ್ಳುವಲ್ಲಿ, ಕನ್ನಿಕೆಯರಿಗೆ ಕಾಟ ಕೊಡುವಲ್ಲಿ ಅವರ ಹಾಸ್ಯ ಮನೋಭಾವವು ನವಿರಾಗಿ ಕವಿತೆಯಾಗುತ್ತದೆ. ಅವನು ಕೊಳಲೂದುವಾಗ ಗೋಪಿಕೆಯರು ಕೇಳುತ್ತ ಕೇಳುತ್ತ ಹೇಗೆ ಅಸ್ತವ್ಯಸ್ತ ಚಿತ್ತರಾಗಿ ಮನೆಕೆಲಸಗಳಲ್ಲಿ ಯದ್ವಾತದ್ವಾ ನಡೆದುಕೊಂಡರೆಂಬ ಅವರ ಚಿತ್ರಣವು ನಗೆಯುಕ್ಕಿಸುತ್ತದೆ. ನಿಂದಾಸ್ತುತಿಗಳಲ್ಲಂತೂ ಅವರ ಹಾಸ್ಯಪ್ರಜ್ಞೆ ಮುಪ್ಪುರಿಗೊಂಡು ಮನತಟ್ಟುತ್ತವೆ. ಮಿತವಾದ ಶಬ್ದಗಳಲ್ಲಿ ಹಾಸ್ಯದೊಂದಿಗೆ ವಿವರಣಾತ್ಮಕ ಅರ್ಥವನ್ನು ಹೊರಡಿಸುವುದು ಅವರಿಗೆ ಸುಲಭಸಾಧ್ಯವಾಗಿದೆ. "ಊರ ಹಂದಿಗೆ ಷಡ್ರಸಾನ್ನವನಿಕ್ಕಲು ನಾರುವ ದುರ್ಗಂಧ ಬಿಡುವುದುಂಟೆ?" "ಪಟ್ಟಣ ಕಾವೇರಿಲಿ ಮುಳುಗಲು ನಿನ್ನ ಮುಟ್ಟು ಹೋದೀತೆ ಬಿಕನಾಸಿ?" "ಹೇನು ಬಲ್ಲುದೆ ಮುಡಿದ ಹೂವ ಪರಿಮಳವ?" "ಪೋಗದೂರಿನ ದಾರಿ ಕೇಳಿ ಮಾಡುವುದೇನು?" ಇಂಥ ಅನೇಕ ಸಾಲುಗಳು ದೊರೆಯುವ ಹಾಡುಗಳು ಕನ್ನಡಕ್ಕೆ ಜಾಣ್ನುಡಿ, ನಾಣ್ನುಡಿಗಳಾಗಿ ಪರಿಣಮಿಸಿವೆ. ಅವರ ಹಾಸ್ಯಪ್ರಜ್ಞೆ ಮಡುಗಟ್ಟಿಕೊಂಡು ಬಂದಿರುವ ಕವಿತೆ "ಇಬ್ಬರ್ಹೆಂಡರ ಸುಖವು ಇಂದು ಕಂಡೆನಯ್ಯ" ಜನರ ಬದುಕಿನ ಬೇರೆ ಬೇರೆ ಮಗ್ಗುಲುಗಳನ್ನು ವಿನೋದ ರಸದಲ್ಲಿ ಹಿಡಿದು ವಿಡಂಬನಾತ್ಮಕವಾಗಿ ಕೃತಿಗಳನ್ನು ರಚಿಸಿ ಅಪಾರವಾದ ಸಮಯ ಸ್ಫೂರ್ತಿಯನ್ನು ಹೀಗೆ ತೋರಗೊಟ್ಟಿದ್ದಾರೆ. ಉಲ್ಲಾಸಭಾವದ ಸ್ಥಾಯಿಯಿಂದ ಅಣಗಿಸುವ ರೀತಿಯಿಂದ ಸತ್ಯವನ್ನು ಹೊರಗೆ ತಂದ ಕವಿಯಾಗಿದ್ದಾರೆ.

ಸಮಾಜ ದರ್ಶನ/ಬೋಧನೆ

ಹರಿದಾಸರಾಗಿ, ಸಂಸಾರದ ಬದುಕಿನಲ್ಲೇ ಇದ್ದು, ತಾವಿದ್ದ ಪರಿಸರ, ತಾವು ಓಡಾಡಿದ ಪರ ಊರುಗಳು, ತಾವು ತಿರುಗಾಡಿದ ಕ್ಷೇತ್ರಗಳು ಹೀಗೆ ಉಂಛವೃತ್ತಿಯಲ್ಲಿ ಸಂಚಾರಮಾಡುತ್ತಿದ್ದ ಪುರಂದರದಾಸರು ತಮ್ಮ ಸುತ್ತಮುತ್ತಣ ಜನಜೀವನಕ್ಕೆ ತಮ್ಮನ್ನು ತೆರೆದುಕೊಂಡವರು, ಸ್ಪಂದಿಸಿದವರು. ತಮ್ಮ ಒಡನಾಡಿ ಜನರ ಸಮಸ್ಯೆಗಳು, ನೋವು ನಲಿವು ಕಷ್ಟ ಕಾರ್ಪಣ್ಯಗಳು, ಡಂಭಾಚಾರ ಮೋಸ ಕಪಟಗಳನ್ನು ಹತ್ತಿರದ ಕಣ್ಣಿನಿಂದ ಅರ್ಥೈಸಿಕೊಂಡವರು, ಹೀಗಾಗಿ ಅವರ ಅನೇಕ ಕೃತಿಗಳ ಮೂಲಕವೇ ಆ ಕಾಲದ ಸಮಾಜ ದರ್ಶನವನ್ನೂ ಪಡೆಯಬಹುದು, ಜೊತೆಗೆ ಆ ಸಮಾಜಕ್ಕೆ ಪ್ರತಿಕ್ರಿಯಿಸಿ ಅವರ ಬೋಧಿಸಿದ ನೈತಿಕತೆಯನ್ನೂ ತಿಳಿಯಬಹುದು. ತಾವೂ ವೈರಾಗ್ಯ ಪ್ರವೃತ್ತಿಯಲ್ಲಿದ್ದರೂ ಸನ್ಯಾಸಿಯ ಸ್ಪಂದನರಹಿತತೆ ಅವರಲ್ಲಿರಲಿಲ್ಲ. ಜನರ ಬಳಿ ಸಾರಿ ತಿಳಿವಳಿಕೆ ಹೇಳಿ ಅವರನ್ನು ತಿದ್ದಲು ಯತ್ನಿಸುತ್ತಿದ್ದರು. ಅಥವಾ ಸನ್ಯಾಸಿಯಂತೆ ಸಮಾಜದಲ್ಲೊಂದು ಗುರುವಿನ ಸ್ಥಾನಮಾನಗಳಿಸಿ ಪಾದಪೂಜೆ ಮಾಡಿಸಿಕೊಂಡವರೂ ಅವರಲ್ಲ. ಬದಲಾಗಿ ತಾವೊಬ್ಬ ಸಂತ ಗೃಹಸ್ಥನಾಗಿಯೇ ಬಾಳಿ "ಮಧುಕರ ವೃತ್ತಿ" ಯನ್ನು ಆಶ್ರಯಿಸಿ ಮನುಷ್ಯರಿಂದ ಲೌಕಿಕ ಪ್ರಯೋಜನಗಳನ್ನೇನೂ ಬಯಸದೇ ಅವರನ್ನು ಅಲೌಕಿಕ ಸತ್ಯದ ಪಥದೆಡೆಗೆ ಕರೆದೊಯ್ಯುವ ಪ್ರವಾದಿಯಾಗಿದ್ದವರು.

ವಿಧ ವಿಧ ಬದುಕಿನಲ್ಲಿ ವಿಧ ವಿಧ ಸ್ವಭಾವದ ಜನರನ್ನು ಕಂಡು ದಾಸರು ನೊಂದಿದ್ದಾರೆ, ಚಿಂತನೆಯ ನಿಕಷದಲ್ಲಿ ಸಮಾಜದ ವಿವಿಧ ಮುಖಗಳಿಗೆ ಕನ್ನಡಿ ಹಿಡಿದಿದ್ದಾರೆ. ರಾಜಕೀಯವಾಗಿಯೂ, ಸಾಮಾಜಿಕವಾಗಿಯೂ ನಾಡಿನ ಜನರು ನಾನಾ ದುಗುಡ, ಆತಂಕಗಳಲ್ಲಿ ಇದ್ದಂಥ ಕಾಲವದು. ಕೃಷ್ಣದೇವರಾಯನ ಮರಣದ ನಂತರದ ಸಾಮ್ರಾಜ್ಯದ ಅಸ್ಥಿರತೆಯ ರಾಜಕಾರಣ, ಮುಸಲ್ಮಾನ ದೊರೆಗಳ ಧಾಳಿ, ಏಳಿಗೆಯ ಕಾಲದಲ್ಲಿ ಪುರಂದರದಾಸರು ಊರೂರು ತಿರುಗುತ್ತ ದಿಕ್ಕಿಲ್ಲದ ಗಾಳಿಪಟದಂತಿದ್ದ ಜನಸಾಮಾನ್ಯನ ಬದುಕಿನ ರೀತಿನೀತಿಗಳನ್ನು ಕಂಡು ಬೆದರಿದ್ದಾರೆ. "ಸತ್ಯವಂತರಿಗಿದು ಕಾಲವಲ್ಲ, ದುಷ್ಟ ಜನರಿಗೆ ಸುಭಿಕ್ಷ ಕಾಲ" ಎಂದು ಅವರು ನಿಟ್ಟುಸಿರಿಟ್ಟರು. "ಬಾವಿ ತೋಡಲು ಬೇತಾಳ ಹೊರಟಿತು" ಎಂದು ಮರುಗಿದರು. ಜನರ ಬವಣೆಗೆ ನುಡಿಯಾದರು. ಸಮಾಜದಲ್ಲಿ ತುಂಬಿಕೊಂಡಿದ್ದ ಪೊಳ್ಳುತನವನ್ನು ಬಯಲಿಗೆಳೆದರು. ಇಂಥ ಅವರ ಕೀರ್ತನೆಗಳು ಅಂದಿಗೂ ಇಂದಿಗೂ ಅನ್ವಯಿಸುವಂಥ ಮೌಲ್ಯಗಳಲ್ಲಿವೆ. ಮನುಷ್ಯನ ದುರ್ನೀತಿ ದುಶ್ಚಟಗಳ ವರ್ತನೆ ಅಂದು ಅವರ ಖಂಡನೆಗೊಳಗಾಗಿದ್ದು ಅದು ಇಂದಿಗೂ ಸತ್ಯಸ್ಯವಾಗಿ ಉಳಿದಿದೆ. ಐದುನೂರು ವರ್ಷಗಳ ನಂತರವೂ ಮನುಷ್ಯನ ಗುಣ ಬದಲಾಗಿಲ್ಲವೆಂದೇ ಎನಿಸುತ್ತದೆ.

"ಜಗದೊಳಿರುವ ಮನುಜರೆಲ್ಲ ಹಗರಣ ಮಾಡುವುದು ಕಂಡು। ನಗೆಯು ಬರುತಿದೆ ಎನಗೆ ನಗೆಯು ಬರುತಿದೆ" ಎಂದು ವಿಷಾದದಿಂದ ನಕ್ಕ ಪುರಂದರದಾಸರು ಜನರು ತೋರುತ್ತಿದ್ದ ಡಾಂಭಿಕ ಭಕ್ತಿಯ ಪ್ರದರ್ಶನ ಕಂಡು "ಉದರ ವೈರಾಗ್ಯವಿದು। ನಮ್ಮ ಪದುಮನಾಭನಲಿ ಲೇಶ ಭಕುತಿಯಿಲ್ಲ" ಎಂದು ನಿಟ್ಟುಸಿರಿಟ್ಟರು. ಹೊರಗೊಂದು ಒಳಗೊಂದು ಎಂಬಂತೆ ಬಾಳುತ್ತಿದ್ದವರನ್ನು ಟೀಕಿಸಿದರು. "ಕಾವಿಯಲ್ಲಿ ತಿರುಗುವಿರಲ್ಲ ಕಾಮವ ಬಿಡಲಿಲ್ಲ" "ಎಲ್ಲವನು ಬಲ್ಲೆನೆನ್ನುವಿರಲ್ಲ। ಸಲ್ಲದ ಗುಣ ಬಿಡಲಿಲ್ಲ" ಎಂದು ನೊಂದರು. "ಜಾಲಿಯ ಮರದಂತೆ। ದುರ್ಜನರು" ಎಂದು ಕಟುವಾಗಿ ಅವರು ಹೇಳಬೇಕಾಗಿ ಬಂದಿತು.

"ಬಿಸಿಲಲಿ ಬಳಲಿ ಬಂದವರಿಗೆ ನೆರಳಿಲ್ಲ
ಹಸಿದು ಬಂದವರಿಗೆ ಹಣ್ಣಿಲ್ಲವೊ
ಕುಸುಮ ವಾಸನೆಯಿಲ್ಲ ಕುಳ್ಳಿರಲು ಸ್ಥಳವಿಲ್ಲ
ವಿಷಮರ ದುಸ್ಸಂಗ ಪಡೆದರೇನುಂಟು ॥ ಜಾಲಿಯ ಮರದಂತೆ॥"

ನೈತಿಕತೆಗೆ ಎಡೆಯಿಲ್ಲದ ಸಮಾಜದಲ್ಲಿ ಜನರ ದುರಾಚಾರಗಳಿಗೆ ರೋಸುತ್ತ, ಕಾಲ ವೈಪರೀತ್ಯವನ್ನು "ಧರ್ಮಕ್ಕೆ ಕೈ ಬಾರದೀಕಾಲ। ಪಾಪ। ಕರ್ಮಕ್ಕೆ ಮನ ಬಾಹೋದೀಕಾಲ" ಎಂಬ ಕೃತಿಯಲ್ಲಿ ಹಿಡಿದಿಟ್ಟಿದ್ದಾರೆ. "ಒತ್ತೆಸೂಳೆಗುಂಟು। ಮತ್ತೆಹಾದರಕುಂಟು। ಹೆತ್ತತಾಯಿಗಿಲ್ಲ ಈ ಕಲಿಕಾಲ" ಎಂಬಂಥ ಅಂದಿನ ಕಟುಸತ್ಯಗಳನ್ನು ಮಾರ್ಮಿಕವಾಗಿ ಸಾರಿದರು. ಗುರು ಹಿರಿಯರನ್ನು ಗೌರವಿಸದವರು, ಇನಿಯಳ ಮಾತು ಕೇಳಿ

ಜನನಿಜನಕರನ್ನು ನೋಯಿಸುವವರು ಇಂಥವರೇ ಹೊಲೆಯರಲ್ಲದೆ ಅವರು "ಹೊರಗೆ. ಹೊಲಗೇರಿಯೊಳು ಹೊಲೆಯ ಹೊಲತಿಯಿಲ್ಲ" ಎಂದು ನಿಷ್ಠುರವಾಗಿ ನುಡಿದರು. ಸದಾ ಇನ್ನೊಬ್ಬರನ್ನು ನಿಂದಿಸುವವರನ್ನು "ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧಿಯೋ ಹಾಂಗೆ। ನಿಂದಕರಿರಬೇಕು ಇರಬೇಕು" ಎಂಬುದಾಗಿ ವಿಡಂಬಿಸಿದರು. ಮೂರ್ಖರಾಗಿ ಬಾಳುತ್ತಿರುವವರ ಪಟ್ಟಿಯನ್ನೇ ಮಾಡಿ ಹಾಡಿ ನಿಟ್ಟುಸಿರಿಟ್ಟರು. "ಮುಪ್ಪಿನಲಿ ಹೆಂಡತಿಯ ಮಾಡಿಕೊಂಬವ ಮೂರ್ಖ।" "ಒತ್ತೆಯಿಲ್ಲದೆ ಸಾಲ ಕೂಡುವವನೆ ಮೂರ್ಖ। ಹೆತ್ತ ತಾಯ ಬೈವವನು ಕಡು ಮೂರ್ಖನಯ್ಯ" "ಪಡೆದ ಮಗಳನು ಮಾರಿ ಒಡಲ ಹೊರೆವವ ಮೂರ್ಖ। ಬಡತನವು ಇರಲು ಬಲು ಬಯಸಿಕೊಂಬವ ಮೂರ್ಖ" ಎಂಬೆಲ್ಲ ಸಾಲುಗಳು ಅವರು ಕಂಡ, ಒಡನಾಡಿದ ಜನರ ಬದುಕಿನ ಪರಿಪರಿ ರೀತಿಗಳನ್ನು ಚಿತ್ರಿಸುತ್ತವೆ.

"ಕಲಿಯುಗದ ಮಹಿಮೆಯು ಕಾಣ ಬಂತೀಗ" ಎನ್ನುತ್ತ ಸಮಾಜದ ವಿವಿಧ ದ್ರೋಹಮುಖಗಳನ್ನು ಬಯಲಿಗಿಡುತ್ತಾರೆ. "ತುದಿನಾಲಿಗೆಯಲಿ ಬೆಲ್ಲ ಎದೆಗತ್ತರಿಯವರ ಸಂಗ ಬೇಡ" ಎನ್ನುತ್ತ ಗೋಮುಖ ವ್ಯಾಘ್ರ ಜನರ ಬಡಿವಾರಗಳನ್ನು ಚಿತ್ರಿಸುತ್ತಾರೆ. ಯದ್ವಾ ತದ್ವಾ ಇನ್ನೊಬ್ಬರ ಬಗ್ಗೆ ಕುಹಕ, ನಿಂದನೆ, ಚಾಡಿ ಮಾಡುತ್ತ ಕಾಲ ಕಳೆಯುವವರನ್ನು ಕುರಿತು "ಆಚಾರವಿಲ್ಲದ ನಾಲಿಗೆ। ನಿನ್ನ। ನೀಚಗುಣವ ಬಿಡು ನಾಲಿಗೆ" ಎಂಬ ಕಟು ಸತ್ಯಾಭಿವ್ಯಕ್ತಿಯ ಕೃತಿ ರಚಿಸಿದರು. ಕಡೆಗೆ "ಅಜ್ಞಾನಿಗಳ ಕೂಡ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡ ಜಗಳವೇ ಲೇಸು" ಎಂಬುದಾಗಿ ಎಚ್ಚರಿಸಿದರು. ಹಾಳು ಹರಟೆ, ವ್ಯರ್ಥ ಕಾಲಾಯಾಪನೆ ಮಾಡುತ್ತಿದ್ದ ಜನರನ್ನು ಕಂಡು "ಏನಾಯಿತೀ ಜನಕೆ ಮೌನವದು ಕವಿದಂತೆ ।ಮಾನುಷ್ಯರಾಗಿ ಮರೆತರು ಹರಿಯನು" ಎಂದು ಪ್ರಶ್ನಿಸಿಕೊಂಡು ವಿಷಾದದ ಅಚ್ಚರಿ ಪಟ್ಟರು. ಹರಿದಾಸರಾಗಿ ತಿರುಗುತ್ತಿದ್ದ ತಮ್ಮನ್ನು ಲೇವಡಿ ಮಾಡಿದ ಕೆಲವು ಜನರಿಂದ ನೊಂದುಕೊಂಡು "ನಾ ನಿನ್ನ ಧ್ಯಾನದೊಳಿರುಲು ಇಂಥ ಹೀನಮಾನವರಿಂದ ಏನಾಗಬಹುದಯ್ಯ" ಎಂದು ಹಾಡಿಕೊಂಡ ಇಂಥ ಅವರ ಕೃತಿಗಳು ಅಂದಿನ ಸಾಮಾಜಿಕ ಬದುಕಿಗೆ ಕನ್ನಡಿ ಹಿಡಿಯುತ್ತವೆ.

ತನ್ನ ಸಮಕಾಲೀನ ಸಾಮಾನ್ಯ ಜನರಿಗಾಗಿ ಅವರು ನೈತಿಕತೆಯ ನಡಾವಳಿಗಳನ್ನು ಬೋಧಿಸಿದರು. "ಧರ್ಮವೇ ಜಯವೆಂಬ ದಿವ್ಯಮಂತ್ರ" ಎಂದು ಧಾರ್ಮಿಕ ಮಾರ್ಗದಲ್ಲಿ ನಡೆಯಲು ಪ್ರೇರೇಪಿಸಿದರು. "ಹಿಂದೆ ನಿಂದಿಸುವವರನು ವಂದಿಸುತಲಿರಬೇಕು। ಕುಂದೆಣಿಸುವವರ ಗಳೆತನ ಮಾಡಲಿಬೇಕು। ಕೊಂದ ವೈರಿಯ ಮನೆಗೆ ನಡೆದು ಹೋಗಲಿಬೇಕು। ಬಂಧನದೊಳಿಟ್ಟವರ ಬಂಧುವಾಗಿಸಿಕೊಳ್ಳಬೇಕು" ಎಂದೆಲ್ಲ ಸನ್ನಡತೆ ಸದಾಚಾರಗಳೇ ಬದುಕಿನ ಮರ್ಮ, ಧರ್ಮ ಎಂದು ಹೇಳಿಕೊಟ್ಟರು. ವಿಹಿತ ಕರ್ಮಗಳನ್ನು ಮಾಡಿ ವಿಷಯ ವಿಚಾರಗಳನ್ನು ಬಿಡಲು ಹೇಳಿದರು. "ಸತ್ಯವೇ ಸ್ನಾನ ಜಪ ನೇಮ ಹೋಮ। ಅ। ಸತ್ಯದಲಿ ನಡೆದು ಮಾಳ್ಪುದು ವ್ಯರ್ಥಕರ್ಮ"ವೆಂದು ಬೋಧಿಸಿದರು. ರೊಕ್ಕವನ್ನು ಗಳಿಸುವುದರಲ್ಲೆ ಬದುಕು ಸವೆಸಬೇಡಿರೆಂದು ಎಚ್ಚರಿಸಿದರು. "ಕಾಲಕಾಲದ ಕರ್ಮಗಳನ್ನು ಕಮಲಾಕ್ಷನಿಗೆ ಅರ್ಪಿಸುತ್ತ ಸುಲಭ ಪೂಜೆಯ ಮಾಡಿ ಬಲವಿಲ್ಲದವರು" ಎಂಬ

ಸೊಗಸಾದ ಕೀರ್ತನೆಯ ಮೂಲಕ ಕೃಷ್ಣಾರ್ಪಣವಾಗಿ ಬದುಕುವ ದಿನಚರಿ ಹೇಳಿಕೊಟ್ಟರು. ಒಣಜಂಭ, ಹಮ್ಮನ್ನು ತೊರೆದು ಬಾಳಲು "ಹಮ್ಮು ಆಡಲಿ ಬೇಡ। ಹಮ್ಮು ಈಡೇರದು। ಹಮ್ಮಿನಿಂದಲಿ ನೀವು ಕೆಡಬೇಡಿರಯ್ಯ" ಎನ್ನುತ್ತ ಕರೆಕೊಟ್ಟರು. ಧರ್ಮಿಷ್ಠನಾಗಿ ಬಾಳುವ ಪರಿ ಹೇಗೆಂದು "ಇರಬೇಕು-ಹರಿದಾಸರ ಸಂಗ। ವರಜ್ಞಾನಿಗಳ ದಯ ಸಂಪಾದಿಸಬೇಕು" ಎಂಬ ಕೃತಿಯಲ್ಲಿ ವಿವರವಾಗಿ ತಿಳಿಯಪಡಿಸಿದ್ದಾರೆ. "ದುಷ್ಟರ ಸಹವಾಸ ಹೀನಗಳು। ಬಲು। ಶಿಷ್ಟ ಜನಸಂಗವು ಹರಕೆ ಬಹುಮಾನ। ಎಷ್ಟು ಓದಿದರಷ್ಟು ಜ್ಞಾನ। ಅದರಲ್ಲಿಟ್ಟು ಭಕುತಿಯ ತಿಳಿಯಲೊ ಸಾವಧಾನ" ಎಂದು ಜ್ಞಾನ ಭಕ್ತಿಯ ಮಾರ್ಗಸೂಚಕರಾದರು.

ವ್ಯಕ್ತಿಶಃ ಮನುಷ್ಯನು ನೈತಿಕ ನಡಾವಳಿಗಳಲ್ಲಿ ಬದುಕಿದರೆ ಅದೇ ಸಮಾಜದ ಆರೋಗ್ಯವೆನ್ನುವುದನ್ನು ಅರಿತಿದ್ದ ಪುರಂದರದಾಸರು ಮನುಷ್ಯನ ಆಂತರಿಕ ಬದಲಾವಣೆಗಳನ್ನು ತಿದ್ದಿ ಬುದ್ದಿ ಹೇಳಲು ಬಯಸಿದರು. ಮಾನವನಿಗೆ ಸನ್ನಡತೆಗಳಲ್ಲಿ ಬಾಳುವುದಕ್ಕೆ ಪ್ರೇರೆಪಿಸಿದ ಪುರಂದರದಾಸರು ನಿಜವಾದ ಸಮಾಜ ಸುಧಾರಕರಾದ ಹರಿದಾಸರು.

ಜೀವನ ದರ್ಶನ

ಮಾನವ ಜೀವಿತವೆಂಬ ನಾಣ್ಯದ ಎರಡು ಮುಖಗಳನ್ನೂ ದರ್ಶಿಸಿದವರು ದಾಸಶ್ರೇಷ್ಠ ಪುರಂದರದಾಸರು. ಸಂಸಾರದ ಅಸಾರತೆಯನ್ನೂ, ಬದುಕಿನ ಅಶಾಶ್ವತೆಯನ್ನೂ ಅವರಂತೆ ಕಂಡು ತಿಳಿಹೇಳಿದವರಿಲ್ಲ. ಆದರೆ ಅದೇ ಹೊತ್ತಿಗೆ ಮಾನವ ಜನ್ಮದ ಅಗಾಧ ಸಾಧ್ಯತೆಗಳನ್ನೂ, ಹಿರಿಮೆಗರಿಮೆಗಳನ್ನೂ ಅವರಂತೆ ಕಂಡು ಸಾರಿದವರಿಲ್ಲ. ಬದುಕಿನ ಬಗ್ಗೆ ವ್ಯಾಮೋಹವನ್ನು ತೊರೆಯಲು ಉಪದೇಶಿಸಿದರು, ಆದರೆ ಬದುಕಿಗೆ ಬೆನ್ನು ಹಾಕಿ ನಡೆಯುವ ವೈರಾಗ್ಯವನ್ನು ಅವರು ಎಂದೂ ಎಲ್ಲೂ ಹೇಳಲಿಲ್ಲ. "ಹೇಸಿಗೆ ಸಂಸಾರದಲ್ಲಿ ಆಶಲೇಶ ಇಡದ ಹಾಗೆ ಈಸಬೇಕು ಇದ್ದು ಜೈಸಬೇಕು" ಎಂಬ ಅವರ ಕೃತಿಯಲ್ಲಿ ಜಂಜಾಟ, ರಗಳೆಗಳಿಂದ ತುಂಬಿದ ಸಂಸಾರವಿದು, ರೇಜಿಗೆ ಹುಟ್ಟಿಸುವಂಥದ್ದು, ಎಂತಲೇ "ಹೇಸಿಗೆ ಸಂಸಾರ" ಎಂದು ಕರೆದರು. ಆದರೆ ಆಶಾರಹಿತವಾಗಿದ್ದು "ತಾಮರಸ ಜಲದಂತೆ ಪ್ರೇಮವಿಟ್ಟು ಭವದೊಳು। ಸ್ವಾಮಿರಾಮ ಎನುತ ಪಾಡಿ ಕಾಮಿತ ಕೈಗೊಂಬರೆಲ್ಲ" ಎಂದು ಲೌಕಿಕ ಹಿತವನ್ನೂ, ಪಾರಲೌಕಿಕ ಸಾಧನೆಯನ್ನೂ ಒಟ್ಟಾಗಿ ಬೋಧಿಸಿದರು, ಅಂಟಿಯೂ ಅಂಟದಂತೆ ಬದುಕುವ, 'ನಾನು ನನ್ನದು' ಎಂಬ ಮಾಯೆಯನ್ನು ಗೆಲ್ಲುವ ವಿಧಾನವನ್ನು ತಿಳಿಹೇಳಿದರು.

ಬದುಕಿನಲ್ಲಿ ಆವರಿಸಿಕೊಳ್ಳುವ ದಾರಿದ್ರ್ಯ, ಚಿಂತೆ, ಬಡತನ, ಮುಪ್ಪು, ರೋಗರುಜಿನಗಳಿಂದ ಉಂಟಾಗುವ ಕಂಗಾಲುತನ ಇವೆಲ್ಲ ಒಂದು ಕಡೆಯಾದರೆ ಶ್ರೀಮಂತ ಜೀವಿತದಲ್ಲಿ ಮನುಷ್ಯನಿಗೆ ಆವರಿಸಿಕೊಳ್ಳುವ ಮದ, ಅಹಂಕಾರ, ಹರಿಯ ವಿಸ್ಮೃತಿ ಮುಂತಾದ ಅನ್ಯಾಯಗಳು. "ಅನ್ನಮದ ಅರ್ಥಮದ ಅಖಿಲ ವೈಭವದ ಮದ। ಮುನ್ನ ತನಗಿದಿರಾರಿಲ್ಲವೆಂಬ ಮದ" ಆದರೆ ಯಾರಿಗೆ ಯಾವುದು ತಾನೇ ಶಾಶ್ವತ? "ನೆಚ್ಚದಿರೋ

ಪ್ರಾಣಿ ಸಂಸಾರ ಸ್ಥಿರವೆಂದು। ಹುಚ್ಚು ಬುದ್ಧಿಯಲಿ ನೀ ಕೆಡಬೇಡ। ಎಚ್ಚರಿತುಕೊಂಡು ಧರ್ಮದಿ ನಡೆ ಕಣ್ಣನು। ಮುಚ್ಚಿದ ಮೇಲುಂಟೆ? ನರಜನ್ಮ ಸ್ಥಿರವಲ್ಲ" ಎಂದು ತಿಳಿಹೇಳುತ್ತಾರೆ. ಬಡತನ, ಅನಾದರಗಳ ಬದುಕನ್ನೂ ಕುರಿತು ದಯನೀಯ ಚಿತ್ರಣಗಳಿವೆ. "ಇತ್ತ ಬಾರೆಂಬರಿಲ್ಲ ಇರವು ಕೇಳುವರಿಲ್ಲ।ಹತ್ತಿರ ಕುಳ್ಳಿರಿಸಿ ಆದರಿಪರಿಲ್ಲ" "ಬಿಂದು ಮಾತ್ರ ಮಂಡೆಗೆ ಎಣ್ಣೆ ಮೊದಲಿಲ್ಲ। ಬಂದೆಯಾ ಎಂಬುವರಿಲ್ಲ ಭವಣೆ ಕೇಳು ಹರಿಯೇ"

ಮನುಷ್ಯ ಸ್ವಾರ್ಥಪರನಾಗಿಯೇ ಇರುತ್ತಾನೆ. ನಿಜವಾದ ಪ್ರೀತಿ, ಮಮತೆಗಳನ್ನು ಕಾಣುವುದು ಬಹಳ ಅಪರೂಪ.

ಬಾಯಾರಿತು ಎಂದು ಬಾವಿ ನೀರಿಗೆ ಹೋದೆ
ಬಾವಿಲಿ ಜಲಬತ್ತಿ ಬರಿದಾಯ್ತೊ ಹರಿಯೇ।
ಬಿಸಿಲ ತಾಳದೆ ಮರದ ನೆರಳಿಗೆ ಹೋದೆ
ಮರ ಬಗ್ಗಿ ಶಿರದ ಮೇಲೆ ಒರಗಿತು ಹರಿಯೇ॥

ಮನುಷ್ಯನ ಬದುಕಿನಲ್ಲಿ ಎದುರಾಗುವ ವಿಶ್ವಾಸದ್ರೋಹ, ಅಸಹಾಯಕತೆ, ಅನಾಥಪ್ರಜ್ಞೆಯ ಪಾಡನ್ನು ಬಹುಶಃ ಇದಕ್ಕಿಂತ ಸಶಕ್ತವಾದ ಸಾಲುಗಳಲ್ಲಿ ಹೇಳಲು ಸಾಧ್ಯವಿಲ್ಲ. ಬದುಕಿನಲ್ಲಿ ಬಂದೊದಗುವ ಶೂನ್ಯವನ್ನು, ನೋವನ್ನು, ಭೀತಿಯನ್ನು "ಅಡವಿಲಿ ಮನೆ ಮಾಡಿ। ಗಿಡಕೆ ತೊಟ್ಟಿಲು ಕಟ್ಟಿ। ತೊಟ್ಟಿಲಿನ ಶಿಶುವೇ ಮಾಯವಾಯಿತೋ ಹರಿಯೆ" ಎಂಬ ಸಾಲು ಮಾರ್ಮಿಕವಾಗಿ ನೀಡುತ್ತದೆ. ಆದರೂ ಈ ಭೀತಿ ಸಂಕಟಗಳನ್ನು ಕೇಳಿಸಿಕೊಳ್ಳಲು, ಕಾಪಾಡಲು ಒಬ್ಬನಿದ್ದಾನೆ ಎನ್ನುವುದನ್ನು ಸಾಲುಸಾಲಿಗೂ ಬರುವ "ಹರಿಯೇ, ಹರಿಯೇ" ಎಂಬ ಮೊರೆಯ ಕರೆಯೇ ಸೂಚಿಸುತ್ತದೆ. "ಯಾರಿಗೆ ಯಾರುಂಟು? ಎರವಿನ ಸಂಸಾರ। ನೀರ ಮೇಲಣ ಗುಳ್ಳೆ ನಿಜವಲ್ಲ ಹರಿಯೇ" ಎಂಬ ಪಲ್ಲವಿಯ ಈ ಹಾಡು ತುಂಬ ಪ್ರಸಿದ್ದವಾಗಿದೆ.

ಮರಣ ಬರುವಾಗ ಯಾರಿಗೆ ಯಾರೂ ಇಲ್ಲ ಎಂಬ ಕಟುಸತ್ಯವನ್ನು ಚಿತ್ರಿಸುವ ಕೀರ್ತನೆಗಳು ಬೇಕಷ್ಟಿವೆ. "ಯಾರೂ ಸಂಗಡ ಬಾಹೋರಿಲ್ಲ। ನಾರಾಯಣ ನಿಮ್ಮ ನಾಮ ಒಂದಲ್ಲದೆ" ಎಂಬ ಕೃತಿ ಮಾರ್ಮಿಕವಾಗಿ ಮಾತೆಯಿರಲಿ, ಮಡದಿಯಿರಲಿ, ಪುತ್ರಮಿತ್ರರಿರಲಿ ಯಾರ್‍ಯಾರೂ ಜತೆಗೆ ಬರಲಾರರು ಎನ್ನುವುದನ್ನು ಹೇಳುತ್ತದೆ. "ಮಂಚ ಬಾರದು ಮಡದಿ ಬಾರಳು। ಕಂಚು ಕನ್ನಡಿ ಬಾರದು। ಸಂಚಿತಾರ್ಥದ ದ್ರವ್ಯ ಬಾರದು। ಮುಂಚೆ ಮಾಡಿದ ಧರ್ಮವೆ" ಸಾಯುವಾಗ ಜೊತೆಗೆ ಬರುವುದು ಮಾಡಿದ ಧರ್ಮವೊಂದೇ ಎಂದು ಸಾರುತ್ತಾರೆ. ಬದುಕಿರುವಾಗಲೇ ಜೀವಕ್ಕೆ ಒಂದೆರಡು ದುಃಖವಲ್ಲ "ಒಂದಲ್ಲ ಎರಡಲ್ಲ ನೊಂದಜೀವಕೆ ದುಃಖ। ಒಂದೊಂದು ಕ್ಷಣಕೆ ಅನಂತ ದುಃಖ" ಇಡೀ ಜೀವಿತ ದುಡಿಮೆಯಲ್ಲೇ ಕಳೆಯಿತು.

"ಮಡದಿ ಮಕ್ಕಳ ಪ್ರಪಂಚಕ್ಕಾಗಿ, ದುಡಿ
ದುಡಿದು ಹಾಕಿದೆಯೊ ಮುದಿಕೋಣನಾಗಿ
ಮಡಿದು ಪೋಪಾಗ ಯಾರಿಲ್ಲವಾಗಿ, ಇನ್ನು
ಧೃಡದಿ ನಿನ್ನೊಳು ನೀನು ತಿಳಿಯೊ ಗೂಗಿ"

ನನ್ನವರೆಂಬ ವ್ಯಾಮೋಹದಲ್ಲಿ ಅವರಿಗಾಗಿ ದುಡಿದು ಕಡೆಗೊಮ್ಮೆ ದೇಹ ತ್ಯಜಿಸುವಾಗ ಒಂಟಿಯಾಗಿ ತೆರಳಬೇಕಾಗುತ್ತದೆ ಎನ್ನುವ ಎಚ್ಚರಿಕೆ ನೀಡಿದರೂ ಪುರಂದರದಾಸರು ಸಂಸಾರ ವಿರೋಧಿಯಲ್ಲ. ಸ್ವತಃ ಅವರೇ ಸಂಸಾರಸ್ಥರು. "ಸಂಸಾರವೆಂಬಂಥ ಸೌಭಾಗ್ಯವಿರಲಿ।ಕಂಸಾರಿ ನೆನೆವೆಂಬ ಸೌಭಾಗ್ಯವಿರಲಿ" ಎಂದೇ ಹಾಡಿದ್ದಾರೆ. ಕೌಟಂಬಿಕ ಜೀವನವು ಸಾಂಸಾರಿಕವಾದ ಜಂಜಡಗಳಲ್ಲೆ ಬಿದ್ದು ಹೋಗದೆ, ಆಧ್ಯಾತ್ಮದ ಕಡೆಗಿನ ಸಾಧನೆಯೂ ಆಗಿ ಅರ್ಥಪೂರ್ಣವಾಗಿರಬೇಕು ಎನ್ನುವುದಷ್ಟೆ ಅವರ ಆಶಯವಾಗಿದೆ. ಸಾಂಸಾರಿಕ ಚಿಂತನೆಯಲ್ಲೆ ಮುಳುಗಿ ಜೀವವು ಆಧ್ಯಾತ್ಮಕ್ಕೆ ತೆರೆದುಕೊಳ್ಳದೇ ಹೋಗಬಾರದೆನ್ನುವುದು ಅವರ ಚಿಂತನವಾಗಿದೆ. ಹೀಗಾಗಿ ಪದೇ ಪದೇ ಸಂಸಾರದ ಅಸ್ಥಿರತೆ ಸಾರುತ್ತಾರಷ್ಟಲ್ಲದೆ ಅವರು ಕುಟುಂಬಜೀವನ ದ್ವೇಷಿಗಳಲ್ಲ. ಜೀವನ ಎನ್ನುವುದು ಒಂದು ಪ್ರವಾಸಿಮಂದಿರದ ತಂಗುದಾಣದಲ್ಲಿರುವಂತೆ ಅಷ್ಟೆ. ಎಂತಲೇ ಹೇಳುತ್ತಾರೆ 'ಪದ್ಮ ಪತ್ರಮೀಮಾಂಸ'ದಂತಿರಬೇಕು ಎನ್ನುವುದನ್ನು. "ಹ್ಯಾಂಗೆ ಇರಬೇಕು ಸಂಸಾರದಲ್ಲಿ। ಪಕ್ಷಿ ಅಂಗಳದಲ್ಲಿ ಬಂದು ಕೂತಂತೆ। ಆ। ಕ್ಷಣದಲ್ಲಿ ಹಾರಿ ಹೋದಂತೆ" ಹೀಗೆ ನಿರಾಡಂಬರದ ಕಾವ್ಯದ ಸೆಲೆಯಲ್ಲಿ ಸಂಸಾರಸ್ಥ ಜೀವಕ್ಕೆ ಸಂಸ್ಕಾರದ ನೆಲೆಯನ್ನು ಊಡುತ್ತಾರೆ. ಈ ನಿಷ್ಕಾಮಕರ್ಮದಲ್ಲಿ ಬದುಕಿ ಹರಿಗೆ ಎಲ್ಲವನ್ನೂ ಅರ್ಪಿಸಿ ಬಾಳಬೇಕು ಎಂದು ಮನದಟ್ಟು ಮಾಡಿಸುವುದೆ ಅವರ ಇಡೀ ಕಾವ್ಯದ ಮೂಲ ಆಶಯವಾಗಿದೆ.

ಬದುಕಿನ ಭ್ರಮೆಗಳ ಪೊರೆಕಳಚಿ ತೋರುವುದಷ್ಟೆ ಅವರ ಕೃತಿಗಳ ಕೆಲಸ. "ಕೊಬ್ಬಲಿರಬೇಡ ಮನುಜಾ ಕೊಬ್ಬಲಿರಬೇಡ" ಎಂದು ಎಚ್ಚರಿಸಿದರು. "ಉಬ್ಬದಿರು ಉಬ್ಬದಿರು ಎಲೆ ಮಾನವಾ। ಹೆಬ್ಬುಲಿಯಂತೆ ಯಮ ಬೊಬ್ಬಿಡುತ ಕಾದಿರುವಾ" ಎಂಬ ಕೀರ್ತನೆ ಅತ್ಯಂತ ಕಲಾತ್ಮಕವಾಗಿ ಸಂಸಾರದ ಅಸಾರತೆಯನ್ನು ತೆರೆದಿಡುತ್ತ ಹೋಗುತ್ತದೆ. ಕಾವ್ಯದ ಚಿಂತನೆಯನ್ನು ಮನದಟ್ಟಾಗಿಸಲು ಹೀಗೆ ಭಾವನೆಗಳ ಪದರುಗಳನ್ನು ಸ್ಪರ್ಶಿಸುತ್ತ ಹೋಗಬೇಕಾಗುತ್ತದೆ. ಕಡೆಗೂ ಜೀವಿಯು ಮೃತ್ಯುವಿನ ಮುಷ್ಟಿಯೊಳಗೆ ಸಿಕ್ಕಾಗ "ನಾಗಹೆಡೆ ನೆರಳಲ್ಲಿ ನಡುಗೊ ಕಪ್ಪೆಯ ರೀತಿ। ಕೂಗಿ ಚೀರಿದರೆ ನೀನಾಗ ಕೇಳುವರೆ?" ಎಂದು ಕೇಳುವಾಗ ಸಂಸಾರದ ಅನಿತ್ಯತೆಯ ಜೊತೆಗೆ ಬದುಕಿನ ಅಂತ್ಯದ ಭೀಕರತೆಯೂ ವ್ಯಕ್ತವಾಗುತ್ತದೆ. ಮನುಷ್ಯನಿಗೆ ವಿವೇಕವಿರಲೆಂದು, ಮೋಹತ್ಯಾಗದ ತಿಳಿವಿರಲೆಂದು "ಗಾಳಿಗಿಕ್ಕಿದ ದೀಪ ಬಾಳು ಬದುಕೆಲ್ಲ" ಎನ್ನುತ್ತಾರೆ. ಹರಿಯನ್ನು ನೆನೆದು ಮುಕ್ತಿ ಪಡೆಯುವ ಸಫಲತೆಯ ಬೆಳಕಿನೆಡೆಗೆ ಅರಿವನ್ನು ಕೊಂಡೊಯ್ಯುತ್ತಾರೆ. ಬುತ್ತಿಯ ಕಟ್ಟಬೇಕು, ಮುಂದೆ ಎತ್ತಲಾದರೂ ಉಣ್ಣಲಾದೀತು. "ಕರ್ತೃ ಪುರಂದರವಿಠಲನ ತತ್ತ್ವವೆಂಬ ಬುತ್ತಿಯನ್ನು" ಬದುಕಿನ ಪ್ರಾಯದ ದಿನಗಳಲ್ಲೇ ಕಟ್ಟು ಮನುಜಾ ಎಂದು ಎಚ್ಚರಿಸುತ್ತಾರೆ. "ಧರ್ಮವೆಂಬೊ ಸಂಬಳವ ಗಳಿಸಿಕೊಳ್ಳಿರೋ। ಹೆಮ್ಮೆಯಿಂದ ಈ ಶರೀರ ನಂಬಿರಬೇಡಿರೋ" ಎನ್ನುತ್ತಾರೆ.

ಮನುಷ್ಯನಿಗೆ ಬಂದೊದಗುವ ಮುಪ್ಪು ಮತ್ತು ಎರಗುವ ಮರಣ ಈ ಎರಡೂ ಪುರಂದರದಾಸರನ್ನು ತುಂಬ ಚಿಂತನೆಗೆ ಹಚ್ಚಿವೆ. ಮುಪ್ಪು ಅನಿವಾರ್ಯವಾಗುವುದು, ಸಾವು ಸೆಳೆದುಕೊಂಡೊಯ್ಯುವುದು ಈ ವಿಚಾರಗಳು ಇವರನ್ನು ತುಂಬ ಕಾಡಿ ದೇವರನ್ನು ನಾವು ಎಷ್ಟು ಪ್ರೀತಿಸುತ್ತಿರಬೇಕೆನ್ನುವುದನ್ನು ಮನದುಂಬುತ್ತಿರುತ್ತವೆ. "ಹಿಗ್ಗುವ ತಗ್ಗುವ ಮುಗ್ಗುವ ಕುಗ್ಗುವ। ಅಗ್ನಿಯೊಳಗೆ ದಗ್ಧವಾಗುವ ದೇಹಕೆ। ಹಿಗ್ಗುವೆಯೇಕೋ-ಏ ಮನುಜಾ- ಹಿಗ್ಗುವೆ ಯಾಕೋ?" ಎಂಬ ಕೃತಿಯಲ್ಲಿ ಮಾನವ ಶರೀರದ ಇತಿಮಿತಿಗಳೆಲ್ಲ ವ್ಯಕ್ತವಾಗುತ್ತವೆ. ವೃದ್ಧಾಪ್ಯ ಮನಷ್ಯನನ್ನು ಅಶಕ್ತನನ್ನಾಗಿ ಮಾಡುವುದನ್ನು ಕುರಿತು ಹೇಳುವಾಗ "ಕಾಲು ಜವಗುಂದಿದವು ದೃಷ್ಟಿಗಳು ಹಿಂಗಿದುವು। ಮೇಲೆ ಜವ್ವನ ಹೋಗಿ ಜರೆಯೊದಗಿತು। ಕಾಲಕರ್ಮಾದಿಗಳು ಕೂಡಿದಾಕ್ಷಣದಲಿ। ಬೀಳುವೀ ತನುವಿನೊಳು ಇನ್ನಾಸೆಯ ಮನವೆ?" "ದಂತಗಳು ಸಡಿಲಿದುವು ಧಾತುಗಳು ಕುಂದಿದುವು। ಕಾಂತೆಯರು ಜರಿದು ಔಕರಿಸುವರು" ಎಂಬೆಲ್ಲ ತ್ರಣಗಳನ್ನು ಕೊಟ್ಟು "ಮನುಜ ಶರೀರವಿದೇನು ಸುಖ" ಎಂದು ಕೇಳುತ್ತಾರೆ.

ಆದ್ದರಿಂದಲೇ ಇದಷ್ಟು ದಿವಸ, ಇಂದ್ರೀಯ ಪಟುತ್ವ ಚೆನ್ನಾಗಿರುವ ಕಾಲದಲ್ಲೇ "ರಾಮ ರಾಮ ರಾಮ ಸೀತಾ ರಾಮ ಎನ್ನಿರೋ", ದೈವಸ್ಮರಣೆ ತಪ್ಪದಿರಲಿ. "ಭರದಿ ಯಮನ ಭಟರು ಬಂದು ಹೊರಡಿರೆಂದು ಮೆಟ್ಟಿ ಮುರಿಯೆ। ಕೊರಳಿಗಾತ್ಮ ಸೇರಿದಾಗ ಹರಿಯ ಧ್ಯಾನ ಒದಗದೋ" ಅಂತ್ಯಕಾಲದಲ್ಲಿ ದೈವಸ್ಮರಣೆ ಒದಗಬೇಕಾದರೆ ಬದುಕಿನ ದಿನಗಳಲ್ಲಿ ಅವನನ್ನು ಸ್ಮರಿಸುವುದು ತಪ್ಪಿರಬಾರದು. "ಹೊನ್ನು ಹಣ ಎನಗುಂಟು। ಹೆಸರಾದ ಮನೆಯುಂಟು ಚಿನ್ನ ಚೀನಾಂಬರವುಂಟು ಚೆಲವುಪ್ಪರಿಗೆಯುಂಟು......." ಎನ್ನುತ್ತ ಉಂಟುಗಳ ಯಾದಿಯೇ ನನ್ನಲ್ಲುಂಟು ಎಂದು ಬೀಗಿದ್ದೇನೆ, ಆದರೆ ಒಂಟಿಯಾಗಿ ಹೋಗುವಾಗ ಯಾರೂ ಇಲ್ಲ. ಎಲ್ಲರೂ ಕೈ ಬಿಡುತ್ತಾರೆ. "ಆಗಲೇ ಕಾಯಬೇಕು ಅಂಬುಜಾಕ್ಷನೇ ಎನ್ನ। ಈಗ ನೀ ಕಾಯ್ದರೇನು ಕಾಯದಿದ್ದರೇನು ಸ್ವಾಮಿ?" ಎನ್ನುತ್ತ ಮರಣ ಕಾಲದಲ್ಲಿ ಹರಿಯ ಸ್ಮರಣೆಯೇ ಮುಖ್ಯವೆನ್ನುತ್ತಾರೆ. "ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ। ಚಿಂತೆಯನು ಬಿಟ್ಟು ಶ್ರೀಹರಿಯ ನೆನೆ ಮನವೆ" ಸಾವು ನಿರ್ದಯವಾದುದು, ನಿಶ್ಚಿತವಾದುದು, ದೈವಸ್ಮರಣೆ ಮರೆಯಬೇಡ.

"ಸಾವು" ತರುವ ಶೂನ್ಯ, ಶೋಕವನ್ನು, ಸಾವಿನಲ್ಲಿರುವ ನಿರ್ದಯತೆ, ಕ್ರೌರ್ಯವನ್ನು ಪುರಂದರದಾಸರ "ಗಿಳಿಯು ಪಂಜರದೊಳಿಲ್ಲ" ಎಂಬ ಕೃತಿ ಪ್ರತಿಮಾತ್ಮಕವಾಗಿ ಮಾರ್ಮಿಕತೆಯ ಅಭಿವ್ಯಕ್ತಿಯಲ್ಲಿ ಮುಂದಿಡುತ್ತದೆ. ಸಾವು ನಿಷ್ಕರುಣಿ. ಅನಿರೀಕ್ಷಿತ ಆಕ್ರಮಣಕಾರಿ, ಸಾವು ನಿಗೂಢವಾದುದು. ಸಾವಿನ ಮುಂದೆ ಮನುಷ್ಯನ ನಿಸ್ಸಹಾಯಕತೆ. ಸಾವು ತರುವ ಸಂಕಟದ ಆಳ, ಅಳಲು ಎಲ್ಲವನ್ನೂ ಪರಿಣಾಮಕಾರಿಯಾಗಿ ಈ ಕೀರ್ತನೆ ಚಿತ್ರಿಸುತ್ತದೆ. ಕೆಲವೇ ಸಹಜ ಮಾತು, ಉದ್ಗಾರದ ಮೂಲಕ ದೊಡ್ಡ ಅರ್ಥಗಳ ಲೋಕಕ್ಕೇ ಪ್ರವೇಶವಾಗಿ ಬಿಡುತ್ತದೆ.

ದೇಹ ಮತ್ತು ಜೀವಗಳ ಸಂವಾದದ ರೂಪದಲ್ಲಿ ಮತ್ತೊಂದು ಕೀರ್ತನೆ ತುಂಬ ಅರ್ಥಗರ್ಭಿತವಾಗಿ ಬದುಕು ಸಾವುಗಳ ನಡುವಿನ ತೆರೆಯನ್ನು ತುಂಬ ಸೂಕ್ಷವಾಗಿ ಅನಾವರಣ ಮಾಡುತ್ತದೆ. ಮರಣದ ಸಂದರ್ಭದಲ್ಲಿ ಕಾಯ ಮತ್ತು ಜೀವವು ಸಂಭಾಷಿಸುವ ತೆರದಲ್ಲಿ ಈ ಕೃತಿ ಜೀವನದ ಕಡೆಗೆ ಅಚ್ಚರಿ ತರುಬಿ ನಿಲ್ಲುವ ವಿಷಾದವನ್ನು ತುಂಬಿಕೊಡುತ್ತದೆ,

"ನನ್ನ ತನುವಿನಲ್ಲಿ ಅನುದಿನದಲ್ಲಿದ್ದು ಸೂರೆಗೊಂಡಿದ್ದ ಜೀವವೇ, ನನಗೊಂದು ಮಾತು ಹೇಳು" ಎಂಬ ಶರೀರದ ಮಾತಿಗೆ "ಘನಕೋಪದಲಿ ಬಂದು ಯಮನವರೆಳೆದೊಯ್ವಾಗ ನಿನ್ನ ಕೂಡಿಕೊಂಡು ಇನ್ನೇತರ ಮಾತು?" ಎಂದು ಜೀವ ಉತ್ತರಿಸುತ್ತದೆ. ಶರೀರ ಹೇಳುವ ಪ್ರತಿಯೊಂದು ಮಾತಿಗೂ ಜೀವವು ಸಾವು ಸನ್ನಿಹಿತವಾಗಿರುವಾಗ ಆಗಿರುವ ಬದಲಾವಣೆಗಳನ್ನು ಹೇಳುತ್ತ ಹೇಳುತ್ತ ತಾನಿನ್ನು ನಿಲ್ಲಲಾರೆ, ಹೋಗುವೆನೆಂದು ಉತ್ತರಿಸುತ್ತದೆ. ಬೇಕು ಬೇಕಾಗಿದ್ದೆಲ್ಲ ನೀನು ಅನುಭವಿಸಿಲ್ಲವೆ ಎಂದು ಶರೀರ ನೆನಪು ಮಾಡುತ್ತಿದ್ದರೆ ಜೀವವು "ಮಂದಗಮನೆ ಯಾರೋ ಮಡದಿ ಮಕ್ಕಳು ಯಾರೋ ಬಂದಂತೆ ಹೋಗ್ತೀನಿ ಕಾಯವೆ" "ನೀರಮೇಲಣ ಗುಳ್ಳೆ ತೋರಿ ಹಾರಿದಂತೆ ಯಾರಿಗೆ ಯಾರಿಲ್ಲ ಕಾಯುವೆ" ಎಂದೆಲ್ಲ ತಾನು ಅನುಭವಿಸಿದ್ದ ಸುಖಗಳನ್ನೆಲ್ಲ ನಿರಾಕರಿಸುತ್ತ ಹೋಗುತ್ತದೆ. ಮರಣೋನ್ಮುಖವಾಗಿರುವ ಕಾಯಕ್ಕೆ ಪುರಂದರವಿಠಲನ ಗಟ್ಟಿಪೂಜೆ ಮಾಡಿರಬೇಕಿತ್ತೆಂದು ಉತ್ತರಿಸುವ ಜೀವವು ಕಡೆಗೂ ಕಾಯವನ್ನು ತ್ಯಜಿಸಿ ಹೋಗುತ್ತದೆ. ಬದುಕಿನಲ್ಲಿ ಕಡೆಯ ಕಾಲದಲ್ಲಿ ಆಗುವ ಭ್ರಮನಿರಸನಕ್ಕೆ ಈ ಕೃತಿ ಪ್ರಾತಿನಿಧಿಕವಾಗಿದ್ದು ನಾಟಕೀಯ ಗತಿಗುಣವನ್ನು ಹೊಂದಿದೆ.

"ಏತರ ಕಟಿಪಿಟಿ। ಒಂದು ದಿನ। ಹೋಗುತಿ ಲಟಪಟಿ" ಎಂಬ ಕೃತಿಯಲ್ಲಿ, "ಲೊಟಪಟ ಸಂಸಾರ ಏನಣ್ಣ" ಎಂಬ ಕೃತಿಯಲ್ಲಿ ದಾಸರು ಶಾಶ್ವತವಲ್ಲದ ಮೂರು ದಿನಗಳ ಈ ಬದುಕಿನಲ್ಲಿ ಅನ್ಯಥಾ ಹಗರಣ, ಮೋಸ, ಮೋಹಗಳೊಳಗೆ ಸಿಲುಕಬೇಡಿರೆಂದು ಎಚ್ಚರಿಸಿದ್ದಾರೆ. "ಯಾರು ಹಿತವರು ನಿನಗೆ ಈ ಮೂವರೊಳಗೆ। ನಾರಿಯೋ ಧಾರುಣಿಯೋ ಬಲು ಧನದ ಸಿರಿಯೋ?" ಎಂದು, "ಯಾರು ಬರುವರು ನಿನ್ನ ಹಿಂದೆ?" ಎಂದು ಜೀವದ ಒಂಟಿಪಯಣವನ್ನು ಮತ್ತೆ ಮತ್ತೆ ನೆನಪಿಸುತ್ತಾರೆ. ಹಾಗಾದರೂ ಈಗಲೇ, ಬದುಕಿರುವಾಗಲೇ ಹರಿಯನ್ನು ನೆನೆಯಲಿ ಎನ್ನುವುದು ಅವರಿಗೆ ಮುಖ್ಯ ಉದ್ದೇಶವಾಗಿದೆ.

ಸಾವೆಂದರೆ ಭಯ ಹುಟ್ಟಿಸುವಂತಿರುವ ಅವರ ಕೃತಿಗಳಲ್ಲಿ ತುಂಬಿರುವುದು ಸಾವಿನ ಭೀಕರತೆ, ಭಯವಲ್ಲ. ಸಾವು ಒದಗುವಾಗ ಭಗವಂತನ ಸ್ಮರಣೆ ಬಾರದೇ ಹೋದೀತಲ್ಲ, ಮರಣದ ಸಂಧರ್ಭದಲ್ಲಿ ಹರಿಯ ನೆನಪು ಒದಗಿ ಕಾಪಾಡಬೇಕಲ್ಲ ಎನ್ನುವುದೇ ಅವರ ಆತಂಕ, ಆಶಯವಷ್ಟೆ! ಹೀಗಾಗಿ ಈ ಭೀಕರತೆಯನ್ನು, ವಾಸ್ತವಿಕತೆಯನ್ನು ಕೃತಿಯಾಗಿಸಿದ್ದಾರೆ. ಇಷ್ಟಾದರೂ ಅವರು ಮಾನವ ಜನ್ಮ ಶ್ರೇಷ್ಠವೆಂದು ಸಾರಿದವರೇ ಆಗಿದ್ದಾರೆ. "ಮಾನವಜನ್ಮ ದೊಡ್ಡದು। ಇದ। ಹಾನಿಮಾಡಲು ಬೇಡಿ ಹುಚ್ಚಪ್ಪಗಳಿರಾ" ಎಂದು ಆತ್ಮೀಯತೆಯಿಂದ ಬೋಧಿಸಿದ್ದಾರೆ. "ಹರಿ ನಾಮಾಮೃತ ಉಣ್ಣದೆ ಉಪವಾಸವಿಹರೆ ಖೋಡಿ?" "ವೇಳೆ ಹೋಗದ ಮುನ್ನ ಧರ್ಮವ ಗಳಿಸಿರೋ" "ಏನುಕಾರಣ ಯದುಪತಿಯನು ಮರೆತಿರಿ?" ಎಂಬಲ್ಲೆಲ್ಲ ಜನಮನ ಸಮೀಪವಾದ ಪ್ರೀತಿಯಿಂದ ಬುದ್ಧಿ ಹೇಳಿದ್ದಾರೆ.

ಸರಳವಾದ ಮಾತುಗಳಲ್ಲಿ ಪುರಂದರದಾಸರು ಮಾನವ ಜನ್ಮದ ಹಿರಿಮೆಗರಿಮೆಗಳನ್ನೂ ಸಾರಿದ್ದಾರೆ. ಮನುಜ ಶರೀರ ಶಾಶ್ವತವಲ್ಲ ಎಂದರೇ ವಿನಹಾ ಮಾನವ ಜನ್ಮವು ಕೀಳು ಎಂದೆಲ್ಲಿಯೂ ಹೇಳಲಿಲ್ಲ. ಈ ಉತ್ಕೃಷ್ಟವಾದ ಜನ್ಮ ಒದಗಿರುವಾಗ, ಸಾಧನೆಯಾಗಿ ಶರೀರವು ಅಶಾಶ್ವತವಾಗಿರುವಾಗ, ಹಾಳು ಮೂಳು ರೀತಿಯಲ್ಲಿ ಬದುಕನ್ನು ವ್ಯರ್ಥಮಾಡದೆ ಜನ್ಮದ ಸದುಪಯೋಗ ಪಡಿಸಿಕೊಳ್ಳಿ, ಪರಮಾರ್ಥ ಸಾಧನೆಯನ್ನೂ ಮಾಡಿರಿ ಎಂದು ತಿಳಿಹೇಳಿದ್ದಾರೆ. ಒಟ್ಟಿನಲ್ಲಿ ಮಾನವನ ಉದ್ಧಾರಕ್ಕೆ ಬೇಕಾದ ಸನ್ನಡತೆ ಸಂಸ್ಕಾರಗಳನ್ನು, ನೀತಿಬೋಧಕ ತತ್ವಗಳನ್ನು ಸಾರಿ ಸಾರಿ ತಿಳಿಯಪಡಿಸಿದ್ದಾರೆ. ಅವರ ಲೋಕಾನುಭವದಿಂದ ಹುಟ್ಟಿದ ಲೋಕಾನುಕಂಪದ ಕೃತಿಗಳ ಮೂಲಕ ಮಾನವ ಜನ್ಮ ಬರುವುದೇ ದೇವರನ್ನು ಕಂಡುಕೊಳ್ಳಲು ಎಂಬ ತತ್ತ್ವ ಸಾರಿದ್ದಾರೆ. ಬದುಕು ಹೇಸಿಗೆ, ನೀರಮೇಲಣಗುಳ್ಳೆ ಎಂದವರು ಹೇಳುವ ಮೂಲಕವೇ ಹರಿಕೃಪೆಯ ಆರಾಧನೆ ಬದುಕಿನ ಶುಚಿತ್ವಕ್ಕೆ, ಜೀವದ ಶಾಶ್ವತ ಸಂಸ್ಕಾರಕ್ಕೆ ಕಾರಣವಾಗುತ್ತದೆನ್ನುವುದನ್ನು ಸೂಚಿಸಿದ್ದಾರೆ.

ಬಾಳುವುದಕ್ಕೆ ಅವರು ಹೇಳುವ ನೀತಿತತ್ತ್ವಗಳು ಸ್ವೋಪಜ್ಞವಾಗಿವೆ. "ಕಲ್ಲಾಗಿ ಇರಬೇಕು ಕಠಿಣ ಭವ ತೆರೆಯೊಳಗೆ। ಬಿಲ್ಲಾಗಿ ಇರಬೇಕು ಬಲ್ಲವರೊಳಗೆ। ಮೆಲ್ಲನೆ ಮಾಧವನ ಮನವ ಮೆಚ್ಚಿಸಬೇಕು। ಬೆಲ್ಲವಾಗಿರಬೇಕು ಬಂಧುಜನದೊಳಗೆ" ಮತ್ತೊಂದು ಕೃತಿಯಲ್ಲಿ "ಭೂತ ದಯಾಪರನಾಗಿರಬೇಕು। ಪಾತಕವೆಲ್ಲ ಕಳೆಯಲಿಬೇಕು। ಮಾತು ಮಾತಿಗೆ ಹರಿಯೆನ್ನಬೇಕು। ಬಂದದ್ದುಂಡು ಸುಖಿಸಲಿ ಬೇಕು। ನಿಂದಾಸ್ತುತಿಗಳ ತಾಳಲಿ ಬೇಕು। ತಂದೆ ಪುರಂದರ ವಿಠ್ಠಲ ಎನಬೇಕು" ಸಮಾಜಕ್ಕೆ ಉಪಕಾರಿಯಾಗಿ ಬಾಳುತ್ತ, ದಾನಧರ್ಮಗಳನ್ನು ಮಾಡುತ್ತ, ಮದ ಮೋಹ ಅಹಂಗಳನ್ನು ತ್ಯಜಿಸುತ್ತ ಸರ್ವತ್ರದಲ್ಲಿ ಹರಿಯನ್ನು ನೆನೆಯುತ್ತ ಬಾಳಬೇಕು. ಇದೇ ಇಹಪರಗಳಿಗೆ ಒಳ್ಳೆಯ ಗತಿ ಎಂದರು. "ಮನವ ಶೋಧಿಸಬೇಕು ನಿಚ್ಚ। ಅನುದಿನ ಮಾಡುವ ಪಾಪ ಪುಣ್ಯದ ವೆಚ್ಚ" "ಇರಬೇಕು ಇರದಿರಬೇಕು ಸಂಸಾರದಿ ಜನಕಾದಿ ರಾಜಋಷಿಗಳಂತೆ" ಎಂದರು. "ನಮ್ಮನ್ನು ಬಾಳಿನಲ್ಲೇ ಉಳಿಸಿ ಬೆಳಕಿನೆಡೆಗೆ ಹೊರಳಿಸುವುದು ಅವರ ಬಯಕೆ" ಎಂದು ಪುರಂದರರ ಬಗ್ಗೆ ಸಾ.ಕೃ. ರಾಮಚಂದ್ರರಾವ್ ಅವರು ತಮ್ಮ **"ದಾಸಸಾಹಿತ್ಯ ಮತ್ತು ಸಂಸ್ಕೃತಿ"** ಕೃತಿಯಲ್ಲಿ ಹೇಳಿದ್ದಾರೆ.

ನಮ್ಮನ್ನು ನೋಡಿಕೊಳ್ಳಲು, ಕಾಪಾಡಲು ಹರಿಯೆಂಬ ಪರದೈವವಿದೆ. ಆದರೆ ನಾವು ಮಾಡಿದ ಪುಣ್ಯ ಪಾಪಕರ್ಮಗಳಿಗನುಗುಣವಾಗಿ ಫಲ ನೀಡುವ ವಿಧಿಯೆಂಬುದಿದೆ. ನಮ್ಮ ಕೃತ್ಯಗಳಿಗೆ ಫಲ ಉಣ್ಣದೆ ಪಾರಾಗುವಂತಿಲ್ಲ. ಹೀಗೆ ಕರ್ಮತತ್ತ್ವವನ್ನು ಪ್ರತಿಪಾದಿಸಿದವರು ಪುರಂದರದಾಸರು. "ಆರೇನು ಮಾಡುವರು? ಆರಿಂದಲೇನಹುದು? ಪೂರ್ವಜನ್ಮದ ಕರ್ಮವಿಧಿ ಬೆನ್ನಬಿಡದು" ಎಂದು ಸ್ಪಷ್ಟವಾಗಿ ಸಾರಿದವರು. "ನಾ ಮಾಡಿದಾ ಕರ್ಮ ಬಲವಂತವಾದರೆ ನೀ ಮಾಡುವುದೇನೋ ಹರಿಯೆ" ಎಂದು ನಿಟ್ಟುಸಿರಿಟ್ಟವರು. ಜನ್ಮಾಂತರಗಳಲ್ಲಿ ಹಾದು ಹಿಂಬಾಲಿಸಿ ಬರುವ ಕರ್ಮಫಲವನ್ನು ನಿವಾರಿಸಿಕೊಳ್ಳುವಂತಿಲ್ಲ ಎಂಬ ನಂಬಿಕೆಯಿದೆ ಅವರಲ್ಲಿ. ಮನುಷ್ಯ

ಜನ್ಮದಲ್ಲಿ ಕೆಟ್ಟ ಕೃತ್ಯ ಮಾಡಿದರೆ ಅದರ ಫಲ ತಪ್ಪುವಂತಿಲ್ಲ, ಸತ್ಫಲಕ್ಕೂ ಕಾರಣವು ಮನುಷ್ಯನ ಸತ್ಕರ್ಮ. ಹೀಗೆ ಕರ್ಮಬಂಧನವನ್ನು ಹರಿಯ ಕೃಪೆಯೊಂದಿರದೆ ಸಡಲಿಸಿಕೊಳ್ಳಲಾಗದು ಎನ್ನುವುದನ್ನು ಅವರ ಅನೇಕ ಕೃತಿಗಳು ಸಾರುತ್ತವೆ. "ಕಷ್ಟ ಪಟ್ಟರೂ ಇಲ್ಲ। ಕಳವಳಿಸಿದರಿಲ್ಲ। ಭ್ರಷ್ಟ ಮಾನವ ಹಣೆಯ ಬರಹವೆನ್ನದೆ ಇಲ್ಲ" ದೈವದ ಮೇಲೆ ಕೋಪಿಸಿದರೇನು ಬಂತು? ಬೇರೆಯವರನ್ನು ಕಂಡು ಕರುಬಿ ಕೊರಗಿದರೇನು? ಆರಿಗೆ ಮೊರೆಯಿಟ್ಟರೇನು? "ತಾ ಪಡೆದು ಬಂದುದುಕುಪಾಯವೇನು? ಕೋಪದಲಿ ಶ್ರೀಪತಿಯ ಶಾಪಿಸಿದರೇನು?" "ತಾನು ಮಾಡಿದ ಕರ್ಮ ತನಗಲ್ಲದೆ। ಏನ ಮಾಡಿದರು ಹಿಂದಿನ ಕರ್ಮವಲ್ಲದೆ?" "ಪ್ರಾಚೀನ ಕರ್ಮವು ಬಿಡಲರಿಯದು। ಯೋಚನೆಯ ಮಾಡಿ ನೀ ಬಳಲ ಬೇಡ" ಮುನ್ನ ಮಾಡಿದ ಕರ್ಮ ಬೆನ್ನಟ್ಟಿ ಬರುವಾಗ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಈ ಕರ್ಮಬಂಧನವನ್ನು ಭೇದಿಸಬೇಕಾದರೆ ಹರಿಯ ಸ್ಮರಣೆ, ಭಕ್ತಿಯಿಂದ ಶರಣಾಗುವಿಕೆ ಒಂದೇ ಗತಿ ಎನ್ನುವುದನ್ನು ಈ ಎಲ್ಲ ಕೃತಿಗಳ ಮೂಲಕ ಸಾರುತ್ತಾರೆ.

ಈ ಭೂಮಿಗೆ ಬಂದಿರುವುದೇ ಹಿಂದೆ ಮಾಡಿರುವ ಕರ್ಮಫಲಗಳನ್ನು ಅನುಭವಿಸಲು. ಒಳ್ಳೆಯದು ಮಾಡಿದ್ದರೆ ಒಳ್ಳೆಯ ಫಲ. ಕೆಟ್ಟದ್ದು ಮಾಡಿದ್ದರೆ ಕೆಟ್ಟಫಲ. ಹೀಗಾಗಿ ಹರಿಗೆ ಶರಣಾಗಿ ಈ ಬಾರಿಯಾದರೂ ಬಿಡುಗಡೆ ಕೇಳಬೇಕು. "ಪೂರ್ವಜನ್ಮದಲಿ ನಾ ಮಾಡಿದಾ ಭವದಿಂದ ಊರ್ವಿಯೊಳು ಜನಿಸಿದೆನೊ ಕೃಷ್ಣ!" ಹುಟ್ಟಿದಂದಿನಿಂದ ಪಟ್ಟ ಕಷ್ಟಗಳಾದರೂ ಅದೆಷ್ಟು? ತೊಟ್ಟಿಲಿನ ಕೂಸನ್ನು ತಾಯಿ ತೊರೆದು ಹೋದಂತಾಗಿದೆ. ನೀನು ನನ್ನನ್ನು ಮರೆತೆಯಾ ಹರಿಯೆ? "ಇಷ್ಟು ಪಾಪಗಳ ಮಾಡಿದ್ದು ಸಾಕೋ। ಸೃಷ್ಟಿಗೊಡೆಯನೆ ಎನ್ನ ಉದ್ಧರಿಸಬೇಕೋ" ಕಳಕಳಿಯಿಂದ ಮೊರೆ ಇಟ್ಟು, ಪಶ್ಚಾತ್ತಾಪದಿಂದ ತಾನು ಮಾಡಿರುವ ಪಾಪಗಳನ್ನು ಹೇಳಿಕೊಂಡು ಹರಿಗೆ ಶರಣಾಗಲೇಬೇಕು ಮಾನವ ಜೀವ. "ಪುಟ್ಟಿಸಬೇಡವೊ ದೇವ ಎಂದಿಗು ಇಂಥ ಕಷ್ಟ ಪಡುವ ಪಾಪಿ ಜೀವನದಲಿ" ಮಾಡಿರುವ ಕರ್ಮಗಳೇ ಋಣಗಳಾಗಿ ಮಾನವನಿಗೆ ಜೀವನದುಸಿರು ಕಟ್ಟಿಸುತ್ತದೆ. "ಋಣವೆಂಬ ಸೂತಕವು ಬಹು ಬಾಧೆ ಪಡಿಸುತಿದೆ। ಗುಣನಿಧಿಯೆ ನೀ ಎನ್ನ ಕಡೆ ಹಾಯಿಸಯ್ಯ"

ಮಾಡಿರುವ ಕೆಟ್ಟ ಕಾರ್ಯ, ಎಸಗಿರುವ ಅನ್ಯಾಯ ಕರ್ಮಗಳನ್ನು ಪಶ್ಚಾತ್ತಾಪದಿಂದ ದೇವರ ಬಳಿ ಹೇಳಿಕೊಂಡು ಕಣ್ಣೀರಿನ ಆತ್ಮನಿವೇದನೆಯಾಗಿಸಬೇಕು. ದೀನನಾಗಿ ಹರಿಗೆ ಶರಣಾಗಬೇಕು. ಹರಿಗೆ ಎಲ್ಲವೂ ಒಪ್ಪಿಸಿ ಅರ್ಪಣಾ ಮನೋಭಾವದಲ್ಲಿದ್ದು ಮಾಗಬೇಕು. "ಎನ್ನ ಕಡೆಹಾಯಿಸುವುದು ನಿನ್ನ ಭಾರ। ನಿನ್ನ ಸ್ಮರಣೆ ಮಾಡುವುದು ಎನ್ನ ವ್ಯಾಪಾರ" "ಎನ್ನ ಮನದ ಡೊಂಕ ತಿದ್ದಿ ಚರಣದಲ್ಲಿ ಸೇರಿಸೋ" ಎಂಬ ಆತ್ಮದ ಮೊರೆ ಹರಿಗೆ ಕೇಳದಿದ್ದೀತೆ? "ಏಕೆ ಕಡೆಗಣ್ಣಿಂದ ನೋಡುವೆ ಕೃಷ್ಣ? ನೀ ಕರುಣಾಕರನಲ್ಲವೆ?" "ತಪ್ಪುಗಳನೆಲ್ಲ ನೀನೊಪ್ಪಿಕೊಳ್ಳೊ। ನಮ್ಮಪ್ಪ ನೀನೆ ತಿಮ್ಮಪ್ಪ ಕಾಯಬೇಕೋ" ಇದೆಲ್ಲ ಜೀವವು ದೇವರಿಗೆ ಶರಣಾಗಬೇಕಾಗುವ ಪರಿಯ ಚಿತ್ರಣ. ದಾರಿಯ ತೋರು ಪರಮಾತ್ಮ ಎಂದು ಮೊರೆಯಿಟ್ಟು ಕರೆಯಬೇಕು. ಇನ್ನಾದರೂ ಸದ್ಬುದ್ಧಿ, ಸದ್ಗತಿ, ಸತ್ಸಹವಾಸ ದಯಪಾಲಿಸಿ ಕಾಪಾಡಲು ಕೇಳಿಕೊಳ್ಳಬೇಕು. ಇಂಥ ಅನೇಕ ಕೃತಿಗಳಲ್ಲಿ ಒಂದು ಪ್ರಸಿದ್ಧ ಕೀರ್ತನೆ ಹೀಗಿದ್ದು ಮಾನವ ಜೀವಿಯು ಮೊರೆಯಿಡಬಾಕಾದುದನ್ನು ನಿವೇದಿಸುತ್ತದೆ.

"ದಾಸನ ಮಾಡಿಕೋ ಎನ್ನ। ಇಷ್ಟು
ಘಾಸಿ ಪಡಿಸುವರೇನೋ ವೆಂಕಟರಮಣ"
ದುರುಳ ಬುದ್ಧಿಗಳೆಲ್ಲ ಬಿಡಿಸೋ। ನಿನ್ನ
ಕರುಣ ಕವಚವೆನ್ನ ಹರಣಕ್ಕೆ ತೊಡಿಸೋ।
ಚರಣಸೇವೆ ಎನಗೆ ಕೊಡಿಸೋ। ಅಭಯ
ಕರ ಪುಷ್ಪವೆನ್ನಯ ಶಿರದಲ್ಲಿ ಮುಡಿಸೋ॥ ದಾಸನ॥

ಧೃಡಭಕ್ತಿ ನೀಡೆಂದು ದೇವರಲ್ಲೆ ಬೇಡುವ ಜೀವ ಅಡಿಗಡಿಗೆ ಅವನ ಚರಣಗಳಿಗೆ ನಮಿಸುತ್ತದೆ. ಮನಸ್ಸನ್ನು ಶುಚಿ ಮಾಡಿ ನಿನ್ನ ಧ್ಯಾನವನ್ನು ಕೊಡು ಎಂದು ಕೇಳಿಕೊಳ್ಳುತ್ತದೆ. ದುರಿತ ರಾಶಿಗಳನ್ನೆಲ್ಲ ತರಿದು ತನ್ನನ್ನು ರಕ್ಷಿಸಬೇಕೆಂದು ಕೋರಿಕೊಳ್ಳುತ್ತದೆ. "ಆಡುವ ಶಿಶು ತಪ್ಪು ಮಾಡಲು ಜನನಿ ಕೊಂಡಾಡುವಳಲ್ಲದೆ ದೂಡುವಳೆ? ಮೂಢ ಬುದ್ಧಿಯೊಳು ಕೆಟ್ಟೆನೆಂದು ಕೋಪ ಮಾಡಬೇಡ ದಯಮಾಡಿ ನೀಡು ಇಷ್ಟವ" ಎಂದು ಶರಣಾಗುತ್ತದೆ.

ಶರಣಾಗತಿಯ ಪರಿಯನ್ನು ಬಗೆಬಗೆಯಾಗಿ ಚಿತ್ರಿಸಿ ಮನುಕುಲಕ್ಕೆ ನೀಡಿದ ಮಹಾನುಭಾವರು ಪುರಂದರದಾಸರು. ನಂಬಿಕೆಯಿಲ್ಲದೆ ಮೊರೆಹೊಗುವುದಲ್ಲ, ನಂಬಿ ಕರೆಯಬೇಕು. ಬಲವಾದ ಧೃಡ ನಂಬುಗೆಯಲ್ಲಿರಬೇಕು. ಜೊತೆಗೆ ಸಾತ್ವಿಕನಾಗಿ ಬಾಳಲು ಧೃಡ ಮನಸ್ಸಿನ ಪ್ರಯತ್ನವನ್ನು ತಪ್ಪದೇ ಮಾಡಬೇಕು. ಸರ್ವಸ್ವವೂ ಹರಿಯೆಂಬ ಭಾವನೆಯ ಅವರ ಹಾಡು "ನಾನೇಕೆ ಬಡವನು? ನಾನೇಕೆ ಪರದೇಸಿ? ಶ್ರೀನಿಧೇ ಹರಿ ಎನಗೆ ನೀನಿರುವ ತನಕ" ಸೊಗಸಾದ ಬಂಧುತ್ವವನ್ನು ಭಗವಂತನೊಂದಿಗೆ ಹೆಣೆದು ನೀಡುತ್ತದೆ. ದೇವರೊಂದಿಗೆ ಅವರಿಗೆಂಥ ಸಖ್ಯ! ಸಲುಗೆ! ಪರಿಪರಿಯಾಗಿ ಪ್ರಯತ್ನವನ್ನೇನೋ ನಾನು ಮಾಡುತ್ತೇನೆ. ಸಜ್ಜನನಾಗಿ ಸಾತ್ವಿಕ ಕರ್ಮದಲ್ಲಿರಲು ಯತ್ನಿಸುತ್ತೇನೆ. ಆದರೆ ನೀನೂ ಕೂಡ ಈ ವಿಷಯದಲ್ಲಿ ನನಗೆ ನೆರವಾಗಬೇಕೆನ್ನುವ ನಿರ್ಬಂಧವನ್ನು ದೇವರಿಗೇ ಹಾಕುತ್ತಾರೆ! ಎನಗು ಆಣೆ ರಂಗ ನಿನಗು ಆಣೆ। ಎನಗೂ ನಿನಗೂ ಇಬ್ಬರಿಗೂ ನಿನ್ನ ಭಕ್ತರಾಣೆ" ಎಂದು ಪ್ರಾರಂಭವಾಗುವ ಈ ಹಾಡು ದೈವದಲ್ಲಿ ಅವರಿರಿಸಿರುವ ಅಪಾರ ಪ್ರೀತಿ, ನಂಬುಗೆ, ಭಕ್ತಿ ಗೌರವ, ಜೊತೆಗೆ ದೇವರನ್ನೇ ಬಂಧಿಸಿಕೊಳ್ಳುವ ಭಾವುಕ ಸಖ್ಯ ಎಲ್ಲವನ್ನೂ ಅಡಗಿಸಿಕೊಂಡಿದೆ. ಹೀಗೆ ಬಗೆಬಗೆಯಲ್ಲಿ ಭಗವಂತನನ್ನು ಪ್ರೀತಿಸಲು, ಆ ಮೂಲಕ ಮಾನವ ಜನ್ಮದ ಸಾರ್ಥಕ್ಯವನ್ನು ಪಡೆಯಲು, ಇಹಪರಗಳೆರಡರ ಏಳಿಗೆ ಹೊಂದಲು ಹಾದಿ ನಿರ್ಮಾಣ ಮಾಡಿಕೊಟ್ಟಿರುವವವರು ಹರಿದಾಸರಾದ ಶ್ರೀಪುರಂದರದಾಸರು.

ಪುರಂದರದಾಸರು ರಚಿಸಿರುವ ಅನೇಕ ಮುಂಡಿಗೆಗಳು ಲಭ್ಯವಿವೆ. ಮನುಕುಲದ ಸರ್ವೋನ್ನತಿಗಾಗಿ ಶ್ರಮಿಸಿ ನೀತಿತತ್ತ್ವಗಳನ್ನು ಕೊಟ್ಟ ಪುರಂದರರು 'ಮುಂಡಿಗೆ' ಎಂಬ ಸಾಹಿತ್ಯಪ್ರಕಾರದಲ್ಲಿಯೂ ಕೃತಿಗಳನ್ನು

ರಚಿಸಿದರು. ನೇರವಾಗಿ ಯಾವ ವಿಚಾರವನ್ನೂ ಹೇಳದೆ ಪರೋಕ್ಷವಾಗಿ ಹೇಳುವುದೇ ಮುಂಡಿಗೆಯ ಶೈಲಿ.ಗುಹ್ಯ ಭಾಷೆಯಲ್ಲಿ ಮಾತಾಡುವ ಈ ಮುಂಡಿಗೆಗಳಲ್ಲಿಯೂ ತತ್ತ್ವ, ನೀತಿ, ಶಾಸ್ತ್ರಗಳು ತುಂಬಿನಿಂತಿವೆ. "ಸುಳ್ಳು ನಮ್ಮಲ್ಲಿಲ್ಲವಯ್ಯೋ। ಸುಳ್ಳೇ ನಮ್ಮನಿ ದೇವರು" ಎಂಬ ಪುರಂದರದಾಸರ ಮುಂಡಿಗೆ ಅರ್ಥಗಳ ಪದರು ಪದರುಗಳನ್ನೆ ತೆರೆಯುತ್ತ ಹೋಗುತ್ತದೆ. "ದೇವರು ಇಲ್ಲ, ಎಲ್ಲ ಸುಳ್ಳು" ಎಂಬ ನಾಸ್ತಿಕರು ಹೇಳುವ, ನಾಸ್ತಿಕರ ದೃಷ್ಟಿಯಲ್ಲಿ "ಸುಳ್ಳು" ಆಗಿರುವ ಆ ಸುಳ್ಳು ನಮ್ಮ ಮನೆ (ದೇಹ)ಯಲ್ಲಿದ್ದಾನೆ. ಬಿಂಬ ರೂಪದಲ್ಲಿದ್ದಾನೆ, ಅವನೇ ನಮ್ಮ ಕುಲದೇವರು ಎಂದೆಲ್ಲ ಅರ್ಥವಿಸ್ತಾರತೆ ಅಪಾರವಾಗಿದೆ.ಈ ಹಾಡಿನಲ್ಲಿ ಬರುವ 'ಇಲಿ' ನಮ್ಮ ಮನಸ್ಸು; 'ಬೆಕ್ಕು' ಇಂದ್ರಿಯಗಳು; 'ಏಡಿ' ಎಂದರೆ ಹತ್ತು ಕಾಲಿನ-ಹತ್ತು ಕರ್ಮೇಂದ್ರಿಯಗಳು ಹೀಗೆಯೇ ಅರ್ಥಲೋಕದ ಆಳ ತೆರೆಯುತ್ತ ಹೋಗುತ್ತದೆ.

"ಏನಾದರೂ ಒಂದಾಗಲಿ। ನಮ್ಮ। ಮನೆ ತುಂಬ ದೇವರು ಮರತುಂಡು ಕಲ್ಲು" "ಜಯವದೆ ಈ ಮನೆತನಕೆ" "ಸುಲಭವಲ್ಲವೋ ಮಹದಾನಂದ" " ಮುಳ್ಳು ಕೊನೆಯ ಮೇಲೆ ಮೂರು ಕೆರೆಯ ಕಟ್ಟೆ" ಇವೇ ಮುಂತಾದ ಮುಂಡಿಗೆಗಳು ವೇದೋಪನಿಷತ್ತಿನೊಳಗಿನ ಗೂಢಾರ್ಥವನ್ನೆ ಬಯಲಿಗೆ ತರುತ್ತವೆ, ಆದರೆ ಗುಹ್ಯ ಭಾಷೆಯಲ್ಲಿನ ಅಂತರಾರ್ಥ ತಿಳಿಯುವ "ಜ್ಞಾನ" ಈ ಮುಂಡಿಗೆಗಳನ್ನು ತಿಳಿಯಲು ಬೇಕಾಗುತ್ತದೆ. ಜೀವರ ಸ್ವರೂಪ, ಸೃಷ್ಟಿಯಿಂದಾರಂಭಿಸಿ ಅನಂತ ಜನ್ಮಗಳ ಜೀವದ ಪಯಣದ ವೃತ್ತಾಂತಗಳೆಲ್ಲ ಪುರಂದರದಾಸರ ಮುಂಡಿಗೆಗಳ ಮೂಲಕ ವ್ಯಕ್ತವಾಗುತ್ತದೆ. ಪುರಂದರದಾಸರು ಇವುಗಳಲ್ಲಿ "ಆರ್ಷವಾಣಿ"ಯಲ್ಲಿ ಮಾತಾಡುತ್ತಾರೆ. ತಮ್ಮ ಅನೇಕ ಮುಂಡಿಗೆಗಳ ಮೂಲಕವೂ ಬದುಕಿನ ಭಾಷ್ಯವನ್ನೇ ಬರೆದವರಾಗಿದ್ದಾರೆ.

ತಮ್ಮ ಕೃತಿಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಶ್ರೀಮಂತವಾದ, ಧೀಮಂತವಾದ ಕೊಡುಗೆ ಕೊಟ್ಟುದಷ್ಟೇ ಪುರಂದರದಾಸರ ಹಿರಿಮೆ ಅಲ್ಲ; ಕರ್ನಾಟಕ ಸಂಗೀತಕ್ಕೂ ಅವರಿಂದ ಸಂದಿರುವ ಕಾಣಿಕೆ ಅಮೂಲ್ಯವೂ, ಅಪಾರವೂ ಆಗಿದೆ. ಹುಟ್ಟು ಕವಿ ಪ್ರತಿಭೆಯವರು ಮಾತ್ರವಲ್ಲ ಅವರು, ಅಭಿಜಾತ ಸಂಗೀತಕಾರರೂ ಹೌದು. ನಾದ ಮಾಧ್ಯಮದ ಮೂಲಕವೇ ಕಾವ್ಯಮಾಧುರ್ಯ ಉಣಬಡಿಸಿದರೆ ಅದು ಜನಮನವನ್ನು ತುಂಬಿ ನಿಲ್ಲುತ್ತದೆ ಎಂದು ಪರಿಭಾವಿಸಿದವರು ಅವರು. ಸಂಗೀತದ ಸಾಹಚರ್ಯದಲ್ಲಿ ಸಾಮಾನ್ಯರಿಗೂ ಸಾಹಿತ್ಯ ತಲುಪಿಸಿದವರು ಅವರು.

ಹರಿದಾಸರ ಸಂಪ್ರದಾಯಸಂಗೀತಕ್ಕೊಂದು ನೆಲೆ,ಬೆಲೆ ಒದಗಿಸಿಕೊಟ್ಟು ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಮೂಲ ಪಠ್ಯವನ್ನು ನಿಗದಿಸಿಪಡಿಸಿಕೊಟ್ಟವರು ಪುರಂದರದಾಸರು, ಸಂಗೀತದಲ್ಲಿ ಅವರಿಗೆ ಅಪಾರ ಪರಿಶ್ರಮವೂ, ವಿದ್ವತ್ತೂ ಇತ್ತೆಂಬುದು ಅವರ ಕೀರ್ತನೆಗಳಿಂದಲೇ ಧ್ವನಿತವಾಗುತ್ತದೆ. ತಮ್ಮ ಕೃತಿಗಳ ರಸಪೋಷಣೆಗಾಗಿ ಅವರು

ಆಯ್ದುಕೊಂಡ ರಾಗಗಳಿಂದಲೇ ಅವರ ಸಂಗೀತ ಪ್ರೌಢಿಮೆಯ ಅರಿವಾಗುತ್ತದೆ. ಕೆಲವು ಕೃತಿಗಳಲ್ಲಿ (ಉದಾಹರಣೆ: 'ನಳಿನಜಾಂಡ ತಲೆಯ ತೂಗಿ ಮೋಹಿಸುತಿರಲು' ಎಂಬ ಕೀರ್ತನೆ) ಅನೇಕಾನೇಕ ರಾಗಗಳನ್ನು ಹೆಸರಿಸಿ (ಇಪ್ಪತ್ತೇಳು ರಾಗಗಳು) ಈ ರಾಗಗಳಲ್ಲಿ ಕೃಷ್ಣ ಕೊಳಲೂದುತ್ತಿರುವ ಪರಿಯನ್ನು, ಅದರ ಪರಿಣಾಮವನ್ನು ಚಿತ್ರಿಸಿದ್ದಾರೆ. ಕೆಲವು ಕೃತಿಗಳಲ್ಲಿ ಅನೇಕ ಸಂಗೀತವಾದ್ಯಗಳನ್ನು ಹೆಸರಿಸಿದ್ದಾರೆ. ನಾಟ್ಯಕ್ರಿಯೆಯ ತಾಳಾಂಗಗಳನ್ನು ತಿಳಿಸಿದ್ದಾರೆ. "ಆಡಿದನೋ ರಂಗ, ಅಧುಬುತದಿಂದಲಿ ಕಾಳಿಂಗನ ಫಣಿಯಲಿ" ಎಂಬ ಅವರ ಒಂದು ಕೀರ್ತನೆಯೇ ಸಾಕು ಅವರ ತಾಳಲಯ ಜ್ಞಾನ ಪ್ರತಿಭೆಯನ್ನು ಕುರಿತು ಅರಿಯಲು.

ಪುರಂದರದಾಸರ ಕಾಲಕ್ಕಿಂತ ಮುಂಚೆ ಯಾವುದೇ ರಾಗದ ಲಕ್ಷ್ಯ-ಲಕ್ಷಣಗೀತೆಗಳೆಲ್ಲ ಸಂಸ್ಕೃತ ಭಾಷೆಯಲ್ಲೇ ಇದ್ದುದು ವಾಡಿಕೆಯಾಗಿತ್ತು. ಇದಕ್ಕಾಗಿ ಮೊತ್ತ ಮೊದಲು ಕನ್ನಡವನ್ನು ಬಳಸಿದ ಹೆಗ್ಗಳಿಕೆ ಹರಿದಾಸ ಪುರಂದರರದು. ಅವರು ರಚಿಸಿದ ಕನ್ನಡದಲ್ಲಿನ ಲಕ್ಷಣ ಗೀತೆಗಳು ಪೂರ್ತಿಯಾಗಿ ಉಪಲಬ್ಧವಿಲ್ಲ. ಲಕ್ಷ್ಯಗೀತೆಗಳು ಕೆಲವು ಉಪಲಬ್ಧವಿದೆ. ತುಳಜಾಜಿಯ 'ಸಂಗೀತ ಸಾರಾಮೃತ'ದಲ್ಲಿ ಪುರಂದರದಾಸರ ಲಕ್ಷಣ-ಲಕ್ಷ್ಯಗೀತೆಗಳನ್ನು ಉಲ್ಲೇಖ ಮಾಡಲಾಗಿದೆ. ಹೀಗೆ ಕರ್ನಾಟಕ ಸಂಗೀತಕ್ಕೆ ನಿರ್ದಿಷ್ಟವಾದ ಒಂದು ಪಥ್ಯ, ಒಂದು ಸಂಪ್ರದಾಯವನ್ನು, ಖಚಿತತೆಯನ್ನು ತಂದುಕೊಟ್ಟವರು ಪುರಂದರದಾಸರು. ಸಂಗೀತ ಪ್ರಪಂಚದಲ್ಲಿ ಮುಂದೆ ಮುನ್ನೂರು ವರ್ಷಗಳ ನಂತರ ಬಂದ ತ್ಯಾಗರಾಜಸ್ವಾಮಿಗಳಿಗೂ ಪ್ರೇರಣೆ, ಪ್ರೋದ್ಬಲವು ಪುರಂದರದಾಸರ ಕೃತಿಗಳೆಂದು ಸ್ವತಃ ತ್ಯಾಗರಾಜರೇ ಹೇಳಿಕೊಂಡಿದ್ದಾರೆ. ಪುರಂದರದಾಸರನ್ನು ಗುರುಗಳೆಂದು ಈ ಕುರಿತು ತ್ಯಾಗರಾಜರೇ ಹೇಳಿಕೊಂಡು ಸ್ಮರಿಸಿಕೊಂಡಿದ್ದಾರೆ.

ಸಂಗೀತ ಪ್ರಪಂಚದ ಉಜ್ವಲ ಪ್ರತಿಭೆಯಾಗಿದ್ದು, ಮೇರು ನಿಧಿಯಾಗಿದ್ದೂ ಪುರಂದರದಾಸರು ಉಳಿದ ವಾಗ್ಗೇಯಕಾರರಂತೆ ಸಂಗೀತಕ್ಕಾಗಿಯೇ ಸಾಹಿತ್ಯ ರಚಿಸಲಿಲ್ಲ. ಬದಲಾಗಿ ಸಾಹಿತ್ಯಭಾವಕ್ಕೆ ಅನುಗುಣವಾಗಿ ಸಂಗೀತ ಸಂಯೋಜಿಸಿ ರಾಗ ನಿಷ್ಕರ್ಷೆ ಮಾಡಿ ಹಾಡಿದರು. ಅವರ ದೃಷ್ಟಿಯಲ್ಲಿ ಭಕ್ತಿಯ ಮನೋಧರ್ಮವಿಲ್ಲದೆ ಯಾವ ಸಂಗೀತವೂ ಸೊಗಯಿಸುವುದಿಲ್ಲ. ಭಗವಂತನಿಗೆ ಸಮರ್ಪಣೆ ಮಾಡದ ಮನೋಧರ್ಮದಲ್ಲಿ ಹಾಡಿದ ಯಾವ ಹಾಡೂ ಸಮರ್ಪಕವಾಗದು. ಎಂತಲೇ ಅವರು "ಕೇಳನೋ ಹರಿ ತಾಳನೋ। ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ" ಎಂದು ಕಲ್ಯಾಣಿರಾಗದಲ್ಲಿ ಹಾಡಿದ್ದಾರೆ. (ಇದೇ ಪ್ರಭಾವ ಪಡೆದು ತ್ಯಾಗರಾಜರೂ ಮುಂದೆ "ಸಂಗೀತ ಜ್ಞಾನಮು ಭಕ್ತಿ ವಿನಾ ಸನ್ಮಾರ್ಗಮುಗಲದೇ" ಎಂಬ ಕೃತಿ ರಚಿಸಿದರು.

ನಾದೋಪಾಸನೆಯು ಭಗವದಾರಾಧನೆಗೆ ಮೀಸಲಾಗಿರಬೇಕೆನ್ನುವುದನ್ನು ಕಾರ್ಯತಃ ಮಾಡಿ, ಬದುಕಿ ತೋರಿದವರು ಪುರಂದರದಾಸರು. ಅವರ ಮಾತಿನಲ್ಲೇ ಹೇಳುವುದಾದರೆ ಭಕ್ತಿಯಿಲ್ಲದ ಗಾನ "ಡಂಭಕದ ಕೂಗಾಟ" "ಭಾವಶುದ್ಧಿಯಿಲ್ಲದವನ ದೇವತಾರ್ಚನೆ" "ಕೋಣಗೆ ವೀಣಾಗಾನವಿದೇತಕೆ?" ಭಕ್ತಿಯಿಲ್ಲದ ಸಂಗೀತ ಗಾಯನವು ಚೇತನರಹಿತ ದೇಹದಂತೆ. ಅಂತರಂಗದಲ್ಲಿ ಹರಿಗರ್ಪಣೆಯಿಲ್ಲದೆ ಹಾಡಿದರೆ ಅದು ಸಂತೆಯೊಳಗೊಂದು ಕೂಗು ಎದ್ದಂತೆ. ಭಗವಂತನನ್ನು ನೆನೆಯದ ಗಾನವು ಗಾರ್ಧಭ ಗಾಯನವೇ ಸರಿ.

ಸಂಗೀತದ ಬಗ್ಗೆಯೇ ಅವರು ರಚಿಸಿರುವ ಈ ಕೃತಿ ಸಂಗೀತದ ಪೂರ್ಣತೆಯನ್ನು ತಿಳಿಸುತ್ತದೆ.

"ತಾಳಬೇಕು। ತಕ್ಕ । ಮೇಳಬೇಕು ॥ ಗಾನ
ಕೇಳಬೇಕೆಂಬುವರಿಗೆ । ಶಾಂತ । ವೇಳೆಬೇಕು॥
ಯತಿ ಪ್ರಾಸವಿರಬೇಕು । ಗತಿಗೆ ನಿಲ್ಲಿಸಬೇಕು
ರತಿಪತಿ ಪಿತನೊಳು ಅತಿ ಪ್ರೇಮವಿರಬೇಕು॥
ಗಳ ಶುದ್ಧವಿರಬೇಕು । ತಿಳಿದು ಪೇಳಲುಬೇಕು
ಕಳವಳ ಬಿಡಬೇಕು । ಕಳೆಮುಖವಿರಬೇಕು॥
ಅರಿತವರಿರಬೇಕು । ಹರುಷ ಹೆಚ್ಚಲು ಬೇಕು
ಪುರಂದರ ವಿಠಲನೆ । ಪರದೈವವೆನಬೇಕು॥

ಸಂಗೀತ, ಸಾಹಿತ್ಯ, ತತ್ವಜ್ಞಾನ, ಹರಿಭಕ್ತಿ, ಸಮಾಜದ ಬಗೆಗಿನ ಕಳಕಳಿ, ವೈರಾಗ್ಯ, ವ್ಯಕ್ತಿನಿರಪೇಕ್ಷತೆ ಈ ಎಲ್ಲ ಗುಣಸಂಪತ್ತುಗಳ ಆಗರವಾಗಿದ್ದ ಅಪೂರ್ವ ವ್ಯಕ್ತಿತ್ವದ ಈ ಪುರಂದರದಾಸರನ್ನು ತನ್ನ ಶಿಷ್ಯನನ್ನಾಗಿ ಪಡೆದ ವ್ಯಾಸತೀರ್ಥರು ಮನದುಂಬಿ "ದಾಸರೆಂದರೆ ಪುರಂದರದಾಸರಯ್ಯಾ" ಎಂದು ಹಿಗ್ಗಿ ಹಾಡಿ ಹೊಗಳಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. "ನೀತಿಯೆಲ್ಲವನರಿತು ನಿಗಮ ವೇದ್ಯನ ನಿತ್ಯ । ವಾತಸುತನಲ್ಲಿಹನ ವರ್ಣಿಸುತಲಿ । ಗೀತ ನರ್ತನದಿಂದ ಕೃಷ್ಣನ್ನ ಪೂಜಿಸುವ ಪೂತಾತ್ಮ ಪುರಂದರದಾಸರಿವರಯ್ಯ" ಎಂದು ವ್ಯಾಸತೀರ್ಥರೇ ತಮ್ಮ ಕೃತಿಯಲ್ಲಿ ಹೇಳಿದ್ದಾರೆ. ಅಲ್ಲದೆ ಪುರಂದರದಾಸರ ಕೃತಿಗಳನ್ನು ಅವರೇ "ಪುರಂದರೋಪನಿಷತ್" ಎಂದು ಕರೆದು ಗೌರವಿಸಿದ್ದಾರೆ. "ಭಾರತದ ವೈದಿಕ ಸಂಸ್ಕೃತಿಗೆ, ಅದರ ಭೌಗೋಲಿಕ ಚಿತ್ರಕ್ಕೆ, ಭಗವದ್ವ್ಯಾಪ್ತಿಗೆ, ಬ್ರಹ್ಮಾಂಡದ ವಿರಾಟ ದರ್ಶನಕ್ಕೆ ಮತ್ತು ಬ್ರಹ್ಮ ಸಾಕ್ಷಾತ್ಕಾರಕ್ಕೆ ಪುರಂದರದಾಸರ ಕೃತಿಗಳು ದ್ಯೋತಕವಾಗಿವೆ"[*೧೮] "ಪುರಂದರದಾಸರ ಕೃತಿಗಳು ಆಧ್ಯಾತ್ಮಪ್ರಜ್ಞೆಗೆ ಆಧಾರಭೂತವಾದ ವಾಕ್ಯಗಳು, ಅನುಭವಸಾರದ ಉಕ್ತಿಗಳು ಮಾನವ ಸಾರ್ಥಕ್ಯದ ಸಂಗ್ರಹ ವಾಕ್ಯಗಳು. ಜನಸಾಮಾನ್ಯರ ಉದ್ಧಾರಕ್ಕೆ ಉದ್ದಿಷ್ಟವಾದ ತೇಜಃಕರಣಗಳು. ಯಂತ್ರಮಯವಾಗುತ್ತಿರುವ ಇಂದಿನ ಜಗತ್ತಿಗೆ ದಾಸರ ಅಮೃತೋಕ್ತಿಗಳು ಜೀವನದ ತಥ್ಯವನ್ನು ತಿಳಿಸಲು ಅತ್ಯಂತ ಉಪಕಾರಿಯಾಗಿವೆಯೆಂದು ಹೇಳಿದರೆ ಅತಿಶಯೋಕ್ತಿಯಾಗದು.[*೧೯]

ಕನಕದಾಸರು

ಪುರಂದರದಾಸರ ಹೆಸರಿನೊಂದಿಗೇ ನೆನಪಾಗುವ ಮತ್ತೊಬ್ಬ ದಾಸರು ಎಂದರೆ ಕನಕದಾಸರು. ದಾಸಕೂಟದ ಮತ್ತೊಬ್ಬ ಪ್ರಮುಖ ವ್ಯಾಖ್ಯಾನಕಾರರೆಂದೇ ಹೆಸರಿಸಬಹುದಾದವರು. ಇಬ್ಬರೂ ವ್ಯಾಸತೀರ್ಥರ ಶಿಷ್ಯರೇ, ವ್ಯಾಸತೀರ್ಥರ ಆದರ, ಪ್ರೀತಿಗಳಿಗೆ ಪುರಂದರದಾಸರಷ್ಟೇ ಕನಕದಾಸರೂ ಬಾಧ್ಯಸ್ಥರಾದವರು. ಒಂದೇಕಾಲದಲ್ಲಿ,

ಒಬ್ಬರೇ ಗುರುವಿನ ಪಥದರ್ಶನದಲ್ಲಿ, ಒಂದೇ ಸಾಮಾಜಿಕ ಪರಿಸರದಲ್ಲಿ ಓಡಾಡಿಕೊಂಡಿದ್ದು ಪರಸ್ಪರ ಸ್ನೇಹಿತರೂ, ಒಡನಾಡಿಗಳೂ, ಒಬ್ಬರನ್ನೊಬ್ಬರು ಮೆಚ್ಚಿಕೊಂಡಿದ್ದವರೂ ಆಗಿದ್ದ ಈ ದಾಸದ್ವಯರನ್ನು "ಹರಿದಾಸ ಸಾಹಿತ್ಯದ ಅಶ್ವಿನೀದೇವತೆ"ಗಳೆಂದೇ ಕರೆದು ಹಿರಿಯರು ಗೌರವಿಸಿದ್ದಾರೆ. ಇಬ್ಬರೂ ಕನ್ನಡ ನಾಡಿನ ಜನಮನದಲ್ಲಿ ಇಂದಿಗೂ ಜೀವಂತವಾಗಿರುವ ಹರಿದಾಸರುಗಳು.

ಪುರಂದರದಾಸರಂತೆಯೇ ಕನಕದಾಸರೂ ತಮ್ಮ ಯಾವ ಕೃತಿಗಳಲ್ಲಿಯೂ ತಮ್ಮ ಜೀವಿತದ ಕಾಲಾವಧಿ, ಜನನ,ಊರು, ಬಾಲ್ಯಗಳ ಕುರಿತು ಏನೊಂದೂ ಹೇಳಿಕೊಂಡಿಲ್ಲ. ಅವರ ಕೃತಿಗಳಲ್ಲಿ ಬರುವ ಗುರುಸ್ತುತಿ, ಅನ್ಯಕವಿಗಳ ಸ್ತುತಿ, ಅವರು ಒಡನಾಡಿದ್ದ ಅನ್ಯದಾಸರುಗಳಲ್ಲಿ ಬರುವ ಅವರ ವಿಚಾರ, ಅವರ ಕಾವ್ಯಗಳಲ್ಲಿರುವ ವಿಜಯನಗರವನ್ನು ಹೋಲುವ ವರ್ಣನೆ ಇವೇ ಮುಂತಾದವುಗಳಿಂದ ವಿದ್ವಾಂಸರು ಅವರ ಬದುಕಿನ ಕಾಲಾವಧಿಯ ನಿರ್ಣಯ ಮಾಡಿದ್ದಾರೆ. ಪುರಂದರದಾಸರಿಗಿಂತ ನಾಲ್ಕೈದು ವರ್ಷಕ್ಕೆ ಕನಕದಾಸರು ಕಿರಿಯರಾಗಿದ್ದಿರಬಹುದು ಎಂದು ನಿರ್ಧರಿಸಿದ್ದಾರೆ. ಕ್ರಿ.ಶ. ೧೪೮೮ರಲ್ಲಿ ಕನಕದಾಸರು ಜನಿಸಿ ಸು. ೯೦ ವರ್ಷಗಳ ಕಾಲ ಬದುಕಿದ್ದು ೧೫೭೮ರಲ್ಲಿ ಮರಣ ಹೊಂದಿದ್ದಾರೆನ್ನುವುದು ನಿರ್ಧರಿತವಾಗಿದೆ.

ವಿಜಯನಗರ ಸಾಮ್ರಾಜ್ಯದ ಉಚ್ಛ್ರಾಯ ಕಾಲ ಹಾಗೂ ಪತನಕಾಲ ಇವೆರಡನ್ನೂ ತಮ್ಮ ಜೀವಿತಾವಧಿಯಲ್ಲೇ ಕಂಡವರು ಕನಕದಾಸರು. ಅವರ "ಮೋಹನ ತರಂಗಿಣಿ" ಕಾವ್ಯದಲ್ಲಿ ಅತ್ಯುತ್ಕರ್ಷ ಕಾಲದಲ್ಲಿದ್ದ ವಿಜಯನಗರ ಸಾಮ್ರಾಜ್ಯದ ವರ್ಣನೆಯನ್ನು ಕಾಣಬಹುದು. ಈ ಕೃತಿಯೇ ಅವರ ಕಾಲದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಜೀವನದ ಯಥಾವತ್ ಚಿತ್ರಣ ಕೊಡುತ್ತದೆ. ದ್ರಷ್ಟಾರ ಕವಿಯಾದ ಕನಕದಾಸರ ಈ ಕೃತಿಯು ತಾವು ಬದುಕಿದ ಯುಗಧರ್ಮದ, ಸಮಕಾಲೀನ ಪ್ರಜ್ಞೆಯ ಪ್ರತಿಕೃತಿಯಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಕೃಷ್ಣದೇವರಾಯನ ಕಾಲದಲ್ಲಿನ ಸಾಮಾಜಿಕ ಬದುಕು ಧಾರ್ಮಿಕತೆಯಿಂದ ಕೂಡಿತ್ತೆನ್ನುವುದು ಅದೇ ಕಾಲದಲ್ಲಿದ್ದ ವ್ಯಾಸತೀರ್ಥರ ಬದುಕು, ಸಾಧನೆಗಳೇ ತೋರಿಸಿಕೊಡುತ್ತವೆ. ಕೃಷ್ಣದೇವರಾಯ ಸರ್ವಧರ್ಮ ಸಹಿಷ್ಣುತಾ ಮನೋಧರ್ಮದವನಾಗಿದ್ದು ಶೈವ, ವೈಷ್ಣವ, ಜೈನ ಈ ಎಲ್ಲ ಮತಧರ್ಮಗಳೂ ಸ್ನೇಹ ಸೌಹಾರ್ದತೆಯಲ್ಲಿದ್ದವು. ವಿಜಯನಗರ ಸಾಮ್ರಾಜ್ಯದಲ್ಲಿ ತುಂಬ ಪ್ರಸಿದ್ಧರಾಗಿ, ಕೃಷ್ಣದೇವರಾಯನ ಆಸ್ಥಾನ ಪಂಡಿತರೂ ಆಗಿದ್ದ ತಿರುಮಲೆ ತಾತಾಚಾರ್ಯರೆಂಬುವವರು ಶ್ರೀವೈಷ್ಣವ ಸಂಪ್ರದಾಯದ ಧರ್ಮಾಚಾರ್ಯರೆನಿಸಿಕೊಂಡು ತಿರುಪತಿಯ ವೆಂಕಟೇಶನಲ್ಲಿ ಭಕ್ತಿ ಪ್ರಪತ್ತಿ ಮಾಡಿಕೊಂಡಿರುವುದನ್ನು ಜನರಲ್ಲಿ ಪ್ರಚಾರಮಾಡಿಕೊಂಡಿದ್ದವರು ಜಾತಿ ಮತಗಳ ಭೇದಭಾವ ಮಾಡದೆ, ಮೇಲುಕೀಳು ವ್ಯತ್ಯಾಸವಿಲ್ಲದೆ ಜನರನ್ನು ಬರಮಾಡಿಕೊಂಡು ಭಕ್ತಿ ತತ್ತ್ವ ಬೋಧಿಸುತ್ತಿದ್ದುದರಿಂದ ಅನೇಕ ಗುಡ್ಡಗಾಡಿನ ಜನಾಂಗದವರೂ ಇವರಿಂದ ಪ್ರಭಾವಿತರಾಗಿ ವೈಷ್ಣವ ದೀಕ್ಷೆ ಪಡೆದವರಾದರು.

ಹೀಗೆ ವೈಷ್ಣವ ದೀಕ್ಷೆ ಪಡೆದ ಗುಡ್ಡಗಾಡು ಜನಾಂಗದಲ್ಲಿ (ಈಗ ತಮ್ಮನ್ನು ಕೊಂಡದಾಸರಿ ಜನಾಂಗ ಎಂದು ಕರೆದುಕೊಳ್ಳುವ) ಕುರುಬ ಮನೆತನದವರೂ ಇದ್ದರು. ಈ ಮನೆತನದ ಬೀರಪ್ಪ, ಬಚ್ಚಮ್ಮ ದಂಪತಿಗಳ ಮಗನಾಗಿ ಜನಿಸಿದವರು ಕನಕನಾಯಕರು. ತಿರುಪತಿ ದೇವರ ವರಪ್ರಸಾದದಿಂದ ಹುಟ್ಟಿದವನೆಂದು 'ತಿಮ್ಮಪ್ಪ'ನೆಂದೇ ಕರೆದರು. ಈ ಕುರುಬ ಮನೆತನದವರು ಕುರಿಕಾಯುವ ಕಾಯಕಕ್ಕೆ ಸೀಮಿತವಾದವರೇನೂ ಅಲ್ಲ. ತುಂಬ ಪರಾಕ್ರಮಶಾಲಿಗಳಾಗಿ ವೀರರಾಗಿ ಪಾಳೆಯಗಾರರಾಗಿ ಇರುತ್ತಿದ್ದವರು. ಧಾರವಾಡ ಜಿಲ್ಲೆಯಲ್ಲಿರುವ 'ಬಾಡ' ಎಂಬ ಗ್ರಾಮದಲ್ಲಿ ಸಣ್ಣ ಪಾಳೆಯಗಾರನಾಗಿದ್ದವನು ಬೀರಪ್ಪ. ಬಾಲ್ಯದಲ್ಲಿಯೇ ಮಗನಿಗೆ ಕುಸ್ತಿ, ಕತ್ತಿವರಸೆ, ಕುದುರೆಸವಾರಿ, ಬೇಟೆ ಮುಂತಾದ ಯುದ್ಧಶಿಕ್ಷಣ ಕೊಡಿಸಿದ. ಮುಂದೆ ತಿಮ್ಮಪ್ಪನಿಗೆ 'ನಿಧಿ' ದೊರೆಯಿತೆಂದು ಅವನನ್ನು ಕನಕಪ್ಪ, ಕನಕನಾಯಕನೆಂದು ಜನ ಕರೆದರೆಂಬ ಐತಿಹ್ಯವಿದೆ.

ಕನಕನಾಯಕನು ವೃತ್ತಿಯಿಂದ ದಣ್ಣಾಯಕನೂ ಪ್ರವೃತ್ತಿಯಿಂದ ಕಾವ್ಯನಾಟಕ ಸಂಸ್ಕೃತಿಗಳ ಚಿಂತಕನೂ, ಅಭ್ಯಾಸಿಯೂ ಆಗಿದ್ದನು ಎನ್ನುವುದನ್ನು ಒಪ್ಪಬೇಕಾಗುತ್ತದೆ. 'ಮೋಹನತರಂಗಿಣಿ'ಯಲ್ಲಿ ಕವಿಯಾಗಿ ಈತ ಕುಮಾರವ್ಯಾಸ ಮತ್ತು ಕುಮಾರ ವಾಲ್ಮೀಕಿ ಕವಿಗಳನ್ನು ಕೊಂಡಾಡಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಇದೇ ಕೃತಿಯಲ್ಲಿಯೇ

"ಬುಧರಾಮ್ನಾಯ ಶಾಸ್ತ್ರವ ತಿಳಿದು
ನಾನಿದ ಪೇಳ್ವೆ ಕೇಳಾಯತಾಕ್ಷೆ"

ಎಂದು ನುಡಿದಿರುವಲ್ಲಿಯೇ ಕನಕನಾಯಕನಿಗೆ ಶಾಸ್ತ್ರಪುರಾಣಗಳ ಅಧ್ಯಯನದ ಅಭಿರುಚಿ ಮೊದಲಿನಿಂದಲೂ ಇತ್ತು ಎನ್ನವುದನ್ನು ತಿಳಿಯಬಹುದಾಗಿದೆ, ಜೊತೆಗೆ ಯುದ್ಧಕಲೆಗಳಲ್ಲಿ ಪರಿಣಿತಿ ಇತ್ತು ಎನ್ನುವುದು ಕನಕದಾಸರ ಕೃತಿಯಲ್ಲೆ ಬರುವ "ಕನಕ ದಳದಲಿ ಕಲೆತನೆಂದರೆ ಫೌಜು ಕನಕಮನಕಾಗುವುದು ಹರಿಯೆ" ಎಂಬ ಮಾತಿನಿಂದ ತಿಳಿಯುತ್ತದೆ. ತಂದೆಯಿಂದ ದತ್ತವಾಗಿ ಬಂದ ನಾಡಗೌಡಿಕೆಯನ್ನು ದಕ್ಷತೆಯಿಂದ ನಿರ್ವಹಿಸುತ್ತ ವೈವಾಹಿಕ ಜೀವನಕ್ಕೂ ಕಾಲಿರಿಸಿದ ಮೇಲೆ 'ಬಾಡ'ದಿಂದ ಮುವ್ವತ್ತು ಮೈಲಿ ದೂರವಿರುವ 'ಕಾಗಿನೆಲೆ'ಗೆ ಕಾರಣಾಂತರದಿಂದ ಕನಕನಾಯಕ ಸಂಸಾರ ಸಮೇತನಾಗಿ ಬಂದು ನೆಲೆಸಿದ. 'ಬಾಡ' ಮತ್ತು 'ಕಾಗಿನೆಲೆ' ಈ ಎರಡೂ ಬಂಕಾಪುರಕ್ಕೆ ಹತ್ತಿರವಿರುವ ಗ್ರಾಮಗಳಾಗಿದ್ದವು. ಬನವಾಸಿ ರಾಜ್ಯಕ್ಕೆ ಸೇರಿದ್ದ ಬಂಕಾಪುರ ಆ ಕಾಲಕ್ಕೇ ತುಂಬ ಹೆಸರು ಪಡೆದಿದ್ದ ಪಟ್ಟಣ. ವಿಜಯನಗರದ ಅರಸರ ಅಧೀನದಲ್ಲಿದ್ದ ಬನವಾಸಿಗೆ ಸೇರಿದ್ದ ಕಾಗಿನೆಲೆಯಲ್ಲಿಯೂ ಆಗಾಗ ಕದನಗಳಾಗುತ್ತಲೇ ಇದ್ದವು.

ಕನಕನಾಯಕ ಕೂಡ ಬಂಕಾಪುರ ಪ್ರಾಂತ್ಯದಲ್ಲೇ ವಿಜಯನಗರದ ಅರಸರ ಕೆಳಗೆ ಸೇನಾಧಿಪತಿಯೂ ಆಗಿ ನೇಮಕಗೊಂಡ, ಆಗಾಗ ನಡೆಯುತ್ತಿದ್ದ ಯುದ್ಧಗಳಲ್ಲಿ ಸಮರ್ಥನಾಗಿ ಹೋರಾಡಿ ಅರಸರಿಗೆ ಯಶಸ್ಸನ್ನೂ ತಂದುಕೊಟ್ಟ, ಆದರೆ ಕನಕನಾಯಕನ ಬದುಕಿನ ಮಹತ್ತರ ತಿರುವು ಕಡೆಗೊಮ್ಮೆ ಎದುರಾಗಿಯೇ ಬಿಟ್ಟಿತೆಂಬಂತೆ

ಯುದ್ಧವೊಂದರಲ್ಲಿ ಎದುರಾಳಿಯ ಕೈ ಮೇಲಾಗಿ ಕನಕ ಸೋತು ವಿಪರೀತ ಗಾಯಗೊಂಡು ಕೆಳಕ್ಕೆ ಉರುಳಬೇಕಾಗಿ ಬಂದಿತು. ಪ್ರಜ್ಞಾಹೀನ ಸ್ಥಿತಿಯಲ್ಲಿ ಮಣ್ಣಿಗುರುಳಿದ್ದ ಕನಕನಾಯಕನಿಗೆ ಯಾವುದೋ ದಿವ್ಯತೆಯ ದರುಶನವೊಂದಾಗಿ ತನ್ನ ದಾಸನಾಗಿ ಬಾಳಲು ಆದೇಶವಿತ್ತಿತೆಂದು ಐತಿಹ್ಯವಿದೆ. ಧೈರ್ಯ, ಸಾಹಸ, ಛಲವಿದ್ದಲ್ಲಿ ಏನನ್ನು ಬೇಕಾದರೂ ಗೆಲ್ಲಬಹುದೆಂಬ ಆತ್ಮವಿಶ್ವಾಸದಲ್ಲಿ ಅದುವರೆಗೆ ಮುನ್ನುಗ್ಗುತ್ತಿದ್ದ ಕನಕನಾಯಕನಿಗೆ ಮಾನವಮಿತಿಯನ್ನು ಮೀರಿದ ಶಕ್ತಿಯೊಂದಿದೆ, ಅದೇ ದೇವರು ಎಂಬ ಜ್ಞಾನೋದಯವಾಗಿರಬೇಕು, ಆ ದೇವರ ದಾಸನಾಗಿ ಬಾಳುವ ಸಂಕಲ್ಪವೂ ಧೃಡವಾಗಿ ಆಗಲೇ ಮನದೊಳಗೆ ಮೂಡಿರಬೇಕು. ಈ ಪರಿವರ್ತನೆಯನ್ನು ಸ್ವತಃ ಕನಕದಾಸರೇ ತಮ್ಮ ಒಂದು ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

"ಅರಿಗಳು ದಂಡೆತ್ತಿ ಬರಲು ನಾನವರೊಡನೆ ಪರಿಪರೀ ಹೋರುತಿರಲು।ದುರುಳರೆನ್ನನು ಜೈಸಿ ಹರಿದಟ್ಟಿ ಬಂದೆನ್ನ ಧರೆಗುರುಳಿಸಿದರೊ ಹರಿಯೆ॥ ದೊರೆತನ ಬಿಡಿಸಿ ಸುಸ್ಥಿರ ಮಾರ್ಗವನೆ ತೋರಿ ಪರಿಪಾಲಿಸಿದೆ ಎನ್ನ ಹರಿಯೆ। ದುರುಳತನದಲಿ ಜನರು ಪರಿಪರೀ ಬಾಧಿಸಿ ಸೂರೆಗೊಂಬುದು ಪರಿಹಾರವಾಯಿತು ಹರಿಯೆ॥" *೨೦ ವೀರರನ್ನು ಸದೆ ಬಡಿಸುವೆನೆಂಬ ತನ್ನ ಅಹಂಕಾರವನ್ನು ಹರಿಯು ಮುರಿದು ಪರಮಾರ್ಥವನ್ನು ತೋರಿದನೆಂದು ಈ ಕೃತಿಯಲ್ಲಿ ಹೇಳಿಕೊಂಡಿದ್ದಾರೆ.

ಇಷ್ಟರೊಳಗಾಗಲೇ ಕನಕನಾಯಕ ತನ್ನ ಕುಟುಂಬದಲ್ಲಿ ಮಾತಾಪಿತೃಗಳನ್ನು, ಸತಿಯನ್ನು, ಕಡೆಗೆ ಸುತನನ್ನೂ ಕೂಡ ಮರಣದ ಬಾಯಿಗೆ ತುತ್ತಾಗಿಸಬೇಕಾಗಿ ಬಂದಿತ್ತೆಂದು ಹೇಳುತ್ತಾರೆ. ಬದುಕು ಕೊಟ್ಟ ಆಘಾತಗಳು ಮತ್ತು ಯುದ್ಧವು ತಂದ ಭ್ರಮನಿರಸನವು ಕನಕನಾಯಕನನ್ನು ವೈರಾಗ್ಯದ ಹಾದಿಗೆ ಒಯ್ದು ಪರಮಾರ್ಥದ ಶೋಧನೆಗೆ ಹೊರಡಿಸಿದವು. ತಾನು, ತನ್ನದು, ತನ್ನವರು ಎಂಬುದನೆಲ್ಲ ಕಳೆದುಕೊಂಡಾದ ಮೇಲಿನ ಕನಕನಾಯಕ ಮುಂದೆ ಕನ್ನಡನಾಡಿಗೆ ಒಬ್ಬ ಅಪ್ರತಿಮ ಹರಿದಾಸರೆನಿಸಿಕೊಳ್ಳುವ ಹಾಗೆ ರೂಪುಗೊಂಡು ಕನಕದಾಸರಾದರು.

ತನ್ನ ಕುಲಗುರುಗಳೆನ್ನಿಸಿಕೊಂಡಿದ್ದ ತಿರುಮಲೆ ತಾತಾಚಾರ್ಯರಲ್ಲಿಗೆ ಮೊದಲು ಬಂದು ಸೇರಿದ ಕನಕನಾಯಕ ಅವರ ಸನ್ನಿಧಾನದಲ್ಲಿ ರಾಮಾನುಜಾಚಾರ್ಯರ ಸಿದ್ಧಾಂತಗಳನ್ನೆಲ್ಲ ಅಭ್ಯಾಸಮಾಡಿದ. ತಾತಾಚಾರ್ಯರು ಕನಕನಾಯಕನಿಗೆ ವೈಷ್ಣವದೀಕ್ಷೆ ಇತ್ತು ಕನಕದಾಸರನ್ನಾಗಿ ಮಾಡಿದರು. ಪ್ರಪತ್ತಿಯನ್ನು ಪಡೆದವರಿಗೆ ಅವರು 'ದಾಸರಿ'(ಅಥವಾ ದಾಸರು) ಎಂದೇ ಹೆಸರಿಸುತ್ತಿದ್ದರು. ಹೀಗೆ ಭಗವಂತನ ದಾಸರನ್ನಾಗಿಸಿ ಬದುಕಲು ತಿಳಿಹೇಳುತ್ತಿದ್ದವರು ಅವರು. ತಮ್ಮ 'ಮೋಹನ ತರಂಗಿಣಿ'ಯಲ್ಲಿ ರಾಮಾನುಜಾಚಾರ್ಯರನ್ನೂ, ದೀಕ್ಷೆ ಕೊಟ್ಟ ತಾತಾಚಾರ್ಯರನ್ನೂ ಪ್ರಾರಂಭದಲ್ಲಿಯೇ ಕನಕದಾಸರು ಸ್ಮರಿಸಿದ್ದಾರೆ.

ಶ್ರೀಮದ್ಗುರುರಾಯ ದುರಿತವಿಜೇಯ ದು

ಷ್ಕಾಮ ವಿಚ್ಛೇದನಾಹ್ಲಾದ।

ತಾಮಸ ಗುಣನಾಶ ಸಾತ್ತ್ವಿಕೋಲ್ಲಾಸ ಶ್ರೀ

ರಾಮಾನುಜ ಮುನಿ ಶರಣು॥

ಈ ರೀತಿ ಪೆಂಪುವೆಡೆದ ಸದ್ಗುರುಕರ

ವಾರಿಜೋದ್ಭವ ಶಿಷ್ಯ ಜನರ

ಪೇರಿಸಿ ನಾಲ್ವಗೆ ಫಲವೀವ ತಾತಾ

ಚಾರಿಯರಡಿಗೆರಗುವೆನು॥

ಮುಂದೆ ಸ್ವಲ್ಪ ಕಾಲಾನಂತರ ಕನಕದಾಸರು ಕಾಗಿನೆಲೆಗೆ ಮರಳಿ, ಬಾಡದಿಂದ ಅಲ್ಲಿದ್ದ ಆದಿಕೇಶವನ ವಿಗ್ರಹವನ್ನು ಹೊತ್ತುತಂದು ಕಾಗಿನೆಲೆಯಲ್ಲಿ ನರಸಿಂಹಸ್ವಾಮಿ ದೇವಾಲಯ ಇರುವ ಬಳಿಯಲ್ಲಿಯೇ ಪ್ರತಿಷ್ಠಾಪಿಸಿದರು ಎಂಬ ಐತಿಹ್ಯವಿದೆ. ಅಲ್ಲಿ ನಿತ್ಯಪೂಜೆಗೆ ಬೇಕಾದುದೆಲ್ಲವನ್ನು ವ್ಯವಸ್ಥೆ ಮಾಡಿ ತಾವು ಕೈಯಲ್ಲಿ ಏಕತಾರಿ ತಂಬೂರಿ, ಚಿಟಿಕೆಗಳನ್ನು ಹಿಡಿದು ದೇಶಸಂಚಾರಿಯಾಗಿ ಹೊರಟರು. ಹಾಗೆಯೇ ತಿರುಪತಿ, ಮೂಡಗಿರಿ, ಬೇಲೂರು ಮುಂತಾದ ಊರುಗಳನ್ನು ಸುತ್ತುತ್ತ ವ್ಯಾಸತೀರ್ಥರನ್ನು ಭೇಟಿಯಾಗುವ ಸುಯೋಗವನ್ನು ಪಡೆದವರಾದರು. ಈ ಸಂದರ್ಭದಲ್ಲಿ ಈ ಗುರುಶಿಷ್ಯರಿಗೆ ಸಂಬಂಧಪಟ್ಟಂತೆ 'ಕೋಣನಮಂತ್ರ'ದ ಕುರಿತಾದ ಕಥೆಯೊಂದು ಪ್ರಚಲಿತವಿದೆ. ವ್ಯಾಸತೀರ್ಥರು ಕಟ್ಟಿಸುತ್ತಿದ್ದ ಕೆರೆಗೆ ನೀರು ಹರಿದುಬರಲು ಅಡ್ಡವಾಗಿದ್ದ ಬಂಡೆಯೊಂದು ಕನಕದಾಸರು ಜಪಿಸಿದ ಕೋಣಮಂತ್ರದಿಂದಾಗಿ ಜರುಗಿ ದಾರಿಮಾಡಿಕೊಟ್ಟಿತು ಎಂಬ ಕಥೆ ಅದು. ಈಗಲೂ ಬಂಡೆ ಜಾಗ ಬಿಟ್ಟ ಸ್ಥಳವನ್ನು 'ಕೋಣನ ತೂಬು' ಎಂದೇ ಜನ ಕರೆಯುತ್ತಿದ್ದಾರೆ. [ಈಗಿನ ಮದನಪಲ್ಲಿ ಜಿಲ್ಲೆಯ ಕಂದಕೂರಿನ ಬಳಿ ಇರುವ ವ್ಯಾಸಸಮುದ್ರವೆಂಬ ಕೆರೆ]

ಕನಕದಾಸರ ಜ್ಞಾನ ವೈರಾಗ್ಯ ಭಕ್ತಿಶೀಲ ವ್ಯಕ್ತಿತ್ವವನ್ನು ವ್ಯಾಸತೀರ್ಥರು ತುಂಬ ಮೆಚ್ಚಿಕೊಂಡು ಅವರನ್ನು ತಮ್ಮ ಆಪ್ತವಲಯದೊಳಗೆ ಇರಿಸಿಕೊಂಡರು. ಗುರುಶಿಷ್ಯರಲ್ಲಿ ಪರಸ್ಪರ ವಿಶ್ವಾಸ, ಅಭಿಮಾನ ಬೆಳೆದು ನಿಂತಿತು ತಮ್ಮ ನೆಚ್ಚಿನ ಶಿಷ್ಯವರ್ತುಲವೆನ್ನಿಸಿಕೊಂಡಿದ್ದ ವಾದಿರಾಜ, ವಿಜಯೀಂದ್ರ, ಪುರಂದರದಾಸರೇ ಮೊದಲಾದವರ ನಡುವೆ ಕನಕದಾಸರನ್ನೂ ವ್ಯಾಸತೀರ್ಥರು ಸೇರಿಸಿಕೊಂಡರು. ಸಾಹಿತ್ಯರಚನೆಗೆ ಪ್ರೋತ್ಸಾಹಿಸಿದರು. ವ್ಯಾಸಕೂಟ ದಾಸಕೂಟಗಳೆರಡನ್ನೂ ಪೋಷಿಸಿಕೊಂಡು ಬರುತ್ತಿದ್ದ ವ್ಯಾಸತೀರ್ಥರು ವ್ಯಾಸಕೂಟದ ತಮ್ಮ ಅನೇಕ ಶಿಷ್ಯ ಪಂಡಿತ ವರ್ಗದವರ ಅಸಮಾಧಾನ, ಕುತ್ಸಿತತೆಯನ್ನು ಎದುರಿಸಿಕೊಂಡೇ ಕನಕದಾಸರನ್ನು ದಾಸಕೂಟದಲ್ಲಿ ಒಬ್ಬನನ್ನಾಗಿರಿಸಿಕೊಂಡು ಪ್ರೀತಿ ನೀಡಿದರು. ಜಾತಿಮತ ಕುಲಗಳನ್ನು ವ್ಯಾಸತೀರ್ಥರು ಪರಿಗಣಿಸದೆ, ಈ ಬಗೆಗಿನ

ಪ್ರಶ್ನೆಗಳನ್ನೆತ್ತಿ ತೊಂದರೆ ನೀಡುತ್ತಿದ್ದ ಮಠದ ಪಂಡಿತವರ್ಗದವರಿಗೆ ಸೊಪ್ಪು ಹಾಕದೆ, ಕನಕದಾಸರನ್ನು ಮುಂದೆ ತಂದು ಅವರ ವ್ಯಕ್ತಿತ್ವವೆಂಥದ್ದೆಂಬುದನ್ನು ಅಂದಿನ ಮಡಿವಂತರಿಗೆ ತೋರಿಸಿಕೊಟ್ಟವರಾದರು. ಪುರಂದರದಾಸರು ಕೂಡ ಕನಕದಾಸರ ಆತ್ಮೀಯ ಸ್ನೇಹಿತರಾಗಿ ಜೊತೆನೀಡಿದರು. ವ್ಯಾಸತೀರ್ಥರು ಮುನ್ನಡೆಸಿದ ಹರಿದಾಸಕೂಟದ ಎರಡು ಪ್ರಮುಖ ಹೆಜ್ಜೆಗುರುತುಗಳಾಗಿ, ಎರಡು ಮುಖ್ಯ ನೇತ್ರಗಳಾಗಿ ಪುರಂದರದಾಸರು ಮತ್ತು ಕನಕದಾಸರು ಕನ್ನಡನಾಡಿನ ಸುಸಂಸ್ಕೃತಿಯನ್ನು ಬೆಳೆಸಿದವರಾಗಿದ್ದಾರೆ.

ತುಂಬು ವರ್ಚಸ್ಸಿನ ವ್ಯಕ್ತಿತ್ವವುಳ್ಳ ಮಠಾಧಿಪತಿಗಳಾಗಿ ವ್ಯಾಸತೀರ್ಥರು ತಮ್ಮನ್ನು ಆಶ್ರಯಿಸಿದ್ದ, ಸುತ್ತುವರೆದಿದ್ದ ಅನೇಕಾನೇಕ ಪಂಡಿತರು, ಪ್ರವಚನಕಾರರು ಭಾಗವತರು, ಕವಿಗಳು, ರಾಜ ಮನೆತನ ವರ್ಗದವರು, ಯತಿ ಶಿಷ್ಯರುಗಳು, ವೇದವಿದ್ವಾಂಸರು ಇವರೆಲ್ಲರ ನಡುವೆಯೇ ಕನಕದಾಸರನ್ನು ಆದರಿಸಿದ್ದರು, ಗೌರವಿಸುತ್ತಿದ್ದರು. ಕನಕದಾಸರೊಳಗಿನ ವ್ಯಕ್ತಿತ್ವವು ಎಷ್ಟು ಪಕ್ವ, ಪರಿಪೂರ್ಣವಾಗಿದೆ, ಕನಕದಾಸರ ಹೃದಯದೊಳಗಿನ ಭಕ್ತಿ, ದೈವ ನಂಬುಗೆಗಳೆಂಥವು ಎನ್ನುವುದನ್ನು ನಾನಾ ಪ್ರಸಂಗಗಳಿಂದ ತೋರಿಸಿಕೊಟ್ಟರು. ಕನಕದಾಸರು ಮಹಾಜ್ಞಾನಿ ಮತ್ತು ಹರಿಯ ಪರಮಭಕ್ತರೆನ್ನುವುದನ್ನು ಪೂರ್ತಿಯಾಗಿ ಅರಿತಿದ್ದ ಅವರು ಬೇಕೆಂದೇ ಕೆಲವು ಸಂದರ್ಭಗಳನ್ನು ಉಂಟುಮಾಡಿ ಕನಕದಾಸರ ಪರೀಕ್ಷೆ ಮಾಡುವಂತೆ ಪರಿಸ್ಥಿತಿಗಳನ್ನು ಸೃಷ್ಟಿ ಮಾಡಿ ಕಡೆಗೆ ಕನಕದಾಸರ ಆಂತರಿಕ ವ್ಯಕ್ತಿತ್ವದ ಮುಂದೆ ಉಳಿದವರೆಲ್ಲ ತಲೆತಗ್ಗಿಸುವಂತೆ ಮಾಡುವುದರಲ್ಲಿ ಯಶಸ್ವಿಯಾಗಿದ್ದರು. ಈ ಬಗ್ಗೆ ಪ್ರಚಲಿತವಿರುವ ಅನೇಕ ಘಟನೆಗಳಲ್ಲಿ ಯಾರೂ ಕಾಣದ ಎಡೆಯಲ್ಲಿ ಬಾಳೆಹಣ್ಣು ತಿನ್ನುವ ಸೂಚನೆ ನೀಡಿದ್ದು, ಸ್ವರ್ಗಕ್ಕೆ ಯಾರು ಹೋಗುತ್ತಾರೆಂಬ ಪ್ರಶ್ನೆ ಕೇಳಿದ್ದು, ದೇವರನ್ನು ತೋರಿಸುವ ಸವಾಲು ಎಸೆದಿದ್ದು ಮುಂತಾದವುಗಳು ಇಂದಿಗೂ ಇನ್ನೂ ಜನಮನದಲ್ಲಿ ಹಸಿರಾಗಿ ಉಳಿದಿವೆ.

ಪುರಂದರದಾಸರ ಕೀರ್ತನೆಯೊಂದು ಅಂದಿನ ವ್ಯಾಸತೀರ್ಥರ ಮಠದಲ್ಲಿ ಕೆಲವು ಪಂಡಿತರು ನಡೆದುಕೊಳ್ಳುತ್ತಿದ್ದ ರೀತಿ, ಕನಕದಾಸರಿಗೆ ಅವರುಗಳಿಂದ ಆಗುತ್ತಿದ್ದ ಅವಮಾನ, ಅದಕ್ಕೆ ವ್ಯಾಸತೀರ್ಥರ ಪ್ರತಿಕ್ರಿಯೆ ಎಲ್ಲವನ್ನೂ ದಾಖಲಿಸಿಕೊಡುತ್ತದೆ.

"ಕನಕದಾಸನ ಮೇಲೆ ದಯ ಮಾಡಲು ವ್ಯಾಸ
ಮುನಿ ಮಠಿಕರೆಲ್ಲರು ದೂರುತಿಹರೋ"

ಎಂದು ಪ್ರಾರಂಭವಾಗುವ ಈ ಕೀರ್ತನೆ ಅಂದಿನ ಘಟನೆಗಳನ್ನು ನಿರೂಪಿಸುತ್ತದೆ. ಕನಕದಾಸರನ್ನು ಮೊದಲು ಹತ್ತಿರ ಕರೆದು ತೀರ್ಥಪ್ರಸಾದವನ್ನು ನೀಡಿದ್ದಕ್ಕೆ ವ್ಯಾಸತೀರ್ಥರನ್ನೇ ಪರಿಪರಿಯಾಗಿ ಬೈದುಕೊಂಡರಂತೆ ಪಂಡಿತೋತ್ತಮರು! ಪರಿಪರಿಯಾಗಿ ವ್ಯಾಸತೀರ್ಥರು ಕೂಡಾ ಶಿಷ್ಯರಿಗೆ ಪರೀಕ್ಷೆಗಳನ್ನು ಮಾಡಿದ್ದನ್ನು ಕೂಡಾ

ಕೀರ್ತನೆ ಹೇಳುತ್ತದೆ. ಕಡೆಗೆ ವ್ಯಾಸತೀರ್ಥರೇ "ಇವಗೆ ನಾಡೆಲ್ಲ ಹುಡುಕಿದರು ಈಡಾರ ಕಾಣೆ" ಎಂದು ಕನಕದಾಸರನ್ನು ಕುರಿತು ಘೋಷಿಸಿದರು ಎಂದು ಪುರಂದರದಾಸರ ಈ ಕೃತಿ ತಿಳಿಸುತ್ತದೆ. ವ್ಯಾಸತೀರ್ಥರ ಉದಾತ್ತ ವ್ಯಕ್ತಿತ್ವವನ್ನೂ, ಕನಕದಾಸರ ಉನ್ನತ ಜ್ಞಾನ ಭಕ್ತಿಗಳನ್ನೂ, ಕನಕದಾಸರೊಂದಿಗೆ ಪುರಂದರದಾಸರಿಗಿದ್ದ ಪ್ರೀತಿ ಅಭಿಮಾನಗಳನ್ನೂ ಒಮ್ಮೆಗೇ ಈ ಕೃತಿ ಹಿಡಿದಿಟ್ಟಿದೆ.

ಕನಕದಾಸರು ಮಠದಲ್ಲಿದ್ದು, ದಾಸಕೂಟದಲ್ಲಿ ಪ್ರಮುಖರಾಗಿದ್ದು, ವ್ಯಾಸತೀರ್ಥರ ಆದರ, ವಿಶ್ವಾಸಗಳಿಗೆ ಪಾತ್ರರಾಗಿದ್ದುದೇನೋ ಸರಿ. ಆದರೆ ಮಠಮಾನ್ಯರಿಂದ ಅವರು ಅನೇಕ ತೊಂದರೆಗಳಿಗೆ ಒಳಗಾಗಿದ್ದರು. ತಿರಸ್ಕಾರವನ್ನು ಪಡೆದು ನೊಂದಿದ್ದರೆನ್ನುವುದೇನೂ ಸುಳ್ಳಲ್ಲ. ಅಂದಿನ ದಿನಗಳಲ್ಲಿ ಸಾಮಾಜಿಕವಾಗಿ ಜಾತಿ ಭೇದಭಾವಗಳು ತೀವ್ರವಾಗಿದ್ದುವು. ವಿದ್ಯಾಭ್ಯಾಸ, ಧಾರ್ಮಿಕ ಆಚರಣೆಗಳು ಮೇಲ್ಜಾತಿಯವರೆನಿಸಿಕೊಂಡವರ ಗುತ್ತಿಗೆಯಾಗಿತ್ತು. ಆಧ್ಯಾತ್ಮಿಕ ಚರ್ಚೆ, ಸಾಧನೆಗಳು ಕೆಲವೇ ವಿಶಿಷ್ಠ ಜಾತಿಗಳವರಿಗೆ ಮಾತ್ರ ಮೀಸಲೆನ್ನುವ ಮನೋಭಾವದಲ್ಲಿ ಇದ್ದಂಥ ಕಾಲವದಾಗಿತ್ತು. ಹೀಗಾಗಿ ಹಿಂದುಳಿದ ಪಂಗಡದಿಂದ ಬಂದವರೆಂಬ ಒಂದೇ ಕಾರಣಕ್ಕಾಗಿ ಮಠದಲ್ಲಿನ ಬ್ರಾಹ್ಮಣರು ಕನಕದಾಸರಿಗೆ ಪದೇ ಪದೇ ಅಪಮಾನ ಮಾಡಿ, ಕುಚೋದ್ಯ ಕುಹಕವಾಡಿ ವೇದನೆಗೊಳಪಡಿಸುತ್ತಿದ್ದುದು, ಇಂಥ ತೊಂದರೆ, ಕಿರುಕುಳಗಳನ್ನೆದುರಿಸಿ ಕನಕದಾಸರು ತಮ್ಮ ಅಂತರಂಗ ವ್ಯಕ್ತಿತ್ವವನ್ನು ಮೆರೆಸಿದ್ದುದು ಈ ಎಲ್ಲವನ್ನೂ ಕನಕದಾಸರ ಕೆಲವು ಕೃತಿಗಳಿಂದಲೇ ಅರಿಯಬಹುದಾಗಿದೆ.

"ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ?"

ಎಂಬ ಕೃತಿಯಲ್ಲಿ "ಹುಟ್ಟದ ಯೋನಿಗಳಿಲ್ಲ। ಮೆಟ್ಟದ ಭೂಮಿಗಳಿಲ್ಲ। ಅಟ್ಟು ಉಣ್ಣದಾ ವಸ್ತುಗಳಿಲ್ಲ। ಗುಟುಕಾಣಿಸಬಂತು । ಹಿರಿದೇನು ಕಿರಿದೇನು?। ನೆಟ್ಟನೆ ಸರ್ವಜ್ಞನ ನೆನೆಕಂಡ್ಯ ಮನುಜ" ಎಂದು ಜನನ ಜನ್ಮಾಂತರಗಳ, ಮರಣ ನಿರಸನಗಳ ಪಾರಮಾರ್ಥಿಕ ತತ್ತ್ವವನ್ನೇ ತೆರೆದಿಟ್ಟು ತಮ್ಮನ್ನು ಹೀಯಾಳಿಸಿದವರಿಗೆ ಮಾರ್ಮಿಕವಾಗಿ ಉತ್ತರಿಸಿದ್ದಾರೆ. "ಕುಲ ಕುಲ ಕುಲವೆನ್ನುತಿಹರೋ ಕುಲವಾವುದು ಸತ್ಯ ಸುಜನರಿಗೆ?" ಎಂಬ ಮತ್ತೊಂದು ಕೃತಿಯಲ್ಲಿ ಶ್ರೇಷ್ಠತೆಯ ಗರ ಬಡಿದ ಮಡಿವಂತರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಪದೇ ಪದೇ "ನೀನು ಯಾವ ಜಾತಿ?" ಎಂದು ಕೆಣಕುತ್ತಿದ್ದ ಕುಹಕಿಗಳಿಗೆ ಮತ್ತೊಂದೆಡೆ

"ಯಾತರವನೆಂದುಸುರಲಿ ಜಗ
ನ್ನಾಥ ಮಾಡಿದ ಒಂದು ನರರೂಪವಯ್ಯಾ"

ಎಂದು ನೊಂದು ಕೃತಿಯ ಮೂಲಕವೇ ವ್ಯಂಗವಾಗಿ ಉತ್ತರಿಸಿದ್ದಾರೆ. ಆದರೂ ಈ ಕೃತಿಯಲ್ಲಿ ಶ್ರೇಷ್ಠ ಜಾತಿ ಎಂದು ಬೀಗುವವರಿಗೊಂದು ಮಾರ್ಮಿಕವಾದ ಉತ್ತರವಿದೆ. ಎಂಥದ್ದೇ ಜಾತಿ ಇರಲಿ, ಮಾನವ ದೇಹದ ಸೃಷ್ಠಿ ಒಂದೇ ರೀತಿ, ಇತಿಮಿತಿಗಳು ಒಂದೇ ಬಗೆ ಎಂದಿಲ್ಲಿ ನಿರೂಪಿಸಿದ್ದಾರೆ. ಸಕಲರನ್ನೂ ಸೃಷ್ಠಿ ಮಾಡಿದ ಒಡೆಯ ಒಬ್ಬನೇ ಎಂದು ನೆನಪಿಸಿದ್ದಾರೆ.

ಮೇಲುಜಾತಿ, ಕೀಳುಜಾತಿ ಎಂದು ಭೇದಭಾವ ಕಲ್ಪಿಸುತ್ತಾ, ತಾವು ಶ್ರೇಷ್ಠ ಜಾತಿ ಎಂದು ಮೇಲರಿಮೆಯ ಮಡಿವಂತಿಕೆಯಲ್ಲಿ ಅನ್ಯರನ್ನು ದೂರವಿರಿಸಿ ಅಸಹ್ಯಿಸಿಕೊಳ್ಳುತ್ತಿದ್ದ ಕರ್ಮಠ ಬ್ರಾಹ್ಮಣರನ್ನು ಪರಿಪರಿಯಲ್ಲಿ ಪ್ರಶ್ನಿಸಿ ತಿದ್ದಲೆತ್ನಿಸಿದ್ದಾರೆ ಕನಕದಾಸರು. ಮನುಷ್ಯ-ಮನುಷ್ಯ ನಡುವಣ ಸಂಬಂಧವನ್ನು ಕುರಿತ ವಿಶ್ಲೇಷಣೆ, ನಿಜವಾದ ಕುಲಜ ಯಾರು ಎಂಬ ಉತ್ತರ ಎಲ್ಲವೂ ಕನಕದಾಸರ ಇಂಥ ಕೃತಿಯಲ್ಲಿ ದೊರೆಯುತ್ತವೆ.

ಕನಕದಾಸರು ವ್ಯಾಸತೀರ್ಥರೆಡೆಗೆ ಬಂದಾಗಲೇ ವ್ಯಾಸತೀರ್ಥರಿಗೆ ವಯಸ್ಸಾಗಿ ಮುಪ್ಪಿನ ಮುದುಕರಾಗಿದ್ದರು. ಕನಕದಾಸರಿಗೆ ಸುಮಾರು ಮುವ್ವತ್ತು ವರ್ಷಗಳ ಪ್ರಾಯವಿದ್ದಾಗ ವ್ಯಾಸತೀರ್ಥರು ಇಹಲೋಕ ತ್ಯಜಿಸಿದರು.ಮುಂದೆ ಇಲ್ಲಿಂದ ಹೊರಟು ಉಡುಪಿಗೆ ತೆರಳಿದ ಕನಕದಾಸರು ವ್ಯಾಸತೀರ್ಥರ ಇನ್ನೊಬ್ಬ ಶಿಷ್ಯರಾದ, ವ್ಯಾಸಕೂಟ ದಾಸಕೂಟಗಳೆರಡರ ನೇತಾರರೂ ಆಗಿದ್ದ ವಾದಿರಾಜರ ಬಳಿ ಅನೇಕ ವರ್ಷಗಳ ಕಾಲ ಇದ್ದರು. ಕನಕದಾಸರ ಮೇಲೆ ವಾದಿರಾಜರ ವ್ಯಕ್ತಿತ್ವದ ಪ್ರಬಾವವೂ ಬಹಳವಾಗಿ ಆವರಿಸಿ ತಮ್ಮನ್ನು ತಾವು "ತ್ರಿವಿಕ್ರಮದಾಸಸ್ಯ ದಾಸ" ಎಂದು ಕರೆದುಕೊಂಡಿದ್ದಾರೆ ಕನಕದಾಸರು. ವಾದಿರಾಜರೇ ಈ ತ್ರಿವಿಕ್ರಮದಾಸ.

ಕನಕದಾಸರ ಮನಸ್ಸು ತುಂಬಾ ವಿಶಾಲವಾದುದು, ವಿಚಾರಶೀಲವಾದುದು. ಇಂಥದ್ದೇ ಸಂಪ್ರದಾಯದಲ್ಲಿರಬೇಕು, ಈ ಗುರುವಿಗೆ ಶರಣಾಗಿ ಮತ್ತೊಬ್ಬ ಗುರುವನ್ನರಸಿ ಹೋಗಬಾರದು ಎಂದೆಲ್ಲ ಮಡಿವಂತಿಕೆಯ ಧೋರಣೆಯವರಲ್ಲ ಅವರು. ಮೊದಲು ತಾತಾಚಾರ್ಯರಿಂದ ಜ್ಞಾನದ ಬೆಳಕನ್ನು ಪಡೆದ ಅವರು ಮಧ್ವಾಚಾರ್ಯರ ಶಿಷ್ಯ ಪರಂಪರೆಯ ವ್ಯಾಸತೀರ್ಥರಿಗೆ ಶಿಷ್ಯರಾದರು. ಅಲ್ಲಿಂದ ಮುಂದೆ ವಾದಿರಾಜರಲ್ಲಿಗೆ ಬಂದು ಅವರ ಶಿಷ್ಯರಾಗಿಯೂ ಇದ್ದರು. "Let the knowledge come from everywhere" ಎಂಬ ಆಂಗ್ಲ ನಾಣ್ನುಡಿಯಂತೆ ಜ್ಞಾನ, ಹರಿಭಕ್ತಿಯ ಆಳ ಅಗಲಗಳನ್ನು ಪಡೆಯಲು ಅವರು ಯಾವುದೇ ಸಿದ್ಧಾಂತ, ಪರಂಪರೆಗಳಿಗೆ ಕಟ್ಟು ಬೀಳಲಿಲ್ಲ. ಬದಲಾಗಿ ಎಲ್ಲ ರೀತಿಯ ಸಂಪ್ರದಾಯದಲ್ಲೂ ಇರುವ ಒಳಿತನ್ನೇ ಪಡೆಯುತ್ತ ಉದಾತ್ತವಾಗಿ ಬೆಳೆದ ಚೇತನರಾದರು.

ಉಡುಪಿಯಲ್ಲಿಯೂ ಕನಕದಾಸರಿಗೆ ಕುಲದ ಪ್ರಶ್ನೆ ಎದುರಾಗಿ ನಿಂದನೆ, ಭರ್ತ್ಸನೆಗಳನ್ನು ಮೇಲುಜಾತಿಯವರೆನ್ನಿಸಿಕೊಂಡವರಿಂದ ಪಡೆಯಬೇಕಾಗಿ ಬಂದಿತು. ಅವರ ಈ ಉಡುಪಿಯ ವಾಸ್ತವ್ಯದಲ್ಲಿ ಕೃಷ್ಣನು ಪಶ್ಚಿಮಾಭಿಮುಖವಾಗಿ ತಿರುಗಿದನೆಂಬ ದಂತಕಥೆಯಿದೆ. ಒಟ್ಟಿನಲ್ಲಿ ಹೊರಗಿನಿಂದಲೇ ಅವರು ಕೃಷ್ಣ ದರ್ಶನ ಪಡೆಯಬೇಕಾಗಿ ಬಂದಿತ್ತು. ಅವರು ನಿಂತು ದರ್ಶನ ಪಡೆಯುತ್ತಿದ್ದ ಕಿಂಡಿ ಇಂದಿಗೂ "ಕನಕನ ಕಿಂಡಿ" ಎಂದೇ ರೂಢಿಯ ನಾಮಹೊತ್ತಿದೆ. ಅವರು ಕುಳಿತು, ನಿಂತು ಹಾಡಿಕೊಳ್ಳುತ್ತಿದ್ದ ಸ್ಥಳ ಈಗ "ಕನಕನ ಗೋಪುರ" ಎನ್ನಿಸಿಕೊಂಡಿದೆ. ಮಠದಲ್ಲಿನ ಅನೇಕರ ವಿರೋಧವನ್ನು ಎದುರಿಸಿ ವಾದಿರಾಜಸ್ವಾಮಿಗಳು ಕನಕದಾಸರನ್ನು ಆದರ, ಪ್ರೀತಿಯಿಂದ ನಡೆಸಿಕೊಂಡರು. ವ್ಯಾಸತೀರ್ಥರೇ ವಾದಿರಾಜರಿಗೆ ಮೇಲ್ಪಂಕ್ತಿ ಹಾಕಿದ್ದರು.

ಉಡುಪಿಯನ್ನು ಬಿಟ್ಟ ಮೇಲೆ ಮತ್ತೆ ಕನಕದಾಸರು ಹೆಚ್ಚಿನ ಕಾಲವಿದ್ದುದು ಬೇಲೂರಿನಲ್ಲಿ. ಆಗ ಅಲ್ಲಿ ಪ್ರಸಿದ್ಧರಾಗಿದ್ದ ವೈಕುಂಠದಾಸರ ಮನೆಗೆ ಹೋಗಿ ತಾನು ಯಾರೆಂದು ಏನೂ ಹೇಳಿಕೊಳ್ಳದೆ ಅವರಲ್ಲಿ ಊಳಿಗಕ್ಕೆ ನಿಂತುಬಿಟ್ಟವರು ಕನಕದಾಸರು. ಮುಂದೆ ಇವರೇ ಕನಕದಾಸರೆಂದು ಗೊತ್ತಾದಾಗ ತುಂಬ ಸಂಕೋಚ, ಪಶ್ಚಾತ್ತಾಪಪಟ್ಟು ವೈಕುಂಠದಾಸರು ಕನಕದಾಸರ ಕ್ಷಮೆ ಕೋರಿದರು. ಆದರೆ ವೈಕುಂಠದಾಸರಂಥ ಜ್ಞಾನಿಗಳ ಸೇವೆಮಾಡಬೇಕೆನ್ನುವುದೇ ತನ್ನ ಮನೋಭಿಲಾಷೆಯಾಗಿತ್ತೆಂದು ತನ್ನ ವರ್ತನೆಯನ್ನು ಕನಕದಾಸರು ಸಮರ್ಥಿಸಿಕೊಂಡು"ಬಂಟನಾಗಿ ಬಾಗಿಲ ಕಾಯ್ವೆ ಹರಿಯೆ ವೈಕುಂಠದಾಸೋತ್ತಮ ದಾಸರ ಮನೆಯ" ಎಂಬ ಕೃತಿ ರಚಿಸಿ ಹಾಡಿದರು. ದಾಸರಿಗೆ ದಾಸನಾಗಿ ಬಗೆ ಬಗೆಯ ಸೇವೆಗಳನ್ನು ಮಾಡಿಕೊಂಡಿರುವುದೇ ತನ್ನ ಸೌಭಾಗ್ಯವೆಂದು ಈ ಕೃತಿಯ ಉದ್ದಕ್ಕೂ ಹೇಳಿಕೊಂಡಿದ್ದಾರೆ.

ಬೇಲೂರಿನಲ್ಲಿ ವೈಕುಂಠದಾಸರೊಂದಿಗೆ ಸತ್ಸಂಗದಲ್ಲಿರುತ್ತ ಅನೇಕ ಕೃತಿರಚನೆಗಳನ್ನು ಮಾಡಿದರು. "ಹರಿಭಕ್ತಿಸಾರ" ಎನ್ನುವ ಸತ್ಕಾವ್ಯವನ್ನು ರಚಿಸಿ ಬೇಲೂರಿನ ಚೆನ್ನಕೇಶವದೇವರಿಗೆ ಸಮರ್ಪಿಸಿದರು. "ಸುರಪುರ ನಿಲಯ ಚೆನ್ನಿಗರಾಯ" ಎಂದು ಕೃತಿಯ ಕೊನೆಯಲ್ಲಿ ಅರ್ಪಣೆ ಇದೆ. 'ನಳಚರಿತ್ರೆ' ಎಂಬ ಮತ್ತೊಂದು ಕಾವ್ಯವೂ ಇಲ್ಲೇ ರಚಿತವಾಗಿ "ವರಪುರದ ಚೆನ್ನಿಗರಾಯ"ನೆಂದು ಕರೆದು ಅರ್ಪಿಸಿದ್ದಾರೆ. ಇವಲ್ಲದೆ ಅನೇಕ ಕೀರ್ತನೆಗಳೂ ಇಲ್ಲೇ ರಚಿತವಾಗಿವೆ. ಇವುಗಳಲ್ಲಿ "ಕೇಶವನೊಲುಮೆಯು ಆಗುವ ತನಕ" ಎಂದು ಪ್ರಾರಂಭವಾಗುವ ಕೀರ್ತನೆ ಇಂದಿಗೂ ಬಹಳ ಪ್ರಸಿದ್ಧಿಯಾಗಿದೆ. "ವರವೇಲಾಪುರದಾದಿ ಕೇಶವನ" ಎಂಬ ಅಂಕಿತದಲ್ಲಿ ಈ ಕೀರ್ತನೆ ಕೊನೆಗೊಳ್ಳುತ್ತದೆ. ಬೇಲೂರಿನಲ್ಲಿದ್ದಾಗ ರಚಿಸಿದ ಕೀರ್ತನೆಗಳಿಗೆ ಕನಕದಾಸರು 'ಕಾಗಿನೆಲೆ' ಎಂಬಲ್ಲಿಗೆ ಬದಲಾಗಿ 'ವೇಲಾಪುರ' 'ಸುರಪುರ' ಎಂದು ಸೇರಿಸಿ ಕೇಶವನಿಗೇ ಅರ್ಪಿಸಿದ್ದಾರೆ. ಹೀಗಾಗಿ ಕನಕದಾಸರ ಕೃತಿಗಳಲ್ಲಿ 'ಬಾಡದಾದಿಕೇಶವ' 'ಕಾಗಿನೆಲೆ ಆದಿಕೇಶವ''ವೇಲಾಪುರದಾದಿಕೇಶವ' ಎಂಬ ಮೂರು ಬಗೆಯ ಅಂಕಿತಗಳನ್ನು ಕಾಣಬಹುದು.

ಮತ್ತಷ್ಟು ಕಾಲ ತಿರುಪತಿಯಲ್ಲಿ ಕನಕದಾಸರಿದ್ದರು ಎಂದು ತಿಳಿಯುತ್ತದೆ. ಅವರ ಪ್ರಸಿದ್ಧ ಸುದೀರ್ಘ ಕೀರ್ತನೆ "ಗೋವಿಂದ ಸಲಹೆನ್ನನು। ಸದಾನಂದ" "ಬಂದೆವಯ್ಯ ಗೋವಿಂದ ಶೆಟ್ಟಿ" ಮುಂತಾದ ಅನೇಕ ಕೃತಿಗಳು ಇಲ್ಲಿದ್ದಾಗಲೇ ರಚಿತವಾಗಿವೆ. ನಾಡಿನ ತುಂಬ ಅವರು ಸಂಚರಿಸಿದರು. ಭಕ್ತಿಪರ, ನೀತಿಪರ ಹಾಡುಗಳನ್ನು ಹಾಡುತ್ತ ತಿರುಗಾಡಿದರು, ಜನರಿಗೆ ಸುಸಂಸ್ಕಾರದ ತನಿಯೆರೆದರು. ಕನಕದಾಸರನ್ನು ಕನ್ನಡನಾಡು ಎಂದಿಗೂ ಮರೆಯುವಂತಿಲ್ಲ. ಸಂತಕವಿಗಳೂ, ದಾಸಶ್ರೇಷ್ಠರೂ ಆದ ಕನಕದಾಸರು ದ್ವೈತ, ಅದ್ವೈತವೆಂದು ಯಾವ ತತ್ತ್ವಕ್ಕೂ ಅಂಟಿಕೊಳ್ಳದೆ ಆ ತತ್ತ್ವಗಳೊಳಗಿನ ಜ್ಞಾನ, ಭಕ್ತಿಯನ್ನಷ್ಟೆ ಅಳವಡಿಸಿಕೊಂಡು ಬೆಳೆದು ಹರಿಯೆಂಬ ಪರದೈವದಲ್ಲಿ ಶರಣಾಗಿ ಬಾಳಿದರು. ಆವರ ಅಂತ್ಯ ತಿರುಪತಿಯಲ್ಲಿ ಎಂದು ಕೆಲವರು. ಕಾಗಿನೆಲೆಯಲ್ಲಿ ಎಂದು ಕೆಲವರ, ಅಭಿಪ್ರಾಯವಿದೆ. ಕನಕದಾಸರ ಸಮಾಧಿ ಎಂದು ಈಗಲೂ ಕಾಗಿನೆಲೆಯಲ್ಲಿ ಆರಡಿ ಎತ್ತರ ನಾಲ್ಕು ಅಡಿ ಅಗಲದ ಕಟ್ಟೆಯೊಂದನ್ನು ತೋರಿಸುತ್ತಾರೆ.

ಕನ್ನಡನಾಡಿನ ಕಾಗಿನೆಲೆ, ಬಾಡ, ಹಂಪೆ, ಉಡುಪಿ, ಬೇಲೂರು ಮತ್ತು ತಿರುಪತಿ ಕ್ಷೇತ್ರಗಳಲ್ಲಿ ಕನಕದಾಸರ ಹೆಸರು ಬೆರೆತು ಒಂದಾಗಿದೆ. ಹರಿದಾಸ ಪರಂಪರೆಯಲ್ಲಿ ಕನಕದಾಸರಿಗೆ ವಿಶಿಷ್ಟವಾದ ಸ್ಥಾನವಿದೆ. ಅವರನ್ನು ಬಿಟ್ಟು ಈ ಪರಂಪರೆ ಪೂರ್ಣವಾಗದು. ಹರಿದಾಸ ಚತುಷ್ಟದಲ್ಲಿ ಕನಕದಾಸರ ಹೆಸರನ್ನು ಸೇರಿಸಿಲ್ಲ.*[೨೧] ನಿಜವಾಗಿಯೂ ಕನಕದಾಸರ ಹೆಸರನ್ನೂ ಸೇರಿಸಿ ಪಂಚ ಹರಿದಾಸರೆಂದು ಕರೆಯಬೇಕಿದ್ದಿತ್ತು. ಆಗ ಜನತೆಯ ಸ್ಮರಣೆಯ ಕೃತಜ್ಞತೆ ಪೂರ್ಣವೆನಿಸಿಕೊಳ್ಳುತ್ತಿತ್ತು. ಬಹುಶಃ ಕುಲದ ಪ್ರಶ್ನೆಯೇ ಇಲ್ಲಿಯೂ ತಲೆ ಎತ್ತಿ ಕನಕದಾಸರನ್ನು ಈ ಹರಿದಾಸರ ಯಾದಿಯಿಂದ ಹೊರಗಿಟ್ಟು ಶ್ಲೋಕರಚಿತವಾಗಿದ್ದಿರಬಹುದು. ಏನೇ ಇದ್ದರೂ ಕನ್ನಡ ನಾಡು, ನುಡಿ, ಸಂಸ್ಕೃತಿ ಕನಕದಾಸರಿಗೆ ಋಣಿಯಾಗಿದೆ ಎನ್ನುವುದಂತೂ ಸತ್ಯವಾದ ಮಾತು.

ಕನಕದಾಸರ ಕೃತಿಗಳು

ಕನಕದಾಸರ ಕೃತಿಗಳಲ್ಲಿ ಅಪಾರವಾದ ಕಾವ್ಯ ಮೌಲ್ಯವಿದೆ, ಶ್ರೇಷ್ಠವಾದ ತತ್ತ್ವ ಜ್ಞಾನವಿದೆ. ಸಮಾಜಕ್ಕೆ ದಾರಿ ತೋರುವ ಬೆಳಕಿದೆ. ದಿನನಿತ್ಯದ ಜೀವನಕ್ಕೆ ಬೇಕಾಗುವ ಕಿವಿಮಾತುಗಳು ದೊರೆಯುತ್ತವೆ. ಹರಿಸರ್ವಾರ್ಪಣ ಮನೋಭಾವ, ಅಹಂ ಖಂಡನೆಯಿಂದ ರಚಿತವಾದ ಕೀರ್ತನೆಗಳು, ನಾನಾಪರಿಯಲ್ಲಿನ ಹರಿಸ್ತುತಿಗಳು ಹೀಗೆ ಸುಮಾರು ನೂರಎಪ್ಪತ್ತನ್ನು ದಾಟಿ ಅವರ ದೇವರನಾಮಗಳು ದೊರಕಿವೆ. ಬದುಕಿನಲ್ಲಿ ಬಹಳ ನೊಂದಜೀವಿ ಕನಕದಾಸರು ಪಟ್ಟಪಾಡನ್ನೆಲ್ಲ ಹಾಡುಗಳ ಮೂಲಕ ಅಭಿವ್ಯಕ್ತಿಸಿದ್ದಾರೆ. ನೋವೆಲ್ಲ ಕಾವಾಗಿ ಕಾವ್ಯವಾಗಿ ಹೊರಹೊಮ್ಮಿರುವುದು ಅವರ ಕೃತಿಗಳಿಂದಾಗಿಯೇ ತಿಳಿಯುತ್ತದೆ.

"ವಾಣಿಯಲ್ಲಿ ಸಹಜ ಹೊಮ್ಮು, ದೇಸಿಯ ಸವಿತಿರುಳು ಮೈಗೊಂಡಿವೆ. ಕನಕ ಮಹಾಭಕ್ತನಾದಂತೆಯೇ ಮಹಾಕವಿಯ ಸತ್ತ್ವವುಳ್ಳವನೂ ಹೌದು. ಅವನ ಜೀವನವೇ ಒಂದು ಮಹಾಕೃತಿಯಾಗಿತ್ತು. ತನ್ನ ಜೀವನ ಸಾಹಿತ್ಯ ಸಿದ್ಧಿಯಿಂದ ಕನ್ನಡಿಗರ ಚಿರಂತನವಾದ ಸಂಸ್ಕೃತಿ ದೀಪಗಳಲ್ಲಿ ಒಂದಾಗಿದ್ದಾನೆ"*[೨೨] ಪಾಳೆಯಗಾರನಾಗಿ ಬದುಕಿದ್ದ ಕನಕರಿಗೆ ಜನಪದರ ನುಡಿಗಟ್ಟು, ಭಾಷೆ ಕರಗತವಾಗಿದ್ದು ದೇಸೀಗುಣದೊಂದಿಗೆ ಅವರ ಕಾವ್ಯ ಹೊಮ್ಮಲು ನೆರವಾಗಿದೆ.

ಪಾಳೆಯಗಾರ ಬದುಕಿನಲ್ಲಿ ದೊರೆತ ಲೋಕಾನುಭವ, ದಾಸನಾದ ನಂತರ ಮಡಿವಂತಿಕೆಯ ಧೋರಣೆಯವರಿಂದಾಗಿ ಅನುಭವಿಸಿದ ಅಪಮಾನ, ತಿರಸ್ಕಾರದ ನೋವು, ಪರಮ ವೈರಾಗ್ಯ ಶೀಲತೆಯ ಬದುಕಿನಲ್ಲಿ ದೈವಕ್ಕೆ ಅನನ್ಯ ಶರಣಾಗತಿ ಸಲ್ಲಿಸಿದ ಪರಿ ಇವೆಲ್ಲವೂ ಕನಕದಾಸರಲ್ಲಿ ಉತ್ಕೃಷ್ಟ ಕಾವ್ಯಾಭಿವ್ಯಕ್ತಿಯಾಗಿ ಹೊರಹೊಮ್ಮಿದೆ. ಜನಪದರಿಗೆ ಪ್ರಿಯವಾಗುವಂಥ ಹಾಡುಗಳು ಅವರಿಂದ ಮೂಡಿವೆ. ತಮ್ಮಟೆಯನ್ನು ಬಡಿದುಕೊಂಡು ಹಾಡುತ್ತ ಕುಣಿಯುವಂಥ ಸೊಗಸು ಅವರ ಕೆಲವು ಹಾಡುಗಳಲ್ಲಿವೆ ಎನ್ನುವುದಕ್ಕೆ ಉದಾಹರಣೆಯಾಗಿ "ದೇವಿ ನಮ್ಮ ದ್ಯಾವರು ಬಂದರು! ಬನ್ನಿರೇ ನೋಡ ಬನ್ನಿರೇ" ಎಂಬ ಕೀರ್ತನೆಯನ್ನು

ಪರಿಭಾವಿಸಬಹುದು. ಶುದ್ಧ ದೇಸಿ ಕನ್ನಡದಲ್ಲಿ ದೇವರ ಹತ್ತು ಅವತಾರಗಳನ್ನು ಕಟ್ಟಿಕೊಡುವ ಕೃತಿ ಇದು. ಅವರು ಪಾಳೆಯಗಾರ ಬದುಕಿನಲ್ಲಿದ್ದಾಗಲೇ ರಚಿಸಿದ್ದ ಕೃತಿ ಇದೆಂಬುದಕ್ಕೆ ಕಡೆಯಲ್ಲಿ ಬರುವ "ಕನಕಪ್ಪ ಕುಣಿ ಕುಣಿದಾಡ್ಯಾನ್‌ಮ್ಯಾ" ಎಂಬ ಸಾಲು ಸಾಕ್ಷಿಯಾಗಿದೆ. "ಕಣಿಯ ಹೇಳ ಬಂದೆ ನಾನು" ಎಂಬ ಕೃತಿಯಲ್ಲಿ ಅವರು ಕ್ಷುದ್ರ ದೇವತೆಗಳ ಆರಾಧನೆ, ಬಲಿಯಂಥ ಸಂಪ್ರದಾಯಗಳ ಮೌಢ್ಯತೆಯನ್ನು ಟೀಕಿಸಿದ್ದಾರೆ. "ಎಕ್ಕನಾತಿಯರು ಕಾಟಿ ಜಕ್ಕಣಿಯರು ಜಲಜೆಯರು। ಸೊಕ್ಕಿನಿಂದ ಸೊಂಟ ಮುರಿವ ಮೈಲಾರ ದೇವರು। ಮಿಕ್ಕ ಮಾರಿ ಮಸಣಿ ಚೌಡಿ ಭೈರವ ದೇವ ಮೊದಲಾದ। ಠಕ್ಕು ದೇವರ ಗೊಡವೆ ಬೇಡ ನರಕ ತಪ್ಪದು" ಎಂದು ಎಚ್ಚರಿಸಿದ್ದಾರೆ.

"ಕ್ರೂರ ಶಾಸ್ತ್ರವನೋದಿ ಕುರಿ ಕೋಣವನೆ ಕಡಿದು
ಘೋರ ನರಕದಿ ಬೀಳುವುದು ನಾನೊಲ್ಲೆ"

ಎಂದು ಮೂಢನಂಬಿಕೆ, ಸಂಪ್ರದಾಯಗಳ ವಿರುದ್ಧ ಸಮರ ಸಾರಿದ್ದಾರೆ. ಮನುಷ್ಯರಾದ ನಾವೆಲ್ಲ ಕುರಿಗಳಂತೆ. ಸ್ವಂತ ಬುದ್ಧಿಯಿಲ್ಲ, ಆತ್ಮವಿಮರ್ಶನವಿಲ್ಲ. ಇಂಥ ನಮ್ಮನ್ನು ಕಾಯುವ ಕುರುಬನೇ ಶ್ರೀಹರಿ ಎಂದು ಜನಪದೀಯ ಶೈಲಿಯಲ್ಲಿ ಸಾರಿದ್ದಾರೆ.

"ನಾವು ಕುರುಬರು ನಮ್ಮ ದೇವರು ಬೀರಯ್ಯ
ಕಾವ ನಮ್ಮಜ್ಜ ನರಗುರಿಯ ಹಿಂಡುಗಳ"

ಎಂದು ಪ್ರಾರಂಭವಾಗುವ ಕೃತಿ ಇದು. ಈ ಕೃತಿಯನ್ನು ತಾವು ಕುರುಬರಾಗಿದ್ದಕ್ಕೆ ಕನಕರು ಹೀಗೆ ಬರೆದಿದ್ದಾರೆಂದೂ, ಈ ಕೃತಿಯ ಮೂಲಕವೇ ಅವರು ಕುರುಬ ಜನಾಂಗದವರೆಂದು ಹೇಳಬಹುದೆಂದೂ ಅನೇಕರು ಈ ಮುಂಚೆ ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಕಾವ್ಯಗುಣದಿಂದ ಸೊಗಸಾಗಿರುವ ಈ ಕೃತಿಯನ್ನು ಕನಕರ ಜಾತಿ ನಿರ್ದೇಶಿಸಲು ಬಳಸಿಕೊಳ್ಳುವುದೇ ತಪ್ಪು. ಯಾವ ಜಾತಿ ಮೂಲದಿಂದ ಬಂದ ಕವಿಯೆನ್ನುವುದನ್ನು ಕೆದಕುವುದಕ್ಕಿಂತ ಕಾವ್ಯಮೌಲ್ಯದ ಶ್ರೇಷ್ಠತೆಯನ್ನು ಗುರುತಿಸಿ ಗೌರವಿಸಬೇಕು. ಕನ್ನಡ ಭಾಷೆಯ ಸೊಗಡಿಗೆ ಕನಕದಾಸರು ಅಪೂರ್ವ ಸಂಪತ್ತನ್ನು ಸುರಿದಿದ್ದಾರೆ, ಅಮೂಲ್ಯವಾದ ತತ್ತ್ವಜ್ಞಾನದ ದೇಣಿಗೆ ನೀಡಿದ್ದಾರೆ ಎನ್ನುವುದೇ ಮುಖ್ಯವಾಗಬೇಕು. ಅಜ್ಞಾನ, ಅಮಾಯಕತೆ ತುಂಬಿರುವ ನಾವು ಕುರಿಗಳಂತೆ ಹೌದು. ನಮ್ಮನ್ನು ಸರಿಯಾದ ದಾರಿಯಲ್ಲಿ ಕರೆದೊಯ್ಯಲು ಸಮರ್ಥ ನೇತಾರನೊಬ್ಬ ಬೇಕೇ ಬೇಕು. ಅವನೇ ಆ ಶ್ರೀಹರಿ, ಜನಪದರ ಬಾಯಿಯಲ್ಲಿನ "ಬೀರಯ್ಯ". ಎಷ್ಟು ಸೊಗಸಾದ, ಅರ್ಥಸಂಪತ್ತನ್ನು ತೆರೆಯುವ ರೂಪಕದಿಂದ ಈ ಕೃತಿ ಹೃದಯವನ್ನು ಸ್ಪರ್ಶಿಸುತ್ತದೆ! ಈ ಬೀರಯ್ಯನಾದರೂ ಎಷ್ಟು ಹಿರಿಯ! ಹಿರಿಯರೆಲ್ಲರ ಹಿರಿಯ ಅವನು! ಅನಾದಿಪುರುಷನಾದ ಅವನು ನಮಗಿಲ್ಲಿ ಅತ್ಯಂತ ಆತ್ಮೀಯ ಅಜ್ಜನಾಗಿದ್ದಾನೆ! "ಕಾವ ನಮ್ಮಜ್ಜ"! ಕಾಯುತ್ತಿದ್ದಾನೆ ನಮ್ಮನ್ನು!

ದೇಸಿಯ ಮೂಲಕವೇ ಹೊಕ್ಕು ಕವಿಯು ಇಲ್ಲಿ ಆಧ್ಯಾತ್ಮದ ರಾಜಮಾರ್ಗವನ್ನೇ ತೆರೆದು ತೋರಿದ್ದಾರೆ. ಮನುಷ್ಯರೆಂಬ ಈ ಕುರಿಗಳ ಹಿಂಡಿನಲ್ಲಿ ಟಗರು, ಹೋತಗಳೂ ಇವೆ. ಕೊಬ್ಬಿಕೊಂಡಿವೆ!

"ಅಷ್ಟಮದ ಮತ್ಸರಗಳೆಂತೆಂಬ ಟಗರುಗಳು
ದೃಷ್ಟಿ ಜೀವಾತ್ಮನೆಂಬೊ ಆಡು॥
ಸೃಷ್ಟಿ ಸಿದ್ಧ ಪ್ರಸಿದ್ಧವೆಂತೆಂಬ ಹೋತಗಳು
ಕಟ್ಟಿ ಕೋಲಿನಲಿ ಇರುತಿರುವ ನಮ್ಮಜ್ಜ"
"ವೇದ ಶಾಸ್ತ್ರ ಪುರಾಣವೆಂತೆಂಬ ಶ್ವಾನಗಳು
ಕಾದಿದ್ದು ನಮ್ಮಜ್ಜನ ಹಿಂಡೊಳಗೆ
ಹಾದಿಗಾಣದೆ ಕೂಗಿ ಬಾಯಾರಿ ಕಾಲ್ಗೆಡಲು
ಆದರಿಸಿ ಅಂಬಲಿಯನೆರೆವ ನಮ್ಮಜ್ಜ"

ದೇವರಿಗೆ ಕುರಿಕಾಯುವ, ಟಗರು ಹೋತಗಳನ್ನು ನಿಯಂತ್ರಿಸುವ, ಶ್ವಾನಗಳಿಗೆ ಅಂಬಲಿ ಎರೆಯುವ ಕುರುಬ ಪಟ್ಟವನ್ನು ಆರೋಪಿಸಿ "ಕುರುಬಜ್ಜ"ನೆಂದು ಕರೆದಿರುವ ಕನಕದಾಸರ ಹುಟ್ಟು ಕವಿತ್ವ ಗುಣದಲ್ಲಿ ಉನ್ನತವಾದ ಪರಮಾರ್ಥ ಚಿಂತನೆಯು ಹಾಸುಹೊಕ್ಕಾಗಿದೆ.

ಶ್ರೀಹರಿಯಲ್ಲಿರಿಸಿಕೊಂಡಿರುವ ದಾಸ್ಯಭಾವವಂತೂ ಕನಕದಾಸರ ಉಸಿರಲ್ಲೆ ಬೆರೆತು ಮಡುಗಟ್ಟಿಕೊಂಡಿದೆ. "ದಾಸನ ಮಾಡಿಕೋ ಎನ್ನ" ಎಂದು ಬಗೆಬಗೆಯಾಗಿ ಪುರಂದರದಾಸರು ಬೇಡಿದರೆ "ದಾಸ ದಾಸರ ಮನೆಯ ದಾಸಾನುದಾಸ" ಎಂದು ತಮ್ಮನ್ನು ಕರೆದುಕೊಂಡವರು ಕನಕದಾಸರು. ಶ್ರೀಹರಿಯನ್ನು ಪ್ರೀತಿಸಿ ದಾಸರಾದವರಿಗೆ ಅಷ್ಟು ಶ್ರೇಷ್ಟತೆಯನ್ನು ಕನಕರು ತಂದಿದ್ದಾರೆ. ಈ ದಾಸತ್ವವು ಯಾವುದೇ ಅಧಿಕಾರಕ್ಕಾಗಲೀ, ನರಮನುಷ್ಯನಿಗಾಗಲೀ ಆಗಿರದೆ ಪರಮದೈವ ಶ್ರೀಹರಿಯಲ್ಲಿ ತಾಳಿಕೊಂಡಿದ್ದಾಗಿದೆ. ಬಗೆಬಗೆಯಾಗಿ ತಮ್ಮನ್ನು ದಾಸನೆಂದು ಅವರು ಕರೆದುಕೊಂಡಿರುವುದರಲ್ಲಿ ಅಹಂ ಖಂಡನೆ ಮತ್ತು ಶ್ರೀಹರಿಯ ಮೇಲಿನ ಪ್ರೀತಿ ಮಡುಗಟ್ಟಿರುವುದನ್ನು ಗುರುತಿಸಿಕೊಳ್ಳಬೇಕೇ ವಿನಹಾ ಇಲ್ಲಿ ದೈನ್ಯ ವ್ಯಕ್ತಿಯ ದೈನ್ಯತೆಯ ಸಂಕೇತವಾಗಿ ಬಂದಿದೆ ಎನ್ನುವುದು ತಪ್ಪು. ಪರಮ ವೈರಾಗ್ಯ, ಪಕ್ವತೆಯ ಭಕ್ತಿಶೀಲ ಮನಸ್ಸಿಗೆ ದೈನ್ಯತೆಯಿರುವುದಕ್ಕೆ ಸಾಧ್ಯವಿಲ್ಲ, ಬದಲಿಗೆ ಲೋಕದ ಅವಿಚಾರಗಳ, ಅನಾಚಾರಗಳ ಬಗ್ಗೆ ಕರುಣೆ ಉದಿಸಬಹುದಷ್ಟೆ? ಹರಿಯ ಪಾದಗಳಲ್ಲಿ ಇರಿಸಿದ ಶರಣಾಗತಿ, ಪೂರ್ಣಶರಣಾಗತಿಯೇ ಹೀಗೆ ತಮ್ಮನ್ನು ದಾಸನೆಂದು ಕರೆದುಕೊಂಡಿದೆ. ಇದು ಜಗದೊಡೆಯನನ್ನು, ತನ್ನೊಡೆಯನನ್ನು ಪ್ರೀತಿಸುವ ಪರಿ, ಕವಿ ಮನಸ್ಸಿನ ತುಂಬ ಕವಿದು ಕೊಂಡಿರುವ ದೈವದ ಕುರಿತಾದ ಪ್ರೀತಿಯ ಪ್ರತೀಕ.

ದೈವ ಕರುಣೆಯನ್ನುಂಡ ಕವಿ ಎದೆ ತುಂಬಿ ಹಾಡಿದ್ದಾರೆ "ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು। ಪದುಮನಾಭನ ಪಾದದೊಲುಮೆ ಎನಗಾಯಿತು" ದೈವ ಸಾಕ್ಷತ್ಕಾರದ ಸಂತೃಪ್ತಿಯು ಈ ಕೀರ್ತನೆಯುದ್ಧಕ್ಕೂ ಹೊಳೆಯಾಗಿ ಹರಿದಿದೆ. ದೇವರು ಎಲ್ಲಿದ್ದಾನೆ ಎಂಬ ಸಂಶಯಪೀಡಿತರಿಗೆ ಅವರು "ಎಲ್ಲಿರುವನೋ ರಂಗ ಎಂಬ ಸಂಶಯ ಬೇಡ। ಎಲ್ಲಿ ಭಕ್ತರು ಕರೆದರಲ್ಲೇ ಬಂದೊದಗುವನೋ" ಎಂದು ಸಾರಿದ್ದಾರೆ. ನಾನಾ ಬಗೆಯ ತೊಳಲಾಟದಲ್ಲಿ ಒದ್ದಾಡುವ ಜನರಿಗೆ ಅವರು ನೀಡಿರುವ ಭರವಸೆ, ಸಾಂತ್ವನ ಗಮನಾರ್ಹವಿದೆ.

"ತಲ್ಲಣಿಸದಿರು ಕಂಡ್ಯ, ತಾಳು ಮನವೆ।
ಎಲ್ಲರನು ಸಲಹುವನು, ಇದಕೆ ಸಂಶಯವಿಲ್ಲ"

ಮನುಕುಲಕ್ಕೆ ಹರಿದಾಸ ಕನಕರು ನೀಡಿರುವ ಹರಿರಕ್ಷೆಯ ಖಚಿತ ಭರವಸೆಯಿದು. ನಂಬಿಕೆಯಿಟ್ಟು ಶರಣಾಗಿ ಕಾಯಬೇಕಷ್ಟೆ? "ತಾಳು ಮನವೆ" ಎಂಬ ಸೊಲ್ಲೇ ಆತ್ಮೀಯ ಧಾಟಿಯಲ್ಲಿ ಸಾಂತ್ವನವನ್ನೆರೆಯುತ್ತದೆ. ಸರ್ವಾಂತರ್ಯಾಮಿಯಲ್ಲಿ ನಂಬಿಕೆ ಇಡಬೇಕೆಂದು, ಭಗವಂತನ ಕೃಪೆ ರಕ್ಷಣೆಯಲ್ಲಿ ಭರವಸೆಯಿಟ್ಟು ಧೃತಿಗುಂದದೆ ಬಾಳಬೇಕೆಂದು ಸಂತಕವಿ ನೀಡಿರುವ ಸಂದೇಶವಿದು. ಇಲ್ಲಿ ಆಲಸಿಗಳನ್ನು, ಕೇಡಿಗರನ್ನು, ಎಂಥವರನ್ನಾದರೂ ಸಲಹುತ್ತಾನೆ ಎಂಬುದು ಅರ್ಥವಲ್ಲ. ತನ್ನ ಹೊಣೆಯರಿತು ಬದುಕನ್ನು ಮುನ್ನಡೆಸಲು ಒದ್ದಾಡುವವರು ಸನ್ನಡತೆಯವರಾಗಿದ್ದಲ್ಲಿ ಅಂಥವರನ್ನು ಸಲಹಿಯೇ ಸಲಹುತ್ತಾನೆ, ಇದಕ್ಕೆ ಸಂಶಯವಿಲ್ಲ ಎಂಬ ಸಂದೇಶ. "ತನು ನಿನ್ನದು ಜೀವನ ನಿನ್ನದಯ್ಯ। ಅನುದಿನದಲಿ ಬಾಹೋ ಸುಖದುಃಖ ನಿನ್ನದಯ್ಯ" ಎಂಬ ಸಮರ್ಪಣಾಭಾವವಿದ್ದಲ್ಲಿ ಸಲಹುತ್ತಾನೆ. ಯೋಗಕ್ಷೇಮ ನೋಡಿಕೊಳ್ಳುತ್ತಾನೆ ಎಂಬ ದೃಷ್ಟಿ. "ಕಾಯಜ ಪಿತ ಕಾಗಿನೆಲೆಯಾದಿ ಕೇಶವರಾಯ, ನೀನಲ್ಲದೆ ನರರು ಸ್ವತಂತ್ರರೆ?" ಎಂಬ ಈ ಪ್ರಶ್ನೆಯಲ್ಲಿ ಉತ್ತರವೂ ಖಚಿತವಿದೆ. ಕೇವಲ ಲೌಕಿಕ ಸ್ತರದಲ್ಲಿ ನಿಂತು ಪರಿಭಾವಿಸಿದರೆ ತೆರೆದುಕೊಳ್ಳದ ಕನಕದಾಸರ ಕೃತಿಗಳ ಅನುಸಂಧಾನದಲ್ಲಿ ಆಧ್ಯಾತ್ಮಿಕತೆಯ ಬೆಳಕು ಹರಿಯಿಸಿಕೊಳ್ಳಬೇಕಾದ ಅಗತ್ಯ ಖಂಡಿತ ಇದೆ. ಈ ಲೋಕದಲ್ಲಿ ಇರುವುದು, ಬರುವುದು ಎಲ್ಲ ಅವನ ಅಧೀನ, ಎಲ್ಲವೂ ನಿತ್ಯಸತ್ಯನೂ ಸರ್ವತಂತ್ರ ಸ್ವತಂತ್ರನೂ ಆದ ಅವನದು. ನರರಿಗಿರುವ ಪರಿಮಿತ ಸ್ವಾತಂತ್ರ್ಯದಿಂದಲೇ ಪರಿಪೂರ್ಣತೆಯತ್ತ ಸಾಗುವ ಪ್ರಯತ್ನ, ಕರ್ತವ್ಯಗಳನ್ನು ಮಾಡಬೇಕು. ಅವನಿಗೊಪ್ಪಿಸಿಕೊಂಡು ಬಾಳಿದಾಗ ತಾಯಿ ಮಗುವನ್ನು ನೋಡಿಕೊಳ್ಳುವಂತೆ ರಕ್ಷಿಸುತ್ತಾನೆ ಎನ್ನುವುದು ಕನಕರ ನಿಲುವು.

ಪ್ರಗತಿಯಲ್ಲಿ, ವೈಭವದಲ್ಲಿ ಪರಮಾತ್ಮನನ್ನು ಮಾನವ ನೆನೆಯುವುದಿಲ್ಲ. ಆದರೂ ನಮ್ಮನ್ನು ನೀನು ರಕ್ಷಿಸಬೇಕು. ಕಷ್ಟ ಬಂದಾಗಷ್ಟೆ ಇಷ್ಟ ದೈವದ ನೆನಪು ನರನಿಗೆ!

"ಮರೆದೆನಭ್ಯುದಯದಲಿ ನಿಮ್ಮನು
ಮರೆಯೆನಾಪತ್ತಿನಲಿ ಹರಿಯೆಂ
ದೊರಲುವೆನು ಮನವೇಕಭಾವದೊಳಿಲ್ಲ ನಿಮ್ಮಡಿಯ
ಮರೆದು ಬಾಹಿರನಾದವನು ನೀ
ಮರೆವರೇ ಹಸು ತನ್ನ ಕಂದನ
ಮರೆವುದೇ ಮಮತೆಯಲಿ ರಕ್ಷಿಸು ನಮ್ಮನನವರತ॥

– ಹರಿಭಕ್ತಿಸಾರ.

ಇಡೀ ಮನುಕುಲದ ಪರವಾಗಿ ಆರ್ತತೆಯ ಮೊರೆಯನ್ನಿಲ್ಲಿ ಸಲ್ಲಿಸಿದ್ದಾರೆ. "ನಮ್ಮನ್ನು ಅನವರತವೂ, ಎಂದೆಂದಿಗೂ ನೀನು ರಕ್ಷಿಸಬೇಕು" ಎನ್ನುವ ಗಾಢವಾದ ಬೇಡಿಕೆ ಅದು.

ಲೌಕಿಕ ಸಂಬಂಧಗಳಿಗೆ ಇತಿಮಿತಿಯಿದೆ, ಅವು ಸ್ವಾರ್ಥಮೂಲ ಸಂಬಂಧಗಳಾಗಿ ಸಂಕಟ, ರಗಳೆಗಳನ್ನು ತಂದಾಗ ಅಂಥವುಗಳನ್ನು ಮೀರಿ ನಿಲ್ಲಬಹುದು, ತೊರೆದು ನಡೆಯಬಹುದು ಆದರೆ "ತೊರೆದು ಜೀವಿಸಬಹುದೆ? ಹರಿ ನಿನ್ನ ಚರಣಗಳ" ಇದು ಬರಿಯ ಮಾತಲ್ಲ, ಅರಿತು ಪೇಳುತ್ತಿದ್ದೇನೆ ಎನ್ನುತ್ತಾರೆ ಕನಕದಾಸರು.

ತಾಯಿ ತಂದೆಯ ಬಿಟ್ಟು ತಪವ ಮಾಡಲು ಬಹುದು
ದಾಯಾದಿ ಬಂಧುಗಳ ಬಿಡಲುಬಹುದು।
ರಾಯ ಮುನಿದರೆ ರಾಜ್ಯವ ಬಿಡಬಹುದು
ಕಾಯಜಪಿತ ನಿನ್ನಡಿಯ ಬಿಡಲಾಗದು॥

ಅಹಿತ ಬಂಧುತ್ವವನ್ನು, ಹಿತಶತ್ರುಗಳನ್ನು, ಆಸ್ತಿವ್ಯಾಜ್ಯಗಳನ್ನು ಬಿಟ್ಟು ಹೊರಡಬಹುದು. ಇಂಥ ಲೌಕಿಕ ಹಿತಾಸಕ್ತಿಗಳು ತರುವ ನೋವನ್ನು ಮೀರಿ ನಿರ್ಲಿಪ್ತತೆ ಸಾಧಿಸಿ ಬದುಕಬಹುದು. ಆದರೆ "ಪ್ರಾಣದಾಯಕನಾದ ಆದಿ ಕೇಶವರಾಯ। ಜಾಣ ಶ್ರೀಕೃಷ್ಣ ನಿಮ್ಮಡಿಯ ಬಿಡಲಾಗದು" ಎಂದು ಖಡಾಖಂಡಿತವಾಗಿ ಸಾರಿದ್ದಾರೆ.

ಮತ್ತೊಂದು ಕೃತಿಯಲ್ಲಿ "ಆರು ಹಿತವರು ಎಂದು ನಂಬಬೇಡ। ಯಾರಿಗ್ಯಾರಿಲ್ಲ ಆಪತ್ತು ಬಂದೊದಗಿದೊಡೆ" ಎಂಬ ಕಟುಸತ್ಯದ ನಿರೂಪಣೆಯಿದೆ. ಎಲ್ಲ ಬಂಧುಗಳನ್ನು ಮೀರುವ ಬಂಧು "ಘನ ಕೃಪಾನಿಧಿ ಆದಿಕೇಶವರಾಯ" ಎಂದು ಎಚ್ಚರಿಸಿದ್ದಾರೆ. ಏನೇ ಕಷ್ಟಗಳ ಧಾಳಿ ಬರಲಿ, ಭಗವಂತನನ್ನು ನೆನೆ, ನಿಶ್ಚಿಂತೆಯಿಂದ ನೆನೆ ಎನ್ನುತ್ತಾರೆ.

ಹಸಿದು ಬಳಲುವಾಗ ಹಗೆಯ ಕೈಗೆ ಸಿಕ್ಕಾಗ
ದೆಸೆಗೆಟ್ಟು ಬಹು ವ್ಯಾಧಿಯಲ್ಲಿ ಇರುವಾಗ
ಅಸಮಾನನಾದಾಗ, ಅತಿ ಭೀತಿ ಬರುವಾಗ
ಬಿಸಜನಾಭವ ನಾಮ ನೆನೆ ಕಂಡ್ಯ ಮನವೆ॥

"ಈಗಲೋ ಈ ದೇಹವಿನ್ನ್ಯಾವಾಗಲೋ ನಿಜವಿಲ್ಲ" ಎಂದು ಮಾನವ ದೇಹದ ನಶ್ವರತೆಯ ಕಡೆಗೆ ಬೊಟ್ಟಿಡುತ್ತಾರೆ. "ಸಾಲದೇ ನಿನ್ನೊಂದು ದಿವ್ಯನಾಮ ಅಕಾಲ ಮೃತ್ಯುವಿನ ಗಂಟಲ ಗಾಣ ಹರಿಯೆ?" ಸದಾ ಹರಿಸ್ಮರಣೆಯಲ್ಲಿರುತ್ತ ಕರ್ತವ್ಯಗಳನ್ನು ಮಾಡುತ್ತಿರು ಎನ್ನುತ್ತ "ಏನು ಬರುವುದೋ, ಸಂಗಡೇನು ಬರುವುದೋ?" ಎಂಬ ಮರಣಕಾಲದ ಪ್ರಶ್ನೆಯೆತ್ತಿದ್ದಾರೆ. ಸದಾ ಸತ್ಕಾಲಕ್ಷೇಪ, ಸಾಧುಸಜ್ಜನ ಸಂಗದಲ್ಲಿರಬೇಕೆಂದು ಬೋಧಿಸುತ್ತಾರೆ. "ಸಾಧು ಸಜ್ಜನ ಸತ್ಯಗುಣಕಿದಿರುಂಟೆ? ಆದಿಕೇಶವನ ಹೋಲುವ ದೈವವುಂಟೆ?" "ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ?" "ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡೆ ಜಗಳವೇ ಲೇಸು" ಎಂಬೆಲ್ಲ ಕೃತಿಗಳಲ್ಲಿ ಸಜ್ಜನರ ಸಹವಾಸ ಮಾಡಬೇಕೆನ್ನುವ ಬೋಧೆಯಿದೆ.

ಸಮಾಜಕ್ಕೆ ಅನೇಕ ರೀತಿಯಲ್ಲಿ ನೀತಿತತ್ತ್ವಗಳನ್ನು ನೀಡಿರುವ ಕನಕದಾಸರು ಒಳ್ಳೆಯ ಬದುಕಿನ ಪರಿ ಹೇಗಿರಬೇಕೆನ್ನುವುದನ್ನು ಚಿತ್ರಿಸಿಕೊಡುತ್ತಾರೆ. ಅವರ ಕೃತಿಗಳಿಂದಲೇ ಆಯ್ದ ಕೆಲವು ಸಾಲುಗಳನ್ನು ಇಲ್ಲಿ ನೋಡಬಹುದು. ಎಲ್ಲವೂ ಸಾಮಾಜಿಕ ಅನುಭವದ ಪಾಕದಿಂದ ಹರಳುಗಟ್ಟಿವೆ.

ಕೋಪವನ್ನು ಮಾಡದಿರು, ಪಾಪಕ್ಕೆ ಗುರಿಯಾಗದಿರು.
ಅಷ್ಟಮದದಿ ಮೆರೆಯದಿರು, ನಷ್ಟಕ್ಕೆ ಗುರಿಯಾಗದಿರು.
ದುಷ್ಟ ಸಂಗವ ಮಾಡದಿರು, ಭ್ರಷ್ಟವಾಗಿ ಬಾಳದಿರು.
ಸಿರಿಯ ಮೆಚ್ಚಿ ಮೆರೆಯದಿರು, ಬರಿದೆ ಹೊತ್ತ ಕಳೆಯದಿರು.
ವರಕವಿಗಳ ಮುಂದೆ ನರಕವಿಗಳ ವಿದ್ಯಾ ತೋರಬಾರದು.
ಪಾಪಿಗಳಿದ್ದಲ್ಲಿ ರೂಪುಳ್ಳ ವಸ್ತುವ ತೋರಬಾರದು.
ನೇಮವಿಲ್ಲದ ಹೋಮವಿನ್ಯಾತಕೇ?

ಒಡನೆ ಹಂಗಿಸುವ ಓಗರವನುಂಬುವುದಕ್ಕಿಂತ ಕುಡಿ ನೀರು ಕುಡಿದುಕೊಂಡಿರುವುದೆ ಲೇಸು ಹರಟೆ ಹಾಳುಮಾತುಗಳ ಬಡಿವುದಕ್ಕಿಂತ ಹರಿಯದಾಸರ ಕೂಡ ಸಂಭಾಷಣೆಯೆ ಲೇಸು

ಮಾತು ಕೇಳದೆ ಮಲೆತು ನಡೆವ ಮಕ್ಕಳ್ಯಾತಕೆ
ಸನ್ನೆಯರಿತು ನಡೆಯದಿರುವ ಸತಿಯು ಯಾತಕೆ?
ಆತ್ಮನಿವೇದನಕಿಂತಧಿಕ ಭಕ್ತಿಯುಂಟೆ?
ವಸುಧೆಯೊಳಗನ್ನದಾನಕೆ ಸರಿಯುಂಟೆ?
ಪರಮಸಾತ್ತ್ವಿಕ ಗುಣಕ್ಕೆ ಪಿರಿದುಂಟೆ?
ಗುರುಸೇವೆಯಂಥ ಪರಮ ಸೇವೆಯುಂಟೆ?

ಜಪವ ಮಾಡಿದರೇನು, ತಪವ ಮಾಡಿದರೇನು? ಕಪಟ ಗುಣವಿಪರೀತ ಕಲುಷವಿದ್ದವರು॥
ಮೂಢರ ಒಡನಾಡಿ ಮುಂದೆ ಕೆಡಲು ಬೇಡ, ಮೋಸ ನೋಡು ಎಚ್ಚರಿಕೆ!
ನಾಡೊಳು ಸುಜನರ ನೋಡಿನಡೆ ಕಂಡ್ಯಾ, ನಟನೆ ಬೇಡೆಚ್ಚರಿಕೆ!
ಸೇವೆಯರಿಯದ ದಣಿಯು ಕಲ್ಲಿನಾ ಕಣಿಯು
ಮಕ್ಕಳಿಲ್ಲದ ಸಿರಿಯು ಕೊಳೆತ ತೆಂಗಿನ ತುರಿಯು
ಸೊಕ್ಕಿ ನಡೆಯುವ ಭೃತ್ಯ, ಅವ ಕ್ರೂರ ಕೃತ್ಯ
ಬಾಯಿ ನಾರಿದ ಮೇಲೆ ಏಕಾಂತವೆ?
ತಾಯಿ ತೀರಿದ ಮೇಲೆ ತೌರಾಸೆಯೆ?

ಕಾವ್ಯಾತ್ಮಕವಾಗಿ ಹೃದಯ ಸ್ಪರ್ಶಿಸುವ ಸಾಲುಗಳಲ್ಲಿ ಜನರಿಗೆ ಬುದ್ಧಿ ಹೇಳಿದರು. ತಿದ್ದಿಕೊಳ್ಳಲು ತಿಳುವಳಿಕೆ ನೀಡಿದರು. ಸರಳ ಸೌಂದರ್ಯತೆಯಲ್ಲೆ ಆಳ ಅರ್ಥವನ್ನು ಹುದುಗಿಸಿಕೊಂಡಿರುವ ಹಾಡುಗಳಲ್ಲಿ ಕನಕದಾಸರು ಕನ್ನಡಿಗರಿಗೆ ತುಂಬ ಆಪ್ತರಾಗುತ್ತಾರೆ. ವೇದಾಂತದ ತಿರುಳನ್ನು ಜನಸಾಮಾನ್ಯರಿಗೆ ಸುಲಭ ಸಾಲುಗಳಲ್ಲೆ ಒದಗಿಸಿಕೊಟ್ಟು ಭಕ್ತಿ ವಿಧಾನವನ್ನು, ನೈತಿಕತೆಯ ಬಾಳನ್ನು ಬೋಧಿಸಿದ ಆತ್ಮೀಯ ಹರಿದಾಸರೆನ್ನಿಸುತ್ತಾರೆ.

ಹರಿಸ್ತುತಿಯ ಅನೇಕ ಹಾಡುಗಳು, ಆತ್ಮನಿವೇದನೆಯ ಕೀರ್ತನೆಗಳು, ಸಾಮಾಜಿಕ ಕಳಕಳಿ ತುಂಬಿದ ಕವಿತೆಗಳು ಇವುಗಳಲ್ಲದೆ ಉತ್ತಮ ಕಾವ್ಯಗಳನ್ನೂ ಕನಕದಾಸರು ರಚಿಸಿದ್ದಾರೆ. ಸಂಸ್ಕೃತ ಪುರಾಣಗಳನ್ನು ಅಭ್ಯಸಿಸಿದವರು ಅವರೆಂದು ಅವರ ಈ ಕಾವ್ಯಗಳ ಅವಲೋಕನದಿಂದ ತಿಳಿಯಬಹುದು. 'ಮೋಹನತರಂಗಿಣಿ', 'ನಳಚರಿತ್ರೆ' 'ರಾಮಧಾನ್ಯ ಚರಿತ್ರೆ', 'ಹರಿಭಕ್ತಿ ಸಾರ' ಈ ಕಾವ್ಯಗಳು ಲಭ್ಯವಿದ್ದು ಪ್ರಸಿದ್ಧವೂ ಆಗಿವೆ. 'ಮೋಹನ ತರಂಗಿಣಿಯು ಶಿವಪಾರ್ವತಿಯರ ನಡುವಿನ ವಿರಸ, ಕಾಮದಹನ, ಕುಮಾರಜನನ ಮತ್ತು ತಾರಕಾಸುರ ಸಂಹಾರದ ಕಥಾ ವಸ್ತುವನ್ನು ಹೊಂದಿದ್ದು ಕವಿ ತಮ್ಮ ತಾತ್ತ್ವಿಕ ದೃಷ್ಟಿಕೋನವನ್ನೂ, ಹಿನ್ನೆಲೆಯಾಗಿ ಸಮಕಾಲೀನ ಜೀವನ ಮೌಲ್ಯವನ್ನೂ ಬೆರೆಸಿ ರಸಾತ್ಮಕ ಗುಣದಿಂದ ಈ ಕಾವ್ಯ ರಚನೆ ಮಾಡಿದ್ದಾರೆ. "ರಾಮಧಾನ್ಯ ಚರಿತ್ರೆಯು ಒಂದು ಅಣುಕು ಕಾವ್ಯವಾಗಿದ್ದು ಜನಪದ ವಸ್ತುವನ್ನು ತೆಗೆದುಕೊಂಡಿದ್ದು ಕನಕದಾಸರು ಇದರಲ್ಲಿ ಸಮಕಾಲೀನ ಸಮಾಜವನ್ನು ವಿಡಂಬಿಸಿ ತೋರಿದ್ದಾರೆ. "ರಾಮಧಾನ್ಯ ಚರಿತ್ರೆ"ಯ ಮಹತ್ವವು ಮೂರು ಬಗೆಗಳಲ್ಲಿ ಗುರುತಿಸುವಂತಿದೆ. "ಕನಕದಾಸರ ಆತ್ಮ ಚರಿತ್ರಾತ್ಮಕ ಕೃತಿಯಾಗಿ; ಅಲಿಗರಿ (Allegory) ಕತೆಯಾಗಿ; ವರ್ಗ ಹೋರಾಟವನ್ನು (Class struggle) ಚಿತ್ರಿಸುವ ಕೃತಿಯಾಗಿ" ಎಂದು ಡಾ॥ ಎಂ.ಚಿದಾನಂದ ಮೂರ್ತಿಯವರು ಅಭಿಪ್ರಾಯ ಪಟ್ಟಿದ್ದಾರೆ.

"ನಳಚರಿತ್ರೆ"ಯ ಮೂಲಕ ಕನಕದಾಸರು ದುರ್ವ್ಯಸನಗಳಿಂದ ದೂರವಿರಬೇಕು, ಒಳ್ಳೆಯ ಶುಚಿ ರುಚಿಯ ಬದುಕನ್ನು ನಡೆಸುತ್ತಾ ಕೆಟ್ಟದ್ದನ್ನು ತ್ಯಜಿಸಿ ಒಳ್ಳೆಯದನ್ನು ಅಳವಡಿಸಿಕೊಳ್ಳುವುದನ್ನೇ ಗುರಿಯಾಗಿಸಿಕೊಳ್ಳಬೇಕು ಎಂದು ಸಾರುತ್ತಾರೆ.

"ಹರಿಭಕ್ತಿ ಸಾರ"ವು ಕನ್ನಡದಲ್ಲಿ ಬಂದಿರುವ ಭಕ್ತಿ ಸಾಹಿತ್ಯದಲ್ಲಿನ ಒಂದು ಜನಪ್ರಿಯ ಕೃತಿಯಾಗಿ ಇಂದಿಗೂ ಜನಮಾನಸಕ್ಕೆ ಸಾಂತ್ವನ ಸ್ತೋತ್ರವೆನಿಸಿಕೊಂಡಿದೆ. ಭಕ್ತಿ, ಜ್ಞಾನ, ವೈರಾಗ್ಯ ಭಾವಗಳ ಸಂಗಮವೆನಿಸಿಕೊಂಡು ಸಾತ್ವಿಕ ಮನಸ್ಸಿನ ನಿವೇದನೆಯಾಗಿರುವ ಕೃತಿಯಾಗಿದೆ. ಜೀವನ ಮೌಲ್ಯಗಳ ಸಾರವನ್ನೂ ಒಳಗೊಂಡಿದ್ದು ಭಕ್ತಿಯನ್ನು, ಪ್ರಪತ್ತಿಯನ್ನು ಪ್ರಧಾನವಾಗಿರಿಸಿಕೊಂಡಿದೆ. ಭಾಮಿನೀ ಷಟ್ಪದಿಯಲ್ಲಿ ಸೌಮ್ಯ ಭಾವಗಳೊಡನೆ ಸಾಗುವ ಪ್ರತಿ ಪದ್ಯದ ಕಡೆಯಲ್ಲೂ "ರಕ್ಷಿಸು ನಮ್ಮನು ಅನವರತ" ಎಂಬ ಮೊರೆ ಅನುರಣಿಸುತ್ತ ಮಾನವ ಮನಸ್ಸಿನ ಬೇಡಿಕೆ, ನಂಬಿಕೆಗಳನ್ನು ಆರ್ತತೆಯಿಂದ ಅಭಿವ್ಯಕ್ತಿಸುತ್ತದೆ. ವಿಶ್ವಾಸದ್ರೋಹವೇ ಮುಂತಾದ ನಾನಾ ಬಗೆಯ ಆಘಾತ, ನೋವುಗಳಿಂದ ಕುಸಿಯುವ, ಕಂಗಾಲಾಗುವ, ಮನುಷ್ಯನ ಬದುಕಿಗೆ ಖಂಡಿತವಾಗಿಯೂ, "ಹರಿಭಕ್ತಿಸಾರ"ವು ಸಮಾಧಾನದ ಬೆಳಕನ್ನು ನೀಡಬಲ್ಲ ಕೃತಿಯಾಗಿದೆ. ಲೌಕಿಕ ದುರ್ಘಟನೆಗಳಿಂದ ಜರ್ಝರಿತವಾಗುವ ಮನಸ್ಸಿಗೆ ಶರಣಾಗತಿಯ ಪಥದ ಮೂಲಕ ಪರಮಾತ್ಮನೆಂಬ ತಾಯಿಯ ಮಡಿಲಿಗೆ ಕರೆದೊಯ್ದು ಸಂತೈಸುವ ಕೃತಿಯಾಗಿ ಪರಿಣಮಿಸುತ್ತದೆ.

ಮೇಲಿನ ನಾಲ್ಕು ಕಾವ್ಯಗಳಲ್ಲೂ ಕನಕದಾಸರ ಪ್ರತಿಭೆ, ಪದಪ್ರಯೋಗ ಕೌಶಲ್ಯ, ಭಾಷೆಯ ಮೇಲಿನ ಹಿಡಿತಗಳು ಮುಪ್ಪುರಿಗೊಂಡು ಮೆರೆದಿವೆ, ಅವರು ಹುಟ್ಟು ಕವಿಯೆಂಬುದನ್ನು ನಿರೂಪಿಸುತ್ತವೆ. ಅನೇಕ ಕೀರ್ತನೆಗಳಲ್ಲಿಯೂ ಅವರ ಕಾವ್ಯ ಪ್ರತಿಭೆ ಸೊಗಯಿಸುತ್ತದೆ. ಒಂದೆಡೆ ನರಸಿಂಹಾವತಾರವನ್ನು ಬಣ್ಣಿಸುವ ಕೀರ್ತನೆಯಲ್ಲಿ ಅವರ ಪದ ಪ್ರಯೋಗದ ಜಾಣ್ಮೆಯು ಅಲ್ಲಿನ ಶಬ್ದಗಳೇ ಅಭಿನಯಿಸಿ ನರಸಿಂಹಾವತಾರವನ್ನು ಕಣ್ಣಿಗೆ ಕಟ್ಟುವಂತೆ ಮಾಡುವುದರಲ್ಲಿ ಯಶಸ್ವಿಯಾಗಿದೆ.

ಘುಡುಘುಡಿಸಿ ಕಂಬದಲಿ ಧಡಧಡ ಸಿಡಿಲು ಸಿಡಿಲೆಯೆ
ಕಿಡಿಕಿಡಿಸೆ ನುಡಿಯಡಗಲೊಡನೆ ಮುಡಿವಿಡಿದು
ಘುಡುಘುಡನೆ ನಡುನಡುವಿಗೆ ಘುಡುಘುಡಿಸಿ ಸಭೆ ಬೆದರೆ
ಹಿಡಿಹಿಡಿದು ಹಿರಣ್ಯಕನ ತೊಡೆಯೊಳೆಡೆ ಕೆಡಹಿದನಾ॥

ನಿಂದಾಸ್ತುತಿಯ ಕೃತಿಗಳಲ್ಲೂ ಕನಕದಾಸರ ಜಾಣ ಪ್ರತಿಭೆ ಪ್ರಕಾಶವಾಗಿದೆ. "ಆರು ಬದುಕಿದರಯ್ಯ ಹರಿ ನಿನ್ನ ನಂಬಿ" ಎಂಬ ಕೀರ್ತನೆಯಲ್ಲಿ ಭಗವಂತನ ಕೃತಿಗಳೆಲ್ಲ ಕೆಡುಕಿನವೆಂದು ಸಾರುತ್ತಲೇ ಈ ಕೆಡುಕೆಂದು ತೋರುವ ಕಾರ್ಯಗಳಿಗೆ ಕಾರಣವಾದ ಸಂದರ್ಭ ಮತ್ತು ಕ್ರಿಯೆಯನ್ನು ಧ್ವನಿಸುತ್ತ ಆತನ ಶಕ್ತಿ, ಸಾಮರ್ಥ್ಯ ಲೋಕ ಕಲ್ಯಾಣ ದೃಷ್ಟಿ ಎಂಥದ್ದೆಂದು ತೋರಿಸುವ ನೂತನ ವಿಧಾನದ ಅಭಿವ್ಯಕ್ತಿ ಇದು. ಇನ್ನೊಂದು ಕೃತಿಯಲ್ಲಿ ಭಗವಂತ ಸೂತ್ರಧಾರಕ ಶಕ್ತಿಯಾಗಿ ಇಡೀ ಮಹಾಭಾರತವನ್ನು ಬೊಂಬೆಯಾಟವನ್ನಾಡಿಸಿದ ಎಂದು ಸಾರುವುದು ಮನೋಹರವಾಗಿದೆ. ಭಗವಂತನನ್ನು ಮುತ್ತಿಗೆ ಹೋಲಿಸಿ ಮನದಣಿಯೆ ಕೊಂಡಾಡಿರುವ ಕೃತಿ "ಮುತ್ತು ಬಂದಿದೆ ಕೇರಿಗೆ."

"ಯಾಕೆ ನೀನಿಲ್ಲಿ ಪವಡಿಸಿದೆ ಹರಿಯೇ" ಎಂಬ ಕೀರ್ತನೆಯಲ್ಲಿ ಕನಕದಾಸರ ವಾತ್ಸಲ್ಯ ಭಾವ ಕೆನೆಗಟ್ಟಿದೆ. ಹತ್ತು ಅವತಾರಗಳನ್ನು ಇಲ್ಲಿ ಚಿತ್ರಿಸಿರುವುದಕ್ಕಿಂತ ಮಿಗಿಲಾಗಿ ಈ ಎಲ್ಲ ಅವತಾರಗಳನ್ನೂ ಮಾಡಿ ಆಯಾಸಗೊಂಡಿರುವೆಯಾ ಎಂದು ದೇವರನ್ನು ಕೇಳುತ್ತಿರುವ ರೀತಿಯೇ ಈ ಕೃತಿಯಲ್ಲಿನ ವಿಶೇಷತೆಯಾಗಿದೆ. ಕೊನೆಯಲ್ಲಿ "ಇನ್ನೆಷ್ಟು ಕಾಲ ನೀನಿಲ್ಲಿ ಮಲಗಿದ್ದರೂ। ನಿನ್ನನೆಬ್ಬಿಸುವವರೊಬ್ಬರನು ಕಾಣೆ" ಎಂಬ ಸಾಲು ವಿಷಾದಕ್ಕೆ ಎಡೆಮಾಡಿ ಕೀರ್ತನೆಯ ಅರ್ಥಭಾವಗಳ ಅನುರಣನವನ್ನು ಹೆಚ್ಚಿಸಿಕೊಡುತ್ತದೆ. ಕೃಷ್ಣನನ್ನು ವಾತ್ಸಲ್ಯಭಾವದಿಂದ ಕಂಡು ಮಿಡಿದಿರುವ ಅನೇಕ ರಚನೆಗಳಿವೆ. ಪುರಂದರದಾಸರಷ್ಟು ರಚನಾವೈವಿಧ್ಯವು ಇವರ ಕೀರ್ತನೆಗಳಲ್ಲಿ ಕಂಡು ಬರುವುದಿಲ್ಲ. ಆದರೆ ಇರುವ ಕೆಲವೇ ರಚನೆಗಳು ಮನದುಂಬಿ ಸೊಗಯಿಸುತ್ತವೆ. "ಮಗುವು ಬಲ್ಲುದೇ? ಇಷ್ಟು ಬೆಣ್ಣೆ ಕದ್ದರೆ ಬಿಗಿಯಬಹುದೇ ಶ್ರೀಚರಣವನು?" "ಹಸುಮಗುವನು ಕಂಡು ಮುದ್ದಿಸಲೊಲ್ಲದೆ ಹುಸಿಕಳ್ಳನೆಂದು ಕಟ್ಟುವಿರ?" ಎಂಬೆಲ್ಲ ಪ್ರಶ್ನೆಗಳು ಯಶೋದೆಯ ತಾಯ್ತನದ ಪ್ರತೀಕವಾಗುತ್ತವೆ. ಕೃಷ್ಣನ ತುಂಟಾಟಗಳನ್ನು ಚಿತ್ರಿಸುವ ಕೃತಿಗಳೂ ಸಾಕಷ್ಟಿವೆ.

ಸಂಸಾರದಲ್ಲಿರುವ ಮೋಹದಾಹಗಳ ಭ್ರಮನಿರಸನವನ್ನು ಕವಿ ಕಟ್ಟಿಕೊಡುತ್ತಾರೆ. "ಡಿಂಭದಲ್ಲಿರುವ ಜೀವ ಕಂಬ ಸೂತ್ರ ಬೊಂಬೆಯಂತೆ" ಎಂದು ಸಾರುತ್ತ ಮುಂದುವರೆದು

> ಬೆಳ್ಳಿ ಬಂಗಾರಿಟ್ಟುಕೊಂಡು ಒಳ್ಳೆವಸ್ತ್ರ ಹೊದ್ದುಕೊಂಡು
> ಚಳ್ಳೆ ಪಿಳ್ಳೆಗೊಂಬೆಯಂತೆ ಆಡಿ ಹೋಯಿತು
> ಹಳ್ಳ ಹರಿದು ಹೋಗುವಾಗ ಗುಳ್ಳೆ ಬಂದು ಒಡೆಯುವಂತೆ
> ಗುಳ್ಳೆ ಪೊರೆಯಂತೆ ಕಾಣೊ ಸಂಸಾರದಾಟವು॥

ಎನ್ನುವಲ್ಲಿ ಚಿತ್ತವತ್ತಾದ ಉಪಮೆಗಳ ಮೂಲಕ ಅರ್ಥಬಾಹುಳ್ಯವನ್ನು ತೆರೆಯುತ್ತಾರೆ. ಕನಕದಾಸರ ಸುಪ್ರಸಿದ್ಧವಾದ ಕೀರ್ತನೆ "ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೇ" ಎಂಬ ಹೃದಯಂಗಮ ಬೇಡಿಕೆ ಉಳ್ಳದ್ದು. "ದಾಸನಾಗು!ವಿಶೇಷನಾಗು!ಭವಪಾಶನೀಗು" ಎನ್ನುವುದೇ ಕನಕದಾಸರು ಮನುಕುಲಕ್ಕೆ ನೀಡಿರುವ ಸಂದೇಶವಾಗಿದೆ.

ಕನಕದಾಸರ ಮುಂಡಿಗೆಗಳು

ಭಕ್ತಿ, ನೀತಿತತ್ತ್ವ, ದೈವಸ್ತುತಿ, ಆಧ್ಯಾತ್ಮ ಚಿಂತನಪರ ಕೃತಿಗಳಲ್ಲದೆ ಮುಂಡಿಗೆಗಳನ್ನು ರಚಿಸಿರುವ ಮೂಲಕವೂ ಕನಕದಾಸರು ತಮ್ಮ ವಿಶಿಷ್ಟ ಪ್ರತಿಭೆಯನ್ನು ಪ್ರಕಟಿಸಿದ್ದಾರೆ. ಈ ಮುಂಡಿಗೆಗಳನ್ನು ಮೇಲ್ನೋಟದ ಓದಿಗೆ ಖಂಡಿತವಾಗಿಯೂ ಬಿಡಿಸಲು ಸಾಧ್ಯವಿಲ್ಲ. ಬಹುಶಃ ಕನಕದಾಸರು ಈ ಪರಿಯ ನಿಗೂಢ ಜ್ಞಾನಿಯೆಂದೋ ಏನೋ, "ಕನಕನನ್ನು ಕೆಣಕಬೇಡ, ಕೆಣಕಿ ತಿಣುಕಬೇಡ" ಎಂಬ ಹೇಳಿಕೆ ಹುಟ್ಟಿ ಪ್ರಚಲಿತವಾಗಿದೆಯೆಂದು ಕಾಣುತ್ತದೆ.

ಕೀರ್ತನೆಗಳ ಮಾದರಿಯಲ್ಲೇ ಇದ್ದು ಈ ಮುಂಡಿಗೆಗಳು ಕಡೆಯ ಭಾಗದಲ್ಲಿ "ಕನಕನು ಹೇಳಿದ ಬೆಡಗು ಕಂಡವರು ನೀವು ತಿಳಿದು ನಿಮ್ಮ ಮನದಲ್ಲಿ ನೋಡಿ" "ಬೆಡಗ ಬಲ್ಲವರು ಪೇಳಿ" "ಎನ್ನೊಡೆಯ ಆದಿ ಕೇಶವ ಬಲ್ಲನೀ ಬೆಡಗ" "ಕನಕ ಹಾಕಿದ ನುಡಿಕೆಯ ಆದಿಕೇಶವನಾಣೆ ಬಲ್ಲವರು ಪೇಳಿ" ಎಂದಲ್ಲ ಸವಾಲು ಎಸೆಯುತ್ತವೆ. ಆಧ್ಯಾತ್ಮದ ಜ್ಞಾನ ಹುದುಗಿಸಿಕೊಂಡು, ಬುದ್ಧಿಮತ್ತೆಯನ್ನು ಪ್ರಚೋದಿಸಿ ಅರ್ಥ ಬಿಡಿಸಲು ಒಗಟಿನ ಹಾಗಿರುವ ಈ ಮುಂಡಿಗೆಗಳು ಪ್ರಶ್ನೆಗಳನ್ನು ಕೇಳುತ್ತಿರುವಂತೆ ರಚಿತವಾಗಿವೆ. ಕನಕದಾಸರ ಈ ಬಗೆಯ ಮುಂಡಿಗೆಗಳಲ್ಲಿ ಕೆಲವೊಂದನ್ನು ಮಾತ್ರ ಇಲ್ಲಿ ಸಂಕ್ಷಿಪ್ತವಾಗಿ ನೋಡಲಾಗಿದೆ:

"ಪರಮಪುರುಷ ನೀ ನೆಲ್ಲಿಕಾಯಿ। ಸರಸಿಯೊಳಗೆ ಕರಿ ಕೂಗಿರೆಕಾಯಿ॥" ಎಂಬ ಮುಂಡಿಗೆಯಲ್ಲಿ ಬಗೆಬಗೆಯಾದ ಕಾಯಿಗಳ ಹೆಸರುಗಳು ಬರುತ್ತವೆ. ತರಕಾರಿಗಳ ಹೆಸರುಗಳು. ಆದರೆ ಇವೆಲ್ಲದರೊಳಗಿನ ಅರ್ಥ ಬೇರೆ ಎಂಬುದು ನಿಚ್ಚಳ. "ಹಿರಿದು ಮಾಡಿದ ಪಾಪ ನುಗ್ಗೆಕಾಯಿ। ಹರಿ ನಿನ್ನ ಧ್ಯಾನ ಬಾಳೆಕಾಯಿ" ಎಂದು ಬರುವಲ್ಲಿ ನಾನು ಹಿರಿದಾಗಿ ಮಾಡಿದ ಪಾಪಗಳು ನುಗ್ಗಿ ಬರುತ್ತಿರಲು ನೀನು ಕಾಯಬೇಕು, ಹರಿ ನಿನ್ನ ಧ್ಯಾನ ಮಾಡುವೆ, ನನ್ನ ಬಾಳನ್ನು ಕಾಯಬೇಕು ಎಂಬೆಲ್ಲ ಅರ್ಥಗಳು ಹೊರಡುತ್ತವೆ.

"ರಮಣಿ ತೋರಲೆ ಮೋಹನ ಶುಭ ಕಾಯನ" ಎಂದು ಆರಂಭವಾಗುವ ಕೀರ್ತನೆಯೊಂದರ ನುಡಿಗಳಲ್ಲಿ ಒಂದು ಹೀಗೆ ರಚಿತವಾಗಿದೆ.

ಬಾಯೊಳಗಿಹಳ ಗಂಡನ ನಿಜತಮ್ಮನ
ತಾಯ ಪಿತನ ಮಡದಿಯ ಧರಿಸಿದನ
ಸ್ತ್ರೀಯಳಸುತನ ಕೈಯಲಿ ಶಾಪ ಪಡೆದನ
ದಾಯಾದ್ಯನ ಮಗನ ಸಾಯಕವದು ತೀವ್ರದಿ ಬರುತಿರೆ ಕಂಡು
ಮಾಯಾಪತಿ ಭೂಮಿಯನೊತ್ತಿ ತನ್ನಯ
ಬೀಯಗನ ತಲೆಗಾಯುವಂಥ ರಾಯನ ಕರೆದು ತೋರೆ॥

ಈ ಸಾಲುಗಳ ಗೂಢಾರ್ಥ ಒಡೆದಾಗ ಅಂತಿಮವಾಗಿ ಬರುವ ಪದ 'ಕೃಷ್ಣ' ಎನ್ನುವುದೇ ಬಿಡಿಸಿದಾಗ ಬರುವ ಅರ್ಥ: ಸರಸ್ವತಿಯ ಗಂಡ ಬ್ರಹ್ಮನ ತಮ್ಮನಾದ ಕಾಮನ ತಾಯಿಯಾದ ಲಕ್ಷ್ಮಿಯ ತಂದೆಯಾದ ಸಮುದ್ರನ ಮಡದಿಯಾದ ಗಂಗೆಯನ್ನು ಧರಿಸಿದ ಶಿವನ ಹೆಂಡತಿಯಾದ ಪಾರ್ವತಿಯ ಮಗನಾದ ಗಣಪತಿಯಿಂದ ಶಾಪವನ್ನು ಪಡೆದ ಚಂದ್ರನ ದಾಯಾದಿಯಾದ ಸೂರ್ಯನ ಮಗನಾದ ಕರ್ಣನ ಬಾಣವು ವೇಗವಾಗಿ ಅಟ್ಟಿಕೊಂಡು ಬರಲು ಕಂಡ ಮಾಯಾಪತಿಯಾದ ಕೃಷ್ಣನು ಭೂಮಿಯನ್ನು ಅಮುಕಿ ತನ್ನ ಭಾವನಾದ ಅರ್ಜುನನ ತಲೆಗಾಯ್ದಂಥ ಕೃಷ್ಣನನ್ನು ಕರೆದು ತೋರಿಸು ಎನ್ನುವುದೇ ಈ ನುಡಿಯಲ್ಲಿರುವುದು. ಇಂಥ ಇನ್ನೂ ಅನೇಕ ನುಡಿಗಳಿರುವ ಕೀರ್ತನೆಗಳನ್ನು, ಮುಂಡಿಗೆಯ ಮಾಯಾಸೃಷ್ಟಿಯನ್ನು ಕನಕದಾಸರು ನೀಡಿದ್ದಾರೆ. "ಮಂಗಳಾರತಿ ಪಾಡಿರೇ ಮಾನಿನಿಯರು" ಎಂದು ಆರಂಭವಾಗುವ ಆರತಿಹಾಡಿನಲ್ಲಿ ಬರುವ ನುಡಿಗಳಲ್ಲಿ ಒಂದು:

ಅಂಧಕನನುಜನ ಕಂದನ ತಂದೆಯ
ಕೊಂದನ ಶಿರದಲಿ ನಿಂದವನ
ಚಂದದಿ ವಡೆದನ ನಂದನೆಯಳ ನಲ
ವಿಂದ ಧರಿಸಿದ ಮುಕುಂದನಿಗೆ

ಕನಕದಾಸರ ಅನುಭಾವತೆಯನ್ನು ತುಂಬಿಕೊಂಡ ಮತ್ತೊಂದು ಹಾಡು "ಹಲವು ಜೀವನವ ಒಂದೆಲೆ ನುಂಗಿತು। ನೆಲೆ ಆದಿಕೇಶವರಾಯ ಬಲ್ಲ ನೀ ಬೆಡಗ" ಎಂದು ಆರಂಭವಾಗಿ ಮಾಯೆಯು ಆವರಿಸಿಕೊಳ್ಳುವಿಕೆಯನ್ನು ಚಿತ್ರಿಸುತ್ತ ಹೋಗುತ್ತದೆ. ಯೌಗಿಕವಾದ ಪರಿಭಾಷೆಗಳನ್ನು ಬಳಸಿ ಮನಸ್ಸು, ಆತ್ಮಗಳನ್ನು ಕುರಿತಂತೆ ವಿಚಾರ ಮಾಡಿರುವ ಕೃತಿ "ಕೆಂಪು ಮೂಗಿನ ಪಕ್ಷಿ ತಂಪಿನೊಳಿರುವುದು" ಎಂದು ಆರಂಭವಾಗಿ ಮನಸ್ಸಿನ ಚಂಚಲ ಪ್ರವೃತ್ತಿಯನ್ನು ರೂಪಕಗಳಲ್ಲಿ ತೆರೆದಿಡುತ್ತ ಹೋಗುತ್ತದೆ. ನಿಗೂಢ ಅರ್ಥಗಳ ಮತ್ತೊಂದು ರಚನೆ "ಎಂದೆಂದು ಇಂಥ ಚೋದ್ಯ ಕಂಡಿಲ್ಲವೋ" ಈ ಕೃತಿ ಹೇಳುತ್ತದೆ:

ಅಂಗಡಿ ಬೀದಿಯೊಳೊಂದು ಆಕಳ ಕರು ನುಂಗಿತು
ಲಂಘಿಸುವ ಹುಲಿಯ ಕಂಡು ನರಿಯು ನುಂಗಿತು॥
ಹುತ್ತದೊಳಾಡುವ ಸರ್ಪ ಮತ್ತ ಗಜವ ನುಂಗಿತು
ಉತ್ತರ ದಿಶೆಯೊಳು ಬೆಳದಿಂಗಳಾಯಿತಮ್ಮ॥

ಆಕಳು ಎಂದರೆ ಇಲ್ಲಿ ಜೀವಕ್ಕೆ ಸಂಕೇತ, ಕರು ಉದರದಲ್ಲಿನ ಅನ್ನ ತೃಪ್ತಿ. ಸರ್ಪವೇ ಇಲ್ಲಿ ಕುಂಡಲಿನಿ, ಆನೆಯು ಮದ ಅಥವಾ ಅಹಂಕಾರ, ಬೆಳದಿಂಗಳು ಜ್ಞಾನೋದಯಕ್ಕೆ ಸಂಕೇತ. ಹೀಗೆ ಭಾವಾರ್ಥಗಳನ್ನು ಒಳಗಿರಿಸಿಕೊಂಡು ರೂಪಕಗಳ ತೊಟ್ಟಿಲು ತೂಗುತ್ತ ಮುಂಡಿಗೆಗಳು ಕನಕದಾಸರ ವಿಶಿಷ್ಟ ಪ್ರತಿಭೆಗೆ ಕನ್ನಡಿ ಹಿಡಿಯುತ್ತವೆ.

ದಾಸಕೂಟದ ಪ್ರಮುಖ ವ್ಯಾಖ್ಯಾನಕಾರರಾಗಿ, ಪೂಜೆ, ಭಕ್ತಿ, ನೀತಿಗಳು, ಮುಕ್ತಿಯ ಸಾಧನೆಗಳನ್ನು ತಿಳಿಸುವ ಕನ್ನಡ ಹರಿದಾಸ ಕೀರ್ತನೆಗಳನ್ನು ರಚಿಸಿ 'ಮುಂಡಿಗೆ'ಯ ಪ್ರಕಾರವನ್ನೂ ಸಂಗೀತದಲ್ಲಿ ಹಾಡುವಂತೆ ರಚಿಸಿ, ಸಂಗೀತ ಸಾಹಿತ್ಯಗಳೆರಡು ಲೋಕಕ್ಕೂ ಹತ್ತಿರದವರಾದವರು ಕನಕದಾಸರು.

ಮೇಲ್ನೋಟಕ್ಕೆ ವಿರೋಧಾಭಾಸವಾಗಿದೆ ಎನಿಸುವ ಮುಂಡಿಗೆಗಳನ್ನೂ ಕನಕದಾಸರು ರಚಿಸಿದ್ದಾರೆ. ಉದಾಹರಣೆಗೆ ಲಕ್ಷ್ಮಿಯನ್ನು ಯಾಕಾಗಿ ಗೋವಳನಿಗೆ ಮನತೆತ್ತೆ? ಎಂದು ಕೇಳುವ ಶ್ರೀಹರಿಯ ನಿಂದಾಸ್ತುತಿಯೆನಿಸುವ ಮುಂಡಿಗೆ.

ಮಗಗೆ ಮೈದುನನಾದ ಮಗಳಿಗೆ ಪತಿಯಾದ
ಮಗಳಿಗಳಿಯನಾದ ಅಳಿಯಗಳಿಯನಾದ॥
ಮಗಳ ಮಗಗೆ ಮೈದುನನಾಗಿ ಮಾವನ
ಜಗವರಿಯಲು ಕೊಂದ ಕುಲಗೇಡಿ ಗೋವಳ॥
ಅತ್ತೆಗೆ ವಲ್ಲಭನಾದ ಭೃತ್ಯರಿಗಾಳಾದ
ಚಿತ್ತ ಒಲಿದು ಚೆನ್ನ ಆದಿ ಕೇಶವನೊಳು ॥ಏನೆ ಮನವಿತ್ತೆ ಲಲಿತಾಂಗಿ॥

ಶ್ರೀಹರಿಯ ಲೀಲೆಗಳನ್ನು ಆಕರ್ಷಕವಾಗಿ ಹುದುಗಿಸಿಕೊಂಡಿರುವ ಮುಂಡಿಗೆ ಇದು. ಬಿಡಿಸುತ್ತ ಹೋದಂತೆ ಈ ಸಂಬಂಧಗಳ ಒಗಟು ತಿಳಿಯಾದ ಅರ್ಥಗಳನ್ನು ನೀಡುತ್ತದೆ. ಕನಕದಾಸರ ಜಾಣ್ಮೆಗೆ ಪ್ರತಿಭೆಗೆ, ಪುರಾಣಗಳ ಪರಿಚಯಕ್ಕೆ ಇಂಥ ಮುಂಡಿಗೆಗಳು ಸಾಕ್ಷಿ ಹೇಳುತ್ತವೆ.

ಕನಕದಾಸರು ಉಗಾಭೋಗ, ಸುಳಾದಿಗಳನ್ನು ರಚಿಸಿಲ್ಲವೆಂದೇ ಈವರೆಗೆ ನಂಬಲಾಗಿತ್ತು. ಆದರೆ ಪ್ರೊ॥ ಸುಧಾಕರರು ಕನಕದಾಸರ ಮುದ್ರಿಕೆಯುಳ್ಳ ಐದು ಉಗಾಭೋಗಗಳನ್ನು ಸಂಶೋಧಿಸಿ ಕೊಟ್ಟಿದ್ದಾರೆ. ಕನಕದಾಸರ ಕವಿತ್ವಗುಣದ ಹೃದಯಂಗಮ ಶೈಲಿಗಾಗಿ, ಶ್ರೀಹರಿಯಲ್ಲಿನ ಮನದುಂಬುವ ಮೊರೆಯ ಮೊರೆತವನ್ನು ಅಲಿಸುವುದಕ್ಕಾಗಿ ಅವರ ಇದೊಂದೇ ಈ ಕೆಳಗಿನ ಕೃತಿಯನ್ನು ಪರಿಭಾವಿಸಿದರೂ ಸಾಕು, ಮನಸ್ಸು ತುಂಬಿ ಬರುತ್ತದೆ.

"ಈಶ ನಿನ್ನ ಚರಣ ಭಜನೆ ಆಶೆಯಿಂದ ಮಾಡುವೆನು
ದೋಷ ರಾಶಿ ನಾಶ ಮಾಡು ಶ್ರೀಶ ಕೇಶವ"

ಎಂದು ಪ್ರಾರಂಭವಾಗುವ ಈ ಕೃತಿಯು ಕೇಶವಾದಿ ಇಪ್ಪತ್ನಾಲ್ಕು ಭಗವಂತನ ನಾಮಗಳನ್ನು ಕರೆದು ಮೊರೆಯನ್ನು ಸಲ್ಲಿಸುತ್ತದೆ. ಭಕ್ತಿಶೀಲ ಮನಸ್ಸಿಗಿದು ಅತ್ಯಂತ ಅಪ್ಯಾಯಮಾನವಾಗುವ ಕೃತಿ. ಕನ್ನಡ ಭಾಷೆಯ ಪ್ರಾಸಾದಿ ಕಾವ್ಯ ಸೌಂದರ್ಯಕ್ಕೊಂದು ಉದಾಹರಣೆ. ಕನ್ನಡದ ಅಕ್ಷರಗಳಿಲ್ಲಿ ಪ್ರಾಸದ ಹಳಿಗಳಲ್ಲಿ ಸಾಗಿ ಹೋಗುವ ಪರಿ ಅನನ್ಯವಾಗಿದೆ. ಇಪ್ಪತ್ತೈದು ನುಡಿಗಳಲ್ಲಿ ನಮ್ರತೆಯ ಮನಸ್ಸು ಹರಿಗೆ ಶರಣಾಗಿ ನಿವೇದಿತವಾಗಿರುವ ರೀತಿ ಅದ್ಭುತವಾಗಿದೆ.

ಕನಕದಾಸರನ್ನು ಬಿಟ್ಟು ದಾಸಕೂಟವನ್ನು ನೆನೆಯಲಾಗದು. ಅವರು ದಾಸಕೂಟಕ್ಕೆ ಪ್ರಮುಖರು. ಕನ್ನಡದ ಕವಿಗಳಲ್ಲಿ ಆಪ್ತರಾಗುವವರಲ್ಲಿ ಒಬ್ಬರು. ಹರಿದಾಸರಲ್ಲಿ ವಿಶೇಷರು ಮತ್ತು ವಿಶಿಷ್ಟರು.

ಪುರಂದರ/ಕನಕದಾಸರ ಸಮಕಾಲೀನರು

ಬೇಲೂರಿನ ವೈಕುಂಠದಾಸರು, ವೇಂಕಟಗಿರಿನಾಥರು, ಚೆನ್ನಯ್ಯದಾಸರು, ತಿರುಮಲೇಶ, ವೈಕುಂಠ ವೆಂಕಟೇಶ, ರಘುನಾಥ ಯತಿಗಳು, ವರದರಾಜ ಕೃಷ್ಣ, ಕೊಂಡಲದಾಸರು, ಲಕ್ಕಸದ ತಿಮ್ಮಮ್ಮ, ಅಚ್ಯುತದಾಸರಂಬುವವರು ಇವರೆಲ್ಲ ಪುರಂದರ/ಕನಕದಾಸರ ಸಮಕಾಲೀನರಾಗಿದ್ದು ದಾಸಪಂಥಕ್ಕೇ ಸೇರಿದವರಾಗಿದ್ದು ಅನೇಕ ಸುಳಾದಿ, ಕೀರ್ತನೆಗಳನ್ನು ರಚಿಸಿದ್ದಾರೆ. ಆದರೆ ಇವರುಗಳ ವಾಸ್ತವ್ಯವು ಹಂಪೆಯಲ್ಲಾಗಿರದೆ ಬೇರೆ ಬೇರೆ ಕಡೆ ನೆಲೆಸಿದ್ದವರೆನ್ನಲಾಗಿದೆ.

ಪಂಢರಪುರ ಮೂಲದ ಪರಶುಭಾಗವತರು ಹಾಗೂ ಅಪ್ಪಣ್ಣ ಭಾಗವತರು ಎಂಬ ಇಬ್ಬರು ಪುರಂದರದಾಸರ ಶಿಷ್ಯರಾಗಿದ್ದು ಇವರಲ್ಲಿ ಅಪ್ಪಣ್ಣ ಭಾಗವತರು "ಗುರು ಪುರಂದರ" ಎಂಬ ಅಂಕಿತದಿಂದ ಮುವ್ವತ್ತೆರಡು ಕೀರ್ತನೆಗಳನ್ನೂ, ಹದಿನೇಳು ಸುಳಾದಿಗಳನ್ನೂ, ಹನ್ನೆರಡು ಉಗಾಭೋಗಗಳನ್ನು ರಚಿಸಿದ್ದಾರೆಂದೂ ತಿಳಿದು ಬರುತ್ತದೆ. ಇವರಿಬ್ಬರೂ ಪುರಂದರದಾಸರ ಮಕ್ಕಳೇ ಎಂದೂ, ಇವರಿಬ್ಬರೂ ತಂದೆಯ ಕಾಲದಲ್ಲೇ ತೀರಿಕೊಂಡರು ಎಂದೂ ಇನ್ನೊಂದು ವಾದವಿದೆ. ಇವರಲ್ಲಿ ಹಿರಿಯಮಗ ತೀರಿಕೊಂಡಾಗಲೇ 'ಗಿಳಿಯು ಪಂಜರದೊಳಿಲ್ಲ' ಎಂಬ ಕೃತಿಯನ್ನು ಪುರಂದರದಾಸರು ರಚಿಸಿದರೆಂದು ಈ ವಾದವು ಹೇಳುತ್ತದೆ.

ಇವರಲ್ಲಿ ಬೇಲೂರು ವೈಕುಂಠದಾಸರು ಬಹಳ ಪ್ರಸಿದ್ಧರಾಗಿದ್ದು ಇವರಿಂದಾಗಿ ಬೇಲೂರಿನ ಖ್ಯಾತಿ ವಿಜಯನಗರದವರೆಗೂ ವಿಸ್ತರಿಸಿತು. ಶ್ರೀವೈಷ್ಣವ ಪಂಥದವರಾಗಿದ್ದು ಬೇಲೂರಿನ ಚನ್ನಕೇಶವನನ್ನು ಆರಾಧಿಸಿಕೊಂಡಿದ್ದವರೆಂದು ತಿಳಿದುಬರುತ್ತದೆ. ಪುರಂದರದಾಸರು, ಕನಕದಾಸರು, ವಾದಿರಾಜರು ಇವರ ಸಂಸರ್ಗದಲ್ಲಿ ಕೆಲಕಾಲವಿದ್ದು ಇವರ ಮಹಿಮೆಗಳನ್ನು ಕುರಿತು ಕೃತಿಗಳನ್ನು ರಚಿಸಿದ್ದಾರೆ.[*೨೩] ಅಚ್ಚುತ ವಿಠಲಾಂಕಿತರಾದ ಅಚ್ಯುತದಾಸರೂ ಇವರ ಬಗ್ಗೆ ಕೃತಿ ರಚಿಸಿದ್ದಾರೆ.[*೨೪]

ಕನ್ನಡ ಭಾರತವನ್ನು ರಚಿಸಿದ ಪ್ರಸಿದ್ಧ ಕವಿ ಕುಮಾರವ್ಯಾಸ (ಗದುಗಿನ ನಾರಣಪ್ಪ) ಕೂಡ ಪುರಂದರದಾಸರ ಸಮಕಾಲೀನನೇ ಆಗಿದ್ದು ತಾನು ಬರೆದ ಮಹಾಭಾರತ ಕೃತಿಯನ್ನು ಪುರಂದರದಾಸರ ಬಳಿ ತಂದು ತೋರಿಸಿ ವಿಮರ್ಶೆ, ಸಲಹೆ ಕೇಳಿದನೆಂದು ಪಂಡಿತರು ಹೇಳುತ್ತಾರೆ. ಈ ಭೇಟಿ ಮತ್ತು ಗದುಗಿನ ಭಾರತ ಕೃತಿಯ ಬಗ್ಗೆ ಪುರಂದರದಾಸರು ಸುಳಾದಿಯೊಂದನ್ನು ರಚಿಸಿದ್ದು ಆ ಸುಳಾದಿಯ ಪದ್ಯಗಳಲ್ಲಿ ಹೀಗೆ ಬರುತ್ತದೆ:

> ಭಾರತ ಆಗಮಗೋಚರವೆಂದು ಅರಿತು
> ವಿಚಾರಿಸೆ ಮನುಜರಿಗೆ ಗೋಚರವಪ್ಪಂತೆ
> ವೀರನಾರಾಯಣ ನೀ ಕವಿಯೆನಿಸಿಕೊಂಡೆ।

ಕುಮಾರವ್ಯಾಸಗೊಲಿದು ಕನ್ನಡಿಸಿದೆ ಭಾರತವ

ವೀರನಾರಾಯಣ ನೀ ಕವಿಯೆನಿಸಿಕೊಂಡೆ

ಸಿರಿಪುರಂದರ ವಿಠಲ ಗದುಗಿನ ನಾರಾಯಣ ನಿನಗೇನು ಪಿರಿಯವ್ರೋ?

ಭಾರತಮಲ್ಲ ಭೀಮನೆಂಬರು।ಭಾರತಮಲ್ಲ ಅರ್ಜುನನೆಂಬರು

ಭಾರತಮಲ್ಲ ಕರ್ಣನೆಂತೆಂಬರು। ಭಾರತಮಲ್ಲರಿವರಾರೂ ಅಲ್ಲ

ಭಾರತಮಲ್ಲ ಪುರಂದರವಿಠಲ, ಗದುಗಿನ ವೀರ ನಾರಾಯಣನೆ ಭಾರತಮಲ್ಲ॥

ಮೇಲಿನ ಸುಳಾದಿಯ ಪ್ರಾರಂಭವು "ಹರಿಶರಣರೆನ್ನ ಮನೆಯ ಮೆಟ್ಟಲು ಮನೆ ಪಾವನ್ನವಾಯಿತು" ಎಂಬ ಸಾಲಿನಿಂದ. ಇದು ಕುಮಾರವ್ಯಾಸ ಕವಿ ತನ್ನ ಮನೆಗೆ ಬಂದು ಮಾತಾಡಿದ ಸಂದರ್ಭ ನೆನೆದು ಪುರಂದರದಾಸರು ರಚಿಸಿದ ಸಾಲುಗಳು ಎನ್ನುವ ಅಭಿಪ್ರಾಯವಿದೆ. "ಹರಿ ಶರಣರೆನ್ನ ಕೂಡಿ ಮಾತಾಡೆ ತನುಮನ ಪಾವನವಾಯಿತು।....ಹರಿಶರಣರೆ ಗತಿ ಎನಗೆಂದರೆ ಪುರಂದರ ವಿಠಲ ಗದುಗಿನ ವೀರನಾರಾಯಣನೊಲಿವ" ಎಂಬೆಲ್ಲ ಸಾಲುಗಳು ಈ ಭೇಟಿಯನ್ನು ಕುರಿತಾದ ಸ್ಮರಣೆಯನ್ನು ಒದಗಿಸುತ್ತವೆ.

ಪುರಂದರ, ಕನಕರಿಗೆ ದೂರದೂರದಲ್ಲಿದ್ದ ಸಮಕಾಲೀನರೆಂದರೆ ಬಂಗಾಳದ ಶ್ರೀಕೃಷ್ಣ ಚೈತನ್ಯರು. ಇವರು ವ್ಯಾಸತೀರ್ಥರ ವಿಶ್ವವಿದ್ಯಾಲಯಕ್ಕೆ ಬಂದು ಭೇಟಿಯಿತ್ತು ಕೆಲಕಾಲ ಅಲ್ಲಿ ತಂಗಿದ್ದು ತೆರಳಿದರು ಮತ್ತು ವಾದಿರಾಜರು ಉಡುಪಿಯಲ್ಲಿದ್ದಾಗ ಅಲ್ಲಿಯೂ ಹೋಗಿ ಕೆಲಕಾಲ ತಂಗಿದ್ದು ಮಧ್ವಮತದ ತತ್ತ್ವಗಳನ್ನು ಅಭ್ಯಸಿಸಿ ಬಂಗಾಳಕ್ಕೆ ತೆರಳಿದರೆನ್ನಲಾಗಿದೆ. ಉತ್ತರ ಭಾರತದಲ್ಲಿ ಇದೇಕಾಲದಲ್ಲಿ ಅನೇಕ ಸಂತರು ವಿಷ್ಣುಭಕ್ತಿಯನ್ನು ಅಳವಡಿಸಿಕೊಂಡು ಬಾಳಿದರು. ಕಬೀರದಾಸ, ಮೀರಾಬಾಯಿ, ಗುರುನಾನಕ್, ಭಾನುದಾಸ, ತುಳಸೀದಾಸ, ರಾಮಾನಂದ, ಏಕನಾಥ, ದಿಗಂಬರದಾಸ, ಸೂರದಾಸ ಇವರೆಲ್ಲರೂ ಕನ್ನಡನಾಡಿನ ದಾಸಕೂಟದ ಪ್ರಮುಖ ಸಂತರಿಗೆ ಸಮಕಾಲೀನರಾಗಿದ್ದ ಉತ್ತರ ಭಾರತದವರು.

ಭಾರತದಾದ್ಯಂತ ಭಕ್ತಿಯ ಝರಿಯೊಂದು ಹೀಗೆ ಹರಿಯುತ್ತಿದ್ದ ಕಾಲದಲ್ಲಿ ಕನ್ನಡದ ಮಣ್ಣಿನಲ್ಲಿ ಮೂಡಿ ಹರಿಭಕ್ತಿ, ಹರಿದಾಸ್ಯದ ತತ್ತ್ವಗಳನ್ನು ನೀಡಿ ಮನುಕುಲದ ಆಧ್ಯಾತ್ಮ ಜಾಗೃತಿಗಾಗಿ, ಸಾಮಾಜಿಕ ಒಳಿತಿಗಾಗಿ ಶ್ರಮಿಸಿದವರು ವ್ಯಾಸಕೂಟ ಮತ್ತು ದಾಸಕೂಟದ ವ್ಯಾಖ್ಯಾನಕಾರರಾದ ಮಠಾಧೀಶರು ಮತ್ತು ಹರಿದಾಸರುಗಳು.

* * *

ಅಡಿ ಟಿಪ್ಪಣಿಗಳು :

೧. ಪುರಂದರದಾಸರ "ಯಾರಿಗೆ ಯಾರು? ಎರವಿನ ಸಂಸಾರ...." ಕೀರ್ತನೆಯೊಂದಿಗೆ ಹೋಲಿಸಿ ನೋಡಬಹುದು. ಹಾಗೂ ಇವರದೇ "ಗಿಳಿಯು ಪಂಜರದೊಳಿಲ್ಲ" ಕೀರ್ತನೆಯಲ್ಲೂ ಇದೇ ಆರ್ತತೆ, ನಿರಾಸೆ ಹೊಮ್ಮಿದೆ.

೨. "ದಾಸ ಸಾಹಿತ್ಯ ಮತ್ತು ಸಂಸ್ಕೃತಿ" – ಸಾ.ಕೃ.ರಾಮಚಂದ್ರರಾವ್ ಪುಟ–೭೧

೩. "ದಾಸ ಸಾಹಿತ್ಯ ಮತ್ತು ಸಂಸ್ಕೃತಿ" – ಸಾ.ಕೃ.ರಾಮಚಂದ್ರರಾವ್ –ಪುಟ–೭೧

೪. ಶ್ರೀವಾದಿರಾಜ ಸಂಪುಟ – ಡಾ॥ ಅರಳುಮಲ್ಲಿಗೆ ಪಾರ್ಥಸಾರಥಿ

೫. ತತ್ತ್ವವಾದ –೧೯೭೧ರ ಜೂನ್ ಸಂಚಿಕೆ: ಲೇಖಕರು–ವಿದ್ವಾನ್. ಕೆ.ವೆಂಕಟರಾಯಾಚಾರ್ಯ, ಸುರತ್ಕಲ್.

೬. ಕರ್ನಾಟಕದ ಹರಿದಾಸರು – ಡಾ॥ ಹುಲಿ.ಕೃ.ವೇದವ್ಯಾಸಚಾರ್ಯರು –ಪುಟ–೨೮೪.

೭. ಶ್ರೀಪಾದರಾಜರ "ಮರುದಂಶರ ಮತ ಪಿಡಿಯದೆ..." ಕೃತಿಯಲ್ಲೇ ಈ ಗುಣ, ಒಡನಾಟಗಳು ಬಹಳ ಮುಖ್ಯವೆಂದು ಸೂಚಿತವಾಗಿದೆ.

೮. ಮಾಹಾತ್ಮ್ಯ ಜ್ಞಾನವೂ, ಸುಧೃಡಸ್ನೇಹವೂ ಸೇರಿದರೆ ಅದೇ ಭಕ್ತಿ ಎಂದು ಮಧ್ವಾಚಾರ್ಯರು ತಮ್ಮ ಈ ಶ್ಲೋಕದಲ್ಲಿ ಸೂಚಿಸಿದ್ದಾರೆ. "ಮಾಹಾತ್ಮ್ಯ ಜ್ಞಾನಪೂರ್ವಸ್ತು ಸುಧೃಡಃ ಸರ್ವತೋಧಿಕಃ ಸ್ನೇಹೋ ಭಕ್ತಿರಿ ಪ್ರೋಕ್ತಃ ತಯಾ ಮುರ್ಕ್ತಿ ಚಾನ್ಯಥಾ॥ ಮಹಾಭಾರತ ತಾತ್ಪರ್ಯನಿರ್ಣಯ.

೯. "ಭಕ್ತಿ ಬೇಕು ವಿರಕ್ತಿ ಬೇಕು ಸರ್ವ ಶಕ್ತಿ ಬೇಕು ಮುಕ್ತಿಯ ಬಯಸುವವರಿಗೆ....."

–ಶ್ರೀಪಾದರಾಜರು.

"ನಾಲಗೆಯ ಮೇಲೆ ಹರಿನಾಮ, ಎಲ್ಲರ ಮೇಲೆ ದಯ ತೋರುವನೇಮ
ಪಾಪರಹಿತನಾಗಿರಬೇಕು ಕಾಮಕ್ರೋದಗಳ ತ್ಯಜಿಸಬೇಕು
ಮಧ್ವರಾಯರ ಸದಾ ಸ್ಮರಿಸುತ್ತ ದೊರೆತದ್ದರೊಳು ತೃಪ್ತಿ ಬೇಕು.."

– ಶ್ರೀವ್ಯಾಸತೀರ್ಥರ ಸುಳಾದಿ.

"ಗುರು ಭಕುತಿ ಬೇಕು ಹಿರಿಯರ ಕರುಣ ಬೇಕು
ಹರಿಕಥೆಗಳ ನಿತ್ಯ ಕೇಳುತಿರಬೇಕು
ವಿರಕುತಿ ಬೇಕು ವಿಷ್ಣುವಿನಾರಾಧನೆ ಬೇಕು
ವರಮಂತ್ರ ಜಪಬೇಕು ತಪಬೇಕು ಪರಗತಿಗೆ
ಸಿರಿಹಯವದನನ ಪರಮಾನುಗ್ರಹ ಬೇಕು" – ಶ್ರೀ ವಾದಿರಾಜರ ಸುಳಾದಿ.

"ವಿಷಯದ ವಿಚಾರ ಬಿಡು । ವಿಹಿತ ಕರ್ಮವ ಮಾಡು । ವೈರಾಗ್ಯ ಭಾಗ್ಯ ಬೇಡು"

– ಶ್ರೀ ಪುರಂದರ ದಾಸರು.

೧೦. "ದಾಸಸಾಹಿತ್ಯ ಮತ್ತು ಸಂಸ್ಕೃತಿ" - ಸಾ.ಕೃ. ರಾಮಚಂದ್ರರಾವ್, ಪುಟ-೯೪

೧೧. "ಶ್ರೀ ಪುರಂದರದಾಸರ ಜೀವನ ಚರಿತ್ತೆ" - ಡಾ. ಪಂಚಮುಖಿ, ಪುಟ-೫೧-೫೨.

೧೨. ಸ್ವಾಮಿಕಣ್ಣು ಪಿಳ್ಳೆಯವರ ಗುಣಿತದಂತೆ ಪುರಂದರದಾಸರ ಮರಣದ ದಿನ ೧೫೬೫ರ
ಜನವರಿ ೨ನೆಯ ದಿನ.

೧೩. "ತೆರಳಿದರು ಹರಿಪುರಕಿಂದು" - ಮಧ್ವಪತಿ ದಾಸರ ಕೀರ್ತನೆ.

೧೪. ವ್ಯಾಸರಾಯರ ಚರಣಕಮಲ ದರುಶನವೆನಗೆ
ಏಸು ಜನ್ಮದ ಸುಕೃತದಿ ದೊರಕಿತೋ ಎನ್ನ
ಸಾಸಿರ ಕುಲಕೋಟಿ ಪಾವನ್ನವಾಯಿತು
ಶ್ರೀಶನ್ನ ಭಜಿಸುವುದಕಧಿಕಾರಿ ನಾನಾದೆ
ದೋಷರಹಿತನಾದ ಪುರಂದರ ವಿಠಲನ
ದಾಸರ ಕರುಣವೆನ್ನ ಮೇಲೆ ಇರಲಾಗಿ ॥

೧೫. ಜಿ.ವರದರಾಜರಾವ್ "ಪುರಂದರದಾಸರ ಆಧ್ಯಾತ್ಮಿಕ ದೃಷ್ಟಿ" ಲೇಖನ, "ಪುರಂದರದಾಸ-ಕೀರ್ತನ" ಕೃತಿ
ಪುಟ ೯೯-೧೦೦ ಪ್ರ: ಕ.ಸಾ.ಅ.ಸಂ: ಪ್ರೊ॥ ಮಧುಕರ ಯಕ್ಕುಂಡಿ, ಬೆಂಗಳೂರು.

೧೬. ಈ ಕೀರ್ತನೆ ಏಳುನುಡಿಗಳಲ್ಲಿದೆ. ಈ ಕೀರ್ತನೆಯ ಮೊದಲ ನಾಲ್ಕು ನುಡಿಗಳು ಕನಕದಾಸರ ಅಂಕಿತದಲ್ಲೂ
ದೊರೆತಿವೆ.

೧೭. ದಾಸಸಾಹಿತ್ಯ ಮತ್ತು ಸಂಸ್ಕೃತಿ ಸಾ.ಕೃ. ರಾಮಚಂದ್ರರಾವ್ ಪುಟ-೩೮.

೧೮. "ಪುರಂದರ ದಾಸ-ಕೀರ್ತನ" ಸಂ: ಪ್ರೊ॥.ಮಧುಕರ ಯಕ್ಕುಂಡಿ, ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು. ಪುಟ-೧೭೪

೧೯. "ಪುರಂದರ ದಾಸ-ಕೀರ್ತನ" ಸಂ: ಪ್ರೊ॥.ಮಧುಕರ ಯಕ್ಕುಂಡಿ, ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು. ಪುಟ-೧೭೪

೨೦. ಕನಕದಾಸರ "ಹರಿ ನಿನ್ನ ಪದ ಕಮಲ ಕರುಣದಿಂದಲಿ" ಎಂಬ ಕೀರ್ತನೆಯಿಂದ.

೨೧. ನಮಸ್ತೇ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ
ನಮಃ ಪುರಂದರಾರಾರ್ಯ ವಿಜಯಾ

೨೨. ರಂ. ಶ್ರೀ ಮುಗುಳಿ - ಕನ್ನಡ ಸಾಹಿತ್ಯ ಚರಿತ್ರೆ -ಪುಟ-೨೭೨

೨೩. "ದಾಸೋತ್ತಮ ನೀನೆ ವೈಕುಂಠ ದಾಸೋತ್ತಮ" - ವಾದಿರಾಜರ ಕೃತಿ

"ಬಂಟನಾಗಿ ಬಾಗಿಲ ಕಾಯುವೆ ವೈಕುಂಠ ದಾಸೋತ್ತಮ ದಾಸರ ಮನೆಯ" -ಕನಕದಾಸರ ಕೃತಿ.

"ಅಳುವುದೇತಕೊ ರಂಗ, ಅತ್ತ ರಂಜಿಪ ಗುಮ್ಮ" – ಪುರಂದರದಾಸರ ಕೃತಿ

೨೪. "ನಿನಗಲ್ಲಿ ದಾರಿಗಳವಡುವುದಯ್ಯ ಘನಮಹಿಮೆಗಳು ಬಿರುದುಗಳು ದಾಸರರಸ"

– ಅಚ್ಚುತದಾಸರ ಕೃತಿ.

ಅಧ್ಯಾಯ-೪

ತೌಲನಿಕ ವ್ಯಾಖ್ಯಾನಗಳು

ವ್ಯಾಸಕೂಟ ಮತ್ತು ದಾಸಕೂಟದ ತಾತ್ತ್ವಿಕ ಭಿನ್ನತೆಗಳು ಮತ್ತು ಅದರ ಸ್ವರೂಪ

ವ್ಯಾಸಕೂಟದವರೆನ್ನಿಸಿಕೊಂಡವರೆಲ್ಲ ವಿದ್ವತ್ತಿನ ಗತ್ತು, ಪಾಂಡಿತ್ಯದ ಮಂಡನೆ ಮನ್ನಣೆಗಳಿಗೆ ಅಂಟಿಕೊಂಡವರಾದರು. ಮಧ್ವ ಸಿದ್ಧಾಂತದ ಪ್ರಮೇಯ ಗ್ರಂಥಗಳನ್ನೆಲ್ಲ ಅಧ್ಯಯನ ಮಾಡುತ್ತ, ವ್ಯಾಕರಣ ತರ್ಕಗಳ ಮೂಲಕವೇ ಅವುಗಳನ್ನು ಕರತಲಾಮಕ ಮಾಡಿಕೊಂಡು ಲೀಲಾಜಾಲವಾಗಿ ಪ್ರವಚನದ ಮೂಲಕ ತಮ್ಮ ತಮ್ಮ ಪಾಂಡಿತ್ಯವನ್ನು ಹರಿಯಗೊಡುತ್ತಿದ್ದ ಪಂಡಿತರೆನಿಸಿಕೊಂಡವರಾದರು. ವ್ಯಾಸತೀರ್ಥರ ಪ್ರಮುಖ ಯತಿಶಿಷ್ಯರುಗಳಾದ ವಿಜಯೀಂದ್ರತೀರ್ಥರು, ಶ್ರೀನಿವಾಸತೀರ್ಥರು, ನಾರಾಯಣತೀರ್ಥರು, ಗೋವಿಂದ ಯತಿಗಳು ಮುಂತಾದವರು ಹಾಗೂ ಕೇಶವಾದಿ ಇಪ್ಪತ್ನಾಲ್ಕು ನಾಮಗಳನ್ನು ಧರಿಸಿದ್ದ ಮತ್ತಿನ ಕೆಲವು ಯತಿಶಿಷ್ಯರು ಇಂಥ ಪಾಂಡಿತ್ಯವೊಂದನ್ನೆ ನೆಮ್ಮಿ ನಡೆಯಲಿಲ್ಲವೆಂಬುದು ಸತ್ಯ. ವಿದ್ಯಾಭ್ಯಾಸ ಮುಗಿಸಿ ಮುಂದೆ ಈ ಯತಿ ಶಿಷ್ಯರುಗಳೆಲ್ಲ ನಾಡಿನ ಬೇರೆ ಬೇರೆ ಕಡೆಗಳಲ್ಲಿ ಸನ್ಯಾಸಪೀಠವನ್ನು ಒಪ್ಪಿಕೊಂಡು ಬಾಳಿದರು. ವಿಜಯೀಂದ್ರ ತೀರ್ಥರು, ವಾದಿರಾಜರೇ ಮುಂತಾದವರು ಜನಸಾಮಾನ್ಯರ ಏಳಿಗೆಗಾಗಿಯೂ ಶ್ರಮಿಸಿದರು, ಕನ್ನಡ ಕೃತಿಗಳನ್ನು ರಚಿಸಿದರು. ಹರಿದಾಸರಂತೆ ಹಾಡಿ, ಹಾಡಿಸಿ ಸಂತಸ ಪಡುವಂಥ ಯತಿಗಳಾಗಿ ಮುಂದುವರೆದರು, ತಾವು ಶ್ರುತಿ, ಸ್ಮೃತಿ, ಶಾಸ್ತ್ರಗಳನ್ನು ಆಮೂಲಾಗ್ರವಾಗಿ ಓದಿದ, ತಿಳಿದ ವಿದ್ವಾಂಸರೆಂದು ಇವರೆಲ್ಲ ಬೀಗಲಿಲ್ಲ, ಜನರಿಂದ ದೂರ ಸರಿದು ಮಠಾಧೀಶರೆಂದು ಬಿಂಕ, ಬಿಗುಮಾನಗಳಿಂದ ನಡೆದುಕೊಳ್ಳಲಿಲ್ಲ. ತಮ್ಮ ಗುರು ವ್ಯಾಸತೀರ್ಥರು ಬಾಳಿದ ಪರಿ, ತೋರಿದ ಆದರ್ಶಗಳೇ ಇವರ ಬದುಕನ್ನೂ ರೂಪಿಸಿದ್ದು ನಿಜ.

ಆದರೆ ವ್ಯಾಸತೀರ್ಥರ ಮಠದಲ್ಲಿ ಈ ಕೆಲವು ಜನ ಯತಿಶಿಷ್ಯರುಗಳು ಮಾತ್ರ ಇದ್ದುದಲ್ಲ, ಮಠದ ಆಶ್ರಯದಲ್ಲಿ ಇನ್ನೂ ಅನೇಕಾನೇಕ ಪಂಡಿತ ಶಿಷ್ಯರುಗಳೆನ್ನಿಸಿಕೊಂಡವರು ಇದ್ದರು. ಸಂಸ್ಕೃತ ಭಾಷೆಯಲ್ಲಿಯೇ ಅಧ್ಯಯನ ಮಾಡಿ, ಮಾತಾಡಿ, ಸಂಸ್ಕೃತದ ಜ್ಞಾನವೇ ಹಿರಿದೆಂದು, ಶಾಸ್ತ್ರ ಪ್ರಮೇಯಗಳನ್ನು ಅಧ್ಯಯನ ಮಾಡಿರುವುದೇ ಮಿಗಿಲೆಂದು ಮೇಲರಿಮೆಯಿಂದ ಬೀಗಿ ನಡೆದುಕೊಳ್ಳುವ ಅನೇಕಾನೇಕ ಪಂಡಿತರೆನ್ನಿಸಿಕೊಂಡವರೂ

ಇದ್ದರು. ವ್ಯಾಸಕೂಟದ ಪ್ರಮುಖ ವ್ಯಾಖ್ಯಾನಕಾರರು ಅಧ್ಯಯನದ ಬೆಳಕಿನಲ್ಲಿ ವಿಶಾಲವಾದ ಮನಸ್ಸನ್ನೂ ಬೆಳೆಯಿಸಿಕೊಂಡವರು, ಪರಿಪಕ್ವತೆಯ ವ್ಯಕ್ತಿತ್ವವನ್ನೂ ರೂಪಿಸಿಕೊಂಡವರಾದರು. ಆದರೆ ಉಳಿದಂತೆ ಅಪಾರ ಸಂಖ್ಯೆಯ ಪಂಡಿತಶಿಷ್ಯರು ತಾವು 'ವ್ಯಾಸಕೂಟ'ದವರೆಂಬ ಮೇಲರಿಮೆಯ ಮಡಿವಂತಿಕೆಯನ್ನು ತಾಳಿಕೊಂಡು ಅದೇ ಮಠದಲ್ಲಿ 'ದಾಸಕೂಟ'ದವರನ್ನು ತಿರಸ್ಕಾರದಿಂದ ಕಾಣುತ್ತ ಬಂದರು. ಪುರಂದರದಾಸರ ಕಾಲದಲ್ಲಿಯೇ ಈ ಬಗೆಯ ಕವಲು, ಅಥವಾ ಒಡಕು ಆರಂಭವಾಗಿ ಬಹುಬೇಗನೆ ವ್ಯಾಸಕೂಟ, ದಾಸಕೂಟವೆಂಬ ಪರಿಕಲ್ಪನೆಯ ಸ್ವಯಂ ನಿರ್ಮಿತ ಭೇದಭಾವಗಳು ನೆಲೆಯೂರಿ ನಿಂತವು. ವ್ಯಾಸತೀರ್ಥರು, ಪುರಂದರದಾಸರು ಈ ಬಗೆಯ ಬಿರುಕುಗಳನ್ನು ಬಯಸಿರಲಿಲ್ಲ, ಬೆಳೆಸಲಿಲ್ಲ. ಆದರೆ ವ್ಯಾಸಕೂಟವೆಂದು ಸ್ವಯಂ ಘೋಷಿತ ಪಂಡಿತವರ್ಗದವರು ದಾಸಕೂಟದವರನ್ನು ಆಪ್ತರಾಗಿಸಿಕೊಳ್ಳಲು ಪ್ರಯತ್ನಿಸಲಿಲ್ಲ. ಇದಕ್ಕೆ ಕಾರಣವೇ ಸಂಸ್ಕೃತ ಶಾಸ್ತ್ರ ಪ್ರಮೇಯಗಳನ್ನು ಅಭ್ಯಸಿಸಿರುವ ತಾವು ಮಿಗಿಲಾದ ಮೇಲುವರ್ಗ, ಕನ್ನಡದಲ್ಲಿ ಹರಿಭಕ್ತಿ ಪ್ರಚಾರ ಮಾಡುತ್ತಿರುವ ದಾಸರುಗಳು ಸಂಸ್ಕೃತ ಶಾಸ್ತ್ರಗ್ರಂಥಗಳ ಪರಿಚಯವೇ ಇಲ್ಲದ ಪಾಮರವರ್ಗದವರು ಎಂಬ ಮಹಾ ತಿರಸ್ಕಾರ. ಪುರಂದರದಾಸರ ಮತ್ತು ಕನಕದಾಸರ ಅನೇಕ ಕೃತಿಗಳಲ್ಲಿ ಈ ಪಂಡಿತರು ಅಥವಾ ವ್ಯಾಸಕೂಟದವರು ನಡೆದುಕೊಳ್ಳುತ್ತಿದ್ದ ರೀತಿಯನ್ನು ಖಂಡಿಸಿರುವ ವಿಚಾರಗಳನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಇಷ್ಟಾಗಿ ಪುರಂದರದಾಸರೇ ಆಗಲಿ, ಕನಕದಾಸರೇ ಆಗಲಿ ಮಾಧ್ವ ಸಿದ್ಧಾಂತದ ಪ್ರಮೇಯಗಳನ್ನು ತಿಳಿಯದ ಅಜ್ಞಾನಿಗಳೇನೂ ಆಗಿರಲಿಲ್ಲ. ವ್ಯಾಸತೀರ್ಥರಿಂದಲೂ, ಗ್ರಂಥಾವಲೋಕನದಿಂದಲೂ ಸ್ಥೂಲವಾಗಿ ಆದರೆ ನಿಖರವಾಗಿ ಎಲ್ಲ ಜ್ಞಾನವನ್ನು ಅವರು ಪಡೆದವರೇ. ಆದರೆ ಸಂಸ್ಕೃತ ಪಾಂಡಿತ್ಯಕ್ಕೆ ಜೋತು ಬೀಳದೆ ಕನ್ನಡದ ಪ್ರೀತಿಗೆ ಸೋತವರು ಈ ದಾಸರುಗಳು. ಗುರುಮುಖೇನ ಪಡೆದ ಜ್ಞಾನಕ್ಕೆ ತಮ್ಮದೇ ಲೋಕಾನುಭವವನ್ನೂ ಬೆರೆಯಿಸಿ ಅಚ್ಚಕನ್ನಡದಲ್ಲಿ ಉಪಾಯವಾಗಿ, ಜಾಣ್ಮೆಯಿಂದ, ನಾಣ್ಣುಡಿಗಳಿಂದ ಅಲ್ಲದೆ ಸಂಗೀತದ ಸಾಹಚರ್ಯ ಬೆರೆಸಿ ಜನರಿಗೆ ನೀತಿ, ಧರ್ಮ, ಭಕ್ತಿಯನ್ನು ಬೋಧಿಸಿದವರು. ವ್ಯಾಸತೀರ್ಥರಿಗೆ ವಿದ್ಯಾಪ್ರೌಢಿಮೆಯ ಜೊತೆಗೆ ಅಪಾರವಾದ ಭಗವದ್‌ಭಕ್ತಿ ಇದ್ದಿತ್ತು. ಈ ಇವರ ಭಗವದ್‌ಭಕ್ತಿಯ ಪಾಲನ್ನು ದಾಸಕೂಟದವರು ಹೆಚ್ಚಾಗಿ ಪಡೆದು ಈಂಟಿದರು, ವಿದ್ಯೆಯ ಪ್ರೌಢಿಮೆಯ ಕಡೆಗೆ ವ್ಯಾಸಕೂಟದವರು ವಾಲಿಕೊಂಡರು. ಹೀಗಾಗಿ ಒಂದೇ ಗುರುವಿನ ಈ ಶಿಷ್ಯವರ್ಗದವರುಗಳಲ್ಲಿ ತಾತ್ತ್ವಿಕ ಭಿನ್ನತೆಗಳನ್ನು ಕಾಣಬಹುದಾಗಿದೆ, ಅಭಿಪ್ರಾಯ ಭೇದಗಳನ್ನು ಗುರುತಿಸಬಹುದಾಗಿದೆ.

ವ್ಯಾಸತೀರ್ಥರಿಂದ ರಚಿತವಾದ 'ನ್ಯಾಯಾಮೃತ' 'ಚಂದ್ರಿಕಾ' ಮತ್ತು 'ತರ್ಕತಾಂಡವ' ಈ ಮೂರು ಮೇರು ಕೃತಿಗಳು ಭಾರತದಾದ್ಯಂತ ವಿದ್ವತ್ ಸಮಾಜವನ್ನು ಬಡಿದೆಬ್ಬಿಸಿ ಎಲ್ಲೆಡೆ ವಿಮರ್ಶೆ, ಪ್ರತಿರೋಧಗಳ ಅಲೆಗಳು ವ್ಯಾಪಿಸಿ ವಾದಗ್ರಂಥರಚನಾ ಪಟುಗಳನ್ನು ಖಂಡನಮಂಡನಕ್ಕೆ ಪ್ರಚೋದಿಸಿತು. ಈ ವಾದ ವಿವಾದಗಳು, ನಂತರ ಗೆದ್ದವರಿಗೆ ದೊರೆಯುವ ಸನ್ಮಾನ, ಪ್ರಶಸ್ತಿಗಳು ಇವೆಲ್ಲ ಬುದ್ಧಿ ಜೀವಿಗಳನೇಕರನ್ನು ಆಕರ್ಷಿಸಿ

ವ್ಯಾಸತೀರ್ಥರ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ ಮಾಡಿದ ಪಂಡಿತರನೇಕಾನೇಕ ಮಂದಿ ತಾವೂ ಹೀಗೆ ವಾದವಿವಾದ ಧುರಂಧರರು ಎನಿಸಿಕೊಂಡು ಸನ್ಮಾನ, ಪ್ರಶಸ್ತಿಗಳನ್ನು ಪಡೆದು ಮೆರೆಯಬೇಕೆಂಬ ಹಂಬಲ, ಆಸೆಗಳನ್ನು ಮೈಗೂಡಿಸಿಕೊಂಡು ಅಧ್ಯಯನ ಪಟುಗಳಾದರು. ತಾರ್ಕಿಕ ಪಂಡಿತರುಗಳಾದರು. ಗ್ರಂಥಗಳ ಪಠಣದಿಂದ, ಬುದ್ಧಿಯ ಚುರುಕುತನದಿಂದ, ಮಿದುಳಿನ ಕಸರತ್ತುಗಳಿಂದಾಗಿ ಪಾಂಡಿತ್ಯ, ಪರಿಣಿತಿಗಳು ಅವರ ಕೈವಶವಾದವು. ವೇದಶಾಸ್ತ್ರ, ಸಿದ್ಧಾಂತ ಪ್ರಮೇಯಗಳು ಕರತಲಾಮಕವಾಗಿ ವಾಕ್ಯಾರ್ಥ ನಿರ್ಣಯ ಮಾಡಲು ಸಮರ್ಥರಾಗುತ್ತ ಬಂದಂತೆ ಜೊತೆಜೊತೆಯಾಗಿ ವಿದ್ಯೆಯ ಅಹಂ-ಕೂಡ ಹೆಚ್ಚಾಗುತ್ತ ಬಂದಿತು. ಇವರೆಲ್ಲ ವ್ಯಾಸತೀರ್ಥರ ಗ್ರಂಥಗಳನ್ನು ಎಡೆಬಿಡದೆ ಓದಿ, ಅವನ್ನು ತಮ್ಮ ಶಿಷ್ಯರಿಗೂ ಪಾಠ ಹೇಳುತ್ತ, ತಾವೂ ಅವುಗಳಿಗೆ ಟೀಕೆಟಿಪ್ಪಣಿಗಳನ್ನು ರಚಿಸುತ್ತ ವ್ಯಾಸತೀರ್ಥರಿಂದ ದೊರೆಯುವ ಗೌರವಸನ್ಮಾನಗಳಿಗಾಗಿ ಅವಕಾಶಗಳನ್ನು ಕಲ್ಪಿಸಿಕೊಳ್ಳುತ್ತ ಸನ್ಮಾನ ಪಡೆದು ಬೀಗಿ ನಡೆಯುವ ಪಂಡಿತವರ್ಗದವರು. ಇವರೇ ಅಂದಿನ ವ್ಯಾಸಕೂಟ. ದ್ವೈತ ಮತದ ಪ್ರಚಾರವಾಗಲೆಂದೋ, ಅಥವಾ ಇನ್ನು ಯಾವ ಅನಿವಾರ್ಯತೆಗಾಗಿಯೋ ವ್ಯಾಸತೀರ್ಥರು ಈ ಪಂಡಿತರುಗಳ ಕೆಲವೆಲ್ಲ ಕ್ಷುಲ್ಲಕತನವನ್ನು ಸಹಿಸಿಯೂ ಮಠದಲ್ಲಿ ಇವರಿಗೆ ಆಶ್ರಯವಿತ್ತು ಸಲಹಿಕೊಂಡು ಬಂದರು. ಸ್ವತಃ ಅವರ ಒಲವೆಲ್ಲ ತಾವೇ ಕಟ್ಟಿದ ದಾಸಕೂಟದ ಕಡೆಗೆ. ಆದರೆ ಅಂದಿನ ಸಮಾಜದಲ್ಲಿ ಪಂಡಿತ ವಿದ್ವಾಂಸರನ್ನು ಎದುರುಹಾಕಿಕೊಳ್ಳುವಂತಿಲ್ಲ. ಸ್ವತಃ ಸಾತ್ವಿಕ ಗುರುಗಳಾದ ವ್ಯಾಸತೀರ್ಥರ ಸ್ವಭಾವವೂ ಯಾರೊಂದಿಗೂ ನಿಷ್ಠುರ ಕಟ್ಟಿಕೊಳ್ಳುವಂಥದ್ದಲ್ಲ, ಯಾರನ್ನೂ ದ್ವೇಷಿಸುವುದಾಗಲೀ, ಯಾರನ್ನಾದರೂ ಅಸಹ್ಯಿಸಿಕೊಳ್ಳುವುದಾಗಲೀ, ಯಾರೊಂದಿಗೂ ತಿರಸ್ಕಾರದಿಂದ ನಡೆದುಕೊಳ್ಳುವುದಾಗಲೀ ಅವರ ಸ್ವಭಾವಕ್ಕೆ ಸಲ್ಲ. ಹೀಗಾಗಿ ಅವರು ದಾಸಕೂಟದ ತಮ್ಮ ಆಪ್ತ ಶಿಷ್ಯರಾದ ಪುರಂದರ, ಕನಕದಾಸರ ಮೂಲಕವೇ, ನಾನಾ ಬಗೆಯ ಸಂದರ್ಭಗಳನ್ನು ಸೃಷ್ಟಿಸುತ್ತಾ ಈ ವ್ಯಾಸಕೂಟದ ಪಂಡಿತರನ್ನು ತಿದ್ದಲು ಶ್ರಮಿಸಿದ್ದಿದೆ. ಕನಕದಾಸರ ಆಧ್ಯಾತ್ಮಿಕ ಉನ್ನತಿಯನ್ನು ಬಗೆಬಗೆಯಲ್ಲಿ ಪಂಡಿತರಿಗೆ ತೋರಿಸಿಕೊಡುವ ಮೂಲಕವೇ ಈ ಎಲ್ಲ ವೈದಿಕ ಕರ್ಮಠರನ್ನು ತಿದ್ದಲು, ತಿಳಿಹೇಳಲು ಅವರು ಯತ್ನಿಸಿದ್ದು ಸುಸ್ಪಷ್ಟವಿದೆ.

ಶುದ್ಧ ಶಾಸ್ತ್ರೀಯ ಪ್ರಕ್ರಿಯೆಗಳ ಜಾಡನ್ನು ಹಿಡಿದು ವಾದಪ್ರಸಕ್ತಿ, ವಾಕ್ಯಾರ್ಥ ಪ್ರೌಢಿಮೆಗಳ ಗಳಿಕೆಯಲ್ಲಿ ಮಗ್ನರಾಗಿ ತಾವೇ ಜ್ಞಾನಾಧಿಕಾರಿಗಳೆಂದು ಮೇಲರಿಮೆಯಲ್ಲಿ ಬೀಗಿ ನಡೆಯುತಿದ್ದ ವ್ಯಾಸಕೂಟದವರಿಗೆ ಮುಖ್ಯವಾದ ತಾತ್ವಿಕತೆ ಎನ್ನುವುದು ಹೀಗಿತ್ತು:

೧. ಜ್ಞಾನಾರ್ಜನೆಯೇ ಮುಖ್ಯ. ಶಾಸ್ತ್ರಜ್ಞಾನದ ಮೂಲಕವೇ ಮುಕ್ತಿ.

ಗ್ರಂಥಗಳ ಪಠಣ, ಶ್ಲೋಕಗಳು ಬಾಯಿಪಾಠವಾಗಿ ಸುಲಭವಾಗಿ ನಾಲಿಗೆಯಲ್ಲಿ ಹೊರಳುವಂತಿದ್ದು, ಸ್ಮರಣಶಕ್ತಿ, ಮೇಧಾಶಕ್ತಿಗಳಿಗೆ ಮಣಿ ಮತ್ತು ಮನ್ನಣೆ. ಸಂಸ್ಕೃತ ಭಾಷಾ ಪರಿಣತಿಯೇ ಹಿರಿಮೆ.

೨. ಮಧ್ವಾಚಾರ್ಯರ ಸರ್ವಮೂಲ ಗ್ರಂಥಗಳ ಪಾಠ ಹೇಳಿಸಿಕೊಳ್ಳುವುದು, ಮತ್ತು ವ್ಯಾಸತೀರ್ಥರ ಮೂರೂ ಗ್ರಂಥಗಳನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡುವುದು. ಈ ಅಧ್ಯಯನ, ಅಭ್ಯಾಸಗಳಿಂದ ಪರಿಣಿತರಾಗಿ ಸ್ವಮತ ಮಂಡನೆ, ಪರಮತ ಖಂಡನೆಗಳಲ್ಲಿ ಸಿದ್ಧಹಸ್ತರೆನಿಸಿಕೊಳ್ಳುವುದೇ ಅಂತಿಮಗುರಿ.

೩. ಈ ಎಲ್ಲ ಶಾಸ್ತ್ರಗಳ ವ್ಯಾಸಂಗ, ಸಿದ್ಧಾಂತ ಪ್ರಮೇಯಗಳ ಅಧ್ಯಯನದಿಂದ ಯುಕ್ತಿ-ಯುಕ್ತ ಸಾಧನೆ ಮಾಡುವುದರಲ್ಲಿ ಪಳಗುವಿಕೆ. ಈ ಎಲ್ಲವನ್ನೂ ಸಾಧಿಸಲು ಸದಾ ವ್ಯಾಸಂಗ. ಪ್ರವಚನಗಳನ್ನು ಕೇಳುವ ಮತ್ತು ಮಾಡುವ ಅರ್ಹತೆಗೂ ತಯಾರಿ.

೪. ಅಪರಿಮಿತ ಶಾಸ್ತ್ರಗಳನ್ನು ಓದಿ ಕರತಲಾಮಕ ಮಾಡಿಕೊಂಡವನಿಗೆ ಆತ್ಮೋದ್ಧಾರವಿದೆ. ವಿದ್ವಾಂಸರಾಗಿ, ಪ್ರಕಾಂಡ ಪಂಡಿತರೆನ್ನಿಸಿಕೊಳ್ಳುವುದೇ ಮುಖ್ಯವಾದ ಗುರಿ. ಮತ್ತೆ ದಿಗ್ವಿಜಯಕ್ಕೂ ಹೊರಟು ಶ್ರೇಷ್ಠ ಬಿರುದು ಬಾವಲಿಗಳೊಂದಿಗೆ ಬಂದು ಸಮಾಜದಲ್ಲಿ ಪರಮತ ಖಂಡನೆ, ಸ್ವಮತ ಮಂಡನೆಯಲ್ಲಿ ಅತ್ಯುನ್ನತರೆಂಬ ಸ್ತರದಲ್ಲಿ ಬಾಳುವುದು, ದ್ವೈತ ಸಿದ್ಧಾಂತ ಪ್ರಚಾರಕರೆಂದು ಸನ್ಮಾನ, ಸ್ಥಾನ ಗಳಿಸುವುದು.

೫. ವಿಷ್ಣು ಸರ್ವೋತ್ತಮತ್ವ, ಜಗತ್‌ಸತ್ಯತ್ವ, ಜೀವ-ಜಡ-ಪರಮಾತ್ಮನಲ್ಲಿಯ ಭೇದಗಳು, ಜೀವತ್ರೈವಿಧ್ಯ, ಪರಮಾತ್ಮ ಪ್ರತಿಬಿಂಬತ್ವ, ಭಕ್ತಿ, ಸ್ವರೂಪಾನಂದದ ಆವಿರ್ಭಾವ ರೂಪವಾದ ಮುಕ್ತಿ ಈ ಎಲ್ಲ ತತ್ವಗಳನ್ನು ಪಠಣದಿಂದ ಅರೆದು ಕುಡಿದು ವಿಶದವಾಗಿ ಬುದ್ಧಿಯಲ್ಲಿ ಸಂಗ್ರಹಿಸಿಟ್ಟುಕೊಳ್ಳುವುದು.

೬. ಕೆಲವೊಂದು ಕರ್ಮಗಳನ್ನು, ಆಚಾರಗಳನ್ನು ಗ್ರಂಥಗಳಲ್ಲಿ ಹೇಳಲಾದಂತೆಯೇ ಆಚರಿಸುವುದು. ಆಚರಣೆಯು ಪುಣ್ಯದ ಹಾದಿಯಾಗಿ ಮೋಕ್ಷಕ್ಕೆ ಒಯ್ಯುತ್ತದೆ. ದಿಕ್ಕಿನಷ್ಟು ಮಂತ್ರಪಠಣ, ದಿನಕ್ಕಿಷ್ಟು ಜಪ, ಶ್ಲೋಕಗಳನ್ನು ಉಚ್ಚರಿಸುವ ರೂಢಿ ಇರಬೇಕು. ಶಾಸ್ತ್ರಗಳಲ್ಲಿ ಏನು ಹೇಳಿದೆಯೋ ವಿಧಿ ವಿಧಾನಗಳು ಅವು ಮುಖ್ಯ. ಅಲ್ಲಿ ಹೇಳಲಾದಂತೆ ಆಚರಿಸುವುದೇ ಪುಣ್ಯ ಸಂಪಾದನೆ. ದಿನಕ್ಕಿಷ್ಟು ಗ್ರಂಥಪಠಣವಾಗಲೇ ಬೇಕು. ಜಪಾನುಷ್ಠಾನದಲ್ಲಿಯೂ ಲೆಕ್ಕಚಾರಕ್ಕೇ ಪ್ರಾಶಸ್ತ್ಯ. ಶ್ಲೋಕೋಚ್ಚಾರಣೆಯಲ್ಲೂ ಒಟ್ಟು ಸಂಖ್ಯೆಯ ಕಡೆಗೇ ಗಮನ.

ಶಾಸ್ತ್ರಗ್ರಂಥಗಳಲ್ಲಿ ಏನೇ ಹೇಳಿದ್ದರೂ ಆಯಾ ಕರ್ಮಗಳನ್ನು ಭಕ್ತಿಯಿಂದ ಆಚರಿಸಿಬೇಕೆಂದು ಸ್ಪಷ್ಟವಾಗಿ ಸೂಚಿಸಲಾಗಿತ್ತು. ಭಕ್ತಿಯೇ ಮೋಕ್ಷಕ್ಕೆ ಉತ್ತಮ ಸಾಧನವೆಂಬ ಪ್ರಕ್ರಿಯೆ ಗ್ರಂಥಗಳಲ್ಲಿ ಸ್ಪಷ್ಟವಿತ್ತು. ಆದರೆ ವ್ಯಾಸಕೂಟದವರೆನಿಸಿಕೊಂಡ ಈ ಎಲ್ಲ ಪಂಡಿತರಿಗೆ ವ್ಯವಹಾರ ಪ್ರಪಂಚದಲ್ಲಿ ಜ್ಞಾನಾರ್ಜನೆಗೇ ಹೆಚ್ಚಿನ ಬೆಲೆ, ಗೌರವ ಸಲ್ಲುವುದೇ ವಿನಹಾ ಭಕ್ತಿ ಸಂಪನ್ನತೆಗಲ್ಲ ಎನ್ನುವುದೇ ವೇದ್ಯವಾಗಿ ಭಕ್ತಿಯ ಸತ್ತ್ವ ಕಡಿಮೆಯಾಗಿ ವೇದವೇದಾಂತರು ಎಂದು ಕರೆಯಿಸಿಕೊಳ್ಳುವುದರಲ್ಲೆ ಗಮನ ಹೆಚ್ಚಿತು. ಭಕ್ತಿರಹಿತವಾದ ಶಾಸ್ತ್ರಾಧ್ಯಯನ, ವಾಕ್ಯಾರ್ಥಗಳೆಲ್ಲ ಶುಷ್ಕ ಕರ್ಮಗಳಾಗಿ, ಯಾಂತ್ರಿಕತೆ ಮೂಡಿ, ಬುದ್ಧಿಯ ಕಸರಾಟದಲ್ಲಿ ಮಾತ್ರ ಆಸಕ್ತಿ ಹೆಚ್ಚಿತು. ಪರಮಾತ್ಮನಿಗಾಗಿ ಅಲ್ಲಿ ಹೃದಯದ ಕೂಗು ಕರೆಗಳಾಗಲೀ ಅಂತಃಶುದ್ಧಿಯಾಗಲೀ ಮೂಡದೇ ಹೋಯಿತು.

ಆದರೆ ಭಗವದ್‌ಭಕ್ತಿಯನ್ನೆ ಪ್ರಧಾನವಾಗಿರಿಸಿಕೊಂಡು, ಹರಿದಾಸ್ಯವನ್ನೆ ಪ್ರಮುಖ ವೃತ್ತಿಯನ್ನಾಗಿಸಿಕೊಂಡು, ಸಂಗೀತವನ್ನು ಸಾಂಗತ್ಯವಾಗಿಸಿಕೊಂಡ ಸಾಹಿತ್ಯದ ರಚನೆಯನ್ನು ಮಾತೃಭಾಷೆಯಲ್ಲೆ ಮಾಡುತ್ತ, ಆ ರಚನೆಗಳನ್ನು ಜನಸಾಮಾನ್ಯರ ನಡುವೆ ಓಡಾಡಿ ಹಾಡುತ್ತ, ಲೋಕನೀತಿ, ಭಕ್ತಿಯ ಪ್ರಚಾರಗೈಯುತ್ತ ಜನಸಾಮಾನ್ಯನ ಆತ್ಮೋದ್ಧಾರದ ಕಡೆಗೂ ಕಳಕಳಿಯನ್ನು ಚಾಚಿ, ತಿದ್ದಿ ಬುದ್ಧಿ ಹೇಳಲು ಯತ್ನಿಸಿದವರು ಪುರಂದರ, ಕನಕದಾಸರೇ ಮೊದಲಾಗಿ ದಾಸಕೂಟದವರು. ಹೀಗಾಗಿ ವ್ಯಾಸಕೂಟದವರಿಗಿಂತ ಭಿನ್ನವಾದ ತಾತ್ತ್ವಿಕತೆಯ ಸ್ವರೂಪವನ್ನು ದಾಸಕೂಟದವರಲ್ಲಿ ಗುರುತಿಸಬಹುದು. ಹರಿದಾಸರುಗಳ ತಾತ್ತ್ವಿಕತೆಯ ಒಟ್ಟು ಸ್ವರೂಪ ಹೀಗಿದೆ:

೧. ಸಿದ್ಧಾಂತದ, ಪ್ರಮೇಯಗಳ ಜ್ಞಾನವಿರಬೇಕು. ಆದರೆ ಅದೇ ಪ್ರಧಾನವಲ್ಲ. ಹರಿಭಕ್ತಿ ಎನ್ನುವುದೇ ಮನುಷ್ಯನ ಬದುಕಿನ ಮುಖ್ಯ ಮೌಲ್ಯವಾಗಿರಬೇಕು. ಮುಖ್ಯವಾದುದನ್ನು ಮರೆತು ಗೌಣವನ್ನು ಎತ್ತಿ ಹಿಡಿದು ಮೆರೆಯುತ್ತ ಬಂದಲ್ಲಿ ಹರಿಪ್ರೀತಿ ದೊರಕುವುದಿಲ್ಲ.(ವ್ಯಾಸತೀರ್ಥ, ವಾದಿರಾಜರೇ ಮುಂತಾದವರಲ್ಲಿ ಭಕ್ತಿಯೂ ಪ್ರಾಧಾನ್ಯ. ಜ್ಞಾನದಲ್ಲಿಯೂ ಅವರುಗಳು ಮೇರುಶಿಖರ) ಜ್ಞಾನದಲ್ಲಿ ಅಪಾರ ಪಾಂಡಿತ್ಯವಿದ್ದೂ ಹೃದಯದಲ್ಲಿ ಹರಿಯಬಗ್ಗೆ ಭಕ್ತಿ ಇಲ್ಲವಾದಲ್ಲಿ ಅದು ನಿಷ್ಪ್ರಯೋಜಕ. ಜ್ಞಾನ, ತಿಳುವಳಿಕೆಗಳನ್ನು ಸಜ್ಜನರ ಸಂಗದಲ್ಲಿದ್ದು, ಪುರಾಣ ಪ್ರವಚನಗಳನ್ನು ಕೇಳುತ್ತ ಗಳಿಸಲಿ. ಜೊತೆಜೊತೆಯಾಗಿ ಭಕ್ತಿಭಾವವನ್ನು ಅಳವಡಿಸಿಕೊಂಡು ಬಾಳಬೇಕು. ತಿಳುವಳಿಕೆಯಿಲ್ಲದ ಮುಗ್ಧಭಕ್ತಿಯಾದರೂ ಸರಿಯೇ, ಆದರೆ ಭಕ್ತಿಯ ಲವಲೇಶವಿಲ್ಲದ ಬರಿಯ ಪಾಂಡಿತ್ಯದ ಎತ್ತರ ಬಿತ್ತರಗಳಿಂದೇನೂ ಪ್ರಯೋಜನವಿಲ್ಲ.

೨. ತತ್ತ್ವವಿಚಾರಗಳು, ಶಿಷ್ಟಾಚಾರಗಳು, ಸದಾಚಾರಗಳು ಖಂಡಿತ ಅರಿತು ಅಳವಡಿಸಿಕೊಳ್ಳಬೇಕು. ಆದರೆ ಇದೇ ಮುಖ್ಯ ಪ್ರತಿಪಾದಿತವಾಗಿ ಹೊರೆಯೆನಿಸುವ ಹಾಗಾಗಬಾರದು. ಅನಗತ್ಯ ಆಚಾರಗಳು, ವ್ಯರ್ಥವಿಚಾರಗಳು, ಬದುಕಿನಲ್ಲಿ ಬಾಳಿ ತೋರಿಸಲು ಬಾರದಂಥ ಹೊರೆಹೊರೆ ಆಚಾರವಿಚಾರಗಳು ಬೇಡ. ಹರಿಪ್ರೀತಿಯನ್ನು ಪಡೆಯುವುದೇ ಬದುಕಿನ ಗುರಿ. ಈ ಗುರಿಯನ್ನು ಮರೆತು ಸಾಧನೆಯ ದಾರಿಯನ್ನೇ ಗುರಿ ಎಂದು ಭ್ರಮಿಸುವುದು ತಪ್ಪು. ಬುದ್ಧಿವಂತಿಕೆಯಲ್ಲಿ ಭಕ್ತಿಯನ್ನು ತೊರೆಯಲಾಗದು. ಆಚಾರವಿಚಾರಗಳೆಲ್ಲ ಬುದ್ಧಿಯ ಕಸರತ್ತಿನಲ್ಲಿ ಕಳೆದುಹೋಗಿ ಯಾಂತ್ರಿಕತೆಯ ಶುಷ್ಕ ಕರ್ಮಗಳಾಗಿ ಪರಿಣಮಿಸಿದರೆ ಹರಿಯ ಪ್ರೀತಿ ದೂರವೇ ಸರಿ.

೩.ಆಧ್ಯಾತ್ಮ ಸಾಧನೆಯಲ್ಲಿ ಅನುಭವವೇ ಮುಖ್ಯ. ಭಕ್ತಿಯೇ ಆಧ್ಯಾತ್ಮ ಸಾಧನೆಗೆ ರಾಜಮಾರ್ಗ. ಸಿದ್ಧಾಂತ ಜ್ಞಾನವು ಸಾಧನೆಗೆ ಹಿನ್ನೆಲೆಯಾಗಿರಬೇಕೇ ವಿನಹಾ ಸಿದ್ಧಾಂತಕ್ಕೇ ಅಂಟಿಕೊಂಡುಬಿಟ್ಟರೆ ಭಗವತ್ತತ್ತ್ವದ ಸಾಕ್ಷಾತ್ಕಾರವಾಗದು. ಮಿದುಳಿನ ಕಸರತ್ತಿಗಿಂತಲೂ ಹೃದಯದ ಕರೆಗೇ ಹರಿಯು ಓಗೊಟ್ಟು ಒಲಿಯುತ್ತಾನೆ.

೪. ನಿಷ್ಕಾಮ ಕರ್ಮಗಳಲ್ಲಿ ಬಾಳುವೆ ನಡೆಯಿಸಬೇಕು. ಏನಾದರೂ ಹರಿಗರ್ಪಿತವೆಂದು ಬಾಳುವುದೇ ಸರಿ. ಸುಖ ದುಃಖಗಳನ್ನು ಅವನಿಗೇ ಅರ್ಪಿಸಿ ಕರ್ತವ್ಯ ಪರಿಪಾಲನೆ ಮಾಡುತ್ತ, ಪೊರೆಯುವವನೆಂಬ ದೃಢ ನಂಬಿಕೆ, ನಿಷ್ಠೆಗಳಲ್ಲಿ ಬದುಕು ಅವನಿಗೆ ಸಮರ್ಪಿತವಾಗಬೇಕು. ಪರಮಾರ್ಥ ಗಮನ, ಸಾಧನೆಗಳನ್ನು ತೊರೆಯದೆ

ಇಹದಲ್ಲಿನ ಕೆಲಸಗಳನ್ನು ಪರಿಪೂರ್ಣತೆಯಿಂದ ಮಾಡುತ್ತ ಮಾನವ ಜನ್ಮವನ್ನು ಹಾಳುಗೆಡವಿಕೊಳ್ಳದೆ ಬಾಳಬೇಕು. ಪರಮಾರ್ಥದ ನೆಪದಿಂದ ಇಹದ ವ್ಯವಹಾರಗಳಲ್ಲಿ ತೊಡಗಿ, ಪರಮಾತ್ಮನನ್ನೆ ಮರೆತು ತಾನೇ ಎಲ್ಲವೂ ಎನ್ನುವ ಅಹಂಕಾರ ತಳೆಯಬೇಕಿಲ್ಲ, ಅದು ತಪ್ಪು.

೫. ಸನ್ನಡತೆ, ಸದಾಚಾರ, ಸಜ್ಜನಶೀಲತೆಗಳನ್ನು ಬಿಟ್ಟ ಭಕ್ತಿಯು ಪ್ರಯೋಜನವಿಲ್ಲ. ಹರಿಯಲ್ಲಿ ಭಕ್ತಿ ಎಂದರೆ ಸದ್ಗುಣಪೂರ್ಣ ಮನಸ್ಸಿನ ಸಾಧನೆ ಎಂದೇ ಅರ್ಥ. ಒಳ್ಳೆಯ ಗುಣಗಳೇ ಇಲ್ಲದ 'ಭಕ್ತಿ' ಡಾಂಭಿಕತೆಯಾಗದೇ ಉಳಿಯದು. ಅಹಿಂಸೆ, ದಯೆ, ಕರುಣೆ ಮುಂತಾದ ಮಾನವೀಯ ಮೌಲ್ಯಗಳನ್ನು ಮರೆತು, ತೊರೆದು, ಮಲೆತು ಸಾಗುವ ವ್ಯಕ್ತಿಯು ತೋರುವ ಭಕ್ತಿಯಿಂದ ಏನೇನೂ ಪ್ರಯೋಜನವಿಲ್ಲ. ಬಾಹ್ಯಾಡಂಬರ ಬೆರೆತ ಭಕ್ತಿಯ ಪ್ರದರ್ಶನ ನಿಷ್ಪ್ರಯೋಜಕ. ಬದಲಾಗಿ ಹೃದಯದೊಳಗಿನ ನಿರ್ಮಲತೆಯ ಹರಿಪ್ರೀತಿಯು ನಿಜವಾದ ಭಕ್ತಿಯಾಗಿ ಒಳಗೂ ಹೊರಗೂ ನೈತಿಕತೆ ತಂದು ತುಂಬುವಂತಾಗಬೇಕು . ಇಹದ ಬದುಕಿನಲ್ಲಿ ಪರಿಶುದ್ಧತೆ, ಪರಮಾತ್ಮನಲ್ಲಿ ಪ್ರೀತಿ ಇದೇ ನಿಜವಾದ ಭಕ್ತಿ ಇರುವ ರೀತಿ.

೬. ಮಾನವ ಜನ್ಮ ಶ್ರೇಷ್ಠವಾದುದು. ಆದ್ದರಿಂದ ಸ್ವರೂಪೋದ್ಧಾರ, ಭಗವತ್‌ಸಾಕ್ಷಾತ್ಕಾರಕ್ಕೆ ಈ ಒಂದು ಜನ್ಮವೇ ಸಾಧನಾಮಾರ್ಗ. ಇದನ್ನರಿತು ಸಾರ್ಥಕವಾಗಿ ಬಾಳುವುದರ ಜೊತೆಜೊತೆಯಾಗಿ ತಿಳಿಯಬೇಕಾದ್ದು ಈ ನರದೇಹ ಶಾಶ್ವತವಲ್ಲ ಎನ್ನುವುದು. ಶರೀರದ ನಶ್ವರತೆ ಅರಿತು ವಿವೇಕಪೂರ್ಣವಾದ ವೈರಾಗ್ಯಶೀಲತೆಯನ್ನೂ ಬೆಳೆಯಿಸಿಕೊಳ್ಳಬೇಕು. ಈ ಬದುಕಿನಲ್ಲಿ ಭೋಗ, ಮೋಹಗಳಿರುವಂತೆಯೇ ವೈರಾಗ್ಯ, ವಿವೇಕಗಳಿಗೂ ಮನಸ್ಸನ್ನು ಸಿದ್ಧಪಡಿಸುವುದೇ ನಿಜವಾದ ಆಧ್ಯಾತ್ಮ ಸಾಧನೆ. (ಸಂಸಾರವೆಂಬಂಥ ಸೌಭಾಗ್ಯವಿರಲಿ, ಕಂಸಾರಿ ನೆನೆವೆಂಬ ಸೌಭಾಗ್ಯವಿರಲಿ) ವೈರಾಗ್ಯಗುಣವನ್ನು ತೊರೆದ ಮೋಹಿಗಳಿಗೆ ಭಕ್ತಿಸಾಧನೆ ಕಷ್ಟ. ಸಾಂಸಾರಿಕ ತೊಂದರೆ, ತಾಪತ್ರಯಗಳಲ್ಲಿ ಮುಳುಗಿ ಎದ್ದು ಬಿದ್ದು ಸಾಗುವ ಎಲ್ಲ ಮಾನವ ಜೀವಿಗಳಿಗೂ "ಭಕ್ತಿಬೇಕು, ವಿರಕ್ತಿ ಬೇಕು, ಸರ್ವಶಕ್ತಿಬೇಕು"(ಶ್ರೀಪಾದರಾಜರು) ಕಷ್ಟ ನಷ್ಟಗಳಲ್ಲಿ ಮಾಗುತ್ತ, ಸುಖಸಂತೋಷಗಳಲ್ಲಿ ಮೈಮರೆತು, ಮಲೆತಿರದೆ, ಪರಿಪಕ್ವತೆಯತ್ತ ಸಾಗಲು ಈ ವೈರಾಗ್ಯಶೀಲತೆಯು ಅಗತ್ಯವಿದೆ. ಭೋಗವೊಂದರಲ್ಲೆ ಜೀವಿಯು ಬಿದ್ದು ಭಗವಂತನನ್ನು ಮರೆಯುವ ಶಕ್ಯತೆ ಇದೆ. ಎಂತಲೇ ತ್ಯಾಗಕ್ಕೆ, ವೈರಾಗ್ಯಕ್ಕೆ ಕೂಡ ಬದುಕಿನಲ್ಲಿ ಬೆಲೆ ಇದೆ, ಇಹಪರಗಳೆರಡರ ಏಳಿಗೆಯೂ ವೈರಾಗ್ಯಶೀಲತೆಯಲ್ಲಿದೆ. ವೈರಾಗ್ಯವೆಂದರೆ ಕೆಲಸರಹಿತವಾಗಿ ಬದುಕಿಗೆ ಬೆನ್ನು ತಿರುಗಿಸಿ ಓಡುವುದಲ್ಲ. ಕರ್ಮಪ್ರಪಂಚದಲ್ಲಿದ್ದೇ, ಕರ್ತವ್ಯಗಳೆಲ್ಲವನ್ನು ಪಾಲಿಸುತ್ತಲೇ ಹರಿಯ ಅರಿವನ್ನು ಮರೆಯದೆ ಮಾಗುತ್ತ ಮಾಗುತ್ತ ಮನಸ್ಸು ತಾಳುವ ಪರಿಪಕ್ವತೆಗೆ ಇಲ್ಲಿ ವೈರಾಗ್ಯವೆಂಬ ಅರ್ಥ.

೭. ಮಡಿವಂತಿಕೆ ಅಥವಾ ಪರಿಶುದ್ಧತೆ ಎನ್ನುವುದು ಕೇವಲ ಬಾಹ್ಯವಾಗಿದ್ದರೆ ಸಾಲದು. ಹೊರಗಿನ ಚೊಕ್ಕತನ ಒಳಗಿನ ಮನಸ್ಸಿಗೂ ವ್ಯಾಪಿಸಿರಬೇಕು. ಹೊರಗಿನ ಮಡಿಗಿಂತ ಅಂತರಂಗದ ಮಡಿ ಅಥವಾ ಶುದ್ಧತೆ ಎನ್ನುವುದು ಬಲುಮುಖ್ಯ. ಅರಿಷಡ್ವರ್ಗಗಳನ್ನು ಒಳಗೆ ತುಂಬಿಟ್ಟುಕೊಂಡು ಹೊರಗೆ ಮಾತ್ರ ಮಿಂದು ಮಡಿ

ಮಡಿ ಎನ್ನುವುದು ಅರ್ಥಶೂನ್ಯ. ಮನಸ್ಸಿನ ನಿರ್ಮಲೀಕರಣ ಬಹು ಮುಖ್ಯವಾದ, ಅಗತ್ಯವಾದ ಮಡಿ.(ಮನವ ಶೋಧಿಸಬೇಕು ನಿಚ್ಚ..ಅನುದಿನ ಮಾಡುವ ಪಾಪ ಪುಣ್ಯಗಳ ವೆಚ್ಚ!.....ಪುರಂದರದಾಸರು) ಮನಸ್ಸನ್ನು ಶುದ್ಧೀಕರಣ ಮಾಡುವ ಸಾಧನೆಯಲ್ಲಿ ಮುಂದಿನ ಮಾರ್ಗವಾಗಿ ಬಿಂಬೋಪಾಸನೆಯ ಸಾಧಕನಾಗಿ, ತನ್ನ ಜೀವದ ಸ್ವರೂಪಾನಂದ ಪಡೆದು ನಂತರ ಬಿಂಬರೂಪೀ ಭಗವಂತನ ಸಾಕ್ಷಾತ್ಕಾರ ಪಡೆಯಬಹುದು. ಈ ಎಲ್ಲ ಸಾಧನೆಗಳು ಕಷ್ಟವೆನಿಸಿದರೂ, ಮನಸ್ಸಿನ ಪರಿಶುದ್ಧತೆಯೇ "ಭಕ್ತಿ"ಯ ಧಾರಣೆ ಮಾಡಿಕೊಂಡು ಹರಿಯನ್ನು ಪ್ರೀತಿಸುತ್ತ ಜನ್ಮ ಸಾರ್ಥಕ ಮಾಡಿಕೊಳ್ಳುವುದಕ್ಕೆ ಸಾಧಕವಾಗುತ್ತದೆ. ಬಿಂಬ ಸಾಕ್ಷಾತ್ಕಾರವು ಯೋಗಮಾರ್ಗ ಮುಖೇನ ಸಾಧಿಸಿಕೊಳ್ಳಬೇಕಾಗುತ್ತದೆ. ಇದೆಲ್ಲ ಸಾಧ್ಯವಾಗದಿದ್ದರೂ, ಹರಿಯಲ್ಲಿ ಭಕ್ತಿತಾಳಿ, ಸಜ್ಜನನಾಗಿ, ಸತ್ಕಾಲಕ್ಷೇಪದಲ್ಲಿದ್ದು ಅಂತರಂಗ ಶುದ್ಧಿಯಲ್ಲಿ ಬಾಳಿದರೆ ಸಾಕು. ಅದೇ ಕೈವಲ್ಯ ನೀಡುತ್ತದೆ.

೮. ಹರಿಭಕ್ತಿಗೆ ಸಂಸ್ಕೃತವೇ ಆಗಬೇಕೆಂದೇನೂ ಇಲ್ಲ. ತಾಯಿನುಡಿಯಲ್ಲಿಯೇ ಎದೆಯಾಳದ ಭಾವನೆಗಳನ್ನು ಭಕ್ತಿಪೂರ್ವಕವಾಗಿ ಭಗವಂತನಲ್ಲಿ ನಿವೇದಿಸಿಕೊಂಡರೆ ಏನೇನೂ ಕೊರತೆಯಾಗದೆ, ಹರಿಯು ಖಂಡಿತ ಕರಗಿ ಭಕ್ತನನ್ನು ಉದ್ಧರಿಸುತ್ತಾನೆ,

ಇವು ದಾಸಕೂಟದವರ ತಾತ್ತ್ವಿಕತೆ, ನಿಲುವು, ವ್ಯಾಸಕೂಟದವರಿಗಿಂತ ವಿಭಿನ್ನವಾದದ್ದು.

ವ್ಯಾಸಕೂಟ ಮತ್ತು ದಾಸಕೂಟದ ಸಾಂಸ್ಕೃತಿಕ ಪರಿಕಲ್ಪನೆಗಳು ಮತ್ತು ಅದರ ಸ್ವರೂಪ

ವ್ಯಾಸಕೂಟದವರದು ವೈದಿಕವರ್ಗ, ಜೊತೆಗೆ ವಿದ್ಯಾಪ್ರೌಢಿಮೆಯವರೆಂಬ ಮೇಲರಿಮೆ. ಹೀಗಾಗಿ ಇವರೆಲ್ಲ ಜಾತಿ, ಕುಲ, ಗೋತ್ರವೆಂಬ ಭೇದಭಾವಗಳನ್ನು ಜೊತೆಯಾಗಿರಿಸಿಕೊಂಡು ಬೆಳೆಯಿಸಿಕೊಂಡು ಬಂದವರು. ವೈದಿಕ ವರ್ಗಕ್ಕೆ ವಿಶಿಷ್ಟವಾದ ಆಚಾರ ವಿಚಾರಗಳನ್ನು ಚಾಚೂ ತಪ್ಪದೇ ಪರಿಪಾಲಿಸಿಕೊಂಡು ಬಂದ ಪಂಡಿತೋತ್ತಮರು ಇವರು. ಮೇಲುಜಾತಿಯಲ್ಲಿ ಜನಿಸಿದವರು ತಾವೆಂಬ ಮೇಲರಿಮೆಯನ್ನು ಸದಾ ಮನ್ನಿಸಿಕೊಂಡೇ ಬಂದವರಾಗಿ ಮನುಷ್ಯರಲ್ಲಿ ಎಲ್ಲರೂ ಒಂದೇ ಎಂಬ ಅನಿಸಿಕೆಯನ್ನು ಇವರು ಎಂದೂ ತಾಳಿಕೊಳ್ಳಲಿಲ್ಲ. ಹೀಗಾಗಿ ಇವರ ನಡೆನುಡಿ, ಸಾಂಸ್ಕೃತಿಕ ಆಯಾಮಗಳು ಸಾಮಾನ್ಯ ಜನರಿಗಿಂತ ವಿಭಿನ್ನವಾಗಿ ಪ್ರತ್ಯೇಕ ಲೋಕವೊಂದನ್ನು ನಿರ್ಮಾಣಮಾಡಿಕೊಂಡಂತೆ ಇವರುಗಳ ಬಾಳು ಇತ್ತು.

ಕುಲದ ಪ್ರಶ್ನೆ ಇವರಿಗೆ ಬಹಳ ಪ್ರಮುಖವಾಗಿತ್ತು. ಅನ್ಯಕುಲ, ಜಾತಿಯಲ್ಲಿ ಜನಿಸಿದ ಮನುಷ್ಯರೆಂದು ಇವರು ಬೇರೆಯವರೊಂದಿಗೆ ಹೀನಾಯವಾಗಿ ನಡೆದುಕೊಳ್ಳುತ್ತಿದ್ದರೆನ್ನುವುದನ್ನು ಕನಕದಾಸರ ಕೀರ್ತನೆಗಳಿಂದಲೇ ಸಾಕಷ್ಟು ತಿಳಿಯಬಹುದಾಗಿದೆ. ಕುಲ, ಜಾತಿಗಳ ಪರಿಗಣನೆಯಷ್ಟೇ ಅಲ್ಲ, ಮತ,ಪಂಥಗಳ ಬಗ್ಗೆಯೂ, ಶಾಸ್ತ್ರ ಪರಂಪರೆಗಳ ಬಗ್ಗೆಯೂ ಈ ವಿದ್ವಾಂಸ ವೈದಿಕರುಗಳು ಬಲು ಕಠಿಣ ಮನಸ್ಕರೇ. ತಮ್ಮ ಮತ, ಪಂಥಗಳೇ ಸರಿ, ಅನ್ಯರದು ಎಂದಿಗೂ ವರ್ಜ್ಯ ಎಂಬ ದಾಷ್ಟೀಕತೆಯೂ ಇವರಲ್ಲಿತ್ತು.

ಮಧ್ವಾಚಾರ್ಯರು ಭಗವದ್ ಉಪಾಸನೆಯ ಎರಡು ಮಾರ್ಗಗಳನ್ನು ಹೇಳಿದ್ದರು. ಜ್ಞಾನಪ್ರಧಾನವಾದ ಶಾಸ್ತ್ರಾಮವರ್ಶನ, ಮತ್ತೊಂದು ಭಕ್ತಿಪ್ರಧಾನವಾದ ಸ್ಮರಣೆ, ಧ್ಯಾನ. ಪಂಡಿತರುಗಳಿಗೆ ಶಾಸ್ತ್ರಾಮವರ್ಶನವೇ ಪ್ರಿಯವಾಯಿತು. ಹುಟ್ಟಿನಿಂದಲೂ, ವಿದ್ಯೆಯಿಂದಲೂ ತಾವು ಶ್ರೇಷ್ಠರೆಂಬುವುದೇ ಅವರ ಸಂಸ್ಕೃತಿಯನ್ನು ಕಟ್ಟಿತು. ಹೀಗಲ್ಲದೆ ಭಾಗವತರೆನಿಸಿ ಭಕ್ತಿಯ ಮಾರ್ಗವನ್ನೇ ಹಿಡಿದ ಹರಿದಾಸರುಗಳ ಸಂಸ್ಕೃತಿಯೇ ಬೇರೆ ಬಗೆಯದಾಯಿತು. ಆದರೆ ಇಡೀ ಮನುಕುಲಕ್ಕೆ, ಸಾಮಾನ್ಯಜನತೆಗೆ, ಅವರಿವರಿಗೆಲ್ಲರಿಗೂ ತಿಳಿಹೇಳಿ ಸುಸಂಸ್ಕೃತಿಯನ್ನು ಕಾಣಿಸಿದವರು, ಸುಸಂಸ್ಕೃತವಾಗಿ ಬಾಳಿದವರು ದಾಸಕೂಟದ ಪ್ರಮುಖರೇ.

ಎಲ್ಲ ವೈದಿಕರೂ ಹೀಗೆಯೇ ಇದ್ದರೆನ್ನಲಾಗದು. ವ್ಯಾಸತೀರ್ಥರು, ವಾದಿರಾಜರು, ಶ್ರೀಪಾದರಾಜರು ಮುಂತಾದ ಮಠಾಧೀಶರ ಬದುಕಂತೂ ಸ್ಪಷ್ಟವಾಗಿ ಮನುಕುಲದ ಏಳಿಗೆಗೆ ಶ್ರಮಿಸಿದವರೆನ್ನುವುದು, ಹರಿದಾಸರಾಗಿಯೇ ಬಾಳಿದವರೆನ್ನುವುದು ಗೋಚರವಿದೆ. ಹಿಂದೆಯೇ ಪೇಜಾವರ ಮಠಾಧೀಶರಾಗಿದ್ದ ವಿಜಯಧ್ವಜ ತೀರ್ಥರೂ ಭಾಗವತಕ್ಕೆ ವ್ಯಾಖ್ಯಾನ ರಚಿಸಿ ಭಾಗವತ ಧರ್ಮವನ್ನು ಎತ್ತಿಹಿಡಿದಿದ್ದರು. ಆದರೆ ಹೆಚ್ಚಿನ ಪಂಡಿತರು, ಮಠಮಾನ್ಯರು ಹರಿದಾಸರನ್ನು ಹತ್ತಿರಾಗಿಸಿಕೊಳ್ಳದೆ ಮಾರುದೂರದಲ್ಲೆ ಇರಿಸಿದರು. ದಾಸರುಗಳಿಗೆ ಈ ಮಠಗಳಲ್ಲಿನ

ಪಂಡಿತರ ಮಡಿವಂತಿಕೆ, ತೋರಿಕೆಯ ಆಚಾರಗಳು ಇಷ್ಟವಾಗಲಿಲ್ಲ. ಕರ್ಮಠತನದ ಪಂಡಿತ ಪ್ರವೃತ್ತಿಯನ್ನು ಅವರುಗಳು ಪ್ರಶ್ನಿಸಿಯೇ ಪ್ರಶ್ನಿಸಿದರು. ಭಕ್ತಿರಹಿತ ಜಪತಪಾನುಷ್ಠಾನಗಳನ್ನು "ಉದರವೈರಾಗ್ಯವಿದು" ಎಂದು ಖಂಡಿಸಿದರು. "ನಾಟಕ ಸ್ತ್ರೀಯಂತೆ ಬಯಲು ಢಂಬವ ತೋರಿ। ಬೂಟಕತನದಲಿ ಬಹಳ ಭಕುತಿ ಮಾಡಿ। ಸಾಟಿಯಿಲ್ಲವು ಎನಗೆಂದೆನಿಸಿ।ಊಟಕೆ ಸಾಧನೆ ಮಾಡಿಕೊಂಬುದಿದು" ಎಂದು ದಾಸಕೂಟದ ಅಧ್ವರ್ಯುವಾದ ಪುರಂದರದಾಸರು ನೇರವಾಗಿಯೇ ಟೀಕಿಸಿದರು. ಬರಿಯ ಆಚಾರ, ಶಾಸ್ತ್ರವಿಚಾರಗಳಲ್ಲಿ ಮುಳುಗಿ ಭಕ್ತಿಯನ್ನು ತೊರೆದವರನ್ನು ಕುರಿತು "ಹೋಗದೂರಿನ ದಾರಿ ಕೇಳುವವರು" ಎಂದೂ ಅವರು ಹೇಳಿದ್ದಿದೆ.

ಹೀಗಾಗಿ ವ್ಯಾಸಕೂಟದವರೆನ್ನಿಸಿಕೊಂಡವರಿಂದ ವಿಭಿನ್ನವಾಗಿ ವಿಶಿಷ್ಟ ಸುಸಂಸ್ಕೃತಿಯೊಂದು ದಾಸಕೂಟದವರಿಂದ ರೂಪುಗೊಂಡಿತು. ಇದು ಹರಿದಾಸರ ಸಂಸ್ಕೃತಿ. ತಮ್ಮ ನಡೆ, ನುಡಿ, ಆಚಾರಗಳಿಂದ ಕನ್ನಡನಾಡಿನ ಸಂಸ್ಕೃತಿಯನ್ನು ಹಿಗ್ಗಿಸಿಕೊಟ್ಟ ಹರಿದಾಸ ಸಂಸ್ಕೃತಿ. ಸಾಹಿತ್ಯದ ಮೂಲಕವೇ, ಸಂಗೀತ ಕಲೆಯ ಸಾಂಗತ್ಯದ ಜೊತೆಯಾಗಿಯೇ ಸೂಚಿತವಾದ ಸುಧಾರಣೆಯ ಸಂಸ್ಕೃತಿ. ದಾಸಕೂಟದವರಿಂದ ಬೇರೂರಿಕೊಂಡ ಈ ಸಾಂಸ್ಕೃತಿಕ ಪರಿಕಲ್ಪನೆಗಳು ಇಂದಿಗೂ ನಾಡಿನ ಜನರಿಗೆ ಪ್ರಸಕ್ತವಾಗಿಯೇ ಇವೆ.

ವ್ಯಾಸತೀರ್ಥರಿಂದ ಪ್ರೋತ್ಸಾಹಿಸಿಕೊಂಡು, ಅವರ ಮಾರ್ಗದರ್ಶನದಲ್ಲಿ ಹರಿದಾಸ ಸಂಸ್ಕೃತಿಗೆ ಎರಡು ಕಣ್ಣುಗಳಾದವರು ಪುರಂದರದಾಸರು ಮತ್ತು ಕನಕದಾಸರು. ಇವರಿಬ್ಬರ ಕೊಡುಗೆ, ಕಾಯಕಕ್ಕೆ ಸಮಾನವಾಗಿ ಮತ್ತೊಬ್ಬ ದಾಸರನ್ನು ಹೆಸರಿಸುವ ಹಾಗೆಯೇ ಇಲ್ಲ. ಹಾಗೆಂದು ಉಳಿದ ದಾಸರುಗಳೇನೂ ಈ ಸಂಸ್ಕೃತಿ ಕಟ್ಟುವಲ್ಲಿ ನೆರವಾಗಲಿಲ್ಲ ಎನ್ನಲಾಗದು. ಆದರೆ ಇವರಿಬ್ಬರ ಸಾಹಿತ್ಯಸೇವೆ, ಸಂಸ್ಕೃತಿಯ ಕೈಂಕರ್ಯಗಳು ವಿಶಾಲವ್ಯಾಪ್ತಿಯವು. ಎಂದಿಗೂ ಮರೆಯಲಾಗದಂಥವು.

ಹರಿದಾಸರಿಗೆ ಭಗವಂತನು ಅನುಭವ ವೇದ್ಯನಾಗಬೇಕೆಂಬ ಹಂಬಲ. ಶಾಸ್ತ್ರ ಈ ಹಂಬಲಕ್ಕೆ ನೆರವಾಗುವಷ್ಟೆ ಸಾಕು ಅವರಿಗೆ. ದಾಸಕೂಟದವರಿಗೆ ಭಾವ ಪ್ರಧಾನವಾದ ಭಕ್ತಿಯಷ್ಟೇ ಸಾಕು. ಹೀಗೆಂದು ತಾವು 'ದಾಸಕೂಟ'ವೆಂಬ ಹೆಸರಿನಲ್ಲಿ ಸಂಘಟಿತ ಸಂಸ್ಥೆಯನ್ನೇನೂ ಅವರು ಕಟ್ಟಲಿಲ್ಲ. ಹರಿದಾಸರು ಎಲ್ಲೆಲ್ಲಿ ಇದ್ದು ಓಡಾಡುತ್ತಿದ್ದರೂ ತಾವು ದಾಸಕೂಟದವರೆಂಬ ಭಾವನೆಗೆ ಒಳಪಟ್ಟಿದ್ದರೇ ವಿನಹಾ ಇವರೆಲ್ಲ ಮಠದೊಳಗೆ ಯಾರೂಬ್ಬರ ಅಂಕೆ, ಆಡಳಿತಗಳಿಗೆ ಒಪ್ಪಿಸಿಕೊಂಡು ಇದ್ದವರಲ್ಲ. ಆದರೆ ದಾಸಕೂಟದವರಿಗೆ ಅಂಕಿತ ಪಡೆದು ಬಾಳಬೇಕೆಂಬ ನಿಯಮವಿದ್ದಿತ್ತು. ಗುರುವಿನಿಂದ ಅಂಕಿತ ಪಡೆಯಬೇಕು. ಗುರುವೆಂದರೆ ಮಠಾಧೀಶರೇ ಆಗಬೇಕೆಂದೂ ಇಲ್ಲ. ಹರಿದಾಸರ ಪೀಳಿಗೆಯಲ್ಲಿ ಬಂದ ಹಿರಿಯ ದಾಸರೊಬ್ಬರಾದರೂ ಸರಿ, ಅವರೇ ಗುರುವಾಗಿ ಅಂಕಿತ ನೀಡಬೇಕು. ಅಂಕಿತ ನೀಡುವ ಹಿರಿಯ ತಾನೂ ಅಂಕಿತ ಪಡೆದಿರಬೇಕೆನ್ನುವುದೇ ಮುಖ್ಯ.

ಗೃಹಸ್ಥ ಜೀವನವೇನೂ ಹರಿದಾಸ ದೀಕ್ಷೆಗೆ ಅಡ್ಡಿ ತರುವುದಿಲ್ಲ. ಎಷ್ಟೋ ಹರಿದಾಸರೆಲ್ಲ ಗೃಹಸ್ಥರೇ, ಗೃಹಸ್ಥಜೀವನದಲ್ಲಿದ್ದವರೇ. ಆದರೆ ಈ ಹರಿದಾಸರು ಬೇರೆಯವರ ಹಾಗೆ ಸಂಸಾರ ನಿರ್ವಹಿಸಲು ಲೌಕಿಕವಾದೊಂದು ವೃತ್ತಿಯನ್ನು ಹಿಡಿದು ಬಾಳಿದವರಲ್ಲ. ಹೀಗೆ ಲೌಕಿಕವೃತ್ತಿಯ ನಿರ್ದಿಷ್ಟ ಆದಾಯವೇನೂ ಹರಿದಾಸರಿಗಿರುವುದಿಲ್ಲ. ಹೀಗಾಗಿ ಬದುಕನ್ನು ನಿರ್ವಹಣೆ ಮಾಡಿಕೊಂಡು ಹೋಗುವುದು ಕಷ್ಟವೇ. ಹರಿದಾಸರಾಗಿ ಬಾಳಲು ಮನಸ್ಸಿಗೆ ತುಂಬಾ ಧೃಡತೆ ಇರಬೇಕು. ಅವರು ನಾಳೆಗೆ ಎಂದು ಸಂಗ್ರಹ ಮಾಡುವಂತಿಲ್ಲ. ಇಂದು ದೊರಕಿದುದರಲ್ಲೆ ತೃಪ್ತಿ ತಾಳಬೇಕು. ಇನ್ನಷ್ಟು ಮತ್ತಷ್ಟು ಎಂದು ಬಯಸುವಂತಿಲ್ಲ. ಹರಿದಾಸರ ಮುಖ್ಯ ಲಕ್ಷಣವೇ ನಿಶ್ಚಿಂತೆ. ಯಾಕೆಂದರೆ ಅವರು ಹರಿಯನ್ನು ನಂಬಿದವರು. ಇದ್ದುದು ಸಾಕು, ತಾನಾಗಿ ಬಂದದ್ದು ಹರಿಯ ಪ್ರಸಾದವೆಂದು ಉಣ್ಣಬೇಕು. ನೋಡಿಕೊಳ್ಳುವ ಒಡೆಯ ಹರಿ ಎನ್ನುವುದು ಅವರ ಅಗಾಧ ನಂಬಿಕೆ.

ಹರಿದಾಸರ ಮನೋಧರ್ಮವು ಹರಿಯ ದಾಸ್ಯವನ್ನು ಒಳಗೊಂಡಂಥದ್ದು. ಬೇರೇನು ಆಸೆ ಆಕಾಂಕ್ಷೆಗಳಿಗೂ ಅಲ್ಲಿ ತೆರವಿಲ್ಲ. ಕಾಲಲ್ಲಿ ಗೆಜ್ಜೆಕಟ್ಟಿ, ಕೊರಳಲ್ಲಿ ತುಳಸೀಮಾಲೆ ಧರಿಸುವುದು, ಹಣೆಯ ಮೇಲೆ ಊರ್ಧ್ವಪುಂಡ್ರ, ಕೈಯಲ್ಲಿ ದಂಡಿಗೆ ಬೆತ್ತ, ಗೋಪಾಳ ಬುಟ್ಟಿ ಇವಿಷ್ಟೂ ಅವರ ಬಾಹ್ಯಲಾಂಛನಗಳೆನಿಸಿಕೊಳ್ಳುತ್ತವೆ. ಹಾಡು ಹೇಳುತ್ತ, ಹರಿನಾಮಸ್ಮರಣೆಯಲ್ಲಿ ಮೈಮರೆತು ನರ್ತಿಸುವುದೂ ಅವರ ಹರಿದಾಸ್ಯಮನೋಧರ್ಮದ ಅಭಿವ್ಯಕ್ತಿಯೇ ಆಗಿದೆ.

ಹರಿದಾಸರು ಭಾಗವತದ ಪಂಥದವರು. ದಾಸಕೂಟದವರಿಗೆ ಪ್ರಧಾನವಾದ ಪ್ರೇರಣೆ ಭಾಗವತದರ್ಮ. ಈ ಧರ್ಮವು ತುಂಬ ಪ್ರಾಚೀನತೆ ಹೊಂದಿದ್ದು, ಈ ಧರ್ಮದ ಪ್ರತಿಪಾದನೆಗಾಗಿ ಹುಟ್ಟಿಕೊಂಡಿದ್ದೇ ಭಾಗವತ ಪುರಾಣ. (ಇದು ಪ್ರಸಿದ್ಧವಾದ ಹದಿನೆಂಟು ಪುರಾಣಗಳಲ್ಲಿ ಒಂದು) ಭಾಗವತ ಧರ್ಮ ಮತ್ತು ಪುರಾಣಗಳಿಗೆ ವಿಶಾಲವಾದ, ಸ್ವತಂತ್ರವಾದ ನೆಲೆ ಇದ್ದು, ಎಲ್ಲ ಮತಗಳವರಿಗೂ ಸಮ್ಮತವಾಗಿರುವಂಥದ್ದು. ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ಇನ್ನಿತರ ಮತಗಳವರೂ ಕೂಡ ಭಾಗವತಕ್ಕೆ ವ್ಯಾಖ್ಯಾನ ರಚಿಸಿದ್ದಾರೆ. ಮಧ್ವಾಚಾರ್ಯರು ವಿಶೇಷವಾಗಿ ಈ ಧರ್ಮವನ್ನು ಎತ್ತಿ ಹಿಡಿದರು. ಅವರು ರೂಪಿಸಿದ ತಾತ್ತ್ವಿಕ ನಿಲುವುಗಳು ಭಾಗವತ ಸಂಪ್ರದಾಯಕ್ಕೆ ವಿಶೇಷವಾಗಿ ಹೊಂದುವಂಥದ್ದು. ಅಂತರಂಗ ಶುದ್ಧಿ, ಬಾಹ್ಯದಲ್ಲಿ ಸನ್ನಡತೆ, ಏಕಾಂತಭಕ್ತಿ, ಬಿಂಬೋಪಾಸನೆ, ಸರ್ವಭೂತ ಹಿತ, ಸರ್ವಸಮಾನತಾ ಭಾವ ಇವೆಲ್ಲ ಭಾಗವತ ಧರ್ಮದ ಪ್ರಣಾಳಿಕೆಗಳು. ದಾಸಕೂಟದವರು ಮುಖ್ಯವಾಗಿ ಇವುಗಳನ್ನು ನೆಮ್ಮಿಕೊಂಡರು. ದಾಸಸಾಹಿತ್ಯವು ಇವುಗಳನ್ನೇ ಬೋಧಿಸುವ ಕಾವ್ಯವಾಯಿತು.

ಬಿಂಬೋಪಾಸನೆಯು ಹರಿದಾಸರು ಅಳವಡಿಸಿಕೊಂಡ ಪ್ರಮುಖ ಲಕ್ಷಣವೆನಿಸಿತು. ಇದು ಏಕಾಂತ ಭಕ್ತಿ, ಅಂತರಂಗ ಪೂಜೆ, ಮಾನಸಿಕ ಸಾಧನೆ, ಇದನ್ನು ಸಾರಿ ಹೇಳಿದವರು ವ್ಯಾಸತೀರ್ಥರು.[*೧] ಇದನ್ನೇ ಪುರಂದರದಾಸರು ಮುಂದುವರೆಯಿಸಿಕೊಂಡು ಹೋದರು.[*೨] ಮುಂದಿನ ಶತಮಾನದಲ್ಲಿ ಬಂದ ವಿಜಯದಾಸರು ಮತ್ತು ಗೋಪಾಲದಾಸರ ಕೃತಿಗಳಲ್ಲಿ ಅಲ್ಲದೇ ಜಗನ್ನಾಥದಾಸರ 'ಹರಿಕಥಾಮೃತ ಸಾರ'ದಲ್ಲಿ ಬಿಂಬಾನುಸಂಧಾನದ

ಕ್ರಮಬದ್ಧ ನಿರೂಪಣೆ ದೊರೆಯುತ್ತದೆ. ಭಾಗವತದಲ್ಲಿ ಬಂದಿರುವ ಬಿಂಬಪೂಜೆಯ ಕ್ರಮವನ್ನು ಮಧ್ವಾಚಾರ್ಯರ 'ತಂತ್ರಸಾರ', 'ವಿಷ್ಣುಸಂಹಿತೆ, 'ಪ್ರಕಾಶ ಸಂಹಿತೆ'. 'ಯೋಗದೀಪಿಕಾ' ಎಂಬ ಗ್ರಂಥಗಳು ವಿವರಿಸಿವೆ. ಇವುಗಳನ್ನೇ ಹರಿದಾಸರು ಮೆಚ್ಚಿ ಆಯ್ದುಕೊಂಡು ಬಿಂಬಾಪರೋಕ್ಷವನ್ನು ಅನುಭವಿಸಿದರು.

ಹೀಗೆ ಭಾಗವತಧರ್ಮವು ಅನುಭವ ಮುಖೇನ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವುದನ್ನು ನಿರೂಪಿಸಿದ್ದನ್ನೇ ಹರಿದಾಸರು ನೆಮ್ಮಿಕೊಂಡರು. ದಿನನಿತ್ಯದ ಬದುಕಿನ ಎಲ್ಲ ವ್ಯವಹಾರ, ಕಾರ್ಯಕಲಾಪಗಳಲ್ಲೂ ಆಧ್ಯಾತ್ಮ ಪ್ರವೃತ್ತಿಯ ಅಗತ್ಯವನ್ನು ಹರಿದಾಸರು ಸಾರಿ ಹೇಳಿದರು, ಬರಿಯ ಸಿದ್ಧಾಂತವರಿತರೆ ಸಾಲದು, ಅದನ್ನು ಅನುಭವಿಸುವ ಸಾರ್ಥಕತೆಯನ್ನು ಎತ್ತಿ ತೋರಿದರು.

ಆದರೆ ಈ ಅಪರೋಕ್ಷಾನುಭೂತಿಯು ವ್ಯಾಸಕೂಟದವರಲ್ಲಿ ಅಷ್ಟಾಗಿ ಸಾಧಿಸಲಿಲ್ಲ. ಸ್ವತಃ ಮಧ್ವಾಚಾರ್ಯರೇ ಇದನ್ನು ಎತ್ತಿಹಿಡಿದು ಸಾರಿದ್ದರೂ, ಶ್ರೀಪಾದರಾಜರೇ ಆದಿಯಾಗಿ ವ್ಯಾಸತೀರ್ಥ, ವಾದಿರಾಜರೇ ಮುಂತಾದ ಪ್ರಮುಖ ಯತಿಗಳು ಇದನ್ನು ವಿಶೇಷವಾಗಿ ಸಾಧಿಸಿ ತೋರಿದರಾದರೂ, ವ್ಯಾಸಕೂಟದ ಪಂಡಿತರಿಗೆ 'ಶಾಸ್ತ್ರಾಮರ್ಶನದ ಜೋರಿನಲ್ಲಿ, ಖಂಡನ ಮಂಡನಗಳ ಕಾವಿನಲ್ಲಿ, ಸಂಸ್ಕೃತ ಪರಿಣಿತಿ ಪಾಂಡಿತ್ಯಗಳ ಪ್ರವೃತ್ತಿಗಳಲ್ಲಿ ಬಿಂಬೋಪಾಸನೆಯು ಸಾಧಿತವಾಗದೇ ಹೋಯಿತು. ಕಾರ್ಯತಃ ಅನುಭೂತಿಯ ಪಥ ಹಿಂದೆ ಸರಿಯಿತು, ಪಾಂಡಿತ್ಯದ ಮೆರುಗಿನ ಮೆರೆದಾಟವಷ್ಟೆ ಮುಂದಾಗಿ ನಿಂತಿತು.

ಹರಿದಾಸರು ಸಾಧಿಸಿದ, ಮತ್ತು ಸಾರಿದ ಅಪರೋಕ್ಷಾನುಭೂತಿಯನ್ನು, ಅನುಭವ ಸಿದ್ಧ ಆಧ್ಯಾತ್ಮವನ್ನು ದಿಟವೆಂದು ಒಪ್ಪಿಕೊಳ್ಳಲು ವ್ಯಾಸಕೂಟದ ಪಂಡಿತೋತ್ತಮರು ಮುಂದಾಗಲಿಲ್ಲ. ಹರಿದಾಸರು ಹೀಗೆ ಜ್ಞಾನಾಧಿಕಾರಿಗಳೆಂದು ಒಪ್ಪಲು ಅವರೆಂದೂ ಸಿದ್ಧರಾಗಲಿಲ್ಲ. ಹರಿದಾಸರೋ, ಭಾವುಕ ಪ್ರವೃತ್ತಿಯವರಾಗಿದ್ದು ಹೃದಯದಿಂದ ಭಗವಂತನನ್ನು ಪ್ರೀತಿಸಿ, ಹೃದಯ ಕಮಲದಲ್ಲಿ ಹರಿಯನ್ನು ಕಂಡಂಥವರು. ತಾರಕವಾದ ಜ್ಞಾನ ಪಡೆಯಲು ಅಧ್ಯಯನವೊಂದೇ ಗತಿ ಎಂದು ಅವರೆಂದೂ ಬಗೆದವರಲ್ಲ. ಆದರೆ ಪಂಡಿತರಿಗೆ ಜ್ಞಾನವೇ ಮುಖ್ಯ, ಅದೂ ಜ್ಞಾನದ ವಿಶಾಲಾರ್ಥದಲ್ಲಿ ಅಲ್ಲ, ಶಾಸ್ತ್ರಗ್ರಂಥಗಳಲ್ಲಿ ಹೇಳಿದುದನ್ನು ಮಿದುಳಿನಲ್ಲಿ ಅಚ್ಚೊತ್ತಿಸಿ ಕೊಂಡರಾಯಿತೆನ್ನುವ ಸಂಕುಚಿತಾರ್ಥದಲ್ಲಿ. ಹೀಗಾಗಿಯೇ ಇವರಿಗೆ ಜ್ಞಾನಕ್ಕೆ ಅಧಿಕಾರವನ್ನು ಹೇಳುವಾಗ ಜಾತಿ,ಮತ, ಕುಲ, ಮನೆತನ, ಆಡಂಬರಗಳೆಲ್ಲ ಸೇರಿಕೊಂಡು ಬಂದು ಇವರುಗಳನ್ನು ಮೆರೆದಾಟದಲ್ಲಿರಿಸಿತೇ ವಿನಹಾ ಹೃದಯದ ಭಾವಭಕ್ತಿಯ ದಿವ್ಯಾನುಸಂಧಾನ ಇವರಿಗೊಲಿಯಲಿಲ್ಲ. ಇವರುಗಳೆಂದೂ ಹರಿದಾಸರನ್ನು ಹತ್ತಿರಾಗಿಸಿಕೊಳ್ಳಲಿಲ್ಲ. ಎಂದೂ ಹರಿದಾಸರ ಭಕ್ತಿ ಪಂಥಕ್ಕೆ ಮನಃಪೂರ್ವಕವಾಗಿ ತಮ್ಮನ್ನು ತೆರೆದುಕೊಳ್ಳಲಿಲ್ಲ.

"ಅಂತರಂಗದಲಿ ಹರಿಯ ಕಾಣದವ ಹುಟ್ಟು ಕುರುಡನೋ" ಎಂಬ ತಮ್ಮ ಗುರು ವ್ಯಾಸತೀರ್ಥರ ಮಾತು ವ್ಯಾಸಕೂಟದವರ ಕಣ್ಣು ತೆರೆಸುವಲ್ಲಿ ವಿಫಲವಾಯಿತು. ಈ ವ್ಯಾಸಕೂಟದವರಲ್ಲಿ ಎಷ್ಟೋ ಮಂದಿ ಮಠದ ಆಡಳಿತ, ಅಧಿಕಾರ ವರ್ಗದಲ್ಲಿದ್ದವರು. ಹರಿದಾಸರಿಗೊಂದು ನೆಲೆಯನ್ನು ವ್ಯಾಸತೀರ್ಥರು ಮಠದಲ್ಲಿ

ಕಲ್ಪಿಸಿಕೊಟ್ಟಿದ್ದರೂ, ಮಠದ ಆಡಳಿತ ವ್ಯವಸ್ಥೆಯಂತೂ ಯಾವ ಹರಿದಾಸರನ್ನೂ ಒಳಗೊಂಡಿರಲಿಲ್ಲ. ಹರಿದಾಸರಲ್ಲದವರ ಕೈಯಲ್ಲೆ ಈ ಆಡಳಿತದ ಬಿಗಿ ವ್ಯವಸ್ಥೆ ಇದ್ದುದು. ವ್ಯಾಸತೀರ್ಥರು ಮಠಾಧೀಶರಾಗಿದ್ದೂ ತಾವೇ ಹರಿದಾಸರಂತೆಯೇ ಇದ್ದು ಹರಿದಾಸರನ್ನು ಆದರಿಸಿ, ಅವರೊಂದಿಗೇ ಆಪ್ತತೆಯಿಂದ ಬೆರೆಯುವುದನ್ನು ಕಂಡಾಗ ಮಠದ ಅಧಿಕಾರಿಗಳಿಗೆ ಸಿಟ್ಟು, ಆಕ್ರೋಶ. ವ್ಯಾಸಕೂಟದ ಅನೇಕ ಪಂಡಿತರು ಈ ಅಧಿಕಾರಿಗಳನ್ನೇ ಆಶ್ರಯಿಸಿಕೊಂಡಿರುತ್ತಿದ್ದವರು. ಇವರೆಲ್ಲರೂ ವೈದಿಕರೇ ಆದರೂ ವ್ಯವಹಾರದಲ್ಲಿ ತೀರಾ ಲೌಕಿಕರೇ. ಪರಮಾರ್ಥದ ನೆಪದಿಂದ ಮಠದ ಆಶ್ರಯದಲ್ಲಿದ್ದು ವ್ಯವಹಾರದಲ್ಲಿ ನಿರತರು. ಇಂಥದೊಂದು ವರ್ಗವು ಹರಿದಾಸರು ತೋರಿದ ಭಕ್ತಿ, ಬಿಂಬಪೂಜೆ ಮುಂತಾದವುಗಳಿಗೇನೂ ಬೆಲೆ ನೀಡದೆ ಅವರನ್ನು ದ್ವೇಷಿಸುವುದೇ, ತಾತ್ಸಾರ ತೋರುವುದೇ ತಮ್ಮ ಮೇಲರಿಮೆಯ ಕುರುಹು ಎಂದು ಭಾವಿಸಿಕೊಂಡು ನಡೆಯುತ್ತಿದ್ದವರು.

ಮಠದಲ್ಲಿನ ತಮ್ಮ ವಾಸ್ತವ್ಯದ, ಲಾಭದ ನೆಲೆಯನ್ನು ತಮಗಾಗಿ ಗಟ್ಟಿಗೊಳಿಸಿಕೊಳ್ಳುವುದರಲ್ಲೆ ನಿರತರಾಗಿದ್ದ ವ್ಯಾಸಕೂಟದ ಪಂಡಿತರನೇಕರು [*2] ಮಸ್ತಕದ ಪಾಂಡಿತ್ಯ, ಮಸ್ತಕದ ತಿಣುಕಾಟದಲ್ಲೆ ತೊಡಗಿಕೊಂಡು ಭಗವಂತನ ಬಗೆಗಿನ ವಿಸ್ಮೃತಿಯಲ್ಲಿ ಬದುಕತೊಡಗಿದ್ದನ್ನು ಕಂಡು ಪುರಂದರದಾಸರು ಕಡು ನೊಂದಿದ್ದಾರೆ, ನಿಟ್ಟುಸಿರಿಟ್ಟಿದ್ದಾರೆ. ಕೇವಲ ಮಠನಿವಾಸಿ ವೈದಿಕರಷ್ಟೇ ಹೀಗಿದ್ದುದಲ್ಲ. ಮಠದಿಂದ ಹೊರಗೆ ಸಮಾಜದಲ್ಲೂ ಅನೇಕ ವೈದಿಕ ಸಂಪ್ರದಾಯಸ್ಥರು ಹೀಗೆ ಬಾಹ್ಯಾಡಂಬರ ಆಚಾರಗಳಲ್ಲಿ ದೈವದ ನಿಜವಾದ ಅನುಸಂಧಾನ ಮರೆತಿದ್ದ ಸೋಗಲಾಡಿತನವನ್ನು ಪುರಂದರದಾಸರು ಕಂಡಿದ್ದಾರೆ. ಇಂಥವರನ್ನು ಕಾಣುತ್ತ ಕೆಲವೊಮ್ಮೆ ಕೆರಳಿ ಕೆಂಡವಾಗಿದ್ದಾರೆ.

"ಪಿಂಡಾಂಡದೊಳಗಿನ ಗಂಡನ ಕಾಣದೆ
ಮುಂಡೆಯರಾದರು ಪಂಡಿತರು"

ಸಶಕ್ತವಾದ, ದಿಟ್ಟತನದ ಅಭಿವ್ಯಕ್ತಿ! ಮಾನವ ಸ್ವಭಾವವೇ ಹಾಗೆ. ಇತಿಮಿತಿಯುಳ್ಳದ್ದು ಎಂಬುದನ್ನು ಪುರಂದರದಾಸರೂ ಬಲ್ಲರು. ಆದರೂ ಬೂಟಕತನ, ಕಪಟತನ, ಸೋಗಲಾಡಿತನಗಳು ಅವರಿಗೆಂದೂ ಹಿಡಿಸುವುದಿಲ್ಲ. ಪಂಡಿತರಲ್ಲಿ ಈ ಬಗೆಯ ಕಪಟತೆ ಇದ್ದಂತೆ ದಾಸಕೂಟ ಸೇರಿದ್ದ ಅನೇಕ ಹರಿದಾಸರಲ್ಲಿ ಕೆಲವರಾದರೂ ಹೀಗೆಯೇ ಇದ್ದಿರಬಹುದು. ಪಂಡಿತರಿಗೆ ಜ್ಞಾನದ ಆಡಂಬರವಿದ್ದರೆ ಇಂಥ ಹರಿದಾಸರಿಗೆ ಭಕ್ತಿಯ ಸೋಗು! ಮನುಷ್ಯರೆಂದ ಮೇಲೆ ಮಠವಾದರೇನು, ಸಮಾಜವಾದರೇನು? ಒಳಗೊಂದು ಹೊರಗೊಂದು ಎಂಬಂತೆ ಬದುಕುವವರೆಷ್ಟೋ ಮಂದಿ ಇದ್ದೇ ಇರುತ್ತಾರೆ. ಆದರೆ ಅಚ್ಚ ಹರಿದಾಸ ಸಂಸ್ಕೃತಿಯ, ಹರಿಭಕ್ತಿವಂತ ಮನಸ್ಸಿಗೆ ಇಂಥ ಕಪಟತನದ ಬದುಕು ರೇಜಿಗೆ ಹುಟ್ಟಿಸುತ್ತದೆ ಎನ್ನುವುದಂತೂ ಸತ್ಯ. ತಿದ್ದಿಕೊಳ್ಳಲು ಪ್ರಯತ್ನಿಸಿ ಉದ್ಧಾರವಾಗಬೇಕೆಂಬುದೇ ಪುರಂದರದಾಸರಂಥ ಹರಿದಾಸ ಸಂಸ್ಕೃತಿಯ ನಿಲುವು.

ಸಿದ್ಧಾಂತ ಪ್ರಮೇಯಗಳ ಪ್ರತಿಪಾದನೆಗಿಂತಲೂ ಉಪಾಸನೆಯೇ ಶ್ರೇಷ್ಠವೆನ್ನುವುದು ಮಧ್ವಾಚಾರ್ಯರ ಆಶಯವೇ ಆಗಿದ್ದರೂ ಅದನ್ನು ಮರೆತು ಲಾಭಬಡಕತನದಿಂದ ಮಠಕ್ಕೆ ಅಂಟಿಕೊಂಡು, ತಮ್ಮ ಪಾಂಡಿತ್ಯದಿಂದ ಜೀವನೋಪಾಯ ಸಾಗಿಸುತ್ತ ಹೃದಯ ಸಂಸ್ಕಾರರಹಿತರಾಗಿದ್ದ ಇಂಥ ಪಂಡಿತರು ದಾಸಕೂಟದವರನ್ನು ದ್ವೇಷಿಸುತ್ತಿದ್ದರೆನ್ನುವುದರಲ್ಲಿ ಆಶ್ಚರ್ಯವಿಲ್ಲ. ವ್ಯಾಸಕೂಟ, ದಾಸಕೂಟ ಈ ಎರಡಕ್ಕೂ ಮೂಲವು ಮಧ್ವಾಚಾರ್ಯರ ಮತವೇ ಆದರೂ ದಾಸಕೂಟದವರು ಅಳವಡಿಸಿಕೊಂಡ ಮಾಧ್ವನಿಷ್ಠೆಗೂ ವ್ಯಾಸಕೂಟದವರು ಅನುಸರಿಸಿದ 'ಮಾಧ್ವನಿಷ್ಠೆ'ಗೂ ತುಂಬ ವ್ಯತ್ಯಾಸವಿದೆ. ಎರಡೂ ಕೂಟಗಳ ನಿಷ್ಠೆಗಳಿಗೆ ಪ್ರಮೇಯಗಳು ಒಂದೇ, ಮಧ್ವಸಿದ್ಧಾಂತದ ಪ್ರಮೇಯಗಳು. ಆದರೆ ಅನ್ವಯಿಸಿಕೊಂಡಿದ್ದರಲ್ಲಿ ಎರಡೂ ಕೂಟಗಳಿಗೆ ವ್ಯತ್ಯಾಸವಿದೆ.

ಎರಡೂ ಕೂಟಗಳಲ್ಲಿ ಮಧ್ವಾಚಾರ್ಯರು ಹೇಳಿದ "ಸಾಧನೆಗೆ ಪೂರ್ವಾಂಗವಾಗಿ ಮಾಹಾತ್ಮ್ಯಜ್ಞಾನ, ಉತ್ತರಾಂಗವಾಗಿ ಭಕ್ತಿ, ಪ್ರಸಾದಗಳು" ಎಂಬ ತತ್ವವು ಸಮ್ಮತವೇ. ವ್ಯಾಸಕೂಟದವರಿಗೆ ಉಪನಿಷತ್ತು, ಬ್ರಹ್ಮಸೂತ್ರಗಳ ಅವಲಂಬನೆ, ವೇದವೇದಾಂತಗಳ ಪ್ರಸಕ್ತಿ ಹೆಚ್ಚೆನಿಸಿತು. ದಾಸಕೂಟದವರಿಗೆ ಪಾಂಚರಾತ್ರಾಗಮ, ತಂತ್ರಸಾರಗಳ ಅವಲಂಬನೆ ಇಷ್ಟವಾಯಿತು. ಮಧ್ವಾಚಾರ್ಯರು ಭಾಷ್ಯ ಬರೆದ ಭಾಗವತ, ಮಹಾಭಾರತ, ಮೂಲರಾಮಾಯಣ, ವೈಷ್ಣವ ಪುರಾಣಗಳ ಪ್ರಾಮಾಣ್ಯವನ್ನು ವ್ಯಾಸಕೂಟದವರು ಒಪ್ಪುತ್ತಾರೆ, ಆದರೆ ಇವುಗಳೇ ಮೇಲೆಂದು, ಮಿಗಿಲೆಂದು ಹೆಗಲಿಗೇರಿಸಿಕೊಳ್ಳುವುದಿಲ್ಲ. ಅವರಿಗೆ ವೇದವ್ಯಾಸರ ಸೂತ್ರವೇ ಪ್ರಮಾಣ. ದ್ವೈತ ಮತವು ವೇದವ್ಯಾಸರ ಮತ ಎಂಬ ಶ್ರದ್ಧೆಯುಳ್ಳ, ವೈದಿಕಾಚಾರ ನಿಷ್ಠರಾದ ಪಂಡಿತರು ಅವರು. ವೇದವ್ಯಾಸರನ್ನು ದ್ವೈತಮತದ ಮೂಲಕ ಅರಿತೆವೆಂಬುದಕ್ಕಾಗಿಯೇ ಅವರು ತಮ್ಮನ್ನು ವ್ಯಾಸಕೂಟದವರೆಂದು ನಿರ್ದೇಶಿಸಿಕೊಳ್ಳುವವರು.

ಆದರೆ ದಾಸಕೂಟದವರಿಗೆ ಮಧ್ವಾಚಾರ್ಯರ "ಶ್ರವಣಂ ಮನನಂ ಚೈವ ಧ್ಯಾನಂ ಭಕ್ತಿಸ್ತಥಾ ದೃಶಿಃ" ಎಂಬ ಸೊಲ್ಲೇ ಬಹು ಮುಖ್ಯವಾಯಿತು. ಇದನ್ನೇ ವಾದಿರಾಜಯತಿಗಳು ಹರಿದಾಸರಾಗಿ ಹೇಳಿದ್ದಾರೆ: "ಆವನ ಶ್ರವಣ ಮನನ ನಿಧಿ ಧ್ಯಾಸನ ಆ ವಿಷ್ಣುವಿನ ಭಕ್ತಿ ಮಹಾಪ್ರಸಾದಂಗಳು ಕೈವಲ್ಯ ಪದಕೆ ಇಕ್ಕಿದ ನಿಚ್ಚಣಿಕೆ" ಇಂದ್ರಿಯ ನಿಗ್ರಹ, ಗುರೂಪದೇಶ, ವಿರಕ್ತಿ, ಸಾಧುಸಜ್ಜನ ಸಂಗ, ಹರಿಸ್ಮರಣೆ, ಹರಿಕಥಾಶ್ರವಣ, ಮನಶ್ಶುದ್ಧಿ, ಹಂಸೋಪಾಸನೆ, ಬಿಂಬಸಾಕ್ಷಾತ್ಕಾರಗಳ ಯೋಗಮಾರ್ಗವೇ ಹರಿದಾಸರಿಗೆ ಪ್ರಿಯವಾದ ಪಂಥವೆನಿಸಿಕೊಂಡಿತು. ಬಿಂಬೋಪಾಸನೆಯಲ್ಲಿ ಜೀವನ ದಾಸ್ಯಭಾವವೇ ಮುಖ್ಯವಾದುದರಿಂದ ಇವರದ್ದು "ದಾಸಕೂಟ" ಎಂದೆನ್ನಿಸಿಕೊಳ್ಳತೊಡಗಿತು.

ಮಧ್ವಾಚಾರ್ಯರ 'ತಂತ್ರಸಾರ ಸಂಗ್ರಹ' ಕೃತಿಯ ಪ್ರಭಾವವನ್ನು ವ್ಯಾಸತೀರ್ಥರ ಕನ್ನಡ ಕೃತಿಗಳಲ್ಲೂ, ಪುರಂದರದಾಸರ ಕೆಲವು ಕೃತಿಗಳಲ್ಲೂ ಕಾಣಬಹುದಾಗಿದೆ. ಆದರೆ ಈ ಇಬ್ಬರ ಕೃತಿಗಳಲ್ಲೂ ಈ ಪ್ರಭಾವವು ಪ್ರಕಟವಾಗಿ ತೋರಿಕೊಳ್ಳುವುದಿಲ್ಲ. ವಾದಿರಾಜರು, ಮುಂದಿನ ಶತಕದಲ್ಲಿ ಬಂದ ವಿಜಯದಾಸರು ಮುಂತಾದವರು

ತಮ್ಮ ಕೃತಿಗಳಲ್ಲಿ ಈ ಪ್ರಭಾವವನ್ನು ಸ್ಪಷ್ಟವಾಗಿ ಕಾಣಗೊಟ್ಟಿದ್ದಾರೆ. ಪುರಂದರದಾಸರ ಕಾಲದಲ್ಲಿನ ಹರಿದಾಸ ಸಾಹಿತ್ಯದಲ್ಲಿ ಮಾಧ್ವ ಸಿದ್ಧಾಂತದ ವಿಚಾರಗಳೇ ಪ್ರಮುಖ ಪ್ರತಿಪಾದನೆಯಾಗಿ ಬಂದಿಲ್ಲ. ಪುರಂದರದಾಸರಾಗಲೀ, ಕನಕದಾಸರಾಗಲೀ ಇವರಿಬ್ಬರ ಗುರುಗಳಾದ ವ್ಯಾಸತೀರ್ಥರೇ ಆಗಲಿ ಮಾನವಕೋಟಿಯ ಉದ್ಧಾರವೆಂಬ ವಿಸ್ತಾರಭಾವನೆಯಲ್ಲಿ ಕೃತಿಗಳನ್ನು ರಚಿಸಿದರೇ ವಿನಹಾ ಯಾವುದೇ ಮತೀಯ ತಾತ್ತ್ವಿಕ ನಿಲುವುಗಳಿಗೆ ಬದ್ಧರಾಗಿ ಕನ್ನಡ ಹರಿದಾಸ ಸಾಹಿತ್ಯವನ್ನು ಬಯಲಿಗೆ ತಂದವರಲ್ಲ. ಮಾನವತೆಯ, ನೈತಿಕತೆಯ ಭಕ್ತಿಯ ಉಪದೇಶದಲ್ಲಿ ಮಧ್ವ ತತ್ತ್ವವು ಹೊಂದಿಕೆಯಾಗಿ ಅಲ್ಲಲ್ಲಿ ಬಂದಿತು. ಮಧ್ವತತ್ತ್ವಗಳನ್ನೇ ಮೇಲಾಟ ನಡೆಸಲು ಕೃತಿರಚನೆ ಮಾಡಿದ್ದಲ್ಲ. ಆದರೆ. ಶತಮಾನದ ಅಂತರದಲ್ಲಿ ಮುಂದೆ ಪ್ರಕಟವಾದ ದಾಸಸಾಹಿತ್ಯಕ್ಕೆ ಮಾಧ್ವತತ್ತ್ವಗಳೇ ಮುಖ್ಯವಾದ ವಿಚಾರಗಳಾದವು ಎನ್ನುವುದನ್ನು ಮುಂದೆ ಕಾಣಬಹುದು.

ದಾಸಕೂಟದವರು ಈ ರೀತಿ ಮಧ್ವ ತತ್ತ್ವಗಳಲ್ಲಿನ ತಿರುಳುಗಳಾದ "ದೇವರೇ ಈಶ, ಮನುಷ್ಯನು ದಾಸ. ಜಗತ್ತು ಮಿಥ್ಯೆ ಅಲ್ಲ, ಸತ್ಯ. ಸಂಸಾರವು ಜೀವಪರಿಪಾಕಕ್ಕೆ ಅಗತ್ಯ. ಅನುಭವಕ್ಕೆ ಒದಗುವುದೇ ನಿಜವಾದ ದೈವಾನುಸಂಧಾನ, ಮುಕ್ತಿಗೆ ಭಕ್ತಿಯೇ ಸಾಧನ" ಎಂಬಂಥ ಪ್ರಮೇಯಗಳನ್ನೆಲ್ಲ ಒಪ್ಪಿಕೊಂಡು ತಮ್ಮ ಕೃತಿಗಳಲ್ಲಿ ತಂದರು. ಮಾಧ್ವ ಸಿದ್ಧಾಂತದ ಮುಖ್ಯ ಪ್ರಮೇಯಗಳು ಭಾಗವತ ಮನೋಧರ್ಮದವುಗಳಾಗಿದ್ದು ದಾಸರುಗಳಿಗೆ ಅದು ಹೆಚ್ಚು ಒಗ್ಗಿತು.

ಹರಿಭಕ್ತಿ ಪ್ರಚಾರವೇ ದಾಸಕೂಟದ ಮುಖ್ಯ ಉದ್ದೇಶ. ಇದು ವ್ಯಾಸತೀರ್ಥರಿಂದ ಹರಿದಾಸರಿಗೆ ದೊರೆತ ದೀಕ್ಷೆ. ಮಧ್ವಾಚಾರ್ಯರು ಕೂಡ "ಹರಿಸರ್ವೋತ್ತಮತ್ವವನ್ನು ಎಡಬಿಡದೆ ಜನರಲ್ಲಿ ಹರಡಿರಿ"[*೪] ಎಂಬ ಆದೇಶವನ್ನು ತಮ್ಮ ಯತಿಶಿಷ್ಯರುಗಳಿಗೆ ನೀಡಿದ್ದರು. ವ್ಯಾಸತೀರ್ಥರು ತಮ್ಮ ಪರಂಪರೆಯ ಮೂಲಗುರುಗಳಾದ ಮಧ್ವರ ಈ ಆದೇಶವನ್ನು ತಮ್ಮ ನಾಡಿನ ಸಾಮಾನ್ಯರಿಗಾಗಿ, ಕನ್ನಡದಲ್ಲಿ ಈ ಆಂದೋಳನವನ್ನು ಪುರಂದರ, ಕನಕದಾಸರ ಮೂಲಕ ಹರಿಯಬಿಟ್ಟು ಪಾಲಿಸಿದರು. ಸ್ವತಃ ಮಧ್ವಾಚಾರ್ಯರೇ ಕನ್ನಡನಾಡಿನವರು, ಕನ್ನಡಿಗರು. ಆದರೆ ಅವರೂ ಸಂಸ್ಕೃತವೊಂದನ್ನೆ ನೆಮ್ಮಿದ ಯತಿಗಳಾದರೇ ವಿನಹಾ ಕನ್ನಡದಲ್ಲಿ ಅವರು ರಚಿಸಿದ್ದಾರೆನ್ನಲು ಕೃತಿಗಳಾವುವೂ ಇದುವರೆಗೆ ಲಭ್ಯವಿಲ್ಲ. ಆದರೆ ಶ್ರೀಪಾದರಾಜರು ಮತ್ತು ವ್ಯಾಸತೀರ್ಥರು ಹಾಗೂ ಇವರಿಂದ ಪ್ರೇರಿತವಾದ ವಾದಿರಾಜಯತಿಗಳು, ಪುರಂದರದಾಸ, ಕನಕದಾಸರೇ ಮುಂತಾದ ದಾಸಕೂಟದವರು ಕನ್ನಡದಲ್ಲಿ ಈ ಕೆಲಸ ಮಾಡಿದರು. ಸುಸಂಸ್ಕೃತಿಯೊಂದನ್ನು ಕನ್ನಡನಾಡಿನಲ್ಲಿ ಕಟ್ಟಿ ಬೆಳೆಯಿಸಿದರು. ಭಕ್ತಿ ಮನೋಧರ್ಮವನ್ನು ಕನ್ನಡಿಗರ ಹೃದಯದಲ್ಲಿ ನೆಟ್ಟು ಬೆಳೆಸುವ ಕೃಷಿಕರಾದರು. ಬೇರೆ ಬೇರೆ ಮಠಗಳ ಉಳಿದ ಯತಿಗಳಿಗಿಂತ ಪ್ರಭಾವಶಾಲಿಯಾಗಿ ಈ ದಾಸಕೂಟದವರು ಈ ಕೆಲಸವನ್ನು ಮಾಡಿ ಧನ್ಯರಾದರು, ಮಾನ್ಯರಾದರು.

ಅಂದಿನ ಜನರಿಗೆ ವಿಶ್ವಾಸವಿದ್ದ, ಪ್ರೀತಿಯಿದ್ದ ಪುರಾಣಗಳಲ್ಲಿ ಉಕ್ತವಾಗಿದ್ದ ವಿಚಾರಗಳನ್ನು, ದೃಷ್ಟಾಂತ ಕಥೆಗಳನ್ನು ತಮ್ಮ ಹಾಡುಗಳ ಮೂಲಕ ಜನರಿಗೆ ಮತ್ತೆ ಮತ್ತೆ ನೆನಪಿಸಿ ಹರಿಭಕ್ತಿ ಪ್ರಚಾರ ಗೈಯುತ್ತಿದ್ದವರು ಹರಿದಾಸರು. ಪ್ರಹ್ಲಾದ, ಧ್ರುವ, ಅಜಾಮಿಳ, ದ್ರೌಪದಿ, ಅಕ್ರೂರ, ಬಲಿ, ಗಜೇಂದ್ರ, ವಿದುರ, ವಾಲ್ಮೀಕಿ ಹೀಗೆ ಅನೇಕಾನೇಕ ಕಥೆಗಳನ್ನು ಕೀರ್ತನೆಗಳ ಮೂಲಕ ಹಾಡುತ್ತ ಭಗವದ್‌ಕೃಪೆ ಎಂಥದ್ದೆನ್ನುವುದನ್ನು ಜನರಿಗೆ ಮನದಟ್ಟು ಮಾಡಿಸುವುದೂ ಹರಿದಾಸರ ಸಂಸ್ಕೃತಿ. ಜನರು ತಮ್ಮ ಸಾಮಾನ್ಯ ಬದುಕಿನೆಡೆಯಲ್ಲಿ ಇಂಥದ್ದನ್ನು ಕೇಳಿ ಆನಂದವಶರಾಗಿ ಭಗವಂತನಲ್ಲಿ ಭಕ್ತಿ ತಾಳುವುದಕ್ಕೆ ಈ ಪರಿಯ ಸಂಸ್ಕೃತಿ ನೆರವಾಗುತ್ತಿತ್ತು. ತಾವು ಹೇಳುವ ನೀತಿತತ್ತ್ವಗಳಿಗೆ ಪುರಾಣಕಥೆಗಳಿಂದ ಸಮರ್ಥನೆ ಮಾಡಿಕೊಳ್ಳಲೂ ಇದರಿಂದ ಸಹಾಯವಾಗುತ್ತಿತ್ತು. ಹೀಗೆ ಹರಿದಾಸರುಗಳ ಸಾಂಸ್ಕೃತಿಕ ಪರಿಕಲ್ಪನೆಯು ಪುರಾಣಸಂಸ್ಕೃತಿಯನ್ನು ಅಪ್ಪಿಕೊಂಡಿದ್ದರಿಂದ, ಒಪ್ಪಿಕೊಂಡಿದ್ದರಿಂದ ಉಂಟಾದುದು. ವೈದಿಕ ಸಂಸ್ಕೃತಿಗಿಂತ ಮಿಗಿಲಾಗಿ ಪುರಾಣಸಂಸ್ಕೃತಿಯು ದಾಸಕೂಟದವರ ಮನೋದರ್ಶನಕ್ಕೆ ಮಿಗಿಲಾದ ಆಪ್ತತೆ ಮೂಡಿಸಿತು. ಹರಿಭಕ್ತಿಯನ್ನು ಪ್ರಚೋದಿಸಿತು.

ಪಂಢರಾಪುರದ ವಿಠ್ಠಲ ದೇವರಿಗೂ ಹರಿದಾಸರುಗಳಿಗೂ ಪ್ರೀತಿಭಾವ ಸಂಬಂಧವು ಏರ್ಪಟ್ಟಿದೆ. ವಿಠ್ಠಲ ದೇವರು ಕನ್ನಡದವನೆಂದು ಮರಾಠೀಸಂತರ ಹೇಳಿಕೆಯೇ ಇದೆ. ವ್ಯಾಸತೀರ್ಥರೂ ಶ್ರೀಪಾದರಾಜರೂ ಈ ವಿಠ್ಠಲನ ಭಕ್ತರೇ. ದಾಸಕೂಟದವರ ಕಾಲದಲ್ಲಿ, ಎಂದರೆ ಕೃಷ್ಣದೇವರಾಯ ಅರಸನ ಕಾಲದಲ್ಲಿ ವಿಜಯ ವಿಠ್ಠಲನ ಗುಡಿಯು ಹಂಪಿಯಲ್ಲಿ ನಿರ್ಮಾಣವಾಗಿದ್ದು ಪಂಡರಪುರದ ವಿಠ್ಠಲಮೂರ್ತಿಯು ಇಲ್ಲೇ ಪ್ರತಿಷ್ಠಿತವಾಗಿತ್ತು.(ನಂತರ ಅರಸನು ಇದನ್ನು ಪಂಢರಾಪುರಕ್ಕೆ ಕಳುಹಿಸಿಕೊಟ್ಟನೆಂದು ಪ್ರತೀತಿ ಇದೆ) ವಾದಿರಾಜ ಸ್ವಾಮಿಗಳು ತಮ್ಮ ತೀರ್ಥಪ್ರಬಂಧದಲ್ಲಿ ವಿಠ್ಠಲನ ಮೂರ್ತಿ ಹಂಪಿಯ ವಿಜಯವಿಠ್ಠಲ ಎನ್ನುವ ಗುಡಿಯಲ್ಲಿದೆ ಎಂದೇ ಉಲ್ಲೇಖಿಸಿದ್ದಾರೆ. ಶ್ರೀಪಾದರಾಜರು ಕೂಡ ತಮ್ಮ ಅಂಕಿತ "ರಂಗವಿಠ್ಠಲ"ನೆಂದರು. ವ್ಯಾಸತೀರ್ಥರು ಸ್ವತಃ ತಾವು ವಿಠಲಾಂಕಿತರಾಗದಿದ್ದರೂ ತಾವು ಹರಿದಾಸದೀಕ್ಷೆ ಕೊಟ್ಟ ಪುರಂದರದಾಸರನ್ನು ಪುರಂದರ ವಿಠಲಾಂಕಿತರನ್ನಾಗಿಸಿದರು. ಮುಂದಿನ ಶತಮಾನಗಳಲ್ಲಿ ಬಂದ ಅನೇಕ ಹರಿದಾಸರುಗಳು ಈ ಪರಂಪರೆಯನ್ನು ಮುಂದುವರೆಸಿಕೊಂಡು ಹರಿಯನ್ನು ಬಗೆಬಗೆಯಲ್ಲಿ ಅನುಸಂಧಾನ ಮಾಡಿದ ವಿಠಲಾಂಕಿತರೇ ಆದರು.

"ವಿಠ್ಠಲ" ವಿಷ್ಣುವಿನ ಬಾಲಕ ರೂಪದ ಹೆಸರು. ಹರಿದಾಸರು ವಿಠ್ಠಲನನ್ನೂ ತುಂಬ ಭಕ್ತಿಯಿಂದ ನೆನೆದುಕೊಂಡರು, ಹಾಡಿಹೊಗಳಿದರು. ಅಂತೆಯೇ 'ಶ್ರೀನಿವಾಸ' ಅಥವಾ 'ವೆಂಕಟೇಶ' ವಿಷ್ಣುವಿನ ಗೃಹಸ್ಥ ರೂಪದ ಹೆಸರು. ಈ ದೇವರೂ ಹರಿದಾಸರುಗಳಿಗೆ ತುಂಬ ಪ್ರೀತಿಯದು, ಅನುಸಂಧಾನ ಮಾಡಲು ಸೂಕ್ತವಾದ ರೂಪ ಇವನೂ ಕೂಡ. ಉಡುಪಿ, ತಿರುಪತಿ, ಪಂಢರಾಪುರದ ಈ ಮೂರು ವಿಷ್ಣುವಿನ ರೂಪಗಳು ಹರಿದಾಸರಿಗೆ ಬಲು ಆಪ್ತವಾದವು. ದಾಸಕೂಟದವರಿಗೆ ಒದಗಿ ಬಂದ ದೇವತಾಮೂರ್ತಿಗಳಿವು. ಉಡುಪಿ ಹೇಗೂ ಸರಿ, ಉಳಿದೆರಡು ಕ್ಷೇತ್ರಗಳೂ ಮೊದಲು ಕನ್ನಡನಾಡಿನ ವ್ಯಾಪ್ತಿಗೇ ಒಳಪಟ್ಟ ಪ್ರದೇಶಗಳಾಗಿದ್ದವು.

ವ್ಯಾವಹಾರಿಕ ಬದುಕಿನ ಆಸೆ ಆಕಾಂಕ್ಷೆಗಳಿಗೆಲ್ಲ ವಿರಾಮ, ವಿದಾಯ ಹೇಳಿ, ಹರಿನಾಮ ಸಂಕೀರ್ತನದ ಅವಲಂಬನೆಯೊಂದನ್ನೆ ನಂಬಿ ಸುಸಂಸ್ಕೃತ ಸಮಾಜವನ್ನು ಸೃಷ್ಠಿ ಮಾಡುವ ಜವಾಬ್ದಾರಿ ಹೊತ್ತುಕೊಂಡ ಹರಿದಾಸರದು ಕಷ್ಟಸಾಧ್ಯವಾದ ಹಾದಿ. ಸಾಮಾನ್ಯ ಮಾನವನಿಗೆ ಆ ಹಾದಿ ಹಿಡಿದು ಸಾಧನೆ ಮಾಡುವುದು ಸುಲಭಸಾಧ್ಯವೇನಲ್ಲ. ಹರಿದಾಸರೆಂದರೆ ಹೊಟ್ಟೆಪಾಡಿಗಾಗಿ ಹಾಡಿಕೊಂಡು ಹೋಗುವವರೆಂದು ಎಂದಿಗೂ ಭಾವಿಸಲಾಗದು. ಅವರ ಹಾಗೆ ಸಂಗೀತದ ಎಲ್ಲ ಪ್ರಾಕಾರಗಳಲ್ಲಿಯೂ ಪರಿಪೂರ್ಣತೆ ಪಡೆದು ಕೊಂಡು, ಯಾವಗಳಿಗೆಗೆಂದರೆ ಆಗ ಆ ರಾಗಗಳನ್ನು ದುಡಿಸಿಕೊಳ್ಳುವ, ಇದ್ದಲ್ಲಿಯೇ ಸಂಧರ್ಭಕ್ಕೆ ಅನುಸಾರವಾಗಿ ಇದ್ದಕ್ಕಿದ್ದಂತೆ ಸಾಹಿತ್ಯ ಸೃಷ್ಠಿಸಿ ಆ ರಾಗಗಳಲ್ಲಿ ಹಾಡುವ ಅವರ ಪ್ರತಿಭೆ, ಜ್ಞಾನ, ತಿಳುವಳಿಕೆ ತುಂಬಾ ಅಗಾಧವಾದುದು. ಕೀರ್ತನವೊಂದರ ಪಲ್ಲವಿ, ಅನುಪಲ್ಲವಿಗಳಲ್ಲೇ ಇಡೀ ವೇದಾಂತದ ಸಾರವನ್ನು ಸ್ವಾರಸ್ಯವಾಗಿ ಭಟ್ಟಿ ಇಳಿಸಬಲ್ಲ ಸರಸ್ವತಿಯ ಅವತಾರವೇ ಆಗಿರಬೇಕು ಅವರ ಅಂತರಂಗ. ಇಷ್ಟಲ್ಲದೆ ನರ್ತನಪಟುಗಳೂ ಆಗಿದ್ದು ಯಾವ ತಾಳಕ್ಕಾದರೂ, ಯಾವ ಕಾಲಪ್ರಮಾಣದಲ್ಲಾದರೂ ಲಯಖಚಿತವಾಗಿ ಹೆಜ್ಜೆ ಹಾಕಿ ನರ್ತಿಸುವ ಅಸಾಧಾರಣ ನಾಟ್ಯಪಟುಗಳು. ಇದು ನಿಜವಾಗಿಯೂ ವಿಶಿಷ್ಟವಾದ, ಅಪೂರ್ವ, ಅಪರೂಪದ ಸಂಸ್ಕೃತಿ.

ಇಂದಿನ ಅನೇಕ ಸಂಗೀತ ವಿದ್ವಾಂಸರುಗಳಿಗೇ ಸವಾಲಾಗಿ ಉಳಿದಿರುವ ಹರಿದಾಸರ ಕಲ್ಪನೆಯ ಕುಸುಮ ಸುಳಾದಿಗಳು ಬೇಕಷ್ಟಿವೆ. ಪುರಂದರದಾಸರು ಆಗ ರಚಿಸಿ ಹಾಡುತ್ತಿದ್ದ ಮಧ್ಯಮ ಕಾಲದ ಖಂಡ ಛಾಪು, ಮಿಶ್ರ ಛಾಪು ಮುಂತಾದವುಗಳ ಲಯಸಾಮ್ರಾಜ್ಯವು ಅವರ ಕರ, ಕಂಠಗಳಲ್ಲೇ ಇದ್ದಿತ್ತು ಎನ್ನುವುದು ಅಚ್ಚರಿ ಹುಟ್ಟಿಸುವ ಸಂಗತಿ. "ಇಂದಿನವರೆಗೂ ಕೂಡ ಯಾವ ವಿದ್ವಾಂಸರೂ ಸುಳಾದಿಗಳನ್ನು ಪರಿಣಾಮಕಾರಿಯಾಗಿ, ಮನೋರಂಜನೀಯವಾಗಿ ಹಾಡಿ ಜೀರ್ಣಿಸಿಕೊಂಡಿರುವುದು ಇಲ್ಲವೇ ಇಲ್ಲ. ಏಳು ಚರಣಗಳನ್ನು, ಸಪ್ತಸುಳಾದಿ ತಾಳಗಳಲ್ಲಿ ಕೇವಲ ಚಿಟಿಕೆಯಿಂದಲೇ ತಾಳವನ್ನು ಹಾಕುತ್ತಾ ಹೇಗೆ ನಿರ್ವಹಿಸುತ್ತಿದ್ದರು ಎಂದು ಊಹಿಸಿಕೊಳ್ಳುವುದೂ ಕಷ್ಟ" ಎಂದು ಇಂದಿನ ನಮ್ಮ ಕಾಲದ 'ಗಾನಕಲಾಭೂಷಣ' ಬಿರುದಾಂಕಿತರಾದ ವಿದ್ವಾನ್ ಆರ್.ಕೆ.ಪದ್ಮನಾಭ ಅವರು ಅಭಿಪ್ರಾಯ ಪಡುತ್ತಾರೆ.

ಉಗಾಭೋಗ ರಚನೆಗಳು ಲಯರಹಿತವಾಗಿದ್ದು ಸ್ವತಂತ್ರತೆಯಲ್ಲಿ ಹಾಡಿಕೊಳ್ಳುವಂಥ ಪ್ರಾಕಾರ. ಇವುಗಳ ಮೂಲಕ ಹರಿದಾಸರು ಅನೇಕ ರೀತಿಯ ಸಮಾಜಸುಧಾರಣೆಯ ಸಂದೇಶ, ಹರಿಭಕ್ತಿ, ಹರಿನಾಮಸ್ಮರಣೆಯ ಮಹತ್ತ್ವವನ್ನು ಸಾರಿದ್ದಾರೆ. ಈ ವಿಶಿಷ್ಟ ಗೇಯ ಪ್ರಕಾರವು ಅಂದಿನ ಹರಿದಾಸರ ವಿಶೇಷ ಕಲ್ಪನಾ ಸಾಮರ್ಥ್ಯದ ಪ್ರತೀಕವಾಗಿ ಉಳಿದು ಬಂದಿದೆ.

ವೇದವೇದಾಂತಗಳಲ್ಲಿ ಪ್ರಾವೀಣ್ಯತೆಯುಳ್ಳವರೂ, ಗಾಯನ ಕಲೆಯಲ್ಲಿ ನಿಷ್ಣಾತರೂ ಆಗಿದ್ದ ಹರಿದಾಸರು ಅಂದಿನ ಸಮಾಜಕ್ಕೆ ಜ್ಞಾನದೀವಟಿಗೆಯನ್ನು ಹಿಡಿದಂಥ ನಾದಯೋಗಿಗಳೂ ಆಗಿದ್ದರು.

ವ್ಯಾಸಕೂಟ ಮತ್ತು ದಾಸಕೂಟದ ಸಾಮಾಜಿಕ ವಿನ್ಯಾಸ ಮತ್ತು ಇತಿಮಿತಿಗಳ ಸ್ವರೂಪ

ವ್ಯಾಸಕೂಟ ಮತ್ತು ದಾಸಕೂಟಗಳು ತಲೆ ಎತ್ತಿಕೊಂಡಿದ್ದು ವಿಜಯನಗರದ ಶ್ರೀಕೃಷ್ಣದೇವರಾಯನ ಕಾಲದಲ್ಲಿ. ಕನ್ನಡ ನಾಡು ರಾಜಕೀಯವಾಗಿಯೂ. ಸಾಂಸ್ಕೃತಿಕವಾಗಿಯೂ ಅತ್ಯಂತ ಉಚ್ಛ್ರಾಯ ಸ್ಥಿತಿಗೆ ಅಡರಿದ್ದ ಅವಧಿ. ದೇಶವಿದೇಶಗಳಿಂದ ವ್ಯಾಪಾರಕ್ಕಾಗಿ ಬಂದವರು ಅನೇಕ ಮಂದಿ. ಅಂಥವರಲ್ಲಿ ಕೆಲವರು ರಾಜದೂತರು, ರಾಯಭಾರಿಗಳು ತಾವು ಕಂಡ ವಿಜಯನಗರದ ಚಿತ್ರಣವನ್ನು ದಾಖಲಿಸಿದ್ದಾರೆ. ಆ ಕಾಲದಲ್ಲಿ ರಚಿತಗೊಂಡ ಅನೇಕ ಸಂಸ್ಕೃತ, ಕನ್ನಡಗ್ರಂಥಗಳೂ ಲಭ್ಯವಿದ್ದು ಅಂದಿನ ಸಮಕಾಲೀನ ವಿಷಯಗಳನ್ನು ತಿಳಿಸುತ್ತವೆ. ಇವೆಲ್ಲವುಗಳಿಂದ ಅಂದಿನ ಜನಜೀವನದ ಸಾಮಾಜಿಕ ವಿನ್ಯಾಸ ಹೇಗಿತ್ತೆನ್ನುವುದನ್ನು ಅರಿಯಬಹುದಾಗಿದೆ.

ವ್ಯಾಸತೀರ್ಥರಿಂದ ನಿಯೋಜಿತಗೊಂಡ, ಪುರಂದರದಾಸರ ನೇತೃತ್ವದಲ್ಲಿ ಮುನ್ನಡೆದ ದಾಸಕೂಟದವರು ಸಮಾಜ ಪರಿಸರದಲ್ಲೆ ಉಳಿದು ಹರಿಭಕ್ತಿ ಪ್ರಚಾರದಲ್ಲಿ, ಜನರನ್ನು ತಿದ್ದುವುದರಲ್ಲಿ ತೊಡಗಿಕೊಂಡವರು. ಸಾಮಾನ್ಯ ಜನರಿಗೆ ಇಂಥ ಮಾರ್ಗದರ್ಶನದ ಅಗತ್ಯವಿದೆ ಎನ್ನುವುದನ್ನು ಮನಗಂಡವರು ವ್ಯಾಸತೀರ್ಥರು. ಹೀಗಾಗಿ ಜನರ ನಡುವೆಯೇ ಓಡಾಡಿಕೊಂಡಿದ್ದು, ಆಧ್ಯಾತ್ಮ, ನೀತಿತತ್ತ್ವ, ಧಾರ್ಮಿಕ ಪ್ರಜ್ಞೆಯನ್ನು ಜನರಲ್ಲಿ ಬಿತ್ತಿಕೊಂಡು ಸಮಾಜದ ಉದ್ಧಾರಕರಾಗಿರಲೆಂದೇ ಹರಿದಾಸರುಗಳಿಗೆ ಊಂಛವೃತ್ತಿಯನ್ನು ಅವರು ವಿಧಿಸಿದ್ದಿರಬಹುದು. ಊರಿನ ಅರಸನಿರಲಿ, ಮಠದ ಸ್ವಾಮಿಯೇ ಆಗಲಿ, ಶ್ರೀಮಂತ ವ್ಯಾಪಾರಿಯೇ ಇರಲಿ, ಹರಿದಾಸರಾದವರು ಈ ಯಾವ 'ನರ'ನ ಸೇವೆಯಲ್ಲೂ ತೊಡಗಬಾರದು, ಹರಿಸೇವೆಯೊಂದೇ ಹರಿದಾಸರಿಗೆ ಮಾನ್ಯ, ನರಸೇವೆಯಲ್ಲ. ಇಂಥ ಬಾಳಿನ ದೀಕ್ಷೆ ತೆಗೆದುಕೊಂಡ ಹರಿದಾಸರನ್ನು, ಅವರ ಹೊಟ್ಟೆಯ ಪಾಡನ್ನು ನಾಡಿನ ಜನರೇ, ಗೃಹಸ್ಥರೇ, ಗೌರವಯುಕ್ತವಾಗಿ ನೋಡಿಕೊಳ್ಳಬೇಕು. ನೀತಿತತ್ತ್ವ, ಹರಿಭಕ್ತಿಯನ್ನು ಹಾಡುಗಳ ಮೂಲ ಬೋಧಿಸುತ್ತ ಓಡಾಡುವ ಹರಿದಾಸರನ್ನು ಮನ್ನಣೆಯಿತ್ತು ನೋಡಿಕೊಳ್ಳಬೇಕಾದುದು ಗೃಹಸ್ಥರ ಕರ್ತವ್ಯ ಕೂಡ. ಹರಿದಾಸರು ಕೂಡ ನಾಳೆಗೆಂದು ಕೂಡಿಡದೆ ಇಂದಿನ ಪಾಡನ್ನು ಕಳೆಯುವಷ್ಟರ ಮಟ್ಟಿಗೆ ಊಂಛವೃತ್ತಿಯಲ್ಲಿದ್ದು ಬಾಳಬೇಕು.

ಇಂಥ ಇತಿಮಿತಿಗಳ ವೈರಾಗ್ಯಶಾಲಿಗಳಾಗಿ ಹರಿದಾಸರು ಸಮಾಜದ ಜನರೊಂದಿಗೆ ಉಳಿದರು. ಜನರೊಂದಿಗೆ ಬೆರೆತರು. ಹರಿಪಾರಮ್ಯ, ಹರಿಸೇವೆ, ಹರಿಭಕುತಿಗಳನ್ನು ಜನರಿಗೆ ಬೋಧಿಸಿದರು. ಯಾವ ಮಠದಲ್ಲೂ ಹರಿದಾಸರು ನೆಲೆನಿಂತವರಲ್ಲ. ವ್ಯಾಸತೀರ್ಥರ ಶಿಷ್ಯರೆನಿಸಿದ್ದೂ ವ್ಯಾಸತೀರ್ಥರ ಮಠವೇ ತಮ್ಮ ಆಶ್ರಯದಾಣವೆಂದು ಭಾವಿಸಿ ಅಲ್ಲಿಯೇ ಅಂಟಿಕೊಂಡವರಲ್ಲ. ಇದಕ್ಕೆ ವಿರುದ್ಧವೆನ್ನಬೇಕಾದ ರೀತಿಯಲ್ಲಿ ವ್ಯಾಸಕೂಟದ ಪಂಡಿತರು ಮಠಕ್ಕೇ ಅಂಟಿಕೊಂಡವರು. ಸಮಾಜದ ಜನರಿಂದ ಇವರು ದೂರವೇ. ಪಂಡಿತ ಶಿಖಾಮಣಿಗಳೆನಿಸಿಕೊಂಡು ಮಠದ ಮಾನ್ಯತೆ, ಸನ್ಮಾನ, ಅರಸನಿಂದ ದೊರೆಯುವ ಗೌರವ ಬಿರುದುಗಳನ್ನೆ

ನೆಮ್ಮಿಕೊಂಡು ಅದಕ್ಕಾಗಿ ಶ್ರಮಿಸುವವರು. ತಮ್ಮ ಪಾಠ ಪ್ರವಚನಗಳಲ್ಲಿ "ಹರಿಯೇ ಸರ್ವೋತ್ತಮ" ಎಂದು ಓದಿ, ವಾದಿಸಿ ಕೋವಿದರೆನಿಸಿಕೊಂಡರೂ ವೈಯಕ್ತಿಕ ಬದುಕಿನಲ್ಲಿ ಮಾನವರಿಂದಲೇ ಉದರಪೋಷಣೆ ನಡೆಸಲು ಮುಂದಾಗುವವರು. ತಮ್ಮಗೇ ಒಂದು ಪ್ರತ್ಯೇಕವಾದ ಮಡಿವಂತಿಕೆಯ ಬೇಲಿ ನಿರ್ಮಿಸಿಕೊಂಡು ಬದುಕುವವರು. ಸಾಮಾಜಿಕವಾಗಿ ಮಠ, ದೇವಸ್ಥಾನಗಳನ್ನು ಬಿಟ್ಟು ಉಳಿದ ಸಾಮಾನ್ಯರ ಬದುಕಿನೆಡೆಗೆ ಅವರೆಂದೂ ದಿಟ್ಟಿಹರಿಯಿಸಿದವರಲ್ಲ.

ಎಲ್ಲ ವೈದಿಕರೂ, ಪಂಡಿತರೂ ಹೀಗೆಯೇ ಇದ್ದವರೆಂದು ಈ ಮಾತಿನ ಅರ್ಥವಲ್ಲ. ವ್ಯಾಸತೀರ್ಥರ ನೇರ ಶಿಷ್ಯರುಗಳಾದ ವಿಜಯೀಂದ್ರತೀರ್ಥ, ವಾದಿರಾಜರೇ ಮುಂತಾದ ಅನೇಕ ಪಂಡಿತ ಯತಿವರೇಣ್ಯರುಗಳು ಬೇರೆ ಬೇರೆ ಕಡೆಗಳಲ್ಲಿ ಮಠಾಧೀಶರಾಗಿ ಸಾಮಾನ್ಯರ ಉದ್ಧಾರದವರೆಗೂ ದಿಟ್ಟಿಯಿಟ್ಟು ಶ್ರಮಿಸಿದವರಿದ್ದಾರೆ. ಸಮಾಜದಲ್ಲಿನ ಇನ್ನಿತರ ಕೆಲವು ವೈದಿಕರಾದಿಯಾಗಿ ಮಠದ ಪಂಡಿತರೂ ಸೇರಿದಂತೆ ಅನೇಕರು ಸಾಮಾನ್ಯರ ಬಗ್ಗೆ ತೆರೆದ ಸಹೃದಯತೆ ಇರಿಸಿಕೊಂಡವರಿದ್ದಿರಬಹುದು. ಅಂದಿನ ಸಮಾಜದಲ್ಲಿ ವೈದಿಕರಿಗೆ ಚಕ್ರವರ್ತಿಯೇ ಆದಿಯಾಗಿ ಸಲ್ಲಿಸುವ ವಿಶೇಷ ಗೌರವ ಭಾಜನಗಳಿದ್ದವು. ನಿರ್ಮಲಚಾರಿತ್ರ್ಯ, ವಿದ್ವತ್ತು, ಸರಳತೆಯ ಜೀವನದಲ್ಲಿ ಲೋಕ ಸೇವಾಕಾರ್ಯಗಳಲ್ಲಿ ತೊಡಗಿಕೊಂಡಿದ್ದು, ಸಮಾಜದ ಹಾಗೂ ಸಾಮ್ರಾಜ್ಯದ ಉಚ್ಚಸ್ಥಾನಗಳೆನ್ನಿಸಿಕೊಂಡವುಗಳಲ್ಲಿ ನೆಲೆಸಿದವರಿದ್ದರು.

ಆದರೆ ಡಾಂಭಿಕತೆಯೇ ಮುಖ್ಯವಾಗಿ ಬೇರೂರಿದ ಅನೇಕ ಮಂದಿ ವೈದಿಕಪಂಡಿತರು ಮಠದಲ್ಲೆ ಗ್ರಾಸವಾಸಗಳನ್ನು ಹೊಂದಿಸಿಕೊಂಡು ತಮ್ಮಂಥ ಪಂಡಿತೋತ್ತಮರ ಗುಂಪನ್ನು ವ್ಯಾಸಕೂಟವೆಂದು ನಿರ್ದೇಶಿಸಿಕೊಂಡಿದ್ದವರು ಸಮಾಜ ವಿಮುಖರಾಗಿ, ಸಾಮಾನ್ಯರನ್ನು ಹತ್ತಿರಕ್ಕೆ ಬರಗೊಡದೆಯೆ ಬಾಳಿದರು. ದಾಸಕೂಟದವರ ಕೆಲಸವೆಲ್ಲ ಜನಸಾಮಾನ್ಯರ ನಡುವೆಯೇ. ಬೇರೆ ಬೇರೆ ಸ್ವಭಾವಗಳ, ಪ್ರವೃತ್ತಿ ವೃತ್ತಿಗಳ ಜನರ ನಡುವೆ ಇದ್ದು ಮಾತಾಡಿಸಿಕೊಂಡು, ಅವರ ಕಷ್ಟ ಸುಖಗಳಿಗೆ ಸ್ಪಂದಿಸಿ, ಹರಿಪ್ರೀತಿಯಲ್ಲಿ ಮನಸ್ಸು ನೆಡಲು ಪ್ರಚೋದಿಸುತ್ತ, ಹರಿಕರುಣೆಯ ಬಗ್ಗೆ ಭರವಸೆಯ ಸಂದೇಶ, ಸಾಂತ್ವನಗಳನ್ನು ತಿಳಿಹೇಳುತ್ತ ಭಕ್ತಿಯ ಮಹತ್ವವನ್ನು ಅವರಿಗೆ ಮನಗಾಣಿಸುತ್ತಿದ್ದವರು ಪುರಂದರದಾಸರೇ ಆದಿಯಾಗಿ ದಾಸಕೂಟದವರು. ಸಮಾಜದಲ್ಲಿ ಜನರು ನಾನಾ ತೊಂದರೆ ತಾಪತ್ರಯಗಳಲ್ಲಿ ಸಿಲುಕಿ ಕಷ್ಟ ಕಾರ್ಪಣ್ಯಗಳನ್ನು ಎದುರಿಸಬೇಕಾಗಿ ಬರುವಾಗ ಭಕ್ತಿಯ ಆಸರೆ ಪಡೆದು ದೇವರನ್ನು ನಂಬಿ ಬದುಕಿನಲ್ಲಿ ಸಮಾಧಾನ ಕಾಣಲಿ ಎಂದೇ ದಾಸಕೂಟದವರು ಪ್ರಯತ್ನಶೀಲರಾಗಿ ಊರೂರು ತಿರುಗುತ್ತ, ಕೇರಿ ಕೇರಿಗಳಲ್ಲಿ ಅಲೆದಾಡುತ್ತ, ಮನೆಮನೆಗಳ ಮುಂದೆ ನಿಂತು ಹರಿಪಾರಮ್ಯದ ಕೀರ್ತನೆಗಳನ್ನು ಹಾಡುತ್ತ, ಜನರನ್ನು ಸಾರ್ಥಕ ಬಾಳುವೆಯಲ್ಲಿ ಇರಲು ಹುರಿದುಂಬಿಸುತ್ತ ತಾವು ಸ್ವತಹ ವಿರಕ್ತರಾಗಿ ಸಂಸಾರದಲ್ಲಿ ಅಂಟದೆಯೂ ಅಂಟಿದಂತೆ ಬಾಳಿದರು.

ಸಾಮಾಜಿಕ ಪರಿವರ್ತನೆಗಾಗಿ ಹೀಗೆ ಶ್ರಮಿಸುತ್ತಿದ್ದ ಹರಿದಾಸರುಗಳಿಗೆ ಕೆಲವು ಹಲವು ಮನೆಗಳಲ್ಲಿ ಅಕ್ಕಿ, ಬೇಳೆ ಇತ್ಯಾದಿ, ಅಥವಾ ಸಾಂಬಾರು ದಿನಸಿ ಮುಂತಾದ ಧವಸದಾನ್ಯಗಳು ಜೋಳಿಗೆಗೆ ಲಭ್ಯವಾಗುತ್ತಿತ್ತು. "ನಾಳೆಗಿಡೆನು ಸಾಲದೆನ್ನೆನು" ಎಂಬ ನಿಯಮವನ್ನು ಪಾಲಿಸುತ್ತಿದ್ದ ದಾಸರುಗಳು ಯಾರಲ್ಲಿಯೂ ಬೇಡಿ ಕಾಡುವವರಲ್ಲ. ಯಾರ ಮನೆಯಲ್ಲೂ ಬೇಯಿಸಿದ ಆಹಾರಪದಾರ್ಥ ಸ್ವೀಕರಿಸುವವರಲ್ಲ. ಹಣ, ಉಡುಗೆ ಮತ್ತಿತರ ಯಾವುದೇ ಕಾಣಿಕೆಗಳನ್ನು ಪಡೆಯುತ್ತಿರಲಿಲ್ಲ. ಹೀಗೆ ಭಿಕ್ಷೆಯ ಬದುಕು ತಮ್ಮದೇ 'ಅಹಂ'ನ್ನು ಕೊಡವಿಕೊಳ್ಳಲು. ಆದರೆ ಈ ತಿರುಪೆಯ ವೃತ್ತಿಯು ಗೌರವಯುಕ್ತವಾಗಿತ್ತು. ಒಂದು ರೀತಿಯಲ್ಲಿ ಅದು ಸಾಮಾಜಿಕ ಗುರುವಿನ ಪಟ್ಟದ ಬದುಕೇ ಆಗಿತ್ತು.

ಸಂಸ್ಕೃತವನ್ನೊಲ್ಲದೆ ಕನ್ನಡದಲ್ಲಿ ಹಾಡುಗಳನ್ನು ಹಾಡಿಕೊಂಡು ಮನೆಮನೆ ತಿರುಗುವವರು ಎಂದು ದಾಸಕೂಟದವರನ್ನು ಕಂಡರೆ ಮಹಾ ತಿರಸ್ಕಾರ ಮಠದಲ್ಲಿನ ಕರ್ಮಠ ಪಂಡಿತರಿಗೆ. "ಸೀಮೆಯೊಳು ಪ್ರಾಕೃತ ಗೀತೆಯಲಿ" ಮಾಧ್ವಸಿದ್ಧಾಂತಗಳನ್ನು ಬೆಲೆಯಿಲ್ಲದೆ ಸಾಮಾನ್ಯ ಜನರಿಗೂ ತಲುಪಿಸುತ್ತಾರೆಂದು ಹರಿದಾಸರ ಮೇಲೆ ದ್ವೇಷ. ಇಷ್ಟಲ್ಲದೆ ವ್ಯಾಸತೀರ್ಥರಿಗೆ ಆಪ್ತರೂ ಆಗಿಬಿಟ್ಟಿದ್ದಾರೆಂದು ದಾಸರುಗಳ ಮೇಲೆ ಅಸೂಯೆ. ತಮ್ಮ ಗುತ್ತಿಗೆಯಲ್ಲಿಯೇ ಇರಬೇಕಾದ ಸಿದ್ಧಾಂತ ಪ್ರಮೇಯಗಳನ್ನು ದೇಶಿಭಾಷೆಯಲ್ಲಿ ಸಾರಕೂಡದೆಂದು ಆಗ್ರಹ. ಹೀಗಾಗಿ ವ್ಯಾಸಕೂಟದ ಪಂಡಿತರು ದಾಸಕೂಟದವರನ್ನು ನಿಂದಿಸುವುದು, ಜರಿಯುವುದು,ಅವಮಾನಕ್ಕೆ ಒಳಪಡಿಸುವುದು ನಡದೇ ಇತ್ತು. ಆದರೆ ಇಂಥದ್ದನ್ನೆಲ್ಲ ಎದುರಿಸಿ ನಿಂತಿದ್ದು ಪುರಂದರದಾಸರ ಧೀಮಂತಿಕೆ. ಪಂಡಿತರ ಸೋಗಲಾಡಿತನದ ನಡವಳಿಕೆಗಳನ್ನು ಅವರೂ ಸಾರಾಸಗಟಾಗಿ ತಿರಸ್ಕರಿಸಿದರು. ಗೇಲಿಮಾಡಿದರು. ಅವರ ಡಾಂಭಿಕ ಭಕ್ತಿಯನ್ನು ಅಲ್ಲಗೆಳೆದರು. ಅಂತಃಶುದ್ಧಿಯಿಲ್ಲದ ಅವರ ಬಾಹ್ಯ ಮಡಿವಂತಿಕೆಯನ್ನು ನೇರವಾಗಿ ಟೀಕಿಸಿದರು. ದಾಸಕೂಟಕ್ಕೆ ನೈತಿಕ ಶಕ್ತಿಯಾಗಿ ನಿಂತರು.

ವ್ಯಾಸಕೂಟವು ತತ್ತ್ವಪ್ರಧಾನತೆಯಿಂದ ಸಂಸ್ಕೃತಕ್ಕೆ ಒಲಿದು ವಿದ್ವತ್‌ಸಂಪ್ರದಾಯ ಪಾಲಿಸಿಕೊಂಡು ಬರುತ್ತಿದ್ದರೆ ದಾಸಕೂಟವು ಕನ್ನಡಕ್ಕೆ ಒಲಿದು ಭಕ್ತಿಪ್ರಚಾರದಲ್ಲಿ ಬಹಳವಾದ ಆಸಕ್ತಿ ಇರಿಸಿಕೊಂಡು ಸಮಾಜ ಸುಧಾರಕ ದೃಷ್ಟಿಯಿರಿಸಿಕೊಂಡು ಸಾಮಾನ್ಯ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿತು. "ದಾಸಕೂಟದವರನ್ನು ಸಂಗೀತದ ಮೂಲಕ ಸಾಮಾನ್ಯ ಜನರಲ್ಲಿ ಜ್ಞಾನ, ಭಕ್ತಿ, ವೈರಾಗ್ಯಗಳನ್ನು ಬೋಧಿಸುವ ಒಂದು ಭಗವಂತನ ಸ್ವಯಂಸೇವಕ ದಳವೆಂದು ಕರೆಯಬಹುದು."[೫] ಜನತಾ ಶಿಕ್ಷಣವನ್ನು ಉತ್ಸಾಹದಿಂದ ಕೈಗೊಂಡ ದಾಸಕೂಟದವರಿಗೆ ಪುರಂದರದಾಸರೇ ಸ್ಫೂರ್ತಿ. ವ್ಯಾಸರಾಯರದೇ ಮಾರ್ಗದರ್ಶನ. ಸಂಸ್ಕೃತ ಗ್ರಂಥಗಳಲ್ಲಿ ನಮೂದಿತವಾಗಿದ್ದ ಆಧ್ಯಾತ್ಮ ಶಿಕ್ಷಣವನ್ನು ಕನ್ನಡದ ಸರಳತನದಲ್ಲಿ, ಹಾಡಿನ ಸೌಂದರ್ಯತೆಯನ್ನು ಬೆರೆಯಿಸಿಕೊಂಡು ಜನರಿಗಾಗಿ ತಂದು ನೀಡಿದವರು ದಾಸಕೂಟದ ಮುಖ್ಯ ಹರಿದಾಸರುಗಳು.

ಸಾಮಾನ್ಯ ಜನರಿಗೆ, ಮನೆಮನೆಯಲ್ಲಿನ ಹೆಂಗಸರಿಗೆ ಹರಿದಾಸರ ಈ ಹಾಡುಗಳು ಪದೇ ಪದೇ ಕಿವಿಗೆ ಬೀಳುತ್ತ ನೈತಿಕ ನೈರ್ಮಲ್ಯದ ಪರಿಚಯವಾಗುತ್ತ ಹೋಯಿತು. ದಾಸರ ಹಾಡುಗಳು ಮನೆಮನೆಯ ಹೆಂಗಸರ, ಮಕ್ಕಳ ನಾಲಿಗೆಯಲ್ಲಿ ನಲಿಯತೊಡಗಿತು. ಸರಳವಾದ ಭಾಷೆಯಲ್ಲಿದ್ದ ಉಪದೇಶಾಮೃತವನ್ನು ಜನರು ಎಗ್ಗಿಲ್ಲದೆ ಸವಿದರು. ಹರಿನಾಮದ ಮಹಿಮೆಯನ್ನು ಮನಗಂಡರು. ಈ ಪರಿಯ ಜನತಾ ಶಿಕ್ಷಣವೆನ್ನುವುದು ದಾಸಕೂಟದವರು ಅಂದು ಸಲ್ಲಿಸಿದ ಮಹದ್ ಉಪಕಾರವೇ ಎನ್ನಬೇಕು. ಮುಂದೆ ಶತಮಾನಗಳಲ್ಲೂ ದಾಸಸಾಹಿತ್ಯದ ಅನೇಕ ಹಾಡುಗಳು ಮೌಖಿಕ ಪರಂಪರೆಯಲ್ಲಿ ಉಳಿದುಬಂದವು. ಗಾದೆಮಾತುಗಳಾಗಿ ಪರಿವರ್ತನೆಗೊಂಡ ವಾಕ್ಯಗಳಾಗಿ ನೆನಪಿನಲ್ಲಿ ಉಳಿದು ದಾಟುತ್ತ ಬಂದವು. ಸಾಮಾನ್ಯ ಜನತೆಗೆ ವಿಶೇಷವಾದ ನೈತಿಕ ಬದುಕಿನ ಪ್ರಜ್ಞೆ ಅರಳಿಕೊಂಡಿತು. ಹರಿದಾಸರುಗಳ ಹಾಡಿನಿಂದಾಗಿಯೇ ಇತಿಹಾಸ ಪುರಾಣಗಳಲ್ಲಿನ ಕಥೆಗಳೆಲ್ಲ ಮಹಿಳೆಯರಿಗೂ, ಅವಿದ್ಯಾವಂತರಿಗೂ, ಮಕ್ಕಳಿಗೂ ತಿಳಿಯುತ್ತ ಬಂದು ಪ್ರಚುರಗೊಂಡವು. ಭಗವದ್ ಅವತಾರಗಳ ವಿವರ, ಉದ್ದೇಶಗಳು ಸಾಮಾನ್ಯರ ಅರಿವಿನ ತೆಕ್ಕೆಗೂ ಒದಗಿದವು. ಮಹಿಳೆಯರು, ಮಕ್ಕಳು ತಮ್ಮ ದೇವರ ಪೂಜಾಕಾಲದಲ್ಲಿ ಪ್ರಾರ್ಥಿಸಿಕೊಳ್ಳಲು ನೆರವಾಗುವಂತೆ ಹರಿದಾಸರುಗಳು ಗಣಪತಿ, ಸರಸ್ವತಿ,ಲಕ್ಷ್ಮಿ,ಪಾರ್ವತಿ, ಶಿವ ಮುಂತಾದ ಅನೇಕ ದೇವತಾಪರ ಹಾಡುಗಳನ್ನು ಪ್ರಚುರಪಡಿಸಿದರು. ಇಂಥ ಎಷ್ಟೆಷ್ಟೋ ಹಾಡುಗಳು ಮನೆಮನೆಯ ತಾಯಂದಿರಿಂದ ಮಕ್ಕಳಿಗೆ ದಾಟುತ್ತ ಬಂದು ಇಂದಿಗೂ ಮನಸ್ಸಿನ ಸುಸಂಸ್ಕಾರಕ್ಕೆ ನೆಲೆಗಟ್ಟನ್ನು ಒದಗಿಸಿವೆ. ಕೇವಲ ಇತ್ತೀಚಿನ ಎರಡು ಮೂರು ದಶಕಗಳಿಂದಷ್ಟೆ ಆಧುನಿಕ ಶೈಲಿಯ ಜೀವಿತವನ್ನು ಅಪ್ಪಿಕೊಂಡ ಪರಿಣಾಮವಾಗಿ ಮಹಿಳೆಯರ ನಾಲಿಗೆಯಲ್ಲಿ ದಾಸರಹಾಡು ನಲಿಯುತ್ತಿಲ್ಲ, ತಮ್ಮ ಮಕ್ಕಳಿಗೆ ಅವರು ಅದನ್ನು ದಾಟಿಸುತ್ತಿಲ್ಲ ಎನ್ನುವುದು ವಿಷಾದಕರ ಸತ್ಯವೇ ಆಗಿದೆ.

ಏನಿದ್ದರೂ ಬಾಳಲು, ಬದುಕಲು ಆಂತರಿಕವಾದೊಂದು ಅವಲಂಬನೆ, ರಸಭಿಜ್ಞತೆ ಮನುಷ್ಯನಿಗೆ ಬೇಕೇ ಬೇಕು. ಇಂಥ ಒಂದು ಸಶಕ್ತವಾದ ಅವಲಂಬನೆ, ರಸಪುಷ್ಟಿಯನ್ನು ಹರಿದಾಸರುಗಳು ಅಂದಿನ ಸಮಾಜಕ್ಕೆ ಒದಗಿಸಿಕೊಟ್ಟಿದ್ದು ಅದು ಇಂದಿಗೂ ಮೌಲ್ಯಾತ್ಮಕವಾಗಿ ಅಗತ್ಯವುಳ್ಳದ್ದೇ ಆಗಿರುವುದು ಸತ್ಯವಾಗಿದೆ. ಇದು ಸಾಧ್ಯವಾಗಿದ್ದು ದಾಸಕೂಟದವರು ತೀರಾ ಸಮಾಜದ ಒಡನಾಡಿಗಳಾಗಿ, ಸಮೀಪರಾಗಿ, ಸಮಾಜಕ್ಕೆ ಸ್ಪಂದಿಸಿದವರಾಗಿದ್ದುದರಿಂದಲೇ.

ವ್ಯಾಸತೀರ್ಥರು ಆಯೋಜಿಸಿದ ದಾಸಕೂಟದವರಲ್ಲಿ ಎಷ್ಟೋ ಜನ ಮಧ್ವಮತ ಅನುಯಾಯಿಗಳು. ಆದರೆ ಎಲ್ಲರೂ ಅಲ್ಲ. ಶ್ರೀವೈಷ್ಣವ ಪಂಥದವರು, ಸ್ಮಾರ್ತಭಾಗವತರು, ಎಂದು ಪರಿಪರಿಯ ಪಂಗಡಗಳವರಿದ್ದರು. ಆದರೆ ಎಲ್ಲರೂ ದಾಸಕೂಟದಲ್ಲಿ ಸಮಾನರೇ ಎಂದು ಬಾಳಿದರು. ಎಲ್ಲರೂ ವೇದಾಂತದ ಪ್ರಮೇಯಗಳಲ್ಲಿ ನಂಬಿಕೆಯಿರಿಸಿರುವವರು. ಆದರೆ ಇವರಲ್ಲಿ ಆಧ್ಯಾತ್ಮನಿಷ್ಠೆ ಮಾತ್ರ ತೀವ್ರವಾಗಿದ್ದು ತಮ್ಮ ಮತವೇ ಶ್ರೇಷ್ಠವೆಂಬ

ಛಲ, ಹಠ ಯಾರಲ್ಲೂ ಇರಲಿಲ್ಲ. ಇಂಥ ಹೃದಯ ವೈಶಾಲ್ಯತೆಯು ಸಹಜವಾಗಿಯೇ ಪಾಂಡಿತ್ಯ ಪ್ರೌಢಿಮೆಯಲ್ಲಿದ್ದವರಿಗೆ ಇಷ್ಟವಾಗಿರಲಿಕ್ಕಿಲ್ಲ. ವ್ಯಾಸಕೂಟದ ಕರ್ಮಠರು ಹರಿದಾಸರನ್ನು ಎಂದಿಗೂ ಆಪ್ತವಲಯಕ್ಕೆ ಬರಮಾಡಿಕೊಳ್ಳಲೇ ಇಲ್ಲ. ಈ ಎರಡು ರೀತಿಯ ಮನೋವೃತ್ತಿಗಳು ಮಾನವ ಸಹಜಸ್ವಭಾವವಾಗಿ ಅಂದೂ ಇದ್ದವು. ಇಂದಿಗೂ ಕೂಡ ಕುಲದ ಪ್ರಶ್ನೆ, ವಿದ್ಯೆಯ ಮೇಲರಿಮೆ ಮುಂತಾದವುಗಳಿಂದ ಮಾನವ ಸ್ವಭಾವವು ಬಿಡುಗಡೆಗೊಂಡಿದೆಯೆಂದೇನೂ ಹೇಳಲಾಗದು. ದಾಸಕೂಟದವರೇನೋ ವಿಶಾಲ ಮನೋಭಾವನೆ ಇದ್ದವರಾಗಿ ಸಂಘಟಿತರಾಗಿ ಬಾಳಿದರು. ಆದರೆ ಆಯಾ ಮಠಕ್ಕೆ ಅಂಟಿಕೊಂಡು ಇದ್ದ ವಾದ ವಿವಾದ ಪ್ರವೃತ್ತಿಯ ಪಂಡಿತರು ಅಷ್ಟೊಂದು ಸಂಘಟಿತರಾಗಿ ಬಾಳಿದಂತೆ ಕಾಣುವುದಿಲ್ಲ.

ಮಠಮಾನ್ಯ ವ್ಯಾಸಕೂಟದವರ ಬಳಿ ಸಾಮಾನ್ಯಜನರಾಗಲೀ, ಅನಧಿಕಾರಿ ವರ್ಗದವರಾಗಲೀ, ಪೂರ್ವಸಿದ್ಧತೆ ಇಲ್ಲದವರಾಗಲೀ, ಜಾತಿಕುಲಗಳಲ್ಲಿ ಕೆಳವರ್ಗದವರೆನ್ನಿಸಿಕೊಂಡವರಾಗಲೀ ಹತ್ತಿರ ಸುಳಿಯುವಂತಿರಲಿಲ್ಲ. ಶಾಸ್ತ್ರೈಕ ನಿಷ್ಠರೂ, ಗ್ರಂಥಪಟುತ್ವವುಳ್ಳವರೂ ಆದ ವ್ಯಾಸಕೂಟದವರಿಗೆ ಶಾಸ್ತ್ರಾಭ್ಯಾಸದಿಂದ ಬಂದ ಜ್ಞಾನ, ವರ್ಣಾಶ್ರಮಧರ್ಮಗಳ ಪಾಲನೆ ಇವು ಮಾತ್ರ ಮುಖ್ಯವಾದವು. 'ಭಕ್ತಿ' ಎನ್ನುವುದನ್ನು ಅವರುಗಳು ಪ್ರಮೇಯವಾಗಿ ಮಿದುಳಿಗೆ ಊಡಿದರು. ಹೃದಯದಲ್ಲಿ ತಾಳಲಿಲ್ಲ. ಸಾಧನೆಗಳ ಬಗ್ಗೆ ಗ್ರಂಥಗಳನ್ನು ಓದಿ ಓದಿ ತಿಳಿದರು. ಅನುಭವದಲ್ಲಿ ಯಾವುದನ್ನೂ ಕಾಣಲಿಲ್ಲ. ಶಾಸ್ತ್ರಾಮವರ್ಶನವೇ ಪ್ರಧಾನವಾಯಿತು, ಕರ್ಮಠತನವೇ ಆಚರಣೆಯ ವಿಧಾನವಾಯಿತು. ಹೀಗಾಗಿ ಜನಸಾಮಾನ್ಯರಿಂದ ತಾವು ಮಿಗಿಲು, ತಾವು ಮೇಲು ಎಂದು, ತಾವು ತತ್ತ್ವವೇತ್ತರೆಂದು ಮೇಲರಿಮೆ ತಾಳಿ ಜನರಿಂದ ದೂರ ದೂರವೇ ನಿಂತರು. ಸಮಾಜದ ಉದ್ಧಾರಕ್ಕೆಂದು ಅವರು ಶ್ರಮಿಸಲಿಲ್ಲ. ಅವರವರ ವಿದ್ಯಾಪ್ರೌಢಿಮೆಯ, ಪಾಂಡಿತ್ಯದ ಗಳಿಕೆಯೇ ಅವರಿಗೆ ಪ್ರಧಾನಕರ್ಮವಾಯಿತು. ಸನ್ಮಾನ, ಬಿರುದು ಬಾವಲಿಗಳ ಗಳಿಕೆಯೇ ಅವರ ಮುಖ್ಯ ಗುರಿಯಾಯಿತು. ಸಂಸ್ಕೃತವೇ ಉಸಿರಾಯಿತು.

ಧರ್ಮಕರ್ಮಗಳ ತತ್ತ್ವವನ್ನು, ಭಕ್ತಿಯ ಆಧಿಕ್ಯವನ್ನು ಜನಸಾಮಾನ್ಯರಿಗೆ ಒಯ್ದು ಮುಟ್ಟಿಸಿದ ದಾಸಕೂಟದವರ ಕನ್ನಡ ಪ್ರೀತಿಯನ್ನು ನಾವು ಗುರುತಿಸಲೇಬೇಕು. ಇವರಿಂದಾಗಿ ಕನ್ನಡಕ್ಕೆ ಪ್ರೌಢಿಮೆ, ಸತ್ವ ಸೌಂದರ್ಯಗಳು ಕೂಡಿಕೊಂಡು ಬಂದವು. ಪಂಡಿತರುಗಳೇನೋ ಸಿದ್ಧಾಂತ ಮಂಡನೆ, ವಿವರಣೆಗಳಿಗಾಗಿ ಸಂಸ್ಕೃತದಲ್ಲಿ ದೊಡ್ಡ ದೊಡ್ಡ ಗ್ರಂಥಗಳನ್ನೇ ಬರೆದರು. ಆದರೆ ನಾಡಿನ ಸಾಮಾನ್ಯ ಜನತೆಗೆ ಅವು ತೆರೆದುಕೊಳ್ಳುವುದಾದರೂ ಹೇಗೆ? ಪಂಡಿತರ ರಚನೆಗಳನ್ನು ಓದಿ ಅರ್ಥೈಸಿಕೊಳ್ಳಲು ಪಂಡಿತರುಗಳೇ ಹೆಣಗಾಡಬೇಕು, ತಿಣುಕಾಡಬೇಕು, ಅಂಥದ್ದರಲ್ಲಿ ಸಾಮಾನ್ಯನಿಗೆ ಅವು ಕಬ್ಬಿಣದ ಕಡಲೆಯೇ ಸರಿ. ಆದರೆ ದಾಸಕೂಟದವರು ಕನ್ನಡದಲ್ಲಿ ಅದೇ ವಸ್ತುವನ್ನು ಎಷ್ಟು ಸುಲಭವಾಗಿ, ಸರಳವಾಗಿ ಹೇಳಿದರು! ತಾವು ಸಾರಿದ ವಿಷಯವಸ್ತು ಸದಾ ನೆನಪಿನ ಸಂಗ್ರಹದಲ್ಲಿದ್ದು ಒದಗಿ ಬರುವಂತೆ ಬೋಧನೆಗೆ ಪ್ರಾಸಾಲಂಕಾರ, ಸಂಗೀತದ

ಸಾಂಗತ್ಯ ಬರೆಯಿಸಿ ಸಾಮಾನ್ಯನಿಗೆ ನೀಡಿದರು. ಕನ್ನಡದ ಮಟ್ಟು, ನುಡಿಗಟ್ಟುಗಳನ್ನೊಳಗೊಂಡ ದಾಸರ ಹಾಡುಗಳು ಬಲು ಬೇಗ ಹೃದಯಗಮ್ಯವೆನಿಸಿದವು. ಅವರ ಬೋಧನೆಯ ತಿರುಳು ಕನ್ನಡದ ಕರುಳುಗಳಿಗೆ ಅಪ್ಯಾಯಮಾನವಾದವು. ಕನ್ನಡ ಸಮಾಜಕ್ಕೆ ಹರಿದಾಸರು ನೀಡಿದ ಅಪೂರ್ವ ಸೇವೆಯಿದು. ಕನ್ನಡ ಭಾಷೆಗೆ ಅವರು ನೀಡಿದ ಅಮೂಲ್ಯ ಕಾಣಿಕೆಯಿದು.

ಅಂದಿನ ಸಮಾಜಕ್ಕೊಂದು ಸಜ್ಜನಿಕೆಯ, ಸುಸಂಸ್ಕೃತವಾದ ಬೆಳಕನ್ನು, ಆಧ್ಯಾತ್ಮಿಕವಾದ ಪ್ರಭಾವಳಿಯನ್ನು ತಮ್ಮ ಕೃತಿಗಳ ಮೂಲಕ, ಅವುಗಳನ್ನು ಹಾಡಿದ ತಮ್ಮ ಕಂಠಗಳ ಮೂಲಕ ತಂದುಕೊಟ್ಟ ಹಿರಿಯರು ದಾಸಕೂಟದವರು. ಕನ್ನಡನಾಡಿನ ಸಂಸ್ಕೃತಿ ಊರ್ಜಿತವಾಗಿದ್ದು ದಾಸಕೂಟದ ಪ್ರಮುಖರಿಂದ. ಜಾತಿಮತ, ಪಂಥ, ಪರಂಪರೆ, ಶಾಸ್ತ್ರ, ತತ್ತ್ವ ಈ ರೀತಿ ಯಾವ ಅಡ್ಡಗೋಡೆಗಳನ್ನು ಎಬ್ಬಿಸಿಕೊಳ್ಳದೆಯೆ ಮಾನವತೆಯ ಹಾದಿ ಹಿಡಿದ ದಾಸರುಗಳಿಂದ ಆಗಿರುವ ಸಾಮಾಜಿಕ ಸೇವೆಯು ಸಂಸ್ಕೃತ ಗ್ರಂಥರಚನಾ ಕುಶಲಿಗಳಾಗಿ ಜನರಿಂದ ದೂರವಾಗಿ ಮೇಲಿನ ನೆಲೆಯಲ್ಲೇ ನಿಂತು ಆಧ್ಯಾತ್ಮ ಉಪದೇಶಿಸಿದ ವ್ಯಾಸಕೂಟದವರಿಂದ ಆಗಲಿಲ್ಲ. ಅಲ್ಲಿ ಲೋಕೋದ್ಧಾರದ ಉದ್ದೇಶ ಸುಳಿಯಲಿಲ್ಲ. ಆಚಾರಗಳ ಪಾಲನೆ ಕೂಡ ಶುಷ್ಕವಾಯಿತು.

ಒಂದು ಕಡೆ ವ್ಯಾಸಕೂಟದ ಪಂಡಿತ ವಿದ್ವಜ್ಜನಗಳಿಂದ ಅವರದ್ದೇ ವರ್ಗದ ಜನರಲ್ಲಿ ಪ್ರಮಾಣ ಪ್ರಮೇಯ ಚರ್ಚೆ, ಸಮರ್ಥನೆ, ವಾಕ್ಯಾರ್ಥಗಳ ಗೋಷ್ಠಿ ಮುಂತಾದವು ನಡೆಯುತ್ತಲೇ ಹೋದವು. ಆದರೆ ಅವರಲ್ಲಿ ಅವರೇ ಓದಿ ತಿಳಿಯುವ ತತ್ತ್ವವಾದದಲ್ಲಿನ ಉಪಾಸನಾ ಭಾಗದ ಬೆಳವಣಿಗೆಯಾಗದೇ ಹೋಯಿತು. ಪಂಡಿತ ವರ್ಗದವರಿಗಿಲ್ಲಿ ತತ್ತ್ವ ನಿರ್ಣಯಕ್ಕೆ ಪೂರ್ವಭಾವಿಯಾಗಿ ವಿಮರ್ಶೆಗೆ ದೊರೆತ ಪ್ರಾಮುಖ್ಯತೆ ಭಕ್ತಿತತ್ತ್ವಕ್ಕೆ ದೊರಕದಾಯಿತು. ಇದರಿಂದಾಗಿ ಸಮಾಜದ ಅಜ್ಞ, ಮುಗ್ಧರಿಗೆ ಜ್ಞಾನವೆಂಬುವುದು ಎಂದೂ ನಿಲುಕದ ಗಗನಕುಸುಮವೇ ಆಗಿ ನಿಂತಿತು. ಇಂಥ ಒಂದು ಸಾಮಾಜಿಕ ವಾತಾವರಣದಲ್ಲಿ ದಾಸಕೂಟದವರು ಉಪಾಸನಾ ಮಾರ್ಗದ ಅಧ್ವರ್ಯುಗಳಾಗಿ, ಹಿಂದಿನ ಪರಂಪರಯಿಂದಲೂ ಬಂದಿದ್ದ ಜ್ಞಾನ, ಭಕ್ತಿ, ವೈರಾಗ್ಯಗಳನ್ನು, ಉಪಾಸನೆಗೆ ಬೇಕಾದ ಉಪಾಯಗಳನ್ನು, ಅನುಷ್ಠಾನ ಕ್ರಮಗಳನ್ನು ಬೋಧಿಸಿದರು. ತತ್ತ್ವವಾದದ ತಿರುಳನ್ನು ಕನ್ನಡದ ಬಟ್ಟಲಿನಲ್ಲಿಟ್ಟು ಊಡಿದರು.

ಪಂಡಿತರುಗಳು ಪರಮತ ಖಂಡನೆಗಾಗಿ, ಸ್ವಮತ ಸ್ಥಾಪನೆಗಾಗಿ ವಾಕ್ಯಾರ್ಥ, ಚರ್ಚೆ, ವಾದವಿವಾದಗಳನ್ನು ಪುಷ್ಟಿಗೊಳಿಸಿಕೊಂಡು ಸಾಗುತ್ತಿದ್ದರೆ, ಸಾಮಾನ್ಯಜನರಿಗೆ ಇವೆಲ್ಲ ಅರ್ಥವೇ ಆಗದ ಶುಷ್ಕ, ಜಟಿಲ, ಜಟಪಟವಾದವೇ ಆಗಿ ತೋರಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಸ್ವಮತ ಮಂಡನೆಗೆ ಹೆಣಗಾಡಿ ಜಟಿಲ ತರ್ಕದ ಝಂಜಾವಾತವನ್ನೇ ಎಬ್ಬಿಸುತ್ತಿದ್ದ ವ್ಯಾಸಕೂಟದವರು ತಮ್ಮ ಈ ಕಾರ್ಯವು ಪುಣ್ಯಕಾರ್ಯವೆಂದೇ ಭಾವಿಸಿದ್ದೇನೋ ಸರಿ. ಆದರೆ ಜನಸಾಮಾನ್ಯರಿಗೂ ಪಂಡಿತರಿಗೂ ಒಂದು ಕಂದರವೇರ್ಪಡುವಂತಾದುದೂ ಅಷ್ಟೇ ಸತ್ಯ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ದಾಸಕೂಟದವರು ಸಾಮಾನ್ಯ ಜನರನ್ನು ಸಮೀಪಿಸಿ ತಮ್ಮ ಸಾಹಿತ್ಯ, ಸಂಗೀತ ಸೇವೆಗಳ ಮೂಲಕ ನಾಡು ನುಡಿಯ ಉದ್ಧಾರಕ್ಕೆ ಟೊಂಕ ಕಟ್ಟಿ ಶ್ರಮಿಸಿರುವುದನ್ನು ಎಂದೂ ಮರೆಯುವಂತಿಲ್ಲ.

ಸನ್ಯಾಸಿಗಳ ವಿರಕ್ತತೆಗೂ ಹರಿದಾಸರುಗಳ ವಿರಕ್ತತೆಗೂ ವ್ಯತ್ಯಾಸವಿದೆ. ಸಂಸಾರವೇ ಹೇಯವೆಂದು ಬಗೆದು ಲೋಕದ ದತ್ತಜೀವನಕ್ಕೆ ಬೆನ್ನು ಹಾಕಿ ಒಂಟಿತನವನ್ನು ಅಪ್ಪಿಕೊಂಡು ಆಧ್ಯಾತ್ಮದ ಕಠಿಣಸಾಧನೆಗೆ ತಯಾರಾಗುವವರು ಸನ್ಯಾಸಿ ಯೋಗಿಗಳಾದರೆ, ಸಂಸಾರದ ನಿಸ್ಸಾರತೆ, ಭ್ರಮನಿರಸನತೆಗಳನ್ನು ಅರಿತೂ ಸಂಸಾರದಲ್ಲೇ ಉಳಿದು, ಸಾಮಾಜಿಕವಾದ ಕೈಂಕರ್ಯದಲ್ಲಿ ತೊಡಗಿ ಲೋಕಕುಟುಂಬಿಯಾದವರು ಹರಿದಾಸರುಗಳು. ಇವರು ಲೋಕಜೀವನಕ್ಕೆ ಅಂಟಿಕೊಳ್ಳದೆಯೇ ಅಂಟಿಕೊಂಡಂತಿದ್ದು ಹರಿದಾಸ್ಯ ತಾಳಿಕೊಂಡು ಬಾಳಿ ಬದುಕಿದವರು. ಪರಮ ವೈರಾಗ್ಯಶೀಲರಾಗಿಯೂ ಸಾಮಾನ್ಯರಲ್ಲಿ ಬೆರೆಯುತ್ತ, ಅವರ ಕಷ್ಟಸುಖಗಳಿಗೆ ಸ್ಪಂದಿಸುತ್ತ ಅವರಿಗೆ ಪರಮಾರ್ಥದ ದಾರಿ ತೋರುವ ಗುರುಗಳಾಗಿ ರೂಪುಗೊಂಡಂಥವರು.

ದಾಸಕೂಟದವರ ಸಾಹಿತ್ಯವು ಬುದ್ಧಿಯ ತಿಣುಕಾಟದಿಂದ ಹುಟ್ಟದೇ ಅಂತರಂಗದಿಂದ, ಅಂತರಂಗ ದರ್ಶನದಿಂದ ಮೈದಳೆಯಿತಾದ್ದರಿಂದಲೇ ಶ್ರೀಸಾಮಾನ್ಯನ ಹೃದಯದೊಳಗೆ ಅದು ಅಂದಿಗೂ, ಇಂದಿಗೂ ಸುಲಭವಾಗಿ ಹೊಕ್ಕು ಕೂರಬಲ್ಲುದಾಗಿದೆ. ಆದರೆ ವ್ಯಾಸಸಾಹಿತ್ಯವು ಸಂಸ್ಕೃತದಲ್ಲಿ ಮೈದಳೆದು ಎಷ್ಟೇ ಘನತೆ, ಗಾಂಭೀರ್ಯವನ್ನು ಹೊಂದಿದ್ದರೂ ಅದು ಜನಸಾಮಾನ್ಯರಿಗೆ, ದೇಶೀಭಾಷೆಯವರಿಗೆ ದೂರವಾಗಿಯೇ ಉಳಿಯಿತು. ನಿಜವಾದ ಆಧ್ಯಾತ್ಮಿಕ ಅನುಭವವು ದೊರೆಯದೇ ವ್ಯಾಸಸಾಹಿತ್ಯವು ನಿರುಪಯುಕ್ತ ಕ್ರಿಯೆಯಾಗಿ ಉಳಿಯುವಂತಾಯಿತು. ಇದಕ್ಕೆ ವಿರೋಧವಾಗಿ, ಇಂಥ ಪ್ರಕ್ರಿಯೆಗೆ ಬಂಡೆದ್ದಂತೆ ದಾಸ ಸಾಹಿತ್ಯ ಹುಟ್ಟು, ಬೆಳವಣಿಗೆ ಪಡೆದು ಮುಂಚೂಣಿಯಾಗಿ ಸಮಾಜದಲ್ಲಿ ನೆಲೆ ನಿಲ್ಲುವುದರಲ್ಲಿ ಯಶಸ್ವಿಯಾಯಿತು.

ವ್ಯಾಸಕೂಟದವರು ತೋರಿದ ತಿರಸ್ಕಾರದಿಂದ, ಉಪೇಕ್ಷೆಯಿಂದ ದಾಸಕೂಟದವರು ನೊಂದಿರುವುದು ಇತಿಹಾಸದ ಒಂದು ಭಾಗ. ದಾಸರುಗಳು ಹಾಡಿಕೊಂಡು ಹೊರಗಿನಿಂದ ಹೊರಗೇ ತಿರುಗುತ್ತ ಇದ್ದುಬಿಟ್ಟರು. ಯಾವ ಗೌರವ, ಆದರಗಳನ್ನೂ, ಆಶ್ರಯವನ್ನೂ ಅವರುಗಳು ಬಯಸಲೂ ಇಲ್ಲ, ನಿರೀಕ್ಷಿಸಲೂ ಇಲ್ಲ. ಹಾಡಿನ ಮೂಲಕ ಭಗವಂತನನ್ನು ಒಲಿಸುವ, ಸ್ತುತಿಸುವ ಪರಿಕಲ್ಪನೆಯಲ್ಲಿ ಜನಜಾಗೃತಿ ಮಾಡುತ್ತ ಹೋದರು. ಆರ್.ಡಿ.ರಾನಡೆಯವರು ಒಂದುಕಡೆ "ಮಾನವ ಮನಸ್ಸಿನ ಒಳಗಿನ ಸತ್ಯಗಳನ್ನು ಕೆಣಕಿ ಕೆಣಕಿ ಹೇಳಿದವರು ಪುರಂದರದಾಸರು" ಎಂದಿದ್ದಾರೆ.

ಸಂಸ್ಕೃತ ಕಲಿತ ಪಂಡಿತವರ್ಗವು ಶಬ್ದದ ಕಸರತ್ತಿನಲ್ಲೆ ಕುಳಿತರೇ ವಿನಹಾ ಅನುಭವದ ಆಳಕ್ಕೆ ಇಳಿಯದೇ ಹೋಗಿದ್ದು ಸಂಸ್ಕೃತದ ದುರಂತವೂ ಹೌದು. "ಕನ್ನಡದಲ್ಲಿ ಹಾಡಿದರೆ, ಹೇಳಿದರೆ ದೇವರಿಗೆ ಮೈಲಿಗೆ" ಎಂಬ ಭಾವನೆ ಬೇರೂರಿದ್ದ ಸಾಮಾಜಿಕ ಕಾಲವದು. ಅಂಥದ್ದರಲ್ಲಿ ಅದನ್ನು ಮುರಿದು, ಅಂತರಂಗದ ಭಾವನೆಗಳನ್ನು, ಒಳಸತ್ಯಗಳನ್ನು ಕನ್ನಡದಲ್ಲೇ ಮಡುಗಟ್ಟಿಸಿ, ದೇವರನ್ನು ತಲುಪಲು ಕನ್ನಡದ ಸೋಪಾನಗಳನ್ನು ನಿರ್ಮಿಸಿಕೊಟ್ಟದ್ದು ದಾಸಕೂಟದವರ, ದಾಸ ಸಾಹಿತ್ಯದ ವೈಶಿಷ್ಟ್ಯವಾಗಿದೆ. ಸಂಸ್ಕೃತ ಪಂಡಿತರು ಮಡಿವಂತಿಕೆ ಎಂಬ ಅಸ್ಥಿಪಂಜರವನ್ನು

ಪ್ರದರ್ಶನ ಮಾಡುತ್ತಿದ್ದ ಕಾಲದಲ್ಲಿ ಅದನ್ನು ತೀವ್ರವಾಗಿ ವಿರೋಧಿಸಿದ್ದು, ಜನಮನ ಸಮೀಪರಾಗಿದ್ದು ಹರಿದಾಸರುಗಳು. "ಸಂಸ್ಕೃತದಲ್ಲಿ ತತ್ತ್ವ ಹೇಳಿದರೆ ಮಾತ್ರ ಮಡಿ" ಎನ್ನುತ್ತಿದ್ದ ವ್ಯಾಸಕೂಟದವರ ವಿರುದ್ಧ ಯಾವ ಚಳುವಳಿಯ ಶೀರ್ಷಿಕೆಯನ್ನೂ ಕೊಟ್ಟುಕೊಳ್ಳದೆ ಕನ್ನಡದಲ್ಲೇ ಎಲ್ಲ ತತ್ತ್ವ, ಸತ್ಯಗಳನ್ನೂ ತಿಳಿಯಾಗಿ, ಸರಳವಾಗಿ, ಸುಲಭವಾಗಿ ಸಂಗೀತದ ಸಾಹಚರ್ಯ ಬೆರೆಯಿಸಿಕೊಂಡು ಸಾರಿ ಸಮಾಜಮುಖಿಯಾದವರು ದಾಸಕೂಟದವರು, ಹರಿದಾಸರುಗಳು.

ಅಂದಿನ ಸಾಮಾಜಿಕ ದಿನಗಳಲ್ಲಿ ಹಾಡು ಹಾಡುವುದಿರಲಿ, ಹಾಡು ಕೇಳಿಸಿಕೊಳ್ಳಲೂ ಪರದಾಡ ಬೇಕಿದ್ದಂಥ ಪರಿಸ್ಥಿತಿಯೇ ಸಾಮಾನ್ಯ ಜನರಿಗಿದ್ದುದು. ಎಲ್ಲಿಯೋ ಅಪರೂಪಕ್ಕೆ ಅಂದಿನ ದಿನಗಳಲ್ಲಿ ಸಂಗೀತ ಕಚೇರಿಗಳು ನಡೆಯುತ್ತಿತ್ತಾದರೂ ಅವು ಪುನಃ ಶಾಸ್ತ್ರೀಯ ವಿದ್ವತ್ತಿನಿಂದ ಕೂಡಿದ ಸಂಗೀತಸಭೆಯಾಗಿರುತ್ತಿದ್ದು, ರಾಜನ ಆಸ್ಥಾನದಲ್ಲೋ, ದರ್ಬಾರಿನಲ್ಲೋ ಅವುಗಳ ಉಪಸ್ಥಿತಿ. ಮೆಚ್ಚಿ ತಲೆದೂಗುವವರೂ ಸಂಗೀತಲೋಕದ ಘನ ವಿದ್ವಾಂಸರುಗಳೇ. ಇಂಥದ್ದರಲ್ಲಿ ಜನಸಾಮಾನ್ಯರಿಗೆ ಇವೆಲ್ಲ ನಿಲುಕದ, ಅರ್ಥವಾಗದ ರಾಗ ತಾಳ ಆಲಾಪನೆ ವಿಸ್ತಾರಗಳ ಲೋಕ. ಇಂಥ ಒಂದು ಸಾಮಾಜಿಕ ಪರಿಸ್ಥಿತಿಯಲ್ಲಿ ಸಂಗೀತವನ್ನೂ ಸರಳತೆಯ ದಿವ್ಯತೆಯಲ್ಲಿ ನಾಡಿನ ಮನೆಮನೆಗಳಿಗೆ ಒಯ್ದು ತಲುಪಿಸಿದವರು ದಾಸರುಗಳು. ಅಲ್ಲಲ್ಲಿ ಅಲ್ಲಲ್ಲಿ ಸಂಚರಿಸುತ್ತ ಹಾಡುಗಳನ್ನು ಹೇಳುತ್ತ ಜನರ ಅಂತರಂಗವನ್ನು ಪ್ರವೇಶಿಸಿ ಅಲ್ಲಿನ ಚಿಂತೆಯ ಸಂತೆಯನ್ನು ಹೊರದೂಡಿಸಿ, ಹರಿಭಕ್ತಿಯ ಮೌಲ್ಯವನ್ನು ತುಂಬಿದವರು ಹರಿದಾಸರು. "ದಾಸರು ಬರಲಿಲ್ಲವೇ ಈ ಕಡೆ? ತುಂಬಾ ದಿನಗಳಾಯಿತು ಅವರ ಹಾಡು ಕೇಳದೆ...." ಎಂದು ಜನರು ಅವರ ಬರುವಿಕೆಗಾಗಿ ಹಾರೈಸುತ್ತಿದ್ದರು, ಅವರ ಹಾಡುಗಳನ್ನೂ ಕೇಳಲು ಹಂಬಲಿಸುತ್ತಿದ್ದರು. ಹಾಡುಗಳನ್ನು ಕೇಳಲು ಬೇರೆ ಯಾವ ಮಾಧ್ಯಮ, ಅನುಕೂಲವೂ ಇರದಿದ್ದ ಆ ಕಾಲದಲ್ಲಿ ಹರಿದಾಸರುಗಳ ಹಾಡುಗಳೇ ಈ ಕೊರತೆಯನ್ನು ತುಂಬಿದ್ದು.

ಮನೆಮನೆಗಳಲ್ಲಿ ಅಂದು ದಾಸರು ಬಂದರೆ ಸ್ವಾಗತಿಸಿ ಚಾವಡಿಯಲ್ಲಿ ಚಾಪೆ ಹಾಸುತ್ತಿದ್ದರು. ಆಚೀಚಿನ ಮನೆಯವರೆಲ್ಲ ಬಂದು ಸೇರಿ ಸಂಭ್ರಮಿಸಿ ಸುತ್ತ ಕೂರುತ್ತಿದ್ದರು. ನೀತಿ, ಸಾಂತ್ವನ ಭಕ್ತಿ ತುಂಬಿದ ಹಾಡುಗಳನ್ನು ತಂಬೂರಿ ಮೀಟಿಕೊಂಡು ಚಿಟಿಕೆ ಬಾರಿಸುತ್ತ ದಾಸರುಗಳು ಹಾಡುತ್ತಿದ್ದರು. ಹರಿದಾಸರು ಮಾಡುತ್ತಿದ್ದ ಈ ಕಲಾ ಕೈಂಕರ್ಯದಲ್ಲಿ ಭಕ್ತಿಸರಳತೆ, ಆತ್ಮನಿವೇದನೆಗಳಿರುತ್ತಿದ್ದವೇ ವಿನಾ ಅಲ್ಲಿ ಶಾಸ್ತ್ರನಿಯಮಗಳ ಕ್ಲಿಷ್ಟತೆ, ರಾಗಾಲಾಪನೆಯ ಅಬ್ಬರ ಆಡಂಬರಗಳ ಆಟಾಟೋಪ ಯಾವುದೂ ಇರುತ್ತಿರಲಿಲ್ಲ. ಬದಲಾಗಿ ನೆರೆದ ಜನಗಳಲ್ಲಿ ಮನಃಶುದ್ಧಿಯ ಸಂಸ್ಕಾರದ ಜೊತೆಗೆ, ಸಂಗೀತ ಸಂಸ್ಕಾರವೂ ಬೆಳೆಯುತ್ತಿತ್ತು ಎನ್ನುವ ಸತ್ಯದಲ್ಲಿಯೇ ಹರಿದಾಸರುಗಳ ಸಾಮಾಜಿಕ ಸೇವೆಯ ಶ್ರೇಷ್ಠತೆ ಅಡಗಿದೆ. ಹೀಗೆಯೇ ಬೇರೆ ಬೇರೆ ಊರು ಕೇರಿಗಳಲ್ಲಿ ಸಂಚಾರ ಮಾಡುತ್ತ ಸಾಮಾನ್ಯ ಜನರ ಕಷ್ಟನಷ್ಟಗಳಿಗೆ ಸಾಂತ್ವನದ ಸ್ಪಂದನ ನೀಡುತ್ತ, ಅವರ ಬದುಕಿನಲ್ಲಿ ಹರಿಭಕ್ತಿಯನ್ನು ಅಳವಡಿಸಲು

ಯತ್ನಿಸುತ್ತ, ಇಂದ್ರಿಯ ನಿಗ್ರಹ, ವೈರಾಗ್ಯಶೀಲತೆ, ಅಂತರಂಗ ಮತ್ತು ಬಾಹ್ಯ ಶುದ್ಧತೆಯ ಅನಿವಾರ್ಯತೆಗಳನ್ನು ತಿಳಿಹೇಳುತ್ತ, ಮಾನವ ಜನ್ಮದ ಶ್ರೇಷ್ಠತೆ, ಮೂಲಭೂತ ವಿಚಾರಗಳನ್ನು ಅವರಿಗೆ ಮನಗಾಣಿಸುತ್ತ ಒಟ್ಟಾರೆ ಸಮಾಜದಲ್ಲಿ ಸಮಾನತೆಯ ಪ್ರಜ್ಞೆಯನ್ನು ಮೂಡಿಸಿದವರು ದಾಸಕೂಟದವರು. ತಿಳಿಯಾದ ಹಾಸ್ಯದಿಂದಲೇ ಜನರ ಬದುಕಿನಲ್ಲಿ ಉಲ್ಲಾಸ ಮೂಡಿಸುತ್ತ, ಸರಳ ಭಾಷೆಯ ಕೀರ್ತನೆಯಲ್ಲೇ ಗೇಯತ್ವವನ್ನೂ ಜನರಿಗೆ ಪರಿಚಯ ಮಾಡಿಸುತ್ತ ಶಿಸ್ತು, ಸಂಯಮಗಳ ಬೆಳಕನ್ನು ತೋರಿದವರು ಅವರು.

ಅನೇಕ ಕಡೆಗಳಲ್ಲಿ, ಹೆಚ್ಚಾಗಿ ದಾಸರುಗಳಿಗೆ ಜನರಿಂದ ಪ್ರೀತಿ, ಗೌರವಗಳ ಮನ್ನಣೆಯೇ ಲಭಿಸುತ್ತಿತ್ತು. ಆದರೆ ಎಲ್ಲ ಕಡೆಯೂ ಎಲ್ಲೆಲ್ಲಿಯೂ ಹೀಗೆ ಇತ್ತು ಎಂದು ಹೇಳಬರುವಂತಿಲ್ಲ. ಸಂಗೀತ ದ್ವೇಷಿಗಳೋ, ಹರಿದಾಸರನ್ನು ಕಂಡರೆ ತಾತ್ಸಾರ ಮನೋಭಾವನೆಯವರೋ ಇರುತ್ತಿದ್ದುದೂ ಹೌದು. ತಮಗೆ ದೊರೆತ ಈ ತಿರಸ್ಕಾರ, ಅನಾದರವನ್ನೂ ಶಾಂತರಾಗಿ ಸ್ವೀಕರಿಸುತ್ತ ಹಾಡುಗಳ ಮೂಲಕವೇ ಪ್ರತಿಕ್ರಿಯಿಸುತ್ತ ದಾಸರುಗಳು ಮುಂದೆ ಸಾಗಿದ್ದಿದೆ. ಮನೆ ಬಾಗಿಲಿಗೆ ಬಂದಾಗ ಅವರ ಜೋಳಿಗೆಗೆ ನೀಡಲು ಒಲ್ಲದ, ಸಲ್ಲದ ನೆಪಗಳನ್ನು ಹೇಳುತ್ತಿದ್ದಂಥ ಗೃಹಿಣಿಯರೂ ಅಂದು ಇದ್ದರು ಎನ್ನುವುದು ಪುರಂದರದಾಸರ ಕೆಲವು ಹಾಡುಗಳಿಂದಲೇ ಅರ್ಥವಾಗುತ್ತದೆ. ಎದ್ದು ಬಂದು ಭಿಕ್ಷೆ ನೀಡಲು ಮನಸ್ಸಿಲ್ಲದೆ ಬಗೆಬಗೆಯಾಗಿ ನೆಪ ಹೇಳಿ ಹರಿದಾಸರನ್ನು ಅಟ್ಟುವ ಪರಿಯು ಅವರ "ಇಕ್ಕಲಾರೆ ಕೈಯೆಂಜಲು-ಚಿಕ್ಕ ಮಕ್ಕಳು ಅಳುತಾವೆ ಹೋಗೋ ದಾಸಯ್ಯ" ಎಂಬ ಕೀರ್ತನೆಯುದ್ದಕ್ಕೂ ಚಿತ್ರಿತವಾಗಿದೆ. " ಅಟ್ಟದ ಮೇಲಿನ ಅಕ್ಕಿ ತೆಗೆಯಲಾರೆ। ಹೊಟ್ಟೆನೋವು ಕಾಣೋ ಹೋಗೋ ದಾಸಯ್ಯ। ಮುಟ್ಟಾಗಿ ಕುಳಿತೇನೆ ಮನೆಯವರಿಲ್ಲವೋ। ಕಟ್ಟುಗ್ರ ಮಾಡದೆ ಹೋಗೋ ದಾಸಯ್ಯ" ಅಚ್ಚ ಹೆಣ್ತನದ ನಾನಾ ನೆಪಗಳು. ಮತ್ತೆಂದೂ ಎಲ್ಲಿಯೋ ಮಹಿಳೆಯೊಬ್ಬಳು ಹರಿನಾಮ ಸ್ತುತಿಸುತ್ತ ಬರುತ್ತಿರುವ ದಾಸರನ್ನು ಅಷ್ಟು ದೂರದಿಂದಲೇ ಕಂಡು ಧಡಾರ್ ಎಂದು ತನ್ನ ಮನೆಯ ಬಾಗಿಲನ್ನು ಹಾಕಿದ್ದಿರಬೇಕು. ಪುರಂದರದಾಸರು "ಕದವ ಮುಚ್ಚಿದಳದಕೋ ಗಯ್ಯಾಳಿ ಮೂಳಿ॥" ಎಂದು ಪ್ರತಿಕ್ರಿಯಿಸಿ ಹಾಡಿಯೇ ಬಿಟ್ಟಿದ್ದಾರೆ. "ಕದವನಿಕ್ಕಿದಳದಕೋ ಚಿಲಕವಲ್ಲಾಡುತಿದೆ। ಒದಗಿದ್ದ ಪಾಪವು ಹೊರಗೆ ಹೋದೀತೆಂದು॥" ಒಳ್ಳೆಯ ವಿಷಯಗಳು ಕಿವಿಗೆ ಬೀಳಲಿಕ್ಕೂ ಪುಣ್ಯವು ಬೇಕಲ್ಲವೆ? ಸತ್ಸಂಗತಿಗಳು ಮನದೊಳಗೆ ಬಾರದಂತೆ ನಾವೇ ನಡೆದುಕೊಂಡರೆ? "ಭಾರತ-ರಾಮಾಯಣ ಪಂಚರಾತ್ರಾಗಮ। ಸಾರತತ್ವದ ಬಿಂದು ಕಿವಿಗೆ ಬಿದ್ದೀತೆಂದು" ಆಕೆ ಬಾಗಿಲು ಹಾಕಿಕೊಂಡುಬಿಟ್ಟಳು. "ಹರಿಯ ಪಾದಾಂಬುಜ ನೆನೆವ ಪರಮ ಭಕ್ತರ ಪಾದದ ರಜ ಒಳಗೆ ಬಿದ್ದೀತೆಂದು" ಬೆದರಿ ಆಕೆ ಕದವ ಮುಚ್ಚಿಕೊಂಡುಬಿಟ್ಟಳು!

ಹರಿದಾಸರು ತಿರುಗಾಡುತ್ತ ಮನೆಮನೆಗಳಲ್ಲಿಯ ಜನರ ಬವಣೆ, ತೊಳಲಾಟಗಳನ್ನು ಹಾಡುಗಳಲ್ಲಿ ದಾಖಲಿಸಿದ್ದಾರೆ. ಅವರು ಬದುಕಿ ಬಾಳಿದ ಸಮಾಜದ ಸಮಕಾಲೀನ ಚಿತ್ರಣಗಳವು. "ತನ್ನ ಸುತ್ತ ಇದ್ದ ಜನರನ್ನು ನೋಡಿ, ತಾನಿದ್ದ ಸಮಯವನ್ನು ಅರಿತುಕೊಂಡು, ಅಂದಿನ ಸಮಾಜದ ಕುಂದುಕೊರತೆಗಳನ್ನೂ,

ಬಿಂಕ ಬಿನ್ನಾಣಗಳನ್ನೂ, ಅಂಕೆ ಆತಂಕಗಳನ್ನೂ ತನ್ನದೆಂದೇ ತಿಳಿದು, ಅವನ್ನೆಲ್ಲ ಅಂದು ಆಡಿ ತೋರಿಸಿ, ಒಡೆದು ಕಾಣಿಸಿದವರು ಪುರಂದರದಾಸರು"[*] ಹಾಗೆ ಸಮಾಜದ ಒಂದು ಭಾಗವಾಗಿ ಅಂದಿನ ಮಹಿಳೆಯ ಬದುಕಿನ ಕೆಲವೊಂದು ಚಿತ್ರಣಗಳನ್ನೂ ಅವರ ಹಾಡುಗಳಿಂದಲೇ ತಿಳಿಯಬಹುದು.

"ಸುಣ್ಣವಿಲ್ಲ ಭಾಗವತರೆ। ನುಣ್ಣನೆ ಗೋಡೆಯ ನಿನ್ನೆ ತೊಡೆದು ಬಿಟ್ಟೆ" ಎಂಬ ಕೀರ್ತನೆಯಲ್ಲಾಗಲೀ "ವಿಷ ಕುಡಿಯುತೇನೆ ನೋಡು ಗಂಡ। ವಿಷ ಕುಡಿಯುತೇನೆ" ಎಂಬ ಹಾಡಿನಲ್ಲಾಗಲೀ, "ಮುಪ್ಪಿನ ಗಂಡನ ಒಲ್ಲೆನು ನಾನು। ತಪ್ಪದೆ ಪಡಿಪಾಟ ಪಡಲಾರೆನಕ್ಕ" ಎಂಬ ಹಾಡಿನಲ್ಲಾಗಲೀ "ಒಲ್ಲೆನೆ ವೈದಿಕ ಗಂಡನ–ನಾನೆಲ್ಲಾದರೂ ನೀರ ಧುಮುಕುವೆನಮ್ಮ" ಎಂಬ ಕೃತಿಯಲ್ಲಾಗಲೀ ಅಂದಿನ ಸಮಾಜದಲ್ಲಿನ ಹೆಣ್ಣಿನ ಸ್ಥಿತಿಗತಿಗಳನ್ನು, ನೀರಸ, ನೋವಿನ ಬದುಕನ್ನು ಪುರಂದರದಾಸರೇ ಚಿತ್ರಿಸಿಕೊಟ್ಟಿರುವುದು ಸತ್ಯ. ಪಡಬಾರದ ಪರಿಪಾಟಲುಗಳನ್ನು ಸಾಂಸಾರಿಕವಾಗಿ ಅನುಭವಿಸುತ್ತಿದ್ದ ಹೆಣ್ಣಿನ ಮನಸ್ಥಿತಿಯನ್ನೂ ಈ ಕೃತಿಗಳಲ್ಲಿ ದಾಖಲಿಸಿದ್ದಾರೆ. "ರಮಣನಿಲ್ಲದ ನಾರಿ ಪರರ ಕಣ್ಣಿಗೆ ಮಾರಿ" ಎಂಬ ಅವರ ಕೃತಿಯಂತೂ ಅಂದಿನ ಸಮಾಜದಲ್ಲಿನ ವಿಧವೆಯರ ಭೀಕರ ಕಂಗಾಲುತನವನ್ನು, ಹೃದಯವಿದ್ರಾವಕತೆಯನ್ನು ಸಶಕ್ತವಾಗಿ ಅಭಿವ್ಯಕ್ತಿಸಿ ಕೊಡುತ್ತದೆ. ಇಂದಿನ ಆಧುನಿಕ ಕಾಲದಲ್ಲೂ ವಿಧವೆಯರ ಬಾಳು ಕಷ್ಟಕರವೇ ಆಗಿರುವಾಗ ಹರಿದಾಸರುಗಳ ಆ ಕಾಲದಲ್ಲಿ ವಿಧವೆಯ ಪಾಡು ಇನ್ನೂ ಎಷ್ಟು ಕಠಿಣತರವಾಗಿತ್ತೆನ್ನುವುದನ್ನು ಈ ಕೃತಿ ಸೂಚಿಸುತ್ತದೆ.

ದಾಸಕೂಟದ ಪ್ರಮುಖರೂ, ನೇತಾರರೂ ಆದ ಪುರಂದರದಾಸರ ಹಾಡುಗಳಲ್ಲಿ ಹೆಣ್ಣಿನ ಶೋಚನೀಯ ಸ್ಥಿತಿಗಳ ಚಿತ್ರಣವಿರುವಂತೆಯೇ ಹೆಣ್ಣಿನ ಬಗ್ಗೆ ಕಟುಮನಸ್ಕರಾಗಿ ಕೆಲವು ಕೀರ್ತನೆಗಳು ಅವರಿಂದ ರಚಿತವಾದಂತಿದೆ. ಗೋಪಿಕೆಯ ತಾಯ್ತನವನ್ನು ಅದ್ಭುತವಾಗಿ ಚಿತ್ರಿಸಿದ ಪುರಂದರದಾಸರೇ ತಾವು ಬಾಳಿಬದುಕಿದ ಸಮಾಜದಲ್ಲಿ ಹೆಣ್ಣಿನ ಬಗ್ಗೆ ನಿಷ್ಠುರರಾಗಿ "ಸತಿಗೆ ಸ್ವಾತಂತ್ರ್ಯವ ಕೊಡದಿರಿ। ನೀವು ಮತಿಗೆಟ್ಟು ಭ್ರಮೆಯ ಪಡದಿರಿ" ಎಂದು ಹಾಡಿದ್ದಾರೆ. ಒಂದು ಕುಟುಂಬದಲ್ಲಿ ಹೆಣ್ಣೊಬ್ಬಳು ತಾನು ಮಾಡಬಹುದಾದ ಅನಾಹುತಗಳನ್ನೆಲ್ಲ ಈ ಕೃತಿಯಲ್ಲಿ ಪಟ್ಟಿ ಮಾಡಲಾಗಿದೆ. ಬಹುಶಃ ಅಂದಿನ ಸಮಾಜದಲ್ಲಿ ಹೆಣ್ಣು ಹೀಗೆ ಕುಟುಂಬ ಒಡೆಯುವವಳಾಗಿ, ಸ್ವೇಚ್ಛೆಯಿಂದ ನಡೆದು ಅನಾಚಾರಿಯಾಗಿರುವುದು ತೀರಾ ಸಾಮಾನ್ಯವಾಗಿತ್ತೆ? ಇಂಥವರು ಇಂದೂ ಇರಬಹುದು. ಆದರೆ ಒಳ್ಳೆಯ ಗೃಹಿಣಿಯಾಗಿ ಮನೆಮಂದಿಯನ್ನು ಪ್ರೀತಿಯಿಂದ ನೋಡಿಕೊಳ್ಳುವ ಸುಶೀಲೆಯರು ಇರಲೇ ಇಲ್ಲವೆ? ಅಂಥ ಮಹಿಳೆಯರ ಚಿತ್ರಣವೆಲ್ಲೂ ಬಂದಿಲ್ಲವೆಂದೇ ಹೇಳಬೇಕಾಗಿದೆ. ಅಥವಾ ಹಾಗೆ ಚಿತ್ರಿಸಿದ ಕೃತಿಗಳು ಯಾಕೆ ಲಭ್ಯವಿಲ್ಲವೋ, ತಿಳಿದಿಲ್ಲ.

"ದುಷ್ಕರ್ಮಿ ಸತಿಯಿರುವಾಗ ಧರ್ಮ ದೊರಕುವುದೇ?" ಎಂದು ಪುರಂದರದಾಸರು ಪ್ರಶ್ನಿಸಿದ್ದಾರೆ. "ಧನವು ಮನವು ಎರಡೂ ಇರುವಾಗ ಮನುಜಗೆ ಅನುಕೂಲವಾದ ಸತಿಯಿಲ್ಲವಯ್ಯ" ಎಂದು ವಿಷಾದಿಸಿದ್ದಾರೆ. ಮನೆಮನೆಗಳಲ್ಲಿ ಅನಾನುಕೂಲಳಾದ ಮಡದಿಯಿರುವುದೇ ದಾಸರ ಗಮನಕ್ಕೆ ಬಂದಿದೆ. ಒಳ್ಳೆಯ ಸುಶೀಲವಂತ

ಗೃಹಿಣಿಯರನ್ನು ಕುರಿತ ಕೃತಿಗಳು ಯಾಕೋ, ಲಭ್ಯವಿಲ್ಲ, ಅಥವಾ ರಚಿತವಾಗಿಲ್ಲ. ಮತ್ತೊಂದೆಡೆ ಬಿಟ್ಟ ಗಯ್ಯಾಳಿ ಕಾಣಣ್ಣ, ಅವಳ ಕಂಡರೆ ಕಡೆಗಾಗಿ ದಾರಿ ಪೋಗಣ್ಣಾ" ಎಂದು ಗಂಡಸರನ್ನು ಎಚ್ಚರಿಸಿ ಇಂಥ ಮಹಿಳೆಯರನ್ನು ಕಾಣದೆ ಕಲ್ಪಿಸಿಯಂತೂ ಬರೆದಿದ್ದಲ್ಲ. ಪತಿಯಿಂದ ಪರಿತ್ಯಕ್ತೆಯಾದವಳು ಪರಿಪರಿಯಲ್ಲಿ ಸಮಾಜಬಾಹಿರವಾದ ನಡತೆಯಲ್ಲಿರುವುದನ್ನು ಈ ಕೃತಿಯಲ್ಲಿ ದಾಖಲಿಸಲಾಗಿದೆ. ಕಡೆಯಲ್ಲಂತೂ "ಲೇಸಾಗಿ ಪುರಂದರವಿಠಲನು ಹೇಳಿದ ಹೇಸಿ ತೊತ್ತನು ನೀನು ಕೆಣಕದಿರಣ್ಣ" ಎಂದಿದ್ದಾರೆ! ಇಷ್ಟೊಂದು ಅಸಹ್ಯ ಹುಟ್ಟಿಸುವ, ಅಸಭ್ಯ ನಡೆವಳಿಕೆಗಳ ಹೆಣ್ಣುಗಳೇ ಇದ್ದರೆ ಅಂದಿನ ಸಮಾಜದಲ್ಲಿ? ಎಂಬ ಪ್ರಶ್ನೆ ಎದುರಾಗುತ್ತದೆ. ಮತ್ತೊಂದೆಡೆ "ನಂಬಬೇಡ ನಾರಿಯರನು। ಹಂಬಲಿಸಿ ಹಾರಯಿಸಬೇಡ" ಎಂದು ಎಚ್ಚರಿಸುತ್ತ ಅವರ ನೋಟವೆಲ್ಲ ಹುಸಿ, ಸತಿಯರಾಟವೆಲ್ಲ ಸಂಚು, ಮಾಟಗಾತಿಯರೊಲುಮೆ ಬಯಲು ಬೂಟಕತನ ಎಂದೆಲ್ಲ ಹೇಳಲಾಗಿದೆ. ಮತ್ತೊಂದು ಕೃತಿಯಲ್ಲಿ "ಪತಿ ಭಕುತಿಯಿಲ್ಲದಿಹ ಸತಿಯ ಸಂಗ। ವ್ರತಗೆಟ್ಟು ಸುಖ ಪಡೆಯಲಿಲ್ಲವೋ ರಂಗ" ಎನ್ನುತ್ತ ಹೆಣ್ಣಿನ ಭಂಡತನದ ವರ್ತನೆಗಳನ್ನು ಹೇಳುತ್ತ ಹೋಗುತ್ತಾರೆ. ಎಲ್ಲೆಲ್ಲಿಯೂ ಇಂಥ ಬಜಾರಿ ಹೆಂಗಸರೇ ಪುರಂದರದಾಸರ ದೃಷ್ಟಿಗೆ ಬೀಳುತ್ತಿದ್ದರೇ? ಎಲ್ಲೆಡೆಯೂ ಸತಿಯಿಂದ ಕೋಟಲೆಗೊಳಗಾದ ಪತಿಗಳ ಅವಸ್ಥೆಗೇ ಕನ್ನಡಿ ಹಿಡಿಯಲಾಗಿದೆ. ಪತಿಯಿಂದ ಶೋಷಣೆಗೊಳಗಾದ, ಅಥವಾ ಪುರುಷ ಪ್ರಧಾನ ಸಮಾಜದಲ್ಲಿ ಗಂಡಿಂದ ದಬ್ಬಾಳಿಕೆ, ದುರವಸ್ಥೆಗಳಿಗೊಳಗಾದ ಸ್ತ್ರೀಯರ ಬಗ್ಗೆ ಪುರಂದರದಾಸರು ಮೌನಿ ಯಾಕೆ? ನಾನೂರು ವರುಷಗಳ ಹಿಂದೆ ಸಮಾಜದಲ್ಲಿ ಸ್ತ್ರೀಯು ಬರಿಯ ದುರ್ನಡತೆಯವಳೇ ಆಗಿದ್ದಳೆ?

ಸಚ್ಚಾರಿತ್ರ್ಯವಿಲ್ಲದಿರುವ ಸ್ತ್ರೀಗೆ ಪುರಂದರದಾಸರು ವಿಧಿಸಿರುವ ಶಿಕ್ಷೆ ಘೋರವಾಗಿಯೇ ಇದೆ. ಕ್ರೂರವಾಗಿಯೂ ಇದೆ. "ಸಂಜ್ಞೆಯಿಂದಾಳ ಬೇಕಣ್ಣ। ಗಂಡನಾಜ್ಞೆಯ ಮೀರಿ ನಡೆವ ಲಂಡ ಹೆಣ್ಣ" ಎಂಬ ಅವರ ಕೃತಿಯಲ್ಲಿ ಈ ಕ್ರೌರ್ಯವಿದೆ. ಹೆಣ್ಣುಮಕ್ಕಳಿಗೆ ನೀತಿನಡತೆಗಳ ಬಗ್ಗೆ ಬುದ್ಧಿ ಹೇಳುವ ಕೃತಿಗಳು ಬೇಕಷ್ಟಿವೆ. "ತಂಗಿಗ್ಹೇಳಿದನು ಕೃಷ್ಣ ಚಂದದಲಿ ಬುದ್ಧಿ। ಅತ್ತೆಯ ಮನೆಯಲ್ಲಿ ಇರುವಂಥ ಸುದ್ದಿ" ಇಂಥವುಗಳಲ್ಲಿ ಒಂದು. ಆದರೆ ಸತಿಯನ್ನು ಪ್ರೀತಿಯಿಂದ ನೋಡಿಕೊಳ್ಳಬೇಕೆಂಬ ಬುದ್ಧಿವಾದದ ಕೃತಿ ಯಾವುದೂ ದೊರೆತಿಲ್ಲ. "ಭಾಗ್ಯದ ಲಕ್ಷ್ಮಿ ಬಾರಮ್ಮ" "ಪಾಲಿಸೆಮ್ಮ ಮುದ್ದು ಶಾರದೆ" "ನಲಿದಾಡೆ ಎನ್ನ ನಾಲಿಗೆ ಮೇಲೆ" ಎಂದೆಲ್ಲ ದೈವವನ್ನೇ ಹೆಣ್ಣಿನ ಮಂಗಳಕರ ಮೂರ್ತಿಯನ್ನಾಗಿ ಸ್ತುತಿಸಿರುವ ದಾಸರುಗಳು ಸಮಾಜದಲ್ಲಿನ ಸನ್ನಡತೆಯ ಹೆಣ್ಣಿನ ಬಗ್ಗೆ ಉದ್ಗಾರ ತೆರೆಯದೆ ಸ್ತ್ರೀಯ ಕೆಟ್ಟ ನಡತೆಗಳನ್ನೆ ಕುರಿತು ಹಾಡಿರುವುದು ನಿಜವಾಗಿಯೂ ಪ್ರಶ್ನಿಸುವಂತಾಗಿದೆ. ಈ ವಿಚಾರದಲ್ಲಿ ಲೇಖಕಿ ಚಿ.ನ.ಮಂಗಳಾ ಅವರು "ಜೀವನ" ಪತ್ರಿಕೆಯ ೧೯೬೪ರ ಜನವರಿ ಸಂಚಿಕೆಯಲ್ಲಿ ಪ್ರಕಟಿಸಿರುವ ಅನಿಸಿಕೆಗಳು ಮನನೀಯವಾಗಿವೆ:

"ಭಾಗ್ಯದ ಲಕ್ಷ್ಮೀ ಬಾರಮ್ಮ ಎಂದು ಮೃದುವಾಗಿ ಕರೆದ ದಾಸರು ಸಮಾಜದಲ್ಲಿನ ತಾಟಕಿಯರನ್ನೇ ಚಿತ್ರಿಸಿದ್ದಾರೆ. ಮನೆಗೆ ಭಾಗ್ಯಲಕ್ಷ್ಮಿಯಾಗಿ, ಪತಿಗೆ ನೆರವಾಗಿ, ಮನೆಯನ್ನು ನಂದನವನವನ್ನಾಗಿಸುವ ಮಹಿಳೆಯರೂ ಇದ್ದಿರಲೇಬೇಕಲ್ಲವೆ? ಆ ಬಗ್ಗೆ ದಾಸರು ನುಡಿಯಲಿಲ್ಲವೇಕೆ? ಹಾಗೆ ನುಡಿದಿದ್ದರೆ ಅವು ನಮಗೆ ಏಕೆ ಸಿಕ್ಕಿಲ್ಲ?

ಇಂಥ ಒಳ್ಳೆಯ ಹೆಣ್ಣುಮಕ್ಕಳ ಬಗ್ಗೆ ದಾಸರು ಅಶ್ರದ್ಧೆ ತೋರಿದರೆಂದರೆ ನಂಬುವುದು ಸ್ವಲ್ಪ ಕಷ್ಟವೆ. ಉಳಿದ ವಿಷಯಗಳಲ್ಲಿ ತಮ್ಮ ಹೃದಯ ವೈಶಾಲ್ಯದಿಂದ ಉಜ್ವಲ ಮನೋಭಾವದಿಂದ ಜಗತ್ತಿನ ಅಂಧಕಾರವನ್ನು ಹೋಗಲಾಡಿಸಲು ಶ್ರಮಿಸಿದ ಅವರು ಮಹಿಳೆಯರಿಗೆ ಮುಕ್ತಿ ಮಾರ್ಗವನ್ನು ತೋರಿಸಲಿಲ್ಲವೆಂದರೆ ನಂಬಲಾಗದ ಮಾತು. ಅವರ ಕೀರ್ತನೆಗಳನ್ನು ಒಟ್ಟಿಗೆ ನೋಡಿದಾಗ, ಹೆಣ್ಣುಮಕ್ಕಳು, ಹೆಂಡತಿ ಇವರ ಬಗ್ಗೆ ಸಹಾನುಭೂತಿಯನ್ನು ತೋರದೆ ಬರೆದಿರುವ ಮಾತುಗಳು ದಾಸರ ಹೆಸರಿನಲ್ಲಿ ಸ್ತ್ರೀ ದ್ವೇಷಿಗಳು ತಾವೇ ಬರೆದು ಸೇರಿಸಿರುವ ಕೀರ್ತನೆಗಳೇನೋ ಎನಿಸುತ್ತವೆ."

ಏನೇ ಇದ್ದರೂ ಹರಿದಾಸರುಗಳಿಂದ ಆಗಿರುವ ಸಾಮಾಜಿಕ ಸೇವೆ, ಸಂಸ್ಕೃತಿಯ ಸೇವೆ ವ್ಯಾಸಕೂಟದ ಕರ್ಮಠ ಪಂಡಿತರುಗಳಿಂದ ನಡೆಯಲಿಲ್ಲವೆಂಬುದಂತೂ ನಿಚ್ಚಳ. ಸಾಮಾಜಿಕವಾಗಿ ಮಹಿಳೆಯ ಉದಾತ್ತತೆಯನ್ನು ಹರಿದಾಸರುಗಳು ಅಷ್ಟಾಗಿ ಹಿಡಿದಿಡಲಿಲ್ಲ ಎನ್ನುವುದು ಅಂದಿನ ಸಮಾಜದ ಚೌಕಟ್ಟಿನ ಇತಿಮಿತಿಗಳಿಂದಾಗಿಯೇ ಎನ್ನವುದನ್ನು ಮನಗಾಣಬೇಕಷ್ಟೆ? ಆದರೆ ದಾಸಕೂಟದವರು ಮನುಕುಲಕ್ಕೆ ನೀಡಿದ ದೇಣಿಗೆ ಬಲು ಉದಾತ್ತವೆನ್ನುವುದನ್ನು ಮರೆಯಲಾಗದು. ಹಣವೊಂದರ ಸಂಗ್ರಹದಲ್ಲೆ ಮುಳುಗಿರಬಾರದೆಂಬ ಎಚ್ಚರಿಕೆ ನೀಡಿದರು. "ಧನ ನಿಲ್ಲದಯ್ಯಾ ।ಸಾ। ಧನ ನಿಲ್ವುದಯ್ಯಾ" ಎಂದವರು ದಾಸರು. ನಿಜಕ್ಕೂ ದಾಸಕೂಟದವರ ಈ ಸಾಧನೆಯೇ ದೊಡ್ಡದು. ಕರ್ಮಠ ಸಮಾಜದಲ್ಲಿ ಬದುಕಿ, ಕಣ್ಣೆದುರು ಕಂಡ ಅನಾಚಾರ, ದುರ್ವತನೆಗಳನ್ನು ಖಂಡಿಸುತ್ತ ಸಮಾಜ ಸುಧಾರಣೆಗಾಗಿ ಶ್ರಮಿಸಿದ ಈ ಸಾಧನೆಗೆ ಮಿಗಿಲಿಲ್ಲ. ದಾಸಕೂಟದವರೇನೂ "ಸಮಾಜಸೇವೆ" ಎಂಬ ಹೆಸರಿರಿಸಿಕೊಂಡು ಸಂಘಟಿತರಾಗಿ ಕೆಲಸ ಮಾಡಿದ್ದೇನೂ ಅಲ್ಲ. ಒಳ್ಳೆಯ ಸಂಗೀತ, ಒಳ್ಳೆಯ ಸಾಹಿತ್ಯದೊಂದಿಗೆ ಒಳ್ಳೆಯ ಕಾಯಕ ಮಾಡುತ್ತಾ, ಹಾಡುತ್ತಾ ನಡೆದರು. ಹರಿಕೀರ್ತನೆ, ಭಕ್ತಿಯ ಹಾದಿ ಹಿಡಿದರು. ಅದುವೇ ಸಮಾಜಸೇವೆಯೇ ಆಯಿತು.

ಭಕ್ತಿ ಸಾಧನೆಯಲ್ಲಿ ಅಂತರ್ಮುಖಿಗಳಾಗಿ ತಮ್ಮ ಉದ್ಧಾರವನ್ನಷ್ಟೆ ಮಾಡಿಕೊಂಡವರಲ್ಲ ದಾಸಕೂಟದ ಹರಿದಾಸರು. ಆಧ್ಯಾತ್ಮಿಕ ಸಾಧನೆಗೆ ಶುಷ್ಕ ಕರ್ಮಾಚರಣೆಗಳೇ ಅಗತ್ಯವಲ್ಲ. ಮಾನವೀಯ ಮೌಲ್ಯಗಳ ಅಳವಡಿಕೆಯೊಂದಿಗೆ ದೈವಭಕ್ತಿ ಇದ್ದರೆ ಸಾಕೆಂದು ಸಾರಿದರು. ಜಾತೀಯತೆಯ ಬೇಲಿ ಮುರಿದು ಮುನ್ನಡೆದರು. ಕನ್ನಡದ ಕರ್ಮಸಾಧನೆಯೇ ಮಿಗಿಲೆಂದರು. ಕನ್ನಡ ನಾಡು-ನುಡಿಗೆ ಹೀಗೆ ಅವರ ಮಿಗಿಲಿಲ್ಲದ ಸೇವೆ ಸಂದಿತು.

ಅವನತಿಯ ಅವಧಿ

ವ್ಯಾಸತೀರ್ಥರು ಹುಟ್ಟು ಹಾಕಿಸಿ ಕಟ್ಟಿ ಬೆಳೆಯಿಸಿದ ದಾಸಕೂಟವು ಅವರದ್ದೇ ಕಾಲದಲ್ಲಿ ಪುರಂದರದಾಸರ ನೇತೃತ್ವದಲ್ಲಿ ಬೆಳೆದು ಕನ್ನಡನಾಡಿನ ಎಲ್ಲೆಡೆ ಹರಡಿ ಹರಿದಾಸ ಸಂಸ್ಕೃತಿಯನ್ನು ಅನುರಣಿಸಿದ್ದು ದಾಸಕೂಟದ ಉನ್ನತಿಯ ಕಾಲ ಹಾಗೂ ಇದೇ ವಿಜಯನಗರ ಸಾಮ್ರಾಜ್ಯದ ಸ್ವರ್ಣಯುಗವೆನ್ನಲಾದ ಕಾಲವೂ ಹೌದು.

ಹಂಪೆಯಲ್ಲಿ ಹುಟ್ಟು ಪಡೆದ ದಾಸಕೂಟ ಪುರಂದರ, ಕನಕರನ್ನು ಅನುಸರಿಸಿಕೊಂಡು ಇಡೀ ಕನ್ನಡನಾಡಿನಲ್ಲಿ ತನ್ನ ಕಾರ್ಯಕ್ಷೇತ್ರವನ್ನು ಹಮ್ಮಿಕೊಂಡು ಬೆಳೆಯಿತು. ಇದೇ ಕಾಲದಲ್ಲಿಯೇ ವ್ಯಾಸತೀರ್ಥರ ಶಿಷ್ಯರಾದ ವಾದಿರಾಜ ಸ್ವಾಮಿಗಳು ದಕ್ಷಿಣಕನ್ನಡ ಜಿಲ್ಲೆಯೆನಿಸಿಕೊಂಡ ಕರಾವಳಿಯ ಪ್ರದೇಶಗಳಲ್ಲಿ ಹರಿದಾಸ ಸಂಸ್ಕೃತಿಯನ್ನು ಬೆಳೆಯಿಸಿದರು. ಬೇಲೂರು ಸ್ಥಳದ ಸುತ್ತಮುತ್ತ ಪ್ರದೇಶಗಳಲ್ಲಿ ವೈಕುಂಠದಾಸರಿಂದ ಈ ಪ್ರಭಾವ ವ್ಯಾಪ್ತಿಯಾಗಿ ಬೆಳೆಯಿತು.

ಆದರೆ ಈ ದಾಸಕೂಟದ ಪರಂಪರೆ ಪುರಂದರದಾಸರ ಕಾಲದ ನಂತರ ಅಷ್ಟು ಪ್ರಭಾವಶಾಲಿಯಾಗಿ ಬೆಳೆಯಲಿಲ್ಲ, ಮತ್ತೆ ವ್ಯಾಸತೀರ್ಥ, ವಾದಿರಾಜ, ಪುರಂದರ, ಕನಕದಾಸರಂಥ ಉನ್ನತ ವ್ಯಕ್ತಿತ್ವಗಳ ಆವಿಷ್ಕಾರವಾಗಲಿಲ್ಲ ಎನ್ನುವುದೂ ಇತಿಹಾಸದ ಭಾಗವೇ ಆಗಿದೆ. ಇಂಥ ವ್ಯಕ್ತಿತ್ವಗಳು ತಮ್ಮ ಬದುಕು ಬರಹಗಳಿಂದ ಕನ್ನಡ ಸಂಸ್ಕೃತಿಯನ್ನು ವಿಶೇಷವಾಗಿ ಕಟ್ಟಿ ಮೆರೆಯಿಸಿದ ಹಾಗೆ ಮುಂದಿನ ಅವಧಿಯಲ್ಲಿ ಇವರುಗಳ ಯಾವುದೇ ಶಿಷ್ಯ ಪರಂಪರೆಯು ಹರಿದಾಸ ಪೀಳಿಗೆಯಲ್ಲಿ ಬರಲಿಲ್ಲ ಎನ್ನುವುದಕ್ಕೆ ವಿಜಯನಗರ ಸಾಮ್ರಾಜ್ಯದ ಪತನವೂ ಮುಖ್ಯ ಕಾರಣವಾಗಿದೆ ಎನ್ನಬಹುದು. ಕ್ರಿ.ಶ.೧೫೬೫ರಲ್ಲಿ ನಡೆದ ತಾಳಿಕೋಟೆ ಯುದ್ಧದಲ್ಲಿ ಸಾಮ್ರಾಜ್ಯವು ಪೂರ್ತಿ ಸೋಲನ್ನು ಕಂಡು ಮಣ್ಣುಗೂಡಿದ್ದು ಇಡೀ ಹಿಂದೂ ಧರ್ಮವೇ ಅತಂತ್ರ, ಆತಂಕಗಳನ್ನು ಪಡೆದಂಥ ಕಾಲವಿದು. ನಾಡಿನ ರಾಜಕೀಯ ಬರ್ಬರತೆಯ ಪರಿಣಾಮ ಧಾರ್ಮಿಕತೆಯ ಮೇಲೂ ಆಗದಿರಲು ಸಾಧ್ಯವಿಲ್ಲ. ನಾಡಿನ ಜನಜೀವನದ ಬದುಕು ನೆಮ್ಮದಿ ಕಳೆದುಕೊಂಡಾಗ ಹರಿದಾಸರ ಸಂಚಾರ, ಸಾಹಿತ್ಯ ಸಂಗೀತಗಳ ಒಡನಾಟಕ್ಕೂ ತೊಂದರೆಯಾಗಿ ಮುಂದೆ ನಿಂತೇ ಹೋಗಿ ಮುಂದಿನ ವಿಜಯದಾಸರ ಕಾಲದವರೆಗೂ ದಾಸಪರಂಪರೆ ಮೌನಗರ್ಭದಲ್ಲಿ ಹುದುಗಿ ಹೋಗಿದ್ದನ್ನೇ ಕಾಣಬೇಕಾಗುತ್ತದೆ.

ವಿಜಯನಗರ ಸಾಮ್ರಾಜ್ಯದ ಉನ್ನತಿ, ಉತ್ಕರ್ಷಗಳನ್ನು ಕಂಡಿದ್ದ ಕಣ್ಣುಗಳಿಂದಲೇ ಸಾಮ್ರಾಜ್ಯದ ಅವನತಿ, ನಂತರದ ಜನಜೀವನದ ಅಧೋಗತಿಗಳನ್ನೂ ಪುರಂದರದಾಸರು ಕಾಣಬೇಕಾಗಿ ಬಂದಿತು. ಸಾಮ್ರಾಜ್ಯದ ವೈಭವದ ಕಾಲ, ಪತನದ ಕಾಲ ಎರಡಕ್ಕೂ ಅವರ ಜೀವಿತಾವಧಿಯೇ ಸಾಕ್ಷಿಯಾಗಿತ್ತು. ಸಾಳುವ ನರಸಿಂಹನಾಯಕ ಪಟ್ಟಕ್ಕೆ ಬಂದ ಕಾಲದಲ್ಲೇ ಪುರಂದರದಾಸರು ಜನ್ಮ ತಳೆದರು. ಸಾಮ್ರಾಜ್ಯವು ಕೃಷ್ಣದೇವರಾಯನ ಆಳ್ವಿಕೆಗೆ ಬಂದಾಗ ಅವರಿಗೆ ಹರೆಯದ ವಯಸ್ಸು. ಈ ಅರಸನ ಮರಣ ೧೫೩೦ರಲ್ಲಿ ಆಗಿದ್ದು ಪುರಂದರರಿಗೆ ಆಗ ಮುಪ್ಪು ಆವರಿಸಿಕೊಂಡಾಗಿತ್ತು. ಮುಂದಿನ ಕಾಲವೆಲ್ಲ ಸಾಮ್ರಾಜ್ಯದ ವೈಭವ, ಉನ್ನತಿಗಳು ಕೆಳಮುಖವಾದ ಅಚ್ಯುತರಾಯ ಹಾಗೂ ಅಳಿಯ ರಾಮರಾಯನ ಆಡಳಿತದ ಅವಧಿ. ರಾಜಕೀಯ ಪರಿಸ್ಥಿತಿಗಳು ಬಿಗಡಾಯಿಸಿ ಜನಜೀವನದಲ್ಲಿ ನೆಮ್ಮದಿ ತಪ್ಪಿದಾಗ ಪುರಂದರದಾಸರು ಮುಪ್ಪಿನ ಮುದುಕರು. ಪುರಂದರರು ತೀರಿಕೊಂಡ ವರ್ಷ ಅಥವಾ ಮರುವರ್ಷವೇ ತಾಳಿಕೋಟೆ ಕದನ (ರಕ್ಕಸ ತಂಗಡಿ ಕದನವೆಂದೂ ಇದನ್ನು ಹೆಸರಿಸಲಾಗಿದೆ) ನಡೆದುದು.

ರಾಜಕೀಯ ವಿಪ್ಲವಕ್ಕೆ ಒಳಗಾದ ನಾಡಿನಲ್ಲಿ ಸಂಸ್ಕೃತಿಯೂ ತಬ್ಬಲಿಯೆನಿಸುವ ಹಾಗೆ ಆಗುವುದು ಸಹಜವೇ. ವ್ಯಾಪಕವಾಗಿ ಹರಡಿ ವೈಭವದಲ್ಲಿ ರಾಜಿಸುತ್ತಿದ್ದ ಸುಸಂಸ್ಕೃತಿಗೆ ರಾಜಾಶ್ರಯ ಆಸರೆಗಳು ತಪ್ಪಿಹೋಗಿ ನಾಡಿನಲ್ಲಿ ಅವ್ಯವಹಾರ, ಅವ್ಯವಸ್ಥೆಗಳು ಹೆಚ್ಚಾಗಿ ಅನೀತಿಯೇ ಎಲ್ಲೆಡೆ ತುಂಬಿತು. ದಾಸಕೂಟದವರ ಸಂಚಾರ, ಸೇವೆಗಳೂ ಅತಂತ್ರವಾಗಿ ಕೇಳುವರಿಲ್ಲದ ಪರಿಸ್ಥಿತಿಯೇ ನಾಡಿನಲ್ಲಿ ತುಂಬಿಕೊಂಡಿತು. ಪುರಂದರದಾಸರಿಗೆ, ಕನಕದಾಸರಿಗೆ ಆಪ್ತ ಶಿಷ್ಯರುಗಳು ಇದ್ದಿರಲೇ ಇಲ್ಲವೆ? ವೈರಾಗ್ಯದ ಸಾಕಾರಮೂರ್ತಿಗಳಾಗಿದ್ದ ಪುರಂದರದಾಸರಿಗೆ ಮುಂದಿನ ಪೀಳಿಗೆಗೆ ದಾರಿದೀಪವಾಗುವಂಥ ಶಿಷ್ಯರುಗಳನ್ನು ರೂಪಿಸಬೇಕೆಂದೆನಿಸುವ ವಿಚಾರದಲ್ಲೂ ವೈರಾಗ್ಯವೇ ಇತ್ತೆ? ಅಥವಾ ಅವರಿಗೆ ಅಂಥ ಪ್ರಬಲ ಶಿಷ್ಯರುಗಳು ಕೆಲವರಿದ್ದೂ, ವಿಪ್ಲವದ ನಾಡಿನಲ್ಲಿ ತಲೆಯೆತ್ತಲಾಗದೆ ಎತ್ತೆತ್ತಲೋ ಮರೆಯಾಗಿಯೇ ಹೋದರೆ? ದಾಸಕೂಟದವರು, ಅವರ ಮುಂದಿನ ಪೀಳಿಗೆಯವರು ಎಲ್ಲ ಎಲ್ಲೆಲ್ಲಿಯೋ ಚದುರಿಹೋಗಿ ಹೇಳ ಹೆಸರಿಲ್ಲದಂತಾಗಬೇಕಾದ ಪರಿಸ್ಥಿತಿ ಉಂಟಾಯಿತೆ? ಈ ಯಾವ ಪ್ರಶ್ನೆಗಳಿಗೂ ಇತಿಹಾಸದ ಮೌನಗರ್ಭದಲ್ಲಿ ಉತ್ತರ ದೊರಕುವುದಿಲ್ಲ. ಒಟ್ಟಿನಲ್ಲಿ ಸಾಮಾನ್ಯ ಜನತೆಯ ಬದುಕಿನಲ್ಲಿ ಎದುರಾಗುವ ಕೋಲಾಹಲಕ್ಕೆ ರಾಜಕೀಯದ ಬಿರುಗಾಳಿಯೇ ಕಾರಣವೆನ್ನುವುದನ್ನು ನಿರಾಕರಿಸುವಂತಿಲ್ಲ. ಮುಂದಿನ ಸುಮಾರು ನೂರುವರ್ಷಗಳ ಕಾಲ ದಾಸಕೂಟದಲ್ಲಿನ ಯಾರ ಹೆಸರೂ ಕೇಳಿಬರುವುದಿಲ್ಲ.

* * * * *

ಅಡಿಟಿಪ್ಪಣಿಗಳು :

೧. "ಎನ್ನ ಬಿಂಬ ಮೂರುತಿಯ ಪೂಜಿಪೆನು ನಾನು" – ವ್ಯಾಸತೀರ್ಥರ ಕೃತಿ

"ಅಂತರಂಗದಲಿ ಹರಿಯ ಕಾಣದವನೆ ಹುಟ್ಟು ಕುರುಡನೋ"– ವ್ಯಾಸತೀರ್ಥರ ಕೃತಿ

೨. ಕಣ್ಣಿನೊಳಗೆ ನೋಡೋ ಹರಿಯ । ಒಳ। ಗಣ್ಣಿನಿಂದಲಿ ನೋಡೋ– ಪುರಂದರದಾಸರ ಕೃತಿ

೩. ಮಠಗಳಲ್ಲಿ ತಮಗೆ ಸಿಕ್ಕುವ ಲಾಭಗಳಿಗಾಗಿಯೇ, ಸಾಧ್ಯವಿದ್ದಷ್ಟನ್ನು ಮಠದ ವರಮಾನದಿಂದ ತಾವುಗಳು ಹೀರಿಕೊಂಡು ಬದುಕಬೇಕೆನ್ನುವ ಪ್ರವೃತ್ತಿಯಿಂದಾಗಿಯೇ ಮಠಗಳನ್ನು ಆಶ್ರಯಿಸಿ ಬದುಕುತ್ತಿದ್ದ ಮಂದಿ ಎಲ್ಲ ಕಾಲದಲ್ಲಿಯೂ ಇದ್ದರೆನ್ನುವುದಕ್ಕೆ ೧೨ನೆಯ ಶತಮಾನದ ಜೇಡರ ದಾಸಿಮಯ್ಯನ ವಚನವೇ ಸಾಕ್ಷಿ:

"ಬಲು ಸಟೆಗನ ಭಕ್ತಿ ದಿಟವೆಂದು ನಂಬಲೀಬೇಡ
ಮಠದೊಳಗಣ ಬೆಕ್ಕು ಇಲಿಯ ಕಂಡು
ಪುಟನೆಗೆದಂತಾಯಿತ್ತು ಕಾಣಾ ರಾಮನಾಥ"

೪. "ವಿಷ್ಣೋಃ ಸರ್ವೋತ್ತಮತ್ವಂ ಸರ್ವದಾ ಪ್ರತಿಪಾದಯ" – ಮಧ್ವಾಚಾರ್ಯರ ಸಂದೇಶ.

೫. ಪ್ರೊ॥ ಕೆ. ಸಂಪದ್ಗಿರಿರಾವ್, 'ದಾಸಸಾಹಿತ್ಯ' ಐ.ಬಿ.ಎಚ್. ಪ್ರಕಾಶನ. ಪುಟ–೧೧೪.

೬. ಸಾ.ಕೃ. ರಾಮಚಂದ್ರರಾವ್, "ಪುರಂದರದಾಸರ ಸಾಮಾಜಿಕ ದೃಷ್ಟಿ" – "ಪುರಂದರದಾಸ–ಕೀರ್ತನ" ಸಂ: ಪ್ರೊ॥ ಮಧುಕರ ಯಕ್ಕುಂಡಿ, ಕ.ಸಾ.ಅಕಾಡೆಮಿ, ಬೆಂಗಳೂರು.

ಅಧ್ಯಾಯ –೫

ಸಾಂಸ್ಕೃತಿಕ ವ್ಯಾಖ್ಯಾನಗಳು

ಅ. ಭೌಗೋಳಿಕ ಹಿನ್ನೆಲೆಯಲ್ಲಿ ವ್ಯಾಸಕೂಟದ ಸಾಂಸ್ಕೃತಿಕ ಕೇಂದ್ರಗಳು

ಕ್ರಿ.ಶ.೧೫೬೫ರಲ್ಲಿಯ ರಕ್ಕಸತಕ್ಕಂಡಿ ಯುದ್ಧದಲ್ಲಿ ವಿಜಯನಗರ ಮಹಾನ್ ಸಾಮ್ರಾಜ್ಯ ಮಣ್ಣುಗೂಡಿದ ಮೇಲೆ ಹಿಂದೂಧರ್ಮಕ್ಕೆ ಮತ್ತೆ ಆಸರೆ, ಆಶ್ರಯ ದೊರೆತಿದ್ದು ತಮಿಳುನಾಡಿನ ತಂಜಾವೂರು ಸಂಸ್ಥಾನದಲ್ಲಿ. ಪುರಂದರದಾಸರು ಕಾಲವಾದ ಮೇಲೆ ದಾಸಕೂಟದ ಅಳಿದುಳಿದ ಹರಿದಾಸರುಗಳು ಅಜ್ಞಾತದ ತೆರೆಮರೆಗೆ ಸರಿದುಹೋಗಿದ್ದಿರಬೇಕು. ಮುಂದಿನ ನೂರಾರು ವರ್ಷಗಳ ಕಾಲ ಈ ಹರಿದಾಸ ಪರಂಪರೆ ತಲೆ ಎತ್ತಿದಂತೆ ಕಾಣುವುದಿಲ್ಲ. "ಸಾಮ್ರಾಜ್ಯದ ಪತನದ ನಂತರದ ನೂರಾರು ವರ್ಷಗಳವರೆಗೆ ಹರಿದಾಸಕೂಟ ಎಲ್ಲಿ, ಹೇಗೆ, ಯಾರಿಂದ ಜೀವ ಹಿಡಿದುಕೊಂಡು ಇದ್ದೀತೆಂಬುದನ್ನು ತಿಳಿಸಿಕೊಡುವಂಥ ಐತಿಹಾಸಿಕ ಪ್ರಮಾಣಗಳು ಸಿಕ್ಕುವುದಿಲ್ಲ. [*೧] "ಈ ನಡುವಿನ ಅವಧಿಯಲ್ಲಿ ಪುರಂದರದಾಸರ ಮಕ್ಕಳು ದಾಸಕೂಟ ಪರಂಪರೆಯನ್ನು ಮುಂದುವರೆಸಿರಬಹುದು ಎಂಬ ಗ್ರಹಿಕೆಯೂ ಇದೆ." [*೨]

ತಂಜಾವೂರು ಸಂಸ್ಥಾನವನ್ನು ಆಳುತ್ತಿದ್ದ ನಾಯಕ ವಂಶದವರು ಸಾಹಿತ್ಯ, ಸಂಗೀತ, ಧರ್ಮ, ಕಲೆಗಳಿಗೆ ಪ್ರೋತ್ಸಾಹವೀಯುತ್ತ ಬಂದವರು. ಕ್ರಿ.ಶ ೧೬೦೦ರಿಂದ ೧೬೩೪ರವರೆಗೆ ತಂಜಾವೂರನ್ನು ಆಳಿದ ರಘುನಾಥನಾಯಕನ ಆಳ್ವಿಕೆಯಲ್ಲಿ ವಿಶೇಷವಾಗಿ ಹಿಂದೂ ಸಂಸ್ಕೃತಿಯ ಪುನರುಜ್ಜೀವನ ನಡೆಯಿತು. ಇದೇ ಕಾಲದಲ್ಲಿ 'ಕುಂಭಕೋಣ' ಎನ್ನುವ ತಂಜಾವೂರಿನ ನೆರೆರಾಜ್ಯದಲ್ಲಿ ರಾಘವೇಂದ್ರ ಸ್ವಾಮಿಗಳು ಕಾಣಿಸಿಕೊಂಡರು. ಈ ಮೊದಲು ವ್ಯಾಸತೀರ್ಥರ ಮಾರ್ಗದರ್ಶನದಲ್ಲಿ ದಾಸಕೂಟವು ಬೆಳೆದು ವಿಪುಲವಾದ ದಾಸಸಾಹಿತ್ಯ ಸೃಷ್ಟಿಯಾದಂತೆ ನಂತರದ ಅಜ್ಞಾತದ ಅವಧಿ ಕಳೆದು ರಾಘವೇಂದ್ರ ಸ್ವಾಮಿಗಳ ಪೋಷಣೆಯಲ್ಲಿ ಮತ್ತೆ ಮುಂದಿನ ದಾಸಕೂಟ ಸಂಘಟಿತವಾಗಿ ದಾಸ ಸಾಹಿತ್ಯಕ್ಕೆ ಮತ್ತೆ ಪ್ರಚಾರ, ಪ್ರೇರಣೆಗಳು ದೊರೆತವು ಎನ್ನುವುದನ್ನು ಗುರುತಿಸಬಹುದು.

ವ್ಯಾಸತೀರ್ಥರಂತೆಯೇ ರಾಘವೇಂದ್ರಸ್ವಾಮಿಗಳು ಕೂಡ ವ್ಯಾಸಕೂಟ-ದಾಸಕೂಟಗಳೆರಡನ್ನೂ ಪೋಷಿಸಿಕೊಂಡು ಬಂದವರು. ವ್ಯಾಸತೀರ್ಥರ ಶಿಷ್ಯರಾಗಿ ನಂತರ ಕುಂಭಕೋಣದಲ್ಲಿ ನೆಲೆಯಾಗಿದ್ದ ವಿಜಯಿಾಂದ್ರತೀರ್ಥರ ಪ್ರಶಿಷ್ಯರೇ ಈ ರಾಘವೇಂದ್ರತೀರ್ಥರು. ವಿಜಯಿಾಂದ್ರತೀರ್ಥರ ಶಿಷ್ಯರಾಗಿದ್ದ ಸುಧೀಂದ್ರತೀರ್ಥರ ಶಿಷ್ಯರು ಇವರು. ಆದವಾನಿಗೆ ಸೇರಿದ್ದ, ತುಂಗಭದ್ರಾ ತೀರದಲ್ಲಿದ್ದ ಮಂಚಾಲೆ ಗ್ರಾಮದಲ್ಲಿ ಮಠ ಸ್ಥಾಪಿಸಿಕೊಂಡು ಅಲ್ಲಿಯೇ ನೆಲೆನಿಂತವರು. ಮಂಚಾಲೆಯೇ ಇಂದಿನ ಮಂತ್ರಾಲಯ. ರಾಘವೇಂದ್ರ ಸ್ವಾಮಿಗಳು ಇಂದಿಗೂ ಜನಮನದಲ್ಲಿ ಆರಾಧ್ಯ ಗುರುಗಳಾಗಿದ್ದಾರೆ.

ಹೀಗಾಗಿ ವ್ಯಾಸಕೂಟದ ಮುಂದಿನ ಪ್ರಮುಖ ವ್ಯಾಸಕೂಟದ ಸಾಂಸ್ಕೃತಿಕ ಕೇಂದ್ರವನ್ನು "ಮಂತ್ರಾಲಯ"ವೆಂದು ಗುರುತಿಸಿಕೊಳ್ಳಬಹುದಾಗಿದೆ. ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳವರ ವ್ಯಕ್ತಿತ್ವದ ಪ್ರಭಾವ ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ಹೆಚ್ಚಾಗಿ ಹರಡತೊಡಗಿತು. ಮಂತ್ರಾಲಯದ ಸುತ್ತಮುತ್ತ ಈ ಮುನಿವರ್ಯರ ಜ್ಞಾನ ಭಕ್ತಿ ತಪಶ್ಚರ್ಯೆಗಳೇ ಮನೆಮಾತಾಗಿ ಕನ್ನಡ ಹರಿದಾಸರುಗಳಿಗೆ ಸ್ಫೂರ್ತಿ, ಪ್ರೇರಣೆಗಳನ್ನು ಒದಗಿಸುವಂತಾಯಿತು. ಮಂತ್ರಾಲಯದ ನೆರೆಹೊರೆಯಲ್ಲಿನ ಪ್ರದೇಶಗಳಾದ ಕಾಖಂಡಕಿ, ಮಳಖೇಡ, ಮಾನ್ವಿ, ಲಿಂಗಸುಗೂರು ಮುಂತಾದ ಊರುಗಳಲ್ಲಿ ಹರಿದಾಸ ಪಂಥವು ಮತ್ತೆ ತಲೆಎತ್ತಿತು. ಆದವಾನಿ, ರಾಯಚೂರು ಪ್ರಾಂತ್ಯಗಳಲ್ಲಿ ಹೆಚ್ಚಾಗಿ ಹರಿದಾಸರುಗಳು ಮತ್ತೆ ಕಾಣಿಸಿಕೊಂಡರು. ಹೀಗೆ ಹಿಂದಿನಂತೆಯೇ ಯತಿವರ್ಯರ ಆಶ್ರಯ, ಪೋಷಣೆಯಲ್ಲೇ ದಾಸಕೂಟ ಮತ್ತೆ ಮೈದಳೆದು ದಾಸಸಾಹಿತ್ಯ ಸೃಷ್ಟಿಯಾಗತೊಡಗಿತು. ಯಾರಾದರೊಬ್ಬರು ಯತಿವರ್ಯರ ಆಶ್ರಯದಲ್ಲೇ ಹರಿದಾಸರ ಸಂಘಟನೆಯಾಗುವುದು, ವ್ಯಾಸಕೂಟದ ನೇತಾರರ ಮೂಲಕವೇ ಪ್ರಭಾವ, ಪ್ರೇರಣೆ ಪಡೆದು ಹರಿದಾಸರಾಗಿ ಬಾಳುವುದು. ಇದು ಹೀಗೆ ಪರಂಪರೆಯೇ ಆಗಿದ್ದು ಇತಿಹಾಸದ ನಿರ್ಮಾಣ. ನಶಿಸತೊಡಗಿದ್ದ ದಾಸ ಪರಂಪರೆಯನ್ನು ಮತ್ತೆ ಮೇಲೆತ್ತಿ ಪ್ರೋತ್ಸಾಹಿಸಿದ್ದು ವ್ಯಾಸತೀರ್ಥರಂತೆಯೇ ರಾಘವೇಂದ್ರತೀರ್ಥರ ಹಿರಿತನ.

ತಾವೂ ಸ್ವತಹ ಹರಿದಾಸರಂತೆ ವ್ಯಾಸತೀರ್ಥರ ಮೇಲ್ಪಂಕ್ತಿಯಲ್ಲಿ ನೇರವಾಗಿ ಸೇರಿಕೊಳ್ಳದಿದ್ದರೂ ಹರಿದಾಸರಿಗೆಲ್ಲ ಆಶ್ರಯ, ಅಂತಃಕರಣ ತೋರಿ ಮುನ್ನಡೆಸಿದವರು ರಾಘವೇಂದ್ರಸ್ವಾಮಿಗಳು. ಮತ್ತೆ ತಲೆ ಎತ್ತಿದ ಈಗಿನ ದಾಸಕೂಟದ ಪ್ರಮುಖರೆಂದರೆ ವಿಜಯದಾಸರು, ಪ್ರಸನ್ನವೆಂಕಟದಾಸರು. ಇವರಿಬ್ಬರೂ ರಾಘವೇಂದ್ರಸ್ವಾಮಿಗಳ ಪರಮಭಕ್ತರಾಗಿ ಅಸಂಖ್ಯ ಹಾಡುಗಳನ್ನು ಈ ಯತಿಗಳ ಕುರಿತಾಗಿಯೇ ರಚಿಸಿದ್ದಾರೆ.

ಮಂಚಾಲೆ ಅಥವಾ ಮಂತ್ರಾಲಯದ ರಾಯರೆಂದೇ ಪ್ರಸಿದ್ಧರಾದ ರಾಘವೇಂದ್ರತೀರ್ಥರ ಪ್ರಭಾವವು ಹರಡುವ ಮುನ್ನವಂತೂ ಅಜ್ಞಾತವಾಗಿ ಅಲ್ಲಲ್ಲಿ ಚದುರಿಯೇ ಹೋಗಿದ್ದ ದಾಸಕೂಟದವರು ಯಾರೂ ಎಲ್ಲಿಯೂ ಮುಂದಾಗಿ ತಲೆ ಎತ್ತಿದಂತಿಲ್ಲ. ದಾಸಕೂಟದವರ ಪರಂಪರೆಗಳಲ್ಲಿ ಕಾಣಿಸಿಕೊಂಡ ಈ ವಿಚ್ಛಿತ್ತಿಯ ಕಾಲದಲ್ಲಿ

ಭೌಗೋಳಿಕವಾದ ಕೆಲವು ಪ್ರದೇಶಗಳಲ್ಲಿ ವ್ಯಾಸಕೂಟ ಪರಂಪರೆಯ ಕೆಲವು ಯತಿಗಳು ಮಧ್ವ ಸಿದ್ಧಾಂತ ಸಂಸ್ಕೃತ ಗ್ರಂಥರಚನೆಗಳನ್ನು ಮತ್ತೆ ಮುಂದುವರೆಯಿಸಿಕೊಂಡು ಹೋದುದನ್ನು ಕಾಣಬಹುದೇ ವಿನಹಾ ಇವರುಗಳಲ್ಲಿ ಯಾರೂ ಮತ್ತೆ ಕನ್ನಡಕ್ಕೆ ಪ್ರಾಶಸ್ತ್ಯ ಕೊಟ್ಟವರಾಗಲೀ, ಹರಿದಾಸ್ಯತನವನ್ನು ಅಳವಡಿಸಿಕೊಂಡವರಾಗಲೀ ಇಲ್ಲವೇ ಇಲ್ಲ. ವ್ಯಾಸತೀರ್ಥರ ಕನ್ನಡ ಪ್ರೀತಿ-ಹರಿದಾಸ ಪೋಷಣೆಯನ್ನು ಈ ಅವಧಿಯಲ್ಲಿನ ಯತಿಗಳು ಮುಂದುವರೆಸಲಿಲ್ಲ.

ಉತ್ತರಕಾಲೀನ ವ್ಯಾಸಕೂಟದ ಸಾಂಸ್ಕೃತಿಕ ಕೇಂದ್ರಗಳು ಉತ್ತರ ಕರ್ನಾಟಕದಲ್ಲಿ

ಬಿಜಾಪುರ ಜಿಲ್ಲೆಯ 'ಇಂಡಿ' ತಾಲ್ಲೂಕಿಗೆ ಸೇರಿದ, ಭೀಮಾನದೀ ತೀರದ ಮಣೂರು ಗ್ರಾಮದವರು ಶ್ರೀ ರಘೂತ್ತಮತೀರ್ಥರು. ೧೫೫೭-೫೮ರಲ್ಲಿ ಆಶ್ರಮ ಪಡೆದರು. ಉತ್ತರಾದಿ ಮಠದ ಪೀಠದಲ್ಲಿದ್ದ ರಘುವರ್ಯತೀರ್ಥರ ಉತ್ತರಾಧಿಕಾರಿಯಾಗಿ ಮಠಾಧಿಪತಿಗಳಾದರು. ಉತ್ತರ ಕರ್ನಾಟಕದವರೇ ಆಗಿದ್ದು, ಕನ್ನಡಿಗರೇ ಆದ ಈ ಯತಿಗಳು 'ಮಠ'ದ ಪದ್ಧತಿಯಲ್ಲಿ ಹೊಸ ಪಂಥವನ್ನು ಹಾಕಿಕೊಟ್ಟವರೆಂದೂ, ಒಂದು ಮಠದ ಸಂಸ್ಥಾನವೆಂದ ಮೇಲೆ ವೈಭವ, ವೈಭವಕ್ಕೆ ತಕ್ಕ ಪರಿವಾರದವರಿರಬೇಕು ಎಂಬಿತ್ಯಾದಿ ವ್ಯವಸ್ಥೆಗಳನ್ನು ಮಾಡಿದವರು ಇವರು ಎಂದೂ ತಿಳಿಸುವ ಉಲ್ಲೇಖವಿದೆ.[*೩]

ಇವರ ಶಿಷ್ಯರುಗಳಲ್ಲಿ ಮುಂದೆ ಅನೇಕರು ದ್ವೈತಸಿದ್ಧಾಂತ ಮಂಡನೆಯಲ್ಲಿ ಪ್ರಖ್ಯಾತರಾದರು. ಏಳು ಗ್ರಂಥಗಳನ್ನು ಸಂಸ್ಕೃತದಲ್ಲಿ ರಚಿಸಿದ್ದು ಏಳೂ ಉಪಲಬ್ಧವಿವೆ. ಅವು ಹೀಗಿವೆ:

೧. ವಿಷ್ಣುತತ್ತ್ವ ನಿರ್ಣಯ ಟೀಕಾಭಾವಬೋಧಂ

೨. ತತ್ತ್ವಪ್ರಕಾಶಿಕಾ ಭಾವಬೋಧಂ

೩. ನ್ಯಾಯವಿವರಣ ಟೀಕಾ

೪. ನ್ಯಾಯರತ್ನ ಸಂಬಂಧ ದೀಪಿಕಾ

೫. ವಿವರಣೋದ್ಧಾರ

೬. ಬೃಹದಾರಣ್ಯಕೋಪನಿಷದ್ ಭಾಷ್ಯಭಾವಬೋಧಂ

೭. ಗೀತಾಭಾಷ್ಯ ಪ್ರಮೇಯ ದೀಪಿಕಾ ಭಾವಬೋಧಂ

ತಮ್ಮ ಆಶ್ರಮ ಜೀವನದ ಕಡೆಯ ಭಾಗವನ್ನು ದಕ್ಷಿಣ ಅರ್ಕಾಟ್ ಜಿಲ್ಲೆಯ ದಕ್ಷಿಣ ಪೆನ್ನಾರ್ ನದಿಯ ದಡದ ಮೇಲಿರುವ ತಿರುಕೋವಿಲೂರು ಮಠದಲ್ಲಿ ಕಳೆದರು, ಇಲ್ಲಿಯೇ ವೃಂದಾವನಸ್ಥರಾದರು. ಇಂದಿಗೂ ಈ ಯತಿಗಳ ಆರಾಧನೆಯು ಇಲ್ಲಿ ವೈಭವದಿಂದ ಜರುಗುತ್ತಿದೆ. ಮತಧರ್ಮ ಭೇದಭಾವವಿಲ್ಲದೆ ಎಲ್ಲ ರೀತಿಯ ಜನರೂ ಬಂದು ಇಲ್ಲಿ ಸೇವೆಸಲ್ಲಿಸುತ್ತಾರೆ ಎನ್ನುವ ಹೆಗ್ಗಳಿಕೆಯಿದೆ.

ಕ್ರಿ.ಶ ೧೫೨೦ರಿಂದ ೧೬೨೦ರವರೆಗೂ ಜೀವಿಸಿದ್ದರೆನ್ನಲಾದ ವೇದೇಶಭಿಕ್ಷು ಎನ್ನುವ ಯತಿವರರು ತಾವು ರಘೂತ್ತಮತೀರ್ಥರ ಶಿಷ್ಯರೆಂದು ಉಲ್ಲೇಖಿಸಿಕೊಂಡಿದ್ದಾರೆ. ಯಾವೊಂದು ಮಠದ ಪೀಠಾಧಿಪತಿಯಾಗಿದ್ದಿರದೆ ಬಿಡಿ ಸನ್ಯಾಸಿಯಾಗಿಯೇ ಸಂಚರಿಸಿಕೊಂಡಿದ್ದ ಇವರು ಮಧ್ವಾಚಾರ್ಯರ ಕೆಲವು ಉಪನಿಷದ್ ಭಾಷ್ಯಕ್ಕೂ, ಜಯತೀರ್ಥರ ಕೆಲವು ಟೀಕೆಗಳಿಗೂ ಸೇರಿದಂತೆ ಒಟ್ಟು ಹತ್ತು ಟಿಪ್ಪಣಿಗಳನ್ನು ಬರೆದಿದ್ದು ಅವು ಲಭ್ಯವಿವೆ. ಭೀಮಾನದೀ ತೀರದ ಮಣೂರಿನಲ್ಲಿಯೇ ಇವರ ವೃಂದಾವನವಿದೆ.

ರಘೂತ್ತಮತೀರ್ಥರ ಕಾಲಕ್ಕಿಂತ ಮುಂಚಿನಿಂದಲೂ ಮಣೂರು ಬಹಳ ಪ್ರಸಿದ್ಧವಾದ ವಿದ್ಯಾಕೇಂದ್ರವೆನಿಸಿಕೊಂಡಿತ್ತು. ಅಂದಿನಕಾಲದ ಮಠಗಳೆಂದರೆ ಅವು ಇಂದಿನ ವಿಶ್ವವಿದ್ಯಾಲಯಗಳು ಮಾಡುವಂಥ ಕೆಲಸ ಮಾಡುತ್ತಿದ್ದ ಜ್ಞಾನ ಪ್ರಚಾರ ಕೇಂದ್ರಗಳಾಗಿರುತ್ತಿದ್ದವು. ಇಲ್ಲಿಂದ ಹೊರಬಿದ್ದ ವಿದ್ಯಾರ್ಥಿಗಳು ಯತಿಗಳಾಗಿರಲಿ, ಗೃಹಸ್ಥರಾಗಿರಲಿ ಅವರು ಮುಂದೆ ತಾವೇ ಸ್ವತಃ ಜ್ಞಾನಪ್ರಸಾರ ಕಾರ್ಯದಲ್ಲಿ ತೊಡಗಿಕೊಂಡಿರುತ್ತಿದ್ದರು. ಶಿಷ್ಯಂದಿರನ್ನು ತಯಾರು ಮಾಡುತ್ತಿದ್ದರು. ಆದರೆ ವಿದ್ಯೆಯೆಂದರೆ ಈ ವ್ಯಾಸಕೂಟದವರಿಗೆ ಸಂಸ್ಕೃತವೇ ವಿನಹಾ ಅದು ಕನ್ನಡವಲ್ಲ.

ವೇದೇಶಭಿಕ್ಷುಗಳ ಶಿಷ್ಯರೆನಿಸಿಕೊಂಡ ಯಾದವಾಚಾರ್ಯ ಅಥವಾ ಯದುಪತಿ ಆಚಾರ್ಯ ಎನ್ನುವವರು (೧೫೮೦-೧೬೩೦) ಮಧ್ವಮತದ ಪರಂಪರೆಯಲ್ಲಿ ಬಂದ ಅನೇಕ ಗ್ರಂಥಗಳಿಗೆ ವ್ಯಾಖ್ಯಾನ ಮಾಡಿದ್ದಾರೆ. ಇವುಗಳಲ್ಲಿ ಇಂದಿಗೂ ಪ್ರಸಿದ್ಧವಾಗಿ ಮಧ್ವಮತ ಪಂಡಿತರುಗಳಲ್ಲಿ ವಿಶಿಷ್ಟ ಮನ್ನಣೆ ಗಳಿಸಿಕೊಂಡಿರುವುದು 'ನ್ಯಾಯಸುಧಾ' ಎಂಬ ಅವರ ಕೃತಿ. ಅವರ ಹೆಸರಿನಿಂದಲೇ ಈ ಕೃತಿ ಇಂದಿಗೂ 'ಯಾದುಪತ್ಯ' ಎಂದೇ ಖ್ಯಾತಿ ಉಳಿಸಿಕೊಂಡಿದೆ.

ಯದುಪತಿ ಆಚಾರ್ಯರು ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ 'ಯಕ್ಕುಂಡಿ' ಗ್ರಾಮದವರು. ಇಲ್ಲಿನ ಉತ್ತರ ಕರ್ನಾಟಕ ಬ್ರಾಹ್ಮಣ ಮನೆತನದಲ್ಲಿ ಜನಿಸಿದವರು. ಇವರು ಉತ್ತರಾದಿ ಮಠದ ವಿದ್ಯಾಧೀಶ ತೀರ್ಥರ ಸಮಕಾಲೀನ ಹಿರಿಯರಾಗಿದ್ದವರು. ಅಂದಿನ ಪ್ರಸಿದ್ಧ ವಿದ್ವಾಂಸರಾಗಿದ್ದ ಯದುಪತಿಗಳು ಅನೇಕ ಸಮರ್ಥ ಶಿಷ್ಯರನ್ನು ತಯಾರಿಸಿದರು. ಆ ಶಿಷ್ಯರಲ್ಲಿ ಪ್ರಮುಖರೆಂದರೆ ಬಿದರಹಳ್ಳಿ ಶ್ರೀನಿವಾಸಾಚಾರ್ಯ, ಶರ್ಕರ ಶ್ರೀನಿವಾಸಾಚಾರ್ಯ, ಉಮರ್ಜಿ ತಿರುಮಲಾಚಾರ್ಯ ಮುಂತಾದವರು. ಇವರೆಲ್ಲರೂ ದ್ವೈತದರ್ಶನ ಪರಂಪರೆಯ

ಪ್ರಮುಖ ವ್ಯಾಖ್ಯಾನಕಾರರಾಗಿ ಗ್ರಂಥರಚನೆ ಮಾಡಿದವರೇ. ಯದುಪತಿ ಆಚಾರ್ಯರ ಒಂಬತ್ತು ಗ್ರಂಥಗಳು ಉಪಲಬ್ಧವಿವೆ. ಇವರ ಶಿಷ್ಯ ಬಿದರಹಳ್ಳಿ ಶ್ರೀನಿವಾಸಾಚಾರ್ಯರು ಬರೆದಿರುವ ಗ್ರಂಥಗಳ ಸಂಖ್ಯೆ ಮುವ್ವತ್ತೇಳು. ಎಲ್ಲವೂ ಟಿಪ್ಪಣಿ ರೂಪದಲ್ಲಿದ್ದು, ನಿಖರ ನಿರೂಪಣೆಯಿಂದ ಕೂಡಿ ಮಧ್ವಶಾಸ್ತ್ರಾಧ್ಯಯನಕ್ಕೆ ಅತ್ಯಗತ್ಯ ನೆರವು ನೀಡುತ್ತದೆ ಎಂದು ವಿಮರ್ಶಕರ ಅಭಿಪ್ರಾಯ. ಬಿದರಹಳ್ಳಿ ಗ್ರಾಮವು ಧಾರವಾಡ ಜಿಲ್ಲೆಗೆ ಸೇರಿದ್ದು ತುಂಗಾ ಮತ್ತು ವರದಾ ನದಿಗಳ ಸಂಗಮದಿಂದ ಹದಿನೈದು ಮೈಲಿ ದೂರದಲ್ಲಿದೆ. ಯದುಪತಿ ಆಚಾರ್ಯರ ಮತ್ತೊಬ್ಬ ಶಿಷ್ಯರಾದ ಶರ್ಕರ ಶ್ರೀನಿವಾಸಚಾರ್ಯರು (೧೫೫೦-೧೬೪೦) ರಚಿಸಿರುವ ನಾಲ್ಕು ಗ್ರಂಥಗಳು ಉಪಲಬ್ಧವಿವೆ.

"ಛಲಾರಿ" ಎನ್ನುವುದು ಉತ್ತರಕರ್ನಾಟಕದ 'ಮಲಖೇಡಾ' ಎನ್ನುವ ಊರಿನ ಬಳಿ ಇರುವ ಗ್ರಾಮ. ಇಲ್ಲಿಂದ ಬಂದು ಛಲಾರಿ ಮನೆತನದವರೆಂದೇ ಪ್ರಸಿದ್ಧರಾಗಿರುವ ನಾರಾಯಣ, ನೃಸಿಂಹ, ಶೇಷ ಮತ್ತು ಸಂಕರ್ಷಣ ಎಂಬ ಆಚಾರ್ಯರುಗಳು ದ್ವೈತ ವೇದಾಂತ ಗ್ರಂಥಗಳಿಗೆ ಅಮೂಲ್ಯವಾದ ವ್ಯಾಖ್ಯಾನಗಳನ್ನು ರಚಿಸಿದ್ದಾರೆ.

ಹೀಗೆ ಉತ್ತರ ಕರ್ನಾಟಕಕ್ಕೆ, ಅದರಲ್ಲೂ ತುಂಗಭದ್ರೆಯ ಉತ್ತರಕ್ಕಿರುವ ಉತ್ತರ ಕರ್ನಾಟಕ ಪ್ರದೇಶದಲ್ಲಿನ ಕನ್ನಡಿಗರಿಗೆ ಮಧ್ವಮತದ ಗ್ರಂಥರಚನೆಗಳಲ್ಲಿ ಆಸಕ್ತಿ ಹೆಚ್ಚಾಗಿತ್ತು. ಅಂದಿನಿಂದ ಇಂದಿನವರೆಗೂ ಈ ಪ್ರದೇಶದಲ್ಲಿ ಮಧ್ವಮತದ ಅನುಯಾಯಿಗಳು ಅಸಂಖ್ಯರಿದ್ದಾರೆ.

ಉತ್ತರ ಕರ್ನಾಟಕದಲ್ಲೆಲ್ಲ ಉತ್ತರಾದಿ ಮಠದ ಗುರುಪರಂಪರೆಯ ಪ್ರಭಾವವು ವ್ಯಾಪಕವಾಗಿ ಹಬ್ಬಿತು. ಬಿಜಾಪುರ, ಬೆಳಗಾಂ, ಧಾರವಾಡ, ರಾಯಚೂರು, ಗುಲ್ಬರ್ಗ ಹಾಗೂ ಬೀದರ್ ಜಿಲ್ಲೆಗಳಲ್ಲಿ ಉತ್ತರಾದಿ ಮಠದ ಶಿಷ್ಯರೇ ತುಂಬಿಕೊಂಡರು.

ರಘೂತ್ತಮತೀರ್ಥರ ನಂತರ ಉತ್ತರಾದಿ ಮಠದ ಪೀಠಾಧಿಪತಿಗಳಾದವರು ವಿದ್ಯಾಧೀಶತೀರ್ಥರು. ಇವರ ಪೀಠಾಧಿಪತ್ಯದ ಕಾಲ ಕ್ರಿಶ ೧೬೧೯-೧೬೩೧. ವಾಕ್ಯಾರ್ಥ ಮಾಡುವುದರಲ್ಲಿ ಪ್ರಖ್ಯಾತರೆನಿಸಿಕೊಂಡಿದ್ದವರು. ಜನಾರ್ದನಸೂರಿ ಎಂಬಾತನ "ವಿದ್ಯಾಧೀಶವಿಜಯ" ಎಂಬ ಕೃತಿಯಲ್ಲಿ ಇವರ ಸಮಗ್ರ ಜೀವನದ ನಿರೂಪಣೆ ಇದೆ. ಕನ್ನಡ ಮನೆತನದ ವಿದ್ಯಾಧೀಶರು ಪೂರ್ವಾಶ್ರಮದಲ್ಲಿ ಆನಂದಾಚಾರ್ಯ ಎನ್ನುವವರ ಪುತ್ರ. ನಾನಾ ಕಡೆ ತೆರಳಿ ಬೇರೆ ಬೇರೆ ಮತದ ವಿದ್ವಾಂಸರನ್ನು ವಾದ ಮಾಡಿ ಗೆದ್ದಿರುವವರು. ಇವರ 'ವಾದ' ಪಟುತ್ವವು ಉತ್ತರಾದಿಮಠದ ಶ್ರೀ ವೇದವ್ಯಾಸತೀರ್ಥರನ್ನು ಆಕರ್ಷಿಸಿ ಇವರನ್ನು ಮಣೂರಿಗೆ ಕರೆಯಿಸಿ, ಒಪ್ಪಿಸಿ, ಆಶ್ರಮ ನೀಡಿ 'ವಿದ್ಯಾಧೀಶ'ರೆಂದು ಸನ್ಯಾಸನಾಮವನ್ನಿತ್ತರು.

ವಿದ್ಯಾಧೀಶರು ದಕ್ಷಿಣ ಹಾಗೂ ಉತ್ತರ ಭಾರತದಲ್ಲಿ ದಿಗ್ವಿಜಯ ನಡೆಸಿದರು. ದಕ್ಷಿಣದಲ್ಲಿ ಧನುಷ್ಕೋಟಿ, ಮಧುರೆ, ಶ್ರೀರಂಗ, ತಿರುಚನಾಪಳ್ಳಿ, ತಂಜಾವೂರು, ಕುಂಭಕೋಣ, ಕಾಂಚಿ, ಧರ್ಮಪುರಿ ಮತ್ತು ಉಡುಪಿಗೆ ಭೇಟಿಯಿತ್ತರು. ಉತ್ತರದಲ್ಲಿ ಕಾಶಿ ಹಾಗೂ ಗಯಾಕ್ಕೆ ಭೇಟಿಯಿತ್ತರು. ಗಯಾಕ್ಕೆ ತೆರಳಿದಾಗ ಅಲ್ಲಿಯ ಬ್ರಾಹ್ಮಣ ಮನೆತನದವರಿಗೆಲ್ಲ ಮಾಧ್ವದೀಕ್ಷೆ ಇತ್ತು ಶಿಷ್ಯರನ್ನಾಗಿ ಸ್ವೀಕರಿಸಿದರು ಎಂದು ಇತಿಹಾಸ ತಿಳಿಸುತ್ತದೆ. ಇಂದಿನವರೆಗೂ ಗಯಾದ ಬ್ರಾಹ್ಮಣರು ಉತ್ತರಾದಿ ಮಠದ ಶಿಷ್ಯರಾಗಿಯೇ ಉಳಿದಿದ್ದಾರೆ. ಈ ಐತಿಹಾಸಿಕ ಘಟನೆಯು ೧೯೩೦ರಲ್ಲಿ ನಡೆಯಿತೆಂದು 'ಗುರುಚರ್ಯಾ' ಕೃತಿ ತಿಳಿಸುತ್ತದೆ. ಅಲ್ಲಿಂದ ಮರಳಿ ಬರುತ್ತಿರುವಾಗ ಗಂಗೆ ಯಮುನೆಯರ ಮಧ್ಯಭಾಗದಲ್ಲಿರುವ ಏಕಚಕ್ರನಗರದಲ್ಲಿ ೧೯೩೧ರಲ್ಲಿ ಹರಿಪದೈಕ್ಯರಾದರು, ಅಲ್ಲಿಯೇ ವೃಂದಾವನವು ಇದ್ದು, ಈಗ ಅದನ್ನು ಗುರುತಿಸಲು ಸಾಧ್ಯವಾಗದುದರಿಂದ ಧಾರವಾಡ ಜಿಲ್ಲೆಯ ರಾಣಿಬೆನ್ನೂರಿನಲ್ಲಿ ಅವರ ಪ್ರತೀಕವನ್ನು ಸ್ಥಾಪಿಸಿಕೊಂಡು ಅವರ ಮನೆತನದವರು ಈಗಲೂ ಪ್ರತಿವರ್ಷವೂ ಆರಾಧನೆ ನಡೆಸುತ್ತಿದ್ದಾರೆ.

ವಿದ್ಯಾಧೀಶರು ಅಸಂಖ್ಯ ಶಿಷ್ಯವರ್ಗ ಹೊಂದಿದ್ದರು. ಒಟ್ಟು ಹತ್ತು ವ್ಯಾಖ್ಯಾನ ಗ್ರಂಥಗಳನ್ನು ರಚಿಸಿದ್ದಾರೆನ್ನಲಾಗಿದೆ. ಇವರ ಶಿಷ್ಯ ಕೇಶವಾಚಾರ್ಯರೆನ್ನುವವರು(೧೬೦೫-೧೬೬೦) ಗುರುವಿನ ಕಾರ್ಯಗಳನ್ನು ಮುಂದುವರಿಸಿ ಅಪೂರ್ಣಗ್ರಂಥಗಳನ್ನು ಪೂರ್ಣ ಮಾಡಿದರೆನ್ನಲಾಗಿದೆ.

ದಕ್ಷಿಣ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ (ಕರಾವಳಿ ಪ್ರದೇಶ)

ವ್ಯಾಸತೀರ್ಥರ ದಕ್ಷ ಶಿಷ್ಯರೆನಿಸಿಕೊಂಡ ವಾದಿರಾಜ ಯತಿಗಳಿಂದಾಗಿಯೇ ಕನ್ನಡನಾಡಿನ ದಕ್ಷಿಣ ಮತ್ತು ಉತ್ತರ ಕರಾವಳೀ ಪ್ರದೇಶಗಳಲ್ಲಿ ಮಧ್ವಮತ ಅನುಯಾಯಿಗಳು ಹೆಚ್ಚಿದ್ದು. ಕೆಳದಿ ಅರಸುಮನೆತನದವರ ಗೌರವಾದರಗಳನ್ನು ಗಳಿಸಿದ್ದ ವಾದಿರಾಜರು ತಮ್ಮ ಹುಟ್ಟು ಜಿಲ್ಲೆಯಾದ ದಕ್ಷಿಣ ಕನ್ನಡದಾದ್ಯಂತ ಮಾಧ್ವ ಸಂಪ್ರದಾಯವು ಗಟ್ಟಿಯಾಗಿ ನೆಲೆಯೂರುವಂತೆ ಮಾಡಿದರು. ತಮ್ಮ ಕಾರ್ಯಕ್ಷೇತ್ರವನ್ನು ಉತ್ತರಕನ್ನಡಕ್ಕೂ ವಿಸ್ತರಿಸಿ ಶಿರಸಿಯ ಬಳಿ ಸೋಂದೆಯಲ್ಲಿಯೇ ಅವರು ವೃಂದಾವನಸ್ಥರಾದುದು. ಇದಲ್ಲದೆ ವಿಜಯೀಂದ್ರ ತೀರ್ಥರ ಪ್ರಯತ್ನದಿಂದಲೂ ಅದಾಗಲೇ ಮಧ್ವಮತವನ್ನು ಸ್ವೀಕರಿಸಿ ನಡೆಯುತ್ತಿದ್ದ ಗೌಡ ಸಾರಸ್ವತ ಪಂಗಡದವರೊಡನೆ ವಾದಿರಾಜರು ತುಂಬು ಆತ್ಮೀಯತೆಯಿಂದ ನಡೆದುಕೊಳ್ಳುತ್ತಿದ್ದರು. ಭಟ್ಕಳದ ಗೋಕರ್ಣ ಮಠಾಧೀಶ ಜೀವೋತ್ತಮತೀರ್ಥರಿಗೂ ವಾದಿರಾಜರಿಗೂ ನಡುವೆ ಒಳ್ಳೆಯ ಮೈತ್ರಿ ನೆಲೆಸಿತ್ತು.

ವಾದಿರಾಜರ ಭವ್ಯ ವ್ಯಕ್ತಿತ್ವ, ಹಾಗೂ ಅವರು ಉಡುಪಿಯಲ್ಲಿ ಮರುಏರ್ಪಡಿಸಿದ್ದ ಪರ್ಯಾಯ ಪೂಜೆಯ ವ್ಯವಸ್ಥೆ ಇವುಗಳ ಪ್ರಭಾವಲಯದಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಉಡುಪಿಯ ಅಷ್ಟಮಠಗಳವರು ತಮ್ಮ ಪ್ರಭಾವವನ್ನು ಹೆಚ್ಚು ಬೆಳೆಯಿಸಿ ಬಿತ್ತರಿಸತೊಡಗಿದರು. ಉಡುಪಿಯ ಪೇಜಾವರ ಮಠದ ಹದಿನಾಲ್ಕನೇ ಪೀಠಾಧಿಪತಿಗಳಾಗಿ ಬಂದ [೧೫೮೦-೧೬೪೦] ವಿಶ್ವೇಶ್ವರ ತೀರ್ಥರು ಮಧ್ವಾಚಾರ್ಯರ ಐತರೇಯ ಭಾಷ್ಯಕ್ಕೆ ಟೀಕೆ ಬರೆದು ಪ್ರಸಿದ್ಧರಾದರು. ಇವರು ವಾದಿರಾಜರ ಶಿಷ್ಯರು ಮತ್ತು ಸಮಕಾಲೀನರು.

ವಾದಿರಾಜರು ಮಟ್ಟು ಮತ್ತು ಕೋಟೇಶ್ವರದ ಬ್ರಾಹ್ಮಣ ಸಮುದಾಯಕ್ಕೆ ಮಾಧ್ವ ದೀಕ್ಷೆಯನ್ನು ಇತ್ತುದಲ್ಲದೆ ಉತ್ತರಕನ್ನಡ ಜಿಲ್ಲೆಯಲ್ಲಿ ಕೊಂಕಣಿ ಮಾತನಾಡುವ ದೈವಜ್ಞ ಅಥವಾ ವಿಶ್ವಕರ್ಮ ಬ್ರಾಹ್ಮಣರನ್ನು ಮುದ್ರಾಂಕನವಿತ್ತು ಮಾಧ್ವ ಸಂಪ್ರದಾಯಕ್ಕೆ ಸೇರಿಸಿಕೊಂಡರು. ಇಂದಿಗೂ ಸೋದೆ ಮತ್ತು ಅದಮಾರು ಮಠ ಪರಂಪರೆಯವರು ಸ್ವರ್ಣಕಾರರು ಮುಂತಾದ ಅನೇಕ ಮೂಲ ಬ್ರಾಹ್ಮಣೇತರ ವರ್ಗಗಳನ್ನು ಶಿಷ್ಯರುಗಳನ್ನಾಗಿ ಹೊಂದಿದ್ದಾರೆ.

ಗೋಕರ್ಣ ಹಾಗೂ ಕಾಶೀ ಪೀಠಗಳು ಗೌಡಸಾರಸ್ವತರ ಮಾಧ್ವ ಪೀಠಗಳೆನ್ನಿಸಿಕೊಂಡೇ ಮುಂದುವರೆದವು. ಈ ಪೀಠಗಳಿಗೂ ಉಡುಪಿಯ ಅಷ್ಟ ಮಠಗಳಲ್ಲಿನ ಪದ್ಧತಿಯೇ (ಬಾಲ ಸನ್ಯಾಸ ಪದ್ಧತಿ ಮುಂತಾದವು) ಅನ್ವಯಿಸಿಕೊಂಡು ಬಂದಿದೆ.

ಉಡುಪಿಯ ಪಲಿಮಾರು ಮಠದ ರಾಮಚಂದ್ರತೀರ್ಥರು ನಾರಾಯಣತೀರ್ಥರಿಗೆ ೧೪೭೬ರಲ್ಲಿ ಆಶ್ರಮ ಕೊಟ್ಟು ಗೋಕರ್ಣಮಠದ ಮೊದಲ ಪೀಠಾಧಿಪತಿಗಳನ್ನಾಗಿ ಮಾಡಿದರು. ಇದೇ ನಾರಾಯಣತೀರ್ಥರು ತಮ್ಮ ಮಠವನ್ನು ಭಟ್ಕಳದಲ್ಲಿ ಸ್ಥಾಪಿಸಿ ಮುಂದೆ ಇಲ್ಲಿಯೇ ವೃಂದಾವನಸ್ಥರಾದರು. ಈ ಮಠದ ಮೂರನೆಯ ಪೀಠಾಧಿಪತಿಗಳೇ ಜೀವೋತ್ತಮತೀರ್ಥರು. (ವಾದಿರಾಜರೊಂದಿಗೆ ಗೆಳೆತನವಿದ್ದವರು.) ಇವರು ಆಲಿ ಆದಿಲ್‌ಶಾಹಿ ಎಂಬ ಬಿಜಾಪುರದ ಸುಲ್ತಾನನ ಸಮಕಾಲೀನರು. (೧೫೫೭-೧೫೮೦).

ಗೌಡಸಾರಸ್ವತ ಮಾಧ್ವಪೀಠದ ಸಾಂಸ್ಕೃತಿಕ ಚಟುವಟಿಕೆಗಳನ್ನು ವಿಸ್ತರಿಸಿದವರಲ್ಲಿ ಜೀವೋತ್ತಮತೀರ್ಥರು ಸ್ಮರಣೀಯರು. ಒಳ್ಳೆಯ ಸಂಘಟಕರಾಗಿದ್ದು ಗೌಡಸಾರಸ್ವತ ಮಾಧ್ವ ಜನಾಂಗದವರಿಗಾಗಿ ಅಂಕೋಲ, ಕುಂದಾಪುರ, ಬಸ್ರೂರು ಮುಂತಾದ ಅನೇಕ ಸ್ಥಳಗಳಲ್ಲಿ ಶಾಖಾಮಠಗಳನ್ನು ಸ್ಥಾಪಿಸಿದರು. ೧೫೯೮ರಲ್ಲಿ ಭಟ್ಕಳದಲ್ಲಿ ವೃಂದಾವನಸ್ಥರಾದರು. ಇವರ ಶಿಷ್ಯರುಗಳು ಕರ್ಮಕಾಂಡಕ್ಕೆ ಸಂಬಂಧಪಟ್ಟ ಸಾಹಿತ್ಯ ಅಧ್ಯಯನಕ್ಕೆ ಹೆಚ್ಚು ಒತ್ತು ಕೊಟ್ಟರು. ಜೀವೋತ್ತಮತೀರ್ಥರ ಉತ್ತರಾಧಿಕಾರಿಯಾಗಿ ಬಂದ ಪುರುಷೋತ್ತಮತೀರ್ಥರು "ಕರ್ಮಸಿದ್ಧಾಂತ"ವೆಂಬ ಕಿರುಹೊತ್ತಿಗೆಯನ್ನು ಸಂಪಾದಿಸಿದ್ದು, ಅದರಲ್ಲಿ ಷೋಡಶ ಸಂಸ್ಕಾರಗಳ ನಿರೂಪಣೆ ಇದೆ. ಇಂದಿಗೂ ಅದರ ಪ್ರತಿ ಮೂಲಮಠದಲ್ಲಿದೆ. ಇವರ ಪ್ರಶಿಷ್ಯರೇ ರಾಮಚಂದ್ರತೀರ್ಥರು, ಪರ್ತಗಾಳಿಯಲ್ಲಿ ಪ್ರಥಮವಾಗಿ ಮಠ ಕಟ್ಟಿಸಿದವರು.

ಮೈಸೂರು ಸಂಸ್ಥಾನ ಹಾಗೂ ರಾಯಲ ಸೀಮೆಯಲ್ಲಿ:

ಮೊದಲು ಮೈಸೂರು ಸಂಸ್ಥಾನವೆನಿಸಿಕೊಂಡಿದ್ದ ಪ್ರದೇಶದಲ್ಲೂ, ಇದಕ್ಕೆ ಸಮೀಪವಾಗಿರುವ ರಾಯಲಸೀಮಾ ಕಡೆಯ ಕೆಲವು ಭಾಗಗಳಲ್ಲೂ ಕನ್ನಡಿಗರು ನೆಲೆಸಿದ್ದ ಕಡೆಗಳಲೆಲ್ಲ ವ್ಯಾಸರಾಯಮಠದ ಮತ್ತು ರಾಘವೇಂದ್ರಸ್ವಾಮಿಮಠದ ಸಾಂಸ್ಕೃತಿಕ ಕೇಂದ್ರಗಳು ಹೆಚ್ಚಾಗಿ ಅಸ್ತಿತ್ವಕ್ಕೆ ಬಂದವು. ರಾಯಲಸೀಮೆಯ ಜಿಲ್ಲೆಗಳಲ್ಲಿ ಮಧ್ವ ಮತಾನುಯಾಯಿಗಳ ಸಂಖ್ಯೆ ಸಾಕಷ್ಟಿದ್ದು ವ್ಯಾಸರಾಯ ಮಠಗಳ ಸಂಪರ್ಕವು ನಿಕಟವಾಗಿ ಬೆಳೆಯಿತು.

ಕಂಬಾಲು ರಾಮಚಂದ್ರತೀರ್ಥರು ವ್ಯಾಸರಾಯ ಮಠದ ಪರಂಪರೆಯಲ್ಲಿ ಬಂದು ಹೆಸರುಗಳಿಸಿದವರು. (೧೫೭೫-೧೬೩೫) ಇವರು ವ್ಯಾಸತೀರ್ಥರಿಂದ ಐದನೆಯವರು. ಹಿರಿಯ ವಿದ್ವಾಂಸರೂ, ವಾಕ್ಯಾರ್ಥಕೋವಿದರೂ, ಗ್ರಂಥರಚನಕಾರರೂ ಆಗಿದ್ದರು. ಇವರು ತಮ್ಮ "ನ್ಯಾಯಸುಧಾ ಟಿಪ್ಪಣಿ"ಯ ಮಂಗಲಾಚರಣ ಶ್ಲೋಕದಲ್ಲಿ ತಾವು ವಿಜಯೀಂದ್ರತೀರ್ಥರ ಬಳಿ ವಿದ್ಯಾವ್ಯಾಸಂಗ ಮಾಡಿರುವುದಾಗಿ ಹೇಳಿಕೊಂಡಿದ್ದಾರೆ. ೧೬೩೭ರಲ್ಲಿ ಇಮ್ಮಡಿ ಕೆಂಪೇಗೌಡನಿಂದ ಇವರಿಗೆ ಗೌರವ ಸಂದುದರ ಕುರಿತು ತಾಮ್ರಶಾಸನವೊಂದು ಲಭ್ಯವಿದೆ. ಇವರ ವೃಂದಾವನವು ವೇಲೂರಿನಲ್ಲಿ ಇವರ ಗುರುಗಳಾದ ಶ್ರೀಪತಿತೀರ್ಥರ ಬೃಂದಾವನದ ಬಳಿಯೇ ಇದೆ.

ವ್ಯಾಸರಾಯ ಮಠದ ಪರಂಪರೆಯಲ್ಲಿ ವ್ಯಾಸತೀರ್ಥರ ಆರನೆಯ ಉತ್ತರಾಧಿಕಾರಿಯಾಗಿ ಬಂದ ಲಕ್ಷ್ಮೀವಲ್ಲಭತೀರ್ಥರು ಐದು ಪದ್ಯಗಳಿಂದ ಕೂಡಿದ ಪ್ರಭಾತ ಪಂಚಕಸ್ತೋತ್ರವನ್ನು ಬರೆದಿದ್ದು ಅದು 'ಸ್ತೋತ್ರ ಮಹೌದಧಿ' ಎಂಬ ಪುಸ್ತಕದ ೧೪೪ನೆಯ ಪುಟದಲ್ಲಿ ಮುದ್ರಿತವಾಗಿದೆ. ಇವರ ನಂತರ, ವ್ಯಾಸತೀರ್ಥರ ಏಳನೆಯ ಉತ್ತರಾಧಿಕಾರಿಯಾಗಿ ಬಂದವರು ಲಕ್ಷ್ಮೀನಾಥತೀರ್ಥರು. ಇವರಿಗೆ ದೊರಕಿರುವ ಎರಡು ದಾನಗಳನ್ನು ಕುರಿತ ಶಾಸನಗಳೆರಡು ಲಭ್ಯವಿವೆ.

೧. ಮಧುರೆಯ ತಿರುಮಲನಾಯಕನು ೧೬೪೩ರಲ್ಲಿ ನೀಡಿದ್ದು.

೨. ಮೂರನೇ ಶ್ರೀರಂಗರಾಯನು (ಪೆನುಕೊಂಡೆಯನ್ನು ರಾಜಧಾನಿ ಮಾಡಿಕೊಂಡಿದ್ದ ವಿಜಯನಗರ ಸಾಮ್ರಾಜ್ಯದ ಕೊನೆಯ ಚಕ್ರವರ್ತಿ) ೧೬೬೩ರಲ್ಲಿ ನೀಡಿದ್ದು.

ಇವರು ತುಂಬ ಪ್ರಭಾವಶಾಲಿ ವ್ಯಕ್ತಿತ್ವದವರಾಗಿದ್ದು ವ್ಯಾಸತೀರ್ಥರ ಸಂಸ್ಥಾನದಲ್ಲಿ ೨೫ ವರ್ಷಗಳ ಕಾಲ ಮಠಾಧಿಪತಿಗಳಾಗಿದ್ದರೆಂದು ತಿಳಿದುಬಂದಿದೆ. ವ್ಯಾಸತೀರ್ಥರ 'ನ್ಯಾಯಮೃತ'ದ ಮೇಲೆ ವೈದುಷ್ಯಪೂರ್ಣ ವ್ಯಾಖ್ಯಾನ ರಚಿಸಿದ್ದಾರೆ. ಶ್ರೀರಂಗದಲ್ಲಿ ಇವರು ವೃಂದಾವನಸ್ಥರಾದರು.

ಲಕ್ಷ್ಮೀನಾಥತೀರ್ಥರ ಶಿಷ್ಯರಲ್ಲಿ "ಕುಂಡಲಗಿರಿಸೂರಿ" ಎಂಬಾತ ಈ ಕಾಲದ ಪ್ರಭಾವಶಾಲೀ ಗ್ರಂಥಕಾರನೆನಿಸಿಕೊಂಡಿದ್ದಾನೆ. ಮಧ್ವಶಾಸ್ತ್ರ ಅಧ್ಯಯನಕ್ಕೆ ಪ್ರಮುಖ ವ್ಯಾಖ್ಯಾನಗಳಿವು ಎನ್ನಲಾಗಿದೆ.

ತಮಿಳು ನಾಡಿನಲ್ಲಿ

ವ್ಯಾಸತೀರ್ಥರ ಮತ್ತೊಬ್ಬ ದಕ್ಷ ಶಿಷ್ಯರೆನಿಸಿದ ವಿಜಯೀಂದ್ರತೀರ್ಥರ ಕಾಲದಲ್ಲಿ ತಮಿಳುನಾಡಿನಲ್ಲಿ ಮಧ್ವಮತದ ವಿಜಯಪತಾಕೆ ಎತ್ತರದಲ್ಲಿ ರಾಜಿಸಿದ್ದು, ಅನೇಕ ಕನ್ನಡಿಗರು ಅಲ್ಲಿ ವಲಸೆ ಬಂದು ನೆಲೆಸಿ ಮಧ್ವಮತಾನುಯಾಯಿಗಳಾಗಲು ಅವಕಾಶವಾಯಿತು. ತಮಿಳುನಾಡಿನ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಅಂದಿನ

ರಾಜಕೀಯ ಪರಿಸ್ಥಿತಿಯಿಂದಾಗಿ ಈ ವಲಸೆಗೆ ಪ್ರಮುಖ ಕಾರಣವೇರ್ಪಟ್ಟಿತು. ವ್ಯಾಸರಾಯಮಠ ಹಾಗೂ ರಾಯರಮಠದ ಗುರುಗಳ ಸಂಚಾರದಿಂದಲೂ, ಈ ಗುರುಪೀಠದವರು ಅಂದಿನ ವಿಜಯನಗರ ಸಾಮ್ರಾಜ್ಯದ ಸಾಮಂತರಾಜರ ಮತ್ತು ಪ್ರತಿನಿಧಿಗಳ ಮೇಲೆ ಹೊಂದಿದ್ದ ಪ್ರಭಾವದಿಂದಲೂ ತಮಿಳುನಾಡಿನಲ್ಲಿ ಕನ್ನಡಿಗರ ವಲಸೆಗೆ ಕಾರಣವಾಯಿತು. ಇಷ್ಟಾದರೂ ತಮಿಳುನಾಡಿನಲ್ಲಿ ತಮಿಳು ಮಾತೃಭಾಷೆಯಾಗಿ ಉಳ್ಳವರಾರೂ ಮಧ್ವಮತ ಸ್ವೀಕರಿಸಿಯೇ ಇಲ್ಲ ಎನ್ನುವುದು ಗಮನಾರ್ಹ ಸಂಗತಿ.

ಆಂಧ್ರ ಪ್ರದೇಶದಲ್ಲಿ

ಮಧ್ವಾಚಾರ್ಯರ ನೇರ ಶಿಷ್ಯರಾದ ನರಹರಿತೀರ್ಥರ (ಕಳಿಂಗ ರಾಜ್ಯದ ಮಂತ್ರಿಗಳಾಗಿದ್ದವರು) ಕಾಲದಲ್ಲಿಯೇ ಆಂಧ್ರಪ್ರದೇಶದ ತೀರದಲ್ಲಿ ಮಧ್ವಮತದ ಪ್ರಭಾವ ಸಾಕಷ್ಟು ಹರಡಲು ಅವರೇ ಸ್ವತಃ ಕಾರಣರಾಗಿದ್ದರು. "ಶ್ರೀಕೂರ್ಮಂ" ಮತ್ತು "ಸಿಂಹಾಚಲಂ" ಮಂದಿರಗಳಲ್ಲಿ ದೊರೆತಿರುವ ಶಾಸನಗಳೇ ಇದಕ್ಕೆ ಸಾಕ್ಷಿಯಾಗಿವೆ. ನಂತರವೂ ಇಲ್ಲಿ ಮಧ್ವ ಮಠಗಳ ಸಂಪರ್ಕವು ನಿರಂತರವಾಗಿ ಮುಂದುವರೆದುಕೊಂಡು ಬಂದಿತು. ಉತ್ತರಾದಿ ಮಠಗಳು ಇಲ್ಲಿ ಹೆಚ್ಚಿನ ಕಡೆ ಸ್ಥಾಪಿತವಾದವು. ಮಂತ್ರಾಲಯದಲ್ಲಿ ರಾಘವೇಂದ್ರಸ್ವಾಮಿಗಳು ನೆಲೆಸಿದ ಮೇಲೆ ಇಲ್ಲಿನ ಜನರಿಗೆ ಅವರ ಪ್ರಭಾವಲಯದ ಸಂಪರ್ಕ ಹೆಚ್ಚು ಹೆಚ್ಚಾಗಿ ದೊರೆತಿತು. ಹೈದರಬಾದ್‌ಕರ್ನಾಟಕ ಪ್ರದೇಶದ ಕನ್ನಡ ಮನೆತನದವರು ಉತ್ತರಾದಿ ಮಠಗಳ ಶಿಷ್ಯರೂ ಆಗಿದ್ದು ರಾಯರ ಆರಾಧಕರಾದರು.

ಹೀಗಾಗಿ ವಿಶೇಷತಃ ಮಂತ್ರಾಲಯದಲ್ಲಿ ನೆಲೆಸಿ ಪ್ರಖ್ಯಾತರಾದ ರಾಘವೇಂದ್ರತೀರ್ಥರನ್ನು ಕುರಿತು ವಿವರವಾಗಿ ಅರಿಯುವ ಅಗತ್ಯವಿದೆ. ಅವರ ಕಾಲದಲ್ಲಿಯೂ, ನಂತರದ ಶತಮಾನಗಳಲ್ಲಿಯೂ, ಇಂದಿನ ದಿನಗಳಲ್ಲೂ ಕೂಡ ಮಂತ್ರಾಲಯವು ವಿಶೇಷವಾಗಿ ವ್ಯಾಸಕೂಟದ ಹಾಗೂ ದಾಸಕೂಟದ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದು ಉಳಿದಿರುವುದು ಗಮನಾರ್ಹವಾಗಿದೆ. ವ್ಯಾಸತೀರ್ಥರ ನಂತರ ರಾಘವೇಂದ್ರಸ್ವಾಮಿ(ತೀರ್ಥ)ಗಳವರೇ ವ್ಯಾಸಕೂಟ, ದಾಸಕೂಟಗಳೆರಡಕ್ಕೂ ಪೋಷಕರಾಗಿ, ಪ್ರೇರಕರಾಗಿ ನಿಂತವರು.

ಶ್ರೀರಾಘವೇಂದ್ರ ಯತಿವರ್ಯರ ಗುರುಗಳು

ವ್ಯಾಸತೀರ್ಥರ ಶಿಷ್ಯರಾದ ವಿಜಯೀಂದ್ರತೀರ್ಥರು ಕುಂಭಕೋಣದಲ್ಲಿ ನೆಲೆಯಾಗಿ ನಿಂತು ಅಲ್ಲಿನ ತಮ್ಮ ಮಠವನ್ನು ಪ್ರಮುಖ ವಿಶ್ವವಿದ್ಯಾಲಯವನ್ನಾಗಿ ಮಾಡಿ "ದಕ್ಷಿಣದ ಕಾಶಿ" ಎಂದು ಹೆಸರಾಗುವ ಹಾಗೆ ಮಾಡಿದ ಮೇಲೆ ಸುತ್ತಮುತ್ತಣ ನಾಡಿನಿಂದ ಅನೇಕ ಪಂಡಿತರುಗಳು, ಬುದ್ಧಿಜೀವಿಗಳು ಕುಟುಂಬ ಸಮೇತ ತಮಿಳುನಾಡಿಗೆ ವಲಸೆ ಬಂದು ಅಲ್ಲಿಯೇ ನೆಲೆನಿಂತರು. ವಿಜಯೀಂದ್ರತೀರ್ಥರ ಶಿಷ್ಯರೂ ಉತ್ತರಾಧಿಕಾರಿಗಳೂ ಆದವರೇ

ಸುಧೀಂದ್ರತೀರ್ಥರು. ಅಗಾಧ ಮಹಿಮಾನ್ವಿತರೆನ್ನಿಸಿದ ರಾಘವೇಂದ್ರತೀರ್ಥರ ಗುರುಗಳು ಇವರು. ಅತ್ಯಂತ ವಿಲಕ್ಷಣ ವ್ಯಕ್ತಿತ್ವದವರು ಇವರು ಎಂದೇ ಹೆಸರಾಗಿದ್ದಾರೆ. ಸಾಮಾನ್ಯವಾಗಿ ಮಧ್ವ ಮತಾನುಯಾಯಿ ಪಂಡಿತರುಗಳಿಗೆ ತತ್ತ್ವಶಾಸ್ತ್ರ ಹಾಗೂ ದರ್ಶನಶಾಸ್ತ್ರಗಳ ಮನನ, ಪಠನ ಬಿಟ್ಟು ಗಮನವು ಬೇರೆ ಯಾವುದರತ್ತಲೂ ಸರಿಯುವುದಿಲ್ಲ ಎಂಬಂತಿದ್ದ ಆ ಕಾಲದಲ್ಲಿ ಸುಧೀಂದ್ರತೀರ್ಥರು ಮಾತ್ರ ಕಾವ್ಯಾಲಂಕಾರ ನಾಟಕ ಕ್ಷೇತ್ರಗಳತ್ತಲೂ ತಮ್ಮ ಗಮನ ಹರಿಸಿ ಸಾಧನೆ ಮಾಡಿದ್ದಲ್ಲದೆ ಧರ್ಮದರ್ಶನಗಳಲ್ಲಿಯೂ ಅನೇಕ ಕೊಡುಗೆಗಳನ್ನು ನೀಡಿದ್ದಾರೆ.

ಸಾಮಾನ್ಯವಾಗಿ ದ್ವೈತ ದಿಗ್ದಂತಿ ಪಂಡಿತರುಗಳಿಗೆ ಅರಸಿಕರು (ಗೊಡ್ಡುಗಳು, ವೇದಾಂತ ಬಿಟ್ಟರೆ ಬೇರೇನೂ ಗೊತ್ತಿಲ್ಲದ ಶುಷ್ಕರು) ಎಂಬ ಕಲಂಕವಿದ್ದ ಕಾಲದಲ್ಲಿ ಸುಧೀಂದ್ರತೀರ್ಥರು ಈ ಮಾತಿಗೆ ಅಪವಾದವಾದರೆನ್ನಲಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ಮೌಲ್ಯಾತ್ಮಕವಾದ ಗ್ರಂಥಗಳನ್ನು ನೀಡಿದವರು, ಒಣವೇದಾಂತದ ಮರುಭೂಮಿ ಎಂದು ಕೆಲವೊಮ್ಮೆ ಅನ್ನಿಸಬಹುದಾದ ಧರ್ಮದರ್ಶನಗಳಲ್ಲಿ ಹಸಿರು ಕಾಣಿಸಿಕೊಟ್ಟವರು ಸುಧೀಂದ್ರತೀರ್ಥರು ಎನ್ನುವ ಅಭಿಪ್ರಾಯವಿದೆ.

ನಾರಾಯಣಚಾರ್ಯ ಎನ್ನುವ ಪಂಡಿತರು ಬರೆದಿರುವ "ರಾಘವೇಂದ್ರ ವಿಜಯ" ಕೃತಿಯಲ್ಲಿ ವಿಜಯನಗರದ ಅರಸನಾದ ವೆಂಕಟಪತಿರಾಯನು ಸುಧೀಂದ್ರತೀರ್ಥರಿಗೆ ರತ್ನಾಭಿಷೇಕ ಮಾಡಿರುವುದನ್ನು ಚಿತ್ರಿಸಿದ್ದಾರೆ. ತಂಜಾವೂರಿನ ರಘುನಾಥನಾಯಕನ ಗೌರವಾದರಗಳಿಗೂ ಸುಧೀಂದ್ರತೀರ್ಥರು ಪಾತ್ರರಾಗಿದ್ದರೆನ್ನುವುದನ್ನೂ ಅವರೇ ಈ ಕೃತಿಯಲ್ಲಿ ದಾಖಲಿಸಿದ್ದಾರೆ. ಜ್ಞಾನಿ ಹಾಗೂ ಕವಿಯಾಗಿ ಮಠಾಧಿಪತ್ಯದಲ್ಲಿದ್ದ ವ್ಯಕ್ತಿ ಇವರು.

ಸುಧೀಂದ್ರತೀರ್ಥರ ಕಾಲವು ೧೫೬೧ ರಿಂದ ೧೬೨೩. ಬಾಲ್ಯನಾಮವು ನಾರಾಯಣ ಎನ್ನುವುದಾಗಿತ್ತು. ವಿಜಯೀಂದ್ರರಲ್ಲಿ ಪೂರ್ಣ ವಿದ್ಯಾಭ್ಯಾಸಗಳಿಕೆಯಾಯಿತು. "ಷಡ್ದರ್ಶನಾಚಾರ್ಯ" ಎಂಬ ಹೆಗ್ಗಳಿಕೆಗೂ ಪಾತ್ರರಾದರು. ಗ್ವಾಲಿಯರ್ ಮಹಾರಾಜರಿಂದ ಇವರು "ದಿಗ್ವಿಜಯ ಸಿಂಹಾಸನಾಧೀಶ್ವರ" ಎನ್ನುವ ಪ್ರಶಸ್ತಿಯನ್ನೂ, ಸುವರ್ಣಪೀಠ ಮತ್ತು ಶ್ವೇತಚ್ಛತ್ರಗಳ ಗೌರವ ಸಮರ್ಪಣೆಯನ್ನೂ ಪಡೆದವರಾದರು. ಬಿಜಾಪುರದ ಸುಲ್ತಾನನಾಗಿದ್ದ ಆದಿಲ್‌ಷಾ ಇವರಿಗೆ ಜಗದ್ಗುರು ಎನ್ನುವ ಪ್ರಶಸ್ತಿ ನೀಡಿ 'ಆನೆಹೊಸೂರು' ಎಂಬ ಗ್ರಾಮವನ್ನು ಉಂಬಳಿಯಾಗಿತ್ತನೆಂದು ಇತಿಹಾಸ ಹೇಳುತ್ತದೆ. ಕರ್ನಾಟಕದ ದೊರೆ ಇಮ್ಮಡಿ ರಂಗರಾಜ ಮಹಾಪ್ರಭುಗಳು ಹಂಪೆಯ ಪಂಪಾ ವಿರೂಪಾಕ್ಷನ ದಿವ್ಯಸನ್ನಿಧಿಯಲ್ಲಿ ೧೫೭೬ರ ಜನವರಿ ೨೮ರಂದು (ಯುವಸಂವತ್ಸರ ಮಾಘ, ಕೃಷ್ಣ ತ್ರಯೋದಶಿ ಸ್ಥಿರವಾರದಂದು) ಪಂಚಗ್ರಾಮಗಳನ್ನು (ಬಚ್ಚನಹಾಡು, ಖ್ಯಾಡ, ಯಡವಾಡ, ಚಂಚಿಲ, ಅರಳೀಹಳ್ಳಿ) ನೀಡಿ ಗೌರವಿಸಿದ್ದಾರೆಂದು ಶಾಸನವೊಂದು ತಿಳಿಸುತ್ತದೆ.

ಸುಧೀಂದ್ರತೀರ್ಥರು ಅಲಂಕಾರ ಶಾಸ್ತ್ರ ಮತ್ತು ನಾಟಕಗಳನ್ನು ಬರೆದುದಲ್ಲದೆ ತರ್ಕತಾಂಡವದ ಮೇಲೆ 'ಸದ್ಯುಕ್ತಿ ರತ್ನಾಕರ' ಎಂಬ ಹೆಸರಿನ ವ್ಯಾಖ್ಯಾನ ಬರೆದಿದ್ದಾರೆ. ಇವಲ್ಲದೆ ಭಾಗವತದ ಎರಡನೇ ಮತ್ತು ಹನ್ನೊಂದನೇ ಸ್ಕಂಧಗಳನ್ನು ಕುರಿತ ವ್ಯಾಖ್ಯಾನ, "ಸುಭದ್ರಾ ಧನಂಜಯ"ವೆಂಬ ನಾಟಕ ಕೂಡ ರಚಿಸಿದ್ದಾರೆ. "ಅಲಂಕಾರ ಮಂಜರೀ" ಎಂಬ ಅಲಂಕಾರ ಶಾಸ್ತ್ರದ ಕೈಪಿಡಿ, "ಅಲಂಕಾರ ನಿಕಷ" ಎಂಬ ಇನ್ನೊಂದು ಅಲಂಕಾರಶಾಸ್ತ್ರ ಗ್ರಂಥ ರಚಿಸಿದ್ದಾರೆ. "ಸಾಹಿತ್ಯ ಸಾಮ್ರಾಜ್ಯ"ವೆಂಬ ಅಪೂರ್ವ ಗ್ರಂಥರಚನೆ ಮಾಡಿ ಅದರಲ್ಲಿ ಸಾಹಿತ್ಯಮೀಮಾಂಸೆಯ ಮುಖ್ಯ ವಿಷಯಗಳನ್ನೆಲ್ಲಾ ಕೂಲಂಕಷವಾಗಿ ವಿಮರ್ಶಿಸಿದ್ದಾರೆ. ಸಾಹಿತ್ಯಶಾಸ್ತ್ರ ಮೀಮಾಂಸೆಗೆ ಇದೊಂದು ಅಮೂಲ್ಯಕೊಡುಗೆ ಎಂದು ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. ಸರಳವಾದ, ಗಂಭೀರವಾದ ಶೈಲಿಯಲ್ಲಿ ಕಾವ್ಯದ ಲಕ್ಷಣಾದಿಗಳನ್ನು ಕುರಿತು ಸಮಗ್ರ ಪರಿಶೀಲನೆಯನ್ನು ಸುಧೀಂದ್ರತೀರ್ಥರು ಮಾಡಿದ್ದಾರೆ. "ರಸ, ರೀತಿ, ಅನುಮಾನ, ಔಚಿತ್ಯ ಮತ್ತು ಧ್ವನಿ, ಈ ವಿಷಯಗಳಲ್ಲಿ ಸರ್ವಮಾನ್ಯರಾದ ಪೂರ್ವಸೂರಿಗಳ ಅಭಿಪ್ರಾಯಗಳನ್ನೆಲ್ಲಾ ಕ್ರೋಢೀಕರಿಸಿ, ವಿಮರ್ಶಿಸಿ, ತಮ್ಮ ನಿರ್ಣಯವನ್ನು ಅಸಂದಿಗ್ಧ ರೀತಿಯಲ್ಲಿ ನಿರೂಪಿಸಿರುವುದು ಈ ಗ್ರಂಥದ ವೈಶಿಷ್ಟ್ಯ".[*೪]

ಹೀಗೆ ಜ್ಞಾನ, ಕವಿತ್ವ, ವಿಮರ್ಶಾ ಪ್ರಜ್ಞೆಗಳನ್ನೊಳಗೊಂಡಿದ್ದ ಸುಧೀಂದ್ರತೀರ್ಥರು ತಮ್ಮ ಶಿಷ್ಯನನ್ನಾಗಿ ರಾಘವೇಂದ್ರತೀರ್ಥರನ್ನು ಅಪಾರ ಜ್ಞಾನನಿಧಿಯಾಗಿ ಭಾವುಕ ಭಕ್ತಕವಿಯಾಗಿ ಕಡೆದುದರಲ್ಲಿ ಅಚ್ಚರಿಯೇನಿಲ್ಲ. ಕ್ರಿ.ಶ.೧೬೨೩ರಲ್ಲಿ ಸುಧೀಂದ್ರತೀರ್ಥರು ಇಹಲೋಕದ ಬದುಕಿಗೆ ವಿದಾಯ ಹೇಳಿದರು. ಹಂಪೆಯ ನಡುಗಡ್ಡೆಯ ನವವೃಂದಾವನದಲ್ಲಿ ಒಂದಾಗಿ, ವ್ಯಾಸತೀರ್ಥರ ವೃಂದಾವನದ ಸಮೀಪವೇ ಇವರ ವೃಂದಾವನವೂ ಇದೆ.

ಶ್ರೀ ರಾಘವೇಂದ್ರ ಗುರು ಸಾರ್ವಭೌಮರು

ಬದುಕು-ಬರಹ

ಸುಧೀಂದ್ರತೀರ್ಥರ ಉತ್ತರಾಧಿಕಾರಿಯಾಗಿ ಅವರ ಪ್ರಿಯ ಶಿಷ್ಯ ವೆಂಕಟನಾಥಾಚಾರ್ಯರು "ಶ್ರೀ ರಾಘವೇಂದ್ರ ತೀರ್ಥ" ಅಭಿದಾನದಲ್ಲಿ, ಆನಂದತೀರ್ಥ(ಮಧ್ವಾಚಾರ್ಯ)ರ ಶಿಷ್ಯ ಪರಂಪರೆಯ ಉತ್ತರಾದಿ ಮಠದ ಒಂಬತ್ತನೆಯ ತಲೆಮಾರಿನ ಯತಿಗಳಾಗಿ ಕುಂಭಕೋಣ ಮಠದ ಸಂಸ್ಥಾನಾಧಿಪತಿಗಳಾದರು. ಇವರು ಪೂರ್ವಾಶ್ರಮದಲ್ಲಿ ಕುಂಭಕೋಣದ ಬೀಗಮುದ್ರೆ ಎಂಬ ಹೆಸರಿನ ವೈಣಿಕ ಮನೆತನದವರು. ಗೌತಮ ಗೋತ್ರ ವಂಶಸ್ಥರು. ವಿಜಯನಗರ ರಾಜಾಸ್ಥಾನದಲ್ಲಿ ಆಸ್ಥಾನ ವೀಣಾವಿದ್ವಾಂಸರೆನಿಸಿಕೊಂಡಿದ್ದು ಸಾಮ್ರಾಟ ಕೃಷ್ಣದೇವರಾಯನಿಗೆ ವೀಣಾವಾದನವನ್ನು ಹೇಳಿಕೊಟ್ಟ ಗುರುವಾಗಿದ್ದವರು"ವೀಣಾ ಕೃಷ್ಣಭಟ್ಟರು", ಇವರ ಮಗ ಕನಕಾಚಲಭಟ್ಟರು. ಇವರ ಮಗ ತಿಮ್ಮಣ್ಣಭಟ್ಟರು. ಇವರು ಕೂಡ ವೀಣಾವಾದನ ಪಾರಂಗತರು. ತಿಮ್ಮಣ್ಣಭಟ್ಟರು ಹಾಗೂ ಗೋಪಿಕಾಂಬಾ ಈ ದಂಪತಿಗಳ ಪುತ್ರನಾಗಿ ವೆಂಕಟನಾಥರು ಜನ್ಮತಳೆದರು. ಕ್ರಿ.ಶ ೧೫೯೫-ಮನ್ಮಥನಾಮ ಸಂವತ್ಸರದ ಫಾಲ್ಗುಣ ಶುಕ್ಲ ಸಪ್ತಮಿಯ ಗುರುವಾರದಂದು ಮೃಗಶಿರಾ ನಕ್ಷತ್ರದಲ್ಲಿ ಮುಂದೆ 'ರಾಘವೇಂದ್ರ ಸ್ವಾಮಿ'ಯಾಗಿ ರೂಪುಗೊಳ್ಳಲಿರುವ ಮಗು ಈ ಭೂಮಿಯಲ್ಲಿ ಜನಿಸಿತು.

ಬಾಲ್ಯದಲ್ಲಿ ಬಹುಬೇಗನೇ ಈ ಬಾಲಕನಿಗೆ ಮಾತಾಪಿತೃ ವಿಯೋಗವಾಯಿತು. ತನ್ನ ಅಕ್ಕಭಾವಂದಿರ ಆಸರೆಯಲ್ಲಿ, ಭಾವ ಲಕ್ಷ್ಮೀನರಸಿಂಹಾಚಾರ್ಯರಲ್ಲಿಯೇ ವಿದ್ಯಾಭ್ಯಾಸ ಕಲಿಯುತ್ತ ಹುಡುಗ ದೊಡ್ಡವನಾದ. ವೀಣಾವಾದನದಲ್ಲೂ ಪರಿಣಿತಿ ಪಡೆದ. ಹತ್ತೊಂಬತ್ತನೆಯ ವಯಸ್ಸಿನಲ್ಲಿದ್ದಾಗ ೧೬೧೪ರಲ್ಲಿ ಸರಸ್ವತಿ ಎಂಬ ಕನ್ಯೆಯೊಂದಿಗೆ ವಿವಾಹವಾಯಿತು. ತುಂಡೀರಮಂಡಲದಲ್ಲಿ ಖ್ಯಾತವಾಗಿದ್ದ 'ಕಾವೇರಿಪಟ್ಟಣಂ' ಎಂಬಲ್ಲಿ ಈ ದಂಪತಿಗಳು ನೆಲೆಸಿದರು. ಅನ್ಯೋನ್ಯ ದಾಂಪತ್ಯದಲ್ಲಿನ ಪುತ್ರನಾಗಿ "ಲಕ್ಷ್ಮೀನಾರಾಯಣ" ಜನಿಸಿದ.

ನಂತರದ ದಿನಗಳಲ್ಲಿ ಆ ಪರಿಸರದಲ್ಲಿ ಮಳೆಬೆಳೆಯಾಗದೆ ಕ್ಷಾಮ ಕಾಣಿಸಿಕೊಂಡ ಕಾರಣ ವೆಂಕಟನಾಥಾಚಾರ್ಯರ ಕುಟುಂಬವೂ ತೀರಾ ಬಡತನದ ಬವಣೆ ಎದುರಿಸಬೇಕಾಗಿ ಬಂದಿತು. ಕುಂಭಕೋಣದ ಸುಧೀಂದ್ರತೀರ್ಥರಲ್ಲಿಗೆ ಆಸರೆ ಬೇಡಿ ಪಯಣಿಸಿದರು. ದಂಪತಿಗಳನ್ನು ಆದರಿಸಿ ಸುಧೀಂದ್ರತೀರ್ಥರು ಮಠದಲ್ಲಿಯೇ ವಾಸವಾಗಿದ್ದುಕೊಂಡು ಪಾಠ ಪ್ರವಚನಗಳನ್ನು ಮಾಡಿಕೊಂಡಿರಿ ಎಂದು ವ್ಯವಸ್ಥೆ ಮಾಡಿಕೊಟ್ಟರು

ವೆಂಕಟನಾಥಾಚಾರ್ಯರಲ್ಲಿ ಹುದುಗಿದ್ದ ಅಪಾರ ಪ್ರತಿಭೆ, ಪರಿಶ್ರಮದಿಂದ ಅಧ್ಯಯನ ನಡೆಸಿ ಜ್ಞಾನ ಸಂಪಾದಿಸುವ ಪರಿ ಎಲ್ಲವನ್ನೂ ಸುಧೀಂದ್ರತೀರ್ಥರು ಗಮನಿಸುತ್ತಲೇ ಇದ್ದರು. "ಶ್ರೀ ನ್ಯಾಯ ಸುಧಾ ಪರಿಮಳ"ವೆಂಬ ಜಯತೀರ್ಥರ ಕೃತಿಗೆ ವೆಂಕಟನಾಥಾಚಾರ್ಯ ತಾನೇ ರಚಿಸಿದ್ದ ಅರ್ಥ, ವ್ಯಾಖ್ಯಾನಗಳು ಒಮ್ಮೆ ಅವರ ಕಣ್ಣಿಗೆ ಬಿದ್ದವು. ತರುಣನ ಮೇಧಾವಿತನಕ್ಕೆ ಅವರ ಮನಸ್ಸು ಸೋತಿತು. ಪ್ರಿಯ ಶಿಷ್ಯನನ್ನಾಗಿ ಸ್ವೀಕರಿಸಿ ಮತ್ತಷ್ಟು ಆಳವಾಗಿ ವ್ಯಾಕರಣ, ಮೀಮಾಂಸೆ, ವ್ಯಾಸರಾಜರ ಚಂದ್ರಿಕಾ, ನ್ಯಾಯಾಮೃತ, ತರ್ಕತಾಂಡವಗಳನ್ನು ಅಧ್ಯಯನ ಮಾಡುವಂತೆ ಪ್ರೇರೇಪಿಸಿದರು,ಪಾಠ ಹೇಳಿದರು. ಹೀಗೆ ಗುರು ಸುಧೀಂದ್ರತೀರ್ಥರಲ್ಲಿ ತಾವೇ ಪಾಠಗಳನ್ನು ಕೇಳುವುದು, ಜೊತೆಯಾಗಿ ಉಳಿದ ಪ್ರಾರಂಭಿಕ ಶಿಷ್ಯರಿಗೆ ಮಠದಲ್ಲಿ ತಾವೇ ಪಾಠವನ್ನು ಹೇಳುವುದು ಈ ರೀತಿ ವೆಂಕಟನಾಥರ ದಿನಗಳು ಮುಂದುವರೆದವು.

ಗುರುಗಳ ಜೊತೆಗೆ ಕೆಲವು ದಿಕ್ಕಿಗೆ ಸಂಚಾರದಲ್ಲೂ ಜೊತೆಯಾದರು. ಹಾಗೆ ಸಂಚಾರದಲ್ಲಿದ್ದಾಗ ಕೆಲವು ವಿದ್ವಾಂಸರೊಂದಿಗೆ ವಾಕ್ಯಾರ್ಥ ಮಾಡಿ ವಿಜಯವನ್ನು ಪಡೆದು ಗುರುವಿಗೆ ಅಪೂರ್ವ ಸಂತೋಷವನ್ನು ನೀಡಿದರು. ಅಂದಿನ ದಿನಗಳಲ್ಲಿ ದಕ್ಷಿಣ ಭಾರತದ ಸಾಂಸ್ಕೃತಿಕ ರಾಜಧಾನಿಯೆನಿಸಿದ್ದ ತಂಜಾವೂರಿಗೆ ಗುರುಶಿಷ್ಯರು ಭೇಟಿ ಇತ್ತರು. ಅಲ್ಲಿಯ ರಾಜಾಸ್ಥಾನದಲ್ಲಿ ಪಂಡಿತ ವೃಂದದಿಂದ ವ್ಯಾಕ್ಯಾರ್ಥಗೋಷ್ಠಿ ಏರ್ಪಾಡಾಯಿತು. ವೆಂಕಟನಾಥರು ಅದ್ಭುತವಾದ ಯಶಸ್ಸು ಗಳಿಸಿದರು. ಅವರ ತಲಸ್ಪರ್ಶೀ ಅಧ್ಯಯನದ ಕುರುಹಾಗಿ ಕಂಡುಬಂದ ವಾಕ್‌ವೈಭವ,ಸಮರ್ಥನ ಸಾಮರ್ಥ್ಯ, ವೇದವೈದುಷ್ಯ ಇವೆಲ್ಲವೂ ಅಂದಿನ ತಂಜಾವೂರಿನ ಅಮಾತ್ಯರಾಗಿದ್ದ ಯಜ್ಞನಾರಾಯಣ ದೀಕ್ಷಿತರನ್ನು ಪ್ರಭಾವಿತಗೊಳಿಸಿ ಸಾಮ್ರಾಟ ರಘುನಾಥ ಭೂಪಾಲನಿಂದ ವಿಶೇಷವಾದ ಸನ್ಮಾನ,ಗೌರವಗಳನ್ನು ಕೊಡಮಾಡಿಸುವಂತಾಯಿತು.

ಗುರು ಸುಧೀಂದ್ರತೀರ್ಥರಿಂದಲೇ "ಮಹಾಭಾಷ್ಯ ವೆಂಕಟನಾಥಾಚಾರ್ಯ" ಎಂಬ ಬಿರುದೂ ವೆಂಕಟನಾಥರಿಗೆ ಲಭ್ಯವಾಯಿತು. ಭಗವಂತನಲ್ಲಿ ಸದಾ ನೆಲೆಸಿದ್ದ ನಿಶ್ಚಲ ಭಕ್ತಿ, ಸೌಮ್ಯತೆ ತುಂಬಿದ್ದ ಮುಖ, ಸೌಜನ್ಯಯುತ ನಡವಳಿಕೆಗಳು, ಅಧ್ಯಯನದಲ್ಲಿದ್ದ ಶ್ರದ್ಧೆ. ಇವೆಲ್ಲವನ್ನೂ ಶಿಷ್ಯನ ವ್ಯಕ್ತಿತ್ವದಲ್ಲಿ ಗುರುತಿಸಿದ ಸುಧೀಂದ್ರತೀರ್ಥರಿಗೆ ಈ ತಮ್ಮ ಪ್ರಿಯಶಿಷ್ಯನನ್ನೇ ಮುಂದಿನ ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿಕೊಳ್ಳುವ ಹಂಬಲ ಮೂಡಿ ಬೆಳೆಯಿತು. ಹಂಬಲವು ನಿಶ್ಚಯವಾಗಿ ಮಾರ್ಪಟ್ಟ ಮೇಲೆ ಶಿಷ್ಯನ ಬಳಿ ತಮ್ಮ ಇಚ್ಛೆಯನ್ನು ಅರುಹಿದರು. ಸಂಸಾರಿಯಾಗಿದ್ದ ವೆಂಕಟನಾಥರಿಗೆ ಪ್ರಿಯ ಪತ್ನಿ, ಪುತ್ರರನ್ನು ಅಗಲಿ ಯತ್ಯಾಶ್ರಮ ಸ್ವೀಕರಿಸಲು ಮನಸ್ಸು ಹಿಂಜರಿಯಿತಾದರೂ ಧೃಡತೆ ಕೂಡಿಸಿಕೊಂಡರು. ಮೃದುಮನಸ್ಸು, ಹಲವು ದಿನಗಳ ಕಾಲ ತನ್ನೊಳಗೇ ವಿಲಗುಟ್ಟಿಕೊಂಡಿತು. ಆದರೆ ತನ್ನ ಒಳಮನಸ್ಸಿಗೇ ಗೋಚರವಾದೊಂದು ಸತ್ಯಕ್ಕೆ ತಲೆಬಾಗಿದರು, ವಾಗ್ದೇವಿಯ ಆಣತಿಯೇ ವಿಧಿಯ ಇಚ್ಛೆಯಾಗಿರಲು ವಿರೋಧಿಸುವುದು ಸರಿಯಲ್ಲವೆಂಬ ನಿರ್ಧಾರಕ್ಕೆ ಬಂದು ಸನ್ಯಾಸ ಸ್ವೀಕಾರಕ್ಕೆ ಒಪ್ಪಿಗೆಯನ್ನಿತ್ತರು. ಪತ್ನಿಯನ್ನು ಧೈರ್ಯ, ಸಾಂತ್ವನ ಹೇಳಿ ಒಪ್ಪಿಸಿದರು.

ಸುಧೀಂದ್ರತೀರ್ಥರ ಆಣತಿಯ ಮೇರೆಗೆ ತಂಜಾವೂರಿನ ಅರಸ ರಘುನಾಥ ಭೂಪಾಲ ವೇದಾಂತ ಸಾಮ್ರಾಜ್ಯದ ಉತ್ತರಾಧಿಕಾರಿಯ ಪೀಠಾರೋಹಣೆಗೆ ವೈಭವಯುಕ್ತವಾದ ಸಕಲಸಿದ್ಧತೆಗಳ ಏರ್ಪಾಡು ಮಾಡಿಸಿದನು. ಅಂದು ಶಾಲಿವಾಹನ ಶಕೆ ೧೫೪೩ನೆಯ ದುರ್ಮತಿ ಸಂವತ್ಸರದ ಫಾಲ್ಗುಣ ಶುದ್ಧ ಬಿದಿಗೆ. (ಕ್ರಿ.ಶ.೧೬೨೧-ಮಾರ್ಚ್) ವೆಂಕಟನಾಥಾಚಾರ್ಯರು ವೇದೋಕ್ತ ಕ್ರಮದಲ್ಲಿ ಪರಮಹಂಸಾಶ್ರಮ (ಸನ್ಯಾಸ)ವನ್ನು ಸ್ವೀಕರಿಸಿದರು. ಗೃಹಸ್ಥಾಶ್ರಮದ ಋಣದಿಂದ ಮುಕ್ತರಾಗಲು ಅಗತ್ಯವಿರುವ ವಿರಜಾಹೋಮ, ಮುಂಡನ, ಆತ್ಮಶ್ರಾದ್ಧ ಮುಂತಾದ ಎಲ್ಲಾ ವಿಧಿಗಳನ್ನೂ ನೆರವೇರಿಸಲಾಯಿತು. ರಘುನಾಥ ಅರಸನ ಸಮ್ಮುಖದಲ್ಲಿ, ಸರ್ವಸಜ್ಜನರುಗಳ ಸಭಾಸಮೂಹದಲ್ಲಿ "ಶ್ರೀರಾಘವೇಂದ್ರತೀರ್ಥರು" ಎಂಬ ಅಭಿದಾನದಿಂದ ಗುರು ಸುಧೀಂದ್ರತೀರ್ಥರ ಉತ್ತರಾಧಿಕಾರಿಯಾಗಿ ಪೀಠಾಧಿಪತಿಗಳಾದರು. ವೆಂಕಟನಾಥಾಚಾರ್ಯರು ಶ್ರೀರಾಘವೇಂದ್ರತೀರ್ಥರಾಗಿ ಯತ್ಯಾಶ್ರಮ ಸ್ವೀಕರಿಸಿದ ಪವಿತ್ರ ಜಾಗವು ತಮಿಳುನಾಡಿನ ತಂಜಾವೂರಿನಿಂದ ಸುಮಾರು ಐದು ಕಿಲೋಮೀಟರ್ ದೂರದಲ್ಲಿರುವ "ವಡವಾತ್ತಂಗರೈ" ಗ್ರಾಮದ "ಮೇಲವಳಿತೋಟಂ"ನಲ್ಲಿರುವ "ಪಾಪನಾಶಂ"ನ ಮೂರು ಎಕರೆ ಪ್ರದೇಶದಲ್ಲಿದೆ.

ಪೀಠಾಧಿಪತಿಗಳಾದ ಮೇಲೆ ಶ್ರೀರಾಘವೇಂದ್ರರು ತಂಜಾವೂರಿನಿಂದ ಕುಂಭಕೋಣಕ್ಕೆ ಹಿಂದಿರುಗಿದರು. ಪೀಠದ ಪ್ರಗತಿ ಮತ್ತು ಸೇವೆಯೇ ಮುಂದಿನ ಅವರ ಮುಖ್ಯಗುರಿಯಾಯಿತು. ಸುಧೀರ್ಘಕಾಲದವರೆಗೆ ಸುರೇಂದ್ರತೀರ್ಥರು, ವಿಜಯೀಂದ್ರತೀರ್ಥರು, ಸುಧೀಂದ್ರತೀರ್ಥರು ಇಂಥ ಮಹಾವ್ಯಕ್ತಿತ್ವದವರ ಕಾರ್ಯಕ್ಷೇತ್ರವಾಗಿದ್ದ ಕುಂಭಕೋಣದಲ್ಲೆ ತಮ್ಮ ಜನಸೇವೆಯ ಕಾರ್ಯ ಮುಂದುವರೆಸಿದರು.

ಪತಿಯನ್ನು ಅಗಲಿರಬೇಕಾದ ದುಃಖ ತಡೆಯಲಾರದೆ, ಯತಿಗಳಾಗಿದ್ದ ಅವರನ್ನು ಇನ್ನೆಂದೂ ತನ್ನ ಪತಿಯಾಗಿ ಕಾಣಲಾರದ, ಕಾಣಬಾರದ ಸಂಕಟವನ್ನು ತಡೆಯಲಾರದೆ ಅವರ ಪೂರ್ವಾಶ್ರಮದ ಪತ್ನಿ ಸರಸ್ವತಿ ಬಾವಿಗೆ ಬಿದ್ದು ಜೀವತ್ಯಾಗ ಮಾಡಿದಳು. ಪ್ರೇತಶರೀರದಲ್ಲಿದ್ದ ಪತ್ನಿಯ ದುಸ್ಥಿತಿಗೆ ಮರುಗಿ ರಾಘವೇಂದ್ರರು ಕಮಂಡಲಿನಿಂದ ತೀರ್ಥಪ್ರೋಕ್ಷಣೆ ಮಾಡಿ ಸದ್ಗತಿ ನೀಡಿದರೆಂದು ರಾಘವೇಂದ್ರರ ಚರಿತ್ರೆಯು ಹೇಳುತ್ತದೆ. ಜಗನ್ನಾಥದಾಸರು ತಮ್ಮ ಕೀರ್ತನೆಯೊಂದರಲ್ಲಿ ಈ ಘಟನೆಯನ್ನು ಕುರಿತು "ಪ್ರೇತತ್ವ ಕಳೆದಿ ಮಹಿಷಿಯ ಶ್ರೀ ಜಗನ್ನಾಥವಿಠಲನ ಪ್ರೀತಿಪಾತ್ರ, ರಾಯ ಬಾರೋ" ಎಂದಿದ್ದಾರೆ.

ಮುಂದಿನ ಎರಡು ವರ್ಷಗಳ ಕಾಲ ರಾಘವೇಂದ್ರರು ತಮ್ಮ ಗುರು ಶ್ರೀಸುಧೀಂದ್ರತೀರ್ಥರೊಂದಿಗೆ ದೇಶಸಂಚಾರ ಮಾಡುತ್ತ ಧರ್ಮಪ್ರಚಾರ ಗೈದರು. ಗುರುಗಳು ವೃಂದಾವನಸ್ಥರಾದಮೇಲೆ ಪೀಠಾಧಿಪತ್ಯದ ಪೂರ್ಣ ಜವಾಬ್ದಾರಿ ರಾಘವೇಂದ್ರರದಾಯಿತು.

ರಾಘವೇಂದ್ರತೀರ್ಥರ ಮಹಾಮಹಿಮಾನ್ವಿತ ವ್ಯಕ್ತಿತ್ವದ ಬಗ್ಗೆ, ಪವಾಡಗಳ ಬಗ್ಗೆ ನಾಡಿನಲ್ಲಿ ಸಾಕಷ್ಟು ಬೇಕಷ್ಟು ಪವಾಡ ಘಟನೆಗಳು ನಡೆದ ಬಗ್ಗೆ ಕೃತಿಗಳಲ್ಲಿ ಉಲ್ಲೇಖಗೊಂಡಿವೆ. ಅಂದಿನಿಂದ ಇಂದಿನವರೆಗೂ ಜನಮನದಲ್ಲಿ ಅವರು ಕರುಣಾಮಯಿ ಗುರುಗಳೆಂದು, ಸಂಕಟ ಸಮಸ್ಯೆಗಳನ್ನು ಪರಿಹರಿಸುವ ಕೃಪಾಸಾಗರರೆಂದು ನೆಲೆಯಾಗಿದ್ದಾರೆ. ಸಮಾಜದ ಗುರುವಾಗಬೇಕಾದರೆ ಇರಬೇಕಾದ ಎಲ್ಲ ಅರ್ಹತೆಗಳನ್ನೂ ಹೊಂದಿದ್ದವರು ಅವರು. ಶಾಸ್ತ್ರಪಾಂಡಿತ್ಯದ ಜೊತೆಯಾಗಿ ನಿರ್ಮೋಹ, ನಿರಹಂಕಾರಗಳು, ಕರ್ತವ್ಯ ಪಾರಾಯಣತೆ, ವಾದಕೌಶಲದ ಅಪ್ರತಿಮ ಮೇಧಾಶಕ್ತಿಯ ಜೊತೆಯಾಗಿ, ಬಳಿ ಸಾರುವ ದೀನದುಃಖಿಗಳಿಗೆ ಸಾಂತ್ವನ, ಸಮಸ್ಯೆಗಳಿಗೆ ಪರಿಹಾರ ನೀಡುವ ಹೃದಯಾಂತಃಕರಣ ಇವೆಲ್ಲವೂ ಅವರ ಮುಖ್ಯ ಗುಣಗಳಾಗಿದ್ದವು. ಶಿಸ್ತು, ಸಂಯಮ, ವಿವೇಕ, ವೈರಾಗ್ಯ, ನಯವಿನಯ ಸೌಜನ್ಯಗಳ ನಡೆನುಡಿ, ಬಳಿಬಂದವರನ್ನು ಆತುಕೊಳ್ಳುವ ಔದಾರ್ಯ, ಸೋತವರನ್ನು ಮೇಲೆತ್ತುವ ಮನೋಭಾವ, ಶರಣಾದವರನ್ನು ಕಾಪಾಡುವ ಉದಾರತೆ ಈ ಎಲ್ಲ ಗುಣಗಳೂ ಅವರಲ್ಲಿ ಇದ್ದುದರಿಂದಲೇ ಬಲುಬೇಗ ಜನರಿಗೆ ಅವರು ಪ್ರಿಯಗುರುವಾಗಿ ರೂಪುಗೊಂಡರು. ಜನಮಾನಸದ ಆರಾಧ್ಯ ಗುರುವಾದರು.

ರಾಘವೇಂದ್ರತೀರ್ಥರು ತಮ್ಮ ಸಂಚಾರದಲ್ಲಿ ಕಂದನಾತಿ, ಶ್ರೀಶೈಲ, ತಿರುಪತಿ, ಅರುಣಾಚಲ, ವೃದ್ಧಾಚಲ, ಶ್ರೀಮುಷ್ಣಕ್ಷೇತ್ರ ಮುಂತಾದೆಡೆಗಳಲ್ಲೆಲ್ಲ ದ್ವೈತಮತದ ವಿಜಯದುಂಧುಭಿ ಮೊಳಗಿಸಿದರು. ದನಗಾಹಿಯಾಗಿದ್ದ ವೆಂಕಣ್ಣನೆಂಬಾತನು ರಾಘವೇಂದ್ರರ ಕೃಪೆಯಿಂದಲೇ ಆದವಾನಿಯ ನವಾಬನಿಗೆ ಕಾರ್ಯದರ್ಶಿಯಾಗಿ, ಕಡೆಗೆ ಆದವಾನಿಯ ದಿವಾನನೂ ಆಗಿ ನೇಮಕಗೊಂಡನು ಎಂಬ ಐತಿಹ್ಯವಿದೆ. ರಾಘವೇಂದ್ರರು ಹಿಂದೂ ಮತ್ತು ಮುಸ್ಲಿಂ ಅರಸರ ನಡುವಿನ ಬಾಂಧವ್ಯವನ್ನು ಬೆಸೆದವರೆಂಬ ಕೀರ್ತಿಗೂ ಭಾಜನರಾಗಿದ್ದಾರೆ.

ರಾಘವೇಂದ್ರತೀರ್ಥರ ವ್ಯಕ್ತಿತ್ವ, ಪ್ರಭಾವಳಿಗೆ ಮನಸೋತ ಆದವಾನಿಯ ನವಾಬ ಮಸೂದ್‌ಖಾನನು ತುಂಗಭದ್ರಾ ತೀರದಲ್ಲಿದ್ದ ಮಂಚಾಲೆ (ಈಗಿನ ಮಂತ್ರಾಲಯ) ಗ್ರಾಮವನ್ನು ಅವರ ಅಪೇಕ್ಷೆಯ ಮೇರೆಗೇ ದಾನವಾಗಿತ್ತನು. ಈ ಗ್ರಾಮಕ್ಕೆ ಬಂದ ರಾಘವೇಂದ್ರರು ಇಲ್ಲಿಯೇ ತಮ್ಮ ಕುಲದೇವತೆ ವೆಂಕಟೇಶ್ವರನನ್ನು ಪ್ರತಿಷ್ಠಾಪಿಸಿ ಪೂಜೆ, ಅಧ್ಯಯನಗಳನ್ನು ಮಾಡುತ್ತ ನೆಲೆನಿಂತರು.

ರಾಘವೇಂದ್ರಯತಿಗಳು ೪೮ ಗ್ರಂಥಗಳನ್ನು ರಚಿಸಿದ್ದಾರೆ. ಋಗ್ವೇದ, ಯಜುರ್ವೇದ, ಸಾಮವೇದಗಳಿಗೆ ವ್ಯಾಖ್ಯಾನವಾಗಿ ಅವರು 'ವಿವೃತಿ' ಎಂಬ ಸ್ವತಂತ್ರ ಕೃತಿಗಳನ್ನು ರಚಿಸಿದರು. ಪುರುಷಸೂಕ್ತಾದಿ ಪಂಚಸೂಕ್ತ ವ್ಯಾಖ್ಯಾನಗಳು, ದಶೋಪನಿಷತ್ ಖಂಡಾರ್ಥಗಳು, ಗೀತಾರ್ಥ ಸಂಗ್ರಹ, ಗೀತಾಭಾಷ್ಯ ಪ್ರಮೇಯ ದೀಪಿಕಾ ವ್ಯಾಖ್ಯಾನ, ಗೀತಾ ತಾತ್ಪರ್ಯ ಟೀಕಾ ವಿವರಣ ಇವುಗಳಲ್ಲದೆ ತಂತ್ರದೀಪಿಕಾ, ನ್ಯಾಯ ಮುಕ್ತಾವಲಿ, ಚಂದ್ರಿಕಾ ಪ್ರಕಾಶ, ತರ್ಕತಾಂಡವ ವ್ಯಾಖ್ಯಾ, ವಾದಾವಳೀ ವ್ಯಾಖ್ಯಾ, ಪ್ರಮಾಣ ಪದ್ಧತಿ ವ್ಯಾಖ್ಯಾ ಮುಂತಾದ ಪ್ರಸಿದ್ಧ ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಶ್ರೀರಾಮ ಚಾರಿತ್ರ್ಯ ಮಂಜರಿ, ಶ್ರೀ ಕೃಷ್ಣ ಚಾರಿತ್ರ್ಯ ಮಂಜರಿ, ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ ಭಾವಸಂಗ್ರಹ, ಅಣು ಮಧ್ವ ವಿಜಯ ವ್ಯಾಖ್ಯಾನ, ಪ್ರಾತಃ ಸಂಕಲ್ಪ ಗದ್ಯಮ್, ಭಾಟ್ಟಸಂಗ್ರಹ, ಪ್ರಮೇಯ ಸಂಗ್ರಹ ಈ ಮುಂತಾದ ವೇದಶಾಸ್ತ್ರ ಪ್ರಮಾಣವಾದ ಲೋಕವಂದ್ಯ ಗ್ರಂಥಗಳ ರಚನಾಕಾರರಾಗಿದ್ದಾರೆ.

ಹೀಗೆ ಉತ್ತರಕಾಲೀನ ವ್ಯಾಸಕೂಟದ ಪ್ರಮುಖ ವ್ಯಾಖ್ಯಾನಕಾರರಾಗಿ ಶ್ರೀ ರಾಘವೇಂದ್ರಯತಿ ಸಾರ್ವಭೌಮರು ಮೂಡಿ ಬಂದಿದ್ದಾರೆ. ವಿಶೇಷತೆಯಿರುವುದು ಇವರು ಉತ್ತರಕಾಲೀನ ದಾಸಕೂಟಕ್ಕೂ ಪ್ರಮುಖ ನೇತಾರರಾಗಿ ವ್ಯಾಸತೀರ್ಥರಂತೆಯೇ ದಾಸಕೂಟವನ್ನು ಮತ್ತೆ ಪ್ರೋತ್ಸಾಹದ ನೀರೆರೆದು ಪೋಷಿಸಿದ ಸಹೃದಯರಾಗಿದ್ದಾರೆ ಎನ್ನುವುದರಲ್ಲಿ. ಹರಿದಾಸಸಾಹಿತ್ಯದ ಪುನರುಜ್ಜೀವನ ಕಾರ್ಯಕ್ಕೂ ರಾಘವೇಂದ್ರರು ಪ್ರಮುಖ ಪ್ರೇರಕ ಶಕ್ತಿಯಾದರು ಎನ್ನುವುದನ್ನು ಹರಿದಾಸಸಾಹಿತ್ಯದ ಇತಿಹಾಸದಿಂದಲೇ ತಿಳಿಯಬಹುದು. ರಾಘವೇಂದ್ರ ಯತಿಗಳೆಂದರೆ ಉತ್ತರಕಾಲೀನ ಹರಿದಾಸರಿಗೆ ಭಕ್ತಿ, ಪ್ರೇಮಗಳ ಆವೇಶವೇ ಮೈಗೂಡಿ ನಿಲ್ಲುತ್ತದೆ. ಮುಂದೆ ಬಂದ ಹರಿದಾಸರೆಲ್ಲ ತಮ್ಮ ಸಾಹಿತ್ಯ ಮಾಧ್ಯಮದ ಮೂಲಕ ರಾಘವೇಂದ್ರರನ್ನು ಹಾಡಿ ಹೊಗಳಿ ಸಂತೃಪ್ತಿ ಪಟ್ಟಿದ್ದಾರೆ.

ಇಂದು ಎನಗೆ ಗೋವಿಂದ

ಅಸಾಧಾರಣ ಪಂಡಿತರೂ, ಜ್ಞಾನಿಗಳೂ ಆಗಿದ್ದ ರಾಘವೇಂದ್ರ ಯತಿಗಳ ಅತ್ಯಂತ ಹೃದಯ ಸ್ಪರ್ಶಿಯಾದ ಕನ್ನಡ ಕೃತಿ ಒಂದೇ ಒಂದು ಲಭ್ಯವಾಗಿದೆ. ಇಷ್ಟು ಸುಂದರ ಅಭಿವ್ಯಕ್ತಿಯ ಒಂದೇ ಕನ್ನಡ ಕೀರ್ತನೆಯನ್ನು ಅವರು ಬರೆದುದೆ? ಇಲ್ಲ, ಈ ಒಂದು ಕೃತಿಯೇ ಅಂತರಂಗದ ನಿವೇದನೆಯಾಗಿ ಇಷ್ಟು ಸುಭಗ ಶೈಲಿಯಲ್ಲಿ ಮೂಡಿರುವುದಾದರೆ ಇನ್ನೂ ಸಾಕಷ್ಟು ಕನ್ನಡ ಕೃತಿಗಳನ್ನು ಅವರು ರಚಿಸಿರಲೇಬೇಕು. ಯಾವುದೂ ಯಾಕೆ

ಕನ್ನಡಿಗರ ಪಾಲಿಗೆ ಉಳಿದು ಬರಲಿಲ್ಲವೋ, ಹಸ್ತಪ್ರತಿಗಳು ಏನಾಗಿ ಎಲ್ಲಿ ಕೈತಪ್ಪಿ ನಾಶವಾದವೋ ತಿಳಿದಿಲ್ಲ. ಸದ್ಯಕ್ಕಂತೂ ಒಂದೇ ಒಂದು ಸುಂದರ ದೇವರನಾಮ "ಇಂದು ಎನಗೆ ಗೋವಿಂದ। ನಿನ್ನಯ ಪಾದಾರವಿಂದವ ತೋರೋ। ಮುಕುಂದನೇ" ಎಂದು ಪ್ರಾರಂಭವಾಗುವ ಭೈರವಿ ರಾಗದ ಕೃತಿ ಮಾತ್ರ ಲಭ್ಯವಿದೆ.

ಧಾರುಣಿಯೊಳು ಬಲು ಭಾರ ಜೀವ ನಾನಾಗಿ
ದಾರಿ ತಪ್ಪಿ ನಡೆದೇ। ಸೇರಿದೆ ಕುಜನರ
ಆರೂ ಕಾಯುವರಿಲ್ಲ। ಸಾರಿದೇ ನಿನಗಯ್ಯ
ಧೀರ ವೇಣುಗೋಪಾಲ। ಪಾರುಗಾಣಿಸೊ ಹರಿಯೆ॥

ಎಂದು ಈ ಕೃತಿ 'ಧೀರ ವೇಣುಗೋಪಾಲ' ಎಂಬ ಮುದ್ರಿಕೆಯಲ್ಲಿ ಕೊನೆಯಾಗುತ್ತದೆ.

ಸಂಸ್ಕೃತ ಪಾಂಡಿತ್ಯದಲ್ಲಿ ಮಹಾನ್‌ಮೇರುವಾಗಿದ್ದ ರಾಘವೇಂದ್ರರಿಗೆ ಕನ್ನಡಭಾಷೆ ಎಷ್ಟು ಹೃದ್ಗತವಾಗಿ ಬಂದಿತ್ತು ಎನ್ನುವುದಕ್ಕೆ ಮೇಲಿನ ಒಂದು ಕೃತಿಯೇ ಸಾಕ್ಷಿಯಾಗಿದೆ. ಸ್ವತಃ ವೀಣೆ ನುಡಿಸಿಕೊಳ್ಳುತ್ತ ಈ ತಮ್ಮ ರಚನೆಯನ್ನು ಅವರು ಹಾಡಿಕೊಳ್ಳುತ್ತಿದ್ದರು, ಅಂದಿನ ಹರಿದಾಸರುಗಳಿಗೆ ಈ ಕೃತಿ ಸ್ಫೂರ್ತಿಯಾಗಿದ್ದಿರಲೇಬೇಕು, ದಾಸಸಾಹಿತ್ಯವು ಮತ್ತೆ ತಲೆ ಎತ್ತಿತು. "ವ್ಯಾಸತೀರ್ಥರಂತೆಯೇ ಇವರೂ ವ್ಯಾಸಕೂಟ-ದಾಸಕೂಟಗಳೆರಡನ್ನೂ ಉಜ್ಜೀವನಗೊಳಿಸಿದರು; ಹರಿದಾಸ ಸಾಹಿತ್ಯದಲ್ಲಿ ವಿಚ್ಛಿತ್ತಿ ಬಂದಿದ್ದನ್ನು ಇವರು ಪರಿಹರಿಸಿದರು." [೫]

ಈಗಿನ ರಾಯಚೂರು ತಾಲೂಕಿಗೆ ಸೇರಿರುವ ಬಿಚ್ಚಾಲಿ, ಪಂಚಮುಖಿಗಳಲ್ಲಿ (ಮಂತ್ರಾಲಯದ ಹತ್ತಿರ) ವರ್ಷಕ್ಕೂ ಮಿಗಿಲಾಗಿ ತಪಸ್ಸು ಮಾಡಿ ರಾಘವೇಂದ್ರಯತಿಗಳು ೧೬೭೧ರಲ್ಲಿ ಸಶರೀರರಾಗಿ ಬೃಂದಾವನ ಪ್ರವೇಶ ಮಾಡಿದರು. ವಾದಿರಾಜರನ್ನು ಬಿಟ್ಟರೆ ಹೀಗೆ ಸಶರೀರರಾಗಿ ಬೃಂದಾವನಸ್ಥರಾಗಿದ್ದು ರಾಘವೇಂದ್ರಯತಿಗಳು ಮಾತ್ರ. (೧೬೭೧-ವಿರೋಧಿ ಕೃತ್ ಸಂವತ್ಸರದ ಶ್ರಾವಣ ಬಹುಳ ಬಿದಿಗೆಯಂದು ವೃಂದಾವನ ಪ್ರವೇಶ).

ತಾವು ಮಂತ್ರಾಲಯದಲ್ಲಿ ನೆಲೆಗೊಂಡಾಗಲೇ ಅದನ್ನು ವಿದ್ಯಾಕೇಂದ್ರವನ್ನಾಗಿ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವನ್ನಾಗಿ ರೂಪಿಸಿದ್ದ ರಾಘವೇಂದ್ರಯತಿಗಳು ಹರಿದಾಸರುಗಳ ಜೊತೆಗೆ ವಿಶೇಷ ಒಡನಾಟವಿಟ್ಟುಕೊಂಡಿದ್ದರು. ಮುಂದೆ ಬಂದ ದಾಸಸಾಹಿತ್ಯ ಪರಂಪರೆಯಲ್ಲಿ ರಾಘವೇಂದ್ರಸ್ವಾಮಿಗಳಿಗೆ ಬಲು ದೊಡ್ಡ ಗೌರವ ಸಂದಿದೆ. ರಾಘವೇಂದ್ರಸ್ವಾಮಿಗಳನ್ನು ಗುರುರಾಯರು, ಗುರುಸಾರ್ವಭೌಮ ಎಂದು ಕರೆದು ಸ್ತುತಿಸಿರುವ ಪಂಡಿತರು, ಹರಿದಾಸರು ಅನೇಕರು. ಅಪ್ಪಣ್ಣಾಚಾರ್ಯರ "ಶ್ರೀ ಪೂರ್ಣಬೋಧ ಗುರುತೀರ್ಥ ಪಯೋಬ್ಧಿ ಪಾರಾ" ಎಂದೇ ಪ್ರಾರಂಭವಾಗುವ ಶ್ರೀರಾಘವೇಂದ್ರ ಸ್ತೋತ್ರವು ರಾಘವೇಂದ್ರರ ಭಕ್ತರಲ್ಲಿ ನಿತ್ಯ ಪಠಿಸುವಂಥದ್ದಾಗಿ ಉಳಿದಿದೆ. ವಾದೀಂದ್ರತೀರ್ಥರು "ಗುರುಗುಣಸ್ತವನ"ವನ್ನು ರಚಿಸಿ ರಾಘವೇಂದ್ರರನ್ನು ಕೊಂಡಾಡಿದ್ದಾರೆ.

ರಾಘವೇಂದ್ರರನ್ನು ಸ್ತುತಿಸಿರುವ ಹರಿದಾಸರುಗಳ ಸಂಖ್ಯೆ ಅಸಂಖ್ಯವಾಗಿದೆ. ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು, ಮೋಹನದಾಸರು, ಗುರುಗೋಪಾಲವಿಠಲದಾಸರು, ವಾಸುದೇವವಿಠಲದಾಸರು, ಉರಗಾದ್ರಿ ವಿಠಲದಾಸರು, ಭೀಮೇಶಕೃಷ್ಣರು, ಕಮಲೇಶಾಂಕಿತದಾಸರು ಹೀಗೆ ಅನೇಕಾನೇಕ ಪ್ರಮುಖ ದಾಸವರೇಣ್ಯರುಗಳು ರಾಯರನ್ನು ಸ್ತುತಿಸಿ ಕೀರ್ತನೆಗಳನ್ನು ರಚಿಸಿದ್ದಾರೆ. ಹೀಗೆ ದಾಸರುಗಳಿಂದ ವಿರಚಿತವಾದ ರಾಯರ ಸ್ತುತಿಪರ ಹಾಡುಗಳು ಕೂಡ ಅಸಂಖ್ಯವಾಗಿವೆ.

೧೬೬೩ರಲ್ಲಿ ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ದೊಡ್ಡದೇವರಾಜ ಎನ್ನುವವರು ರಾಘವೇಂದ್ರಸ್ವಾಮಿಗಳಿಗೆ ಅರ್ಪಿಸಿರುವ ತಾಮ್ರಶಾಸನವೊಂದು ಈಗಲೂ ನಂಜನಗೂಡಿನಲ್ಲಿರುವ ರಾಯರಮಠದಲ್ಲಿದೆ. ಮುಂದೆ ಮೈಸೂರಿನ ಅರಸರಾದ ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರ್ ಅವರು "ಶ್ರೀರಾಘವೇಂದ್ರ ಸ್ವಾಮ್ಯಷ್ಟೋತ್ತರ ಶತ ನಾಮಾವಲಿಃ" ಎಂಬ ೨೫ ಶ್ಲೋಕಗಳ ಸ್ತೋತ್ರವನ್ನೇ ರಚಿಸಿದ್ದಾರೆ. ಹೀಗೆ ರಾಘವೇಂದ್ರರ ಬಗ್ಗೆ ಸ್ತೋತ್ರಗಳು, ಕೀರ್ತನೆಗಳು, ಹಾಡುಗಳ ಪರಂಪರೆಯೇ ಬೆಳೆದು ಬಂದು ಇಂದಿಗೂ ಕನ್ನಡ ಮನೆಮನೆಗಳಲ್ಲಿ ರಾಘವೇಂದ್ರಗುರುಗಳನ್ನು ಪ್ರೀತಿಯಿಂದ, ಭಕ್ತಿಯಿಂದ ಆರಾಧಿಸುವ ಮನಸ್ಸುಗಳು ತುಂಬಿಹೋಗಿವೆ. "ಕರೆದಲ್ಲಿಗೆ ಬರುವ ಕರುಣಾಮಯಿ" ಎಂದೇ ಗುರುರಾಯರು ಪ್ರಸಿದ್ಧರಾಗಿದ್ದಾರೆ.

* * * * *

ಆ. ಭೌಗೋಳಿಕ ಹಿನ್ನಲೆಯಲ್ಲಿ ದಾಸಕೂಟದ ಸಾಂಸ್ಕೃತಿಕ ಕೇಂದ್ರಗಳು.

ರಾಘವೇಂದ್ರಯತಿಗಳ ಪ್ರಭಾವ ಮಂತ್ರಾಲಯದ ನೆರೆಹೊರೆಯ ಪ್ರದೇಶಗಳಲ್ಲಿ, ಮುಖ್ಯವಾಗಿ ಮಳಖೇಡ, ಮಾನ್ವಿ, ಕಾಖಂಡಕಿ, ಲಿಂಗಸುಗೂರು ಮುಂತಾದ ಊರುಗಳಲ್ಲಿ ಹಬ್ಬಿ ಹರಡಿತು. ಇಲ್ಲೆಲ್ಲ ಹರಿದಾಸರುಗಳು ಹುಟ್ಟಿಕೊಳ್ಳತೊಡಗಿದರು. ದಾಸಕೂಟ ಮತ್ತೆ ಆವಿಷ್ಕಾರಗೊಂಡು ದಾಸಸಾಹಿತ್ಯವು ಸಂಗೀತದ ಸಾಹಚರ್ಯದೊಂದಿಗೇ ಹರಡತೊಡಗಿತು. ಇದನ್ನು ಹರಿದಾಸಪಂಥದ ಎರಡನೆಯ ಹಂತವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಮಂತ್ರಾಲಯವನ್ನು ಕೇಂದ್ರವನ್ನಾಗಿ ಮಾಡಿಕೊಂಡು ರಾಘವೇಂದ್ರಸ್ವಾಮಿ ಹರಿಭಕ್ತಿಯ ಪ್ರಚಾರ ಗೈದುದರಿಂದ ಮರಳಿ ಹರಿದಾಸಕೂಟ ತಲೆ ಎತ್ತುವಂತಾಯಿತು. ಸುಮಾರು ನೂರಾಮುವ್ವತ್ತು ವರ್ಷಗಳ ಕಾಲ ಕಾಣದೆ ಮೌನದ ಮರೆ ಹೊಕ್ಕಿದ್ದ ದಾಸಕೂಟ ವಿಜಯದಾಸರಿಂದಾಗಿ ಮತ್ತೆ ಸಜೀವಗೊಂಡಿತು. ವಿಜಯದಾಸರು, ಇವರ ಸಮಕಾಲೀನರೇ ಆದ ಪ್ರಸನ್ನ ವೆಂಕಟದಾಸರು ಇವರೆಲ್ಲ ರಾಘವೇಂದ್ರಸ್ವಾಮಿಗಳ ಭಕ್ತರೇ. ರಾಘವೇಂದ್ರಸ್ವಾಮಿ ತನ್ನೊಳಗೇ ಅಳವಡಿಸಿಕೊಂಡಿದ್ದ ಹರಿಭಕ್ತಿ, ಹರಿಪ್ರೀತಿ, ಹರಿದಾಸ್ಯತನವೇ ಮುಂದಿನ (ವಿಜಯದಾಸರಿಂದ ಮೊದಲುಗೊಂಡ) ದಾಸಕೂಟದವರಿಗೆಲ್ಲ ಸ್ಫೂರ್ತಿ, ಪ್ರೇರಣೆ. ತಮ್ಮ ಕಾಲದ ವ್ಯಾಸಕೂಟ ಮತ್ತು ದಾಸಕೂಟಗಳ ನಡುವಿನ ಬಾಂಧವ್ಯದ ಕೊಂಡಿಯೇ ರಾಘವೇಂದ್ರರು.

ಹೀಗಾಗಿ ಮಂತ್ರಾಲಯವನ್ನು ಕೇಂದ್ರಸ್ಥಳವನ್ನಾಗಿರಿಸಿಕೊಂಡೇ ದಾಸಸಾಹಿತ್ಯದ ರಚನೆ, ದಾಸಕೂಟದ ಚಟುವಟಿಕೆಗಳು ವಿಜಯದಾಸರ ನೇತೃತ್ವದಲ್ಲಿ ಪ್ರಾರಂಭಗೊಂಡವು. ಮಂತ್ರಾಲಯದ ಸುತ್ತಮುತ್ತಲ ಈ ಕೆಳಗಿನ ಪ್ರದೇಶಗಳಲ್ಲಿ ಹರಿದಾಸರುಗಳು ಮೂಡಿ ಅವರುಗಳ ಚಟುವಟಿಕೆಯ ಸಾಂಸ್ಕೃತಿಕ ಕೇಂದ್ರಗಳೆನಿಸಿಕೊಂಡವು. ದಾಸಸಾಹಿತ್ಯಕ್ಕೆ ಮತ್ತೆ ಮನ್ನಣೆ ದೊರಕಿತು.

೧. ಮಂತ್ರಾಲಯಕ್ಕೆ ಅತಿ ಸಮೀಪವಿರುವ **ಚೀಕಲಪರವಿ**

೨. ಮಂತ್ರಾಲಯಕ್ಕೆ ಹೋಗುವ ದಾರಿಯಾದ ಗುಂತಕಲ್ಲಿನ ಪಕ್ಕದಲ್ಲೇ ಇರುವ **ಚಿಪ್ಪಗಿರಿ**

೩. ಮಂತ್ರಾಲಯದ ನೆರೆಯಲ್ಲಿರುವ **ಮಾನ್ವಿ**

೪. ಮಂತ್ರಾಲಯಕ್ಕೆ ಹತ್ತಿರವೇ ಇರುವ **ಉತ್ತನೂರು** ಮತ್ತು **ಸಂಕಾಪುರ**

೫. ಮಂತ್ರಾಲಯದ ಸಮೀಪವೇ ಇರುವ **ಲಿಂಗಸುಗೂರು**

೬. ಮಂತ್ರಾಲಯದ ಬಳಿಯ **ಕಲ್ಲೂರು, ಮೊದಲುಕಲ್ಲು**

೭. ಮಂತ್ರಾಲಯದ ಸಮೀಪದ **ಐಜಿಪುರ, ವೇಣೀಸೋಮಪುರ, ಕೌತಾಳಗ್ರಾಮ**

೮. ಮಂತ್ರಾಲಯದ ಬಳಿಯ **ಆದವಾನಿ**

ಹೈದರಾಬಾದ್ ಕರ್ನಾಟಕ ಪ್ರದೇಶವು ನಿಜಾಮನ ಸರ್ಕಾರದ ಆಡಳಿತಕ್ಕೆ ಸಿಲುಕಿ ನಲುಗಿಹೋಗಿದ್ದಲ್ಲದೆ ಮುಂದೆ ಬ್ರಿಟಿಷರ ಪ್ರಾಬಲ್ಯಕ್ಕೂ ತುತ್ತಾಗಿ ಸೊರಗಿದ ಪ್ರದೇಶವಾದ್ದರಿಂದ ಇಲ್ಲಿನ ಕನ್ನಡಿಗರಿಗೆ ತಮ್ಮದೇ ಸಾಹಿತ್ಯ, ಸಂಸ್ಕೃತಿಗಳನ್ನು ಉಳಿಸಿಕೊಳ್ಳುವುದು, ಬೆಳಸಿಕೊಳ್ಳುವುದು ಹರಸಾಹಸದ ಮಾತಾಗಿತ್ತು. ಸದಾ ಪರಕೀಯರ ದಾಳಿ. ಆಡಳಿತದಲ್ಲಿ ಕನ್ನಡ ಬೆಳೆಯುವುದಿರಲಿ, ಉಳಿಯುವುದೇ ಕಷ್ಟ ಎಂಬಂಥ ಪರಿಸ್ಥಿತಿ.

ಆದರೂ ಇಲ್ಲಿನ ಕನ್ನಡ ಮಣ್ಣಿನಿಂದ ಶಿವಶರಣರು ಮೂಡಿದರು, ಹರಿದಾಸರುಗಳು ಹುಟ್ಟಿದರು. ವಚನಸಾಹಿತ್ಯ, ದಾಸಸಾಹಿತ್ಯಗಳು ಸಮೃದ್ಧಿಯಾಗಿ ಮೂಡಿ ಕನ್ನಡ ಸಂಸ್ಕೃತಿಯನ್ನು ಕಟ್ಟಿರುವುದನ್ನು ನಾಡಿನ ಸಾಹಿತ್ಯ ಚರಿತ್ರೆಯೇ ತಿಳಿಸುತ್ತದೆ. ಬೀದರ್, ಕಲ್ಬುರ್ಗಿ, ರಾಯಚೂರು ಈ ಪ್ರದೇಶಗಳಲ್ಲಿ 'ಮಾನವಧರ್ಮ'ವನ್ನು ಬೋಧಿಸಿದ ಶಿವಶರಣರು ಕನ್ನಡ ಸಂಸ್ಕೃತಿಯನ್ನು ಮೆರೆಸಿದರು. ನಂತರದ ಶತಮಾನಗಳಲ್ಲಿ "ಭಕ್ತಿ"ಯನ್ನು ಪ್ರತಿಪಾದಿಸುವ ಮೂಲಕ ಮಾನವನ ನೈತಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಹರಿದಾಸರುಗಳು ಈ ಮಣ್ಣಿನಿಂದ ಮೂಡಿ ಬಂದರೆನ್ನುವುದು ಇತಿಹಾಸದ ಸತ್ಯ ಸಂಗತಿಯಾಗಿದೆ.

ವ್ಯಾಸತೀರ್ಥರು ಈ ಹಿಂದೆ ದಾಸಕೂಟವನ್ನು ಕಟ್ಟಿ ಬೆಳೆಸಿದ ಕೇಂದ್ರಸ್ಥಳ "ಹಂಪೆ" ಕೂಡ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿದ ಸ್ಥಳವೇ. ಮಂತ್ರಾಲಯದ ರಾಘವೇಂದ್ರಸ್ವಾಮಿಗಳ ಪ್ರಭಾವದಿಂದಾಗಿ ಮತ್ತೆ ಉತ್ತರಕಾಲದಲ್ಲಿ ಪ್ರಮುಖವಾಗಿ ರಾಯಚೂರುಜಿಲ್ಲೆ ಹರಿದಾಸರುಗಳ ಓಡಾಟದ ಪ್ರಮುಖ ಕೇಂದ್ರಸ್ಥಳವಾಯಿತು. ಹರಿದಾಸರ ತೊಟ್ಟಿಲು, ಹರಿದಾಸರ ತವರು ಎಂದೇ ರಾಯಚೂರು ಗುರುತಿಸಲ್ಪಡುತ್ತದೆ.

ವ್ಯಾಸತೀರ್ಥರು 'ಹಂಪೆ'ಯಲ್ಲಿದ್ದ ಕಾಲದಲ್ಲೇ ಅದಕ್ಕೆ ಸಮೀಪದ ರಾಯಚೂರು ಜಿಲ್ಲೆಯಲ್ಲಿ ಕೂಡ ಅಂದಿನ ಹರಿದಾಸರುಗಳ ಸಂಪರ್ಕ, ಪ್ರಚಾರ, ಪ್ರಭಾವಗಳು ವ್ಯಾಪಿಸಿದ್ದಿರಲೇಬೇಕು. ಆದರೂ ವಿಜಯನಗರ ಸಾಮ್ರಾಜ್ಯದ ಪತನಾನಂತರ ರಾಜಕೀಯ ಪ್ರತಿಕೂಲ ಪರಿಸ್ಥಿತಿಗಳಿಂದಾಗಿ ಹಂಪೆಯಲ್ಲಿ ಅಳಿದುಳಿದ ಹರಿದಾಸರುಗಳು ರಾಯಚೂರು ಜಿಲ್ಲೆಯಲ್ಲಿನ ಪ್ರದೇಶಗಳಲ್ಲಿ ಬದುಕು ಅರಸಿಕೊಂಡೋ, ತಲೆಮರೆಸಿಕೊಂಡೋ ಚದುರಿಹೋಗಿದ್ದಿರಬಹುದು. ನಂತರ ಬಂದ ದಾಸಕೂಟದ ಪ್ರಮುಖರಾದ ವಿಜಯದಾಸರು, ಜಗನ್ನಾಥದಾಸರು ಮುಂತಾದವರೆಲ್ಲ ಈ ಮಣ್ಣಿನಿಂದಲೇ ಮೂಡಿಬಂದವರಾದರು. ಈ ದಾಸವೃಂದದವರು ಸೃಷ್ಟಿ ಮಾಡಿದ ಸಾಹಿತ್ಯ, ಸಂಗೀತಾತ್ಮಕ ಚಟುವಟಿಕೆಗಳು ಸೇರಿ ಇಲ್ಲಿನ ಅನೇಕ ಪ್ರದೇಶಗಳು ಮುಖ್ಯ ಸಾಂಸ್ಕೃತಿಕ ಕೇಂದ್ರಗಳಾಗಿ ಬೆಳೆದವು. ಈ ಜಿಲ್ಲೆಯ ವೇಣೀಸೋಮಪುರವೇ ವ್ಯಾಸತತ್ತ್ವಜ್ಞರ ಕಾರ್ಯಕ್ಷೇತ್ರ. 'ಸುರಪುರ', 'ಕಾಂತೇಶಪುರ(ಕದರಮಂಡಲಗಿ)', ಮುಖ್ಯ ಹರಿದಾಸ ಕೇಂದ್ರಗಳಾಗಿ ಬೆಳೆದವು.

"ದಾಸಸಾಹಿತ್ಯಕ್ಕೆ ರಾಯಚೂರು ಜಿಲ್ಲೆಯ ಕಾಣಿಕೆ ವೈಶಿಷ್ಟ್ಯಪೂರ್ಣವೂ ವಿಪುಲವೂ ಆಗಿದೆ. ಸುಮಾರು ಐದಾರು ಶತಮಾನಗಳಿಂದ ನಡೆದು ಬಂದ ಹರಿದಾಸಸಾಹಿತ್ಯ ಪರಂಪರೆ ಮುಗ್ಗರಿಸಿತೇನೋ ಎಂಬ ಭೀತಿಗೆ ಅವಕಾಶ ಉಂಟಾದ ಸಂದರ್ಭದಲ್ಲಿ ಅದನ್ನು ಪುನಃಶ್ಚೇತನಗೊಳಿಸಿ ಉಜ್ವಲವಾಗಿ ಬೆಳಗಿಸಿದ ಕೇಂದ್ರವಿದು.

ದ್ವಿತೀಯ ಘಟ್ಟದ ದಾಸಕೂಟದ ಪ್ರಮುಖತ್ರಯರಾದ ವಿಜಯದಾಸರು, ಗೋಪಾಲದಾಸರು ಮತ್ತು ಜಗನ್ನಾಥದಾಸರು ರಾಯಚೂರು ಜಿಲ್ಲೆಯಲ್ಲಿಯೇ ಜನಿಸಿ ಬಂದವರಾಗಿದ್ದಾರೆ. ಈ ಭಾಗದ ದಾಸಸಾಹಿತ್ಯ ಸಮೃದ್ಧತೆಗೆ ಕಾರಣರಾಗಿದ್ದಾರೆ.

ಈ ಪ್ರಮುಖತ್ರಯರಲ್ಲದೆ ಸುರಪುರದ ಶ್ರೀಆನಂದದಾಸರು, ಪ್ರಾಣೇಶದಾಸರು, ಶಾಮಸುಂದರದಾಸರು, ವರದೇಶವಿಠ್ಠಲ, ಸುಂದರವಿಠ್ಠಲ, ವರದಗೋಪಾಲವಿಠ್ಠಲ, ಗುರುವಿಜಯವಿಠ್ಠಲ, ಮನೋಹರವಿಠ್ಠಲ, ವ್ಯಾಸವಿಠ್ಠಲ, ಕಮಲೇಶವಿಠ್ಠಲ, ಗುರು ಗೋಪಾಲದಾಸರು, ಗುರುಪ್ರಾಣೇಶದಾಸರು, ಅಭಿನವ ಪ್ರಾಣೇಶದಾಸರು, ಅಸ್ಕಿಹಾಳ ಗುರುಗೋವಿಂದದಾಸರು ಮುಂತಾದ ಅನೇಕಾನೇಕ ದಾಸರುಗಳು ಕೂಡ ಪ್ರಮುಖರಾಗಿ ದಾಸಕೂಟದವರಾಗಿದ್ದು, ಸಮೃದ್ಧ ದಾಸಸಾಹಿತ್ಯ ಸೃಷ್ಟಿ ಮಾಡಿ ಸಂಚರಿಸುತ್ತ ಹಾಡಿದವರೇ ಆಗಿದ್ದು ಇವರೆಲ್ಲರೂ ರಾಯಚೂರು ಜಿಲ್ಲೆಯಿಂದ ಬಂದವರಾಗಿದ್ದಾರೆ. "ಗದ್ವಾಲ" ಸಂಸ್ಥಾನವೂ ರಾಯಚೂರು ಜಿಲ್ಲೆಗೆ ಸೇರಿದ್ದು, ಸುತ್ತಮುತ್ತಲ ಸೋಮಪುರ, ಮೊದಲಕಲ್ಲು, ಚಿಂತಲರೇವು, ಉತ್ತನೂರು ಇವೆಲ್ಲವೂ ಹರಿದಾಸ ಕೇಂದ್ರಗಳಾಗಿದ್ದವು.

ಕಲ್ಬುರ್ಗಿ ಮತ್ತು ಬೀದರ್ ಜಿಲ್ಲೆಗಳಲ್ಲಿ ಹರಿದಾಸರುಗಳು ಅಷ್ಟಾಗಿ ಕಂಡುಬಂದಿಲ್ಲ. ಶಿವಶರಣರ ಪ್ರಭಾವವೇ ಇಲ್ಲಿ ವ್ಯಾಪಿಸಿರುವುದೂ, ಹಂಪೆಯ ಹರಿದಾಸರ ಮತ್ತು ಮಂತ್ರಾಲಯದ ರಾಯರ ಪ್ರಭಾವ ಪರಿಸರಗಳಿಂದ ಈ ಜಿಲ್ಲೆಗಳು ದೂರವಿರುವುದೂ, ಇದಲ್ಲದೆ ಕೃಷ್ಣಾನದಿಯ ಒಂದು ದಡವನ್ನು ಶಿವಶರಣರು ವ್ಯಾಪಿಸಿಕೊಂಡಿದ್ದೂ ಇದಕ್ಕೆ ಕಾರಣವಿರಬಹುದೆಂದು ಗುಲ್ಬರ್ಗಾದ ಡಾ.ಸ್ವಾಮಿರಾವ್ ಕುಲಕರ್ಣಿಯವರು ಅಭಿಪ್ರಾಯಪಡುತ್ತಾರೆ. [*೬] ಕೃಷ್ಣಾನದಿಯ ಮತ್ತೊಂದು ದಡದ ಊರುಗಳಲ್ಲಿ ಹರಿದಾಸರ ಪ್ರಭಾವದ ಹೆಚ್ಚಳವಿದೆ.

"ಮಾನ್ವಿ" ತಾಲ್ಲೂಕು ಮುಖ್ಯವಾಗಿ ಹರಿದಾಸರುಗಳನ್ನು ನಾಡಿಗೆ ನೀಡಿದ, ದಾಸಕೂಟದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಆಗರವಾಗಿದ್ದ ಸ್ಥಳವೆನಿಸಿಕೊಂಡಿದೆ. ದ್ವಿತೀಯ ಘಟ್ಟದ ಹರಿದಾಸನೇತಾರರಾದ ವಿಜಯದಾಸರು ಮಾನ್ವಿ ತಾಲ್ಲೂಕಿನ "ಚೀಕಲಪರವಿ"ಯವರು. ಖ್ಯಾತರಾದ ಜಗನ್ನಾಥದಾಸರು 'ಮಾನ್ವಿ' ತಾಲ್ಲೂಕಿನ 'ಬ್ಯಾಗವಾಟ' ಗ್ರಾಮದಿಂದ ಬಂದವರು. ಮನೋಹರವಿಠಲದಾಸರು, ಕಲ್ಲೂರು ಶ್ರೀಸುಬ್ಬಣ್ಣದಾಸರು, ಕಲ್ಲೂರು ಶ್ರೀರಘುಪತಿ ವಿಠ್ಠಲರು, ಮೋಹನದಾಸರು, ಕುರುಡಿ ಗ್ರಾಮದ ಶಾಮಸುಂದರ ದಾಸರು, ಕಲ್ಲೂರು ಜಗನ್ನಾಥಾಚಾರ್ಯರು, ಪಾಮನ ಕಲ್ಲೂರಿನ ನರಹರಿವಿಠಲರು, ಕುರುಡಿ ಶ್ರೀರಾಘವೇಂದ್ರ ಆಚಾರ್ಯರು, ಕವಿತಾಳ ಗ್ರಾಮದ ಶ್ರೀ ವೆಂಕಟವಿಠಲರು, ಕುರಕಂದಿ ಗ್ರಾಮದ ಶ್ರೀರಂಗನಾಥವಿಠಲರು ಇವರೆಲ್ಲ ಮಾನ್ವಿ ತಾಲ್ಲೂಕಿನ ದಾಸಕೂಟದ ಸಾಂಸ್ಕೃತಿಕ ಚಟುವಟಿಕೆಗಳಿಗೆ, ಕೀರ್ತನೆ, ಉಗಾಭೋಗ, ಸುಳಾದಿಗಳ ಪರಂಪರೆಯನ್ನು ಮುಂದುವರೆಸಿದ ದಾಸ ಸಾಹಿತ್ಯ ರಚನೆಗೆ ವಿಶೇಷ ಕೊಡುಗೆ ನೀಡಿದ ಮಹನೀಯರುಗಳಾಗಿದ್ದಾರೆ. ಇವೆಲ್ಲದರ ಜೊತೆಗೆ ಜನಪದೀಯವಾಗಿ ಕೋಲುಪದಗಳಾದಿಯಾಗಿ ಸಂಪ್ರದಾಯ ಪದಗಳು, ಬಯಲಾಟ, ಗದ್ಯ-ಪ್ರಕಾರಗಳು, ತ್ರಿಪದಿಗಳಲ್ಲೂ ತಮ್ಮ ಸಾಹಿತ್ಯ ಕೃಷಿ ನಡೆಸಿ ವಿಶಿಷ್ಟ ಕೊಡುಗೆಯನ್ನು ದಾಸಸಾಹಿತ್ಯದಲ್ಲಿಯೇ ನೀಡಿದವರಾಗಿದ್ದಾರೆ. [*೭]

ಬಿಜಾಪುರ ತಾಲ್ಲೂಕಿನ ಕಾಖಂಡಕಿ ಗ್ರಾಮದಿಂದ ಮಹಿಪತಿದಾಸರು ಮೂಡಿಬಂದು ಬಿಂಬಾಪರೋಕ್ಷ ಸಾಧನೆ, ಆಧ್ಯಾತ್ಮ ವಿಚಾರಗಳಲ್ಲಿ ಜನರಿಗೆ ವಿಶೇಷ ತಿಳುವಳಿಕೆಯನ್ನು ಹರಡಿದವರಾಗಿದ್ದಾರೆ.

ಮಂತ್ರಾಲಯ, ತಿರುಪತಿ, ಉಡುಪಿ ಈ ಸ್ಥಳಗಳು ಹರಿದಾಸರಿಗೆ ಬಲುಪ್ರಿಯವಾದ ಕ್ಷೇತ್ರಗಳಾದವು. "ದೇವರೆಂದರೆ ತಿರುಪತಿ ತಿಮ್ಮಪ್ಪ, ಗುರುಗಳೆಂದರೆ ಮಂಚಾಲೆ ರಾಘಪ್ಪ" ಎಂಬ ಗಾದೆಯೇ ಹುಟ್ಟಿಕೊಂಡಿತು. ಈ ದೇವರು, ಈ ಯತಿಗಳನ್ನು ಕುರಿತೇ ಹರಿದಾಸರುಗಳು ಅಸಂಖ್ಯ ಕೃತಿಗಳನ್ನು ರಚಿಸಿದ್ದಾರೆ. ಕಾಲಕ್ರಮೇಣ ಉಡುಪಿಗಿಂತ ಹೆಚ್ಚಾಗಿ ತಿರುಪತಿ, ಮಂತ್ರಾಲಯಗಳೇ ಹರಿದಾಸರುಗಳ ಪರಸ್ಪರ ಭೇಟಿ ಸಂಪರ್ಕಗಳ ಸಾಂಸ್ಕೃತಿಕ ಕೇಂದ್ರಗಳಾಗಿ ಜನಪ್ರಿಯಗೊಂಡವು. ಇದಕ್ಕೆ ಕಾರಣ ಇಲ್ಲಿಯ ದೇವರ ದರ್ಶನ, ವಿದ್ವತ್‌ಸಭೆ, ಹರಿಕಥೆ, ಭಜನೆ ಹಾಡುಗಳ ಸಾಂಸ್ಕೃತಿಕ ಚಟುವಟಿಕೆಯಾಗಿತ್ತು.

* * * * *

ಇ. ಉತ್ತರಕಾಲೀನ ದಾಸಕೂಟದ ಮೇಲೆ ವ್ಯಾಸಕೂಟದ ಪ್ರಭಾವಗಳು ಮತ್ತು ಪ್ರೇರಣೆಗಳು.

ದ್ವಿತೀಯ ಘಟ್ಟದ ಹರಿದಾಸರಲ್ಲಿ ಪ್ರಮುಖರೆನ್ನಿಸಿಕೊಂಡವರ ಬದುಕುಬರಹಗಳನ್ನು ಅವಲೋಕಿಸಿದಾಗ ಉತ್ತರ ಕಾಲೀನ ದಾಸಕೂಟದ ಮೇಲೆ ಆಗಿರುವ ವ್ಯಾಸಕೂಟದ ಪ್ರಭಾವ, ಪ್ರೇರಣೆಗಳನ್ನು ಅರಿಯುವುದಕ್ಕೆ ಸುಲಭ ಸಾಧ್ಯವಾಗುತ್ತದೆ. ಮುಖ್ಯವಾಗಿ ಮಂತ್ರಾಲಯದ ಶ್ರೀ ರಾಘವೇಂದ್ರ ತೀರ್ಥರೇ ಈ ಎಲ್ಲ ಪ್ರಮುಖದಾಸರಿಗೆ ಹರಿಭಕ್ತಿಪಥದಲ್ಲಿ ಸಾಗಲು ಪ್ರೇರಣೆ, ಪ್ರಭಾವ, ಪ್ರೋತ್ಸಾಹ ನೀಡಿದವರಾಗಿದ್ದಾರೆ.

ವಿಜಯದಾಸರು [ಕ್ರಿಶ ೧೬೮೨-೧೭೫೫]

ಸ್ಥಗಿತಗೊಂಡಿದ್ದ ದಾಸವಾಙ್ಮಯಕ್ಕೆ ಮತ್ತೆ ಚಾಲಕಶಕ್ತಿಯಾಗಿ ಬಂದು ದ್ವಿತೀಯ ಪುರಂದರದಾಸರೆಂದೇ ಮಾನ್ಯರಾದವರು ವಿಜಯದಾಸರು. ರಾಯಚೂರು ಜಿಲ್ಲೆಯ ಚೀಕಲಪರವಿ ಗ್ರಾಮದಲ್ಲಿ ಜನಿಸಿದರು. ಹುಟ್ಟು ಹೆಸರು "ದಾಸಪ್ಪ". ತೀರಾ ಬಡತನದ ಕುಟುಂಬದಲ್ಲಿ ಜನಿಸಿ "ಕೂಸೀ ಮಗ ದಾಸ" ಎಂಬ ತಿರಸ್ಕಾರದ ಅವಹೇಳನಕ್ಕೆ ಪಾತ್ರನಾಗಿದ್ದ ಬಾಲಕ. ವೈವಾಹಿಕ ಬದುಕಿನಲ್ಲೂ ದಾರಿದ್ರ್ಯದ ಬವಣೆ ತಪ್ಪಲಿಲ್ಲ. ಹತಾಶರಾಗಿ ಪತ್ನಿಯನ್ನೂ ಬಿಟ್ಟು ದೇಶಾಟನ ಮಾಡುತ್ತ ಕಾಶೀಯಾತ್ರೆಯಲ್ಲಿದ್ದಾಗ ಪುರಂದರದಾಸರ ಸ್ವಪ್ನಾಂಕಿತ ಪಡೆದು 'ವಿಜಯದಾಸ'ರಾದರೆಂದು, ಇಲ್ಲಿಂದ ಅವರ ಬದುಕೇ ಮಾರ್ಪಾಡಾಗಿ ಹೋಯಿತೆಂದು ಇವರ ಜೀವನದ ಬಗ್ಗೆ ಪ್ರಚಲಿತವಿದೆ. ಇದನ್ನು ಸಮರ್ಥಿಸುವಂತೆ ಅವರದ್ದೇ ಎರಡು ರಚನೆಗಳು ಹೀಗೆ ಹೇಳುತ್ತವೆ.

> ೧. "ಗುರು ಪುರಂದರದಾಸರೆ ನಿಮ್ಮ ಚರಣಕಮಲವ ನಂಬಿದೆ ॥ಪ॥
> ಗರ್ವರಹಿತನ ಮಾಡಿ ಎನ್ನನು ಪೊರೆವ ಭಾರವು ನಿಮ್ಮದೇ॥ಅ.ಪ॥
> \- -
>
> ೨. -
> ದಾಸ ಪುರಂದರನ ಪಾದವನ್ನು ಪೊಂದಿದೆನು
> ಏಸು ಜನ್ಮದ ಪುಣ್ಯವು ಫಲಿಸಿತೋ ಎನಗೆ

ಇದೇ ಕೀರ್ತನೆಯಲ್ಲೇ 'ಕಾಸಿಗಾಗದವನು ಸಾಸಿರಕೆ ಬೆಲೆಯಾದೆ' ಎಂದು ತಮ್ಮ ಬಗ್ಗೆ ಪುರಂದರದಾಸರ ಕೃಪೆಯನ್ನು ಕುರಿತು ಹೇಳಿಕೊಂಡಿದ್ದಾರೆ. ಪುರಂದರದಾಸರು 'ಹರಿದಾಸನಾಗು' ಎಂದು ಹರಸಿ ದೀಕ್ಷೆ ಕೊಟ್ಟಮೇಲೆ [ಅವರ ಕನಸಿನಲ್ಲಿ ಎಂದು ಹೇಳಲಾಗಿದೆ] ಅವರು ವಿಜಯದಾಸರೆಂದೇ ಖ್ಯಾತಿ ಪಡೆದು ದೇಶಾದ್ಯಂತ ಸಂಚರಿಸಿ ಕನ್ನಡನಾಡಿನಲ್ಲಿ ಮತ್ತೆ ದಾಸಕೂಟವನ್ನು ಕಟ್ಟಿದವರಾದರು. ತಾವು ಸ್ವತಃ ಇಪ್ಪತ್ತೈದು ಸಾವಿರ ದೇವರನಾಮಗಳನ್ನು ರಚಿಸಿದರು. ಇವರ ಕಾಲದಲ್ಲೇ ಹರಿದಾಸ ಸಾಹಿತ್ಯಕ್ಕೆ ಮತ್ತೆ ಮಾನ್ಯತೆ, ಪ್ರಚಾರ ಸಿಕ್ಕಿತು.

ವಿಜಯದಾಸರು ರಚಿಸಿರುವ ಕೃತಿಗಳಲ್ಲಿ ವಿಚಾರಬಾಹುಳ್ಯವಿದೆ. ನೀತಿತತ್ತ್ವಗಳ ಉಪದೇಶ, ಭಕ್ತಿ, ವಿರಕ್ತಿ ವೈರಾಗ್ಯ, ಹರಿಸ್ತುತಿ, ತಾರತಮ್ಯ ಪರಿವಾರ ದೇವತಾ ಸ್ತುತಿ, ಎಲ್ಲವೂ ತುಂಬಿಕೊಂಡಿವೆ. 'ದಾರಿದ್ರ್ಯವಿದ್ದಾಗ ಕೊರಗದೆ, ಹಬ್ಬವಾದಾಗ ಹಿಗ್ಗದೆ ಕ್ಷಣಕಾಲ ಈ ಭೂಖಂಡದಲ್ಲಿ ಬಂದಿದ್ದು ಹೋಗುವ ಅತಿಥಿಯ ನಿರ್ಲಿಪ್ತತೆಯನ್ನು ಅವರು ಬದುಕಿನುದ್ದಕ್ಕೂ ಪಡೆದಿದ್ದವರು. ಸಂಸಾರದ ಕಷ್ಟನಷ್ಟಗಳು, ಹರಿದಾಸ್ಯದ ಹೃದಯಸುಖವನ್ನು ತಮ್ಮ ಕೃತಿಗಳಲ್ಲಿ ಸಾರಿದ್ದಾರೆ. ದೇಶಸಂಚಾರದಲ್ಲಿ ದೊರೆತ ಅನುಭವದ ಆಳ ಚಿಂತನೆಗಳು ಅವರ ಕೃತಿಗಳನ್ನು ಕಟ್ಟಿವೆ. ಹರಿಭಕ್ತಿ ಮೈಗೂಡಿಸಿದ ಶುದ್ಧ ಸತ್ವಯುಕ್ತ ವಿಚಾರಗಳು ಅವರ ಕೃತಿಗಳಲ್ಲಿ ತುಂಬಿಕೊಂಡಿವೆ.

ವಿಜಯದಾಸರ ಸುಳಾದಿಗಳು ಮಧ್ವ ತತ್ತ್ವಗಳನ್ನು ಸವಿವರವಾಗಿ ಚಿತ್ರಿಸುತ್ತವೆ. ಮಧ್ವಾಚಾರ್ಯರು ಮತ್ತು ಇತರ ಮಾಧ್ವಯತಿಗಳು ಸಂಸ್ಕೃತದಲ್ಲಿ ರಚಿಸಿದ ಶಾಸ್ತ್ರ, ಭಾಷ್ಯ ಇವುಗಳಲ್ಲಿನ ಮೂಲದ ಆವೇಶ, ಭಾವ, ಔಚಿತ್ಯ ಕೆಡದಂತೆ ಕನ್ನಡದಲ್ಲಿ ನಿರೂಪಿಸಿರುವುದು ವಿಜಯದಾಸರ ವೈಶಿಷ್ಟ್ಯ. ಹೀಗೆ ಕನ್ನಡದ ಅಭಿವ್ಯಕ್ತಿಯ ಸಾಮರ್ಥ್ಯವನ್ನು ಅವರು ಹಿಗ್ಗಿಸಿದರು ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ.

ಪುರಂದರದಾಸರ ಬಗ್ಗೆ ಸಾಕಷ್ಟು ವಿಚಾರಗಳನ್ನು ಮೊತ್ತಮೊದಲಿಗೆ ನಾಡಿಗೆ ತಿಳಿಸಿಕೊಟ್ಟವರು ವಿಜಯದಾಸರೇ ಆಗಿದ್ದಾರೆ. ಪುರಂದರದಾಸರ ಪದ, ಸುಳಾದಿಗಳನ್ನು ವಿಶೇಷವಾಗಿ ಹಾಡಲು, ಪ್ರಚಾರಗೈಯಲು ಅವರು ತಮ್ಮ ಶಿಷ್ಯವರ್ಗವನ್ನು ಪ್ರೇರೇಪಿಸಿದರು. ನೂರಾರು ವರ್ಷಗಳ ಅಂತರವಿದ್ದರೂ, ಆಗಿಹೋದ ಪುರಂದರದಾಸರನ್ನು ಮತ್ತೆ ಜನಮನದ ಅಚ್ಚುಮೆಚ್ಚಿನವರಾಗಿ ಮಾಡಿದ್ದು ವಿಜಯದಾಸರೇ. ಪುರಂದರದಾಸರ ಬಗ್ಗೆ ಅವರ ಗುರುಪ್ರೀತಿ ಅನನ್ಯವಾದುದು, ಅಪೂರ್ವವಾದುದು.

ತಾವೂ ಸಜೀವಗೊಳಿಸಿದ ದಾಸಕೂಟಕ್ಕೆ ಅವರು ಒಳ್ಳೆಯ ತಾತ್ತ್ವಿಕ ನೆಲೆಗಟ್ಟನ್ನು ನಿರ್ಮಾಣಮಾಡಿಕೊಟ್ಟರು, ಅಪಾರ ಸಂಖ್ಯೆಯ ಶಿಷ್ಯವರ್ಗವನ್ನು ಅವರು ಹೊಂದಿದ್ದರು. ದಾಸಕೂಟಕ್ಕೆ ಧೃತಿ, ನೈತಿಕ ಸ್ಥೈರ್ಯ ಧೈರ್ಯಗಳನ್ನು ನೀಡಿ, ನಾಡಿನ ತುಂಬ ಸಂಚರಿಸಿ ದಾಸಸಾಹಿತ್ಯ ಹಾಡಿಸಿ ಜನರ ಸಾಂಸ್ಕೃತಿಕ ನೆಲೆಗಟ್ಟನ್ನು ಸುಭದ್ರಗೊಳಿಸಿದ್ದಲ್ಲದೆ ಆ ಮುಂಚಿನ ಹರಿದಾಸಕೂಟದ ಸಾಹಿತ್ಯವನ್ನೆಲ್ಲ ಸಂಗ್ರಹಿಸಲು ಪ್ರೇರಣೆಯನ್ನೂ ಮಾಡಿದವರು. ದಾಸಕೂಟವನ್ನು ಬೆಳೆಯಿಸುವಲ್ಲಿ, ಸಮರ್ಥ, ಸುಧೃಡ ಹರಿಭಕ್ತಿಯ ದಾಸರನ್ನು ರೂಪಿಸುವಲ್ಲಿ, ಎಲ್ಲೆಡೆ ಹರಿದಾಸರ ಹಾಡುಗಳ ಅನುರಣನವಾಗುವಂತೆ ಮಾಡುವಲ್ಲಿ ವಿಜಯದಾಸರ ಸೇವೆ, ಕತೃತ್ವ ಶಕ್ತಿಯು ತುಂಬ ಅಮೂಲ್ಯವಾದುದು. ಮುಂದೆ ಖ್ಯಾತರಾದ ಗೋಪಾಲದಾಸರು ವಿಜಯದಾಸರ ಶಿಷ್ಯರೇ, ಪ್ರಮುಖ ಶಿಷ್ಯರು. ಗೋಪಾಲದಾಸರು, ಮೋಹನದಾಸರು, ಪಂಗನಾಮದತಿಮ್ಮಣ್ಣದಾಸರು ಈ ಮೂವರು ಇವರ ಶಿಷ್ಯರುಗಳು. "ಭಕ್ತಿಯಲ್ಲಿ ಭಾಗಣ್ಣ, ಯುಕ್ತಿಯಲ್ಲಿ ಮೋಹನ, ಶಕ್ತಿಯಲ್ಲಿ ತಿಮ್ಮಣ್ಣ" ಎಂದೇ ಖ್ಯಾತರಾಗಿದ್ದಾರೆ. ಈ ಮೂವರು ತಮ್ಮ ಗುರು ವಿಜಯದಾಸರ ಮಾರ್ಗದರ್ಶನದಲ್ಲಿ ಅಪಾರವಾಗಿ ಕೆಲಸಮಾಡಿ ದಾಸಕೂಟವನ್ನು ಬಲವಾಗಿ ಕಟ್ಟಿದರು. ಹೀಗೆ ಮುಂದಿನ ಪರಂಪರೆಯಲ್ಲಿ ವಿಜಯದಾಸರ ಶಿಷ್ಯಪ್ರಶಿಷ್ಯರೇ ದಾಸಕೂಟವನ್ನು ಬೆಳೆಯಿಸಿದವರಾದರು.

ವೇದಾಂತದ ಪ್ರಮೇಯಗಳನ್ನೆಲ್ಲ ಸಾಮಾನ್ಯರೂ ಅರ್ಥೈಸಿಕೊಳ್ಳುವಂತೆ ಸರಳತೆಯಲ್ಲಿ ಕನ್ನಡಕ್ಕೆ ತಂದವರು ವಿಜಯದಾಸರು. ತಮ್ಮ ಮಾನಸಿಕ ಗುರು ಪುರಂದರದಾಸರಂತೆಯೇ ದಾರ್ಶನಿಕ ತತ್ವಗಳನ್ನು, ಆಧ್ಯಾತ್ಮದ ತಿರುಳನ್ನು ಸರಳವಾಗಿ, ಸುಲಭಗ್ರಾಹ್ಯವಾಗಿ ಕನ್ನಡ ಜನರಿಗೆ ತಿಳಿಹೇಳಿದರು. ದಾಸಸಾಹಿತ್ಯಕ್ಕೊಂದು ಸೈದ್ಧಾಂತಿಕ ನಿಲುವನ್ನು ತಂದುತೋರಿದರು.

ವಿಜಯದಾಸರು ಜನರಿಗೆ ಅಂದು ತಿಳಿಹೇಳಿದ ನೀತಿತತ್ತ್ವಗಳು ಇಂದಿಗೂ ಪಸಕ್ತವಾಗುತ್ತವೆ. "ಆಡದಿರಪವಾದ ಪದಗಳನು ಕೊಂ। ಡಾಡದಿರಿನ್ನು ಚಿಲ್ಲರೆ ದೈವಗಳನು। ಬೇಡದಿರುಭಯ ಸೌಖ್ಯವನು ನೀ। ಮಾಡದಿರಿನ್ನು ದುರ್ಜನ ಸೇವೆಯನು॥ ಹಾಳು ಹರಟೆಗೆ ಹೋಗಬೇಡ ನೀ ಕಂಡ್ಯ। ಕೂಳನು ತಿಂದು ಬರಿದೆ ಒಡಲು ಹೊರಿಯದಿರು। ಕಾಲವ್ಯರ್ಥಕಳೆಯಬೇಡ ನೀನು। ಸೋಲಬೇಡ ನಮ್ಮ ಪ್ರಾರಬ್ಧ ಭೋಗಕ್ಕೆ॥ ನಾನು ಎಂಬುದು ಬಿಡು ಕಂಡ್ಯ ನಿನ್ನ। ಮಾನಾಪಮಾನತೆ ಹರಿಯೆನ್ನು ಕಂಡ್ಯ। ಜ್ಞಾನಿಗಳ ಒಡನಾಡುತಿರು ನೀನು ವಿಷಯ। ಜೇನೆಂದು ಮೆದ್ದರೆ ಅದು ವಿಷ॥ ಕಷ್ಟ ಪಡದೆ ಸುಖ ಬರದು ಕಂ। ಗೆಟ್ಟ ಮೇಲಿನ್ನು ಕಷ್ಟ ತಿಳಿಯೋದು। ದುಷ್ಟ ವಿಜಯ ಬುದ್ಧಿ ಜರಿದು ವಿಜಯ। ವಿಠ್ಠಲನೆಂದು ಕೂಗದೆ ಮುಕ್ತಿಬಾರದು ಕೂಗೆಲವೊಬಾಯ ತೆರೆದು॥

ಮೇಲಿನ ಸಾಲುಗಳಲ್ಲಿ ನೀತಿಬೋಧೆಯು ಅನುಭವದ ಆಳದಿಂದ ಬಂದ ಗಟ್ಟಿತನದಿಂದ ಕೂಡಿವೆ. ಎಂತಲೇ ಅವು ಪೇಲವವಾಗದೆ, ಹೇಳಿಕೆಯೆನಿಸದೆ ಸಾರ್ವಕಾಲಿಕವಾಗಿ ನಿಲ್ಲುವ ನೀತಿಬೋಧೆಗಳಾಗಿವೆ.

ಒಳ್ಳೆಯ ವಿಚಾರ, ಸಜ್ಜನ ಸ್ನೇಹ, ಸಾತ್ವಿಕ ಆನಂದ ಮನುಷ್ಯನಿಗೆ ಬೇಡವಾಗುತ್ತದೆ. ದುಷ್ಕೃತ್ಯಗಳಿಂದ ದೊರಕುವ ವಿಕಟ ಆನಂದ, ದುರ್ಜನರ ಸಂಗ, ಕೆಡುಕು ತುಂಬಿದ ವಿಚಾರಗಳ ಮಲಿನತೆಯನ್ನೇ ಮಾನವ ಆಸ್ವಾದಿಸುತ್ತಾನೇಕೋ? ಇದ್ದನ್ನೇ ವಿಜಯದಾಸರು ಕಾವ್ಯಾತ್ಮಕವಾಗಿ ಹರಿಯಲ್ಲಿ ನಿವೇದಿಸಿದ್ದಾರೆ. ಇಂಥ ಕೀಳು ಅಭಿರುಚಿಯ ಹಾಳು ಬದುಕಿನ ನರನನ್ನು ಉದ್ಧರಿಸಬೇಕೆಂದು ಮೊರೆಯಿಟ್ಟಿದ್ದಾರೆ.

ದಯಮಾಡು ದಯಮಾಡು ಎನ್ನ ಮೇಲೆ
ಅಂತರಂಗದೊಳಿಪ್ಪ ಅಚ್ಚುತಮೂರ್ತಿ॥

ಗಂಧ ಪರಿಮಳ ಕುಸುಮ ಜಾತಿ ಮಲ್ಲಿಗೆ ಮಾಲೆ
ಮಂದಾರ ಹಾರ ಕೊರಳೊಳಿಡಲು
ಚಂದವಿಲ್ಲವೆಂದು ತೆಗೆದು ಬಿಸುಟು ಊರ
ಹಂದಿಯಂದದಿ ಇಲ್ಲಿ ಇಪ್ಪ ನರಗೆ॥

\- - - - - - - - -

\- - - - - - - - - - -

ತುಂಬಿದ ಹೊಳೆಯಲ್ಲಿ ಹರಿಗೋಲಿಟ್ಟುಕೊಂಡು
ಅಂಬಿಗ ಬಿಡದೆಯೆ ದಾಟಿಸಲು
ಅಂಬುವಾಸನೆ ನೋಡಿ ದಾಟಿ ಪೋಗುವೆನೆಂ
ದೆಂಬ ಮಾನವನಾದೆ ವಿಜಯವಿಠ್ಠಲ ಕರುಣೀ॥

ಹರಿಪಾರಮ್ಯವನ್ನು ತಿಳಿಯದೆಯೆ ಕ್ಷುದ್ರ ದೇವರುಗಳನ್ನು ಪೂಜೆ ಮಾಡುವವರನ್ನು ಕುರಿತಾಗಿ "ಕೇಡು ಬರುವುದಲ್ಲದೆ ಕೈವಲ್ಯವುಂಟೇ?" ಎಂದು ಎಚ್ಚರಿಸಿರುವ ವಿಜಯದಾಸರು ಈ ಕುರಿತಾಗಿ ತರುವ ದೃಷ್ಟಾಂತಗಳು ತುಂಬ ವಿಶಿಷ್ಟವಾಗಿವೆ.

"ಕೊಳಚೆ ನೀರನು ದಾಟಲರಿಯದ ಮನುಜಗೆ
ನಿಲುವುದ್ದ ದ್ರವ್ಯ ಕೊಡುವೆ ಎನ್ನ ನೀ
ಜಲನಿಧಿಯ ಉತ್ತರಿಸಿಕೊಡು ಎಂದರವನು
ಅಳಿಯದಂತೆ ದಡಕೆ ತರಬಲ್ಲನೇ?॥"

"ಕತ್ತಲೆಗಂಜುವನ ಕರೆತಂದು ಶೃಂಗರಿಸಿ
ಉತ್ತಮದ ವಾಜಿ ವಾಹನವ ಮಾಡಿ
ಕತ್ತಿಯನು ಕರದಲಿ ಕೊಟ್ಟು ರಿಪು ಪರಿವಾರ
ದತ್ತ ಒಂದಡಿಯಿಟ್ಟು ಬರಬಲ್ಲನೇ॥"

ಮಾನವ ಬದುಕಿನ ಶೂನ್ಯತೆಯು ಅವರ "ಪತಿತ ಪಾವನ ಮಾಡುವ ರಂಗಾ" ಎಂಬ ಕೃತಿಯಲ್ಲಿ ಅಂತರಂಗ ನಿವೇದನೆಯ ಮಡುವಾಗಿ ಹೊರಹೊಮ್ಮಿದೆ. ಹಾಗೆಯೇ ನಿರರ್ಥಕ ಕೃತ್ಯಗಳ ಪಟ್ಟಿಯೇ ಹೊರಹೊಮ್ಮಿರುವ ಕೃತಿ "ಮಧ್ವ ಮತವ ಪೊಂದದವನ ಭಕುತಿ ಯಾತಕೆ". ಮೊದಲ ಎರಡು ಸಾಲುಗಳು ಇಲ್ಲಿ ಮಧ್ವಮತದ ಶ್ರೇಷ್ಠತೆಯನ್ನು ಬೆರಳಿಟ್ಟರೂ ಮುಂದಿನ ನುಡಿಗಳಲ್ಲೆಲ್ಲ ಮಾನವ ಧರ್ಮ ನಡಾವಳಿಗಳತ್ತಲೇ ಬೊಟ್ಟು ತೋರುತ್ತ ಅರ್ಥಪೂರ್ಣ ಬದುಕಿನ ಪದರುಗಳನ್ನು ಧ್ವನಿಯಾಗಿ ತೆರೆದಿಡುತ್ತ ಹೋಗುತ್ತದೆ ಉದಾಹರಣೆಗೆ:

ಬಂಧುಬಳಗ ಬಿಟ್ಟು ಉಂಬ ನೆಂಟರ್‍ಯಾತಕೆ
ಕಂದರನ್ನು ಮಾರುತಿಪ್ಪ ತಂದೆಯಾತಕೆ
ಬಂದ ಅತಿಥಿಗನ್ನವಿಕ್ಕದ ಸದನವ್ಯಾತಕೆ
ನಿಂದೆಗಳನು ಮಾಡುತಿಹನ ಆಚಾರವ್ಯಾತಕೆ?

ಅವರ ಕೃತಿಗಳಲ್ಲಿ ಅನೇಕಾನೇಕ ಸಾಲುಗಳು ಎಷ್ಟೊಂದು ಮನನೀಯವಾಗಿವೆ ಎಂಬುದಕ್ಕೆ ಕೆಲವೇ ಉದಾ: "ಸುಳ್ಳನಿಗೆ ಉಂಟೆ ಮಿತಿಯಾದ ಭಾಷೆ?" "ತಾಮಸಿಗೆ ಉಂಟೆ ಶುಭಕರ್ಮ ಸದ್ಭಕ್ತಿ?" "ಆಲಸಿಗೆ ಉಂಟೆ ಗುರಿ ಸೇರಿದ ಸಾರ್ಥಕ್ಯ?" "ಅಪಹಾಸಗೊಳಿಸುವವ ಗೆಳೆಯನಾದರೇನು?"

ವಿಜಯದಾಸರ ಕೃತಿಗಳು ಸಹಸ್ರ ಸಹಸ್ರ. ಎಲ್ಲವನ್ನೂ ಪರಿಶೀಲಿಸಹೋಗದೆ ಕೆಲವೇ ಸಾಲುಗಳನ್ನು ಅವರ ಹರಿಪ್ರೀತಿಯ, ಭಕ್ತ ಮನೋಧರ್ಮಕ್ಕೆ ಸಾಕ್ಷಿಯಾಗಿ ಹೇಳಬಲ್ಲೆವೆಂದಾದರೆ ಭಗವಂತನನ್ನು ಕೆಣಕಿರುವ ಅವರ ಈ ಕೃತಿಯ ಸಾಲುಗಳನ್ನು ನೋಡಬಹುದು. "ಪರದೇಶಿ ನೀನು, ಸ್ವದೇಶಿ ನಾನು" ಎಂದು ಅವರು ಎದೆತಟ್ಟಿಕೊಂಡಿದ್ದಾರೆ. ಭಕ್ತಿ, ಪ್ರೀತಿಯ ಪರಾಕಾಷ್ಠತೆ ಎಂದರೆ ಇದೇ. ಪುರಂದರದಾಸರ "ನಿನ್ನಂಥಾ ತಂದೆ ಎನಗುಂಟು ನಿನಗಿಲ್ಲ" ಎನ್ನುವ ಉಗಾಭೋಗದ ನೆನಪನ್ನು ತರುವಂಥ ಕೃತಿ ಇದು.

ವಿಜಯದಾಸರ "ಪವಮಾನ ಪವಮಾನ ಜಗದಾ ಪ್ರಾಣಾ। ಸಂಕರುಷಣಾ। ಭವಭಯಾರಣ್ಯ ದಹನಾ" ಎಂಬ ಕೃತಿ ಬಹು ಜನಪ್ರಿಯವಾಗಿ ಇಂದಿಗೂ ಪ್ರಚುರತೆ ಹೊಂದಿದೆ. ಅವರ ಸುಳಾದಿಗಳಲ್ಲಿ 'ರಾಮಾಯಣಸುಳಾದಿ', 'ಪಂಡರಪುರಸುಳಾದಿ', 'ಕಪಿಲಸುಳಾದಿ', 'ವಿಷ್ಣುಪಾದಸುಳಾದಿ', 'ಚರಣಸುಳಾದಿ', 'ಪ್ರಾಣದೇವರ ಹಸ್ತಸುಳಾದಿ', 'ಪ್ರಾಣದೇವರಚರಣ ಮಹಿಮಾಸುಳಾದಿ' ಹೀಗೆ ಅನೇಕ ಮಾಧ್ವ ತತ್ತ್ವರೀತಿಯಲ್ಲೇ ಸಾಗುವ, ಸಾಹಿತ್ಯಿಕವಾಗಿ ಮನದುಂಬುವ ರಚನೆಗಳಿವೆ, ಇವಲ್ಲದೆ ನೀತಿಸುಳಾದಿ, ದಾಸಭಾವಸುಳಾದಿ, ಹರಿದಾಸಲಕ್ಷಣ ಸುಳಾದಿ, ಒಡವೆಸುಳಾದಿ, ಮಡಿಸುಳಾದಿ, ಬಲ್ಲಿದನಾರುಸುಳಾದಿ ಮುಂತಾಗಿ ವಿಷಯವ್ಯಾಪ್ತಿ ಹರವಿನ ಸುಳಾದಿಗಳು ಅಸಂಖ್ಯವಿವೆ.

ಚಕ್ರಾಬ್ಜಮಂಡಲದಲ್ಲಿ ಭಗವಂತನ ಆರಾಧನೆಯು ತುಂಬ ಮಹತ್ತ್ವದ್ದು ಎನ್ನುವುದನ್ನು ಮಧ್ವಾಚಾರ್ಯರು ತಮ್ಮ 'ತಂತ್ರಸಾರಸಂಗ್ರಹ'ದಲ್ಲಿ ನಿರೂಪಿಸಿದರು. "ನಿತ್ಯಂ ಚಕ್ರಾಬ್ಜಾದಿಕ ಮಂಡಲೇ" ಎಂದು ಅವರು ಹೇಳಿದ್ದೇನೋ ಸರಿ. ಆದರೆ ಈ ಚಕ್ರಾಬ್ಜಮಂಡಲ ಎಂದರೇನು? ಅದನ್ನು ಬಿಡಿಸುವುದು ಹೇಗೆ? ಅದರಲ್ಲಿ ಭಗವಂತನನ್ನು ಪೂಜಿಸುವ ವಿಧಾನವೇನು? ಈ ಎಲ್ಲ ಪ್ರಶ್ನೆಗಳನ್ನು ಕನ್ನಡಿಗರಿಗೆ ಉತ್ತರಿಸುವ ಕಾರ್ಯಮಾಡಿದವರು ವಿಜಯದಾಸರು. "ಮಧ್ವಾಚಾರ್ಯರು ಸೂಚನೆ ಮಾತ್ರ ನೀಡಿ ಬಿಟ್ಟ ಈ ರಹಸ್ಯೋಪಾಸನೆಯ ವಿಧಿ-ವಿವರಗಳನ್ನು ಮುಂದಿನ ದಾಸಸಾಹಿತ್ಯದ ಅನುಭಾವಿಗಳು ವಿಸ್ತಾರವಾಗಿ ಬರೆದಿಟ್ಟರು."[*೮] ವಿಜಯದಾಸರ ಕಂಕಣಾಕಾರ-ಸುಳಾದಿಯು ಏಳು ಭಾಗಗಳಿಂದ ಕೂಡಿದೆ. ಚಕ್ರಾಬ್ಜಮಂಡಲದಿಂದ ಭಗವಂತನ ಉಪಾಸನೆ ಮಾಡುವ ಮೂಲಕವೇ ಬಿಂಬಾಪರೋಕ್ಷದತ್ತ ಸಾಗಬಹುದು. ಈ ಮಂಡಲದಲ್ಲೇ ಸಾಧಕನಾದವನಿಗೆ ಆಯಾ ದೇವತೆಗಳು ಕಾಣಿಸಿಕೊಂಡು ಅನುಗ್ರಹ ನೀಡುತ್ತಾರೆ ಎಂದು ವಿಜಯದಾಸರು ಈ ಸುಳಾದಿಯಲ್ಲಿ ನಿರೂಪಿಸಿದ್ದಾರೆ. ಈ ಸುಳಾದಿಯಲ್ಲಿ ತನ್ನ ಸ್ವಾನುಭವವನ್ನೇ ಅವರು ಹರಿಯಗೊಟ್ಟು ಕಡೆಯಲ್ಲಿ ಹೇಳುತ್ತಾರೆ.

"ಸಿದ್ಧ ಸಾಧನವಿದು ಬಿಂಬ ಕಾಣುವುದಕ್ಕೆ
ಪದ್ಮಾವಲ್ಲಭ ಶ್ರೀ ವಿಜಯವಿಠ್ಠಲ ಪ್ರಾಪ್ತಿ"

ವಿಜಯದಾಸರು ಕನ್ನಡ ಜನರ ಸಾಧನೆಗಾಗಿ ರಚಿಸಿಕೊಟ್ಟ ಈ ಸುಳಾದಿಯನ್ನು ಮತ್ತಷ್ಟು ಬಿಡಿಸಿ ಅರ್ಥವಾಗುವಂತೆ ವಿವರಿಸುತ್ತ ಸಂಪೂರ್ಣವಾಗಿ ತಾತ್ಪರ್ಯವನ್ನು ಶ್ರೀಬನ್ನಂಜೆ ಗೋವಿಂದಾಚಾರ್ಯರು "ವಿಜಯದಾಸರ ಕಂಕಣಾಕಾರ-ಸುಳಾದಿ" ಎಂಬ ತಮ್ಮ ಪುಟ್ಟ ಕೃತಿಯಲ್ಲಿ ನೀಡಿ ಕನ್ನಡಿಗರಿಗೆ ಉಪಕರಿಸಿದ್ದಾರೆ.

ತಮಗೂ ತಮ್ಮ ನೇತೃತ್ವದಲ್ಲಿ ದಾಸಕೂಟವನ್ನು ಕಟ್ಟಲೂ ಪ್ರೇರಣೆ, ಪ್ರಭಾವಗಳನ್ನು ಮಂತ್ರಾಲಯದ ಗುರುಸಾರ್ವಭೌಮರಿಂದ ಪಡೆದವರು ವಿಜಯದಾಸರು. ರಾಘವೇಂದ್ರಯತಿಗಳನ್ನು ಕುರಿತು ಅನೇಕ ಕೃತಿಗಳನ್ನು ರಚಿಸಿದ್ದಾರೆ. "ರಾಘವೇಂದ್ರ ದುರಿತೌಘ ಪರಿಹಾರ" "ಯತಿಗಳ ಶಿರೋರನ್ನ-ಯೋಗಸಂಪನ್ನ" "ಕಪಿಲತೀರ್ಥದಲಿ ಕರಣ ಶುದ್ಧಿಯಲಿ ತಪವ ಮಾಡುವ ಮೌನಿ ಸೌಮ್ಯ ಜ್ಞಾನಿ" ಎಂದು ಮುಂತಾಗಿ ಸ್ತುತಿಸಿದ್ದಾರೆ.

ಎಪ್ಪತ್ತುಮೂರು ವರ್ಷಗಳ ಕಾಲ ಬದುಕಿ ಮಹತ್ಕಾರ್ಯಗಳನ್ನು ಸಾಧಿಸಿ ದಾಸಸಾಹಿತ್ಯದ ಪುನರುಜ್ಜೀವನಕ್ಕೆ ಕಾರಣರಾದ ವಿಜಯದಾಸರು ೧೭೫೫ರಲ್ಲಿ ಗುಂತಕಲ್ಲಿನ ಬಳಿ ಇರುವ 'ಚಿಪ್ಪಗಿರಿ' ಎಂಬ ಗ್ರಾಮದಲ್ಲಿ ದೈವಾಧೀನರಾದರು. ತಮ್ಮ ಬದುಕಿನ ಅವಧಿಯಲ್ಲೇ ಅಪಾರ ಶಿಷ್ಯಸ್ತೋಮ ಬೆಳೆಯಿಸಿ, ಅವರ ಮೂಲಕವೂ ಹರಿದಾಸ್ಯತನದ ಕಾರ್ಯಗಳನ್ನು ಮಾಡಿಸಿ ದಾಸಕೂಟಕ್ಕೆ ಮರುಜೀವನ ಕೊಡಿಸಿದವರೆಂದೇ ಅವರನ್ನು ಕುರಿತಾದ ಈ ಕೆಳಗಿನ ಎರಡು ಶ್ಲೋಕಗಳಲ್ಲಿ ಅವರ ಸೇವೆಯನ್ನು ಸ್ಮರಿಸುವ ಪರಿಪಾಠ ಬೆಳೆದು ಬಂದಿದೆ.

"ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ।
ನಮಃ ಪುರಂದರಾರ್ಯಾಯ ವಿಜಯಾರ್ಯಾಯತೇ ನಮಃ॥

ಅಜ್ಞಾನ ತಿಮಿರಾದಿತ್ಯಂ ಅತ್ಯಾನಂದ ಪದಪ್ರದಂ।
ವಿಜ್ಞಾನ ವಿಮಲಂ ಶ್ರೇಷ್ಠಂ ವಿಜಯಾರ್ಯ ಗುರುಂ ಭಜೇ॥"

ವಿಜಯದಾಸರು ಮಾಡಿದ ಮತ್ತೊಂದು ಮಹತ್ತರ ಕಾರ್ಯವೆಂದರೆ ತಮ್ಮ ಶಿಷ್ಯರಾದ ಗೋಪಾಲದಾಸರ ಮೂಲಕ, ಪಂಡಿತ ಶ್ರೀನಿವಾಸಾಚಾರ್ಯರೆನ್ನುವ ವ್ಯಾಸಕೂಟ ಪರಂಪರೆಯವರು ಹರಿದಾಸರ ಮೇಲೆ ಬೆಳೆಯಿಸಿಕೊಂಡಿದ್ದ ವಿಪರೀತ ತಾತ್ಸಾರ, ಅನಾದರಗಳನ್ನು ಹೋಗಲಾಡಿಸಿ ಆ ಪಂಡಿತರೇ "ಜಗನ್ನಾಥದಾಸ"ರೆಂದು ಹರಿದಾಸ ದೀಕ್ಷೆಯನ್ನು ಪಡೆದುಕೊಳ್ಳುವಂತೆ ಮಾಡಿದ್ದು. ಮುಂದೆ ಜಗನ್ನಾಥದಾಸರಿಗೆ ಒದಗಿದ ಅಪಮೃತ್ಯುವನ್ನು ಪರಿಹರಿಸಿ ಗೋಪಾಲದಾಸರ ಆಯುಷ್ಯದಲ್ಲಿ ನಲವತ್ತು ವರುಷಗಳನ್ನು ಅವರಿಗೆ ಕೊಡಮಾಡಿಸಿದ್ದು ಈ ಎಲ್ಲ ವಿಷಯಗಳಿಗೆ ದಾಖಲೆ ಎಂದರೆ ಗೋಪಾಲದಾಸರ ಕೃತಿಗಳೇ. ವಿಜಯದಾಸರ ಶಿಷ್ಯರನೇಕರು ತಮ್ಮ ಗುರು ವಿಜಯದಾಸರನ್ನು ಮನದುಂಬಿ ಕೀರ್ತಿಸಿರುವ ಹಾಡುಗಳು ಬೇಕಷ್ಟಿವೆ.

"ನಿನ್ನ ಪಾದವ ನಂಬಿ ಅನ್ಯರಾಶ್ರಯವ್ಯಾಕೆ
ಚೆನ್ನಗುರು ವಿಜಯರಾಯ॥ (ಮೋಹನದಾಸರು)

"ರತುನ ದೊರಕಿತಲ್ಲ । ಎನಗೆ ದಿವ್ಯ । ರತುನ ದೊರಕಿತಲ್ಲ
ರತುನ ದೊರಕಿತು ಎನ್ನ ಜನುಮ ಪವಿತ್ರವಾಯಿತು ಈ ದಿನದಿನಾ
ತುತಿಸುತಲಿ ಬರುತಿರಲು ಪ್ರಯತುನವಿಲ್ಲದೆ ವಿಜಯರಾಯರೆಂಬ॥ (ಜಗನ್ನಾಥ ದಾಸರು)

ಕಲ್ಲೂರು ಸುಬ್ಬಣ್ಣಾಚಾರ್ಯರೆಂಬುವವರು(ಶ್ರೀವ್ಯಾಸವಿಠಲಾಂಕಿತರು) ವಿಜಯದಾಸರನ್ನು ಕುರಿತು "ವಿಜಯಕವಚ"ವೆಂಬ ದೀರ್ಘಕೃತಿಯನ್ನೇ ರಚಿಸಿದ್ದಾರೆ. ೨೭ನುಡಿಗಳಿಂದ ಕೂಡಿದ ಈ ವಿಜಯಕವಚ ನಿತ್ಯವೂ ಪಠಿಸಿದರೆ ಮನದ ಅಭೀಷ್ಟ ಸಿದ್ಧಿಸುವುದೆಂದು ತಿಳಿಸಿದ್ದಾರೆ. ಹೀಗೆ ಇನ್ನೂ ಅನೇಕ ಶಿಷ್ಯರು ವಿಜಯದಾಸರನ್ನು ಸ್ತುತಿಸಿ ಹಾಡಿದ್ದಾರೆ.

ಕಾಖಂಡಕಿ ಶ್ರೀ ಮಹಿಪತಿದಾಸರು (೧೬೪೦-೧೭೦೫)

ದ್ವಿತೀಯ ಘಟ್ಟದ ದಾಸಸಾಹಿತ್ಯ ವಿಜಯದಾಸರಿಂದ ಊರ್ಜಿತವಾಯಿತು ಎನ್ನುವುದು ಸತ್ಯ. ಆದರೆ ಇದಕ್ಕೂ ಮುಂಚೆ ಪ್ರಥಮ ಮತ್ತು ದ್ವಿತೀಯ ಘಟ್ಟಕಾಲದ ಮಧ್ಯದಲ್ಲಿ ಬಂದ ಮಹಿಪತಿದಾಸರು ಕನ್ನಡನಾಡಿಗೆ ನೀಡಿದ ಕೊಡುಗೆಯನ್ನು ಸ್ಮರಿಸದಿರುವಂತಿಲ್ಲ. ಬಿಜಾಪುರ ಜಿಲ್ಲೆ ಇವರ ಕಾರ್ಯಕ್ಷೇತ್ರ, ಬಿಜಾಪುರದ ಆದಿಲ್‌ಷಾಹಿ ಸುಲ್ತಾನನ ಬಳಿ ಉನ್ನತ ಹುದ್ದೆಯಲ್ಲಿ ಇದ್ದವರು. ತಾರುಣ್ಯದಲ್ಲಿದ್ದಾಗಲೇ ಬಹುಭಾಷಾ ವಿಶಾರದರಾಗಿ ಬೇರೆಬೇರೆ ಭಾಷೆಗಳಲ್ಲಿಯ ಭಕ್ತಿಸಾಹಿತ್ಯವನ್ನು ಓದಿ ತಿಳಿದವರಾಗಿದ್ದರು. ಭಾಗವತ, ಅವಧೂತ ಸಂಪ್ರದಾಯಗಳು, ಮುಸ್ಲಿಮರಲ್ಲಿ ಪ್ರಚಲಿತವಿದ್ದ ಸೂಫೀ ಸಂಪ್ರದಾಯ, ಕನ್ನಡನಾಡಿನ ಶರಣರ ಸಾಹಿತ್ಯಗಳಾದಿಯಾಗಿ ಅನೇಕ ಬಗೆಯ ಆಧ್ಯಾತ್ಮದ ಆಧ್ಯಯನದಿಂದ ವಿಶಿಷ್ಟ ಮನಃಪಾಕ ಹೊಂದಿದವರಾಗಿದ್ದರು. ಹೀಗಾಗಿ ಅವರ ಕೃತಿಗಳಲ್ಲಿ ಈ ಎಲ್ಲ ಸಂಪ್ರದಾಯಗಳ ಅನೇಕ ಪಾರಿಭಾಷಿಕ ಪದಗಳು ಹೊಂದಿಕೊಂಡು ಬಂದಿರುವುದನ್ನು ಗುರುತಿಸಬಹುದು.

ಮಧ್ವಮತಾನುಯಾಯಿಗಳಾಗಿದ್ದ ಮನೆತನದಲ್ಲಿ ಜನಿಸಿಬಂದವರಾದ್ದರಿಂದ ಮಧ್ವಮತ ತತ್ತ್ವಗಳನ್ನೂ ಬಾಲ್ಯದಿಂದಲೇ ಅಭ್ಯಾಸ, ಅಧ್ಯಯನ ಮಾಡಿ ಮೈಗೂಡಿಸಿಕೊಂಡವರೇ ಆಗಿದ್ದರು. ಪ್ರಹ್ಲಾದ ಕೃಷ್ಣಾಚಾರ್ಯರೆನ್ನುವವರ ಬಳಿ ಶಾಸ್ತ್ರಪುರಾಣಗಳನ್ನು, ತರ್ಕ ವ್ಯಾಕರಣ ಛಂದಸ್ಸು ಮತ್ತು ಮಧ್ವಮತದ ಪ್ರಮುಖ ಗ್ರಂಥಗಳನ್ನು ಪಾಠ ಹೇಳಿಸಿಕೊಂಡರು. ನಂತರ ಸಾರವಾಡದಲ್ಲಿದ್ದ ಮಹಾಜ್ಞಾನಿ ಭಾಸ್ಕರಸ್ವಾಮಿಗಳಲ್ಲಿ ಶಿಷ್ಯತ್ವ ವಹಿಸಿದರು. ಈ ಗುರುವಿನ ಬಳಿ ದೀರ್ಘಕಾಲವಿದ್ದು ಜ್ಞಾನ ಭಿಕ್ಷೆ ಪಡೆದು ಅವರಿಂದ ಯೋಗದೀಕ್ಷೆ ಪಡೆದು ಮುಂದೆ ಕಾಖಂಡಕಿ ಗ್ರಾಮದಲ್ಲಿ ಹೆಚ್ಚು ಸಮಯ ನೆಲೆಯಾಗಿ ನಿಂತರು. ತುಂಬ ಏಕಾಂತಪ್ರಿಯರಾಗಿದ್ದ

ಮಹಿಪತಿದಾಸರು ಷಹಪುರದಲ್ಲಿನ ಮಂದಾಕಿನೀ ತೀರ್ಥದ ಬಳಿ ಇದ್ದ ಪ್ರಾಣದೇವರ ಸನ್ನಿಧಿಯಲ್ಲಿ ಅಂತರ್ಮುಖಿಯಾಗಿ ಬಹುಕಾಲ ಧ್ಯಾನ, ಯೋಗಾಭ್ಯಾಸಗಳಲ್ಲಿದ್ದು ಸಾಧನೆ ಮಾಡಿದರು. ಬಿಜಾಪುರ, ಐಗಳಿಗ್ರಾಮ, ಗುಲ್ಬರ್ಗ, ಸಾರವಾಡ, ಸಿಂಧಗಿ, ಯಾಳಗಿ, ಅಗರಖೇಡ ಮುಂತಾದ ಕೆಲವೇ ಊರುಗಳಲ್ಲಿ ಪರ್ಯಟನ ಮಾಡಿದರೇ ವಿನಹ ದೇಶವಿಡೀ ಸಂಚಾರ ಹೊರಟವರಲ್ಲ. ಅವರ ಜೀವಿತದ ಹೆಚ್ಚು ಕಾಲವನ್ನು ಅವರು ಕಳೆದದ್ದು ಬಿಜಾಪುರ ಮತ್ತು ಕಾಖಂಡಕಿಯಲ್ಲಿ. ಆದರೂ ಅವರು ಬದುಕಿದ್ದ ಕಾಲದಲ್ಲೇ ಅವರ ಬಗೆಗಿನ ಕೀರ್ತಿ ಬಿಜಾಪುರ ಜಿಲ್ಲೆಯಾದ್ಯಂತ ಹರಡಿತ್ತು.

ತಮ್ಮ ಬಾಲ್ಯಕಾಲದ ಗುರುಗಳಾದ ಪ್ರಹ್ಲಾದ ಕೃಷ್ಣಾಚಾರ್ಯರ ದರ್ಶನಕ್ಕೆಂದು ಗುರುಗಳ ಊರಾದ ಕೃಷ್ಣಾತೀರದ ಕೊಲ್ಹಾರಕ್ಕೆ ಹೋಗಿ ಕೆಲಕಾಲವಿದ್ದು ಅಲ್ಲೇ ನಿರ್ಯಾಣವನ್ನು ಹೊಂದಿದರು. ಅವರ ಮಗ ಕೃಷ್ಣರಾಯರು ಕಾಖಂಡಕಿಯಲ್ಲಿ ತನ್ನ ತಂದೆಯ ವೃಂದಾವನವನ್ನು ಸ್ಥಾಪಿಸಿದರು.

ಮಹಿಪತಿದಾಸರದು ವಿಶಿಷ್ಟ ವ್ಯಕ್ತಿತ್ವ, ಸ್ವಾನಂದಯೋಗವೆಂಬ ಬಿಂಬಾಪರೋಕ್ಷ ಸಾಧನೆಗೈದವರು ಅವರು. ಅವಧೂತ ಪಂಥಕ್ಕೆ ಸೇರಿದ ಭಾಸ್ಕರಸ್ವಾಮಿಗಳು ತನ್ನನ್ನು ಹೇಗೆ ಉದ್ಧರಿಸಿದರೆಂದು ತಮ್ಮ ಅನೇಕ ಕೃತಿಗಳಲ್ಲಿ ಹೇಳಿಕೊಂಡಿದ್ದಾರೆ. 'ಮಹಿಪತಿ' ಎಂಬ ತಮ್ಮ ಅಂಕಿತಕ್ಕೆ ದೀನ ಮಹಿಪತಿ, ತರಳ ಮಹಿಪತಿ, ದಾಸ ಮಹಿಪತಿ, ಮೂಢ ಮಹಿಪತಿ ಎಂದೆಲ್ಲ ವಿಶೇಷಣಗಳಿಂದ ತಮ್ಮನ್ನು ಕರೆದುಕೊಂಡಿದ್ದಾರೆ, ತನಗಿಂತ ಕಿರಿಯರಿಲ್ಲ ಎನ್ನುವಂತೆ ತನ್ನನ್ನು ತಾನು ಗುರುತಿಸಿಕೊಂಡಿದ್ದಾರೆ. ಮಹಿಪತಿದಾಸರಿಗೆ ಯಾರು ಯಾವಾಗ ಹರಿದಾಸದೀಕ್ಷೆ ಇತ್ತರೋ ಅಥವಾ ತಾನೇ ಹರಿಯದಾಸನೆಂದು ಭಕ್ತಿಯಿಂದ ಕರೆದುಕೊಂಡರೋ ತಿಳಿದು ಬಂದಿಲ್ಲ. ಮನೆತನದಿಂದ ಮಧ್ವ ಮತಸ್ಥರಾದರೂ ಮಾಧ್ವತತ್ತ್ವಗಳನ್ನು ವಿಸ್ತರಿಸುವ ಪದಗಳನ್ನು ಅವರು ರಚಿಸಿಲ್ಲ. ಅವರ ಕೀರ್ತನೆಗಳಲ್ಲಿ ಹೆಚ್ಚಾಗಿ ತುಂಬಿರುವುದು ಯೋಗದ ವಿಚಾರವೇ, ಅನುಭಾವಿತನವೇ ಆಗಿದೆ. ಹಾಗೆಂದು ಹರಿಸ್ತುತಿ ಇಲ್ಲದಿಲ್ಲ. ಸಾಕಷ್ಟು ಕೃತಿಗಳಲ್ಲಿ ಹರಿಭಕ್ತಿ, ಹರಿಸ್ತುತಿ, ಹರಿಪ್ರೀತಿಗಳು ಪ್ರಕಟಗೊಂಡಿವೆ.

ಹರಿಯ ಸೇವೆಗೊದಗದ ಕಾಲು ಮುರುಕು ಗೊರಸಿನ ಕಾಲು
ಹರಿಗೆ ಮಾಡದ ಭಕ್ತಿ ಮೂಢಭಕ್ತಿ
ಹರಿಯೆ ಶ್ರೀ ಗುರುವೆಂದು ಗುರುವೆ ಪರದೈವವೆಂದು
ಮೊರೆ ಹೊಕ್ಕಿದನು ಹರಿಯ ಮೂಢಮಹಿಪತಿಯು॥

ಎಂದು ಸ್ಪಷ್ಟವಾಗಿ ಸಾರಿದ್ದಾರೆ. ಹರಿಸರ್ವೋತ್ತಮತ್ವ, ಹರಿನಾಮ ಮಹತ್ವ, ಹರಿದಾಸರ ಹಿರಿಮೆ ಇವುಗಳನ್ನು ಸುಂದರವಾದ ಉಪಮೆ, ರೂಪಕಗಳ ಮೂಲಕ ಅವರ ಕೃತಿಗಳು ಹೇಳುತ್ತವೆ. ಅವರ ಕೃತಿಗಳಲ್ಲಿ ದಾಸರ ಹರಿಭಕ್ತಿ, ಶರಣರ ಅನುಭಾವತೆ, ಯೋಗಿಗಳ ಅನುಭೂತಿ ಇವೆಲ್ಲದರ ಸಂಗಮವಿದೆಯಾಗಿ ಅವರ ಕೃತಿಗಳು

ಅವರ ವ್ಯಕ್ತಿತ್ವದಂತೆಯೇ ವಿಶಿಷ್ಟವಾಗಿವೆ ಎನ್ನಬಹುದು. ಹಲವು ನದಿಗಳನ್ನೊಳಗೊಂಡ ಜಲಧಿಯಂತೆ ಅವರ ಬದುಕಲ್ಲಿ ದೊರೆತ ಆಧ್ಯಾತ್ಮದ ವಿವಿಧ ಮಜಲುಗಳ ಶಿಕ್ಷಣ, ಅನುಭವಗಳೇ ಈ ವಿಶಿಷ್ಟತೆಯನ್ನು ತಂದಿವೆ ಎಂದು ತಿಳಿಯಬಹುದು.

ದತ್ತಾತ್ರೇಯನಲ್ಲಿ ಮಹಿಪತಿದಾಸರಿಗೆ ಅಪಾರವಾದ ಭಕ್ತಿ. ಅಂತೆಯೇ ಕೆಲವೊಮ್ಮೆ ಅವರು 'ನೇತಿ-ನೇತಿ', 'ಸೋಹಂ', 'ಸರ್ವಂ ಖಲು ಬ್ರಹ್ಮ ಇದಂ' ಮುಂತಾದ ಅದ್ವೈತ ರೀತಿಯಲ್ಲಿಯೂ ಭಗವದ್ ಶಕ್ತಿಯನ್ನು ಅನುಸಂಧಾನ ಮಾಡಿ ಕೃತಿಗಳನ್ನು ರಚಿಸಿದ್ದಾರೆ. ಅನೇಕ ಕೃತಿಗಳಲ್ಲಿ ನಿರ್ಗುಣ, ನಿರಾಕಾರ, ಶೂನ್ಯ, ನಿರ್ಬಯಲು, ಬಯಲು ಎಂಬಿತ್ಯಾದಿ ಅದ್ವೈತಪರ ಶ್ರುತಿವಚನಗಳು ದೊರಕುತ್ತವೆ. ಇಂಥದ್ದೇ ಸಂಪ್ರದಾಯವೆಂದು ಹಿಡಿದಿಡಲಾಗದ, ಎಲ್ಲ ಸಂಪ್ರದಾಯಗಳ ಮೂಲಕವೂ ದೇವರ ಇರುವಿಕೆಯನ್ನು ಅನುಭವಕ್ಕೆ ತಂದುಕೊಂಡ, ಸಂಪ್ರದಾಯಗಳನ್ನು ಮೀರಿ ನಿಂತ ಮಹತ್ತ್ವದ ಅನುಭಾವಿಗಳು ಮಹಿಪತಿದಾಸರು.

ಮಹಿಪತಿದಾಸರ ಕೃತಿಗಳಿಗೆ ಕನ್ನಡದವರಿಗಿಂತ ಮಹಾರಾಷ್ಟ್ರದವರೇ ಹೆಚ್ಚು ವ್ಯಾಖ್ಯಾನ ಮಾಡಿದ್ದಾರೆ. ಅನುಭಾವಿ ಮತ್ತು ಅದ್ವೈತ ಭಕ್ತಿ ಪರಂಪರೆಯವರೆಂದು ಮಹಿಪತಿದಾಸರನ್ನು ಮಹಾರಾಷ್ಟ್ರದ ವಿದ್ವಾಂಸರನೇಕರು ವ್ಯಾಖ್ಯಾನಿಸಿದ್ದಾರೆ. ಆಧುನಿಕ ಭಾರತದ ಶಿಕ್ಷಣತಜ್ಞರೂ, ಮಹಾನ್ ವಿದ್ವಾಂಸರೂ ಆದ ಡಾ||.ರಾನಡೆ ಅವರು ತಮ್ಮ ಪ್ರಸಿದ್ಧ ಗ್ರಂಥವಾದ "Pathway to god in kannada literature"ಇದರಲ್ಲಿ ಮಹಿಪತಿದಾಸರು ಕನ್ನಡನಾಡಿನ ಅಷ್ಟೇ ಅಲ್ಲ, ಜಗತ್ತಿನ ಶ್ರೇಷ್ಠತಮ ಅನುಭಾವಿಗಳಲ್ಲಿ ಒಬ್ಬರು (Sri Mahipahti das is one of the greatest Mystics of karnataka-nay-of the world)ಎಂದು ಉದ್ಗರಿಸಿದ್ದಾರೆ. ಪುರಂದರದಾಸರ ಬಗ್ಗೆಯೂ ಇದೇ ವಿದ್ವಾಂಸರು "ಅಂತರಂಗದ ಸತ್ಯಗಳನ್ನು ಕೆಣಕಿ ಕೆಣಕಿ, ಒಳಗಿನ ಅನುಭವಗಳನ್ನು ಮಡುಗಟ್ಟಿಸಿ ದೇವರನ್ನು ತಲುಪಲು ಅವುಗಳನ್ನು ಸೋಪಾನವಾಗಿಸಿ ಕೊಟ್ಟವರು" ಎಂದು ಉದ್ಗರಿಸಿದ್ದಾರೆ.

"ಪುರಂದರದಾಸರು ಮತ್ತು ಮಹಿಪತಿದಾಸರು ನಮ್ಮೊಳಗಿರುವ ಆಧ್ಯಾತ್ಮಿಕ ಶಕ್ತಿಯನ್ನು (ಕುಂಡಲಿನೀ ಶಕ್ತಿ, spiritual energy)ಜಾಗೃತಗೊಳಿಸಿಕೊಳ್ಳುವ ಯೋಗಕ್ರಿಯೆಗಳನ್ನು ವಿಶದವಾಗಿ ಹೇಳಿದವರು. ಮನಸ್ಸಿನ ಏಕಾಗ್ರಚಿತ್ತತೆ ತರುವ ಸಂಪನ್ನತೆಯನ್ನು, ಅದನ್ನು ಸಾಧಿಸುವ ಪರಿಯನ್ನು ವಿವರವಾಗಿ ಇವರಿಬ್ಬರು ತಿಳಿಹೇಳಿದರು. ಆದರೆ ನಮ್ಮ ಕನ್ನಡದಲ್ಲಿ ಮಹಿಪತಿದಾಸರ ಬಗ್ಗೆ ಆಗಬೇಕಾದಷ್ಟು ವ್ಯಾಸಂಗ ನಡೆದಿಲ್ಲ. ಅವರ ಕೃತಿಗಳ ಆಳವನ್ನು ಅರಿಯಬೇಕಾದಷ್ಟು ಅರಿಯುವ ಕೆಲಸ, ಸಂಶೋಧನೆ ನಡೆದೇ ಇಲ್ಲ" ಎಂದು ಈಗಿನ ಚಿಂತಕರಾದ ಬನ್ನಂಜೆ ಗೋವಿಂದಾಚಾರ್ಯರು ವಿಷಾದಿಸಿದ್ದಾರೆ.

ಆಯಾ ಸಂಪ್ರದಾಯದ ವಿದ್ವಾಂಸರು ಅವರವರಿಗೆ ಸಂಬಂಧಿಸಿದ ಮತತತ್ತ್ವದ ದೃಷ್ಟಿಕೋನಗಳಲ್ಲಿ ಮಹಿಪತಿದಾಸರ ಕೆಲವು ಕೃತಿಗಳ ಅಧ್ಯಯನ ಮಾಡಿದವರಿದ್ದಾರೆ. ಆದರೆ ಸಂಪ್ರದಾಯಗಳ ಚೌಕಟ್ಟನ್ನು ಮೀರಿ ಒಟ್ಟು ಮಹಿಪತಿದಾಸರ ಕೃತಿತತ್ತ್ವಗಳನ್ನು, ಜೀವನದರ್ಶನವನ್ನು ಅರಿಯುವಂಥ ಅಧ್ಯಯನವನ್ನು ಕನ್ನಡದವರು ಇನ್ನೂ ಮಾಡಬೇಕಿದೆ. ಮಹಿಪತಿದಾಸರ ಸಾಲುಗಳೇ ಸ್ಪಷ್ಟವಾಗಿ ಹೇಳುತ್ತಿರುವುದನ್ನು ಗಮನಿಸಬೇಕಾಗಿದೆ.

ದ್ವೈತ ಅದ್ವೈತ ಎಂದು ಹೊಡೆದಾಡದಿರೋ ಪ್ರಾಣಿ
ಚೇತಿಸಿ ಬ್ಯಾರಿಹ ವಸ್ತುವ ಮೊದಲು ಕಾಣಿ॥

ಅವರ ಕೃತಿಗಳಲ್ಲಿ ದ್ವೈತವಿದೆ, ಅದ್ವೈತವೂ ಇದೆ; ದ್ವೈತ, ಅದ್ವೈತ ಎರಡೂ ಯಾವುದೂ ಇಲ್ಲ ಎಂಬಂತೆ ನಿಗೂಢ ಅನುಭಾವೀ ಸಂತರು ಅವರು, ಅಲ್ಲಮಪ್ರಭುವನ್ನು ನೆನಪಿಗೆ ತರುವವರು. ನಾಮಸ್ಮರಣೆ, ಜಪಗಳ ಕುರಿತು ಹೇಳಿದಂತೆಯೇ ತಂತ್ರಯೋಗ ಮತ್ತು ರಾಜಯೋಗವನ್ನೂ ಅವರು ಅದ್ಭುತವಾಗಿ ತಮ್ಮ ಕೃತಿಗಳಲ್ಲಿ ತಂದಿದ್ದಾರೆ. ಹರಿದಾಸಪಂಥದಲ್ಲಿ ಕಂಡುಬರದ ದತ್ತಾತ್ರೇಯನ ಕುರಿತಾದ ಕೀರ್ತನೆಗಳೂ ಅವರ ಭಂಡಾರದಿಂದ ಹೊರಹೊಮ್ಮಿವೆ. ಗುರುವಿನ ಮಹತ್ವವನ್ನು ಕುರಿತ ಅನೇಕ ಕೃತಿಗಳಿವೆ. ಯೋಗಮಾರ್ಗದ ತಮ್ಮ ಅನುಭವಗಳನ್ನು ಅನೇಕ ಕೃತಿಗಳಲ್ಲಿ ಪಡಿಮೂಡಿಸಿದ್ದಾರೆ. ಮಹಿಪತಿದಾಸರು ಹರಿದಾಸರೂ ಹೌದು, ಯೋಗಿಗಳೂ ಹೌದು, ಭಕ್ತರೂ ಹೌದು, ತಂತ್ರಸಾಧಕರೂ ಹೌದು. ಆಧ್ಯಾತ್ಮದ ಎಲ್ಲ ಮಾರ್ಗಗಳಲ್ಲೂ ಹೊಕ್ಕು ಸಾಧಿಸಿ ಸಿದ್ಧಿ ಪಡೆದ ಅಪೂರ್ವ ಅವಧೂತರೂ ಹೌದು. ಸಾಮಾನ್ಯ ಮನುಜನಿಗೆ ಸಾಧ್ಯವಾಗದ ಸಂಕೀರ್ಣ ಸಾಧನಾಸಿದ್ಧಿ ಪುರುಷರು ಅವರು. ಅದಕ್ಕೇ ಡಾ॥ ರಾನಡೆಯವರು ಹಾಗೆ ಉದ್ಗಾರವೆತ್ತಿದ್ದು, ಕರ್ನಾಟಕಕ್ಕೆ ಮಾತ್ರವಲ್ಲ, ವಿಶ್ವದ ಅನುಭಾವೀ ಮಹಾಪುರುಷರಲ್ಲಿ ಒಬ್ಬರು ಎಂದು.

ಕನ್ನಡದಲ್ಲಿ ಅಲ್ಲದೆ ಮರಾಠಿ, ಹಿಂದಿಯಲ್ಲಿ ಕೃತಿ ರಚನೆ ಮಾಡಿದ್ದಾರೆ, ಎಲ್ಲ ಭಾಷೆಗಳನ್ನೂ ಬೆರೆಸಿದ ಮಿಶ್ರ ಕೃತಿಗಳು ಕೆಲವು ಇವೆ, ಒಟ್ಟು ಮಹಿಪತಿದಾಸರ ಕೃತಿಗಳು ೭೬೨ ಸಂಖ್ಯೆಯಲ್ಲಿ ಲಭ್ಯವಿವೆ. ಇವುಗಳಲ್ಲಿ ಕನ್ನಡ ಕೃತಿಗಳೇ ೭೦೩ ಸಂಖ್ಯೆಯಲ್ಲಿದ್ದು ಲಭ್ಯವಿವೆ.

'ಸಮಜೋ ಬಾಯಿ' ಎಂಬ ಅವರ ಕೀರ್ತನೆಯಲ್ಲಿ ನಾಲ್ಕು ಭಾಷೆಗಳನ್ನು ಬಳಸಿದ್ದಾರೆ. ತೆಲುಗಿನಲ್ಲಿ ರಚಿತವಾದ ಕೃತಿಗಳು ಬೇರೆ ದೊರೆತಿಲ್ಲವಾದರೂ ಈ ಕೀರ್ತನೆಯಲ್ಲಿ ತೆಲುಗನ್ನೂ ಬಳಸಿದ್ದಾರೆ. ತ್ರಿಭಾಷಾ ಮಿಶ್ರಿತ ಪದ್ಯವೊಂದರ ಸಾಲುಗಳು ಹೀಗೆ ಬರುತ್ತವೆ.

ಬಾಟ ಪಕಡ್ಡೋ ಸೀದಾ
ನ ಪಡೇ ತೇಥೆ ಬಾಧಾ
ಇದುವೆ ಗುರು ನಿಜ ಬೋಧಾ
ಸ್ವ ಸುಖ ಸಮ್ಮತ ವಾದಾ॥

ಇಲ್ಲಿ ಕನ್ನಡ, ಮರಾಠಿ ಮತ್ತು ಹಿಂದಿ ಬಳಕೆಯಾಗಿವೆ.

"ಕಾಲಕಾಲದಲಿ ಕೇಶವನೆನ್ನಿರೊ" ಎಂಬ ಅವರ ಕನ್ನಡ ಕೃತಿಯೊಂದು ನಮ್ಮ ಪ್ರತಿಯೊಂದು ನಡೆನುಡಿಗಳಲ್ಲೂ ಭಗವಂತನ ನಾಮಸ್ಮರಣೆಯನ್ನು ಹೇಗೆ ಮಾಡಬೇಕು, ಹೊತ್ತುಹೊತ್ತಿಗೆ ಹರಿಯನ್ನು ಹೇಗೆ ಕರೆಯಬೇಕು ಎನ್ನುವುದನ್ನು ಸುಂದರವಾಗಿ ಕಟ್ಟಿದ ಹೂಗಳ ಮಾಲೆಯಂತೆ ಚಿತ್ರಿಸಿಕೊಡುತ್ತದೆ. ಒಂಬತ್ತು ನುಡಿಗಳ ದೀರ್ಘ ಕೃತಿಯಿದು. "ಮುಂಜಾನೆ ಎದ್ದು ಮುರಹರನಾ ಸ್ಮರಿಸೆಲಾ ಮನವೆ" ಎಂಬ ಕೀರ್ತನೆಯೂ ಭಗವಂತನನ್ನು ನೆನೆದರೆ ಆಗುವ ಫಲಗಳನ್ನು ಬಲು ಸೊಗಸಿನಿಂದ ಕೂಡಿದ ಶೈಲಿಯಲ್ಲಿ ಕಟ್ಟಿಕೊಡುತ್ತದೆ. "ಯುಕ್ತಿಯಿಂದ ಭಕ್ತಿ ಮಾಡಲಿಕ್ಕೆ ಶಕ್ತನಲ್ಲ ನಾ" ಎಂದು ಪ್ರಾರಂಭವಾಗುವ ಕೀರ್ತನೆಯು ಹೃದಯಂಗಮವಾದ ಆತ್ಮನಿವೇದನೆಯಾಗಿದೆ. ಪ್ರತಿ ನುಡಿಯ ಕಡೆಯಲ್ಲೂ 'ಕೃಪಾನಿಧೆ' ಮತ್ತು 'ದಯಾನಿಧೆ' ಪುನರುಕ್ತವಾಗಿ ಹಾಡಿದಾಗ ಸೊಗಸನ್ನು ಅಂತಕರಣಪೂರ್ವಕ ಸೊಲ್ಲಿಸುತ್ತದೆ.

ಉದಾಹರಣೆಗೆ ಕೆಲವು ಸಾಲುಗಳು ಇಲ್ಲಿವೆ:

ಧ್ಯಾನ ಮೌನ ಸ್ನಾನ ಸಂಧ್ಯಾ ಖೂನ ಗುರುತು ಅರಿಯೆ ನಾ
ನ್ಯೂನ ಪೂರ್ಣ ನೋಡದೆನ್ನ ರಕ್ಷಿಸೋ ದಯಾನಿಧೆ॥
ಹೀನದೀನ ಜ್ಞಾನಶೂನ್ಯ ದಾನಧರ್ಮ ಅರಿಯೆ ನಾ
ನೀನೆ ಕಾಯಬೇಕು ಎನ್ನ ಕರುಣದಿ ಕೃಪಾನಿಧೆ॥

"ಎನ್ನಪರಾಧವೇನು? ನಿನ್ನ ಸೂತ್ರಾಡಿಸಿದ್ಹಾಂಗ ಆಡುವೆ ಹರಿ" ಎಂಬ ಕೀರ್ತನೆಯ ನುಡಿಗಳು ಕೆಲವು ಈ ಕೆಳಗಿನಂತೆ ಬರುತ್ತವೆ.

ಆಡಿಸಿದರಾಡುವೆ। ನೋಡಿಸಿದರೆ ನೋಡುವೆ
ಮಾಡಿಸಿದರೆ ಮಾಡುವೆ। ಪ್ರೇರಿಸಿದ್ಹಾಂಗೆ॥೧॥
ನಡೆಸಿದರೆ ನಡೆಯುವೆ। ಕೂಡಿಸಿದರೆ ಕೂಡುವೆ
ನುಡಿಸಿದರೆ ನುಡಿಯುವೆ। ಚೇತರಿಸಿದ್ಹಾಂಗೆ॥೨॥

ಈ ಕೀರ್ತನೆಯು ಪುರಂದರದಾಸರ "ಅಪರಾಧಿ ನಾನಲ್ಲ। ಅಪರಾಧವೆನಗಿಲ್ಲ। ಕಪಟ ನಾಟಕ ಸೂತ್ರಧಾರಿ ನೀನೇ" ಎಂಬ ಕೀರ್ತನೆಯನ್ನು ನೆನಪಿಗೆ ತರುತ್ತದೆ.

ಭಜನೆಯಂತೆ ಹಾಡಿಕೊಳ್ಳಲು, ಅಥವಾ ಭಜನೆಯಲ್ಲಿ ಪ್ರಸ್ತುತಪಡಿಸಲು ಸೂಕ್ತವಾಗುವ ಶೈಲಿಯಲ್ಲಿ ಮಹಿಪತಿದಾಸರ ಅನೇಕ ರಚನೆಗಳಿವೆ. ಉದಾಹರಣೆಗೆ "ಇಂದು ಕಾಯೆಲಾ। ಭಕ್ತ ವತ್ಸಲಾ॥ ಬಂದು ಒದಗಿ ನಿಂದು ಭಯವ ದೂರಮಾಡೆಲಾ॥" ಎಂಬ ಕೃತಿ. ತಂದೆ ನೀನೆಲಾ। ತಾಯಿ ನೀನೆಲಾ॥ ಬಂಧು ಬಳಗ ದೈವ

ಕುಲ ಕೋಟಿ ನೀನೆಲಾ॥ ಮೊರೆಯ ಕೇಳಲಾ। ಹರಿಯೆ ನಿಶ್ಚಲಾ॥ ಕರುಣದಿಂದ ಒದಗಿ ಬೇಗ ದುರಿತ ಹರಿಸೆಲಾ॥ ಸುಳುಹು ತೋರೆಲಾ। ಹೊಳೆದು ವಿಠ್ಠಲಾ॥ ಖಳರ ಕೈಯ ಸೆಳೆದುಕೊಂಡು ಬಲೆಯ ಬಿಡಿಸೆಲಾ॥...." ಹೀಗೆಯೇ ಸಾಗುವ ಸಾಲುಗಳು ಗೆಜ್ಜೆ ಕಟ್ಟಿ ಹೆಜ್ಜೆ ಹಾಕುತ್ತ ಭಜನ ನರ್ತನ ಗತಿಯಲ್ಲಿ ಹಾಡಲು, ಕುಣಿಯಲು ಯೋಗ್ಯವಾಗಿವೆ. ನೀತಿಬೋಧೆಯ ಹಾಡುಗಳೂ ಬೇಕಷ್ಟಿವೆ.

ಕನಕದಾಸರ ನಂತರ ಮುಂಡಿಗೆಗಳ ರಚನೆ ದೊರೆಯುವುದು ಮಹಿಪತಿದಾಸರಲ್ಲೇ. ಸ್ವಾರಸ್ಯಕರವಾದ, ಬಹುಭಾವಗರ್ಭಿತ ಮುಂಡಿಗೆಗಳ ಭಂಡಾರವನ್ನೇ ಅವರು ನೀಡಿದ್ದಾರೆ. ಪದವೊಂದನ್ನು ಹಿಡಿದು ಅದರ ಮೇಲೆಯೇ ಆಟವಾಡಿದಂತೆ ಬಹುವಿಧವಿಸ್ತಾರದ ಅರ್ಥಗಳ ಚಿತ್ತಾರವನ್ನು ಒಗಟಿನ ಹಾಗೆ ನೀಡಿಬಿಡುತ್ತಾರೆ, ಉದಾಹರಣೆಗೆ ಈ ಕೆಳಗೆ "ನಕ್ಷತ್ರ" ಎಂಬ ಪದವಿಡಿದು ಅವರು ರಚಿಸಿದ ಮುಂಡಿಗೆ ಹೀಗಿದೆ.

ನಕ್ಷತ್ರರಮಣನಯ್ಯನಿಗೊಲಿದು ಶರವನಿತ್ತೆ
ನಕ್ಷತ್ರದೊಲ್ಲಭನ ತಮ್ಮನ ಸುತನ ಸುಟ್ಟೆ
ನಕ್ಷತ್ರ ಇಲ್ಲದವನ ವೈರಿ ಗಮನನ ತಾತ
ನಕ್ಷತ್ರ ಕಾಂತಧರನೆ
ನಕ್ಷತ್ರಜಾತನಗ್ರಜನ ಮಸ್ತಕವ ತರಿದೆ
ನಕ್ಷತ್ರ ಸಹಸ್ರವುಳ್ಳವನ ದ್ವಾರವ ಕಾಯ್ದೆ
ನಕ್ಷತ್ರ ನೀನೆ ಇಂದ್ರಾದಿ ದೇವತೆಗಳಿಗೆ
ನಕ್ಷತ್ರ ಭೂಪ ಗುರು ಮಹಿಪತಿಪ್ರಭು ಸಲಹೋ॥

ವಿಜಯನಗರ ಸಾಮ್ರಾಜ್ಯದ ಉನ್ನತಿಯಲ್ಲಿ ಹುಟ್ಟು ಪಡೆದು ಬಾಳಿ ಬದುಕಿದ ಹರಿದಾಸ ಸಾಹಿತ್ಯವು ಸಾಮ್ರಾಜ್ಯದ ಅವನತಿಯೊಂದಿಗೇ ತೆರೆಮರೆಗೆ ಸರಿದು ವಿಚ್ಛಿದ್ರಗೊಂಡ ಸಂಧಿಕಾಲದಲ್ಲಿ ಬಂದಂಥವರು ಮಹಿಪತಿದಾಸರು. ಹರಿದಾಸರಲ್ಲಿ ವಿಶಿಷ್ಟವಾದವರು. ಇಂಥದ್ದೇ ಮತಧರ್ಮವೆಂದು ಜೋತುಬೀಳದೆ ಎಲ್ಲ ಮತಧರ್ಮಗಳ ಸಾರ ಹೀರಿ ತನ್ನದೇ ಆದ ಮಾನವಸಾಧನೆಯ ಶಿಖರವೇರಿ ಸಂತರಾಗಿ, ಅವಧೂತರೆನಿಸಿ ಬಾಳಿದವರು. ಅವರ ಬದುಕಿನ ಅನುಭವಗಳ ವ್ಯಾಪ್ತಿ ಹಿರಿದಾದುದು, ಎಂತಲೇ ಅವರ ಕೃತಿಗಳ ಅಭಿವ್ಯಕ್ತಿಯೂ ಉನ್ನತವಾದುದು. ಕನ್ನಡನಾಡು ಮರೆಯಬಾರದ, ಮರೆಯಲಾರದ ವಿಶಿಷ್ಟ ವ್ಯಕ್ತಿ ಮಹಿಪತಿದಾಸರು. ಕನ್ನಡ ಭಾಷೆಯನ್ನು ಯೌಗಿಕ ಸಿದ್ಧಾಂತಗಳ ಅಭಿವ್ಯಕ್ತಿಗೆ ಸಿದ್ಧಪಡಿಸಿದ ಸಿದ್ಧಪುರುಷರು.

* * * * *

ಪುರಂದರದಾಸರ ಕಾಲದ ನಂತರ ವಿಜಯದಾಸರ ಕಾಲದವರೆಗಿನ ಅವಧಿ ಹರಿದಾಸ ಸಾಹಿತ್ಯದ ತಟಸ್ಥಕಾಲ ಎಂದು ಗುರುತಿಸಲಾಗಿದೆಯಾದರೂ, ಇದೇ ಸಂದಿಗ್ಧಕಾಲದಲ್ಲಿ ಮೂಡಿಬಂದ ಮಹಿಪತಿದಾಸರಿಂದ ಈ ಕೊರತೆ ನೀಗಿದೆ. ಇಷ್ಟಲ್ಲದೆ ಮಹಿಪತಿದಾಸರ ಮಗನಾದ ಕಾಖಂಡಕಿ ಕೃಷ್ಣರಾಯರಿಂದಲೂ ವಿಪುಲ ಹರಿದಾಸ ಸಾಹಿತ್ಯ ಸೃಷ್ಟಿಯಾಗಿದೆ ಎನ್ನುವುದನ್ನು ಈಗ ಗಮನಿಸಿಕೊಳ್ಳಲಾಗಿದೆ.

ಓ ಎನ್ನಬಾರದೆ ಹರಿಯೇ ನಾ ಕರೆದರೆ
ಓ ಎನ್ನಬಾರದೆ ಹರಿಯೆ॥

ಎನ್ನುವ ದೀರ್ಘಕೃತಿಯು ಕಾಖಂಡಕಿ ಕೃಷ್ಣರಾಯರದು. "ತಂದೆ ಮಹಿಪತಿ ನಂದನ" ಎಂಬ ಅಂಕಿತದಲ್ಲಿ ಕೃತಿರಚನೆ ಮಾಡಿದ್ದಾರೆ. ಬಿಜಾಪುರ, ಧಾರವಾಡ ಜಿಲ್ಲೆಗಳಲ್ಲಿ ಇವರ ಕೀರ್ತನೆಗಳು ಹೆಚ್ಚು ಜನಪ್ರಿಯವಾಗಿ ಪ್ರಚಲಿತವಿವೆ. "ನೆನೆದು ನಮಿಸುವೆ ನಾನು ವಾರಂವಾರ" ಎಂಬ ಕೀರ್ತನೆಯಲ್ಲಿ ಹರಿದಾಸ ಸಾಹಿತ್ಯದ ಪ್ರಥಮಘಟ್ಟದ ಮುಖ್ಯರನ್ನು ಸ್ಮರಿಸಿ ಕೊಂಡಾಡಿದ್ದಾರೆ. ಅಷ್ಟೇ ಅಲ್ಲ, ಮಧ್ವಾಚಾರ್ಯರಿಂದ ಹಿಡಿದು ಅವರ ಎಲ್ಲಾ ಶಿಷ್ಯ ಪೀಳಿಗೆಯುನ್ನು, ಉತ್ತರಾದಿ ಮಠದ ಯತಿಪೀಳಿಗೆಯಲ್ಲಿ ಇಪ್ಪತ್ನಾಲ್ಕನೆಯುವರಾದ ಸತ್ಯಬೋಧತೀರ್ಥರವರೆಗೆ ಸ್ತುತಿಸಿದ್ದಾರೆ. ಹೀಗೆ ವ್ಯಾಸಕೂಟ, ದಾಸಕೂಟ ಪ್ರಮುಖರನ್ನು ಒಂದೇ ಕೃತಿಯಲ್ಲಿ ಸ್ತುತಿಸಿರುವ ಅಪರೂಪದ ಕೃತಿ ಇದಾಗಿದೆ.

"ಮಾನವಜನ್ಮವ ಚಂದ ಮಾಡಿಕೊಳ್ಳಿರೋ" ಎಂದು ಕೃಷ್ಣರಾಯರು ಹಾಡಿದ್ದಾರೆ. ಕೃಷ್ಣನ ಬಾಲಲೀಲೆ, ಅವತಾರಗಳನ್ನು ತುತಿಸುವ ಕೀರ್ತನೆಗಳೂ ಸಾಕಷ್ಟಿವೆ. ತಮ್ಮ ತಂದೆಯೇ ತಮಗೆ ಗುರುವಾಗಿ ಹರಸಿರುವುದನ್ನು, ಕನಸಿನಲ್ಲಿ ಆದೇಶ ನೀಡಿದುದನ್ನು ತಮ್ಮ ಕೃತಿಗಳಲ್ಲಿ ಸ್ಮರಿಸಿದ್ದಾರೆ. "ಸೂರ್ಯನುದಯಿಸದೇ ಕನ್ನಡಿ, ಕಣ್ಣುಗಳು ಇದ್ದೇನು?" "ಗುರುರಾಯನ ಕರುಣಾ ಪಡೆಯದೆ ಮಂತ್ರ ಕಲಿತೇನು?" ಮುಂತಾದ ಅವರ ಸಾಲುಗಳು ಅವರ ಅಭಿವ್ಯಕ್ತಿಯ ಮಾದರಿಗಳಾಗಿವೆ.

ಕೃಷ್ಣರಾಯರ ಬರಹಗಳು ಸಿಕ್ಕಿವೆ, ಕೆಲವಾದರೂ. ಆದರೆ ಅವರ ಬದುಕಿನ ಬಗ್ಗೆ ವಿವರಗಳೇನೂ ಹೆಚ್ಚಾಗಿ ಸಿಕ್ಕಿಲ್ಲ. ಮಹಿಪತಿದಾಸರ ಮರಿಮೊಮ್ಮಗನಾದ ಶ್ರೀಕೃಷ್ಣಪ್ಪಯ್ಯನೆಂಬುವವರು ಶ್ರೇಷ್ಠ ವಿದ್ವಾಂಸರಾಗಿದ್ದರೆಂದು ತಿಳಿದುಬಂದಿದೆ.

ಪ್ರಸನ್ನ ವೆಂಕಟದಾಸರು (೧೬೮೦-೧೭೫೨)

ಬಾಗಿಲುಕೋಟೆಯಲ್ಲಿ ಜನಿಸಿದ "ವೆಂಕಪ್ಪ" ಹರಿದಾಸ ದೀಕ್ಷೆ ಪಡೆದು ಪ್ರಸನ್ನ ವೆಂಕಟದಾಸರೆನಿಸಿಕೊಂಡರು. ವಿಜಯದಾಸರ ಸಮಕಾಲೀನರಾದ ಇವರು 'ಪ್ರಸನ್ನ ವೆಂಕಟ' ಎಂಬ ಅಂಕಿತದಿಂದ ನಾಲ್ಕುನೂರಕ್ಕೂ ಮಿಗಿಲಾಗಿ ಕೃತಿಗಳನ್ನು ರಚಿಸಿದ್ದಾರೆ. ಮೂಲತಃ ಇವರ ಹಿರಿಯರು ಬಾಗಿಲಕೋಟೆ ಬಳಿಯಿರುವ ಕಾಖಂಡಕಿ ಗ್ರಾಮದವರೇ.

ವಿಜಯದಾಸರಿಗಿದ್ದಂತೆಯೇ ಇವರಿಗೂ ಪುರಂದರದಾಸರನ್ನು ಕುರಿತಾಗಿ ವಿಪರೀತ ಭಕ್ತಿಯಿದ್ದಿತು. ಬಾಲ್ಯದಿಂದಲೂ ಇವರಿಗೆ ತಿರುಪತಿಯ ವೆಂಕಟೇಶನೆಂದರೆ ಅಪಾರ ಮೆಚ್ಚು. ಅವನಿಂದಲೇ ಅನುಗ್ರಹೀತರಾಗಿ ದೀಕ್ಷೆ ಪಡೆದರು ಎಂಬ ಪ್ರತೀತಿ ಪ್ರಚಲಿತವಿದೆ. ಮುದ್ಗಲದ ಜನಾರ್ದನಾಚಾರ್ಯರಲ್ಲಿ ಸಂಸ್ಕೃತ ಕಾವ್ಯಾಭ್ಯಾಸ ಮಾಡಿದರು. ಮುಂದಿನ ಬದುಕನ್ನು ಬಾಗಿಲಕೋಟೆಯಲ್ಲೇ ಕಳೆದರು.

ಉಗಾಭೋಗ, ಸುಳಾದಿ, ಪದಗಳ ರಚನೆ ಮಾಡಿದ್ದಾರೆ. ಜಾನಪದ ಧಾಟಿಯಲ್ಲಿ ಸುವ್ವಾಲಿಗಳನ್ನೂ ರಚಿಸಿದ್ದಾರೆ. ವಾತ್ಸಲ್ಯ, ಆರ್ತ, ವ್ಯಾಕುಲ, ಸಖ್ಯ, ಶಾಂತ, ದಾಸ್ಯಭಾವಗಳು ಇವರ ಕೃತಿಗಳಲ್ಲಿ ಹೆಚ್ಚಿನ ಪಾಲು ಪಡೆದಿವೆ. ದಿನಬಳಕೆಯ ಮಾತುಗಳೇ ಹೆಚ್ಚಾಗಿ ರಚನೆಗಳಲ್ಲಿವೆ. ಇವಲ್ಲದೆ ಕೆಲವು ಪ್ರಬಂಧಗಳನ್ನೂ ರಚಿಸಿದ್ದಾರೆ. ಭಾಮಿನೀ ಷಟ್ಪದಿಯಲ್ಲಿರುವ ಎಪ್ಪತ್ತೊಂದು ನುಡಿಗಳ 'ಸಮಸ್ತನಾಮ ಮಣಿಗಣ ಷಟ್‌ಚರಣ ಪದ್ಯಮಾಲೆ' ಎನ್ನುವುದು ಸೊಗಸಾದ ಪ್ರಬಂಧ ರಚನೆಯಾಗಿದೆ. ತೊಂಬತ್ತೊಂಬತ್ತು ನುಡಿಗಳ 'ನಾರದ ಕೊರವಂಜಿ' ಗಾಯನಕ್ಕೆ ಒಪ್ಪುವ ಶೈಲಿಯಲ್ಲಿದೆ. ನಾರದನು ಕೊರವಂಜಿಯಾಗಿ ರುಕ್ಮಿಣಿಯಲ್ಲಿ ಕೃಷ್ಣನ ಬಗ್ಗೆ ಆಸಕ್ತಿ ತಾಳುವಂತೆ ಮಾಡುವುದೇ ಈ ಪ್ರಬಂಧದ ಕಥಾವಸ್ತುವಾಗಿದ್ದು ಕೊರವಂಜಿಯ ವರ್ಣನೆ ಆಧ್ಯಾತ್ಮಪರ ಅರ್ಥಹೊಂದಿದೆ.

ನಾರಾಯಣನನ್ನು ನಾದದಿಂದ ವಶಪಡಿಸಿಕೊಳ್ಳುವ ನಲವತ್ತು ನುಡಿಗಳ 'ನಾರಾಯಣ ಪಂಜರ' ಇಪ್ಪತ್ತೊಂಬತ್ತು ನುಡಿಗಳ 'ಶ್ರೀಕೃಷ್ಣ ಪಾರಿಜಾತ' (ಇದನ್ನು 'ಸತ್ಯಭಾಮಾ ವಿಲಾಸ'ವೆಂದೂ ಕರೆಯುತ್ತಾರೆ) ಇವುಗಳಲ್ಲಿಯ ನಾಟಕೀಯ ಶೈಲಿ ಮನೋಹರವಾಗಿದೆ. ಇತರ ರಚನೆಗಳಲ್ಲಿ ಹೆಚ್ಚು ಪ್ರಸಿದ್ಧವಾದುದು 'ಕನ್ನಡ ಭಾಗವತ.' ಕೃಷ್ಣಲೀಲೆಯೇ ಇಲ್ಲಿಯ ಮುಖ್ಯ ಕಥಾವಸ್ತು. ತಮ್ಮ ಕಾಲಕ್ಕೆ ಅನುಗುಣವಾಗಿ ಅಗತ್ಯದ ಮಾರ್ಪಾಟುಗಳನ್ನು ಮೂಲಕ್ಕೆ ಧಕ್ಕೆ ಬಾರದಂತೆ ಮಾಡಿಕೊಳ್ಳುವಲ್ಲಿ ತಮ್ಮ ಕವಿಸ್ವಾತಂತ್ರ್ಯದ ಜಾಣತನವನ್ನು ಪ್ರಕಟಿಸಿದ್ದಾರೆ. ಈ ಕೆಲವು ವಿಶಿಷ್ಟ ರಚನೆಗಳಿಂದಾಗಿ ಹರಿದಾಸ ಸಾಹಿತ್ಯದಲ್ಲಿ ಪ್ರಸನ್ನ ವೆಂಕಟದಾಸರು ವಿಶಿಷ್ಟಸ್ಥಾನ ಗಳಿಸಿದ್ದಾರೆ.

ಪುರಂದರದಾಸರಂತೆಯೇ ಪ್ರಸನ್ನ ವೆಂಕಟದಾಸರೂ ಸಮಾಜದ ಜನರ ನೀತಿನಡವಳಿಕೆ ತಿದ್ದಲು ಯತ್ನಿಸಿದವರು, ಬೂಟಕತನವನ್ನು ಖಂಡಿಸಿದವರು, ಸಂಸಾರದಲ್ಲಿ ವಿರಕ್ತಿಯ ಅಗತ್ಯವನ್ನು ಪ್ರತಿಪಾದಿಸಿದವರು, ಹರಿಯನ್ನು ಮರೆಯಬಾರದೆಂದು ಎಚ್ಚರಿಸಿದವರು.

'ಕಾಡದಿರೆನ್ನ ಕಿಡಿಗೇಡಿ ಮನವೇ' 'ಇರಬರಲಿಲ್ಲ, ಬಂದರೂ ಇರುವುದಿಲ್ಲ ಈ ಶರೀರ' 'ಚಂಚಲಿಸದೆ ನೀನು ಚತುರನಾಗು, ವಂಚಿಸದೆ ಸಕಲವೊಪ್ಪಿಸು ಹರಿಗೆ' 'ಯೋಗವೆಂದರದಾವುದು ಮಾನಿಸಗೆ, ನಾಗಶಯನನ ನಾಮವ ಕೂಗುವುದೆ ಯೋಗ' ಮುಂತಾದ ಅರ್ಥಗರ್ಭಿತ ಸಾಲುಗಳ ಇವರ ಕೃತಿಗಳು ಧಾರವಾಡ-ಬಿಜಾಪುರ ಪ್ರಾಂತ್ಯಗಳ ಜನರ ನಾಲಿಗೆಯ ಮೇಲೆ ಹೆಚ್ಚು ಬಳಕೆಯಲ್ಲಿವೆ. ಧಾರವಾಡದ ಮಿಂಚಿನಬಳ್ಳಿ ಕಾರ್ಯಾಲಯದವರು ಇವರ ಕೃತಿಗಳನ್ನೆಲ್ಲ ಮುದ್ರಿಸಿ ಹೊರತಂದಿದ್ದಾರೆ. ಉತ್ತರಕರ್ನಾಟಕ ಜನತೆಯ ಮೇಲೆ ಪ್ರಭಾವ ಬೀರಿದ ವ್ಯಕ್ತಿ.

ತಮ್ಮ ಜೀವಿತದ ಅಂತ್ಯಕಾಲದಲ್ಲಿ ಬಾದಾಮಿಗೆ ಬಂದಿದ್ದವರು ಅಲ್ಲೇ ತೀರಿಕೊಂಡರು. ಪ್ರತಿವರ್ಷ ಭಾದ್ರಪದ ಶುದ್ಧ ದ್ವಾದಶಿಯ ದಿನ (ತೀರಿಕೊಂಡ ದಿನಾಂಕ: ೧೯-೯-೧೭೫೨) ಇವರ ಆರಾಧನೆ ನಡೆಯುತ್ತದೆ.

ಪ್ರಸನ್ನ ವೆಂಕಟದಾಸರ ಶಿಷ್ಯ ಪರಂಪರೆ ಮುಂದೆ ಬೆಳೆದು ಬರಲಿಲ್ಲ.

ಶ್ರೀ ಗೋಪಾಲದಾಸರು (೧೭೨೧-೧೭೬೨)

ವಿಜಯದಾಸರ ಶಿಷ್ಯರಲ್ಲಿ ಪ್ರಮುಖರೂ, 'ಭಕ್ತಿಯಲಿ ಭಾಗಣ್ಣ' ಎಂದೇ ಪ್ರಸಿದ್ಧರೂ ಆಗಿರುವ ಗೋಪಾಲದಾಸರು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿನ ಮೊಸರುಕಲ್ಲು ಎಂಬ ಹಳ್ಳಿಯಿಂದ ಬಂದವರು. ಇವರ ಸೋದರ ರಂಗಪ್ಪದಾಸರೆನ್ನುವವರು ರಚಿಸಿರುವ ಎಂಬತ್ನಾಲ್ಕು ನುಡಿಗಳ "ಗೋಪಾಲದಾಸರ ಚರಿತ್ರೆ" ಪದದಿಂದ ಇವರ ಜೀವನದ ರೂಪುರೇಷೆಗಳು ದೊರೆಯುತ್ತವೆ. ಸ್ವತಃ ಅವರದೇ ರಚನೆಗಳಲ್ಲಿಯೂ ಕೆಲವು ಅಂಶಗಳು ತಿಳಿಯುತ್ತವೆ.

ಬಾಲ್ಯದಿಂದಲೂ ಮೌನಿಯಾಗಿ ಆಗಾಗ ಧ್ಯಾನಪರವಶನಾಗುತ್ತಿದ್ದ ಭಾಗಣ್ಣ (ಗೋಪಾಲದಾಸರ ಜನ್ಮನಾಮ) ಮುಂದೆ ಜ್ಯೋತಿಶ್ಯಾಸ್ತ್ರದಲ್ಲಿ ಪ್ರವೀಣನೆನಿಸಿಕೊಂಡ. ಗಾಯತ್ರೀಮಂತ್ರದ ಪುರಶ್ಚರಣದಿಂದಾಗಿ ಕವಿತಾಶಕ್ತಿ ಪ್ರಾಪ್ತವಾಯಿತು, ವಾಕ್ಸಿದ್ಧಿ ಫಲಿಸಿತು. ಗದ್ವಾಲಿನ ದೊರೆ ರಾಮಭೂಪಾಲನಿಂದ ಸನ್ಮಾನ, ಪ್ರಶಸ್ತಿ ಸಂದಿತು. ಮೇನೆ, ಪಲ್ಲಕ್ಕಿ, ಅರಸು ಕಾಣಿಕೆಯಾಗಿ ಲಭಿಸಿದಾಗ ತನಗಿದಿರಿಲ್ಲವೆಂಬ ಅಹಂಕಾರವೂ ತಲೆಗೇರಿತು. ತನ್ನ ವಾಕ್ಸಿದ್ಧಿ ಒಂದುಬಾರಿ ಫಲಿಸದೇ ಹೋದಾಗ ನಿರಾಸೆಯ ಪ್ರಪಾತಕ್ಕೆ ಉರುಳಿ, ಏರಿದ್ದ ಅಹಂ ಇಳಿಯಿತು, ನೇರವಾಗಿ ಹೋಗಿ ವಿಜಯದಾಸರಲ್ಲಿ ಶರಣಾಗತನಾದ. ಅವರಿಂದ 'ಗೋಪಾಲವಿಠಲ' ಎಂಬ ಅಂಕಿತ ಪಡೆದು ಹರಿದಾಸನಾದ. ಇದಕ್ಕೂ ಮುಂಚೆ 'ವೆಂಕಟಕೃಷ್ಣ' ಎಂಬ ಅಂಕಿತದಲ್ಲಿ ಕೃತಿರಚನೆ ಮಾಡಿದ್ದ ಭಾಗಣ್ಣ ಮುಂದೆ 'ಗೋಪಾಲ ವಿಠಲ' ಅಂಕಿತದಲ್ಲಿ ಕೃತಿರಚನೆ ಪ್ರಾರಂಭಿಸಿ 'ಗೋಪಾಲದಾಸ' ಎಂದು ಪ್ರಖ್ಯಾತಿಗೆ ಬರುವಂತಾಯಿತು.

೧೭೪೭ರಲ್ಲಿ ವಿಜಯದಾಸರಿಂದ ಅಂಕಿತ ಪಡೆದಾಗ (ಆದವಾನಿಯ 'ಮಂಗರಾಯ' ಪ್ರಾಣದೇವರ ಸನ್ನಿಧಿಯಲ್ಲಿ) ಭಾಗಣ್ಣನಿಗೆ ಇಪ್ಪತ್ತಾರು ವರ್ಷ ವಯಸ್ಸು. ತನ್ನ ತಮ್ಮಂದಿರಾದ ಸೀನಪ್ಪ, ದಾಸಪ್ಪ, ರಂಗಪ್ಪ ಇವರುಗಳಿಗೆ ತಾನೇ ಅಂಕಿತ ನೀಡಿ ಹರಿದಾಸರನ್ನಾಗಿಸಿ ದಾಸಕೂಟಕ್ಕೆ ಸೇರಿಸಿಕೊಂಡವರು ಗೋಪಾಲದಾಸರು. ಉತ್ತರಾದಿ ಮಠದ ಸತ್ಯಬೋಧರು ಗೋಪಾಲದಾಸರ ಕಾವ್ಯಶಕ್ತಿ ಗುರುತಿಸಿ ಗೌರವಿಸಿ ಸನ್ಮಾನ ನೀಡಿದರು. ಒಟ್ಟು ಏಳುಮಂದಿಗೆ ಅಂಕಿತ ನೀಡಿ ಹರಿದಾಸರನ್ನಾಗಿ ಮಾಡಿದವರು ಗೋಪಾಲದಾಸರು. ಅವರ ಯಾದಿ ಇಂತಿದೆ.

೧. ಸೀನಪ್ಪ	ಸೋದರರು	ಗುರು ಗೋಪಾಲ ವಿಠಲಾಂಕಿತರು
೨. ರಂಗಪ್ಪ		ತಂದೆ ಗೋಪಾಲ ವಿಠಲಾಂಕಿತರು
೩. ದಾಸಪ್ಪ		ವರದ ಗೋಪಾಲ ವಿಠಲಾಂಕಿತರು
೪. ಸುಬ್ಬಣ್ಣ		ಕೇಶವ ವಿಠಲಾಂಕಿತರು
೫. ರಾಮದಾಸರು		
೬. ಜಗನ್ನಾಥದಾಸರು		– ಜಗನ್ನಾಥ ವಿಠಲಾಂಕಿತರು.

ಈ ಏಳೂಮಂದಿ ಮುಂದೆಯೂ ಹರಿದಾಸಪರಂಪರೆಯನ್ನು ಬೆಳೆಯಿಸಿದವರಾಗಿದ್ದಾರೆ, ಇದಲ್ಲದೆ ಗೋಪಾಲದಾಸರ ಗೆಳೆಯರೂ, ವಿಜಯದಾಸರ ಶಿಷ್ಯರೂ ಆಗಿದ್ದ ಐಜಿ ವೆಂಕಟರಾಮಾಚಾರ್ಯರೆಂಬ ಪಂಡಿತರು ರಾಘವೇಂದ್ರಸ್ವಾಮಿಗಳ ಮಠ ಪೀಳಿಗೆಯ ಭುವನೇಂದ್ರತೀರ್ಥರಲ್ಲಿ ಬಿಡಿಸನ್ಯಾಸ ಪಡೆದು 'ವ್ಯಾಸತತ್ತ್ವಜ್ಞ'ರೆನಿಸಿಕೊಂಡು ಹರಿದಾಸರಾಗಿ ಗೋಪಾಲದಾಸರ ಬಳಿಯೇ ನೆಲೆನಿಂತರು. ವಾಸುದೇವ ವಿಠಲಾಂಕಿತರು ಇವರು, ವ್ಯಾಸಕೂಟ, ದಾಸಕೂಟಗಳೆರಡರ ಪ್ರಾತಿನಿಧ್ಯ, ಪ್ರೋತ್ಸಾಹ, ಪ್ರೇರಣೆಗಳನ್ನು ವಹಿಸಿಕೊಂಡು ಬಾಳಿದವರು. ವ್ಯಾಸ-ದಾಸ ಸಾಹಿತ್ಯಗಳೆರಡರ ಸವ್ಯಸಾಚಿ ಎನಿಸಿಕೊಂಡಿದ್ದಾರೆ. ಗದ್ವಾಲದ ಅರಸನಿಂದ ಸನ್ಮಾನಿತಗೊಂಡವರು, ಅರಸ ಇವರಿಗೆ ಭೂಮಿಕಾಣಿಕೆಗಳನ್ನು ದಾನವಾಗಿ ಇತ್ತಿದ್ದಾನೆ. ಇವರ ಬಳಿ ಮುನ್ನೂರಕ್ಕೂ ಮಿಗಿಲಾಗಿ ಶಿಷ್ಯರು ವಿದ್ಯಾರ್ಜನೆ ಮಾಡುತ್ತಿದ್ದರು. ಇವರು ಗುರು ರಾಘವೇಂದ್ರಸ್ವಾಮಿಯ ಅನನ್ಯ ಭಕ್ತರಾಗಿದ್ದರು. ಆಸೀಮ ವೈರಾಗ್ಯ ಮತ್ತು ಯತಿಧರ್ಮಪಾಲನೆಯಲ್ಲಿ ಬದುಕು ಕಳೆದರು. ಅವರ ಕೃತಿಗಳಲ್ಲಿ "ಬಂದ ಕೃಷ್ಣ ಚಂದದಿಂದ ಬಂದ ನೋಡೆ" ಎಂಬ ಕೀರ್ತನೆ ಇಂದಿಗೂ ಜನಪ್ರಿಯತೆಯಲ್ಲಿದೆ. ನೂರಾರು ಕೀರ್ತನೆ, ಸುಳಾದಿ ಉಗಾಭೋಗಗಳನ್ನು ರಚಿಸಿದ್ದಾರೆ. ಅನೇಕ ಶಿಷ್ಯರನ್ನು ರೂಪಿಸಿ, ಹಲವಾರು ಬಾರಿ ಸುಧಾಮಂಗಳ ಮಾಡಿರುವ ಹಿರಿಮೆ ಇವರದು. ಸ್ವತಃ ಗೋಪಾಲದಾಸರೇ ವ್ಯಾಸತತ್ತ್ವಜ್ಞರನ್ನು ಕುರಿತು ನಾಲ್ಕು ಕೃತಿಗಳನ್ನು ರಚಿಸಿದ್ದಾರೆ. ಕ್ರಿ.ಶ.೧೮೦೦ರಲ್ಲಿ ಇನ್ನಿಲ್ಲವಾದರು.

ಹರಿದಾಸ ಪೀಳಿಗೆಯನ್ನು ಬೆಳೆಯಿಸಿದವರಲ್ಲಿ ಗೋಪಾಲದಾಸರು ಪ್ರಮುಖರಾಗುತ್ತಾರೆ. ತಮಗಿದ್ದ ಅಪಾರ ಶಿಷ್ಯಸಂಪತ್ತನ್ನು ಅವರು ದಾಸಕೂಟ ಕಟ್ಟುವುದರಲ್ಲಿ ಯಶಸ್ವಿಯಾಗಿ ವಿನಿಯೋಗಿಸಿಕೊಂಡರು. ಇವರ ಸ್ವಂತ ಸೋದರರಾದ ಸೀನಪ್ಪದಾಸ, ರಂಗಪ್ಪದಾಸ, ದಾಸಪ್ಪದಾಸರು ವ್ಯಾಸತತ್ತ್ವಜ್ಞರಲ್ಲೇ ಶಾಸ್ತ್ರ ವ್ಯಾಸಂಗ ಮಾಡಿದರು. ವಿಷ್ಣುತೀರ್ಥರು ಮತ್ತು ಜಗನ್ನಾಥದಾಸರ ಸಂಪರ್ಕದಲ್ಲೇ ಬೆಳೆದರು. ಈ ಮೂವರು ಸೋದರ ದಾಸರುಗಳ ಅನೇಕ ಕೃತಿಗಳು ಲಭ್ಯವಿವೆ, ಆತ್ಮಶೋಧನೆ, ಹರಿಸರ್ವೋತ್ತಮತ್ತ್ವ ಪ್ರತಿಪಾದನೆ ಈ ಮೂವರ ಕೃತಿಗಳಲ್ಲಿ ಹಾಸುಹೊಕ್ಕಾಗಿವೆ.

ಹರಿದಾಸಸಾಹಿತ್ಯದಲ್ಲಿ ಗೋಪಾಲದಾಸರ ಕೃತಿಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಪ್ರೌಢವಾದ, ರಸವತ್ತಾದ, ಅಚ್ಚುಕಟ್ಟಾದ ಶೈಲಿಯಲ್ಲಿ, ಗಾಂಭೀರ್ಯದ ಜೊತೆಗೆ ಲಾಲಿತ್ಯವೂ ಸೇರಿಕೊಂಡಿರುವಂಥ ಭಾಷಾ ಸೊಗಸು ಅವರ ಕೃತಿಗಳದು. ಪದ, ಸುಳಾದಿಗಳು ಹೊಸ ಪ್ರಯೋಗದಿಂದ ಕೂಡಿ ಉತ್ತಮ ಕವಿತಾಶಕ್ತಿಯನ್ನು ಮೆರೆಯಿಸಿವೆ. ಭಕ್ತಿ ಮತ್ತು ತತ್ತ್ವ ಪ್ರತಿಪಾದನೆಗೆ ಒತ್ತುಕೊಟ್ಟ ಕೃತಿಗಳೇ ಹೆಚ್ಚು ಇದೆ. "ಏನಬೇಡಲಿ ನಿನ್ನ ಬಳಿಗೆ ಬಂದು? ನೀನಿತ್ತ ಸೌಭಾಗ್ಯ ನಿಬಿಡವಾಗಿದೆ ಎನಗೆ" ಎನ್ನತ್ತಲೇ ಪುರಾಣ ವ್ಯಕ್ತಿತ್ವಗಳು ಅನುಭವಿಸಿದ ಸಾಂಸಾರಿಕ ನೈರಾಶ್ಯ, ತೊಳಲಾಟಗಳನ್ನು ಚಿತ್ರಿಸುತ್ತ "ಬೇಡುವೆನು ನಾನೊಂದು ಬೇಡತಕ್ಕುದ ದೇವ। ನೀಡೆನೆನುವುದು ನಿನ್ನ ಮನದ ಇಚ್ಛೆ। ಮೂಡಲಾದ್ರಿನಿಲಯ ಗೋಪಾಲವಿಠ್ಠಲನೆ। ಬೇಡದಂತೆ ಪರರ ಮಾಡು ಶ್ರೀಹರಿಯೆ" ಎಂದು ಬೇಡಿದ್ದಾರೆ. ವಿಷಯ ವ್ಯಾಮೋಹಗಳ ಸಂಸರ್ಗದಿಂದ ಆಗುವ ವಿನಾಶಗಳನ್ನು, ಪುರಾಣ ಘಟನೆಗಳ ದೃಷ್ಟಾಂತಗಳಿಂದ ಮನದಟ್ಟು ಮಾಡಿಸುತ್ತ "ವಿಷಯ ಸಂಗದಲಿಂದ ಕುಶಲವನು ಬಯಸಿದರೆ ಹಸನು ದೊರೆಯುವುದೆ ನಿನಗೆ?" ಎಂದು ಪ್ರಶ್ನಿಸುತ್ತಾರೆ. ಭಗವಂತನ ಒಂದು ಕ್ರಿಯೆ ಬೇರೆಬೇರೆಯವರಿಗೆ ಬೇರೆ ಬೇರೆಯಾಗಿ ಫಲ ತರುವುದನ್ನು ಕೀರ್ತನೆಯೊಂದರಲ್ಲಿ ಸ್ವಾರಸ್ಯವಾಗಿ ಮೂಡಿಸಿದ್ದಾರೆ.

> ಸ್ತನ್ಯಪಾನದಿಂದ ಗೋಪಿಗೆ ಘನಮೋದವಾಯಿತೋ
> ಸ್ತನ್ಯಪಾನದಿಂದ ಪೂತನಿಯ ಪ್ರಾಣವೇ ಹೋಯಿತೋ।
>
> ॥ಇಂದಿರೇಶ ನಿನ್ನದೊಂದೆ ಕ್ರಿಯವು
> ದ್ವಂದ್ವ ದ್ವಂದ್ವವಾಯಿತೋ॥

ಲೌಕಿಕ ಸಂಬಂಧಗಳ ನಿಸ್ಸಾರತೆಯನ್ನು ಅನೇಕ ಕಡೆ ಎತ್ತಿ ತೋರಿದ್ದಾರೆ. ಆತ್ಮಶೋಧನೆ ನಿವೇದನೆಯಾಗಿ ಅನೇಕ ಕೃತಿಗಳಲ್ಲಿ ಹೊಮ್ಮಿದೆ. ಹರಿಚಿತ್ತದಂತೆ ಬದುಕುವವನು ತಾನೆಂದು ಅನೇಕ ಕೃತಿಗಳಲ್ಲಿ ತೋರಿಕೊಂಡಿದ್ದಾರೆ. ಹರಿಮೂರ್ತಿಗಳನ್ನು ಕಾಣದ ದೃಷ್ಟಿಮಾಂದ್ಯತೆ, ಹರಿಕೀರ್ತನೆಗಳನ್ನು ಕೇಳದ ಕಿವುಡುತನ, ಹರಿಸ್ತೋತ್ರ ಮಾಡಲು ಚಲಿಸದ ನಾಲಿಗೆ ಈ ಎಲ್ಲ ರೋಗಗಳಿಗೆ ಈಡಾಗಿದ್ದೇನೆಂದು ದುಃಖಿಸುತ್ತ ಪಾರು ಮಾಡಬೇಕೆಂದು ಭವರೋಗ ವೈದ್ಯನನ್ನು ಮೊರೆಹೋಗುತ್ತಾರೆ. ("ಆವ ರೋಗವು ಎನಗೆ ದೇವ ಧನ್ವಂತ್ರಿ ಸಾವಧಾನದಿ ಎನ್ನ ಕೈಪಿಡಿದು ನೋಡಯ್ಯ" ಕೀರ್ತನೆ).

ಗೋಪಾಲದಾಸರ ಸುಳಾದಿಗಳಲ್ಲಿ ಬಹುಭಾಗ ದ್ವೈತ ಸಿದ್ಧಾಂತ ಪ್ರತಿಪಾದನೆಗೆ ಮೀಸಲಾಗಿದೆ. ಅವರ ಗುರು ವಿಜಯದಾಸರ ಪ್ರಭಾವವಿರಬಹುದು. ವಿಜಯದಾಸರ ನಂತರ ಹೆಚ್ಚು ಸಂಖ್ಯೆಯ ಸುಳಾದಿಗಳನ್ನು ರಚಿಸಿದವರು ಗೋಪಾಲದಾಸರು. ಹರಿದಾಸರೂ, ಕವಿಯೂ ಆಗಿದ್ದವರೆಂದು ಅವರ ಕೃತಿಗಳಿಂದಲೇ ತಿಳಿಯುವಷ್ಟು ಭಾಷಾ ಲಾಲಿತ್ಯ, ಸೌಂದರ್ಯ ಜೊತೆಗೆ ತತ್ವಗಾಂಭೀರ್ಯ ಹದವಾಗಿ ಬೆರೆತಿದೆ.

ನಿಜವಾದ ವೈರಾಗ್ಯವಾದರೂ ಯಾವುದು? ಸುಳಾದಿಯೊಂದರಲ್ಲಿ ಹೇಳುತ್ತಾರೆ.

ಸ್ವಯೋಗ್ಯತೆಯೊಳಗೆ ಆಯತವಾದದ್ದೇ
ನೋಯದೆ ಉಣುವುದೇ ನ್ಯಾಯದ ವೈರಾಗ್ಯ
ಆಯಾಸವ ಪಡದೆ ಪರರ ಶ್ರೇಯಸ್ಸು ನೋಡಿ
ಶ್ರೀಯರಸನಿತ್ತನವರಿಗೆಂಬುವುದೆ ವೈರಾಗ್ಯ

ಭಕ್ತಿ, ಜ್ಞಾನ, ವೈರಾಗ್ಯ, ಪ್ರವೃತ್ತಿ ನಿವೃತ್ತಿಗಳ ಸಮನ್ವಯ ಇವು ಗೋಪಾಲದಾಸರು ನೀಡಿರುವ ಮಾನವ ಕುಲಕ್ಕೆ ತೋರಿರುವ ದಾರಿಯಾಗಿದೆ. ನಲವತ್ತು ವರ್ಷಗಳ ಕಾಲ ಮಾತ್ರ ಬದುಕಿದ್ದ ಗೋಪಾಲದಾಸರು ಅಲ್ಪವಾದ ಜೀವಿತಾವಧಿಯಲ್ಲೇ ಉನ್ನತವಾಗಿ ಬಾಳಿ ಉತ್ಕೃಷ್ಟ ಸಾಹಿತ್ಯವನ್ನು ಬಿಟ್ಟು ಹೋಗಿದ್ದಾರೆ. ಚಿತ್ರಭಾನು ಸಂವತ್ಸರದ ಪುಷ್ಯ ಕೃಷ್ಣ ಅಷ್ಟಮಿಯೆಂದು ಅವರು ಇಹಲೋಕಕ್ಕೆ ವಿದಾಯ ಹೇಳಿದರು. ಮೊಸರುಕಲ್ಲು, ಉತ್ತನೂರು, ಸಂಕಾಪುರಗಳಲ್ಲಿ ಅವರು ಕೂರುತ್ತಿದ್ದ ಕಂಬ, ಉಪಯೋಗಿಸುತ್ತಿದ್ದ ತಂಬೂರಿ, ಅರ್ಚಿಸುತ್ತಿದ್ದ ದೇವರ ಪ್ರತಿಮೆಗಳು, ಬಾಳಿ ಬದುಕಿದ ಮನೆ ಇವುಗಳನ್ನು ಇಂದಿಗೂ ನೋಡಬಹುದು. ಈ ಮೂರು ಊರುಗಳಲ್ಲೂ ಅವರ ಆರಾಧನೆ ವೈಭವದಿಂದ ಪ್ರತಿವರ್ಷವೂ ಜರುಗುತ್ತಿದೆ.

ಗೋಪಾಲದಾಸರ ಮೇಲೆ ಮುಖ್ಯ ಪ್ರಭಾವ, ಪ್ರೇರಣೆ ಅವರ ಗುರು ವಿಜಯದಾಸರದ್ದೇ ಆದರೂ ಮಂತ್ರಾಲಯದ ಗುರುಸಾರ್ವಭೌಮರೂ ಅವರ ಮೇಲೆ ಪ್ರಭಾವ ಬೀರಿದ್ದಾರೆ. ರಾಘವೇಂದ್ರರ ಕುರಿತಾಗಿ ಅವರು ಹಲವು ಕೃತಿಗಳನ್ನು ರಚಿಸಿದ್ದಾರೆ. "ಗುರು ರಾಘವೇಂದ್ರರ ಚರಣಕಮಲವನ್ನು ಸ್ಮರಿಸುವ ಮನುಜರಿಗೆ ಕರಕರೆಗೊಳಿಸುವ ದುರಿತ ದುಷ್ಕೃತವೆಲ್ಲ ಕರಿಯು ಸಿಂಹನ ಕಂಡ ತೆರನಾಗುವುದಯ್ಯಾ॥" ಎಂಬುದಾಗಿ ಸಾರಿದ್ದಾರೆ. ಇದೇ ಕೀರ್ತನೆಯಲ್ಲಿ

ರಾ ಎನ್ನೆ ರಾಶಿ ದೋಷಗಳೆಲ್ಲ ದಹಿಸುವ
ಘ ಎನ್ನೆ ಘನಜ್ಞಾನ ಭಕ್ತಿಯೀವ
ವೇಂ ಎನ್ನೆ ವೇಗದಿ ಜನನ ಮರಣದೂರ
ದ್ರ ಎನ್ನೆ ದ್ರವಿಣಾರ್ಥ ಶ್ರುತಿಪಾದ್ಯನ ಕಾಂಬ॥

ಎಂದು ಗುರುಗಳ ಹೆಸರಿನ ಗುಣಗಾನ ಮಾಡಿದ್ದಾರೆ. "ರಥವನೇರಿದ ರಾಘವೇಂದ್ರರಾಯಾ" ಎನ್ನುವ ಮತ್ತೊಂದು ಸುಂದರ ಭಾವಗಳ ಕೃತಿ ರಚಿಸಿದ್ದಾರೆ. ರಾಘವೇಂದ್ರರನ್ನು ಕುರಿತ ಸುಳಾದಿ ಒಂದನ್ನು ರಚಿಸಿದ್ದಾರೆ. ಇವಲ್ಲದೆ ಮತ್ತೆ ಕೆಲವು ಕೀರ್ತನೆಗಳು ರಾಘವೇಂದ್ರ ಸ್ತುತಿಪರವಾಗಿವೆ. ತಮ್ಮ ಗುರು ವಿಜಯದಾಸರನ್ನು ಕುರಿತು ಇಪ್ಪತ್ತೊಂದು ನುಡಿಗಳ ಕೀರ್ತನೆಯೊಂದನ್ನು ರಚಿಸಿದ್ದಾರೆ.

ಜಗನ್ನಾಥ ದಾಸರು (೧೭೨೮-೧೮೦೯)

ಗೋಪಾಲದಾಸರ ಹೆಸರನ್ನೂ, ಪರಂಪರೆಯನ್ನೂ ಉಳಿಸಿ, ಬೆಳೆಸಿದವರಲ್ಲಿ ಜಗನ್ನಾಥದಾಸರು ಪ್ರಮುಖರು. ಸಂಸ್ಕೃತ ಶಾಸ್ತ್ರಗ್ರಂಥಗಳ ಜ್ಞಾನದಲ್ಲಿ ಉತ್ತುಂಗರೆನ್ನಿಸಿ ಕೊಂಡಿದ್ದವರು. ವೇದಶಾಸ್ತ್ರಗಳ ಅಧ್ಯಯನ, ಶಾಸ್ತ್ರಪ್ರಮೇಯಗಳ ವ್ಯಾಸಂಗದಲ್ಲಿ ಮಹಾನ್ ಸಾಧಕರಾಗಿದ್ದವರು. ಇವರು ಗೋಪಾಲದಾಸರಲ್ಲಿ ಶಿಷ್ಯತ್ವ ವಹಿಸಿ ದಾಸಕೂಟಕ್ಕೆ ಸೇರಿದ ಬಗ್ಗೆ ಕಥೆಯೊಂದು ಪ್ರಚಲಿತವಿದೆಯಾದರೂ ಇಲ್ಲಿ ಮುಖ್ಯವಾಗುವುದು ಶಾಸ್ತ್ರಪಾಂಡಿತ್ಯಗಳ ಮೇಲರಿಮೆಯ ಬಿಂಕ ಬಿಗುಮಾನಗಳೊಂದೆಡೆ, ಗುಣವಾಗದೇ ಕಾಡಿದ್ದ ಉದರಶೂಲೆಯ ಉಪಟಳ ಒಂದೆಡೆ, ಇವುಗಳಲ್ಲಿ ಹತಾಶರಾಗಿ ಹೈರಾಣರಾಗಿದ್ದ ಆದರೂ ಅಹಂ ಬಿಡದಿದ್ದ ಜೀವಿಯನ್ನು ಗೋಪಾಲದಾಸರು ಬಳಿಸಾರಿ ಸಂತೈಸಿ, ಮಾರ್ಗದರ್ಶಕರಾಗಿ, ಕರುಣೆಯಿಂದ ಉದ್ಧಾರದ ಹಾದಿ ತೋರಿಸಿದರು ಎನ್ನುವುದು, ಶ್ರೀನಿವಾಸಾಚಾರ್ಯರೆಂಬ ಮೇಧಾವಿ ಪಂಡಿತರ ಅಹಂಕಾರವನ್ನು ಕಳಚಿಸಿ ಜಗನ್ನಾಥದಾಸರಾಗಿ ಪರಿವರ್ತಿಸಿದವರು ಗೋಪಾಲದಾಸರು ಎನ್ನುವುದು.

ರಾಯಚೂರು ಜಿಲ್ಲೆಯ ಮಾನ್ವಿಯಲ್ಲಿ ೧೭೨೮ರಲ್ಲಿ ನರಸಿಂಹಾಚಾರ್ಯರ ಮಗನಾಗಿ ಜನಿಸಿದರು. ಪಂಗನಾಮದ ತಿಮ್ಮಣ್ಣದಾಸರಿಂದ 'ನರಸಿಂಹ ವಿಟ್ಠಲ' ಎಂದು ಅಂಕಿತ ಪಡೆದಿದ್ದ ಹರಿದಾಸ್ಯತನವನ್ನು ಒಪ್ಪಿ ನಡೆದಿದ್ದ ತಂದೆಯಲ್ಲೇ ಜನಿಸಿ ಬಂದರಾದರೂ ಬಾಲ್ಯದಿಂದ ಹರಿದಾಸರನ್ನು ಕುರಿತಾಗಿ ಒಂದು ಬಗೆಯ ಅನಾದರ ಧೋರಣೆಯಲ್ಲೇ ಇದ್ದ ಬಾಲಕ ಶ್ರೀನಿವಾಸ ಮೊದಲು ತಂದೆಯಿಂದಲೇ ವೇದಾಂತ ಪಾಠವಾಯಿತು. ಪಾಂಡಿತ್ಯಗಳಿಕೆಯೇ ಮುಖ್ಯ ಗುರಿಯಾಗಿ ವಿದ್ವಾಂಸನಾಗುತ್ತ ಬಂದ ಹಾಗೆ ಮೇಲರಿಮೆ ಹೆಚ್ಚಾಗುತ್ತ ಹೋಯಿತು. 'ಆಚಾರ್ಯ'ನೆಂಬ ಬಿರುದೂ ಅಂಟಿಕೊಂಡ ಮೇಲಿನ್ನೇನು? ಸಂಸ್ಕೃತವೇ ಜ್ಞಾನಭಾಷೆಯೆಂದು ಕನ್ನಡದ ಬಗ್ಗೆ ತಿರಸ್ಕಾರವೂ ಬೆಳೆಯಿತು. ಕನ್ನಡದಲ್ಲಿ ಕೃತಿ ರಚಿಸುವ ಹರಿದಾಸರೆಂದರೆ ತಿರಸ್ಕಾರದಿಂದ ಮಾರುದೂರ ಸರಿಯುವ ಅಹಂ ಕೂಡ ಸೇರಿಕೊಂಡಿತು. ಇದು ಒಮ್ಮೆ ವಿಜಯದಾಸರನ್ನು ಅಪಮಾನಗೊಳಿಸುವವರೆಗೂ ಮುಂದುವರೆಯುವ ಹಾಗಾಯಿತು.

ಗೋಪಾಲದಾಸರ ಪ್ರವೇಶದಿಂದಾಗಿ ಸ್ವತಃ ಬದುಕಿನಲ್ಲಿ ಅನುಭವಿಸಬೇಕಾದ ಅನಾರೋಗ್ಯದಿಂದಾಗಿ ಶ್ರೀನಿವಾಸಾಚಾರ್ಯ ಬದಲಾದರು, ಮಾಗಿದರು, ಜಗನ್ನಾಥದಾಸರಾಗಿ ಪರಿವರ್ತನೆಗೊಂಡರು. ಹರಿದಾಸರಾಗಿ ಸಂಚಾರ, ಕನ್ನಡದಲ್ಲಿ ಕೃತಿರಚನೆ, ಭಕ್ತಿಮಾರ್ಗದ ಹೃದಯವಂತಿಕೆ ಎಲ್ಲವೂ ಮುಂದಿನ ಅವರ ಬದುಕಿನ ಧ್ಯೇಯ ಧೋರಣೆಗಳಾದವು. ಸಂಸ್ಕೃತಾಭಿಮಾನವು ಕನ್ನಡದ ಪ್ರೀತಿಯಾಗಿ ಹೊರಳಿತು. ಹರಿದಾಸ್ಯತನವು ಅಹಂಕಾರದ ಪೊರೆಯನ್ನು ಹರಿದುಹಾಕಿತು.

ಗೋಪಾಲದಾಸರಿಂದ 'ಜಗನ್ನಾಥ ವಿಠ್ಠಲ' ಎಂಬ ಅಂಕಿತಪಡೆದು ನೂರಾರು ಕೀರ್ತನೆ ರಚಿಸಿದರು. ಸುಳಾದಿಗಳನ್ನು ರಚಿಸಿದರು. ಆರುನೂರು ನುಡಿಗಳಿಂದ ಕೂಡಿದ ತತ್ವಸುವ್ವಾಲಿಯನ್ನೂ ಕನ್ನಡಕ್ಕೆ ವಿಶಿಷ್ಟ ಕೊಡುಗೆಯಾಗುವಂತೆ ನೀಡಿದರು.

ಬಾಲಕನಾಗಿದ್ದಾಗಲಿಂದ ಇವರು ರಾಘವೇಂದ್ರಸ್ವಾಮಿ ಮಠಕ್ಕೆ ಸೇರಿದ ಯತಿಗಳಾದ ವರದೇಂದ್ರ ತೀರ್ಥರಲ್ಲಿ ಶಿಷ್ಯ ವೃತ್ತಿ ಮಾಡಿ ವೇದಶಾಸ್ತ್ರಗಳನ್ನು, ವಾದ ವಾಕ್ಯಾರ್ಥಗಳನ್ನೂ ಕಲಿತವರಾಗಿದ್ದು, ಹಾಗೆ ಗಳಿಸಿದ್ದ ಪಾಂಡಿತ್ಯವೇನೂ ಅಳಿಸಿಹೋಗದೆ ಅವರ ಕನ್ನಡದ ದಾಸಸಾಹಿತ್ಯ ರಚನೆಯಲ್ಲಿಯೂ ಮಿಳಿತವಾಗಿ ಬಂದಿರುವುದನ್ನು ಗುರುತಿಸಬಹುದಾಗಿದೆ. ಅಪಾರವಾಗಿ ವ್ಯಾಸ ಸಾಹಿತ್ಯದಲ್ಲಿ ಗಳಿಸಿದ್ದ ಜ್ಞಾನ, ಪ್ರೌಢಿಮೆ; ಶಾಸ್ತ್ರಪ್ರಮೇಯಗಳನ್ನು ಅರೆದು ಕುಡಿದಿದ್ದಂತಹ ಭೌದ್ಧಿಕ ಪ್ರಖರತೆ ಇವೆಲ್ಲವೂ ಇವರ ಕನ್ನಡ ರಚನೆಗಳಲ್ಲಿ ಪ್ರಭಾವ ಬೀರಿ ಮೈದುಂಬಿ ನಿಂತಿವೆ. ಮಾಧ್ವ ತತ್ತ್ವಜ್ಞಾನದ ಇವರ ಕನ್ನಡ ನಿರೂಪಣೆಯು ಶಾಸ್ತ್ರೀಯವಾದ ಜಟಿಲ ಪ್ರಮೇಯಗಳಿಂದ ತುಂಬಿ ಸಾಧಾರಣವಾದ ಓದುಗನಿಗೆ ತೆರೆದುಕೊಳ್ಳದ ಕದಗಳಾಗಿವೆ, ಆದರೂ ಸಹನೆ, ತಾಳ್ಮೆಯ ಓದಿಗೆ ಅವು ಮಧ್ವತತ್ತ್ವವನ್ನು ಅರಿಯುವ ಕೈದೀವಿಗೆಗಳಾಗಿವೆ. ಅವರ ಕನ್ನಡ ಶೈಲಿಯೇ ಸಂಸ್ಕೃತ ಭೂಯಿಷ್ಠವಾಗಿದೆ.

ಜಗನ್ನಾಥದಾಸರ "ಹರಿಕಥಾಮೃತ ಸಾರ" ದಾಸಸಾಹಿತ್ಯದಲ್ಲಿ ಬಂದ ಪ್ರೌಢಗ್ರಂಥ. ಮಧ್ವಮತದ ಪ್ರಮುಖ ಪ್ರಮೇಯಗಳಾದ ದೇವತಾ ತಾರತಮ್ಯಾದಿ ವಿಷಯಗಳನ್ನು ಅಧಿಕೃತವಾಗಿ ಕನ್ನಡದಲ್ಲಿ ತಿಳಿಸುವ ಏಕೈಕ ಕೃತಿ. "ದಾಸಸಾಹಿತ್ಯದಲ್ಲಿ ಇಷ್ಟು ಪ್ರೌಢವಾದ, ಸಮಗ್ರವಾದ, ವಿದ್ವತ್ಪೂರ್ಣವಾದ, ಪ್ರಮೇಯ ಪರಿಪುಷ್ಟವಾದ ಗ್ರಂಥ ಇನ್ನೊಂದಿಲ್ಲ" ವಿವರಿಸಿ ಹೇಳದೆ, ಅರ್ಥಬಿಡಿಸಿ ತಿಳಿಸದೆ ಸಾಮಾನ್ಯರು ಇದನ್ನು ಅರಿಯಲು ಸಾಧ್ಯವಿಲ್ಲ ಎಂಬ ಕಾರಣಕ್ಕಾಗಿ ಮುಂದೆ ಈ ಗ್ರಂಥಕ್ಕೆ ಹಲವಾರು ವ್ಯಾಖ್ಯಾನಗಳೂ, ಟಿಪ್ಪಣಿಗಳೂ ಬಂದವು. ಇವುಗಳಲ್ಲಿ ಕಮಲಾಪತಿದಾಸರು, ಪದ್ಮನಾಭದಾಸರು, ಸಂಕರ್ಷಣ ಒಡೆಯರು ಇವರ ವ್ಯಾಖ್ಯಾನಗಳು ಪ್ರಸಿದ್ಧವಾಗಿವೆ.

ಸೋದೆ ಮಠದ ವಿಶ್ವಪ್ರಿಯ ತೀರ್ಥರ ಶಿಷ್ಯರೇ ಸಂಕರ್ಷಣ ಒಡೆಯರು.(೧೮೬೨) ಇವರು "ಹರಿಕಥಾಮೃತಸಾರ" ಕನ್ನಡ ಕೃತಿಗೆ ಸಂಸ್ಕೃತದಲ್ಲಿ ವಿಸ್ತೃತವಾದ ವ್ಯಾಖ್ಯಾನ ರಚಿಸಿದ್ದಾರೆ. ಎಂದಮೇಲೆ ಹರಿಕಥಾಮೃತಸಾರ ಕನ್ನಡದ ಮೇರುಕೃತಿಯೇ ಸರಿ. ಪದ್ಮನಾಭದಾಸರ ವ್ಯಾಖ್ಯಾನ "ಭಾವಪ್ರಕಾಶಿಕ" ದಾಸಕೂಟದವರಲ್ಲಿ ತುಂಬಾ ಬಳಕೆಯಲ್ಲಿರುವ ಕೃತಿ.

ಜಗನ್ನಾಥದಾಸರ "ಹರಿಕಥಾಮೃತಸಾರ" ಭಾಮಿನೀ ಷಟ್ಪದಿಯಲ್ಲಿ, ಮುವ್ವತ್ತೆರಡು ಸಂಧಿಗಳಲ್ಲಿ ಬರೆದಿರುವ ಉದ್ಗ್ರಂಥ, ಒಟ್ಟು ೯೮೮ ಷಟ್ಪದಿಗಳಲ್ಲಿರುವ ಪದ್ಯರೂಪೀ ಗ್ರಂಥ. ಮಾಧ್ವಸಿದ್ಧಾಂತ ಸಾರವನ್ನು ಭಟ್ಟಿ ಇಳಿಸಿರುವ ಕನ್ನಡ ಕೃತಿ. ಭಕ್ತಿ, ಮುಕ್ತಿ, ತಾರತಮ್ಯ, ಅಪರೋಕ್ಷ ಮುಂತಾದ ವಿಷಯಗಳ ವಿವರಪೂರ್ಣ ನಿರೂಪಣೆಯಿರುವ ಭಕ್ತಿತತ್ವ ಪ್ರಬೋದಕ ಕೃತಿ. ಮಹಾನ್ ಪಂಡಿತರುಗಳಿಂದ ಮೇರು ಮನ್ನಣೆ ಪಡೆದಿರುವ ಪದ್ಯ ಪ್ರಬಂಧವಿದು. ಮಧ್ವಮತನಿಷ್ಠ ವೈಷ್ಣವರಿಗೆ ಇದು ಅತ್ಯಂತ ಪ್ರಿಯವಾದ, ಪವಿತ್ರವಾದ ಗ್ರಂಥವಾಗಿದೆ.

ಹರಿಕಥಾಮೃತಸಾರವು ಹರಿಭಕ್ತಿ ಸಾಧನೆಯ ತತ್ತ್ವ, ತಂತ್ರಗಳನ್ನು ನಿರೂಪಿಸುತ್ತದೆ. ವೇದಾಗಮಗಳು, ಉಪನಿಷತ್ತುಗಳು, ಯೋಗಶಾಸ್ತ್ರ, ಸ್ಮೃತಿ, ಇತಿಹಾಸಪುರಾಣಗಳ, ಮಧ್ವಾಚಾರ್ಯರ ತತ್ತ್ವಜ್ಞಾನ ಗ್ರಂಥಗಳು ಇವೆಲ್ಲವುಗಳನ್ನೂ ಆಳವಾಗಿ ಅಧ್ಯಯನ ಮಾಡಿರುವ ಮನಸ್ಸೊಂದು ಕನ್ನಡದಲ್ಲಿ ಹರಿಯಬಿಟ್ಟಿರುವ ಭಕ್ತಿರಸಾಮೃತವೇ "ಹರಿಕಥಾಮೃತಸಾರ"ವೆನಿಸಿ ಕನ್ನಡ ಸಾಹಿತ್ಯಕ್ಕೆ ಭಕ್ತಿಮಾರ್ಗದ ಮೇರುದೀವಿಗೆಯಾಗಿ ದೊರೆತಿದೆ. ಇದರಲ್ಲಿ ಬರುವ ತತ್ತ್ವ ಪ್ರಮೇಯಗಳ ವಿಷಯಗಳನ್ನು ವಿವರಿಸಿ ಹೇಳಲು ತಜ್ಞರಾಗಿರಬೇಕು. ಆದರೆ ಹರಿಯ ಕರುಣೆ, ಪ್ರೀತಿ ಮುಂತಾದ ವಿಷಯಗಳನ್ನು ಹೇಳುವಾಗ ಸರಳವಾದ ಕನ್ನಡಶೈಲಿಯೇ ಬಂದಿದೆ. ಭಾವುಕ ಭಕ್ತರ ಹೃದಯದ ಕದ ತೆರೆಸುವಲ್ಲಿ ಅವು ಫಲಕಾರಿಯಾಗಿಬಿಡುತ್ತವೆ.

ಡಾ॥ಕೆ.ಎಂ.ಕೃಷ್ಣರಾವ್ ಅವರು ಜಗನ್ನಾಥದಾಸರ ಕೃತಿಗಳ ಬಗ್ಗೆ ಸಮಗ್ರವಾದ ಅಧ್ಯಯನ ನಡೆಸಿ ಪಿ.ಎಚ್.ಡಿ ಮಹಾಪ್ರಬಂದ ರಚಿಸಿ ಮೈಸೂರು ವಿಶ್ವವಿದ್ಯಾಲಯಕ್ಕೆ ಸಮರ್ಪಿಸಿದ್ದಾರೆ(೧೯೫೬) ಅದರಲ್ಲಿ ಹರಿಕಥಾಮೃತಸಾರವನ್ನು ಕುರಿತು "ಸಂಸ್ಕೃತವರಿಯದ ಜನರಿಗೆ ದ್ವೈತಮತ ತತ್ತ್ವಗಳನ್ನು, ಅಷ್ಟೇಅಲ್ಲ, ಮಾನವನ ನಡವಳಿಕೆಗಳನ್ನು, ಇತರ ಅನೇಕ ನೀತಿವಿಷಯಗಳನ್ನು ತಿಳಿಯಲು ಪರಮಪ್ರಯೋಜನ ಆಗುವ ಹಿರಿಯ ಪವಿತ್ರಗ್ರಂಥ" ಎಂದಿದ್ದಾರೆ.

ಹರಿಕಥಾಮೃತಸಾರದ ೯೮೮ ಪದ್ಯಗಳ ಪರಿವಿಡಿಗೆ ಶ್ರೀದವಿಠಲದಾಸರು (ಕರ್ಜಗಿ ದಾಸಪ್ಪ) ಇನ್ನೊಂದು ಸಂಧಿಯನ್ನು ಸೇರಿಸಿ ಅದರ ೨೪ ಷಟ್ಪದಿಗಳನ್ನು ರಚಿಸಿ ಫಲಶ್ರುತಿ ಎಂದು ಕರೆದರು. ಇವರು ಜಗನ್ನಾಥದಾಸರ ಶಿಷ್ಯರೇ.

ಜಗನ್ನಾಥದಾಸರ 'ತತ್ತ್ವಸುವ್ವಾಲಿ' ಕೃತಿ ಕನ್ನಡಕ್ಕೆ ಸಂದ ಮತ್ತೊಂದು ಸುಂದರಕಾವ್ಯ ತ್ರಿಪದಿಯ ಜಾತಿಯ ಛಂದಸ್ಸಿನಲ್ಲಿ ತತ್ತ್ವಗಳನ್ನು ಸುಲಭ ಶೈಲಿಯಲ್ಲಿಯೇ ಹೇಳಲಾಗಿದೆ. ಈ ಕೃತಿಯಲ್ಲಿ ಪಾಂಡಿತ್ಯದ ಪ್ರಗಲ್ಭತೆಯಿಲ್ಲದೆ ಹೃದಯಸಂವಾದವಾಗಿ ಹರಿದಿರುವ ಅನುಭವ ಸಂಪತ್ತಿದೆ. ಅವರ ಕನ್ನಡ ಕೃತಿಗಳು ಕೆಲವು ಸರಳಶೈಲಿ, ಮತ್ತೆ ಕೆಲವು ಸಂಸ್ಕೃತ ಭೂಯಿಷ್ಠ ಶೈಲಿ "ದಾಸೋಹಂ ತವ ದಾಸೋಹಂ" ಎಂಬ ಅವರ ಕೀರ್ತನೆ ಸಂಸ್ಕೃತಪದಗಳ ಹೊದಿಕೆಯೊಳಗಿರುವ ಕನ್ನಡವಾಗಿದ್ದು ಭಗವದ್‌ಶಕ್ತಿಯನ್ನು ಬಹಳ ಸಶಕ್ತವಾಗಿ ಎಲ್ಲ ಮಗ್ಗುಲುಗಳಿಂದಲೂ ಚಿತ್ರಿಸಿಕೊಡುತ್ತದೆ.

ವರದೇಂದ್ರತೀರ್ಥರ 'ತಂತ್ರಸಾರ'ಕ್ಕೆ ಇವರು ಫಲಶ್ರುತಿ ಬರೆದಿದ್ದಾರೆ.

ಮಂತ್ರಾಲಯದ ರಾಘವೇಂದ್ರಸ್ವಾಮಿಯ ಮೇಲೆ ಅತಿಹೆಚ್ಚಿನ ಕೀರ್ತನೆಗಳನ್ನು ರಚಿಸಿರುವ ಜಗನ್ನಾಥದಾಸರು "ಸುರಪನಾಲಯದಂತೆ ಮಂತ್ರಾಲಯ। ಕರೆಸುವುದು ಕಂಗೊಳಿಸುವುದು ನೋಳ್ಪಜನತೆ" ಎಂದು ಸಾರಿದ್ದಾರೆ. "ಶ್ರೀರಾಘವೇಂದ್ರ ನಿಮ್ಮ ಚಾರುಚರಣವ। ಸಾರಿದೆ ಶರಣ ಮಂದಾರ ಕರುಣವ ಬೀರು" ಎಂದು ಬೇಡಿದ್ದಾರೆ.

"ರೋಗಹರನೇ ಕೃಪಾಸಾಗರ ಶ್ರೀಗುರು। ರಾಘವೇಂದ್ರ ಪರಿಪಾಲಿಸೋ" ಎಂಬ ಅವರ ಕೃತಿ ಜನಪ್ರಿಯವಾಗಿದೆ. "ರಾಯಬಾರೋ ತಂದೆ ತಾಯಿ ಬಾರೋ। ನಮ್ಮ ಕಾಯೊಬಾರೋ। ಮಾಯಿಗಳ ಮರ್ದಿಸಿದ ರಾಘವೇಂದ್ರ" "ಯಾಕೆ ಮೂಕನಾದ್ಯೋ ಗುರುವೆ ನೀನ್ಯಾಕೆ ಮೂಕನಾದ್ಯೋ" ಈ ಕೃತಿಗಳೆಲ್ಲ ಗುರುವಿನೊಂದಿಗೆ ಅವರು ನಡೆಸಿದ ಸಂವಾದದಂತಿವೆ. ಗೋಪಾಲದಾಸರ ಮೇಲೂ ಇವರು ರಚಿಸಿದ ಕೃತಿಗಳಿವೆ.

'ಭಯಪರಿಹಾರ ಸುಳಾದಿ' 'ತಂತ್ರಸಾರ ಸುಳಾದಿ' ಮೊದಲಾಗಿ ಅನೇಕ ಸುಳಾದಿ, ಉಗಾಭೋಗಗಳು ಇಂದಿಗೂ ಜನಪ್ರಿಯವಾಗಿ ಉಳಿದಿವೆ. ಸತತ ಸಂಚಾರದಲ್ಲಿರುತ್ತಿದ್ದ ಇವರು ಮೈಸೂರು ರಾಜ್ಯಕ್ಕೂ ಬಂದಿದ್ದು ದಿವಾನ್ ಪೂರ್ಣಯ್ಯನವರಿಂದ ಸನ್ಮಾನಿತರಾಗಿದ್ದರು. ಭಕ್ತಿ, ವಿರಕ್ತಿ, ಪ್ರತಿಭೆ ಪಾಂಡಿತ್ಯ, ಕವಿತ್ವಗುಣಗಳ ಸಂಗಮ ವ್ಯಕ್ತಿತ್ವವಾಗಿದ್ದ ಜಗನ್ನಾಥದಾಸರು ತಮ್ಮ ಎಂಬತ್ತೊಂದನೆಯ ವರ್ಷದಲ್ಲಿ ಮಾನ್ವಿಯಲ್ಲಿ ತೀರಿಕೊಂಡರು. ಅವರ ನೆನಪಿನ ಅನೇಕ ಸಂಕೇತಗಳಾಗಿ ಅವರು ಉಪಯೋಗಿಸುತ್ತಿದ್ದ ವಸ್ತುಗಳೆಲ್ಲ ಇಂದಿಗೂ ಅವರು ಬದುಕಿದ್ದ ಮನೆಯಲ್ಲಿ ಇವೆ. ಅವರು ಒರಗಿ ಕೂತು ಗ್ರಂಥರಚನೆ ಮಾಡುತ್ತಿದ್ದ ಕಂಬವು ಇಂದಿಗೂ ಅಲ್ಲಿನ ಜನರಿಗೆ ಪೂಜಾರ್ಹವಾಗಿ ನಿಂತಿರುವುದನ್ನು ಕಾಣಬಹುದು.

ಮುಂದುವರೆದ ಹರಿದಾಸ ಪೀಳಿಗೆ

ಜಗನ್ನಾಥದಾಸರು ಇಪ್ಪತ್ತೊಂದು ಜನ ಹರಿದಾಸರಿಗೆ ದೀಕ್ಷೆ ಇತ್ತರು. ಈ ಪೀಳಿಗೆ ಮತ್ತೂ ಮುಂದೆ ದಾಸ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿತು. ಅಂಥವರಲ್ಲಿ ಶ್ರೀಶ ವಿಠ್ಠಲಾಂಕಿತರಾದ ಕರ್ಜಗಿ ದಾಸಪ್ಪನವರು, ಪ್ರಾಣೇಶ ವಿಠ್ಠಲಾಂಕಿತರಾದ ಲಿಂಗಸೂರಿನ ಯೋಗೀಂದ್ರದಾಸರು, ಕುಂಟೋಜಿದಾಸರು ಮುಂತಾದವರಿದ್ದಾರೆ. 'ಲಕ್ಷ್ಮೀಶ ವಿಠ್ಠಲ' 'ಸುಂದರ ವಿಠ್ಠಲ' 'ಗುರು ಶ್ರೀಶ ವಿಠ್ಠಲ' 'ಸುಖನಿಧಿ ವಿಠ್ಠಲ' 'ವರದೇಂದ್ರ ವಿಠ್ಠಲ' ಈ ಮುಂತಾದ ಮುದ್ರಿಕೆಯ ಕೃತಿಗಳೆಲ್ಲ ಜಗನ್ನಾಥದಾಸರ ಪರಂಪರೆಗೆ ಸೇರಿದ ದಾಸರುಗಳದ್ದೇ ಆಗಿದೆ.

ಜಗನ್ನಾಥದಾಸರ ಶಿಷ್ಯ ಪರಂಪರೆಯಲ್ಲಿ ಪ್ರಾಣೇಶದಾಸರ ಹೆಸರು ಹಿರಿಯದು. ಇವರ ಮೇಲೆ ವರದೇಂದ್ರತೀರ್ಥರ ಅನುಗ್ರಹ ಬಹಳ ಇತ್ತು ಎನ್ನುತ್ತಾರೆ. ಹದಿನೇಳಕ್ಕೂ ಮಿಗಿಲಾದ ಗ್ರಂಥಗಳ ರಚನಾಕಾರರಿವರು. ಅನೇಕ ಕೀರ್ತನೆಗಳ ರಚನಾಕಾರರು, ಶ್ರೀಶ ವಿಠ್ಠಲಾಂಕಿತರಾದ ಹುಂಡೇಕಾರದಾಸರು, ಕಮಲೇಶ ವಿಠ್ಠಲಾಂಕಿತ ಆನಂದದಾಸರು, ಸುರಪುರದ ಭೀಮದಾಸರು (ಶ್ರೀಶ ಕೇಶವ ವಿಠ್ಠಲ) ಸಂತೇಬೆನ್ನೂರು ರಾಮಾಚಾರ್ಯರು (ಕಮಲಾಪತಿ ವಿಠ್ಠಲ) ಇವರೆಲ್ಲ ಈ ಪರಂಪರೆಯವರು. ಕದರ ಮಂಡಿಗೆ, ಇಭರಾಮಪುರ, ಹೊನ್ನಾಳಿ, ಮೊದಲಕಲ್ಲು, ಬಳ್ಳಾರಿ ಮುಂತಾದ ಸ್ಥಳಗಳು ಹರಿದಾಸರ ಕೇಂದ್ರಗಳಾಗಿ ಸ್ಥಾಪಿತವಾಗಿದ್ದು ಜಗನ್ನಾಥದಾಸರ ಕಾಲದಲ್ಲಿಯೇ ಆಗಿದೆ.

ಗೋಪಾಲದಾಸರ ಪೀಳಿಗೆಯವರೆನ್ನಿಸಿಕೊಂಡು ಕರ್ಜಗಿ ಏರಿ ನಾರಾಯಣಾಚಾರ್ಯ (ಸುಸಿಧಿ ವಿಠಲ) ಕಲಮದಾನಿ ನಾರಾಯಣರಾಯರು (ಸಿರಿ ವಿಠ್ಠಲ) ಇವರೆಲ್ಲ ೧೯೦೦ ನಂತರದ ಹರಿದಾಸರುಗಳಾಗಿದ್ದಾರೆ. ೧೯೪೫ರಲ್ಲಿ ತೀರಿಕೊಂಡ ಬೇಲೂರು ಕೇಶವದಾಸರು ವಿಜಯದಾಸರ ಪೀಳಿಗೆಯವರಾಗಿದ್ದಾರೆ. ಬಳೂಟಗಿ ಗುಂಡಾಚಾರ್ಯರೆನ್ನುವವರು ರಾಘವೇಂದ್ರಸ್ವಾಮಿಯ ಸೇವೆಮಾಡಿ ರಾಯರ ಮಠ ಪರಂಪರೆಯಲ್ಲಿ ಬಂದ ಶ್ರೀ ಸುಶೀಲೇಂದ್ರ ಸ್ವಾಮಿಗಳವರಿಂದ 'ಶ್ರೀ ಶ್ಯಾಮಸುಂದರ ವಿಠಲ' ಅಂಕಿತ ಪಡೆದು ಅನೇಕ ಕೃತಿಗಳನ್ನು ರಚಿಸಿದ್ದಾರೆ.

ಪುರುಷರಷ್ಟು ಬಹುಸಂಖ್ಯೆಯಲ್ಲಿ ಹರಿದಾಸ ಮಹಿಳೆಯರು ಕನ್ನಡನಾಡಿನಲ್ಲಿ ಮೂಡಿಬಂದಿಲ್ಲವೆನ್ನುವುದಕ್ಕೆ ಅಂದಿನ ಶತಮಾನಗಳಲ್ಲಿನ ಹೆಣ್ಣಿನ ಸಾಮಾಜಿಕ ಬದುಕಿನ ಇತಿಮಿತಿ ವೃತ್ತದ ಬದುಕೇ ಕಾರಣವಾಗಿದೆ. ಯಾವುದೇ ಸಾಧನಾಮಾರ್ಗದಂತೆ ಭಕ್ತಿ, ಆಧ್ಯಾತ್ಮ ಸಾಧನೆಯ ಪಥದಲ್ಲೂ ಪುರುಷನಿಗಿರುವ ಸ್ವಾತಂತ್ರ್ಯ ಹೆಣ್ಣಿಗೆಂದೂ ಲಭ್ಯವಾಗಿಲ್ಲವೆನ್ನುವುದು ಕಟುಸತ್ಯ. ದಾಸರುಗಳ ಬದುಕಿನ ಸಾಧನೆಗೆ ಅವರ ಮಡದಿಯರು ಪ್ರೇರಕರಾಗಿ, ಪೂರಕವಾಗಿ ನಿಂತವರಿದ್ದಾರೆ. ಆದರೆ ತಾನೇ ಹರಿದಾಸಿನಿಯಾಗಿ ಬಾಳುವ ಪರಿ ಹೆಣ್ಣಿಗೆಂದೂ ಕಷ್ಟಸಾಧ್ಯವೇ ಇತ್ತು.

ಆದರೂ ಹರಿದಾಸ ದೀಕ್ಷೆ ಪಡೆದು ಬಾಳಿದ ಹೆಂಗಳೆಯರು ಇಲ್ಲವೇ ಇಲ್ಲ ಎನ್ನುವಂತಿಲ್ಲ. ಬೆರೆಳೆಣಿಕೆಯಷ್ಟು ಹರಿದಾಸಿನಿಯರನ್ನು ಇದುವರೆಗೆ ಗುರುತಿಸಲಾಗಿದೆ. ಅಜ್ಞಾತದ ಮರೆಯಲ್ಲಿ ಇನ್ನೂ ಉಳಿದಿರಬಹುದಾದ ಹರಿದಾಸಿನಿಯರ ಬಗ್ಗೆ ಸಂಶೋಧಿಸಿ ಅವರ ಸಾಧನೆ ಗುರುತಿಸುವ ಕೆಲಸವಾಗಬೇಕಿದೆ. ಎಲೆ ಮರೆಯ ಕಾಯಿಯಂತೆ ಬಾಳಿ ಬದುಕಿದ ಆಗಿಹೋದ ಹರಿದಾಸಿನಿಯರನ್ನು ಕುರಿತು ತಿಳಿಯಬೇಕಾಗಿದೆ.

'ರಮಾ ಅರಸು ರಾಮೇಶ' ಎನ್ನುವ ಅಂಕಿತದಲ್ಲಿ ಕೃತಿರಚನೆ ಮಾಡಿರುವ ರಮಾಬಾಯಿ ಎನ್ನುವವರನ್ನು ಪ್ರಥಮ ಮಹಿಳಾ ಹರಿದಾಸರೆಂದು ಇದುವರೆಗಿನ ಆಧಾರಗಳ ಮೇಲೆ ಗುರುತಿಸಲಾಗಿದೆ. ಇವರೇ ಗಲಗಲಿ ಅವ್ವನವರೆಂದು ಮುಂದೆ ಖ್ಯಾತರಾದರು. ಅಂದಿನ ದಿನಗಳ ಪದ್ಧತಿಯಾಗಿದ್ದ ಬಾಲ್ಯವಿವಾಹಕ್ಕೆ ಕೊರಳೊಡ್ಡಿದರು. ಹನ್ನೆರಡು ವರ್ಷದ ಹುಡುಗಿ ತೊಂಬತ್ತೈದು ವರ್ಷದ ವೃದ್ಧ ಗಲಗಲಿಯ ಮುದ್ಗಲಾಚಾರ್ಯರೆನ್ನುವರನ್ನು ಮದುವೆಯಾಗಬೇಕಾಗಿ ಬಂದಿತು. ಮದುವೆಯಾದ ವಾರಕ್ಕೇ ಈ ವೃದ್ಧಜೀವ ದಿವಂಗತವಾಯಿತು. ಬೆಳೆದ ಆರು ಮಲಮಕ್ಕಳು ಇದ್ದರು. ಇವರುಗಳೇ ತಮ್ಮ ಮಲತಾಯಿಯಾದ ಹನ್ನೆರಡರ ಬಾಲಕಿಗೆ ಪಾಠಪ್ರವಚನ ಹೇಳಿದರಂತೆ! ಆಸಕ್ತಿಯಿಂದ ಎಲ್ಲ ಕಲಿತು ಅಂದಿನ ಶಾಸ್ತ್ರಾಭ್ಯಾಸದಲ್ಲಿ ಪರಿಣಿತಳಾದ ರಮಾಬಾಯಿ ಮುಂದೆ ತನ್ನ ಶಿಷ್ಯವರ್ಗವನ್ನೂ ಬೆಳೆಯಿಸಿ ಪಾಠ ಹೇಳಿದಳು!

ಮಯ್ಯದ ಹಾಡು, ಕೋಲಾಟದ ಹಾಡು, ಬೀಗರ ಹಾಡು ಮುಂತಾದ ಅನೇಕ ಸಂಪ್ರದಾಯಿಕ ರಚನೆಗಳು. 'ಶ್ರೀ ಕೃಷ್ಣ ಜನ್ಮದ ಹಾಡು' ಎಂಬ ದೀರ್ಘಕಾವ್ಯ, ನಿಂದಾಸ್ತುತಿಯ ಕೀರ್ತನೆಗಳು ಈಕೆಯಿಂದ ರಚಿತವಾಗಿವೆ. ಅಗಾಧವಾದ ಪುರಾಣ ಕಥೆಗಳ ಜ್ಞಾನ, ಮಾಧ್ವತತ್ತ್ವಜ್ಞಾನವನ್ನು ಈಕೆಯ ರಚನೆಗಳು ಪ್ರಕಟಪಡಿಸುತ್ತವೆಂದು ವಿದ್ವಾಂಸರ ಅಭಿಪ್ರಾಯವಿದೆ.

ಕರ್ನಾಟಕದ ಮೀರಾಬಾಯಿ ಎಂದೇ ಪ್ರಖ್ಯಾತವಾಗಿರುವ ಹರಿದಾಸಿನಿ "ಹೆಳವನಕಟ್ಟೆ ಗಿರಿಯಮ್ಮ" ಎಂಬಾಕೆ. ರಾಣೀಬೆನ್ನೂರಿನಲ್ಲಿ ಜನಿಸಿ ಮಲೆಬೆನ್ನೂರಿನ ಶ್ಯಾನುಭೋಗ ತಿಪ್ಪರಸನನ್ನು ವಿವಾಹವಾದಳು. ವಿಷಯಸುಖಗಳಲ್ಲಿ ತೀವ್ರವಾದ ಅನಾಸಕ್ತಿ ಹುಟ್ಟಿದಾರಭ್ಯ ಬೆನ್ನಟ್ಟಿ ಬಂದಿತ್ತು. ಮಲೆಬೆನ್ನೂರಿನ ಸಮೀಪದ ಹೆಳವನಕಟ್ಟೆ ಎನ್ನುವ ಕೆರೆಯ ಕಟ್ಟೆಯ ಮೇಲಿದ್ದ ದೇವಾಲಯದ ರಂಗನಾಥಸ್ವಾಮಿ ಅವಳ ಆರಾಧ್ಯದೈವವಾದ. ಸದಾಭಜನೆ, ಸಂಕೀರ್ತ್ನೆ, ಧ್ಯಾನವೆಂಥು ದೇವರ ಸನ್ನಿಧಿಯಲ್ಲೇ ಇದ್ದುಬಿಟ್ಟಳೇ ವಿನಹಾ ಸಂಸಾರಸುಖಕ್ಕೆ, ಕಷ್ಟಕ್ಕೆ ಬೆನ್ನು ಕೊಡಲಿಲ್ಲ. ಇವಳ ಈ ವೈರಾಗ್ಯಶೀಲತೆ ಮನಗಂಡ ಇವಳ ಪತಿ ಮತ್ತೊಬ್ಬಳನ್ನು ಮದುವೆಮಾಡಿಕೊಂಡ.

ಗೋಪಾಲದಾಸರು ತಮ್ಮ ಸಂಚಾರದಲ್ಲಿ ಇವಳನ್ನು ದೇಗುಲದಲ್ಲಿ ಭೇಟಿಯಾಗಿ ಮುದ್ರಿಕೆ ನೀಡಿ ಹರಿದಾಸ್ಯತನದ ದೀಕ್ಷೆ ನೀಡಿದರು ಎಂಬ ಅಭಿಪ್ರಾಯವಿದೆ. ಮಂತ್ರಾಲಯದ ಶ್ರೀ ಸುಮತೀಂದ್ರತೀರ್ಥರು ಕೂಡ ಮಲೆಬೆನ್ನೂರಿಗೆ ಆಗಮಿಸಿ ಇವಳನ್ನು ಹರಸಿದರು. "ರಾಮ ಶ್ರೀ ರಘುನಂದನ" ಎಂಬ ತನ್ನ ಕೃತಿಯೊಂದರಲ್ಲಿ "ಸದಾನಂದ ಸುಮತೀಂದ್ರ ಹೃದಯ ಪಂಕಜ ಭೃಂಗ" ಎಂಬ ಸಾಲಿನ ಮೂಲಕ ಈ ಭೇಟಿಯನ್ನು ಆಕೆ ದಾಖಲಿಸಿದ್ದಾಳೆ. ಕೃತಿಗಳಲ್ಲಿ ಎಲ್ಲಿಯೂ ಗಿರಿಯಮ್ಮ ತನ್ನ ಬಗ್ಗೆ ಹೇಳಿಕೊಂಡಿಲ್ಲ. ಹೀಗಾಗಿ ವಿದ್ವಾಂಸರು ಆಕೆಯ ಕಾಲ ಪರಿಶೋಧಿಸಿ ೧೬೬೫-೧೭೧೫ ಎಂದು ನಿರ್ಧರಿಸಿದ್ದಾರೆ.

ಆತ್ಮನಿವೇದನೆ, ಭಕ್ತಿಭಾವುಕತೆ, ಹರಿಲೀಲಾ ವರ್ಣನೆಗಳು, ಸಾಮಾಜಿಕ ಸುಸ್ಥಿತಿಗಾಗಿ ಬೇಡಿಕೆ ಸಲ್ಲಿಸುವ ಕೃತಿಗಳು, ಗೋಪಿಯರ ವಿರಹ ಹೀಗೆ ವಸ್ತುವೈವಿಧ್ಯದಿಂದ ಕೂಡಿದ ಕೀರ್ತನೆಗಳು, ವಾತ್ಸಲ್ಯಭಾವದಿಂದ ರಂಗನನ್ನು ಚಿತ್ರಿಸುವ ಕೃತಿಗಳು ಇವಲ್ಲದೆ 'ಚಂದ್ರಹಾಸ ಚರಿತ್ರೆ' 'ಸೀತಾಕಲ್ಯಾಣ' ಮೊದಲಾದ ಕಾವ್ಯಗಳು, ಬ್ರಹ್ಮ-ಕೊರವಂಜಿ ಹಾಡು, ಲವ-ಕುಶಲರ ಕಾಳಗ, ಉದ್ದಾಲಕನ ಹಾಡು, ಕೃಷ್ಣ-ಕೊರವಂಜಿ, ಗಜೇಂದ್ರ ಮೋಕ್ಷ ಮುಂತಾದ ಕಥನಕಾವ್ಯಗಳನ್ನೂ ರಚಿಸಿದ ಕವಯಿತ್ರಿಯಾಗಿದ್ದಾಳೆ. ಆತ್ಮೋದ್ಧಾರದೊಂದಿಗೆ ಸಮಾಜೋದ್ಧಾರಕ್ಕಾಗಿಯೂ ಕಳಕಳಿ ವ್ಯಕ್ತಪಡಿಸಿದ ಆಕೆಯ ಕೃತಿಗಳು ಇಂದಿಗೂ ಕನ್ನಡಿಗರ ಮನೆ ಮನಗಳಲ್ಲಿ ಹಾಡಿಕೊಳ್ಳುವಂತಿವೆ.

ದಾಸಸಾಹಿತ್ಯದಲ್ಲಿ ಹರಪನಹಳ್ಳಿ ಭೀಮವ್ವ ಎಂಬಾಕೆಯ ಅನನ್ಯ ಹರಿದಾಸಿನಿ ಎನಿಸಿಕೊಂಡಿದ್ದಾಳೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ನಾರಾಯಣದೇವನಕೆರೆ ಎಂಬ ಹಳ್ಳಿಯಲ್ಲಿ ಜನಿಸಿದಳು. ಇಡೀ ಇವರ ಕುಟುಂಬವೇ ಮಂತ್ರಾಲಯದ ರಾಘವೇಂದ್ರಸ್ವಾಮಿ ಭಕ್ತರು. ಹನ್ನೊಂದು ವರ್ಷದ ಬಾಲೆ ಭೀಮವ್ವನನ್ನು ನಲವತ್ತೈದರ ಗಂಡು ಮುನಿಯಪ್ಪನಿಗೆ ಕೊಟ್ಟು ವಿವಾಹಮಾಡಿದರು. ಮುವ್ವತ್ತಾರರ ಹರೆಯದಲ್ಲೆ ಭೀಮವ್ವನಿಗೆ ವಿಧವೆಯ ಪಟ್ಟವೂ ದಕ್ಕಿತು. ನಂತರ ಸ್ವಪ್ನದಲ್ಲಿ ನಾರದರಿಂದ 'ಭೀಮೇಶಕೃಷ್ಣ' ಅಂಕಿತದ ಸೂಚನೆ ದೊರೆಯಿತೆನ್ನಲಾಗಿದೆ. ೧೪೩ ಕೀರ್ತನೆಗಳೂ, ಆರು ದೊಡ್ಡ ಹಾಡುಗಳನ್ನೂ ರಚಿಸಿದ್ದಾರೆ.

ಸಂವಾದೀ ರೂಪದ "ಅಕ್ಕರವುಳ್ಳ ನಮ್ಮಕ್ಕ ರುಕ್ಮಿಣಿ ಕೇಳೆ" ಕಾವ್ಯಾತ್ಮಕವಾಗಿರುವ ೨೦ನುಡಿಗಳ ದೀರ್ಘವಾದ ಹಾಡು. ಇವತ್ತಿಗೂ ಜನಮನದಲ್ಲಿ ಪ್ರೀತಿಗಳಿಸಿರುವ "ಆಲದೆಲೆಯ ಮೇಲೆ ಮಲಗಿದ ಆದಿಕೇಶವನ ನೋಡಬನ್ನಿರಿ" ದೀರ್ಘ ಹಾಡೂ ಈಕೆಯ ರಚನೆಯೇ. ಶಿವಪಾರ್ವತಿಯರ ಸಂವಾದದ ರೂಪದಲ್ಲಿರುವ ಇಂದುವದನೆ ಪಾರ್ವತಿಯೆ ನಾನಿಲ್ಲಿಗೆ ಬಂದೆ ಬಾಗಿಲ ತೆಗೆಯೆ ಜಾಣೆ" ಎಂಬ ಕೃತಿ ಸೊಗಸಾದ ಶೈಲಿಯಲ್ಲಿದೆ. ಕೃಷ್ಣನ ಬಗೆಗಿನ ದೂರುಗಳ ಹಾಡು, ಉಡಿತುಂಬುವ ಹಾಡು, ಎಲೆಗೆ ಭೂಮ ಇಡುವ ಹಾಡು ಮುಂತಾದ ಕೃತಿಗಳು ಹೆಣ್ತನದ ಸಂವೇದನೆಯನ್ನು ಬಿಂಬಿಸಿವೆ. "ಕಲ್ಲು ನಾಯೇನೋ ಕೈವಲ್ಯದಾಯಕನೆ" ಎನ್ನುವುದು ಅಪರೂಪದ ರೀತಿಯಲ್ಲಿ ಆತ್ಮನಿವೇದನೆಯನ್ನೊಳಗೊಂಡಿದೆ. "ದೇವೇಂದ್ರನ ಸೊಸೆ ದೇವಕಿ ತನಯಳು" ಎಂಬ ಕೃತಿ ಬಸುರಿ ಹೆಣ್ಣಿನ ಬಯಕೆಗಳನ್ನು ಸ್ವಾರಸ್ಯಕರವಾಗಿ ನಿರೂಪಿಸಿದೆ. ಜೀವನ್ಮುಖೀ ಸಂವೇದನೆಗಳನ್ನೊಳಗೊಂಡು ಕಾವ್ಯಾಂಶಗಳು ಸೊಗಯಿಸುವ ಕೃತಿಗಳನ್ನು ರಚಿಸಿರುವ ಹರಪನಹಳ್ಳಿ ಭೀಮವ್ವ ೧೧-೧-೧೯೦೩ರಂದು ಪರಲೋಕವಾಸಿಯಾದರು.

ತುಳಸಾಬಾಯಿ, ತುರಡಗಿ ತಿಮ್ಮಮ್ಮ, ಓರೆವಾಯಿ ಲಕ್ಷ್ಮೀದೇವಮ್ಮ, ಹರಿದಾಸಿ ಅಂಬಾಬಾಯಿ ಇನ್ನೂ ಮುಂತಾದ ಅನೇಕಾನೇಕ ಮಹಿಳಾ ಹರಿದಾಸರು ಆಗಿಹೋಗಿದ್ದಾರೆ. ಮಹಿಳೆಯರ ಕಾವ್ಯಾಭಿವ್ಯಕ್ತಿಗೆ ಸಾಕ್ಷೀ ಕೃತಿಗಳನ್ನು ಕೊಟ್ಟು ಹೋಗಿದ್ದಾರೆ. ಹರಿಭಕ್ತಿಯ ಮನಸ್ಸು, ಹರಿದಾಸ್ಯತನದ ಬದುಕನ್ನು ಹೆಂಗೆಳೆಯರೂ ಅಳವಡಿಸಿಕೊಂಡು ಬಾಳಬಹುದೆನ್ನುವುದಕ್ಕೆ ಸಾಕ್ಷಿಯಾಗಿದ್ದಾರೆ. ಭಕ್ತಿಪಥದಲ್ಲಿ ಮಹಿಳೆಯರ ಸಾಧನೆಗೆ ಸಂಕೇತವಾಗಿದ್ದಾರೆ

ಉತ್ತರಕಾಲೀನ ದಾಸಕೂಟದ ಕೆಲವು ಪ್ರಮುಖರ ಬದುಕು, ಸಾಧನೆಗಳ ಸಮೀಕ್ಷೆಯಲ್ಲಿ ಹೀಗೆ ತಿಳಿದುಬಂದ ಸಂಗತಿಯೆಂದರೆ ಮುಖ್ಯವಾಗಿ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳು, ಅವರ ಪರಂಪರೆಯಲ್ಲಿ ಬಂದ ಯತಿವರೇಣ್ಯರುಗಳು ದಾಸಕೂಟದವರನ್ನು ಪೋಷಿಸುತ್ತ, ಆಶ್ರಯ, ಪ್ರೋತ್ಸಾಹವನ್ನೆರೆಯುತ್ತ ಬಂದರು ಎನ್ನುವುದು. ಈಕಾಲದಲ್ಲಿ ಹರಿದಾಸಸಾಹಿತ್ಯ ಇಷ್ಟೊಂದು ಪುಷ್ಟಿಯಾಗಿ ಬೆಳೆಯಬೇಕಾದರೆ ಅದಕ್ಕೆ ಮಠಪರಂಪರೆಯ ಯತಿಗಳ ಆಶ್ರಯ ದೊರೆತದ್ದೇ ಕಾರಣವಾಗಿದೆ. ವಿಜಯನಗರ ಪತನದ ನಂತರ ರಾಜಾಶ್ರಯವು ಅಷ್ಟಾಗಿ ಸಂಸ್ಕೃತಿಯನ್ನು ಪೋಷಿಸಲು ಮುಂದುವರೆಯಲಿಲ್ಲವಾದರೂ ವ್ಯಾಸಕೂಟದ ಅದರಲ್ಲೂ ರಾಘವೇಂದ್ರ ಸ್ವಾಮಿ ಮಠ ಪರಂಪರೆಯ ಯತಿಗಳು ಹರಿದಾಸಸಾಹಿತ್ಯದ ಈ ಸಂಸ್ಕೃತಿಯನ್ನು ಉಳಿಸಿಕೊಂಡು, ಬೆಳೆಯಿಸಿಕೊಂಡು ಬಂದರು.

ರಾಘವೇಂದ್ರ ಸ್ವಾಮಿಗಳವರ ನಂತರ ಅವರ ಪ್ರಶಿಷ್ಯರಾಗಿ ಪೀಠಾಧಿಪಪತ್ಯಕ್ಕೆ ಬಂದ ವರದೇಂದ್ರತೀರ್ಥರು (೧೭೬೧-೧೭೭೪) ದಾಸಕೂಟಕ್ಕೆ ತುಂಬ ಉತ್ತೇಜನ, ನೆರವು ನೀಡಿದ್ದಾರೆ. ತಾವೇ ಸ್ವತಃ ಮಧ್ವರ 'ತಂತ್ರಸಾರ'ವನ್ನು ಕನ್ನಡದಲ್ಲಿ ಕಾವ್ಯವಾಗಿ ಬರೆದಿದ್ದಾರೆ. ವಿಜಯದಾಸರಿಂದ ಮೊದಲ್ಗೊಂಡು ಪ್ರಾಣೇಶದಾಸರವರೆಗೂ ಇವರು ದಾಸರುಗಳನ್ನು ಪ್ರೋತ್ಸಾಹಿಸಿ ನಾಡಿನ ಎಲ್ಲ ದಾಸಸಾಹಿತ್ಯ ಪ್ರಚುರಗೊಳ್ಳುವಂತೆ ವ್ಯವಸ್ಥೆ ಮಾಡಿದವರಾಗಿದ್ದಾರೆ.

೧೯ನೆಯ ಶತಮಾನದ ಆದಿಭಾಗದಲ್ಲಿದ್ದ ಸೋದೆ ವಾದಿರಾಜಮಠ ಪರಂಪರೆಯ ಯತಿಗಳಾದ ಶ್ರೀ ವಿಶ್ವಾಧೀಶತೀರ್ಥರು ಕೂಡ ದಾಸಕೂಟದ ಮೇಲೆ ಪ್ರಭಾವಬೀರಿದವರು, ದಾಸಕೂಟಕ್ಕೆ ಪ್ರೋತ್ಸಾಹ ನೀಡಿದವರು. ಇವರ ಪ್ರಶಿಷ್ಯರಾದ ವಿಶ್ವಪ್ರಿಯತೀರ್ಥರು (೧೮೬೫ರಲ್ಲಿ ವೃಂದಾವನಸ್ಥರಾದವರು)ಕೂಡ ಈ ಪ್ರೋತ್ಸಾಹವನ್ನು ಮುಂದುವರೆಯಿಸಿದವರೇ, ಇದಕ್ಕೂ ಮುಂಚಿನ ೧೮ನೆಯ ಶತಮಾನದವರಾದ ಉತ್ತರಾದಿ ಮಠದ ಸತ್ಯಬೋಧತೀರ್ಥರೆನ್ನುವವರು ದಾಸಕೂಟದವರಿಗೆ ಪ್ರಿಯವಾದ ಗುರುವಾಗಿದ್ದರೆಂದು ಆಯಾ ದಾಸವರೇಣ್ಯರ ಕೃತಿಗಳಿಂದಲೇ ಅರಿಯಬಹುದಾಗಿದೆ. ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು, ವ್ಯಾಸವಿಠಲರು, ಶ್ರೀದವಿಠಲರು ಇವರೆಲ್ಲರೂ ಸತ್ಯಬೋಧತೀರ್ಥರನ್ನು ಸ್ತುತಿಸಿದ ಕೀರ್ತನೆಗಳಿವೆ. ಆನಂತರದ ಪೀಳಿಗೆಯ ಹರಿದಾಸರೆಲ್ಲರೂ ಇವರನ್ನು ಸ್ತುತಿಗೈದಿದ್ದಾರೆ.

೧೮,೧೯ನೆಯ ಶತಮಾನದ ವೈಶಿಷ್ಟ್ಯವೇ ಉತ್ತರಕಾಲೀನ ಹರಿದಾಸರುಗಳಿಗೆ ಮಠಾಧಿಪತಿಗಳ ಪ್ರೋತ್ಸಾಹ, ಆಶ್ರಯ ದೊರೆತಿರುವುದು. ಸತ್ಯಕಾಮತೀರ್ಥರು, ಸತ್ಯಪರಾಯಣತೀರ್ಥರು, ಸುಮತೀಂದ್ರತೀರ್ಥರು ಇವರೆಲ್ಲ ಅಂದಿನ ಹರಿದಾಸರುಗಳನ್ನು ಗೌರವಿಸಿ ಪೋಷಿಸಿದವರಾಗಿದ್ದಾರೆ.

ಭುವನೇಂದ್ರತೀರ್ಥರು [ರಾಘವೇಂದ್ರ ಸ್ವಾಮಿ ಮಠ ಪರಂಪರೆಯವರು] ಐಜಿ ರಾಮಾಚಾರ್ಯರೆನ್ನುವ ಪಂಡಿತರಿಗೆ ಸನ್ಯಾಸ ದೀಕ್ಷೆಯಿತ್ತು 'ವ್ಯಾಸತತ್ತ್ವಜ್ಞ'ರಂಬ ಅಭಿದಾನದಲ್ಲಿ ಹರಿದಾಸರನ್ನಾಗಿ ಮಾಡಿದರು. ಸುಧಮೇಂದ್ರತೀರ್ಥರ ಬಳಿ ಶಾಸ್ತ್ರಾಭ್ಯಾಸ ಮಾಡಿದವರಾದ ವೆಂಕಟಸುಬ್ಬದಾಸರು ಭೀಮೇಶವಿಠಲ ಅಂಕಿತದಿಂದ ಹರಿದಾಸರಾದರು. ಸುಗುಣೇಂದ್ರತೀರ್ಥರು ಶ್ರೀ ವತ್ಸಾಂಕಿತ ದಾಸರನ್ನೂ, ಗುರು ಇಂದಿರೇಶ ವಿಠಲರನ್ನೂ ಪ್ರೋತ್ಸಾಹಿಸಿ ಹರಿದಾಸರನ್ನಾಗಿ ರೂಪಿಸಿದರು.

ವ್ಯಾಸರಾಜ ಮಠದ ವಿದ್ಯಾಕಾಂತತೀರ್ಥರು ಸ್ವತಃ ತಾವೇ ಕೀರ್ತನಕಾರರಾಗಿದ್ದರು. ಹರಿದಾಸರಿಗೆ ತುಂಬಾ ಪ್ರೋತ್ಸಾಹ ನೀಡಿದರು. ಶ್ರೀವತ್ಸಾಂಕಿತ ಚಿಕ್ಕೋಡಿ ಆಚಾರ್ಯರೆಂಬ ಹರಿದಾಸರಂತೂ ಇವರಿಂದ ತುಂಬ ಪ್ರೇರಣೆ ಪಡೆದವರೆನ್ನಲಾಗಿದೆ. ವಿದ್ಯಾಸಿಂಧುತೀರ್ಥರು, ವಿದ್ಯಾನಿಧಿತೀರ್ಥರು ಇವರಿಬ್ಬರೂ ತಮ್ಮ ಮಠದ ಪೂಜಾಕಾಲದಲ್ಲಿ ಚಿಕ್ಕೋಡಿದಾಸರಿಂದ ಕೀರ್ತನೆಗಳನ್ನು ಹಾಡಿಸುತ್ತಿದ್ದರು. ವಿದ್ಯಾ ಶ್ರೀನಿವಾಸತೀರ್ಥರು ಕೂಡ ತುಂಬಾ ಹರಿದಾಸರುಗಳಿಗೆ ಪ್ರಿಯರಾಗಿದ್ದರೆನ್ನುವುದನ್ನು ಗುರುರಾಮವಿಠಲರು ತಮ್ಮ ಕೃತಿಯಲ್ಲಿ ಸೂಚಿಸಿದ್ದಾರೆ.

ಉಡುಪಿಯ ಕೃಷ್ಣಾಪುರ ಮಠದ ಅನೇಕ ಯತಿವರ್ಯರು ಹರಿದಾಸಸಾಹಿತ್ಯಕ್ಕೆ ತುಂಬ ಪ್ರೋತ್ಸಾಹ ನೀಡಿದವರಾಗಿದ್ದಾರೆ. ಕಮಲಾಪತಿ ವಿಠಲದಾಸರಿಗೆ ಕೃಷ್ಣಾಪುರದ ಯತಿಗಳೇ ಗುರುಗಳಾಗಿದ್ದರು. ಶ್ರೀವತ್ಸಾಂಕಿತದಾಸರು, ವರಾಹ ತಿಮ್ಮಪ್ಪದಾಸರು ವಿಭುದೇಂದ್ರತೀರ್ಥರ ಶಿಷ್ಯರಾಗಿದ್ದವರು. ನೆಕ್ಕಾರು ಕೃಷ್ಣದಾಸರ ಸಹಪಾಠಿಗಳಾಗಿದ್ದವರೇ ವಿದ್ಯಾತೀರ್ಥರಾದರು. ಬೇಲೂರಿನ ವೆಂಕಟಸುಬ್ಬದಾಸರು, ವಿಜಯಮೋಹನವಿಠಲರು ಇವರೆಲ್ಲ ವಿದ್ಯಾಧೀಶತೀರ್ಥರ ಶಿಷ್ಯರು.

ಮುಳುಬಾಗಿಲಿನ ಶ್ರೀಪಾದರಾಜರ ಮಠ ಪ್ರತಿಯೊಬ್ಬ ಅಂದಿನ ಹರಿದಾಸರುಗಳಿಗೆ ಯಾತ್ರಾಸ್ಥಳದಂತಾಗಿತ್ತು. ಶ್ರೀಪಾದರಾಜರ ಬೃಂದಾವನದ ಸನ್ನಿಧಿಯಲ್ಲಿ ಕೀರ್ತನ ಸೇವೆ ಸಲ್ಲಿಸಿದ ಪ್ರತಿ ಹರಿದಾಸರುಗಳಿಗೂ ಗೌರವ, ಸಂಭಾವನೆಯನ್ನು ಶ್ರೀಮಠದ ಸನ್ನಿಧಾನವು ನೀಡುತ್ತ ಬಂದಿದ್ದು ಸಂಪ್ರದಾಯವಾಗಿ ಇಂದಿಗೂ ಉಳಿದಿದೆ. ಹೌದು, ಹರಿದಾಸಸಾಹಿತ್ಯದ ಪ್ರವರ್ತಕರೇ ಶ್ರೀಪಾದರಾಜರು. ಅವರ ಅನುಗ್ರಹ, ಆಶೀರ್ವಾದಗಳನ್ನು ಹರಿದಾಸರೆನ್ನುವವರು ಪ್ರತಿಯೊಬ್ಬರೂ ಪಡೆಯುವುದರಲ್ಲಿ ಸಾರ್ಥಕ್ಯ ಹೊಂದುತ್ತಿದ್ದರು.

೧೮೫೯-೧೮೬೬ರ ಕಾಲಾವಧಿಯ ಶ್ರೀ ವಿದ್ಯಾಪ್ರಸನ್ನತೀರ್ಥರನ್ನು(ವ್ಯಾಸರಾಯ ಮಠದ ೩೭ನೇ ಪೀಠಾಧಿಪತಿಗಳು) ಇದೇ ಹರಿದಾಸ ಪರಂಪರೆಯನ್ನು ಪೋಷಿಸಿದ ಮಹನೀಯರೆಂದು ಸ್ಮರಿಸಬಹುದು. ಹೀಗೆ ಉತ್ತರಕಾಲೀನ ದಾಸಕೂಟದ ಮೇಲೆ ವ್ಯಾಸಕೂಟದ(ಮಠಾಧಿಪತಿಗಳ)ಪ್ರಭಾವ, ಪ್ರೇರಣೆ, ಪ್ರೋತ್ಸಾಹಗಳು ಹೆಚ್ಚಾಗಿ ಒದಗಿ ಮತ್ತೆ ಈ ಎರಡೂ ಕೂಟಗಳು ಸಮೀಪವರ್ತಿಗಳಾಗಿ ನಡೆದು ದಾಸ ಸಂಸ್ಕೃತಿಯನ್ನು ಕಟ್ಟಿಕೊಡಲು ಒಂದಾಗಿ ದುಡಿದಿರುವುದನ್ನು ಕಾಣಬಹುದಾಗಿದೆ.

*   *   *   *   *

ಈ. ಉತ್ತರಕಾಲೀನ ದಾಸಕೂಟದ ಸಾಂಸ್ಕೃತಿಕ ಆಯಾಮಗಳ ವೈಶಿಷ್ಟ್ಯ

ಹದಿನಾರನೇ ಶತಮಾನದ ದಾಸಕೂಟಕ್ಕೆ ವ್ಯಾಸಕೂಟದರ ನಿರ್ಲಕ್ಷ್ಯ, ತಿರಸ್ಕಾರ, ತಾತ್ಸಾರಗಳನ್ನು ಎದುರಿಸಿಕೊಂಡು ಬಾಳಬೇಕಾದ ಸವಾಲು ದೊಡ್ಡದಾಗಿತ್ತು ಎನ್ನುವುದನ್ನು ಇತಿಹಾಸ ತಿಳಿಸಿದಂತೆಯೇ ಉತ್ತರಕಾಲೀನ ದಾಸಕೂಟಕ್ಕೆ ಇಂಥ ಭೇದಭಾವಗಳ ಸವಾಲು ಕಾಡದೆಯೆ ತಮ್ಮ ಕಾಲದ ವ್ಯಾಸಕೂಟದವರ ಸ್ನೇಹಾಶೀರ್ವಾದದ ಬೆಂಬಲ, ಆಶ್ರಯಗಳು ದೊರೆತು ವ್ಯಾಸಕೂಟ ದಾಸಕೂಟಗಳವರು ಒಂದಾಗಿ ಸಂಸ್ಕೃತಿ ನಿರ್ಮಾಣದಲ್ಲಿ ಹೆಜ್ಜೆ ಹಾಕಿದರು ಎನ್ನುವುದೂ ತಿಳಿದುಬರುತ್ತದೆ. ಹೇಗೆ ವ್ಯಾಸತೀರ್ಥರು, ವಾದಿರಾಜರು ತಮ್ಮ ಕಾಲದ ದಾಸರುಗಳನ್ನು ಆದರಿಸಿ ಗೌರವಿಸಿ ಸ್ನೇಹಪರರಾಗಿ ಆಶ್ರಯ, ಪ್ರೋತ್ಸಾಹವಿತ್ತರೋ, ಅಂಥದ್ದೇ ಕಾಲವೊಂದು ಮರಳಿ ಪ್ರತ್ಯಕ್ಷವಾಯಿತೆಂಬಂತೆ ಉತ್ತರಕಾಲೀನ ಮಠಾಧಿಪತಿಗಳು ಅನೇಕರು ತಮ್ಮ ಕಾಲದಲ್ಲಿನ ದಾಸಕೂಟದವರನ್ನು ಆದರಿಸಿ ಸತ್ಕರಿಸಿ ಬೆಂಬಲ, ಪ್ರೋತ್ಸಾಹವಿತ್ತರು ಎನ್ನುವುದನ್ನು ಈ ಕಾಲ ಭಾಗದ ಸತ್ಯವಾಯಿತು. ಉತ್ತರಕಾಲೀನ ಮಠಾಧಿಪತಿಗಳಲ್ಲಿ ಸಂತ ಮನಸ್ಸೊಂದು ಹೀಗೆ ನಿರ್ಮಾಣವಾಗಿ ಹರಿದಾಸ ಸಂಸ್ಕೃತಿಯನ್ನು ಅದು ಉಳಿಸಿತು, ಬೆಳೆಸಿತು.

ಹೀಗಾಗಿ ಇಂಥ ಪ್ರೋತ್ಸಾಹದ ಕಾರಣದಿಂದಾಗಿಯೇ ಹರಿದಾಸರುಗಳಿಗೆ ಸುಭದ್ರವಾದ ಗೌರವ ಸ್ಥಾನವೊಂದು ಮಠಗಳಲ್ಲಿ ಖಚಿತವಾಗಿ ದೊರಕಿತು. ಮಠಗಳ ದೇವರ ಪೂಜೆ, ಆರಾಧನೆಯ ಕಾಲದಲ್ಲಿ ಸುಪ್ರಭಾತ, ಆರತಿ. ಶಯನ, ಸಂಗೀತಸೇವೆಗಳ ಸಂದರ್ಭಗಳಲ್ಲಿ ಕನ್ನಡ ಹಾಡುಗಳನ್ನು ಹರಿದಾಸರಿಂದ ಹಾಡಿಸುವ ಕ್ರಮ ಮತ್ತೆ ಮೊದಲಿಟ್ಟುಕೊಂಡಿತು. ಕೆಲವು ಮಠ, ದೇವಾಲಯಗಳಲ್ಲಿ ಅಷ್ಟಾವಧಾನ ಸೇವೆ ನಡೆಯುತ್ತಿದ್ದು ವೇದಶಾಸ್ತ್ರ, ಪುರಾಣ, ಗದ್ಯ, ಜ್ಯೋತಿಷ್ಯ, ಸಂಗೀತ ಮೊದಲಾದ ಸೇವೆಗಳ ಜೊತೆಗೆ ಹರಿದಾಸರುಗಳಿಂದ ವಿಶಿಷ್ಟ ಕ್ರಮಗಳ ಸೇವೆಯನ್ನೂ ಮಠಾಧಿಪತಿಗಳು ಕಲ್ಪಿಸಿಕೊಟ್ಟರು.

> "ಉಗಾಭೋಗ ಸೇವಾಪ್ರಿಯನೇ, ಉಗಾಭೋಗ ಸೇವೆಯನ್ನು ಕೇಳುವಂತವನಾಗು"
>
> [ಉಗಾಭೋಗ ಸೇವಾಪ್ರಿಯ, ಉಗಾಭೋಗ ಸೇವಾಮವಧಾರಯ]
>
> "ಸುಳಾದಿ ಸೇವಾಪ್ರಿಯನೇ, ಸುಳಾದಿ ಸೇವೆಯನ್ನು ಕೇಳುವಂಥವನಾಗು"
>
> [ಸುಳಾದಿ ಸೇವಾಪ್ರಿಯ, ಸುಳಾದಿ ಸೇವಾಮವಧಾರಯ]

ಹೀಗೆ ಅರ್ಚಕರು ದೇವರಿಗೆ ಹೇಳಿದನಂತರ ಹರಿದಾಸರು ಅಲ್ಲಿ ಉಗಾಭೋಗ, ಸುಳಾದಿಗಳನ್ನು ಹಾಡುವ ಕ್ರಮ ಜಾರಿಗೆ ಬಂದಿತು. ಇಷ್ಟಲ್ಲದೆ ನರ್ತನಸೇವೆ, ಹರಿವಾಣಸೇವೆಗಳಲ್ಲಿ ದಾಸರ ಪದಗಳನ್ನೇ ಹಾಡಲಾಗುತ್ತಿತ್ತು. ಅಂತೂ ಶ್ರೀಪಾದರಾಜರ ಅಂದಿನ ಕನಸು ಮತ್ತೆ ಈ ಕಾಲದಲ್ಲಿ ನನಸಾದುದು ಕಾಲಧರ್ಮದ ಗುಣವಾಗಿರಬಹುದು. ಹೀಗೆ ಮಠಗಳಲ್ಲಿ ಕನ್ನಡ ಕೀರ್ತನೆ ಸೇವೆಯನ್ನು ಸ್ಪಷ್ಟಸುರೂಪ ನೀಡಿ ಕ್ರಮಬದ್ಧಗೊಳಿಸಿದವರು ಪ್ರಾಣೇಶದಾಸರು ಎಂದು ವಿದ್ವಾಂಸರ ಅಭಿಪ್ರಾಯ.

ವರದೇಂದ್ರತೀರ್ಥರು ಬೃಂದಾವನಸ್ಥರಾದಮೇಲೆ ಗುರು ಪ್ರಾಣೇಶದಾಸರು, ಶ್ರೀಶ ಪ್ರಾಣೇಶದಾಸರು, ಮೋದವಿಠಲರು, ಆನಂದದಾಸರು, ವರದೇಶದಾಸರು ಇವರೆಲ್ಲ ಬೃಂಧಾವನದ ಸನ್ನಿಧಿಯಲ್ಲಿ ಕನ್ನಡದ ಹರಿಭಜನಾ ಪದ್ಧತಿಯನ್ನು ಪ್ರಾರಂಭಿಸಿಕೊಂಡರು. ಹೀಗೆ ಹರಿದಾಸರುಗಳ ಹಾಡು ಕೀರ್ತನೆಗಳಿಗೆ ನಾಡಿನಾದ್ಯಂತ ಆನುವು, ಗೌರವಗಳು ದೊರೆತು ಜನಪ್ರಿಯತೆ ಉಂಟಾಗಿದ್ದು ಮಠಾಧಿಪತಿಗಳ ಸ್ನೇಹಪರ ನಡಾವಳಿಯಿಂದ ವ್ಯಾಸತೀರ್ಥರ ಅಂದಿನ ಕನಸು ಹೀಗೆ ಇಷ್ಟು ಕಾಲದ ನಂತರ ಸಾಕಾರಗೊಂಡಿದ್ದು ವಿಶೇಷವಾಗಿದೆ.

ಎಲ್ಲಿ ಮಠ, ದೇಗುಲಗಳಿದ್ದವೋ ಅಲ್ಲಿ ಹರಿದಾಸರುಗಳ ಕೂಟ, ಸಂಚಾರ, ಗೀತ ನರ್ತನ ಸೇವೆ ಇವು ವ್ಯಾಪಕವಾಗಿ ನಡೆದು ಹರಿದಾಸ ಸಂಸ್ಕೃತಿಯು ಜನಗಳ ಮೇಲೆ ಮತ್ತೆ ಪ್ರಭಾವ ಬೀರಲು ಕಾರಣವಾಯಿತು. ಹರಿಪ್ರೀತಿಯ ಮನಸ್ಸೊಂದು ಹೀಗೆ ನಾಡಿನ ವ್ಯಾಸಕೂಟ ದಾಸಕೂಟಗಳ ಮೂಲಕವೇ ನಾಡಿನ ಜನಮನವನ್ನು ಗೆದ್ದಿತು, ಭಕ್ತಿಪಥ ಹೆದ್ದಾರಿಯಾಯಿತು.

ಹರಿದಾಸರುಗಳ ಸಾಂಸ್ಕೃತಿಕ ಆಯಾಮಗಳಿಗೆ ಮಠಾಧಿಪತ್ಯದಿಂದಲ್ಲದೆ ಆ ಕಾಲದ ರಾಜರುಗಳಿಂದಲೂ ಗೌರವ, ಪ್ರೋತ್ಸಾಹ ದೊರೆಯಿತು ಎನ್ನುವುದು ಗಮನಾರ್ಹ ಸಂಗತಿ ಗದ್ವಾಲದ ರಾಜರು, ಸವಣೂರಿನ ನವಾಬರು, ಮೈಸೂರಿನ ಅರಸರು, ಸುರಪುರದ ನಾಯಕರು, ಹಾವನೂರಿನ ಪಾಳೆಯಗಾರರು ಇವರಿಂದೆಲ್ಲ ಹರಿದಾಸರಿಗೆ ಆಶ್ರಯ, ಬೆಂಬಲ, ಸನ್ಮಾನ ದೊರೆಯಿತು. ಇಂಥ ದಿನಗಳಲ್ಲಿ ದಾಸಕೂಟ ಧೀಮಂತವಾಗಿ ತಲೆಎತ್ತಿ ಹಾಡಿ ನಲಿದಿದ್ದರೆ ಅಚ್ಚರಿಯೇನಿಲ್ಲ. ಜಗನ್ನಾಥದಾಸರು, ಪ್ರಾಣೇಶದಾಸರು, ಶ್ರೀದ ವಿಠಲರು, ಆನಂದದಾಸರು, ರಾಮದಾಸರು, ಶ್ರೀನಿವಾಸದಾಸರು ಇವರೆಲ್ಲ ರಾಜರುಗಳಿಂದ ಸನ್ಮಾನಿತರಾದವರೇ. ರಾಜಮರ್ಯಾದೆಯನ್ನು ಪಡೆದಂಥವರೇ ಎನ್ನುವುದು ಅಂದಿನ ದಾಸಕೂಟ ಸಂಸ್ಕೃತಿಯ ಹಿರಿಮೆ, ಔನತ್ಯಗಳ ಆಯಾಮವನ್ನು ಸೂಚಿಸುತ್ತದೆ.

ಮಠಾಧಿಪತಿಗಳಿಂದ, ರಾಜರುಗಳಿಂದ ಹರಿದಾಸರುಗಳು ಹೀಗೆ ಸನ್ಮಾನಿತರಾಗುತ್ತಿರುವಾಗ ಉಳಿದಂತೆ ಶಾಸ್ತ್ರ ಪಂಡಿತರುಗಳೆನಿಸಿಕೊಂಡವರೂ ಹರಿದಾಸರುಗಳನ್ನು ಗೌರವಿಸುವ ಪದ್ಧತಿಯನ್ನು ಬೆಳೆಸಿಕೊಂಡು ಬಂದದ್ದು ಇದೇ ಕಾಲದಲ್ಲಿ. ಎಲ್ಲೆಡೆಯೂ ಹರಿದಾಸರಿಗೆ ಮಾನ್ಯತೆ ದೊರೆಯುತ್ತ ಬಂದಿತು. ಹಿಂದಿನ ಕಾಲದಲ್ಲಿ ಪಂಡಿತರಾದವರು, ವ್ಯಾಸಕೂಟದ ಅನೇಕರು ಹರಿದಾಸರೆಂದರೆ ಮೂಗು ಮುರಿಯುತ್ತಿದ್ದಕಾಲ ಮರೆಯಾಗಿ ಹರಿದಾಸರುಗಳಾಗುವುದು ಏನೋ ವಿಶೇಷತೆ, ವಿಶಿಷ್ಟತೆ ಇದ್ದಲ್ಲಿ ಮಾತ್ರ ಎಂಬ ಮನೋಭಾವ ಕಾಣಿಸಿಕೊಂಡು ಬೆಳೆಯಿತು. ಇಂಥದ್ದೊಂದು ವಾತಾವರಣ ಗಟ್ಟಿಯಾಗಿ ನಿರ್ಮಾಣವಾದದ್ದು ಜಗನ್ನಾಥದಾಸರ ಕಾಲದಲ್ಲಿ. ಅಗ್ರ ಪಂಡಿತೋತ್ತಮರಾದ, ವಿದ್ವಾಂಸರಾದ ಶ್ರೀನಿವಾಸಾಚಾರ್ಯರಂಥವರು ದಾಸರಾದರೆಂದಾದ ಮೇಲೆ ಹರಿದಾಸರುಗಳನ್ನು ಅನಾದರಿಸುವುದಕ್ಕೆ ಸಾಧ್ಯವಿದೆಯೆ? ಶ್ರೀನಿವಾಸಾಚಾರ್ಯರಂಥ ಮಡಿವಂತಿಕೆಯ ವೈದಿಕ ವಿದ್ವಾಂಸಾಗ್ರಣಿ 'ಜಗನ್ನಾಥದಾಸ'ರಾಗಿ ಪರಿವರ್ತಿತರಾದುದು ಎನ್ನುವುದು ಹರಿದಾಸ ಸಂಸ್ಕೃತಿಯ ಮೇಲ್ಮೆಯನ್ನು ವೈದಿಕ ಪ್ರಪಂಚದಲ್ಲಿ ವಿಸ್ತರಿಸಿ ತೋರಿತು.

ಸುರಪುರದ ಆನಂದದಾಸರ ಕೃತಿಯೊಂದರಿಂದ ಯೋಗಿ ನಾರಾಯಣಾಚಾರ್ಯ, ರಾಯಚೂರು ಕೃಷ್ಣಾಚಾರ್ಯ, ಯಳವೇಲಿ ಹಯಗ್ರೀವಾಚಾರ್ಯ, ಹುಲಗಿಯ ನರಸಪ್ಪಾಚಾರ್ಯ, ಪರಿಹರದ ಭೀಮಾಚಾರ್ಯ, ಶ್ರೀಪಾದಪುತ್ರ ಶ್ರೀರಂಗದ ರಾಮಾಚಾರ್ಯ, ಸುರಪುರದ ರಾಜಾಚಾರ್ಯ, "ಹರಿದಾಸರಿಗೆ ಮಂದಿರವಾದ ಇಭರಾಂಪುರದಲ್ಲಿ ಮೆರೆವ ಕೃಷ್ಣಾಚಾರ್ಯ", ಆಲವಲೋಧ ಸತ್ಕುಲದೀಪರೆನಿಸಿದ ನಾನಾ ಪಂಡಿತರೆಲ್ಲ ಹರಿದಾಸರುಗಳನ್ನು ಆದರಿಸಿ ಸ್ನೇಹದಿಂದ ವರ್ತಿಸಿದರು ಎನ್ನುವ ದಾಖಲೆ ಸಿಗುತ್ತದೆ.

ಹರಿದಾಸರುಗಳಿಗೆ ಪಂಡಿತರುಗಳಿಂದ ಹೀಗೆ ಸನ್ಮಾನ, ಸಮಾನತೆ ದೊರೆಯುತ್ತ ಬಂದಂತೆ, ಮಠಾಧಿಪತಿಗಳ ಸ್ನೇಹಪರ ಆಶ್ರಯವೂ ನೆಲೆಯಾಗುತ್ತ ಬಂದಂತೆ, ವೈದಿಕರ ರೀತಿ, ನೀತಿ ಆಚಾರವಿಚಾರಗಳ ಪ್ರಭಾವ, ಪರಿಣಾಮಗಳು ಹರಿದಾಸರುಗಳ ಮೇಲೂ ಆಗುತ್ತ ಬಂದಿದ್ದು ಕಾಲದ ಸಹಜನಡೆಯೇ ಆಗಿದೆ. ದಾಸಕೂಟದವರ ಜನಮುಖೀ ನಿಲುವುಗಳು ನಿಧಾನವಾಗಿ ಈ ವೈದಿಕ ಪ್ರಪಂಚದ ಪ್ರಭಾವದಿಂದಾಗಿ ವೈದಿಕಮುಖೀ ನಿಲುವುಗಳಾಗಿ ಪರಿಣಾಮ ಹೊಂದುತ್ತ ಬಂದಿತು. ಸ್ನೇಹ, ಸಹವಾಸಗಳು ಯಾವಾಗಲೂ ಪರಸ್ಪರ ಕೊಡುಕೊಳ್ಳುವಿಕೆಯಿಂದ ದೂರವಾಗಿಯೇ ನಿಲ್ಲಲು ಸಾಧ್ಯವಾಗುವುದಿಲ್ಲ, ಸಾಧುವೂ ಅಲ್ಲ. ವೈದಿಕವಲಯದ ಮಡಿವಂತಿಕೆಯ ವಿಚಾರಗಳನ್ನು, ಆಚಾರಗಳನ್ನು ಸಮೀಪವರ್ತಿಗಳಾಗಿ ಕಾಣುತ್ತ ಬಂದ ಹರಿದಾಸರುಗಳಿಗೆ ಅರಿವಿದ್ದೋ, ಇಲ್ಲದೆಯೋ ನಿಧಾನವಾಗಿ ಅಂಥ ನಿಲುವುಗಳು ಪೂರ್ತಿ ಸರಿ ಎಂದಲ್ಲದಿದ್ದರೂ ತುಸುತುಸುವಾಗಿ ತಮ್ಮೊಳಗೂ ಸೇರಿಸಿಕೊಳ್ಳುತ್ತ ಬರಲು ಅವಕಾಶವಾಯಿತು. ಪಂಡಿತರ ನಡೆನುಡಿಗಳು, ವೈದಿಕ ವಾಙ್ಮಯ ವಿದ್ವಾಂಸಾಗ್ರಣಿಗಳ ಜ್ಞಾನಲೋಕದ ಪರಿಧಿಯ ಹರಹು, ವಿಸ್ತಾರತೆಗಳ ಅಗಾಧತೆ ಆಳಗಳು ಹರಿದಾಸರುಗಳ ಮೇಲೂ ಅಷ್ಟಿಷ್ಟು ಪ್ರಭಾವ ಬೀರಿದ್ದಿರಬೇಕು! ವ್ಯಾಸಕೂಟದ ಪಂಡಿತರುಗಳಿಗೂ, ದಾಸಕೂಟದ ಹರಿದಾಸರುಗಳಿಗೂ ಅಂಥಾ ಭಿನ್ನತೆಯೇನಿಲ್ಲ ಎಂದು ಸಾರುವ ಅನಿವಾರ್ಯತೆಯು ಜಗನ್ನಾಥದಾಸರಿಗೆ ಉಂಟಾಗಿತ್ತು. ಇದು ಅಂದಿನ ಸಾಮಾಜಿಕ ಸ್ಥಿತಿಗತಿಗಳ ಒತ್ತಡದಿಂದ ಅವರಿಗೆ ಬಂದ ಅನಿವಾರ್ಯತೆಯಾಗಿ "ಹರಿಕಥಾಮೃತ ಸಾರ"ದಂಥ ವಿದ್ವತ್ಪೂರ್ಣ ಮೇರು ಕನ್ನಡ ಗ್ರಂಥದ ರಚನೆಯಲ್ಲಿ ಅದು ಪರ್ಯವಸನಗೊಂಡಿತು.

ವೈದಿಕಮುಖೀ ನಿಲುವುಗಳು, ಶಾಸ್ತ್ರಗಳು ಏನು ಹೇಳುತ್ತವೇಯೋ, ದಾಸರ ಹಾಡುಗಳೂ ಅದನ್ನೇ ಹೇಳುತ್ತವೆ. ಮಧ್ವತತ್ತ್ವಜ್ಞಾನ ಏನು ಹೇಳುತ್ತದೋ ಅದನ್ನೇ ಹರಿದಾಸರುಗಳು ತಮ್ಮ ನಡೆನುಡಿಗಳಲ್ಲೂ, ಹಾಡುಗಳಲ್ಲೂ ಅಳವಡಿಸಿಕೊಂಡಿದ್ದಾರೆ ಎನ್ನುವುದನ್ನು ಸಮಾಜಕ್ಕೂ, ವೈದಿಕ ಪ್ರಪಂಚಕ್ಕೂ ಸಾರಿ ತೋರಿಸಲೇಬೇಕಾಗಿ ಬಂದಂಥ ಒಂದು ಅನಿವಾರ್ಯತೆಯಲ್ಲಿ "ಹರಿಕಥಾಮೃತ ಸಾರ"ವನ್ನು ಅವರು ರಚಿಸಿದರು.

ವಿದ್ವತ್ ಪ್ರಪಂಚವಾಗಿರುವ ಸಂಸ್ಕೃತ ಭಾಷೆಗೆ ಹರಿದಾಸರುಗಳ ಕನ್ನಡ ಭಾಷೆಯು ಏನೂಕಡಿಮೆಯಿಲ್ಲವೆಂದು ತೋರಿಸಿಕೊಡುವುದೂ ಜಗನ್ನಾಥದಾಸರ ಉದ್ದಿಶ್ಯವಾಗಿತ್ತು ಎಂತಲೇ ಅವರು ಇಂಥದ್ದೊಂದು ಬುದ್ಧಿಭಾವಗಳ ಸಂಗಮಕೃತಿಯನ್ನು ರಚಿಸಿದ್ದಿರಬೇಕು, ಏನೇ ಇರಲಿ, ಕನ್ನಡಕ್ಕೊಂದು ತತ್ತ್ವಜ್ಞಾನದ ಮೇರುಕೃತಿ ಹೀಗೆ ಸಂದಿತು.

ಮುಂದಿನ ಮಾಧ್ವ ಜನಾಂಗದವರು, ಅಂದಿನ ವ್ಯಾಸಕೂಟದ ಪಂಡಿತರು, ದಾಸಕೂಟದ ಹರಿದಾಸರು ಎಲ್ಲರಿಗೂ ಈ ಕೃತಿಯು ತುಂಬ ಪ್ರಿಯವಾಯಿತು. ವ್ಯಾಸಕೂಟ, ದಾಸಕೂಟದವರ ಗೌರವ, ಮನ್ನಣೆಗಳನ್ನು ಸಾಮಾನ್ಯ ಜನರ ಭಯ ಭಕ್ತಿ ಪೂರಿತ ಶ್ರದ್ಧೆಗಳನ್ನು ಈ ಕೃತಿಯು ಚಾಚಿಕೊಂಡಿತು.

ಹರಿಕಥಾಮೃತಸಾರವು ಹೀಗೊಂದು ಸಮಾಜದ ವ್ಯಾಸದಾಸಕೂಟಗಳ ಕೊಡಕೊಳ್ಳುವಿಕೆಯ ಸಂಧಿಗ್ದತೆಯ ಕಾಲದಲ್ಲಿ ಅನಿವಾರ್ಯತೆಯಿಂದ ಹುಟ್ಟಿಕೊಂಡಿತಾದರೂ ಇದೇ ಕೃತಿ ಎರಡೂ ಕೂಟಗಳನ್ನು ಮತ್ತಷ್ಟು ಹತ್ತಿರಾಗಿಸುವ ಕೆಲಸ ಮಾಡಿತೆನ್ನುವುದೂ ಸತ್ಯವೇ. ವ್ಯಾಸಕೂಟ ದಾಸಕೂಟಗಳನ್ನು ಬೆಸೆಯುವಂಥ ಪರಿಣಾಮಗಳನ್ನು ಈ ಕೃತಿಯು ಉಂಟುಮಾಡಿತು. ಅದರಲ್ಲಿ ಹೇಳಲಾದ ಜಟಿಲ ಶಾಸ್ತ್ರ ಪ್ರಮೇಯಗಳು ವ್ಯಾಸಕೂಟದವರಿಗೂ ಪ್ರಿಯವಾದವು, ದಾಸಕೂಟದವರೂ ಅದನ್ನು ಕಣ್ಣಿಗೊತ್ತಿಕೊಂಡು ಅದರಲ್ಲಿ ಹೇಳಲಾದ ಆಚಾರವಿಚಾರಗಳನ್ನು ಅನುಸರಿಸಿ ಬಾಳುವ ನಿಲುವುಗಳತ್ತ ವಾಲಿಕೊಂಡರು. ವ್ಯಾಸಕೂಟದೊಂದಿಗೆ ದಾಸಕೂಟದ ವಿಲೀನತೆಗೆ ಈ ಕೃತಿಯೂ ಹೀಗೆ ಮುಖ್ಯ ಕಾರಣವಾಯಿತು.

ಉತ್ತರಕಾಲೀನ ದಾಸಕೂಟವು ಮುಖ್ಯವಾಗಿ ತಲೆಎತ್ತಿದ್ದು ಮಂತ್ರಾಲಯದ ರಾಘವೇಂದ್ರ ಯತಿಗಳ ಕಣ್ಣಳತೆಯ ಪ್ರದೇಶದಲ್ಲಿ, ಅವರ ಪ್ರೋತ್ಸಾಹ ಪ್ರೇರಣೆಯಲ್ಲಿ. ಇದೇ ಮಠದ ಪರಂಪರೆಯ ಯತಿಗಳ ಪ್ರಭಾವ ಪ್ರೇರಣೆಗಳಲ್ಲಿ ಅದು ಮತ್ತೆ ಸಾಹಿತ್ಯ ಸಂಗೀತ ಸೇವೆಯ ಮೂಲಕವೇ ಸಮಾಜಸೇವೆ ಮಾಡಿತು, ಸಮಾಜವನ್ನು ತಿದ್ದುವ ಕೆಲಸ ಮಾಡಿತು, ಸಮಾಜಕ್ಕೆ ಮತ್ತೆ ಸುಸಂಸ್ಕೃತವಾದ, ನೈತಿಕ ಮೌಲ್ಯಗಳಿಂದೊಡಗೂಡಿದ ಪ್ರಭಾವಳಿಯನ್ನು ನೀಡುವ ಕೆಲಸಮಾಡಿತು. ಆದರೆ ವ್ಯಾಸಕೂಟದವರ ಜೊತೆ ಬೆರೆತು ಮಾಧ್ವತತ್ತ್ವ ಪ್ರಮೇಯಗಳನ್ನು ತುಸು ಹೆಚ್ಚಾಗಿಯೇ ತನ್ನ ಕನ್ನಡ ಕೃತಿಗಳಲ್ಲಿ ಹೊಂದಿಸಿ ಸಾರಿ ಹೇಳಿತು. ಇದು ಕಾಲವೇ ತಂದ ಅನಿವಾರ್ಯತೆಯೂ ಆಗಿದ್ದಿರಬೇಕು. ಹೆಚ್ಚಿನ ಸಂಪರ್ಕ ತಂದ ಪ್ರಭಾವವೂ ಆಗಿದ್ದಿರಬೇಕು, ಪುರಂದರದಾಸರ ಕಾಲದಲ್ಲಿ ಮಾಧ್ವತತ್ತ್ವಗಳನ್ನು ಹಿತಮಿತವಾಗಿ ಮಾನವಧರ್ಮದ ಪ್ರತೀಕವಾಗಿ ಸಾರಿದ್ದ ದಾಸಕೂಟವು ಉತ್ತರಕಾಲೀನ ಸಂದರ್ಭದಲ್ಲಿ ತುಸು ಹೆಚ್ಚಾಗಿ ಅಳವಡಿಸಿಕೊಂಡೇ ಆದರೂ ಮಾಧ್ವತತ್ತ್ವಗಳ ಮೂಲಕವೇ ಮಾನವಧರ್ಮವನ್ನೇ ಪ್ರಚಾರಮಾಡಿತು ಎನ್ನುವುದು ಕೂಡ ಸತ್ಯ.

ಭಕ್ತಿ ತತ್ತ್ವವನ್ನು ಮೂಲನೆಲೆಗಟ್ಟನ್ನಾಗಿ ಮಾಡಿಕೊಂಡು, ಮಧ್ವಾಚಾರ್ಯರು ತೋರಿದ ಜ್ಞಾನ, ಭಕ್ತಿ ಮಾರ್ಗಗಳಲ್ಲಿ ಮುನ್ನಡೆದ ವ್ಯಾಸಕೂಟ, ದಾಸಕೂಟದ ಪ್ರಮುಖರು ಹದಿನಾರನೇ ಶತಮಾನದಿಂದ ಹಿಡಿದು ಹದಿನೆಂಟು, ಹತ್ತೊಂಬತ್ತನೆಯ ಶತಮಾನದ ಆದಿಕಾಲದವರೆಗೂ ಸಮಾಜವನ್ನು ನೈತಿಕ ಮೌಲ್ಯಗಳಲ್ಲಿ ಮುನ್ನಡೆಸಿದ ಮಾರ್ಗದರ್ಶಕರಾಗಿ, ಸಂಗೀತ ಸಾಹಿತ್ಯಗಳಿಂದೊಡಗೂಡಿದ ಸುಸಂಸ್ಕೃತ ಸಮಾಜ ನಿರ್ಮಾಣಕ್ಕಾಗಿ ದುಡಿದವರಾಗಿ ಕನ್ನಡನಾಡು–ನುಡಿಗೆ ಸಲ್ಲಿಸಿರುವ ಕೊಡುಗೆಯನ್ನು ಎಂದಿಗೂ ಕನ್ನಡಿಗರು ಮರೆಯುವಂತಿಲ್ಲ ಹಾಗೂ ಈ ವಿಶಿಷ್ಟ ಸುಸಂಸ್ಕೃತಿಯನ್ನು ತೊರೆಯುವಂತೆಯೂ ಇಲ್ಲ.

ದೇವರನ್ನು ಪ್ರೀತಿಸುವುದೇ ಭಕ್ತಿ, ಈ ಭಕ್ತಿ, ಈ ಪ್ರೀತಿ ಮನುಷ್ಯನಾದವನಿಗೆ ಬೇಕು. ಏಕೆಂದರೆ 'ಭಕ್ತಿ' ಮೂಢನಂಬಿಕೆಯಲ್ಲ, ಮೌಢ್ಯಸಂಪ್ರದಾಯಗಳ ಆಚರಣೆಯೂ ಅಲ್ಲ. ಭಕ್ತಿ ಎನ್ನುವುದು ಎಲ್ಲ ಸದಾಚಾರ, ಸನ್ನಡತೆ, ಪರಿಶುದ್ಧತೆಗಳ ಮೂಲಕ ಭಗವದ್ ಶಕ್ತಿಯನ್ನು ತಲುಪುವ ಹೃದಯವಂತಿಕೆಯ ಹಾದಿ ಎನ್ನುವುದನ್ನು ತೋರಿಸಿಕೊಟ್ಟವರು, ಸಾರಿದವರು, ಹಾಗೆಯೇ ಬಾಳಿ ಬದುಕಿ ತೋರಿದವರು ಈ ವ್ಯಾಸಕೂಟದ ಪ್ರಮುಖ ಯತಿವರೇಣ್ಯರುಗಳು ಹಾಗೂ ದಾಸಕೂಟದ ಪ್ರಮುಖ ಹರಿದಾಸರುಗಳು ಎಂಬ ಕಾರಣಕ್ಕಾಗಿ ಅವರ ಜೀವನ, ಕೃತಿಗಳನ್ನು ಪರಿಚಯಿಸಿಕೊಳ್ಳುವುದು, ಅರ್ಥೈಸಿಕೊಳ್ಳುವುದು ಇಂದಿನ ವೈಜ್ಞಾನಿಕವೆನ್ನಿಸಿರುವ ಈ ವೇಗದ ಯುಗಕ್ಕೂ ಕೂಡ ಅತ್ಯಗತ್ಯವಾಗಿದೆ, ಅನಿವಾರ್ಯವು ಕೂಡ ಆಗಿದೆ.

* * * * *

<u>ಅಡಿಟಿಪ್ಪಣಿಗಳು</u> :

೧. ಬೆಟಗೇರಿ ಕೃಷ್ಣಶರ್ಮ "ಕರ್ನಾಟಕ ಜನಜೀವನ".

೨. ಡಾ॥. ಕೆ.ಜಿ. ಶಾಸ್ತ್ರಿ "ದ್ವಿತೀಯ ಘಟ್ಟದ ಹಿನ್ನಲೆ" ಎಂಬ ಉಪನ್ಯಾಸದಲ್ಲಿ. ಅವರ "ವಿಜಯನಗರ ಸಾಮ್ರಾಜ್ಯದ ಪತನಾನಂತರದ ಹರಿದಾಸ ಸಾಹಿತ್ಯ" –ಪ್ರೊ॥ವಸಂತ ಕುಷ್ಟಗಿ, ಪ್ರಸಾರಾಂಗ, ಹಂಪಿ.

೩. ದ್ವೈತವೇದಾಂತವಾಙ್ಮಯ ಹಾಗೂ ಇತಿಹಾಸ – ಡಾ॥. ಬಿ.ಎನ್.ಕೆ ಶರ್ಮಾ ಪುಟ ೪೧೭.

೪. ದ್ವೈತವೇದಾಂತ ವಾಙ್ಮಯ ಹಾಗೂ ಇತಿಹಾಸ –ಡಾ॥. ಬಿ.ಎನ್.ಕೆ ಶರ್ಮಾ ಪುಟ ೪೧೭.

೫. ದಾಸಸಾಹಿತ್ಯ ಮತ್ತು ಸಂಸ್ಕೃತಿ–ಸಾ.ಕೃ. ರಾಮಚಂದ್ರರಾವ್

೬. ವಿಜಯಸಂಪದ–ಜನವರಿ ೨೦೦೭ ರ ಸಂಚಿಕೆ.

೭. ೧೮೬೬ ರಲ್ಲಿ ಬಂದ ಮಾನ್ವಿ ಗುಂಡಾಚಾರ್ಯರು 'ಶಾಮ ಸುಂದರ ವಿಠಲ' ಅಂಕಿತದಿಂದ ಕೀರ್ತನೆ, ಬಯಲಾಟಗಳನ್ನು ರಚಿಸಿ ಪ್ರಖ್ಯಾತರಾಗಿದ್ದಾರೆ.

೮. "ವಿಜಯದಾಸರ ಕಂಕಣಾಕಾರ ಸುಳಾದಿ" – ಬನ್ನಂಜೆ ಗೋವಿಂದಾಚಾರ್ಯ.

೯. ಸಮ್ಮೇಳನಾಧ್ಯಕ್ಷರ ಭಾಷಣ– ದಾಸಸಂತ ಸಾಹಿತ್ಯ ರಾಷ್ಟ್ರೀಯ ಸಮ್ಮೇಳನ, ಪಂಢರಪುರ, ಮಹಾರಾಷ್ಟ್ರ.

ಅಧ್ಯಾಯ –೬

ಉಪಸಂಹಾರ

ವ್ಯಾಸಕೂಟ ಮತ್ತು ದಾಸಕೂಟದ ಕುರಿತು ಕನ್ನಡದಲ್ಲಿ ಒಂದು ಸಮಗ್ರ ಅಧ್ಯಯನವು ನಡೆದಿರಲಿಲ್ಲ. ವ್ಯಾಸಕೂಟ ಮತ್ತು ದಾಸಕೂಟದ ಕುರಿತಾದ ವ್ಯಾಖ್ಯಾನಗಳೇ ಇನ್ನೂ ಸಮರ್ಪಕವಾಗಿ ಬಂದಿರಲಿಲ್ಲ. ಅಂಥ ಒಂದು ಸಮರ್ಪಕ ವ್ಯಾಖ್ಯಾನವನ್ನು ಪ್ರಾರಂಭ ಮಾಡುವುದು ಈ ಅಧ್ಯಯನದ ಮೂಲ ಉದ್ದೇಶಗಳಲ್ಲಿ ಒಂದಾಗಿತ್ತು. ಅದು ಈ ಪ್ರಬಂಧದ ಮೂಲಕ ಸಾಧ್ಯವಾಗಿದೆ.

ವ್ಯಾಸಕೂಟ ಮತ್ತು ದಾಸಕೂಟ ಈ ಎರಡಕ್ಕೂ ನಡುವೆ ಬಂದ ವಿರೋಧಗಳು ಯಾವುವು? ಎರಡರ ನಡುವಿನ ಅವಿನಾ ಸಂಬಂಧಗಳು ಯಾವುವು? ಈ ಎರಡೂ ಕೂಟಗಳ ತಾತ್ತ್ವಿಕ ಪ್ರಶ್ನೆಗಳು ಯಾವುವು? ವ್ಯಾಸಕೂಟ ಮತ್ತು ದಾಸಕೂಟದವರಲ್ಲಿ ಬಂದಂಥ ಪರಸ್ಪರ ಭಿನ್ನಾಭಿಪ್ರಾಯಗಳು, ಸ್ವಮತ ಮಂಡನೆಗಳು, ಪರಮತ ಖಂಡನೆಗಳಲ್ಲಿ ಅವರುಗಳು ಸಾಗಿದ ರೀತಿ ಇವುಗಳನ್ನು ಇದುವರೆಗೆ ಸಮಗ್ರವಾಗಿ ಯಾರೂ ಅಧ್ಯಯನ ನಡೆಸಿರಲಿಲ್ಲ. ಅದು ಈ ಪ್ರಬಂಧದ ಮೂಲಕ ಆಗು ಮಾಡಿದೆ. ಹೀಗಾಗಿ ವ್ಯಾಸಕೂಟದವರ ಹಿರಿಮೆಯನ್ನಾಗಲೀ, ದಾಸಕೂಟದವರ ಹಿರಿಮೆಯನ್ನೇ ಆಗಲೀ ಅಥವಾ ದಾಸಕೂಟ ಮತ್ತು ವ್ಯಾಸಕೂಟದವರ ಕೆಲವು ಇತಿಮಿತಿಗಳನ್ನಾಗಲೀ ತಿಳಿಯುವುದಕ್ಕೆ ಸಾಧ್ಯವಾಗದೇ ಹೋಗಿತ್ತು. ಅದು ಪೂರೈಸಬೇಕೆಂಬ ಹಿನ್ನಲೆಯಿಂದ ಈ ಅಧ್ಯಯನ ಸಾಗಿದೆ. ಈ ಹಿನ್ನೆಲೆಯಲ್ಲಿ ವ್ಯಾಸಕೂಟ ಮತ್ತು ದಾಸಕೂಟವನ್ನು ಪರಸ್ಪರ ಪಕ್ಕದಲ್ಲಿಟ್ಟು ನೋಡುವಂಥ ಉದ್ದೇಶವನ್ನು ಈ ಅಧ್ಯಯನದ ಮೂಲಕ ಸ್ಪಷ್ಟಗೊಳಿಸಿದೆ.

ಇದುವರೆಗೂ ದಾಸಕೂಟದ ಕುರಿತಾಗಿ ಹೆಚ್ಚಿನ ಅಧ್ಯಯನಗಳು ನಡೆದಿದ್ದವು. ಆದರೆ ವ್ಯಾಸಕೂಟದ ಕುರಿತಾಗಿ ಹೆಚ್ಚಿನ ಅಧ್ಯಯನಗಳು ನಡೆದಿರಲಿಲ್ಲ ಎಂಬುದು ಗಮನಾರ್ಹ ಸಂಗತಿ. ಇಷ್ಟು ಮಾತ್ರವಲ್ಲ, ಒಂದರೊಡನೆ ಮತ್ತೊಂದನ್ನು ಇರಿಸಿ ನಡೆದ ಅಧ್ಯಯನವು ಕನ್ನಡದಲ್ಲಿ ಆಗಿಲ್ಲವಾದುದರಿಂದ ಪ್ರಸ್ತುತ ಅಧ್ಯಯನವು ಅಂಥದ್ದೊಂದು ಆಮೂಲಾಗ್ರ ಪರಿಶೋಧನೆಯ ಪ್ರಯತ್ನವನ್ನು ನಡೆಸಿದೆ.

ಕನ್ನಡನಾಡಿನಲ್ಲಿ ವ್ಯಾಸಕೂಟ ಎಂದರೇನು? ವ್ಯಾಸಕೂಟ ದಾಸಕೂಟದ ಜೊತೆ ಯಾಕೆ ಹೇಗೆ ಸೇರಿಕೊಳ್ಳುತ್ತದೆ? ಅಥವಾ ದಾಸಕೂಟಕ್ಕಿಂತ ಹೇಗೆ ವಿಭಿನ್ನ ಮಾರ್ಗದಲ್ಲಿ ನಿಲ್ಲುತ್ತದೆ? ಪರಸ್ಪರ ಈ ಎರಡೂ ಕೂಟಗಳಲ್ಲಿ ಭಿನ್ನತೆ, ಕಲಹ ಯಾಕಾಗಿ? ಆ ಕಲಹವಾದರೂ ಯಾವುದು? ದಾಸಕೂಟವು ವ್ಯಾಸಕೂಟದಿಂದ ಬಿಡಿಸಿಕೊಂಡು ಭಿನ್ನವಾಗಿ ನಡೆದ ದಾರಿಗಳು ಯಾವುವು? ಇವೆಲ್ಲ ಅಸ್ಪಷ್ಟವಾಗಿತ್ತು. ಆ ದಾರಿಗಳನ್ನೆಲ್ಲಾ ಒಟ್ಟಾಗಿ ಹಿಡಿಯಬೇಕಾದ ಪ್ರಯತ್ನದ ಅಗತ್ಯವಿತ್ತು. ಇವೆಲ್ಲವನ್ನು ಒಳಗೊಂಡ ಸಮಗ್ರ ವಿವರಣೆಯನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಭೌಗೋಳಿಕ, ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಹಿನ್ನಲೆಯಲ್ಲಿ ವ್ಯಾಸಕೂಟ, ದಾಸಕೂಟದವರ ಸಾಧನೆಗಳನ್ನು, ಕೆಲಸಗಳನ್ನು ನೋಡುವುದು ಕೂಡ ಈ ಅಧ್ಯಯನದ ಉದ್ದೇಶವಾಗಿದ್ದು ಅದು ಇಲ್ಲಿ ಸಫಲವಾಗಿದೆ.

ವ್ಯಾಸಕೂಟದ ಪ್ರಮುಖ ಯತಿವರೇಣ್ಯರುಗಳಾಗಲೀ, ದಾಸಕೂಟದ ಪ್ರಮುಖ ಹರಿದಾಸರುಗಳಾಗಲೀ ನಾಡಿನ ವಿಶಿಷ್ಠ ಸುಸಂಸ್ಕೃತಿ ರೂಪುಗೊಳ್ಳಲು ಮುಖ್ಯ ಕಾರಣರಾಗಿದ್ದಾರೆ. ಸಂಗೀತ–ಸಾಹಿತ್ಯ ಬೆರೆತ ಈ ಮಾತೃಭಾಷೆಯಲ್ಲಿನ ಅವರ ಸಾಧನೆಗೆ ಮೂಲ ನೆಲೆಗಟ್ಟೇ ಅವರ ಹೃದಯದಲ್ಲಿನ 'ಹರಿಭಕ್ತಿ'ಯಾಗಿದೆ. ದೈವಪ್ರೀತಿಯೇ ಅವರ ಪ್ರಧಾನ ಸ್ಥಾಯಿಭಾವವಾಗಿದೆ.

ಹೀಗಾಗಿ, ಭಕ್ತಿತತ್ತ್ವದ ಹಿನ್ನೆಲೆಯನ್ನು ಕುರಿತಾದ ವಿವೇಚನೆಯಿಂದಲೇ ಈ ಅಧ್ಯಯನ ಪ್ರಾರಂಭಗೊಳ್ಳುತ್ತದೆ. ವ್ಯಾಸಕೂಟ ಮತ್ತು ದಾಸಕೂಟದ ಮೂಲಸ್ಥಾಯಿಭಾವ ಭಕ್ತಿಯೇ ಆಗಿದೆ. "ಭಕ್ತಿ" ತತ್ತ್ವದ ವಿಕಾಸಪಥವೇನು? ಭಕ್ತಿಪಥದಲ್ಲಿ ಕರ್ನಾಟಕದ ಸಾಧನೆ, ಆಗುಹೋಗುಗಳೇನು? ಎನ್ನುವುದನ್ನೆಲ್ಲ ಸ್ಥೂಲವಾಗಿ ಪ್ರಾರಂಭಿಕ ಅಧ್ಯಾಯದಲ್ಲಿ ವಿವೇಚಿಸಲಾಗಿದೆ. ಈ ಅಧ್ಯಯನವು ೧೬ನೆಯ ಶತಮಾನದಲ್ಲಿ ಆರಂಭಗೊಂಡ "ವ್ಯಾಸಕೂಟ ಮತ್ತು ದಾಸಕೂಟ"ಗಳ ಕುರಿತಾಗಿ ಇರುವುದರಿಂದ ಈ ವ್ಯಾಸಕೂಟ ದಾಸಕೂಟಗಳಿಗೆ ಮೂಲತಃ ಭಕ್ತಿಪಥವನ್ನು ತೋರಿಸಿಕೊಟ್ಟ ೧೩ನೆಯ ಶತಮಾನದಲ್ಲಿ ಬಂದ ಮಧ್ವಾಚಾರ್ಯರನ್ನು ಕುರಿತಾದ ವಿಚಾರಗಳನ್ನು ಕೂಲಂಕಷವಾಗಿ ಇಲ್ಲಿ ವಿವೇಚಿಸಲಾಗಿದೆ. ವ್ಯಾಸಕೂಟದ ಪ್ರಮುಖರಾದ ವ್ಯಾಸತೀರ್ಥರು, ಅವರ ಗುರುಗಳಾದ ಶ್ರೀಪಾದರಾಜರು, ಮುಂದೆ ಬಂದ ವಾದಿರಾಜರು ಇವರೆಲ್ಲರೂ ಮಾಧ್ವಪೀಠದ ಯತಿಗಳೇ ಆಗಿರುವುದರಿಂದಲೂ, ಇವರುಗಳಿಂದ ಪ್ರೇರೇಪಿತರಾಗಿ ಸಾಗಿದ ದಾಸಕೂಟದವರಿಗೂ ಮಧ್ವಮತದ ತಿರುಳುಗಳೇ ಬೆಳಕಾಗಿದ್ದರಿಂದಲೂ ಮಧ್ವಾಚಾರ್ಯರ ಬದುಕು, ಬರಹ, ಬೋಧನೆಗಳನ್ನು ಅಧ್ಯಯನವು ಒಳಗೊಂಡಿದೆ. ಮಧ್ವರು ಜನಿಸುವ ಕಾಲದಲ್ಲಿನ ದೇಶದ ಸ್ಥಿತಿಗತಿಗಳು ಏನಿದ್ದವು ಎನ್ನುವುದರ ಸ್ಥೂಲ ನೋಟವು ಪ್ರಾರಂಭದ ಹಲವು ಅಧ್ಯಾಯಗಳ ಮುಖ ಚರ್ಚೆಯಾಗಿದೆ.

ದಾಸಸಾಹಿತ್ಯದ ಉಗಮವೆಲ್ಲಿ? ಎಂದು? ಎನ್ನುವುದನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಶ್ರೀಪಾದರಾಜರೇ ದಾಸಸಾಹಿತ್ಯ ಪ್ರವರ್ತಕರೆಂಬ ನಿಲುಗಡೆಗೆ ಬರಲಾಗಿದೆ. ಹರಿದಾಸ ಪಂಥದ ಪ್ರವರ್ತಕರಾದ ಶ್ರೀಪಾದರಾಜರ ಬದುಕು–ಬರಹಗಳನ್ನು ಸವಿವರವಾಗಿಯೇ ಈ ನಿಬಂಧದಲ್ಲಿ ಅಧ್ಯಯನ ಮಾಡಲಾಗಿದೆ. ಕನ್ನಡಭಾಷೆಯಲ್ಲಿ ದಾಸಸಾಹಿತ್ಯ ರಚಿಸಿ, ಹಾಡಿ, ಹಾಡಿಸಲು ಅವರು ಜೀವನದಲ್ಲಿ ಪಡೆದ ಪ್ರಭಾವ, ಪ್ರೇರಣೆಗಳು ಏನಿದ್ದಿರಬಹುದು? ಅವರ ಜೀವಿತಾವಧಿಯ ಕಾಲದ ಚಾರಿತ್ರಿಕ ಹಿನ್ನೆಲೆಗಳೇನಿದ್ದಿರಬಹುದು? ಇವೆಲ್ಲವನ್ನೂ ಒಳಗೊಂಡಂತೆ ಶ್ರೀಪಾದರಾಜರ ಕೃತಿಗಳೆಡೆ ಕಿರುನೋಟವನ್ನೂ ಹರಿಯಿಸಿ ಕೃತಿಗಳಲ್ಲಿನ ಸಾರವನ್ನು ಬೇರೆ ಬೇರೆ ಶೀರ್ಷಿಕೆಗಳ ಕೆಳಗಿರಿಸಿಕೊಂಡು ಅಭ್ಯಸಿಸಲಾಗಿದೆ.

ಎರಡನೆಯ ಅಧ್ಯಯನವು "ಚಾರಿತ್ರಿಕ ವ್ಯಾಖ್ಯಾನಗಳು" ಎಂಬ ಶೀರ್ಷಿಕೆಯಲ್ಲಿ ವ್ಯಾಸಕೂಟ ಮತ್ತು ದಾಸಕೂಟಗಳ ಹುಟ್ಟು ಮತ್ತು ಬೆಳವಣಿಗೆಯನ್ನು ಕೂಲಂಕಷವಾಗಿ ವಿವೇಚಿಸಲಾಗಿದೆ. ವ್ಯಾಸಕೂಟ ದಾಸಕೂಟಗಳು ಆವಿಷ್ಕಾರಗೊಂಡಿದ್ದು ಶ್ರೀಪಾದರಾಜರ ಶಿಷ್ಯರಾದ ಶ್ರೀವ್ಯಾಸತೀರ್ಥರ ಕಾಲದಲ್ಲಿ ಹಾಗೂ ಅವರ ಪ್ರೋತ್ಸಾಹ, ಪ್ರೇರಣೆಗಳಲ್ಲಿ. ಹೀಗಾಗಿ ವ್ಯಾಸತೀರ್ಥರ ಬದುಕನ್ನು, ಸಾಧನೆಯನ್ನು ಆಮೂಲಾಗ್ರವಾಗಿ ಅಭ್ಯಸಿಸಲಾಗಿದೆ. ಶ್ರೀಪಾದರಾಜರ ಮೇಲ್ಪಂಕ್ತಿಯನ್ನು ಅನುಸರಿಸಿ ವ್ಯಾಸತೀರ್ಥರು ರಚಿಸಿದ ಕನ್ನಡ ಕೃತಿಗಳನ್ನು ಸಂಕ್ಷಿಪ್ತ ರೀತಿಯಲ್ಲೇ ಆದರೂ ಹೃದ್ಗತವಾಗಿ ಇಲ್ಲಿ ಅಧ್ಯಯನ ಮಾಡಲಾಗಿದೆ. ವ್ಯಾಸತೀರ್ಥರ ಬದುಕಿನ ಕಾಲದ ರಾಜಕೀಯ, ಚಾರಿತ್ರಿಕ ಮುಖ್ಯಾಂಶಗಳನ್ನೂ ಕ್ರೋಢೀಕರಿಸಿಕೊಳ್ಳಲಾಗಿದೆ. ವ್ಯಾಸತೀರ್ಥರು ಅಂದಿನ ರಾಜಕೀಯ ಕ್ಷೇತ್ರದಲ್ಲೂ ತಮ್ಮ ನೈತಿಕ ವರ್ಚಸ್ಸನ್ನು ಬೀರಿದವರು. ತಮ್ಮ ಮಠವನ್ನು ಅಂದಿನ ಅತಿ ದೊಡ್ಡ ವಿದ್ಯಾಕೇಂದ್ರವನ್ನಾಗಿ ಪರಿವರ್ತಿಸಿದವರು. ವ್ಯಾಸಕೂಟ ದಾಸಕೂಟವನ್ನು ಕಟ್ಟಿ ಬೆಳೆಯಿಸಿದವರು. ಕನ್ನಡ ನಾಡಿಗೆ ಅವರ ಬಹುಮುಖಿ ಸೇವೆ ಸಂದಿದೆ. ವ್ಯಾಸತೀರ್ಥರೆಂಬ ಮಹಾನ್ ವ್ಯಕ್ತಿತ್ವವಿಲ್ಲದಿದ್ದಲ್ಲಿ ಬಹುಶಃ ಪುರಂದರದಾಸರು, ಕನಕದಾಸರು ಇಂಥ ಭಕ್ತ ಸಂತ ವ್ಯಕ್ತಿತ್ವಗಳೂ ಈ ನಾಡಿಗೆ ಲಭ್ಯವಿರುತ್ತಿರಲಿಲ್ಲ. ಈ ಕಾರಣಗಳಿಗಾಗಿ ವ್ಯಾಸತೀರ್ಥರ ಬಗ್ಗೆ ಆಮೂಲಾಗ್ರ ವಿವರಗಳನು ಈ ನಿಬಂಧದ ಮೂಲಕ ವ್ಯಾಖ್ಯಾನಿಸಿ, ವಿವರಿಸಲಾಗಿದೆ.

ವ್ಯಾಸತೀರ್ಥರ ಶಿಷ್ಯರಾದ ಕೆಲವು ಪ್ರಮುಖ ವ್ಯಾಖ್ಯಾನಕಾರರಾಗಿ ವಿಜಯೀಂದ್ರತೀರ್ಥರು, ಶ್ರೀನಿವಾಸತೀರ್ಥರು, ನಾರಾಯಣತೀರ್ಥರು ಮತ್ತು ಗೋವಿಂದ ಒಡೆಯರ ಕುರಿತಾದ ಅಧ್ಯಯನ ಮಾಡಿದೆ. ವ್ಯಾಸಕೂಟ ದಾಸಕೂಟಗಳೆರಡಕ್ಕೂ ಪ್ರಮುಖ ವ್ಯಾಖ್ಯಾನಕಾರರಾಗಿ ದೊರೆಯುವ ವಾದಿರಾಜರ ಬದುಕು, ಬರಹಗಳನ್ನು ಸವಿವರವಾಗಿ ಇಲ್ಲಿ ಅಧ್ಯಯನ ಮಾಡಲಾಗಿದೆ. ವಿಜಯೀಂದ್ರತೀರ್ಥರು ಮತ್ತು ವಾದಿರಾಜರು ಈ ಯತಿಗಳಿಬ್ಬರೂ ಮಠಾಧಿಪತ್ಯದಲ್ಲೇ ಮೈಮರೆಯದೆ ತಮ್ಮ ಸುತ್ತಣ ಸಾಮಾನ್ಯ ಜನತೆಗಾಗಿ ಹೇಗೆ ಮಿಡಿದರು, ಹೇಗೆ ಸೇವೆ ಸಲ್ಲಿಸಿದರು ಎನ್ನವುದನ್ನು ಕೂಲಂಕಷವಾಗಿ ತಿಳಿಯಲಾಗಿದೆ. ವಾದಿರಾಜರ ಕೊಡುಗೆಯನ್ನು ಮುಖ್ಯವಾಗಿ ಈ ಅಧ್ಯಯನದ ಮೂಲಕ ಚರ್ಚಿಸಿದೆ.

ದಾಸಕೂಟದ ಮುಖ್ಯ ತಾತ್ತ್ವಿಕ ಪರಿಕಲ್ಪನೆಗಳನ್ನು ಈ ನಿಬಂಧದ ಮೂಲಕ ಅಧ್ಯಯನ ಮಾಡಲಾಗಿದೆ. ದಾಸಕೂಟದ ವ್ಯಾಖ್ಯಾನಕಾರರಾಗಿ ಪುರಂದರದಾಸರ ಸೇವೆ-ಸಾಧನೆಗಳನ್ನು ಕೂಲಂಕಷವಾಗಿ ಅರಿಯುವಂಥ ಅಭ್ಯಾಸ ನಡೆಸಿದ್ದು ವಿವರಗಳನ್ನು ನೀಡಲಾಗಿದೆ. ಅವರ ಎಲ್ಲ ಕೃತಿಗಳನ್ನೂ ಇಲ್ಲಿ ಅನುಸಂಧಾನ ಮಾಡಲಾಗಿಲ್ಲ. ಅವರು "ಕರ್ನಾಟಕ ಸಂಗೀತ ಪಿತಾಮಹ"ರೆನಿಸಿದ ಕಾರಣವಾಗಲೀ, ಅವರ ಸಂಗೀತ ಸೇವೆ, ಜ್ಞಾನವನ್ನಾಗಲೀ ಕುರಿತ ವಿವೇಚನೆಯನ್ನು ಈ ಅಧ್ಯಯನದ ವ್ಯಾಪ್ತಿಯು ಒಳಗೊಂಡಿಲ್ಲ. ಮಾನವ ಬದುಕನ್ನು ಊರ್ಧ್ವಮುಖಿಯಾಗಿಸಲು ಪುರಂದರದಾಸರ ಕೃತಿಗಳು ಹೇಗೆ ದಾರಿ ದೀಪವಾಗುತ್ತದೆ ಎನ್ನುವುದನ್ನು ಮತ್ತೂ ಅನೇಕ ರೀತಿಯಲ್ಲಿ ಹೇಳಬಹುದಾಗಿದ್ದು ಅದೇ ಮತ್ತೂ ಒಂದು ಮಹಾನ್ ಪ್ರಬಂಧವಾಗಿ ಬೆಳೆಯಬಹುದಾದ ಕಾರಣದಿಂದಾಗಿ ಈ ಅಧ್ಯಯನದ ವ್ಯಾಪ್ತಿಯೊಳಗೆ ಸಾಧ್ಯವಿದ್ದಷ್ಟೇ ಅವರ ಕೃತಿಗಳನ್ನು ಕೈಗೆತ್ತಿಕೊಂಡು ವಿವೇಚಿಸಲಾಗಿದೆ.

ದಾಸಕೂಟದ ಮತ್ತೊಬ್ಬ ಪ್ರಮುಖ ವ್ಯಾಖ್ಯಾನಕಾರರಾದ ಕನಕದಾಸರ ಬಗ್ಗೆಯೂ ಈ ಅಧ್ಯಯನವು ತನ್ನ ಇತಿಮಿತಿಯಲ್ಲೇ ವಿವೇಚಿಸಬೇಕಾಗಿ ಬಂದಿದೆ. ಕನಕದಾಸರ ಮುಂಡಿಗೆಗಳನ್ನಾಗಲೀ, ಪುರಂದರದಾಸರ ಮುಂಡಿಗೆಗಳನ್ನಾಗಲೀ ಒಂದೆರಡನ್ನು ದೃಷ್ಟಾಂತಕ್ಕಾಗಿ ವಿವೇಚಿಸಲಾಗಿದೆಯಲ್ಲದೆ. ಇಷ್ಟಿದ್ದೂ ವ್ಯಾಸಕೂಟ-ದಾಸಕೂಟಗಳನ್ನು ಆಮೂಲಾಗ್ರವಾಗಿ ಅರಿಯಲು ಅಗತ್ಯವಿರುವಷ್ಟು ಈ ಇಬ್ಬರು ಪ್ರಮುಖ ವ್ಯಾಖ್ಯಾನಕಾರರನ್ನು ಅಭ್ಯಾಸ ಮಾಡಲಾಗಿದೆ.

"ತೌಲನಿಕ ವ್ಯಾಖ್ಯಾನಗಳು" ಎಂಬ ಶೀರ್ಷಿಕೆಯ ಅಡಿಯಲ್ಲಿನ ಅಧ್ಯಾಯದಲ್ಲಿ ವ್ಯಾಸಕೂಟ ಮತ್ತು ದಾಸಕೂಟದ ತಾತ್ತ್ವಿಕ ಭಿನ್ನತೆಗಳೇನು? ಅವುಗಳ ಸ್ವರೂಪವೇನು? ಎನ್ನುವುದರ ವಿವೇಚನೆಯನ್ನು ಮಾಡಲಾಗಿದೆ. ಹಾಗೆಯೇ ವ್ಯಾಸಕೂಟ ಮತ್ತು ದಾಸಕೂಟದ ಸಾಂಸ್ಕೃತಿಕ ಪರಿಕಲ್ಪನೆಗಳೇನೇನು? ಅವುಗಳ ಸ್ವರೂಪವೇನು? ವ್ಯಾಸಕೂಟ ಮತ್ತು ದಾಸಕೂಟದ ಸಾಮಾಜಿಕ ವಿನ್ಯಾಸಗಳೇನು? ಅವುಗಳ ಇತಿಮಿತಿಗಳ ಸ್ವರೂಪವೇನು? ಎಂಬುದರ ವ್ಯಾಖ್ಯಾನಗಳನ್ನು ಮಾಡಲಾಗಿದೆ. ದಾಸಕೂಟದ ಅವನತಿಯ ಕಾಲದ ಚಿತ್ರಣವನ್ನೂ ನೀಡಲಾಗಿದೆ.

ಈ ಅಧ್ಯಯನದ ಕಡೆಯ ಅಧ್ಯಾಯವಾಗಿ "ಸಾಂಸ್ಕೃತಿಕ ವ್ಯಾಖ್ಯಾನಗಳು" ಎಂಬ ಶೀರ್ಷಿಕೆಯಲ್ಲಿ ಭೌಗೋಳಿಕ ಹಿನ್ನೆಲೆಯಲ್ಲಿನ ವ್ಯಾಸಕೂಟದ ಸಾಂಸ್ಕೃತಿಕ ಕೇಂದ್ರಗಳು ಎಲ್ಲೆಲ್ಲಿ ಹೇಗೆ ಹೇಗೆ ಕಾರ್ಯ ನಿರ್ವಹಿಸಿದವು ಎಂಬುದನ್ನು ವಿವೇಚಿಸುವುದರ ಜೊತೆಗೆ ದಾಸಕೂಟದ ಸಾಂಸ್ಕೃತಿಕ ಕೇಂದ್ರಗಳಾವುವು? ಎಲ್ಲೆಲ್ಲಿ ಕಾರ್ಯ ನಿರ್ವಹಿಸಿದವು ಎನ್ನುವುದನ್ನು ಭೌಗೋಳಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಇಷ್ಟಲ್ಲದೆ ಉತ್ತರಕಾಲೀನ ದಾಸಕೂಟದ ಮೇಲೆ ವ್ಯಾಸಕೂಟದ ಪ್ರಭಾವಗಳು ಮತ್ತು ಪ್ರೇರಣೆಗಳೇನೇನು? ಪ್ರೋತ್ಸಾಹ ನೀಡಿದವರಾರು? ಮತ್ತೆ ದಾಸಕೂಟದವರನ್ನು ಪುನಃಶ್ಚೇತನಗೊಳಿಸಿದವರಾರು? ಎನ್ನುವ ಅಂಶಗಳನ್ನೆಲ್ಲ ಕೂಲಂಕಷ ಅಧ್ಯಯನ

ಮಾಡಲಾಗಿದೆ. ಉತ್ತರಕಾಲೀನ ವ್ಯಾಸಕೂಟದ ಪ್ರಮುಖ ವ್ಯಾಖ್ಯಾನಕಾರರಾದ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳು, ಉತ್ತರಕಾಲೀನ ದಾಸಕೂಟದ ಪ್ರಮುಖ ವ್ಯಾಖ್ಯಾನಕಾರರಾದ ವಿಜಯದಾಸರು ಇವರಿಬ್ಬರ ಬದುಕು-ಬರಹ ಸಾಧನೆಗಳನ್ನು ವಿವೇಚಿಸಲಾಗಿದೆ.

ಉತ್ತರಕಾಲೀನ ಸಂದರ್ಭದಲ್ಲಿ ವ್ಯಾಸಕೂಟವು ಮತ್ತೆ ದಾಸಕೂಟವನ್ನು ಪೋಷಿಸಿಕೊಂಡು ಬಂದ ಪರಿಯೇನು? ಮತ್ತೆ ಬದಲಾಗುತ್ತಾ ಬಂದ ಈ ಪ್ರೋತ್ಸಾಹದ ಪರಿಣಾಮಗಳೇನು? ಎನ್ನುವುದರ ವಿವೇಚನೆಯನ್ನು ಮಾಡಲಾಗಿದೆ. ಉತ್ತರಕಾಲೀನ ದಾಸಕೂಟದ ಪ್ರಮುಖರಾದ ಕಾಖಂಡಕಿ ಮಹಿಪತಿದಾಸರು, ಪ್ರಸನ್ನ ವೆಂಕಟದಾಸರು, ಗಲಗಲಿ ಅವ್ವನವರು, ಗೋಪಾಲದಾಸರು ಮುಂತಾದವರ ಬದುಕು ಬರಹಗಳ ಕುರಿತಾದ ಸಂಕ್ಷಿಪ್ತ ನೋಟವನ್ನು ಈ ಅಧ್ಯಯನವು ಒಳಗೊಂಡಿದೆ.

ಹದಿನೆಂಟನೇ ಶತಮಾನದ ದಾಸಕೂಟದವರ ಜನಮುಖೀ ನಿಲುವುಗಳು ವ್ಯಾಸಕೂಟದವರ ವೈದಿಕಮುಖೀ ನಿಲುವುಗಳ ಒಳಗೆ ಬೆರೆತುಹೋದುದನ್ನು, ದಾಸಕೂಟದವರೂ ವ್ಯಾಸಕೂಟದವರ ನಿಲುವುಗಳನ್ನೇ ಅನುಸರಿಸತೊಡಗಿದುದನ್ನು ವಿವೇಚಿಸುತ್ತಾ, ಜಗನ್ನಾಥದಾಸರ ಕುರಿತು ಈ ಅಧ್ಯಯನವು ಮಾಹಿತಿಯನ್ನು ಒದಗಿಸುತ್ತದೆ. ವ್ಯಾಸಕೂಟ ದಾಸಕೂಟದವರಲ್ಲಿ ಭಿನ್ನತೆಯು ಇಲ್ಲ ಎಂದು ಸಾರುವ ಅನಿವಾರ್ಯತೆಯು ಜಗನ್ನಾಥದಾಸರಿದ್ದ ಕಾಲದ ಸಾಮಾಜಿಕ ಸ್ಥಿತಿಗತಿಗಳಿಂದಾಗಿ ಅವರಿಗೆ ಉಂಟಾಗಿದ್ದು, ವೈದಿಕಮುಖೀ ಶಾಸ್ತ್ರಗಳಿಗೂ, ದಾಸರಹಾಡುಗಳಿಗೂ ದಾಸರುಗಳ ನಡೆನುಡಿಗಳಿಗೂ ವ್ಯತ್ಯಾಸವಿಲ್ಲವೆಂದು ಅವರು ಸಾರಬೇಕಾಗಿ ಬಂದಿದ್ದು ಈ ಎಲ್ಲದರ ವಿವೇಚನೆಯ ಜೊತೆಯಾಗಿ ಜಗನ್ನಾಥದಾಸರ "ಹರಿಕಥಾಮೃತ ಸಾರ"ವು ಹೇಗೆ ಮುಖ್ಯ ವ್ಯಾಖ್ಯಾನವಾಗಿ ಮಧ್ವಪಂಥದವರಿಗೆ, ವ್ಯಾಸಕೂಟ ದಾಸಕೂಟದವರಿಗೆ ಪ್ರಿಯವಾಯಿತು ಎನ್ನುವ ಒಳನೋಟವನ್ನು ಈ ನಿಬಂಧದ ಮೂಲಕ ತಿಳಿಯುವ ಯತ್ನವನ್ನು ಮಾಡಿದೆ.

ಉತ್ತರಕಾಲೀನ ದಾಸಕೂಟದ ಸಾಂಸ್ಕೃತಿಕ ಆಯಾಮಗಳ ವೈಶಿಷ್ಟ್ಯ ಹೇಳುತ್ತ ಈ ಅಧ್ಯಯನದ ಫಲಿತಗಳನ್ನು ಮುಕ್ತಾಯ ಮಾಡಿದೆ, ಹೀಗೆ, ಈ ಮಹಾಪ್ರಬಂಧವು ಆರು ಅಧ್ಯಾಯಗಳನ್ನು ಒಳಗೊಂಡಿದೆ. ಎಲ್ಲ ದಾಸರ ಹಾಡುಗಳನ್ನು ಮತ್ತು ಶಾಸ್ತ್ರಕಾರರ ಮೂಲಗ್ರಂಥಗಳನ್ನು ಅಧ್ಯಯನದ ಮೂಲ ಪರಿಕರವಾಗಿ ಬಳಸಿಕೊಳ್ಳಲಾಗಿದೆ. ಒಟ್ಟಿನಲ್ಲಿ ಕನ್ನಡನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ವ್ಯಾಸಕೂಟ ದಾಸಕೂಟಗಳು ಒಂದಕ್ಕೊಂದು ಬೆರೆತುಕೊಂಡೇ ಜನಿಸಿದವು, ಬಾಳಿದವು; ವ್ಯಾಸಕೂಟದ ನೆರಳಾಗಿಯೇ ದಾಸಕೂಟವು ಹೆಜ್ಜೆ ಹಾಕಿದರೂ ಭಿನ್ನವೆನಿಸಿಕೊಂಡು ಬೆಳೆಯಿತು; ಮತ್ತೆ ವ್ಯಾಸಕೂಟದೊಂದಿಗೆ ದಾಸಕೂಟದ ವಿಲೀನತೆ; ಮಧ್ವಾಚಾರ್ಯರ ಸಿದ್ಧಾಂತಗಳೇ ವಿಭಿನ್ನ ರೀತಿಯಲ್ಲಿ ವ್ಯಾಸಕೂಟ ದಾಸಕೂಟದವರಿಗೆ ಮುನ್ನಡೆಯುವ ಹಾದಿಗಳಾದವು; ವ್ಯಾಸಕೂಟದವರು ಜ್ಞಾನಮಾರ್ಗವನ್ನು ಹಿಡಿದುದರ ಮತ್ತು ದಾಸಕೂಟದವರು ಭಕ್ತಿಮಾರ್ಗ ಹಿಡಿದುದರ ಸಾಧಕ ಬಾಧಕಗಳು ಸಾರ್ಥಕತೆಗಳು ಇತಿಮಿತಿಗಳು, ಸಾಧನೆಯ ಕಾರ್ಯವೈಖರಿಗಳು ಎಲ್ಲವನ್ನೂ ಈ ಅಧ್ಯಯನದ ವ್ಯಾಪ್ತಿಯೊಳಗೆ ತಂದಿದೆ. ಈ ನಿಬಂಧವು ಹೊಸ ಅಧ್ಯಯನದ ಸಾಧ್ಯತೆಗಳನ್ನು ತೋರಿಸುತ್ತದೆ.

ಪರಾಮರ್ಶನ ಸಾಹಿತ್ಯ

ಕೃತಿಗಳು :

೧. ದ್ವೈತ ವೇದಾಂತ ವಾಙ್ಮಯ ಹಾಗೂ ಇತಿಹಾಸ –ಸಂಪುಟ ೧ ಮತ್ತು ೨. – ಡಾ॥ ಬಿ.ಎನ್.ಕೆ ಶರ್ಮಾ. [ಅನುವಾದ: ಡಾ॥ ಎಮ್.ಕೆ. ಭಾರತೀರಮಣಾಚಾರ್ಯ]

೨. ದಾಸಸಾಹಿತ್ಯ ಮತ್ತು ಸಂಸ್ಕೃತಿ –ಸಾ.ಕೃ. ರಾಮಚಂದ್ರರಾವ್. ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ–೨೦೦೩

೩. ಕರ್ನಾಟಕ ಭಕ್ತ ವಿಜಯ –ಬೇಲೂರು ಕೇಶವದಾಸರು, –ಪ್ರ: ಉಷಾಸಾಹಿತ್ಯಮಾಲೆ, ಮೈಸೂರು.

೪. ಹರಿದಾಸ ಸಾಹಿತ್ಯ –ಒಂದು ಅಧ್ಯಯನ –ಬೇಲೂರು ಕೇಶವದಾಸರು, ಪ್ರ: ಗೀತಾಬುಕ್ ಹೌಸ್, ಮೈಸೂರು.

೫. ದಾಸಸಾಹಿತ್ಯ –ಕನ್ನಡಕವಿಕಾವ್ಯ ಪರಂಪರೆ –ಐ.ಬಿ.ಎಚ್ ಪ್ರಕಾಶನ.

೬. ಪುರಂದರ ಸಾಹಿತ್ಯ ದರ್ಶನ –ಸಂಪುಟ ೧, ೨, ೩, ೪– ಕನ್ನಡ ಮತ್ತು ಸಂಸ್ಕೃತಿನಿರ್ದೇಶನಾಲಯ– ಬೆಂಗಳೂರು

೭. ಸಮಗ್ರ ದಾಸ ಸಾಹಿತ್ಯ – ಸಂಪುಟ ೧, ೨, ೩, ೪. ಭಾಗ ೧, ೨, ೩, ೪.– ಕನ್ನಡ ಮತ್ತು ಸಂಸ್ಕೃತಿನಿರ್ದೇಶನಾಲಯ –ಬೆಂಗಳೂರು

೮. ಶ್ರೀಪಾದರಾಜರ ಕೃತಿಗಳು – ಸಂ. ಡಾ॥ ಜಿ. ವರದರಾಜರಾವ್ – ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ–೧೯೭೩.

೯. ಆಚಾರ್ಯ ಮಧ್ವ – ಬದುಕು–ಬರಹ, ಬನ್ನಂಜೆ ಗೋವಿಂದಾಚಾರ್ಯ, ಈಶಾವಾಸ್ಯ ಪ್ರತಿಷ್ಠಾನ, ಉಡುಪಿ.

೧೦. ಶ್ರೀ ಮಧ್ವಾಚಾರ್ಯರು – ಕೊರಟಿ ಶ್ರೀನಿವಾಸರಾವ್

ಶ್ರೀ ಪಾದರಾಜರು – ಕೊರಟಿ ಶ್ರೀನಿವಾಸರಾವ್

ಶ್ರೀ ವ್ಯಾಸರಾಯರು – ಕೊರಟಿ ಶ್ರೀನಿವಾಸರಾವ್

ಶ್ರೀ ಮಹಿಪತಿದಾಸರು – ಕೊರಟಿ ಶ್ರೀನಿವಾಸರಾವ್

ಶ್ರೀ ಪುರಂದರದಾಸರು – ಕೊರಟಿ ಶ್ರೀನಿವಾಸರಾವ್

ಶ್ರೀ ಪುರಂದರದಾಸರು – ಕೊರಟಿ ಶ್ರೀನಿವಾಸರಾವ್

ಶ್ರೀ ಕನಕದಾಸರು – ಕೊರಟಿ ಶ್ರೀನಿವಾಸರಾವ್

ಶ್ರೀ ವಾದಿರಾಜರು – ಕೊರಟಿ ಶ್ರೀನಿವಾಸರಾವ್

೧೧. ಶ್ರೀವ್ಯಾಸರಾಯರು – ಡಾ.ಕೆ. ಗೋಕುಲನಾಥ. ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨. ಈಸಬೇಕು ಇದ್ದು ಜಯಿಸಬೇಕು – ಪ್ರೊ. ಎ.ವಿ. ನಾವಡ.

೧೩. ಶ್ರೀವ್ಯಾಸರಾಜ ದರ್ಶನ – ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ.

೧೪. ತಂತ್ರಸಾರ ಸಂಗ್ರಹ – ಬನ್ನಂಜೆ ಗೋವಿಂದಾಚಾರ್ಯ – ದಶಪ್ರಮತಿ ಪ್ರಕಾಶನ.

೧೫. ಹರಿದಾಸರ ಮುಂಡಿಗೆಗಳು – ಭಾಗ ೧ ಮತ್ತು ೨. –ಶ್ರೀಮಳಗಿ ಜಯತೀರ್ಥಾಚಾರ್ಯ.

೧೬. ಶ್ರೀವಾದಿರಾಜ ಸಂಪುಟ – ಡಾ. ಅರಳುಮಲ್ಲಿಗೆ ಪಾರ್ಥಸಾರಥಿ

ಶ್ರೀಪಾದರಾಜರ ಸಂಪುಟ – ಡಾ. ಅರಳುಮಲ್ಲಿಗೆ ಪಾರ್ಥಸಾರಥಿ

ಶ್ರೀ ರಾಘವೇಂದ್ರ ಸಂಪುಟ – ಡಾ. ಅರಳುಮಲ್ಲಿಗೆ ಪಾರ್ಥಸಾರಥಿ

೧೭. ಪುರಂದರದಾಸ ಕೀರ್ತನ, ಸಂ: ಪ್ರೊ. ಮಧುಕರ ಯಕ್ಕುಂಡಿ. ಕರ್ನಾಟಕ ಸಾಹಿತ್ಯ ಅಕಾಡೆಮಿ.

೧೮. ಕನಕ ಕಿರಣ – ಸಂ: ಕಾ.ತ. ಚಿಕ್ಕಣ್ಣ. ಪ್ರ:ಕಾಳಿದಾಸ ಸಾಂಸ್ಕೃತಿಕ ಸಂಘ ಬೆಂಗಳೂರು.

೧೯. ಶ್ರೀಹರಿದಾಸ ವಿಜಯ. ಸಂ: ಶ್ರೀ ಗುರುಪ್ರಿಯವಿಠಲ ದಾಸ– ೨೦೦೫.

೨೦. ದಾಸ ಸಾಹಿತ್ಯದಲ್ಲಿ ದ್ವೈತ ಪ್ರಮೇಯಗಳು

ಶ್ರೀ ಜಗನ್ನಾಥದಾಸರು – ಡಾ॥ ಕೆ.ಎಂ. ಕೃಷ್ಣರಾವ್

ಶ್ರೀ ಹರಿಕಥಾಮೃತ ಸಾರ – ಡಾ॥ ಕೆ.ಎಂ. ಕೃಷ್ಣರಾವ್

೨೧. ಶ್ರೀ ವಿಜಯದಾಸರು – ಡಾ॥ ಕೆ.ಗೋಕುಲನಾಥ– ಸಿಂಧುಶಯನ ಪ್ರಕಾಶನ, ಬೆಂಗಳೂರು

೨೨. ವಾದಿರಾಜರು – ಪ್ರೊ. ಎ.ವಿ. ನಾವಡ– ೨೦೦೪ –ಪ್ರಸಾರಾಂಗ, ಕ.ವಿ.ವಿ ಹಂಪಿ.

ವಾದಿರಾಜರ ಶ್ರೀಕೃಷ್ಣ ಬಾಲಲೀಲೆ– ಪ್ರೊ. ಎ.ವಿ. ನಾವಡ –೨೦೦೪ –ಪ್ರಸಾರಾಂಗ, ಕ.ವಿ.ವಿ ಹಂಪಿ.

೨೩. ಕನಕಸಾಹಿತ್ಯ ದರ್ಶನ – ಸಂ: ಸುಧಾಕರ – ಸಂಪುಟ ೪ – ಕ.ಸಂ. ನಿರ್ದೇಶನಾಲಯ– ಬೆಂಗಳೂರು.

೨೪. ಹರಿದಾಸರ ಭಕ್ತಿ ಸ್ವರೂಪ –ವಾದಿರಾಜರ ಕೃತಿಗಳು – ಡಾ॥. ಟಿ.ಎನ್. ನಾಗರತ್ನ, ಮೈ.ವಿ.ವಿ ಮೈಸೂರು.

೨೫. ಕರ್ನಾಟಕದ ಹರಿದಾಸರು – ವೇದಾಚಾರ್ಯ ಎಚ್.ಕೆ. ಪ್ರ: ಪರಿಮಳ ಸಂಶೋಧನ ಮತ್ತು ಪ್ರಕಾಶನ ಮಂದಿರ, ಬೆಂಗಳೂರು.

೨೬. ಹರಿದಾಸ ಸಾಹಿತ್ಯ ಪರಂಪರೆ – ಜಿ.ಎಸ್. ಸಿದ್ಧಲಿಂಗಯ್ಯ – ಭಾರತೀಯ ವಿದ್ಯಾಭವನ, ಬೆಂಗಳೂರು.

೨೭. ಹತ್ತೊಂಬತ್ತನೇ ಶತಮಾನದ ಹರಿದಾಸ ಸಾಹಿತ್ಯ – ಡಾ. ಅನಂತಪದ್ಮನಾಭರಾವ್. ಪ್ರ: ಸಿವಿಜಿ ಪಬ್ಲಿಕೇಶನ್ಸ್, ಬೆಂಗಳೂರು.

೨೮. ಶ್ರೀ ಮದ್ ವ್ಯಾಸರಾಜ ಗುರುಸಾರ್ವಭೌಮರು – ಟಿ.ಕೆ. ವೇಣುಗೋಪಾಲದಾಸರು–೧೯೮೫.

೨೯. ಸಾವಿರಾರು ಕೀರ್ತನೆಗಳು– ಸಂ: ಪ್ರೊ. ಎ.ವಿ. ನಾವಡ ಮತ್ತು ಡಾ॥ ಗಾಯತ್ರಿ ನಾವಡ.

೩೦. ಹರಿದಾಸರ ಆಂದೋಲನ, ಒಂದು ಅಧ್ಯಯನ– ನಿ.ಕೃ.ರಾಮಶೇಷನ್–೧೯೯೩.

೩೧. ವಿಜಯನಗರ ಸಾಮ್ರಾಜ್ಯದ ಪತನಾನಂತರದ ಹರಿದಸಸಾಹಿತ್ಯ– ಪ್ರೊ. ವಸಂತ ಕುಷ್ಟಗಿ– ಕ.ವಿ.ವಿ ಹಂಪಿ.

೩೨. ಮಾಧ್ವ ವಾಙ್ಮಯ ತಪಸ್ವಿಗಳು – ಜಯರಾಮಾಚಾರ್ಯ ಮಳಗಿ– ಗದಗ.

೩೩. ಗೋಪಾಲದಾಸರ ಹಾಡುಗಳು – ಸಂ: ಕಾವ್ಯಪ್ರೇಮಿ.

೩೪. ಪುರಂದರೋಪನಿಷತ್ – ಭಾಗ ೧, ೨, ೩ – ಭದ್ರಗಿರಿ ಕೇಶವದಾಸರು. ದಾಸಾಶ್ರಮ ಪಬ್ಲಿಕೇಶನ್ಸ್.

೩೫. ಕರ್ನಾಟಕ ಜನಜೀವನ – ಬೆಟಗೇರಿ ಕೃಷ್ಣಶರ್ಮ.

ಲೇಖನಗಳು :

೧. ಹರಿದಾಸತ್ವ – ಒಂದು ಚಿಂತನೆ– ಆರ್.ಕೆ.ಪದ್ಮನಾಭ– ಪ್ರ: ತಾಳವಾದ್ಯ ಸಂಗೀತ ಕಲಾಶಾಲೆ ಸ್ಮರಣ ಸಂಚಿಕೆ, ಬೆಂಗಳೂರು.

೨. ಸಮ್ಮೇಳನಾಧ್ಯಕ್ಷರ ಭಾಷಣ – ದಾಸ ಸಂತ ಸಾಹಿತ್ಯ ರಾಷ್ಟ್ರೀಯ ಸಮ್ಮೇಳನ – ಪಂಢರಾಪುರ– ಮಹಾರಾಷ್ಟ್ರ.

೩. ವಿಜಯ ಸಂಪದ – ಹರಿದಾಸ ಸಂಸ್ಕೃತಿ ಪ್ರಸಾರ ಮಾಸಪತ್ರಿಕೆಯ ಕೆಲವು ಸಂಚಿಕೆಗಳಲ್ಲಿನ ಕೆಲವು ಲೇಖನಗಳು.

೪. 'ತರಂಗ' ಪತ್ರಿಕೆಯ ಕೆಲವು ಸಂಚಿಕೆಗಳಲ್ಲಿನ ಕೆಲವು ಲೇಖನಗಳು.